ಡಿ . ವಿ . ಗುಂಡಪ್ಪ

27



ಜ್ಞಾಪಕಚಿತ್ರಶಾಲೆ – ೩

ಸಾಹಿತ್ಯೋಪಾಸಕರು

ಮುಖಪುಟ

ಜ್ಞಾಪಕಚಿತ್ರಶಾಲೆ

ಡಾ. ಡಿ.ವಿ. ಗುಂಡಪ್ಪ

Published by the **Gokhale Institute of Public Affairs** on the occasion of its Platinum Jubilee with the financial assistance from **The Director, Kannada and Culture Department, Government of Karnataka** and **The Mythic Society, Bengaluru.**

© 2018 Gokhale Institute of Public Affairs, Banglore, Karnataka, INDIA. All rights reserved.

e-Book
027v1.0.0
Date: October 10, 2018
ISBN: 9788193777923
Created by: Sriranga Digital Software Technologies Private Limited
srirangadigital.com

ಅರಿಕೆ

ಈ ಪುಸ್ತಕದಲ್ಲಿಯ ವ್ಯಕ್ತಿ ಚಿತ್ರಗಳು ಈ ಚಿತ್ರಮಾಲೆಯ ಮಿಕ್ಕ ಸಂಪುಟಗಳಲ್ಲಿರುವಂತೆಯೇ ನೆನಪಿನಿಂದ ಬಂದವು.

ಛಾಯಾಬಿಂಬವನ್ನು ತೆಗೆಯುವ ಫಲಕದ ಮೇಲೆ ಪ್ರತಿಫಲಿಸಿದ ರೇಖೆಗಳು ಕಾಲ ಕ್ರಮದಲ್ಲಿ ಬಣ್ಣ ತೇಲುತ್ತವೆ; ಮಾಸಿಹೋಗುತ್ತವೆ; ಸ್ಪಷ್ಟತೆಯಲ್ಲಿ ಕಡಮೆಯಾಗುತ್ತವೆ. ಇಷ್ಟೆಲ್ಲ ನ್ಯೂನತೆಗಳಿದ್ದರೂ ಛಾಯಾಬಿಂಬವು ಹೆಗ್ಗುರುತನ್ನಾದರೂ ಉಳಿಸಿರುತ್ತದೆ. ಅಷ್ಟು ಮಾತ್ರವಾದರೂ ಪೂರ್ವಿಕರ ಸ್ವರೂಪದ ಛಾಯೆ ಉಳಿದಿದೆಯಲ್ಲ ಎಂದು ಸಂತೋಷಪಡುವ ನವೀನರು ಕೆಲಮಂದಿ ಇರಬಹುದೆಂದು ನಂಬಿ ಈ ಚಿತ್ರಗಳನ್ನು ಗುರುತುಹಾಕಿದೆ.

ಈ ನಂಬಿಕೆಗೆ ಪ್ರೋತ್ಸಾಹವೂ ಬಂದಿದೆ. ‘ಕನ್ನಡ ಪ್ರಭ’ ಪತ್ರಿಕೆಯಲ್ಲಿ ಈ ಚಿತ್ರಗಳು ಪ್ರಕಟವಾಗುತ್ತಿದ್ದಾಗ ಕನ್ನಡ ದೇಶದ ನಾನಾ ಭಾಗಗಳಿಂದಲ್ಲದೆ ದೆಹಲಿ, ಕಲ್ಕತ್ತಾ ಮೊದಲಾದ ದೂರಸ್ಥಳಗಳಿಂದಲೂ ವಾಚಕ ಮಹನೀಯರು ಪತ್ರ ಬರೆದು ತಮ್ಮ ಸಂತೋಷವನ್ನು ತಿಳಿಸಿದ್ದಾರೆ.

‘ಕನ್ನಡ ಪ್ರಭ’ ಸಂಪಾದಕರಿಗೆ ನನ್ನ ಮನಃಪೂರ್ವಕವಾದ ಕೃತಜ್ಞತೆ ಸಲ್ಲುತ್ತದೆ. ಅವರು ನನಗೆ ದೊಡ್ಡ ಉಪಕಾರಮಾಡಿದ್ದಾರೆ.

ಪುಸ್ತಕದಲ್ಲಿಯ ಚಿತ್ರಗಳಿಗಾಗಿ ಬಹುಮಂದಿಗೆ ನಾನು ಋಣಿಯಾಗಿದ್ದೇನೆ. ಅವರಲ್ಲಿ ಮುಖ್ಯರಾದವರು ಕನ್ನಡ ಸಾಹಿತ್ಯ ಪರಿಷತ್ತಿನ ವ್ಯವಸ್ಥಾಪಕರು, ‘ಕನ್ನಡ ಪ್ರಭ’ ಪತ್ರಿಕೆಯ ಯಜಮಾನರು. ‘ಸತ್ಕಾವ್ಯ- ಅಧ್ಯಾತ್ಮ’ ಸಂಕೇತ ಚಿತ್ರವನ್ನು ಒದಗಿಸಿದವರು ಶ್ರೀ ಬಿ. ಎಸ್. ಆಚಾರ್. ಇವರಿಗೆಲ್ಲ ನನ್ನ ವಂದನೆ.

ಈ ಲೇಖನಗಳ ಲಿಪಿಕಾರ್ಯದಲ್ಲಿ ಚಿ ॥ ಶ್ರೀ ಎಸ್. ಆರ್. ರಾಮಸ್ವಾಮಿಯ ಸಹಾಯ ದೊರೆತಿದೆಯೆಂಬುದು ಹೆಚ್ಚಿನ ಮಾತಲ್ಲ, ಲೇಖನದ ನಡುನಡುವೆ ಇರುವ ಉದಾಹರಣೆಗಳನ್ನು ಭರ್ತಿಮಾಡುವುದು, ದಾಖಲೆಗಳನ್ನೊದಗಿಸುವುದು, ಅಚ್ಚಿನ ಕರಡು ತಿದ್ದುವುದು ಮೊದಲಾದ ಎಲ್ಲ ಪರಿಷ್ಕರಣ ಕಾರ್ಯದಲ್ಲಿಯೂ ಚಿತ್ರಪಟಗಳನ್ನು ಸಂಪಾದಿಸುವುದರಲ್ಲಿಯೂ ಈ ನನ್ನ ಪ್ರಿಯ ಚಿರಂಜೀವಿ ಕೊಟ್ಟಿರುವ ಸಹಾಯವು ಎಣಿಕೆಗೆ ಮೀರಿದ್ದು. ಈಶ್ವರಾನುಗ್ರಹ ಆತನಲ್ಲಿ ಸಂಪೂರ್ಣವಾಗಿರಲಿ. ಮಿತ್ರರಾದ ಶ್ರೀ

ಚಿದಂಬರಂ ಅವರು ಬಹು ಪ್ರಯಾಸದ ಕೆಲಸವಾದ ಅಕಾರಾದಿಯನ್ನು ಸಹಜವಾದ ಅಭಿಮಾನದಿಂದ ತಯಾರಿಸಿ ಉಪಕರಿಸಿದ್ದಾರೆ. ಮೈಸೂರು ಪ್ರಿಂಟಿಂಗ್ ಮತ್ತು ಪಬ್ಲಿಷಿಂಗ್ ಹೌಸಿನ ಶ್ರೀ ಜಿ. ಎಚ್. ಕೃಷ್ಣಮೂರ್ತಿಯವರು ಈ ಗ್ರಂಥದ ಮುದ್ರಣದ ವಿಷಯದಲ್ಲಿ ತೋರಿರುವ ಶ್ರದ್ಧೆಗಾಗಿ ಕೃತಜ್ಞನಾಗಿದ್ದೇನೆ.

ಈ ಲೇಖನಗಳಲ್ಲಿ ಪ್ರಮಾದಗಳೇನಾದರೂ ಕಂಡುಬಂದಲ್ಲಿ ಅವುಗಳನ್ನು ನನಗೆ ತಿಳಿಯಪಡಿಸುವವರಿಗೆ ನಾನು ಕೃತಜ್ಞತೆ ಸಲ್ಲಿಸಿ ಅವಶ್ಯ ತೋರಿದ ತಿದ್ದು ಪಾಟುಗಳನ್ನು ಮಾಡಲು ಸಿದ್ಧನಾಗಿದ್ದೇನೆ. ಮಹಾಜನರು ಈ ಪುಸ್ತಕವನ್ನು ಕೃಪೆಯಿಂದ ಸ್ವೀಕರಿಸಬೇಕೆಂದು ಬೇಡುತ್ತೇನೆ. ಸರ್ವಂ ಶಿವಂ.

ಡಿ.ವಿ.ಜಿ

ಪ್ರಸ್ತಾವನೆ

ಭಾಷೆಗೂ ಸಾಹಿತ್ಯಕ್ಕೂ ಸೇವೆ ಸಲ್ಲಿಸುವ ವಿಧಾನಗಳು ಎಷ್ಟೋ ಇರುತ್ತವೆ. ಅವುಗಳಲ್ಲಿ ಮುಖ್ಯವೆಂದು ನನಗೆ ತೋರಿರುವವು ಇವು :

(೧) ಕಾವ್ಯನಿರ್ಮಾಣ
(೨) ಕಾವ್ಯವ್ಯಾಸಂಗ
(೩) ಕಾವ್ಯಗುಣವಿಮರ್ಶನೆ
(೪) ವ್ಯಾಕರಣಾದಿಶಾಸ್ತ್ರ ಪಾಂಡಿತ್ಯ
(೫) ಉತ್ಸಾಹಪ್ರಚಾರ

ಇದರಲ್ಲಿ ನನಗಿರಬಹುದಾದ ಜಾಗ ಐದನೆಯ ಕ್ಷೇತ್ರದಲ್ಲಿ ಎಂದು ತಿಳಿದುಕೊಂಡಿದ್ದೇನೆ.

ನಾನು ಸಾಹಿತ್ಯಭಕ್ತ. ಮನುಷ್ಯನ ಜೀವನದಲ್ಲಿ ಉಲ್ಲಾಸವನ್ನು ತುಂಬಿ ಸತ್ತ್ವವನ್ನು ಅಭಿವೃದ್ಧಿಪಡಿಸುವ ಶಕ್ತಿ ಸಾಹಿತ್ಯಕ್ಕೆ ಉಂಟೆಂಬುದು ನನ್ನ ನಂಬಿಕೆ.

ಈ ದೃಷ್ಟಿಯಿಂದ ಕನ್ನಡ ಸಾಹಿತ್ಯದ ನಮ್ಮ ಕಾಲದ ಪರಿಸ್ಥಿತಿಯನ್ನು ಆಲೋಚಿಸಿದಾಗ ನನ್ನಲ್ಲುಂಟಾದ ಭಾವನೆಗಳು ಈ ಲೇಖನಮಾಲೆಯಲ್ಲಿ ತುಂಬಿಕೊಂಡಿವೆ. ಸಾಹಿತ್ಯ ಪರಿಷತ್ತಿನ ವೃಕ್ಷವನ್ನವಲಂಬಿಸಿಕೊಂಡು ಅದರ ಸುತ್ತಮುತ್ತ, ಹೆಚ್ಚಾಗಿಯೋ

ಕೊಂಚವಾಗಿಯೋ, ಅವರವರ ಶಕ್ತಿ ಸಾಮರ್ಥ್ಯಗಳಿಗೆ ಸಾಧ್ಯವಾದಂತೆ ದುಡಿದ ಸಾಹಿತ್ಯಸೇವಕರನ್ನು ಇಲ್ಲಿ ಸ್ಮರಿಸಿದ್ದಾಗಿದೆ.

ಈ ಚಿತ್ರಗಳು ಬರಿಯ ಜ್ಞಾಪಕದಿಂದ ಚಿತ್ರಿತವಾದವು. ಮನುಷ್ಯನ ಜ್ಞಾಪಕಶಕ್ತಿ ದೃಢವಾದ ಬಲವುಳ್ಳದ್ದಲ್ಲ. ನನ್ನಲ್ಲಂತೂ ಜ್ಞಾಪಕಶಕ್ತಿ ಬಹು ಸಾಮಾನ್ಯವಾದದ್ದು. ಅದು ಪದೇಪದೇ ಕುಗ್ಗಿರುತ್ತದೆ, ತೆಳುವಾಗಿರುತ್ತದೆ. ಅದರ ಸಾಕ್ಷ್ಯ ಸಾಲದೆ ಇರುತ್ತದೆ. ಆದದ್ದರಿಂದ ಇಲ್ಲಿ ನಾನು ಹೇಳಿರುವುದನ್ನು ವಾಚಕರು ಕೆಲವೆಡೆ ಬೇರೆ ದಾಖಲೆಗಳ ಆಧಾರದಿಂದ ತಿದ್ದಿ ಸರಿಪಡಿಸಿಕೊಳ್ಳಬೇಕಾಗಬಹುದು.

ಪರಿಷತ್ತಿನಂಥ ಸಾರ್ವಜನಿಕ ಸಂಸ್ಥೆಗಳ ಶಕ್ತಿಯ ಪರಿಮಿತಿಗಳನ್ನು ಕುರಿತು ಇಲ್ಲಿ ಒಂದು ಮಾತನ್ನು ಹೇಳಬೇಕಾಗಿದೆ. ನಮ್ಮ ಕಾಲದಲ್ಲಿ ಸಂಸ್ಥೆ ಎಂಬ ಒಂದು ಕಾರ್ಯ ಸಾಧನವು ಹೆಚ್ಚು ಹೆಚ್ಚಾಗಿ ರೂಢಿಗೆ ಬರುತ್ತಿದೆ. ನಮಗೆ ಯಾವ ಕೊರತೆ ತೋರಿದರೂ, ಅದನ್ನು ಸರಿಪಡಿಸುವುದಕ್ಕಾಗಿ ನಮಗೆ ತೋರುವ ಉಪಾಯ ಒಂದು ಕಮಿಟಿ ಅಥವಾ ಸಮಿತಿ. ಹಲ್ಲು ಮುರಿಯಿತು; ಕಮಿಟಿ ಮಾಡು. ಕೂದಲು ನರೆಯಿತು; ಸಮಿತಿ ಮಾಡು. ಊಟ ಸರಿಯಾಗಿಲ್ಲ; ಒಂದು ಸಭೆ ಸೇರಿಸು. ಕೆಮ್ಮಲು ಬಂತು; ಒಂದು ಸಮ್ಮೇಳನ ಮಾಡು. ಹೀಗೆ ಹೊರಡುತ್ತಿದೆ ನಮ್ಮ ಉಪಾಯಗಳ ಪ್ರವಾಹ. ಸಮಿತಿ, ಸಭೆ, ಸಂಪತ್ತು, ಸಮ್ಮೇಳನ - ಈ ಬಗೆಯ ಬಾಹ್ಯಯಂತ್ರಗಳನ್ನು ಜೋಡಿಸಿ ಅ ಕಟ್ಟಡದ ಸಂದಿಗೊಂದಿಗಳಲ್ಲಿ ನಾವು ಸಿಕ್ಕಿಕೊಳ್ಳುತ್ತಿದ್ದೇವೆ. ಕಷ್ಟಕಾಲದಲ್ಲಿ ಸಮಿತಿಗೆ ಮೊರೆಯಿಡುತ್ತೇವೆ.

ನನ್ನ ಸ್ನೇಹಿತ ವೆಂಕಣ್ಣಯ್ಯ ಒಂದು ಕಥೆ ಹೇಳುತ್ತಿದ್ದದ್ದುಂಟು. ಆಂಧ್ರರು ಒಂದು ಪ್ರಮಾಣವತ್ತಾದ ನಿಘಂಟು ಆವಶ್ಯಕವೆಂದು ಹಂಬಲಿಸಿ ಸರಕಾರವನ್ನು ಬಹುವಿಧವಾಗಿ ಬೇಡಿಕೊಂಡರು. ಯಾರೋ ಪ್ರಭಾವಶಾಲಿಗಳು ಈ ಪೇಚಾಟವನ್ನು ತಮ್ಮದು ಮಾಡಿಕೊಂಡು, ಸರಕಾರದಿಂದ ಹಣ ಮಂಜೂರು ಮಾಡಿಸಿದರು. ಒಂದು ಸಮಿತಿ ನೇಮಕವಾಯಿತು. ಹಣ ಖರ್ಚಾಗುತ್ತ ಹೋಯಿತು. ನಿಘಂಟು ಹುಟ್ಟಲಿಲ್ಲ. ಆರೇಳು ವರ್ಷವಾಯಿತು. ಸರಕಾರದ ಸಹಾಯದ್ರವ್ಯ ಮುಗಿದುಹೋಯಿತು. ಸಮಿತಿಯ ಯಜಮಾನರು ಹೆಸರಾಂತ ದೊಡ್ಡಮನುಷ್ಯರು. ಅವರನ್ನು ಯಾರೂ ಆಕ್ಷೇಪಣೆ ಮಾಡುವಂತಿರಲಿಲ್ಲ. ಆಗ ಏನು ಉಪಾಯ?

ಆ ಸಂಸ್ಥೆಯ ವಾರ್ಷಿಕ ಸಮ್ಮೇಳನ ನಡೆಯಿತು. ಆಗ ನಿಘಂಟುವಿನ ಭಕ್ತರಲ್ಲೊಬ್ಬರು ಒಂದು ಪದ್ಯ ಹಾಡಿದರು.

ಓ ನಿಘಂಟುವ ನೀವದೆಪುಡು ವತ್ತುವೊ ಜೂಡ-
ಕಾಚಿಕಾಚುಚು ಕನುಲು ತೆಲ್ಲನಾಯೆ ।

ಈ ಪದ್ಯವನ್ನು ಹಾಡಿದಾತನು ಕರುಣಾಜನಕಗಳಾದ ಬಗೆಬಗೆಯ ರಾಗಗಳನ್ನು ಅಳವಡಿಸಿ ಹಾಡಿ ಸಭಿಕರ ಮನಕರಗಿಸಿ 'ಉಸ್ಸ್' ಎನ್ನಿಸಿದ. ಅಲ್ಲಿಗೆ ಮುಗಿಯಿತು ಪ್ರಸಂಗ.

ಇದಕ್ಕೆ ಪ್ರತಿಯಾದದ್ದು ಸಾಮ್ಯುಯಲ್ ಜಾನ್‌ಸನ್ನನು (Samuel Johnson) ಇಂಗ್ಲಿಷ್ ಜನಕ್ಕೆ ನಿಘಂಟುವನ್ನು ತಯಾರುಮಾಡಿಕೊಟ್ಟ ಪ್ರಕರಣ. ತನ್ನ ಜನಕ್ಕೆ ಅಂಥ ಗ್ರಂಥ ಅವಶ್ಯವೆಂಬುದನ್ನು ಜಾನ್‌ಸನ್ನನು ಕಂಡುಕೊಂಡ. ಹಾಗೆ ತಾನು ಕಂಡ ಕೊರತೆಯನ್ನು ನೀಗುವ ಶಕ್ತಿ ತನಗುಂಟೆಂಬುದನ್ನೂ ಕಂಡುಕೊಂಡ. ಇದನ್ನೂ ಕಂಡುಕೊಂಡ ಮೇಲೆ ಆ ಕೊರತೆಯನ್ನು ನೀಗುವುದಕ್ಕಾಗಿ ಸಾಹಸಪಡುವುದು ತನಗೆ ಕರ್ತವ್ಯವೆಂಬುದನ್ನೂ ಕಂಡುಕೊಂಡ. ಇಷ್ಟಾದಮೇಲೆ ಅದಕ್ಕಾಗಿ ಹಟ ತೊಟ್ಟು ನಿಂತ. ಬಹುವರ್ಷ ದಾರಿದ್ರ್ಯದಲ್ಲಿದ್ದ. ಆದರೂ ದಿಟ್ಟತನವನ್ನು ಬಿಡದೆ ನಿಂತ. ದೈನ್ಯಕ್ಕೆ ಬೀಳದೆ ಧೀರನಾಗಿ ನಿಂತು ದುಡಿದ. ನಿಘಂಟು ತಯಾರಾಯಿತು. ಹೇಗೆ ಹೇಗೋ ಪಾಡುಬಿದ್ದು ಉದ್ದಿಷ್ಟಾರ್ಥವನ್ನು ನೆರವೇರಿಸಿಕೊಂಡ. ಜನಕ್ಕೆ ಬಹು ಉಪಕಾರವಾಯಿತು. ಇದು ವ್ಯಕ್ತಿಸತ್ವದ ಸಿದ್ಧಿ. ಇಲ್ಲಿ ಸಮಿತಿ ಸಂಘಗಳು ಕೆಲಸಕ್ಕೆ ಬಾರವು.

ಸಾಹಿತ್ಯಕ್ಷೇತ್ರದಲ್ಲಿ - ಬಹುಶಃ ಎಲ್ಲ ಜೀವನಕ್ಷೇತ್ರಗಳಲ್ಲಿಯೂ-ಮಹಾರ್ಹವಾದದ್ದನ್ನು ಒದಗಿಸತಕ್ಕದ್ದು ವೈಯಕ್ತಿಕ ಸತ್ತ್ವ : ಒಬ್ಬಾನೊಬ್ಬ ಸತ್ತ್ವವರಪ್ರಸಾದಿಯ (Gifted individual) ಜನಾನುಗ್ರಹಬುದ್ಧಿ ಅವನಿಗೆ ವರಪ್ರಸಾದವಾಗಿ ಬಂದಿರುತ್ತದೆ. ಇತರರಿಗೆ ಬಾರದ ಒಂದು ಪ್ರೇರಣೆ; ಇತರರಿಗೆ ಬಾರದ ಒಂದು ಸ್ಫೂರ್ತಿ. ಈ ವ್ಯಕ್ತಿವರ ಎಲ್ಲ ಮಹಾಕಾರ್ಯಕ್ಕೂ ಬೀಜಪ್ರಾಯವಾದದ್ದು. ಅದರಿಂದ ನಮಗೆ ಬರಬಹುದಾದದ್ದು ಮಹಾಸಾಹಿತ್ಯ, ಮಹಾತತ್ತ್ವಬೋಧೆ, ಮಹಾಕಲೆ, ಮಹಾರಾಜಕೀಯ, ಈ 'ಮಹಾ' ಎಂಬುದರ ಮೂಲವು ವರಪ್ರಸಾದಿತಪುರುಷನ ಅಂತರಂಗದಲ್ಲಿರತಕ್ಕದ್ದು. ನಾವು ಮೊದಲು ಎಣಿಸಬೇಕಾದದ್ದು ಇದನ್ನ. ವ್ಯಕ್ತಿಸತ್ತ್ವದಿಂದ ಸರ್ವಸಿದ್ಧಿ.

ಕ್ರಿಯಾಸಿದ್ಧಿಃ ಸತ್ತ್ವೇ ಭವತಿ ಮಹಾತಾಂ । ನೋಪಕರಣೇ ।

ಹಾಗಾದರೆ ಸಮಿತಿ ಸಂಸ್ಥೆಗಳು ಅಪ್ರಯೋಜಕಗಳೋ? ಅಲ್ಲ. ಅವುಗಳಿಗೆ ಬೆಲೆಯುಂಟೇ ಉಂಟು, ಆದರೆ ಆ ಬೆಲೆ ಉತ್ಪಾದಿತವಾದದ್ದು (Derived), ಸ್ವತಸ್ಸಿದ್ಧವಾದದ್ದಲ್ಲ. ಅದು ಗೌಣ; ಮುಖ್ಯಬೆಲೆಯಲ್ಲ. ನಮ್ಮ ಕಣ್ಣಿಗೆ ಸುಲೋಚನ (ಕನ್ನಡಕ) ಸಹಾಯಕಾರಿ. ಅದು ಯಾವಾಗ? ಕಣ್ಣುಗುಡ್ಡೆಯಲ್ಲಿ ಸತ್ತ್ವವಿರುವಾಗ. ಕಣ್ಣುಗುಡ್ಡೆಯಲ್ಲಿ ದೃಷ್ಟಿಶಕ್ತಿ

ಇಲ್ಲದೆಹೋದಾಗ ಕನ್ನಡಕ ಏನು ಮಾಡಬಲ್ಲದು? ಅದು ಬರಿಯ ಒಣಹೊರೆ. ನಾಲಗೆಯಲ್ಲಿ ರಸನಶಕ್ತಿಯಿರುವಾಗ ಪಾಕಚಾತುರ್ಯಕ್ಕೆ ಸಾರ್ಥಕತೆ. ನಾಲಗೆಯಲ್ಲಿ ರಸ ಒಣಗಿಹೋಗಿದ್ದರೆ. ಪಾಯಸವೇನು ಮಾಡೀತು? ಸಂಸ್ಥೆಗಳೂ ಸಭೆಗಳೂ ನಮ್ಮಿಂದ ಹೊರಗಿರುವ ಉಪಕರಣಗಳು. ಸತ್ತ್ವ ನಮ್ಮೊಳಗಡೆ ಇರುವ ವಸ್ತು. ಅದನ್ನೇ ನಾವು ಮೊದಲು ಗಣನೆಗೆ ತೆಗೆದುಕೊಳ್ಳಬೇಕಾದದ್ದು, ನಮ್ಮ ಸಾಹಿತ್ಯಕರ್ತರಲ್ಲಿ ಅವರ ಒಳಗಡೆ ಸತ್ತ್ವವಿದ್ದಾಗ ಸಭೆ ಸಂಸ್ಥೆಗಳಿಲ್ಲದಿದ್ದರೂ ಆ ಸತ್ತ್ವ ಕೆಲಸಮಾಡುತ್ತದೆ.

ವಾಲ್ಮೀಕಿಗೂ ವ್ಯಾಸರಿಗೂ ಕಾಲಿದಾಸನಿಗೂ ಪ್ರೇರಣೆ ಕೊಡಲು ಯಾವ ಪರಿಷತ್ತು ಇತ್ತು? ಷೇಕ್‌ಸ್ಪಿಯರನಾಗಲಿ ಜಾನ್‌ಸನ್ನನಾಗಲಿ ಯಾವ ಅಕಾಡೆಮಿಯ, ಯಾವ ಪರಿಷತ್ತಿನ ಪ್ರೋತ್ಸಾಹಕ್ಕಾಗಿ ಕಾದಿದ್ದರು? ತೋಟದಲ್ಲಿ ಅರಳುವ ಹೂವು ತನ್ನನ್ನು ಯಾರು ಕೊಂಡುಕೊಂಡಾರೆಂದು ಯೋಚಿಸಿ ಗಿರಾಕಿ ಬಂದಮೇಲೆ ಅರುಳುತ್ತದೆಯೆ? ಬೆಳೆಯುವುದೂ, ಅರಳುವುದೂ ಅದರ ಸ್ವಭಾವ. ಅದರ ಬೆಳವಣಿಗೆಗೆ ಸಹಾಯವಾಗುತ್ತದೆ. ಒಂದು ಬಳ್ಳಿ ಇರುವ ತೋಟದಲ್ಲಿ ನೂರು ಬಳ್ಳಿಯಾಗುತ್ತದೆ. ಆರಡಿ ಎತ್ತರ ಬೆಳೆದ ಬಳ್ಳಿ ಹನ್ನೆರಡಡಿಯಾದೀತು. ಕಾಲಂಗುಲ ದಪ್ಪವಿದ್ದ ಬಳ್ಳಿ ಒಂದಂಗುಲವಾದೀತು. ಬೆಳವಣಿಗೆಯ ಪ್ರಮಾಣ ಹೆಚ್ಚೀತು. ಆದರೆ ಬೆಳವಣಿಗೆಗೆ ಮುಖ್ಯದ್ರವ್ಯವಾದ ರಸವೂ ರಸಕಾರ್ಯವೂ ಹಣದಿಂದ ಉಂಟಾದದ್ದಲ್ಲ. ಪಂಪನನ್ನೂ ಷಡಕ್ಷರಿಯನ್ನೂ ಬೆಳಕಿಗೆ ತರಲು ಯಾವ ಅಕಾಡೆಮಿಯೂ ಇರಲಿಲ್ಲ. ಆದರೆ ಅವರ ಕೃತಿಗಳನ್ನು ಹೆಚ್ಚು ಹೆಚ್ಚು ಮಂದಿಗೆ ಒದಗಿಸಿಕೊಡಲು ಅಕಾಡೆಮಿಯು ಕೆಲಸ ಮಾಡಲಾಗುತ್ತದೆ.

ಈ ಟೀಕೆಯ ತಾತ್ಪರ್ಯವೇನು? ಪರಿಷತ್ತು ಮಾಡಬಹುದಾದಂಥ ಸಾಹಿತ್ಯ ಸೇವೆಗೂ ಭಾಷಾಸೇವೆಗೂ ಕೆಲವು ಪರಿಮಿತಿಗಳುಂಟು. ಆ ಮಿತಿಗಳನ್ನು ಮರೆತು ಅದು ತನ್ನ ಕಾರ್ಯಕ್ಷೇತ್ರವನ್ನು ವಿಸ್ತಾರಪಡಿಸಿಕೊಂಡರೆ ಅದು ಅಕಾರ್ಯವೇ ಅದೀತು. ತನ್ನ ಮಿತಿಯೊಳಗಿನ ಕಾರ್ಯಗಳನ್ನು ಅದು ಮಾಡದೆ ಬಿಟ್ಟರೂ ಅಕಾರ್ಯವಾದೀತು.

ಇಂಗ್ಲೆಂಡ್ ದೇಶದಲ್ಲಿ ಅಕಾಡೆಮಿ ಇರಲಿಲ್ಲ. ಫ್ರಾನ್ಸ್ ದೇಶದಲ್ಲಿ ಅಕಾಡೆಮಿ ಇತ್ತು: ಕಾರ್ಡಿನಲ್ ರಿಚ್ಲು (Cardinal Richelieu) ಮೊದಲಾದ ಸಾಹಿತ್ಯೋತ್ಸಾಹಿಗಳ ಪರಿಶ್ರಮದ ಫಲವಾಗಿ ಹದಿನೇಳನೆಯ ಶತಮಾನದ ಆದಿಭಾಗದಲ್ಲಿ ಫ್ರಾನ್ಸಿನಲ್ಲಿ ಪ್ರಾರಂಭವಾದ ಆ ಸಂಸ್ಥೆ ನೂರಾರು ವರ್ಷಕಾಲ ಯಶಸ್ವಿಯಾಗಿ ಕೆಲಸಮಾಡಿತ್ತು. ಫ್ರೆಂಚ್ ಅಕಾಡೆಮಿಯ ಉದ್ದೇಶ ಹೀಗಿತ್ತಂತೆ:

“To be a jury, the most choice and authoritative, that could be found on all important literary matters in question before the public; to be... a sovereign organ of opinion, The duty of the academy is... to keep the fine quality of the French spirit unimpaired; it represents... the authority of a recognized master in matters of tone and taste. All ages... have had their inferior literature; but the great danger of our time is that this inferior literature tends more and more to get the upper place. No one has the same advantage as the academy for fighting against this mischief.”

ಹತ್ತೊಂಭತ್ತನೆಯ ಶತಮಾನದ ಮಧ್ಯಭಾಗದಲ್ಲಿ, ಫ್ರೆಂಚರಂತೆ ತಾವೂ ಒಂದು ಅಕಾಡೆಮಿ ಮಾಡಿಕೊಳ್ಳಬೇಕೆಂದು ಕೆಲಮಂದಿ ಇಂಗ್ಲಿಷ್ ಸಾಹಿತಿಗಳು ಯೋಚಿಸತೊಡಗಿದರು. ಆಗ ಮ್ಯಾತ್ಯು ಆರ್ನಾಲ್ಡ್ (Matthew Arnold) ಎಂಬ ವಿದ್ವತ್ಕವಿ ಈ ವಿಷಯವನ್ನು ಕುರಿತು ಒಂದು ಪ್ರಬಂಧ ಬರೆದು, ಇಂಗ್ಲಿಷ್ ಜನರು ಅನುಕರಣಮಾತ್ರದಿಂದ ದೊಡ್ಡವರಾಗಲಾರರೆಂದೂ, ಫ್ರೆಂಚ್ ಜನಕ್ಕೆ ಉಪಯೋಗಕರವೆಂದು ಅನುಭವಕ್ಕೆ ಬಂದ ಒಂದು ಸಂಸ್ಥೆ ಬ್ರಿಟಿಷ್ ಜನಕ್ಕೆ ಹಾಗೆ ಉಪಯೋಗಕರವಾದೀತೆಂಬ ಭರವಸೆ ಕೊಂಚಮಾತ್ರವೂ ಇಲ್ಲವೆಂದೂ, ಒಂದೊಂದು ಜನವೂ ತನ್ನ ತನ್ನ ಸ್ವಭಾವವನ್ನು ಚೆನ್ನಾಗಿ ಕಂಡುಂಕೊಂಡು ಅದರಂತೆ ವರ್ತಿಸುವುದು ಆ ಜನಕ್ಕೆ ಕ್ಷೇಮಕರವೆಂದೂ ಪ್ರತಿಪಾದಿಸಿದ.

“Nations have their own modes of acting, and these modes are not easily changed; they are even consecrated, when great things have been done in them. When a literature has produced Shakespeare and Milton, when it has even produced Barrow and Burke, it cannot well abandon its traditions; it can hardly begin, at this late time of day, with and institution like the French academy....”

ಅಲ್ಲಿಂದಾಚೆಗೆ ಆ ರೀತಿಯ ಅಕಾಡೆಮಿಯ ಮಾತು ಇಂಗ್ಲೆಂಡಿನಲ್ಲಿ ತಲೆಯೆತ್ತಲಿಲ್ಲ.

ಇಂಡಿಯದಲ್ಲಿ ಎಷ್ಟೋ ಪ್ರಾದೇಶಿಕ ಭಾಷೆಗಳಿಗೆ ಪರಿಷತ್ತು ಹುಟ್ಟಿಕೊಂಡಿಲ್ಲ, ಬಂಗಾಳದಲ್ಲಿ ವಂಗ ಸಾಹಿತ್ಯ ಪರಿಷತ್ತು ಒಂದುಂಟು. ಅದು ಈಚೆಗೆ ರಣರಂಗವಾಗಿದೆಯೆಂದು ಕೇಳಿದ್ದೇನೆ. ಬಂಕಿಮಚಂದ್ರರ 'ವಂದೇ ಮಾತರಂ' ಹಾಡು ರಾಷ್ಟ್ರಗೀತೆಯಾಗತಕ್ಕದ್ದೆ ಅಥವಾ ರವೀಂದ್ರನಾಥ ಠಾಕೂರರ 'ಜನಗಣಮನ' ಆ ಗೌರವ ಪಡೆಯತಕ್ಕದ್ದೆ? ಈ ಪ್ರಶ್ನೆಯ ಮೇಲೆ ಕಕ್ಷಿಗಳು ಹುಟ್ಟಿ ಬಡಿದಾಟ ನಡೆಯುತ್ತಿದೆಯಂತೆ. ಮಹಾರಾಷ್ಟ್ರದಲ್ಲಿ ಒಂದು ಪರಿಷತ್ತು ಇತ್ತು. ಅದಕ್ಕೆ ಪಾಧ್ಯೆ ಎಂಬವರು ಮುಖ್ಯಸ್ಥರಾಗಿದ್ದರು. ನಾನು ಬೊಂಬಾಯಲ್ಲಿ ಅವರನ್ನು ಕಂಡು ಮಾತನಾಡಿದ್ದೆ. ಅಲ್ಲಿಯೂ ಸಂಸ್ಥೆ ಹೆಚ್ಚು ಯಶಸ್ವಿಯಾದಂತೆ ತೋರಲಿಲ್ಲ. ನನಗೆ ತಿಳಿದಿರುವ ಮಟ್ಟಿಗೆ ಆಂಧ್ರದಲ್ಲಿಯೂ ತಮಿಳು ನಾಡಿನಲ್ಲಿಯೂ ಪರಿಷತ್ತೆಂಬುದು ಪ್ರಬಲಿಸಿರುವಂತೆ ತೋರುವುದಿಲ್ಲ. ಆದರೆ ಪರಿಷತ್ತು ಪ್ರಬಲಿಸಿಲ್ಲವೆಂಬ ಕಾರಣದಿಂದ ಆ ನಾನಾ ಜನದ ಭಾಷೆಗಳೂ ಸಾಹಿತ್ಯಗಳೂ ಹಿಂದೆ ಬಿದ್ದಿವೆಯೆಂದು ಅರ್ಥವಾಗದು. ವಾಸ್ತವವಾಗಿ ಆ ನಾನಾ ಪ್ರಾದೇಶಿಕ ಭಾಷೆಗಳು ಕನ್ನಡದಂತೆ ಪ್ರಬಲಿಸುತ್ತಿವೆ. ಅವುಗಳ ಅಭಿವೃದ್ಧಿಗೆ ಮೂಲಕಾರಣ ಆಯಾ ಜನರಲ್ಲಿರುವ ಅಂತಸ್ಸತ್ತ್ವ.

ಹಾಗಾದರೆ ಕನ್ನಡ ಜನಕ್ಕೆ ಪರಿಷತ್ತು ಅನಾವಶ್ಯಕವೋ? ಈ ಪ್ರಶ್ನೆಗೆ ಉತ್ತರವನ್ನು ಈ ಮುಂದಣ ಪುಟಗಳಲ್ಲಿ ಅಷ್ಟಿಷ್ಟು ಕಾಣಬಹುದು. ಪರಿಷತ್ತು ನಮಗೆ ತುಂಬ ಅವಶ್ಯವಾದ ಸಂಸ್ಥೆ. ಸಾಹಿತ್ಯಸೃಷ್ಟಿ ಅದರ ಕಾರ್ಯವಲ್ಲ. ಅದು ವರಪ್ರಸಾದಪಾತ್ರರಾದವರ ಕಾರ್ಯ. ಆದರೆ ಪ್ರಸಾದಪಾತ್ರರು ಮಾಡಿದ ಕಾರ್ಯ ಜನದ ಉಪಯೋಗಕ್ಕೆ ದೊರೆಯಬೇಕೆಂದರೆ ಅಲ್ಲಿ ಬರುತ್ತದೆ ಪರಿಷತ್ತಿನ ಆವಶ್ಯಕತೆ. ಮುಖ್ಯವಾಗಿ ಅಂಥ ಸಂಸ್ಥೆ ಮಾಡಬೇಕಾದ ಕಾರ್ಯಗಳು ಮೂರು ನಿರ್ವಿವಾದವಾಗಿರುತ್ತವೆ :

(೧) ಪಾಂಡಿತ್ಯಪೋಷಣೆ;
(೨) ಜನಸಾಮಾನ್ಯರಲ್ಲಿ ಸಾಹಿತ್ಯೋತ್ಸಾಹದ ಪ್ರಚಾರ;
(೩) ಅವರಿಗಾಗಿ ಆದರ್ಶ (Standard) ನಿಷ್ಕರ್ಷೆ.

ಪಾಂಡಿತ್ಯ ಉಳಿಯಬೇಕು, ಬೆಳೆಯಬೇಕು - ಎಂಬುದು ಸ್ಪಷ್ಟವಾಗಿದೆ.

ಪ್ರೋತ್ಸಾಹ ಪ್ರಚಾರಕಾರ್ಯವು ಈಗ ಕನ್ನಡ ಸಾಹಿತ್ಯ ಪರಿಷತ್ತಿನಿಂದ ತಕ್ಕಷ್ಟು ನಡೆದಿದೆ. ದೇಶದ ಹಳ್ಳಿಹಳ್ಳಿಯಲ್ಲಿಯೂ ಕರ್ಣಾಟಕ ಸಂಘಗಳು ಹುಟ್ಟಿಕೊಂಡೂ ಹುಟ್ಟಿಕೊಳ್ಳುತ್ತಲೂ ಇರುವುದು ಅದಕ್ಕೆ ದೃಷ್ಟಾಂತ. ಕನ್ನಡ ಜನರು ಕನ್ನಡ ತಮ್ಮದೆಂದು ಈಗ ಎಚ್ಚತ್ತುಕೊಂಡಿದ್ದಾರೆ. ದೇಶದಲ್ಲಿ ಪ್ರಜಾರಾಜಕೀಯ ಹೆಚ್ಚಿದಂತೆಲ್ಲ ಕನ್ನಡದ ಬಳಕೆ ಹೆಚ್ಚುತ್ತದೆ.

ಪರಿಷತ್ತಿನ ಇನ್ನೊಂದು ಕೆಲಸ ಕಷ್ಟವಾದದ್ದು, - ವಿದ್ವತ್ಸಾಧ್ಯವಾದದ್ದು. ಅದನ್ನು ಕುರಿತು ಹೇಳಬೇಕಾದದ್ದು ಒಂದು ಮಾತಿದೆ. ಪರಿಷತ್ತು ಎರಡು ಮುಖಗಳುಳ್ಳದ್ದು: ಒಂದು ಜನಸಾಮಾನ್ಯದ ಕಡೆಗೆ ತಿರುಗಿರಬೇಕಾದದ್ದು. ಈ ವಿದ್ವತ್ಕಾರ್ಯ ಎರಡು ತೆರನಾದದ್ದು: (೧) ಭಾಷಾಪ್ರಯೋಗಗಳ ಪರಿಷ್ಕರಣ; (೨) ಸಾಹಿತ್ಯ ಯೋಗ್ಯತಾ ನಿರ್ಣಯ. ಈ ಕೆಲಸವನ್ನು ಪರಿಷತ್ತು ಕೈಕೊಂಡು ವಿದ್ವಾಂಸರ ಮೂಲಕ ನಡಸುವುದು ತುಂಬ ಅವಶ್ಯವಾಗಿದೆ. ಪರಿಷತ್ತು ಹಾಗೆ ಮಾಡಿದ ನಿರ್ಣಯಗಳನ್ನೂ ಸಲಹೆಗಳನ್ನೂ ಸಮಸ್ತರೂ ಅಂಗೀಕರಿಸುವರೆಂದು ಯಾರೂ ಹೇಳಲಾರರು, ಅದು ಅವಶ್ಯವೂ ಅಲ್ಲ. ಎಷ್ಟೋ ಜನ ಲೇಖಕರೂ ಭಾಷಣಕಾರರೂ ಪರಿಷತ್ತಿನ ಶಿಫಾರಸುಗಳನ್ನು ಪುರಸ್ಕರಿಸದೆ ಬಿಡಬಹುದು. ಅವರು ಸ್ವತಂತ್ರ ಮಾರ್ಗದಲ್ಲಿ ನಡೆಯಬಹುದು. ಪರಿಷತ್ತಿನ ಉದ್ದೇಶದಲ್ಲಿರಬೇಕಾದವರು ಇಂಥವರಲ್ಲ; ಅವರು ಸಾಮಾನ್ಯ ಜನ. ಭಾಷಾಪ್ರಯೋಗಗಳ ವಿಷಯದಲ್ಲಿ ತಿಳಿವಳಿಕೆ ಬೇಕಾದದ್ದು ಇವರಿಗೆ. ಹಾಗೆಯೇ ಗ್ರಂಥಗಳ ಗುಣ ತಾರತಮ್ಯ ವಿಷಯದಲ್ಲಿಯೂ ಸಹಾಯ ಬೇಕಾಗಿರುವುದು ಸಾಮಾನ್ಯ ಜನಕ್ಕೆ.

ರಾನಡೆಯವರು ದೊಡ್ಡ ಜಡ್ಜಿಯಾಗಿದ್ದಾಗ ಸಹ ಮಾಡುತ್ತಿದ್ದ ಒಂದು ಸಾಹಿತ್ಯ ಸೇವೆಯನ್ನು ಇಲ್ಲಿ ಉದಾಹರಿಸಬಹುದು. ರಾನಡೆಯವರು ಆಗ ಮೂರು ತಿಂಗಳಿಗೊಮ್ಮೆ ಪ್ರಕಟವಾಗುತ್ತಿದ್ದ ಸರಕಾರದ ಗೆಜೆಟ್ಟಿನಲ್ಲಿ (Quarterly List of Publications) ಮರಾಠಿ ಗ್ರಂಥಗಳನ್ನು ಕ್ರಮವಾಗಿ ವಿವರ್ಶಿಸಿ ಅವುಗಳ ವಿಷಯವನ್ನೂ ಶೈಲಿಯನ್ನೂ ಜನದ ಗಮನಕ್ಕೆ ತರುತ್ತಿದ್ದರು. ಆಯಾ ಕಾಲಾವಧಿಯಲ್ಲಿ ಪ್ರಕಟವಾದ ಮರಾಠಿ ಗ್ರಂಥಗಳೆಷ್ಟು, ಅವುಗಳಲ್ಲಿ ಮತಗ್ರಂಥಗಳೆಷ್ಟು, ಕಥೆ ಕಾದಂಬರಿಗಳೆಷ್ಟು, ನಾಟಕ ಪದ್ಯಗಳೆಷ್ಟು, ದೇಶವಿದೇಶ ಚರಿತ್ರೆಯೆಷ್ಟು, ವಿಜ್ಞಾನಶಾಸ್ತ್ರಗಳದೆಷ್ಟು, ರಾಜಕೀಯದ್ದೆಷ್ಟು, ಅರ್ಥಶಾಸ್ತ್ರದ್ದೆಷ್ಟು - ಹೀಗೆ ನಾನಾ ಜಾತಿಗಳನ್ನು ವಿಂಗಡಿಸಿ ಒಂದೊಂದು ಜಾತಿಯಲ್ಲಿಯೂ ಹೊಸ ಗ್ರಂಥ ಎಷ್ಟು ಬಂದಿವೆ, ಆ ಗ್ರಂಥಗಳ ಶೈಲಿ ಯಾವ ಮಟ್ಟದ್ದು. ಅವುಗಳ ಗುಣಾಂಶ ಯಾವ ಮಟ್ಟದ್ದು - ಈ ನಾನಾ ವಿವರಗಳನ್ನು ವಿಮರ್ಶೆ ಮಾಡಿ ಟೀಕಿಸುತ್ತಿದ್ದರು. ಆ ಟೀಕೆಗಳಿಂದ ಜನಕ್ಕೆ ತಿಳಿವಳಿಕೆ ಬರುತ್ತಿತ್ತು. ಮತಗ್ರಂಥ ಹೆಚ್ಚಾಗಿದೆ, ವಿಜ್ಞಾನ ಕಡಮೆಯಾಗಿದೆ, ಕಥೆ ಕಾದಂಬರಿ ಹೆಚ್ಚಾಗಿದೆ, ದೇಶ ವಿದೇಶ ಚರಿತ್ರೆ ಕಡಮೆಯಾಗಿದೆ - ಈ ನ್ಯೂನಾಧಿಕ್ಯಗಳನ್ನು ತೋರಿಸುತ್ತಿದ್ದದ್ದರಿಂದ ನೂತನ ಲೇಖಕರಿಗೆ ಮಾರ್ಗದರ್ಶನ ದೊರೆಯುತ್ತಿತ್ತು.

ಈ ಗ್ರಂಥವಿಮರ್ಶನಕಾರ್ಯದ ಜೊತೆಗೆ ಒಂದು ಅಧಿಕಾರಸಂಸ್ಥೆ ಮಾಡಬೇಕಾದ ಇನ್ನೊಂದು ಉಪಕಾರ ಒಂದು ಆದರ್ಶನಿರ್ದೇಶ; ಒಂದು ಆದರ್ಶಪ್ರಾಯವಾದ ಭಾಷಾಪ್ರಯೋಗವನ್ನು ಅಥವಾ ನಿರೂಪಣ ಪ್ರಕಾರವನ್ನು ರೂಢಿಗೆ ತರುವುದು.

ಪ್ರಪಂಚಕಾರ್ಯದ ಒತ್ತಡದಲ್ಲಿ ಹೊಸಹೊಸ ಪದಗಳು, ಹೊಸಹೊಸ ಪ್ರಯೋಗಗಳು ರೂಢಿಗೆ ಬರುವುದು ಅನಿವಾರ್ಯವಾಗಿದೆ. ಹಾಗೆ ರೂಢಿಗೆ ಬುರುತ್ತಿರುವ ಭಾಷಾ ಪ್ರಯೋಗಗಳ ಸಾಧುತ್ವ ಅಸಾಧುತ್ವಗಳನ್ನು ವಿಚಾರಪೂರ್ವಕವಾಗಿ ತಿಳಿಸಿಕೊಡುವ ಕಾರ್ಯ ಒಂದು ವಿದ್ವತ್ಸಂಸ್ಥೆಯಿಂದಲೇ ಆಗಬಹುದಾದದ್ದು. ಈ ಕಾರಣದಿಂದಲೂ ಪರಿಷತ್ತು ನಮಗೆ ಅವಶ್ಯವಾಗಿ ಇರಬೇಕಾದದ್ದು.

ಒಟ್ಟಿನಲ್ಲಿ ಕನ್ನಡವು ಅಭಿವೃದ್ಧಿ ಸ್ಥಿತಿಯಲ್ಲಿದೆಯೆಂದೂ ಅದರ ಭವಿಷ್ಯವು ತೇಜಸ್ಸುಳ್ಳದ್ದಾಗಿದೆಯೆಂದೂ ನಾನು ನಂಬಿಕೊಂಡಿದ್ದೇನೆ.

ಈಗ ಸಾಹಿತ್ಯೋತ್ಸಾಹಿಗಳು ಕನ್ನಡ ದೇಶದ ನಾನಾ ಭಾಗಗಳಲ್ಲಿಯೂ ಇದ್ದಾರೆ. ಕನ್ನಡ ಸಂಘಗಳು ಹುಟ್ಟಿ ಬೆಳೆಯುತ್ತಿವೆ. ಅವರಲ್ಲಿ ನಾನು ಮಾಡಬೇಕಾದ ವಿಶೇಷ ಪ್ರಾರ್ಥನೆ ಒಂದಿದೆ. ಈ ಉತ್ಸಾಹಿಗಳು ತಮ್ಮ ತಮ್ಮ ಸುತ್ತಮುತ್ತಣ ಸ್ಥಳಗಳಲ್ಲಿರುವ ವಿದ್ವಾಂಸರನ್ನೂ ಸಾಹಿತಿಗಳನ್ನೂ ಕುರಿತ ಸಂಗತಿಗಳನ್ನು ಸಂಗ್ರಹಿಸಿ ಕಾಪಾಡಬೇಕೆಂಬುದು ನನ್ನ ಪ್ರಾರ್ಥನೆ. ಈಗ್ಗೆ ನಲವತ್ತು - ಐವತ್ತು ವರ್ಷಗಳ ಹಿಂದೆ ಒಳ್ಳೆಯ ವಿದ್ವಾಂಸರೂ ಕಲಾವಂತರೂ ಅಲ್ಲಲ್ಲಿರುತ್ತಿದ್ದರು. ಪ್ರಸಿದ್ಧಿಯ ಬೆಳಕು ಅವರ ಮೇಲೆ ಬಿದ್ದಿರಲಿಲ್ಲ. ಅದಕ್ಕೆ ಕಾರಣವೆಂತಾದರೂ ಇರಲಿ, ಆ ಜನರು ಅವರವರಿಗೆ ತೋರಿದಂತೆ, ಅವರವರಿಗೆ ಅವಕಾಶ ದೊರೆತಂತೆ ವಿದ್ಯೆ ಸಾಹಿತ್ಯಗಳ ಪ್ರಚಾರದಲ್ಲಿ ತೊಡಗಿದ್ದರೆಂಬುದಂತೂ ನಿಜ. ಅವರು ಸ್ವಪ್ರಯೋಜನಾಪೇಕ್ಷೆಯಿಲ್ಲದೆ ಪರಹಿತಬುದ್ಧಿಯಿಂದ ದುಡಿದವರು. ಅವರು ಮಾಡಿದ ಕೆಲಸದ ಮೌಲ್ಯ ತಾರತಮ್ಯವನ್ನು ನಿರ್ಣಯಿಸುವ ಮಾತು ಬೇರೆ. ಆದರೆ ಅಂಥ ಜನ ನಮ್ಮ ದೇಶದಲ್ಲಿದ್ದರು. ಅವರು ಸಾರಸ್ವತ ಕಾರ್ಯವನ್ನು ಅವರ ಹಿಂದಿನಿಂದ ಅವರ ಮುಂದಿನ ಕಾಲದವರೆಗೆ ಮುಂಬರಿಸಿ ಸಾರಸ್ವತಧಾರೆ ಸಂತತವಾಗಿರುವಂತೆ ಮಾಡಿದರು. ಅಂಥವರನ್ನು ನಾವು ಮರೆಯಬಾರದು. ಈ ಉದ್ದೇಶದಿಂದ ನಾನು ಈಗ ಮಾಡುತ್ತಿರುವ ಪ್ರಾರ್ಥನೆ.

ಅಂಥ ವಿದ್ವಜ್ಜನರಲ್ಲಿ ಕೆಲವರ ಹೆಸರುಗಳನ್ನು ನನ್ನ ನೆನಪಿಗೆ ತೋರಿದಂತೆ ಉದಾಹರಿಸುತ್ತೇನೆ : ಪಂಡಿತ ಜಯರಾಯಾಚಾರ್ಯರು, ಕುಕ್ಕೆ ಸುಬ್ರಹ್ಮಣ್ಯಶಾಸ್ತ್ರಿಗಳು, ಹೊಸಕೋಟೆಯ ಭಾರತಿ ಸಂಪಂಗಿರಾಮಯ್ಯನವರು, ಕೊಮಾಂಡೂರು ರಾಮಸ್ವಾಮಯ್ಯಂಗಾರ್ಯರು, ಲಿಂಗರಾಜ ಅರಸು, ಹೊನ್ನಡಿಕೆ ವೆಂಕಟರಾಯಕವಿ, ಚೆನ್ನಕೃಷ್ಣಯ್ಯನವರು, ಮೈಸೂರು (ಸಹಸ್ರನಾಮ) ಸೀತಾರಾಮಶಾಸ್ತ್ರಿಗಳು, ಹಲಗೂರು ಶಾನುಭೋಗ ವೆಂಕಟರಮಣಯ್ಯನವರು, ('ನರಸಿಂಹಶತಕ' ಕರ್ತೃ) ನರಸಿಂಹಶಾಸ್ತ್ರಿಗಳು, ('ಸುಭಾಷಿತಮಂಜರಿ' ಕರ್ತೃ) ಗಂಜಾಂ ಕೃಷ್ಣಪ್ಪನವರು, ಗುಡಿಬಂಡೆ ಕೇಶವಯ್ಯನವರು, ತಿರುವಳ್ಳೂರು ಶ್ರೀನಿವಾಸ ರಾಘವಾಚಾರ್ಯರು, ಸೋಸಲೆ

ಅಯ್ಯಶಾಸ್ತ್ರಿಗಳು, ಕಾನಕಾನಹಳ್ಳಿ ವರದಾಚಾರ್ಯರು, ಭುಜಬಲಿ ಪಂಡಿತರು - ಇಂಥ ಮಹನೀಯರು ಬಹುಮಂದಿ ಇದ್ದರು. ಇವರಲ್ಲಿ ಕೆಲವರನ್ನು ನಾನು ಹೆಚ್ಚಾಗಲ್ಲದಿದ್ದರೂ ಹತ್ತಿರದಿಂದ ಬಲ್ಲೆ. ಉಳಿದವರ ಬರವಣಿಗೆಯನ್ನು ಅಷ್ಟಿಷ್ಟು ನೋಡಿದ್ದೇನೆ.

ನಮ್ಮ ದೇಶದಲ್ಲಿ ಈಚೆಗೆ ಹುಟ್ಟಿಕೊಂಡಿರುವ ಭಾಷಾ ವೈಷಮ್ಯಗಳನ್ನು ಕುರಿತು ಒಂದು ಮಾತನ್ನು ಹೇಳಬೇಕೆನಿಸುತ್ತದೆ. ಮನುಷ್ಯನು ಸಂಪಾದಿಸಿಕೊಳ್ಳಬೇಕಾದ ಜ್ಞಾನವು ಯಾವ ಒಂದು ಭಾಷೆಯಲ್ಲಿರುವುದಕ್ಕಿಂತಲೂ ಹೆಚ್ಚಾದದ್ದು. ಸಂಸ್ಕೃತ ಸಹ ಆಧ್ಯಾತ್ಮಿಕ ಜ್ಞಾನವನ್ನು ಒದಗಿಸಬಲ್ಲಷ್ಟು ಪಟುವಾಗಿ ಇಹಲೋಕಜೀವನವನ್ನು ಕುರಿತ ಜ್ಞಾನವನ್ನು ತಿಳಿಸಲಾರದು. ನಮಗೆ ಅವಶ್ಯವಿರುವ ಜ್ಞಾನ ಯಾವ ಒಂದು ಭಾಷೆಯಲ್ಲಿಯೂ ಇರುವಷ್ಟು ಮಾತ್ರ ಸಾಲದು. ಹೀಗೆ ಜ್ಞಾನದ ದೃಷ್ಟಿಯಿಂದ ನೋಡಿದರೆ ನಾನಾ ಭಾಷೆಗಳು ಅನ್ಯೋನ್ಯ ಸಹಾಯಕಗಳಾಗಿರುತ್ತವೆ. ಹೀಗೆ ಕೇವಲಪ್ರಯೋಜನ ದೃಷ್ಟಿಯಿಂದಲೇ ಪ್ರತಿಯೊಬ್ಬನೂ ಆದಷ್ಟು ಹೆಚ್ಚು ಭಾಷೆಗಳನ್ನು ಕಲಿಯುವುದು ಶ್ರೇಯಸ್ಕರ. ಭಾಷಾ ವೈಷಮ್ಯವೂ ಮಾತ್ಸರ್ಯವೂ ಅಯುಕ್ತವೆಂದು ನನ್ನ ನಂಬಿಕೆ. ಕನ್ನಡ ವೈಯಾಕರಣ ಶಿರೋಮಣಿಯಾದ ಭಟ್ಟಾಕಳಂಕನು ನಮಗೆ ಮಾರ್ಗದರ್ಶಿಯಾಗಿದ್ದಾನೆ.

ನಮಶ್ಶ್ರೀವರ್ಧಮಾನಾಯ ವಿಶ್ವವಿದ್ಯಾಽವಭಾಸಿನೇ ।
ಸರ್ವಭಾಷಾಮಯೀ ಭಾಷಾ ಪ್ರವೃತ್ತಾ ಯನ್ಮುಖಾಂಬುಜಾತ್ ॥
ದೇವಾ ದೈವೀಂ ನರಾ ನಾರೀಂ ಶಬರಾಶ್ಚಾಪಿ ಶಾಬರೀಮ್ ।
ತಿರ್ಯಂಚೋಽಪಿ ಚ ತೈರಶ್ಚೀಂ ಮೇನಿರೇ ಭಗವದ್ಗಿರಮ್ ॥

ವೇದವೂ ಇದನ್ನೇ ಕಲಿಸುತ್ತದೆ.

ಗೌರೀ ಮಿಮಾಯ ಸಲಿಲಾನಿ ತಕ್ಷತೀ । ಏಕಪದೀ ದ್ವಿಪದೀ ಸಾ ಚತುಷ್ಪದೀ ।
ಅಷ್ಟಾಪದೀ ನವಪದೀ ಬಭೂವುಷೀ । ಸಹಸ್ರಾಕ್ಷರಾ ಪರಮೇ ವ್ಯೋಮನ್ ॥ *

೧

ಮಾಸಪತ್ರಿಕೆಗಳು, ಜಿ. ಟಿ. ಎ. ಪ್ರೆಸ್

ಕನ್ನಡ ಸಾಹಿತ್ಯದ ಆಧುನಿಕ ಪುನರುಜ್ಜೀವನವು ಮಹಾರಾಜ ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯರವರ ಕಾಲದಲ್ಲಿಯೇ ಆರಂಭವಾಯಿತೆಂದು ಹೇಳಬಹುದು. ಆ ಮಹಾರಾಜರು ಬಹುಮಂದಿ ವಿದ್ವಾಂಸರಿಗೆ ಆಶ್ರಯ ಕೊಟ್ಟಿದ್ದರು. ರಾಮಾಯಣ ಭಾರತ ಭಾಗವತಗಳನ್ನೂ ಅನೇಕ ಪುರಾಣಗಳನ್ನೂ ಇತರ ಭಕ್ತಿಸಾಹಿತ್ಯವನ್ನೂ ಅವರ ಆಸ್ಥಾನ ಪಂಡಿತರು ಸಂಸ್ಕೃತದಿಂದ ಕನ್ನಡಿಸಿ ಸಾಹಿತ್ಯಸೇವೆ ಮಾಡಿದರು.

ಅವರ ತರುವಾಯ ಶ್ರೀ ಚಾಮರಾಜೇಂದ್ರ ಒಡೆಯರವರ ಕಾಲದಲ್ಲಿ ಕನ್ನಡ ಸಾಹಿತ್ಯಕ್ಕೆ ಆಧುನಿಕತೆ ಬಂದಿತು. ಅವರ ಕಾಲದಲ್ಲಿ ಹುಟ್ಟಿ ನಡೆಯುತ್ತಿದ್ದ ಕೆಲವು ಮಾಸ ಪತ್ರಿಕೆಗಳು ಈ ಸಂಗತಿಯನ್ನು ಸ್ಪಷ್ಟಪಡಿಸುತ್ತವೆ. ಆ ಪತ್ರಿಕೆಗಳಲ್ಲಿ ನನ್ನ ತಿಳಿವಳಿಕೆಗೆ ಬಂದಿರುವುವು ಇವು:

(೧) ‘ಹಿತಬೋಧಿನಿ’ -ಎಂ. ವೆಂಕಟಕೃಷ್ಣಯ್ಯನವರು, ಎಂ.ಎಸ್. ಪುಟ್ಟಣ್ಣನವರು ಮುಂತಾದವರು ನಡೆಸುತ್ತಿದ್ದದ್ದು.

(೨-೩) ‘ಕರ್ಣಾಟಕ ಕಾವ್ಯಮಂಜರಿ’ ಮತ್ತು ‘ಕರ್ಣಾಟಕ ಕಾವ್ಯ ಕಲಾನಿಧಿ’ —ಇವನ್ನು ಮಂ.ಆ. ರಾಮಾನುಜಯ್ಯಂಗಾರ್ಯರೂ, [1] ಎಸ್.ಜಿ. ನರಸಿಂಹಾಚಾರ್ಯರೂ [2] ನಡೆಸುತ್ತಿದ್ದರು.

(೪-೫) ‘ಕರ್ಣಾಟಕ ಗ್ರಂಥಮಾಲೆ’ ಮತ್ತು ‘ವಿದ್ಯಾದಾಯಿನಿ’ —ಇವನ್ನು ಸ್ಥಾಪಿಸಿ ನಡೆಸುತ್ತಿದ್ದವರು ಎಂ. ಶಾಮರಾಯರು, ಬಾಪು ಸುಬ್ಬರಾಯರು.

‘ವಿದ್ಯಾದಾಯಿನಿ’ ಪತ್ರಿಕೆ ಉಪಾಧ್ಯಾಯವರ್ಗಕ್ಕೆ ಮಾತ್ರವಲ್ಲದೆ, ವಿದ್ಯಾರ್ಥಿಗಳಿಗೂ ಮೆಚ್ಚಿಕೆಯಾಯಿತು. ಅದರಿಂದ ಪ್ರೋತ್ಸಾಹಿತರಾಗಿ ಅನೇಕ ಮಂದಿ ಉಪಾಧ್ಯಾಯರು ಪದ್ಯಗಳನ್ನೂ ಹಾಡುಗಳನ್ನೂ ಲೇಖನಗಳನ್ನೂ ಬರೆಯುತ್ತಿದ್ದರು. ನಮ್ಮ ಹೆಡ್‌ಮಾಸ್ಟರ್ ಚಂದ್ರಶೇಖರಶಾಸ್ತ್ರಿಗಳ ತಮ್ಮಂದಿರು, ಏರುಕಾಲುವೆ ಸುಬ್ಬಾಶಾಸ್ತ್ರಿಗಳು ಒಂದು ಹಾಡನ್ನು ಬರೆದಿದ್ದರು. ನಮ್ಮ ಹೆಡ್ ಮಾಸ್ಟರು ಅದನ್ನು ಕ್ಲಾಸಿಗೆ ಓದಿ ವಿದ್ಯಾರ್ಥಿಗಳೂ ಹಾಡುವಂತೆ ಕಲಿಸಿದರು-ನಾನು ಲೋಯರ್ ಸೆಕೆಂಡರಿ ಕ್ಲಾಸಿನಲ್ಲಿದ್ದಾಗ. ಡಿ.ಸಿ. ಸುಬ್ಬರಾಯಪ್ಪನವರು

ತಾವು ಹೋಗಿದ್ದ ಯಾವುದೋ ಜಾತ್ರೆಯನ್ನು ಹೃದಯಂಗಮವಾಗಿ ಬರೆದಿದ್ದರು. ವಿದ್ಯಾರ್ಥಿಗಳಿಗೆ ಪರೀಕ್ಷೆಯಲ್ಲಿ ಒದಗುವಂಥ ಪ್ರಶ್ನೆಗಳೂ ಅವುಗಳಿಗೆ ತಕ್ಕ ಉತ್ತರಗಳೂ ಪ್ರಕಟವಾಗಿರುತ್ತಿದ್ದವು. ಹೀಗೆ 'ವಿದ್ಯಾದಾಯಿನಿ' ಬಹು ಜನರಿಗೆ ಪ್ರಯೋಜಕವಾಗಿತ್ತು.

ಕರ್ಣಾಟಕ ಗ್ರಂಥಮಾಲೆಯಲ್ಲಿ ಆಧುನಿಕ ಲೇಖಕರ ಪ್ರಬಂಧ ನಾಟಕ ಕಾವ್ಯಗಳು ಭಾಗಭಾಗವಾಗಿ ಪ್ರಕಟವಾಗುತ್ತಿದ್ದವು.

ಹೀಗೆ ಹೊರಕ್ಕೆ ಬಂದವು ಹತ್ತಾರು ಕೃತಿಗಳು. ನಂಜನಗೂಡು ಸುಬ್ಬಾಶಾಸ್ತ್ರಿಗಳು, ಅನಂತನಾರಾಯಣಶಾಸ್ತ್ರಿಗಳು, ಶ್ರೀಕಂಠಶಾಸ್ತ್ರಿಗಳು—ಇವರ ಕೃತಿಗಳು; ಕರ್ಣಾಟಕ ನಾಗಾನಂದ, ಬಸವಪ್ಪಶಾಸ್ತ್ರಿಗಳ ಉತ್ತರರಾಮಚರಿತೆ ಮೊದಲಾದ ಅನೇಕ ಉತ್ತಮ ಗ್ರಂಥಗಳು ಈ ಮಾಲೆಯಲ್ಲಿ ಪ್ರಕಟವಾದವು.

ಅರಮನೆಯ ಶಾಕುಂತಲ ನಾಟಕ ಕಂಪನಿ ಪ್ರಾರಂಭವಾದದ್ದೂ ಅದರ ಉಪಯೋಗಕ್ಕಾಗಿ ದಿವಾನ್ ರಂಗಚಾರ್ಲುರವರು ಬಸವಪ್ಪಶಾಸ್ತ್ರಿಗಳವರಿಂದ ಕನ್ನಡದಲ್ಲಿ ಶಾಕುಂತಲವನ್ನು ಬರೆಯಿಸಿದ್ದೂ ಶ್ರೀ ಚಾಮರಾಜ ಒಡೆಯರ ಕಾಲದಲ್ಲಿ. ವೆಂಕಟಕೃಷ್ಣಯ್ಯನವರು, ಎಂ.ಎಸ್. ಪುಟ್ಟಣ್ಣನವರು, ಎಂ.ಬಿ. ಶ್ರೀನಿವಾಸಯ್ಯಂಗಾರ್ಯರು, ಆರ್. ರಘುನಾಥರಾಯರು ಮೊದಲಾದವರು ಕನ್ನಡದ ಗ್ರಂಥರಚನೆಯಲ್ಲಿ ತೊಡಗಿದ್ದು ಅದೇ ಸುಮಾರಿನಲ್ಲಿ. ಹಿಂದೂ ಚರಿತ್ರದರ್ಪಣ, ಮೈಸೂರು ಚರಿತ್ರಸಾರ, ಭೂವಿವರಣೆ-ಇವೇ ಮೊದಲಾದ ಸ್ಕೂಲ್ ಪುಸ್ತಕಗಳು ಹೀಗೆ ಪ್ರಕಟವಾದವು.

ಜಿ. ಟಿ.ಎ. ಪ್ರೆಸ್

ಇದಕ್ಕಿಂತ ಹೆಚ್ಚಾಗಿ ಆಧುನಿಕತೆಯ ಲಕ್ಷಣ ಕಂಡುಬಂದದ್ದು ಜಿ.ಟಿ.ಎ.ಪ್ರೆಸ್ ಎಂಬ ಪ್ರಕಟನಸಂಸ್ಥೆಯ ಕಾರ್ಯದಲ್ಲಿ. ವಿಶ್ವವಿದ್ಯಾನಿಲಯದಿಂದ ಬಿ.ಎ.ಮೊದಲಾದ ಪ್ರಶಸ್ತಿಗಳನ್ನು ಪಡೆದ ತರುಣರು ತಾವು ಕಲಿತ ಹೊಸ ವಿದ್ಯೆ-ವಿಜ್ಞಾನಗಳನ್ನು ಸ್ವಜನದಲ್ಲಿ ಹರಡಲು ಪರಿಶ್ರಮ ಮಾಡುವುದು ಕರ್ತವ್ಯವೆಂದು ಆ ಸಂಸ್ಥೆಯ ಮೂಲಸ್ಥಾಪಕರ ಮನಸ್ಸಿಗೆ ಬಂದಿತ್ತು. ಬಿ.ದಾಸಪ್ಪನವರು, ಸಿ.ಆನಂದರಾಯರು, ಸಿ.ಸುಬ್ಬರಾಯರು, ಎಂ.ಎಲ್.ಶ್ರೀಕಂಠೇಶಗೌಡರು, [3] ಪಿ. ರಾಘವೇಂದ್ರರಾಯರು, ವೆಂಕಟಸುಬ್ಬಯ್ಯನವರು, ಎಲ್. ಜಯರಾಯರು-ಇವರು ಆ ಪದವೀಧರರಲ್ಲಿ ಮುಖ್ಯರು. ಇವರು ತಮ್ಮ ಉದ್ದೇಶಕ್ಕಾಗಿ ಕಟ್ಟಿಕೊಂಡ ಸಂಸ್ಥೆ ಗ್ರ್ಯಾಜುಯೇಟ್ಸ್ ಟ್ರೇಡಿಂಗ್ ಅಸೋಸಿಯೇಷನ್ ಪ್ರೆಸ್. ಇದು ಮೈಸೂರು ಪಟ್ಟಣದ ದೊಡ್ಡ ಪೇಟೆಯಲ್ಲಿ ಈಗ ಶ್ರೀಚಾಮರಾಜೇಂದ್ರ

ಒಡೆಯರವರ ಪ್ರತಿಮೆಯಿರುವ ಸ್ಥಳಕ್ಕೆ ಸಮೀಪವಾಗಿ ಭವ್ಯವಾಗಿ ಕಾಣಿಸುತ್ತಿರುವ ಕಟ್ಟಡದಲ್ಲಿತ್ತು. ಒಂದು ಅಚ್ಚಿನ ಕಾರ್ಖಾನೆ, ಒಂದು ಪುಸ್ತಕದ ಮತ್ತು ಲೇಖನಸಾಮಗ್ರಿಗಳ ಅಂಗಡಿ-ಇವು ಅದರ ಮುಖ್ಯ ಶಾಖೆಗಳು.

೧೯೦೩-೪ರ ಸುಮಾರಿನಲ್ಲಿ ನಾನು ಮೈಸೂರಿನಲ್ಲಿ ವಿದ್ಯಾರ್ಥಿಯಾಗಿದ್ದಾಗ ಆ ಪುಸ್ತಕದಂಗಡಿಗೆ ಪದೇ ಪದೇ ಹೋಗುತ್ತಿದ್ದೆ. ನನಗಿದ್ದ ಆಕರ್ಷಣೆಗಳು ಎರಡು. ಅದು ರೂ.ಆ.ಕಾ.ಗಳ ಕಾಲ; ಅಂಗಡಿಯನ್ನು ಪ್ರವೇಶಿಸಿ ಒಂದಾಣೆಯನ್ನು ಮೇಜಿನ ಮೇಲಿಟ್ಟರೆ ಜೇಬು ಭರ್ತಿಯಾಗುವಷ್ಟು 'ಜೆಮ್' ಬಿಸ್ಕತ್ತುಗಳನ್ನು ಕೊಡುತ್ತಿದ್ದರು. ಅದನ್ನು ಮೆಲುಕುಹಾಕುತ್ತಾ ಒಳಗೆ ಹೋದರೆ ಎರಡಾಣೆ ಮೂರಾಣೆಯ ಪುಸ್ತಕಗಳು ಸಾಲು ಸಾಲಾಗಿ ಕೈಗೆ ಸಿಕ್ಕುವಂತೆ ಜೋಡಿಸಿಟ್ಟಿರುತ್ತಿದ್ದರು. ಪುಸ್ತಕವನ್ನು ಪರೀಕ್ಷೆಮಾಡುವ ನೆವದಿಂದ ಅಲ್ಲಿ ಕುಳಿತು ಆದಷ್ಟು ಪುಸ್ತಕ ಓದಿ ಮುಗಿಸಿಬಿಡುವುದು! ಎರಡು ಮೂರು ದಿನಕ್ಕೊಂದು ಸಾರಿ ಎರಡಾಣೆ ಕೊಟ್ಟು ಒಂದು ಪುಸ್ತಕ ಕೊಳ್ಳುವುದು.

ನಾನು ಹೀಗೆ ಟೆನ್ನಿಸನ್, ಲಾಂಗ್‌ಫೆಲೊ ಮೊದಲಾದ ಕವಿಗಳ ಪದ್ಯ ಸಂಗ್ರಹಗಳನ್ನು ಕೊಂಡು ಬಹುಕಾಲ ಇರಿಸಿಕೊಂಡಿದ್ದೆ. ಆಗ ಎರಡೂವರಾಣೆ ಕೊಟ್ಟರೆ ಕ್ಯಾಸಲ್ ಕಂಪನಿಯ 'ಯೂನಿವರ್ಸಲ್ ಲೈಬ್ರರಿ' ಎಂಬ ಗ್ರಂಥಮಾಲೆಯ ಒಂದು ಪ್ರತಿ ಬರುತ್ತಿತ್ತು. ಹಾಗೆ ಕೆಲವು ಷೇಕ್‌ಸ್ಪಿಯರ್ ನಾಟಕಗಳನ್ನು ಕೊಂಡು ಓದಿದೆ.

ಜಿ.ಟಿ.ಎ.ಪ್ರೆಸ್ಸಿನವರು ಕನ್ನಡದಲ್ಲಿ ಮೂರು ಅಪೂರ್ವವಾದ ಗ್ರಂಥಮಾಲೆಗಳನ್ನು ಆರಂಭಿಸಿದರು. ಒಂದು ವಿಜ್ಞಾನದ್ದು, ಎರಡನೆಯದು ನವ್ಯ ಸಾಹಿತ್ಯದ್ದು, ಮೂರನೆಯದು ಬಾಲಸಾಹಿತ್ಯದ್ದು.

ವಿಜ್ಞಾನಮಾಲೆಯಲ್ಲಿ ಬಿ.ದಾಸಪ್ಪನವರ ಖನಿಜಶಾಸ್ತ್ರ ಪಿ. ರಾಘವೇಂದ್ರರಾಯರ ಪ್ರಾಣಿಶಾಸ್ತ್ರ, ಎಂ.ಶ್ರೀನಿವಾಸರಾಯರ ಮಾಯಾದೀಪ (ಮ್ಯಾಜಿಕ್ ಲ್ಯಾಂಟರ್ನ್). ಡಾ । ಪಿ. ವೆಂಕೋಬರಾಯರ ಮನಶ್ಯಾಸ್ತ್ರ, ಎಂ. ಹಿರಿಯಣ್ಣನವರ ಬೋಧನಶಾಸ್ತ್ರ (ಟೀಚಿಂಗ್ ಮೆಥಡ್ಸ್)-ಇವು ನನ್ನ ಜ್ಞಾಪಕದಲ್ಲಿವೆ. ಈ ಎಲ್ಲ ಗ್ರಂಥಗಳಲ್ಲೂ ವಿಜ್ಞಾನದ ಭಾವನೆಗಳನ್ನು ಸುಲಭವೂ ಲಲಿತವೂ ಆದ ಕನ್ನಡದಲ್ಲಿ ಸಮಂಜಸವಾದ ಪಾರಿಭಾಷಿಕ ಶಬ್ದಗಳಲ್ಲಿ ಪ್ರತಿಪಾದಿಸಿದ್ದರು.

ನವ್ಯಸಾಹಿತ್ಯ ಭಾಗದಲ್ಲಿ ಷೇಕ್‌ಸ್ಪಿಯರಿನ ಹ್ಯಾಮ್ಲೆಟ್, ಪ್ರತಾಪರುದ್ರ ನಾಟಕ (ಮ್ಯಾಕ್‌ಬೆತ್), ರಾಮವರ್ಮ-ಲೀಲಾವತಿ (ರೋಮಿಯೋ ಮತ್ತು ಜೂಲಿಯೆಟ್), ಶೂರಸೇನ ಚರಿತ್ರೆ (ಒಥೆಲೊ)-ಇವು ಮುಖ್ಯ.

ಮೂರನೆಯ ಭಾಗವಾದ ಬಾಲಸಾಹಿತ್ಯದಲ್ಲಂತೂ ಜಿ.ಟಿ.ಎ.ಪ್ರೆಸ್ಸಿನವರು ಮಾಡಿದ ಕೆಲಸ ಇಂದಿಗೂ ಪ್ರಶಂಸನೀಯವಾಗಿದೆ. ಇಂಗ್ಲೆಂಡಿನಲ್ಲಿ ಡಬ್‌ಲ್‌ಯು.ಟಿ.ಸ್ಟೆಡ್ ಮಹಾಶಯನು 'ಬುಕ್‌ಸ್ ಫಾರ್ ದಿ ಬೇರ್‍ನ್ಸ್' ಎಂಬ ಗ್ರಂಥಮಾಲೆಯನ್ನು ಪ್ರಕಟಮಾಡಿದ್ದನು. ಜಿ.ಟಿ.ಎ.ಪ್ರೆಸ್ಸಿನವರು ಅವನ ಅನುಮತಿ ಪಡೆದು ಅನೇಕ ಗ್ರಂಥಗಳನ್ನು ಕನ್ನಡದಲ್ಲಿ ಬರೆಯಿಸಿ ಪ್ರಕಾಶಪಡಿಸಿದರು. 'ರಾಬಿನ್‌ಸನ್ ಕ್ರೂಸೊ ಸಾಹಸಗಳು', 'ಗಲಿವರನ ದೇಶಸಂಚಾರಗಳು', 'ನಿರ್ಭಾಗ್ಯ ಮುರಾದ', 'ಈಸೋಪನ ನೀತಿಕಥೆಗಳು' - ಇವನ್ನೆಲ್ಲ ನಾನು ಓದಿದ್ದೇನೆ. ಚೊಕ್ಕವಾದ ಕನ್ನಡ, ಪುಟಪುಟದಲ್ಲಿಯೂ ಚಿತ್ರಗಳು, ಒಳ್ಳೆಯ ಅಚ್ಚು, ಅವೆಲ್ಲ ಮನೋರಂಜಕವಾಗಿ ಕೈಸೋಕಿದಕೂಡಲೆ ತೆಗೆದುಕೊಂಡು ಮೊದಲಿನಿಂದ ಕಡೆಯವರೆಗೂ ಓದಬೇಕೆನಿಸುವಂತಿದ್ದವು.

ಜಿ. ಟಿ.ಎ.ಸಂಸ್ಥೆಯ ಅವನತಿ

ಜಿ.ಟಿ.ಎ.ಸಂಸ್ಥೆ ಸುಮಾರು ಹದಿನೈದು ವರ್ಷಕಾಲ ಚೆನ್ನಾಗಿ ಕೆಲಸ ಮಾಡಿ ಬಾಳಿತು. ಅದು ಅವಶ್ಯವಾಗಿದ್ದ ಕೆಲಸವನ್ನು ಮಾಡಿತು. ಆ ಕೆಲಸವನ್ನು ಬಹು ಚೆನ್ನಾಗಿ ಮಾಡಿತು. ಆ ಕೆಲಸ ಸುಸಂಸ್ಕೃತ ಜನರ ಮೆಚ್ಚಿಕೆಯನ್ನು ಪಡೆಯಿತು. ಅಷ್ಟಾಗಿಯೂ ಅದು ಕ್ಷೀಣಿಸಿತು. ಇದು ಒಂದು ಬೋಧಪ್ರದವಾದ ಸಂಗತಿ. ಆಧುನಿಕ ವಿದ್ವಾಂಸರ ಸ್ವಕರ್ತವ್ಯಾಂಗೀಕಾರದಲ್ಲಿ ಅದರ ಪ್ರಾರಂಭ. ದಕ್ಷರಾದ ನಾಯಕರು ಮುಂದೆ ಬಾರದೆ ಆ ಪ್ರಯತ್ನದ ಕ್ಷಯ.

ಆ ಸಂಸ್ಥೆಗೆ ಪ್ರಾಣವಾಯುವಿನಂತೆ ಇದ್ದವರು ಎಲ್.ಜಯರಾಯರು. ಅವರು ಉತ್ಸಾಹಿಗಳು, ಪ್ರಾಮಾಣಿಕರು, ವಿಚಕ್ಷಣರು. ಅವರು ನೋಡಲಿಕ್ಕೆ ಸಣಕಲು ಒಣಕಲಾಗಿ ಇದ್ದರೂ ಕಾರ್ಯಸಾಧನೆಗೆ ಇರಬೇಕಾದ ಚಟುವಟಿಕೆ, ಸೂಕ್ಷ್ಮಗ್ರಾಹಿತೆ, ನಯ ವಿನಯಗಳು, ಸ್ಥಿರಪ್ರತಿಜ್ಞೆ ಮೊದಲಾದ ಗುಣಗಳು ಅವರಲ್ಲಿದ್ದವು. ಅವರು ಮುಪ್ಪು ಬರುವವರೆಗೂ ಬದುಕಲಿಲ್ಲ. ಅವರು ತೀರಿಕೊಂಡದ್ದೇ ಜಿ.ಟಿ.ಎ.ಸಂಸ್ಥೆಯ ದುರದೃಷ್ಟ.

ಆ ಸಂಸ್ಥೆಗೆ ಸೇರಿದ್ದ ಇತರರು ಕಾಲಕ್ರಮದಲ್ಲಿ ದೂರವಾದರು. 'ಹ್ಯಾಮ್ಲೆಟ್' ಬರೆದ ಆನಂದರಾಯರೂ, 'ಒಥೆಲೊ' ಬರೆದ ಸಿ. ಸುಬ್ಬರಾಯರೂ ಕಾಲಾಧೀನರಾದರು. ಪಿ.ರಾಘವೇಂದ್ರರಾಯರು ಮಹಾರಾಜರ ಪ್ರೈವೇಟ್ ಸೆಕ್ರೆಟರಿಯಾಗಿದ್ದು ಅನಂತರ ಎಕ್ಸೈಸ್ ಕಮಿಷನರಾಗಿ ಆಮೇಲೆ ಕೌನ್ಸಿಲ್ ಮೆಂಬರ್ ಆದರು. ಬಿ. ದಾಸಪ್ಪನವರು ವಿದ್ಯಾ ಇಲಾಖೆಗೆ ಬಂದರು. ಇತರರು ಹೇಗೆ ಹೇಗೋ ದೂರವಾದರು. ಜಯರಾಯರ ಸ್ಥಾನಕ್ಕೆ ಆ ದರ್ಜೆಯ ಜನ ಯಾರೂ ಬರಲಿಲ್ಲ. ಬಹು ಉತ್ಸಾಹದಿಂದ ಕಟ್ಟಿದ್ದ ಆ ಕಟ್ಟಡ ಕುಸಿಯಿತು.

ಇದರಲ್ಲಿ ನಮಗೆ ಒಂದು ನೀತಿಯುಂಟು. ಈಗ ಸಂಘಗಳೂ ಸಮಿತಿಗಳೂ ಹೇರಳವಾಗಿ ಹುಟ್ಟುತ್ತಿವೆ. ಬೀದಿ ಬೀದಿಗೂ ಒಂದೊಂದು ಸಂಘವಾಗುತ್ತಿದೆ. ಇದು ಸಂತೋಷದ ವಿಷಯವೇ. ಉತ್ಸಾಹಿಗಳೂ ಕಾರ್ಯತತ್ಪರರೂ ನಮ್ಮಲ್ಲಿ ಯಥೇಷ್ಟವಾಗಿದ್ದಾರೆಂದು ಸಂಘಸಮಿತಿಗಳ ಉತ್ಪತ್ತಿ ಅಭಿವೃದ್ಧಿಗಳಿಂದ ಗೊತ್ತಾಗುತ್ತದೆ. ಆದರೆ ಪ್ರಾರಂಭದಲ್ಲಿ ಉತ್ಸಾಹ ತೋರಿಸುವವರು ಎಷ್ಟುಕಾಲ ದೃಢವಾಗಿ ನಿಂತಾರು? ಎಷ್ಟುಕಾಲ ಪ್ರಯಾಸವನ್ನೂ ಕಾಲನಷ್ಟವನ್ನೂ ನಿರುತ್ಸಾಹ ಕಾರಣವನ್ನೂ ಸಹಿಸಿ ಎದುರಿಸಿಯಾರು?

ಜೀವನೋಪಾಯದ ಚಿಂತೆ ಸಹಜವಾದದ್ದು. ಯಾವುದೋ ಒಂದು ಉದ್ಯೋಗ ದೊರೆತ ಮೇಲೆ ಅದರಲ್ಲಿ ಮುಂದುವರಿಯುವ ಪ್ರಯತ್ನ, ಬಡತಿಗಾಗಿ ತರದೂದುಗಳು, ಹೆಚ್ಚು ಸಂಬಳಕ್ಕಾಗಿ ಅಜೂಜುವಾರಿ, ಮೇಲಿನವರ ಮೆಹರಬಾನಿಯನ್ನು ಸಂಪಾದಿಸುವುದರಲ್ಲಿ

ನಮಗಿರುವ ಶಕ್ತಿಯೆಲ್ಲ ವೆಚ್ಚವಾಗಿಹೋಗುತ್ತದೆ. ಕಾಲವೆಲ್ಲ ಹಾಗೆ ಕಳೆದು ಹೋಗುತ್ತದೆ. ಇನ್ನು ಸಂಸ್ಥೆಯ ಸೇವೆಗೆ ಪುರಸತ್ತೆಲ್ಲಿ? ಉತ್ಸಾಹವೆಲ್ಲಿ? ಹೀಗೆ ನಾಲ್ಕು ವರ್ಷವಾದ ಮೇಲೆ ನಮ್ಮ ಸಂಘವು ಸಡಿಲಬಿದ್ದು ಅಲ್ಲಾಡಲು ಪ್ರಾರಂಭವಾಗುತ್ತದೆ.

ಈ ವಿಷಯದಲ್ಲಿ ಇನ್ನೊಂದು ದೃಷ್ಟಿಯುಂಟು. ಸಂಘವು ಶಾಶ್ವತವಾಗಿರಬೇಕೆಂಬುದು ಆವಶ್ಯಕವೆ? ಅದು ಎಷ್ಟು ದಿನ ಬದುಕಿದರೆ ಅಷ್ಟು ದಿನ ಇರಲಿ. ಆಗ ಅದರಿಂದ ಎಷ್ಟು ಪ್ರಯೋಜನವಾಗುತ್ತದೆಯೋ ಅಷ್ಟನ್ನಾದರೂ ನಾವು ಪಡೆದುಕೊಳ್ಳೋಣ. ಒಂದೆರಡು ವರ್ಷ ಬದುಕಿದರೆ ಅಷ್ಟೇ ಲಾಭ.

ಇದು ಒಪ್ಪಬೇಕಾದ ವಾದವೇ. ಸಾರ್ವಜನಿಕ ಶ್ರದ್ಧೆಯ ಸೂಚನೆ ಕೊಂಚವೂ ಇಲ್ಲದಿರುವುದಕ್ಕಿಂತ ಕೊಂಚ ಮಾತ್ರವಾದರೂ ತೋರಿದರೆ ಅದು ಸಂತೋಷಕ್ಕೆ ವಿಷಯವೇ ಸರಿ.

ಆದರೆ ಕೆಲವು ಮಹಾಕಾರ್ಯಗಳು ನಡೆಯಬೇಕಾಗಿರುತ್ತವಲ್ಲ. ದೇಶಸಮಸ್ತಕ್ಕೂ ಬೇಕಾಗಿ ಶಾಶ್ವತವಾಗಿ ಬೇಕಾಗಿರುವ ಮಹಾಕಾರ್ಯಗಳನ್ನು ಒಂದೆರಡು ವರ್ಷ ಮಾತ್ರ ಇರುವ ಸಂಸ್ಥೆ ನಡಸಲಾರದು. ಒಂದು ಮಹಾಕಾರ್ಯ ಬಹುಕಾಲದ ಸತತಪ್ರಯತ್ನವನ್ನು ಅಪೇಕ್ಷಿಸುತ್ತದೆ, ಮತ್ತು ವಿಪುಲವಾದ ಧನಬಲವನ್ನು ಅಪೇಕ್ಷಿಸುತ್ತದೆ. ಅಂಥ ಹೆಚ್ಚಿನ ದ್ರವ್ಯಾನುಕೂಲವನ್ನೂ ಸಮರ್ಥ ಜನಸಂಘಟನೆಯನ್ನೂ ಯೋಜನೆ ಮಾಡಬಲ್ಲದ್ದು ದೊಡ್ಡ ಸಂಸ್ಥೆ. ಅದರಲ್ಲಿ ಬಹುಕಾಲ ಊರ್ಜಿತವಾಗುವ ಸತ್ತ್ವ ಇರಬೇಕು. ನಮ್ಮ ದೊಡ್ಡ ದೊಡ್ಡ ಸಂಸ್ಥೆಗಳಿಗೆ ಈಗ ಇರುವ ಮುಖ್ಯ ಪ್ರಶ್ನೆ ಇದು. ದಕ್ಷರೂ ಶ್ರದ್ಧಾವಂತರೂ ಆದ ಕಾರ್ಯಕರ್ತರನ್ನು ಕಂಡುಹಿಡಿಯುವುದು ಹೇಗೆ? ಅವರನ್ನು ಒಡಂಬಡಿಸುವುದು ಹೇಗೆ? ಕಾರ್ಯಕರ್ತರು ಉತ್ಸಾಹಿಗಳಾಗಿ ದಕ್ಷತೆಯಿಲ್ಲದವರಾದರೆ ಪ್ರಯೋಜನವಾಗದು. ದಕ್ಷರಾಗಿ ಪ್ರಾಮಾಣಿಕತೆಯಿಲ್ಲದವರೂ ಸಾಲದು. ಪ್ರಾಮಾಣಿಕತೆ, ಕಾರ್ಯದಕ್ಷತೆ–ಎರಡೂ ಒಟ್ಟುಗೂಡಿರುವುದು ಸಾಮಾನ್ಯವಲ್ಲ. ಚಾಲಾಕು ಮನುಷ್ಯರ ಕಣ್ಣುಗಳೂ ಚಾಲಾಕಾಗಿರುತ್ತವೆ. ಅವು ಒಂದು ಕಡೆ ಸ್ಥಿರವಾಗಿ ನಿಲ್ಲಲಾರದೆ ಚಂಚಲವಾಗಿರುತ್ತವೆ. ಸಾಮರ್ಥ್ಯದ ಜೊತೆಗೆ ವ್ರತನಿಷ್ಠೆ ಸೇರಿರುವ ಮನುಷ್ಯನು ಕಾರ್ಯಕರ್ತನಾಗಿ ಬಂದರೆ ಆಗ ಆ ಸಂಸ್ಥೆಗೆ ಯೋಗಕಾಲ.

೨

ಐರೋಪ್ಯರ ಕನ್ನಡ ಸೇವೆ

ಕನ್ನಡ ಸಾಹಿತ್ಯದ ಪುನರುಜ್ಜೀವನದ ಚರಿತ್ರೆಯಲ್ಲಿ ಅತಿ ಮುಖ್ಯವಾಗಿ ನಮ್ಮ ಸ್ಮರಣೆಗೆ ಬರಬೇಕಾದವರು ಕೆಲಮಂದಿ ಐರೋಪ್ಯರು. ಪ್ರಾಚೀನ ಸಾಹಿತ್ಯರತ್ನಗಳನ್ನು ಮೊದಮೊದಲು ಬೆಳಕಿಗೆ ತಂದುಕೊಟವರು ಈ ಐರೋಪ್ಯ ಮಹನೀಯರು. ಅವರ ಹೆಸರುಗಳಲ್ಲಿ ಮುಖ್ಯವಾದವು ರೀವ್ (Reeve), ಗ್ಯಾರಟ್, ಕಿಟ್ಟೆಲ್, ರೈಸ್, ಜೈಗ್ಲರ್. ಇವರಲ್ಲಿ ಕೆಲವರು ಕ್ರೈಸ್ತ ಮತಪ್ರಚಾರಕರಾಗಿ ಬಂದವರು. ಇನ್ನು ಕೆಲವರು ಸರಕಾರದ ವಿದ್ಯಾ ಇಲಾಖೆಯ ಉದ್ಯೋಗಸ್ಥರಾಗಿ ಬಂದವರು.

ಕ್ರೈಸ್ತ ಮತಪ್ರಚಾರಕರಾಗಿ ಬಂದವರನ್ನು ನಾವು ತೆಗಳತಕ್ಕದ್ದಲ್ಲ. ಅವರು ತಮ್ಮ ಮತದ ಮೇಲಣ ಅಭಿಮಾನದಿಂದ ಬಂದವರು. ಸ್ವಮತಶ್ರದ್ಧೆ ಎಂಬ ಗುಣ ಎಲ್ಲರಲ್ಲಿಯೂ ಮಾನ್ಯವಾದದ್ದೇ. ನಮಗೆ ನಮ್ಮ ಮತ ವಿಷಯದಲ್ಲಿ ವಿಶ್ವಾಸವಿರುವಂತೆ ಕ್ರೈಸ್ತರಿಗೆ ಅವರ ಮತದಲ್ಲಿ ವಿಶ್ವಾಸವಿರಬೇಕಾದದ್ದು ಯುಕ್ತ ತಾನೆ? ಅವರ ಮತದಲ್ಲಿ ಭಗವದ್ವಿಷಯದ ಪ್ರಚಾರವೂ ಭಕ್ತನಿಗಿರುವ ಒಂದು ಕರ್ತವ್ಯವೆಂದು ವಿಹಿತವಾಗಿದೆ. ಹೀಗೆ ಕರ್ತವ್ಯದೃಷ್ಟಿಯಿಂದ ಬಂದ ಶ್ರದ್ಧಾಳುಗಳು ರೀವ್ ಮೊದಲಾದವರು.

ರೆವೆರೆಂಡ್ ವಿಲಿಯಂ ರೀವ್ ಎಂಬಾತ ಅಂಥ ಮಿಷನರಿ, ಪ್ರಚಾರಕ. ಆತ ಇಂಗ್ಲಿಷ್ ಕನ್ನಡ ನಿಘಂಟುವನ್ನು ೧೮೨೪ರಲ್ಲಿ ಪ್ರಕಟಿಸಿದ.

ಬೇಸಲ್ ಮಿಷನ್

ಮೊದಮೊದಲ ಮಿಷನರಿಗಳು ಜರ್ಮನಿ ದೇಶದ ಬೇಸಲ್ ಎಂಬ ಸ್ಥಳದಿಂದ ಬಂದವರು. ಆದದ್ದರಿಂದಲೇ ಆ ಸಂಸ್ಥೆಗೆ ಬೇಸಲ್ ಮಿಷನ್ ಎಂದು ಹೆಸರು. ಈ ಮಿಷನ್ನಿನ ಕಾರ್ಯಕರ್ತರು ಮಹಾ ಸಾಹಸಿಗಳೆಂದು ತೋರುತ್ತದೆ. ಅವರು ಮಂಗಳೂರು ಪ್ರಾಂತದಲ್ಲಿ ನೆಲಸಿ ಅನೇಕ ಕೈಗಾರಿಕೆ ಕಾರ್ಖಾನೆಗಳನ್ನು ಪ್ರಾರಂಭಮಾಡಿದರು. ಮುದ್ರಣಾಲಯದ ಜೊತೆಗೆ ಅವರು ಪ್ರಾರಂಭಮಾಡಿಸಿದ ಇನ್ನೊಂದು ಕಸಬು ಮನೆಯ ಚಾವಣಿಗೆ ಹಾಸುವ ಹೆಂಚಿನ ತಯಾರಿಕೆ. ಇದನ್ನು ಈಗಲೂ 'ಮಂಗಳೂರು ಹೆಂಚು' ಎಂದು ಕರೆಯುವುದು ವಾಡಿಕೆ.

ಮಂಗಳೂರಿನಲ್ಲಿ ಬೇಸಲ್ ಮಿಷನ್ನಿನವರು ಸ್ಥಾಪಿಸಿದ ಅಚ್ಚಿನ ಕಾರ್ಖಾನೆ ದೊಡ್ಡದ್ದು. ಮತ್ತು ದೊಡ್ಡ ದೊಡ್ಡ ಕೆಲಸಗಳನ್ನು ಮಾಡಿ ಪ್ರಸಿದ್ಧವಾದದ್ದು.

ಕನ್ನಡದ ಅಕ್ಷರದ ಮೊಳೆಗಳನ್ನು ಮೊದಲು ತಯಾರಿಸಿದವರು ಅವರು ಎಂದು ನಾನು ಕೇಳಿದ್ದೇನೆ. ಅವರು ಈ ಅಚ್ಚಕ್ಷರದ ಕೆಲಸವನ್ನು ಮೊದಲು ಮಾಡಿದರೆಂಬುದೊಂದೇ ಅವರ ವಿಶೇಷವಲ್ಲ. ಅಕ್ಷರದ ರೂಪ ಗಾತ್ರಗಳಲ್ಲಿ ನಾನಾ ವಿಧಗಳನ್ನು ತಯಾರುಮಾಡಿದರು. ಅಕ್ಷರಗಳು ಕಣ್ಣಿಗೆ ಅಂದವಾಗಿ ಸ್ಫುಟವಾಗಿ ನಯವಾಗಿ ಕಾಣಿಸುತ್ತವೆ. ಈಗ್ಗೆ ಎಷ್ಟೋ ವರ್ಷಗಳ ಹಿಂದೆ ಅಚ್ಚಾದ ಕಿಟ್ಟೆಲ್ ನಿಘಂಟುವನ್ನು ನೋಡಿದರೆ ಈ ಮಾತು ನಿದರ್ಶನಕ್ಕೆ ಬರುತ್ತದೆ.

ಹರಿರಾಮ ಮಿಸ್ಸರ್

ನಾನು ನೋಡಿರುವ ಒಂದು ಸಂಗತಿಯನ್ನು ಹೇಳಿದರೆ ಈ ಕಾಲದ ಜನಕ್ಕೆ ಅದು ಸೋಜಿಗವಾದೀತೋ ಏನೋ. ೧೯೦೭ರಲ್ಲಿ ಬೆಂಗಳೂರು ಸಿಟಿ ಮಾರ್ಕೆಟ್ಟಿನ ವಾಯುವ್ಯ ದಿಕ್ಕಿನಲ್ಲಿ ಆ ಮಾರ್ಕೆಟ್ಟಿನ ಭಾಗವಾಗಿದ್ದ ಒಂದು ಕಟ್ಟಡದಲ್ಲಿ ಹರಿರಾಮ ಮಿಸ್ಸರ್ (=ಮಿಶ್ರ)ಎಂಬವರ ಅಚ್ಚಿನ ಕಾರ್ಖಾನೆ ಇತ್ತು. ವೊಕ್ಕಲಿಗರ ಸಂಘದ ಸಂಸ್ಥಾಪನೆಗೆ ಸಂಬಂಧಪಟ್ಟಿದ್ದ ಪ್ರಕಟನೆಗಳು, ಜಾಹಿರಾತುಗಳು, ನೋಟೀಸು ವಗೈರೆ ಎಲ್ಲ ಅಚ್ಚಿನ ಕೆಲಸವೂ ಆ ಮಿಸ್ಸರ್ ಅವರ ಕಾರ್ಖಾನೆಯಲ್ಲಿ ನಡೆಯುತ್ತಿತ್ತು. ಅಲ್ಲಿ ಕನ್ನಡ, ತೆಲಗು, ಬಾಲಬಂಧು, ಇಂಗ್ಲಿಷ್-ಈ ನಾಲ್ಕು ಲಿಪಿಗಳಲ್ಲಿಯೂ ಕೆಲಸ ನಡೆಯುತ್ತಿತ್ತು. ಸಣ್ಣ ಗಾತ್ರದ ಅಚ್ಚಿನ ಮೊಳೆಗಳು ಈ ನಾಲ್ಕು ಲಿಪಿಗಳಲ್ಲೂ ಇದ್ದವು. ಅವುಗಳಲ್ಲಿ ಕನ್ನಡದ ಮಾತನ್ನು ನಾನು ಹೇಳುತ್ತೇನೆ. ಇಂಗ್ಲಿಷಿನಲ್ಲಿ ಯಾವ ಗಾತ್ರದ ಅಚ್ಚಿನ ಮೊಳೆಯನ್ನು ರುಬಿ ಟೈಪ್ (Ruby type) ಎಂದು ಕರೆಯುತ್ತಾರೋ ಆ ಅತಿ ಸಣ್ಣ ಗಾತ್ರದ ಅಚ್ಚಿನ ಮೊಳೆ ಮಿಸ್ಸರ್ ಅವರಲ್ಲಿತ್ತು. ನಾನು ಒಂದು ಸಾರಿ ಎಣಿಸಿನೋಡಿದೆ, ಆ ಕಾಲದ ಒಂದು ಕಾರ್ಡಿನಲ್ಲಿ ಎಷ್ಟು ಪಂಕ್ತಿಗಳು ಹಿಡಿಸುತ್ತವೆಂದು. ನನ್ನ ಜ್ಞಾಪಕ ಸುಮಾರು ಐವತ್ತಾರು ಪಂಕ್ತಿ ಹಿಡಿಸಿತೆಂದು. ಅದು ಓದುವುದೇನೋ ಕಷ್ಟ. ಆದರೆ ಕೆಲವು ವಿಶೇಷ ಕಾರ್ಯಗಳಿಗೆ ಅಂಥ ಸಣ್ಣ ಮೊಳೆ ಆವಶ್ಯಕ.

ಅಲ್ಲಿಂದ ನಾಲ್ಕೈದು ವರ್ಷ ಕಳೆದಮೇಲೆ ನಾವು-ಎಂದರೆ "ಮೈಸೂರು ಸ್ಟ್ಯಾಂಡರ್ಡ್" ಶ್ರೀನಿವಾಸಯ್ಯಂಗಾರ್ ಮೊದಲಾದವರು-ಒಂದು ಇಂಗ್ಲಿಷ್-ಕನ್ನಡ ನಿಘಂಟುವಿನ ಯೋಚನೆ ಮಾಡಿದೆವು. ನಿಘಂಟುವಿಗೆ ತಕ್ಕದ್ದು ರುಬಿ ಟೈಪ್. ಆಗ ನಾನು ಹುಡುಕಿದೆ. ಮಿಸ್ಸರ್ ಅವರ ಮುದ್ರಣಾಲಯ ಆ ವೇಳೆಗೆ ಮುಚ್ಚಿಹೋಗಿತ್ತು. ಆದದ್ದರಿಂದ ನಾವು ಬೇರೆ ಟೈಪ್ ಮಾಡಿಸಬೇಕೆಂಬ ಹುಚ್ಚು ಆಲೋಚನೆಯಿಂದ ನಾನು ಮದರಾಸಿಗೆ ಹೋಗಿ ಅಲ್ಲಿ ಆರೆಂಟು ತಿಂಗಳು ಹೆಣಗಾಡಿದೆ. ಇದು ಬೇರೆ ಕಥೆ.

ಮಿಶ್ರ ಅವರ ಪ್ರಸ್ತಾವ ಬಂದಾಗ ಇನ್ನೊಂದು ಮಾತು ಹೇಳಬೇಕೆನಿಸುತ್ತದೆ. ಮಿಶ್ರ ಅವರು ಉತ್ತರ ಪ್ರದೇಶದ ಬ್ರಾಹ್ಮಣರು. ವಿದ್ಯಾವಿನಯಸಂಪನ್ನರು. ನಾನು ಅವರನ್ನು ನೋಡಿದ ಜ್ಞಾಪಕ ಚೆನ್ನಾಗಿದೆ. ಅವರು ಒಳ್ಳೆಯ ಕನ್ನಡ ಮಾತನಾಡುತ್ತಿದ್ದರು. ಅವರ ನಂತರ ಅವರ ಮಕ್ಕಳು ಕೆಲವು ಕಾಲ ಅವರ ಅಚ್ಚಿನ ಕಾರ್ಖಾನೆಯನ್ನು ನಡಸಿದರು. ಇವರು ಕೆಲಕಾಲ ಮುನಿಸಿಪಲ್ ಕೌನ್ಸಿಲರ್ ಆಗಿದ್ದರೆಂದು ನನ್ನ ಜ್ಞಾಪಕ.

ಮಿಶ್ರ ಅವರ ಕಾರ್ಖಾನೆಯಲ್ಲಿ ಅಚ್ಚಾಗಿ ಪ್ರಕಟವಾದ ಗ್ರಂಥಗಳಲ್ಲಿ ಅತಿ ಮುಖ್ಯವಾದದ್ದು ಪರಾಶರ ಮಾಧವೀಯದ ಕನ್ನಡ ಅನುವಾದ. ಇದು ದೊಡ್ಡ ಗಾತ್ರವುಳ್ಳ ಗ್ರಂಥ. ಇದನ್ನು ಕನ್ನಡದಲ್ಲಿ ಬರೆದವರು ಚಿಂಚೋಳಿ ವೆಂಕಣ್ಣಾಚಾರ್ಯರೆಂದು ನನ್ನ ಜ್ಞಾಪಕ. ಪ್ರಕಟನೆಯ ವರ್ಷ ಸುಮಾರು ೧೮೮೨-೮೩.

ಮಿಶ್ರ ಅವರ ಪ್ರೆಸ್ಸಿನ ಅಕ್ಷರಗಳು ಬೇಸಲ್ ಮಿಷನ್ನಿನವರು ತಯಾರುಮಾಡಿದ್ದು.

***

ಕ್ರಿಶ್ಚಿಯನ್ ಮಿಷನ್ನಿನವರು ಕನ್ನಡದಲ್ಲಿ ಕೆಲಸ ಮಾಡಿದ್ದು ಕನ್ನಡದ ಮೇಲಣ ಅಭಿಮಾನದಿಂದಲೆ, ಅಥವಾ ಕ್ರೈಸ್ತಮತದ ಮೇಲಣ ಅಭಿಮಾನದಿಂದಲೆ? ಇದು ನನ್ನ ಮನಸ್ಸಿಗೆ ನಿರರ್ಥಕವಾದ ಪ್ರಶ್ನೆ ಎನ್ನಿಸುತ್ತದೆ. ನಿರರ್ಥಕವೂ ಹೌದು, ಅಸಂಗತವೂ ಹೌದು. ಅವರ ಮನಸ್ಸಿನಲ್ಲಿ ಎರಡು ಅಭಿಮಾನಗಳೂ ಬೆರೆತಿದ್ದವೆಂದೇ ಇಟ್ಟುಕೊಳ್ಳೋಣ. ಆದರೆ ಅವರು ಮಾಡಿದ ಕೆಲಸದಿಂದ ಪ್ರಯೋಜನ ಪಡೆದವರು ಯಾರೆಂಬ ವಿಷಯದಲ್ಲಿ ಎಳ್ಳಷ್ಟು ಸಂದೇಹಕ್ಕೂ ಅವಕಾಶವಿಲ್ಲ. ಅವರು ಅಚ್ಚಿನ ಮೊಳೆಗಳನ್ನು ಅಂದು ತಯಾರು ಮಾಡದಿದ್ದಿದ್ದರೆ ಕನ್ನಡ ಗ್ರಂಥಪ್ರಚಾರ ಎಷ್ಟೋಕಾಲ ಹಿಂದೆಬೀಳುತ್ತಿತ್ತು. ಅದರಿಂದ ನಷ್ಟವಾಗುತ್ತಿದ್ದದ್ದು ಕನ್ನಡಿಗರಿಗೆ ಎಂಬುದು ಸ್ಪಷ್ಟವಾಗಿದೆ.

ಬೇಸಲ್ ಮಿಷನ್ನಿನ ತರುವಾಯ ಬಂದದ್ದು ವೆಸ್ಲಿಯನ್ ಮಿಷನ್ ಪ್ರೆಸ್. ಈ ಪ್ರೆಸ್ಸಿನ ಅಕ್ಷರಗಳು ಸುಂದರವಾಗಿ ಜನಪ್ರಿಯವಾಗಿವೆ.

ಅಚ್ಚಿನ ಕಾರ್ಖಾನೆಯ ವಿಚಾರ ನಮಗೆ ಇಲ್ಲಿ ಪ್ರಾಸಂಗಿಕವಾಗಿ ಬಂದಿದೆ. ನಮ್ಮ ಇಲ್ಲಿಯ ಮುಖ್ಯ ವಿಷಯ ಸಾಹಿತ್ಯಕಾರ್ಯ. ಮುದ್ರಾಕ್ಷರಕಾರ್ಯ ಅದಕ್ಕೆ ಸಾಧನವಾದದ್ದು. ಆದರಿಂದ ಸಾಧ್ಯವಾದದ್ದು ಗ್ರಂಥ ಪ್ರಕಟನೆ.

ಕಿಟ್ಟೆಲ್
(೧೮೩೨-೧೯೦೩)

ಬೇಸಲ್ ಮಿಷನ್ ಪ್ರೆಸ್ಸಿನ ಪ್ರಕಟನೆಗಳಲ್ಲಿ ಅತ್ಯಂತ ಪ್ರಸಿದ್ಧವಾದದ್ದು ರೆವರೆಂಡ್ ಎಫ್. ಕಿಟ್ಟೆಲ್ ಅವರ ಕನ್ನಡ ಶಬ್ದಕೋಶ (೧೮೯೪). ಇದು ಈಗಲೂ ಪ್ರಮಾಣ ಗ್ರಂಥವಾಗಿದೆ. ಕನ್ನಡದ ಮಹಾಕಾವ್ಯಗಳ ಪ್ರೌಢಪ್ರಯೋಗಗಳ ಜೊತೆಗೆ ಗಾದೆಗಳನ್ನೂ ಸಾಮತಿಗಳನ್ನೂ ಉದಾಹರಣೆಯಾಗಿ ಕೊಟ್ಟು ಕನ್ನಡ ಶಬ್ದಸಂಪತ್ತಿನ ವಿವರಗಳನ್ನು ಈ ನಿಘಂಟು ದೊರಕಿಸಿದೆ. ಎಪ್ಪತ್ತೆಂಭತು ವರ್ಷಗಳ ಹಿಂದೆ ಇಂಥ ಮಹಾಗ್ರಂಥವನ್ನು ರಚಿಸಲು ಮನಸ್ಸುಮಾಡಿ ಅದಕ್ಕೆ ಬೇಕಾದ ಸಿದ್ಧತೆಯನ್ನು ಮಾಡಿಕೊಂಡು ಇಷ್ಟು ಸೊಗಸಾಗಿ ಪ್ರಮಾಣಭೂತವಾಗುವಂತೆ ಗ್ರಂಥರಚನೆ ಮಾಡಿದ ಕಿಟ್ಟೆಲ್ ಮಹಾಶಯರ ಭಾಷಾಭಿಮಾನವನ್ನೂ ವಿದ್ವತ್ತನ್ನೂ ವಿಚಕ್ಷಣೆಯನ್ನೂ ಎಷ್ಟು ಕೊಂಡಾಡಿದರೂ ಅದು ಸ್ವಲ್ಪವೇ ಆದೀತು.

ಕಿಟ್ಟೆಲ್ ಅವರು ಇತರ ಸಾಹಿತ್ಯಕಾರ್ಯವನ್ನೂ ಮಾಡಿದ್ದಾರೆ. ಅನೇಕ ಪ್ರಾಚೀನ ಕನ್ನಡ ಗ್ರಂಥಗಳನ್ನು ಅಚ್ಚಿಗೆ ಸಿದ್ಧಪಡಿಸಿ ಸಂಪಾದನೆ ಮಾಡಿದ ಕೀರ್ತಿ ಅವರದಾಗಿದೆ. ಪ್ರೊ॥ ಎ.ಆರ್.ಕೃಷ್ಣಶಾಸ್ತ್ರಿಗಳವರು ಬಹು ಉತ್ಸಾಹದಿಂದ ಕಿಟ್ಟೆಲ್ ಅವರನ್ನು ಕುರಿತು ಒಂದು ಪ್ರಬಂಧ ಬರೆದಿದ್ದಾರೆ. ಮತ್ತು ಕಿಟ್ಟೆಲ್ ಅವರ ಭಾವಚಿತ್ರವನ್ನು ಸಂಪಾದಿಸಿ ಅದನ್ನು ದೊಡ್ಡ ಆಕಾರದಲ್ಲಿ ಪ್ರತಿಮಾಡಿಸಿ ಅನಾವರಣ ಮಾಡಿಸಿದ್ದು ನನಗೆ ಚೆನ್ನಾಗಿ ಜ್ಞಾಪಕವಿದೆ. ಕಿಟ್ಟೆಲ್ ಅವರು ಸಂಪಾದಿಸಿದ ಸಾಹಿತ್ಯ ಗ್ರಂಥಗಳಲ್ಲಿ ಮುಖ್ಯವಾದವು ಕೇಶಿರಾಜನ 'ಶಬ್ದಮಣಿದರ್ಪಣ' ಮತ್ತು ನಾಗವರ್ಮನ 'ಛಂದೋಂಬುಧಿ'. ಇವುಗಳಲ್ಲಿ ವ್ಯಾಕರಣಗ್ರಂಥವಾದ 'ಶಬ್ದಮಣಿದರ್ಪಣ' ವು ಪುನರ್ಮುದ್ರಿತವಾಗಿದೆ. ಛಂದೋಂಬುಧಿ ಪುನರ್ಮುದ್ರಣವಾಗಿರುವಂತೆ ನನಗೆ ತಿಳಿದು ಬಂದಿಲ್ಲ.

ಕಿಟ್ಟೆಲ್ ಅವರು ಕನ್ನಡ ವ್ಯಾಕರಣಗ್ರಂಥವೊಂದನ್ನು ಬರೆದಿದ್ದಾರೆ; 'ಕರ್ಣಾಟಕ ಕಾವ್ಯಮಾಲೆ' ಎಂಬ ಕಾವ್ಯಸಂಕಲನವೊಂದನ್ನು ಸಂಪಾದಿಸಿ ಪ್ರಕಟಿಸಿದ್ದಾರೆ (ಮೂರನೆಯ ಆವೃತ್ತಿ, ೧೮೭೪).

ಜರ್ಮನಿಯ ಪ್ರಸಿದ್ಧ ಟ್ಯುಬಿನ್‌ಜೆನ್ ವಿಶ್ವವಿದ್ಯಾನಿಲಯವು ೧೮೯೬ರಲ್ಲಿ ರೆವೆರೆಂಡ್ ಕಿಟ್ಟೆಲ್ ಅವರಿಗೆ ಗೌರವಾರ್ಥ ಡಾಕ್ಟರೇಟ್ ಪ್ರಶಸ್ತಿಯನ್ನಿತ್ತು ಮೆಚ್ಚಿಕೆ ತೋರಿಸಿತು

ಗ್ಯಾರೆಟ್, ಜೈಗ್ಲರ್

ಜೆ.ಗ್ಯಾರೆಟ್ ಎಂಬಾತನೂ ದೊಡ್ಡ ಕೆಲಸ ಮಾಡಿದವನು. ಅವನು ಒಂದು ಇಂಗ್ಲಿಷ್-ಕನ್ನಡ ನಿಘಂಟುವನ್ನು ೧೮೬೮ಕ್ಕೆ ಮುಂಚೆಯೇ ಪ್ರಕಟಿಸಿದ್ದ. ಈತನು ಸಂಪಾದಿಸಿದ ಕನ್ನಡ ಗ್ರಂಥಗಳಲ್ಲಿ ಮುಖ್ಯವಾದವು ಶಬ್ದಮಣಿದರ್ಪಣ (೧೮೬೮), ಪಂಚತಂತ್ರದ ಕಥೆಗಳು, ವಾಗ್ವಿಧಾಯಿನಿ. ಈತನು ಹಿಂದೂ ದೇಶದ ಚರಿತ್ರೆಯೊಂದನ್ನೂ ಬರೆದಿರುವಂತೆ ನನ್ನ ಜ್ಞಾಪಕ.

ರೆವೆರೆಂಡ್ ಎಫ್. ಜೈಗ್ಲರ್ ಎಂಬಾತ ಇಂಗ್ಲಿಷ್-ಕನ್ನಡ ಶಬ್ದಕೋಶವನ್ನೂ (೧೮೭೬), ಕನ್ನಡ-ಇಂಗ್ಲಿಷ್ ಶಾಲಾ ನಿಘಂಟುವನ್ನೂ ರಚಿಸಿದ್ದಾನೆ. ಆತನ ಕನ್ನಡ ವ್ಯಾಕರಣಗ್ರಂಥವೂ (ಎರಡನೆಯ ಮುದ್ರಣ, ೧೮೬೨) ಮಾನ್ಯತೆ ಪಡೆದಿದೆ.

ಲೂಯಿ ರೈಸ್
(೧೮೩೭-೧೯೨೭)

ಬಿ.ಎಲ್.ರೈಸನ ಹೆಸರು ಪ್ರಖ್ಯಾತವಾದದ್ದು. ಈತನು ಮೈಸೂರು ಸಂಸ್ಥಾನದ ಶಾಸನಗಳನ್ನೆಲ್ಲ ಪರಿಶೋಧಿಸಿ ಪ್ರಕಟಿಸಿದವನು. ಆ ಶಾಸನ ಗ್ರಂಥಗಳು 'ಎಪಿಗ್ರಾಫಿಯ ಕರ್ನಾಟಿಕಾ' ಎಂದು ಪ್ರಸಿದ್ಧವಾದವು: ಹನ್ನೆರಡು ಬೃಹತ್ಸಂಪುಟಗಳು. ಈ ಶಾಸನ ಸಂಗ್ರಹಕಾರ್ಯದಲ್ಲಿ ರೈಸ್ ಸಾಹೇಬರು ಮೈಸೂರು ರಾಜ್ಯದ ಹಳ್ಳಿಹಳ್ಳಿಯನ್ನೂ ಸುತ್ತಿ ನೋಡಿದರಂತೆ. ಈ ಕೆಲಸದಲ್ಲಿ ಅವರಿಗೆ ಸಹಾಯವಾಗಿದ್ದವರು ಆರ್.ನರಸಿಂಹಾಚಾರ್ಯರು. ಆಚಾರ್ಯರಿಗೆ ಹಿಂದೆ ದಕ್ಷಿಣಾಮೂರ್ತಿಶಾಸ್ತ್ರಿಗಳೆಂಬವರೋ ಬೇರೊಬ್ಬರೋ ಶಾಸನದ ಇಲಾಖೆಯ ಪಂಡಿತರಾಗಿದ್ದರು. ರೈಸ್ ಅವರು ಮಾಡಿದ ಕೆಲಸ ಹಿಂದೂ ಪಂಡಿತರ ಸಹಾಯದಿಂದ ಆದದ್ದೇ. ಆದರೆ ನಮ್ಮ ಪಂಡಿತರು ಕೊಟ್ಟ ಸಹಾಯ ಕೇವಲ ಶಬ್ದಾರ್ಥಗಳ ಸಂಬಂಧದ್ದು. ರೈಸ್ ಅವರು ಪಾಂಡಿತ್ಯದಲ್ಲಿ ಕಡಿಮೆಯಾದವರಲ್ಲ.

ಕರ್ಣಾಟಕ ಭಾಷಾಭೂಷಣ (೧೮೮೪), ಶಬ್ದಾನುಶಾಸನ ಮೊದಲಾದ ಅನೇಕ ಶಾಸ್ತ್ರ ಗ್ರಂಥಗಳನ್ನು ರೈಸ್ ಅವರು ಪರಿಷ್ಕಾರಪಡಿಸಿ ಪ್ರಕಟಿಸಿದರು. ನೃಪತುಂಗನ ಕವಿರಾಜ ಮಾರ್ಗವನ್ನು ಮೊದಲು ಪ್ರಕಟಿಸಿದವರು ಅವರೇ. ಈ ಕಾರ್ಯದಲ್ಲಿ ಅವರಿಗೆ ಕೆ.ಬಿ.ಪಾಠಕ್ ಎಂಬುವರು ನೆರವಾಗಿದ್ದರು.

ರೈಸ್ ಅವರು ಮಾಡಿದ ಇನ್ನೊಂದು ಮಹೋಪಕಾರದ ಕೆಲಸ 'ಮೈಸೂರು ಗೆಜೆಟಿಯರ್' ಎಂಬ ಇಂಗ್ಲಿಷ್ ಗ್ರಂಥ. ಕನ್ನಡ ದೇಶದ ಚರಿತ್ರೆ, ಭೂವಿವರಣೆ, ಜನಸಂಖ್ಯೆ, ಜಾತಿಕುಲಗಳ ವಿವರಣೆಗಳು, ಮತಾಚಾರಗಳು, ಭಾಷೆ ಮತ್ತು ಸಾಹಿತ್ಯ-ಈ ನಾನಾ ಜನ ಜೀವನ ಶಾಖೆಗಳಲ್ಲಿ ರೈಸ್ ಅವರ ಗಮನಕ್ಕೆ ಬಾರದಿದ್ದ ಅಂಶ ಒಂದೂ ಇಲ್ಲ. ಮತ್ತು ಎಲ್ಲ ಅಂಶಗಳನ್ನೂ ಅವರು ವಿಶದವಾಗಿಯೂ ಪ್ರಮಾಣವತ್ತಾಗಿಯೂ ಹಾಗೆಯೇ ಸಂಗ್ರಹವಾಗಿಯೂ ಹೇಳಿದ್ದಾರೆ. ಅವರ ಇಂಗ್ಲಿಷ್ ಶೈಲಿ ಸುಂದರವಾದದ್ದು.

ರೈಸ್ ಅವರು 'ಪ್ರಾಕ್ಕಾವ್ಯಮಾಲಿಕೆ' ಎಂಬ ಕನ್ನಡ ಕಾವ್ಯ ಸಂಕಲನವನ್ನೂ ಪ್ರಕಾಶ ಪಡಿಸಿದರು. ಅದು ಈಗಿಗೂ ಅಮೂಲ್ಯವಾದ ಗ್ರಂಥ. ಆದರೆ ಅದರ ಪ್ರತಿಗಳು ದುರ್ಲಭವಾಗಿವೆ. ಬಹುಶಃ ಈ ಪ್ರಾಕ್ಕಾವ್ಯಮಾಲಿಕೆಯನ್ನು ಮಾದರಿಯಾಗಿರಿಸಿಕೊಂಡೇ ಎಸ್.ಜಿ.ನರಸಿಂಹಾಚಾರ್ಯರು ಪದ್ಯಸಾರವನ್ನು ರಚಿಸಿರಬೇಕೆಂದು ನನಗೆ ತೋರುತ್ತದೆ.

ಪ್ರಾಕ್ಕಾವ್ಯಮಾಲಿಕೆಯಲ್ಲಿ ಕನ್ನಡ ಕಾವ್ಯದ ನಾನಾ ಪದರಗಳ ಮಾದರಿಗಳನ್ನು ಕಾಣಬಹುದು. ನೀತಿಪದ್ಯಗಳು, ವರ್ಣನೆ, ಕಥಾಭಾಗ; ದ್ವಿಪದಿ, ತ್ರಿಪದಿ, ಚೌಪದಿ, ಷಟ್ಪದಿ, ದಾಸರ ಪದಗಳು, ಕಂದಪದ್ಯ, ವೃತ್ತಗಳು-ಈ ನಾನಾ ವಿಧದ ಸಾಹಿತ್ಯದಿಂದಲೂ ಮಾದರಿಗಳನ್ನು ಆರಿಸಿಕೊಟ್ಟಿದ್ದಾರೆ.

ಇಲ್ಲಿ ಇನ್ನೊಂದು ವಿಶೇಷವೇನೆಂದರೆ ಗ್ರಂಥದ ಕಡೆಯ ಭಾಗದಲ್ಲಿ ಕ್ರೈಸ್ತ ಮಿಷನರಿಗಳ ಕವನದ ಮಾದರಿಗಳನ್ನು ಕೊಟ್ಟಿದ್ದಾರೆ. ಅವು ಒಂದು ವಿಶೇಷ ನಮೂನೆಯವು;

ಏಳಿರೀ, ಕೇಳಿರೀ
ಸ್ತೋತ್ರಕ್ಕೇ, ಪಾತ್ರಕ್ಕೇ

-ಹೀಗೆ. ಇದನ್ನು ಆಂಗ್ಲೀಕೃತ ಕನ್ನಡವೆನ್ನಬಹುದು. ಇದನ್ನು ನೋಡಿ ಯಾರೂ ನಗತಕ್ಕದ್ದಲ್ಲ. ಹುಟ್ಟು ಕನ್ನಡಿಗರಲ್ಲದವರು ಇಂಗ್ಲಿಷ್ ದೇವತಾ ಸ್ತೋತ್ರಗಳಲ್ಲಿರುವ ಭಾವಗಳನ್ನು ಕನ್ನಡಕ್ಕೆ ತರಬೇಕೆಂಬ ಪ್ರಯತ್ನ ಅದು. ಕನ್ನಡದ ಸಂಪ್ರದಾಯ ಮರ್ಯಾದೆಗಳಿಗೆ ಅದು ಹೊಂದಿಕೊಳ್ಳದಿದ್ದರೂ, ಒಂದು ಒಳ್ಳೆಯ ಪ್ರಯತ್ನವೆಂದು ಅದನ್ನು ಭಾವಿಸಿ ಗೌರವಿಸಬಹುದು.

ಒಂದು ಪ್ರಸಂಗ

ಈ ಸಂದರ್ಭದಲ್ಲಿ ಆರ್.ನರಸಿಂಹಾಚಾರ್ಯರು ಹೇಳುತ್ತಿದ್ದ ಒಂದು ಕಥೆ ಜ್ಞಾಪಕಕ್ಕೆ ಬರುತ್ತದೆ. ಕ್ರೈಸ್ತ ಮಿಶನರಿಗಳು ಇಂಗ್ಲಿಷ್ ಬೈಬಲನ್ನು ಕನ್ನಡಕ್ಕೆ ಭಾಷಾಂತರ ಮಾಡಿದ್ದರಷ್ಟೆ. ಅದನ್ನು ಪುನಃಪರಿಷ್ಕಾರಮಾಡಬೇಕೆಂದು ಅವರು ಆಲೋಚಿಸಿ ಅದಕ್ಕಾಗಿ ಒಂದು ಸಣ್ಣ ಸಮಿತಿಯನ್ನು ನಿಯಮಿಸಿದರು. ಆ ಸಮಿತಿಯಲ್ಲಿ ರೆ ॥ ಸಾಡೆ, ರೆ ॥ ಗಲಿಫರ್ಡ್ ಮೊದಲಾದ ಐರೋಪ್ಯರು ಐದು ಮಂದಿ ಇದ್ದರಂತೆ. ಹಿಂದೂವಿದ್ವಾಂಸರು ಇಬ್ಬರು: ಕರಿಬಸವಶಾಸ್ತ್ರಿಗಳು, ಅಯ್ಯಶಾಸ್ತ್ರಿಗಳು. ಈ ಸಮಿತಿಯು ನೀಲಗಿರಿಯಲ್ಲೋ ನಂದಿಯಲ್ಲೋ ಸಭೆ ಸೇರಿ ಕೆಲಸಮಾಡುತ್ತಿತ್ತು. ಇದಕ್ಕಾಗಿ ಸದಸ್ಯರಿಗೆ ತಗಲುವ ಪ್ರಯಾಣದ ವೆಚ್ಚ, ಭತ್ಯ ಕೊಡುವ ಏರ್ಪಾಟಿತ್ತು. ಇಂಥ ಸಭೆಯೊಂದು ಸೇರಿ ಹಿಂತಿರುಗಿದ ಬಳಿಕ ಒಂದು ಸಲ ನರಸಿಂಹಾಚಾರ್ಯರು ಕರಿಬಸವಶಾಸ್ತ್ರಿಗಳವರನ್ನು ವಿಚಾರಿಸಿದರಂತೆ:

ನ: “ಕೆಲಸ ಹೇಗೆ ನಡೆಯುತ್ತಿದೆ?”

ಕ: “ಬಿಳಿಯ ಜನಕ್ಕೂ ನಮಗೂ ಆಗಾಗ ತಕರಾರು ಬರುತ್ತದೆ. ಇಂಗ್ಲಿಷಿನ ಯಾವುದೋ ವಾಕ್ಯವನ್ನು ಅವರು ‘ಅವನು ಬುದ್ಧಿಯನ್ನು ಹೊಂದಿದ್ದಾನೆ’ -ಎಂಬೀ ರೀತಿಯಾಗಿ ತರ್ಜುಮೆ ಮಾಡಿದ್ದರು. ನಾವು ‘ಇದು ಕನ್ನಡದ ಪದ್ಧತಿಯಲ್ಲ’ ಎಂದು ಹೇಳಿದರೆ ಸಮಿತಿಯ ಅಧ್ಯಕ್ಷರು ‘ಹಾಗಾದರೆ ಕೈಯೆತ್ತಿ’ ಎನ್ನುವರು. ಬಿಳಿಯವರು ಕೈಯೆತ್ತಿದರು; ನಮ್ಮದು ಕಾಲೆತ್ತಿತು ಇದು ಸ್ವಾಮಿ ಸಭಾಕಾರ್ಯ.”

೨

ಬಸವಪ್ಪಶಾಸ್ತ್ರಿಗಳು

ಮೈಸೂರಿನಲ್ಲಿ ಎಂ. ವೆಂಕಟಕೃಷ್ಣಯ್ಯನವರು, ಎಂ.ಎಸ್. ಪುಟ್ಟಣ್ಣನವರು ಸಿ. ಸುಬ್ಬರಾಯರು ಮೊದಲಾದ ಭಾಷೋತ್ಸಾಹಿಗಳು 'ಹಿತಬೋಧಿನಿ' ಎಂಬ ಮಾಸಪತ್ರಿಕೆಯನ್ನು ಪ್ರಕಟಿಸಬೇಕೆಂದು ನಿಶ್ಚಯಿಸಿದರು. ಅದು ಸಾಹಿತ್ಯ, ವಿಜ್ಞಾನ, ಚರಿತ್ರೆ, ಸಮಾಜ ಶ್ರೇಯಸ್ಸು ಮೊದಲಾದ ಜನೋಪಯುಕ್ತ ವಿಷಯಗಳನ್ನು ಪರ್ಯಾಲೋಚಿಸತಕ್ಕದ್ದೆಂದು ನಿಶ್ಚಯ ಮಾಡಿಕೊಂಡರು. ಪತ್ರಿಕೆಯ ಆಕಾರ ಗಾತ್ರಗಳನ್ನು ನಿಶ್ಚಯಿಸಿ ಆದರ ಮುಖಪತ್ರದ ಮೇಲೆ ತಮ್ಮ ಉದ್ದೇಶವನ್ನು ಸೂಚಿಸುವಂತೆ ಒಂದು ಪದ್ಯವನ್ನು ಅಚ್ಚು ಮಾಡಬೇಕೆಂದು ತೀರ್ಮಾನಿಸಿದರು. ಆ ಪದ್ಯವನ್ನು ಎಲ್ಲಿಂದ ತರುವುದು? ಬಹುಮಂದಿಯನ್ನು ಬೇಡಿದರು. ಆ ವಿದ್ವಾಂಸರು ಪದ್ಯಗಳನ್ನು ಬರೆದುಕೊಟ್ಟರು. ಆ ಪದ್ಯಗಳು ಸರ್ವಾನುಮತದಿಂದ ಪುರಸ್ಕಾರ ಪಡೆಯಲಿಲ್ಲ. ಕೆಲಕೆಲವು ಮಂದಿ ಕೆಲವು ಕಾರಣಗಳಿಂದ ಒಪ್ಪಿದರು.

ಒಂದು ದಿನ ಅದಕ್ಕೆ ಸಂಬಂಧಪಟ್ಟವರೆಲ್ಲ ಸಭೆ ಸೇರಿದರು-ತೀರ್ಮಾನ ಮಾಡುವುದಕ್ಕೆಂದು. ಆಗ ಅಲ್ಲಿ ಸೇರಿದ್ದವರಲ್ಲಿ ಕವಿತ್ವದ ಅಭ್ಯಾಸವಿದ್ದವರೂ ಇದ್ದರು. ಎಲ್ಲರೂ ತಿಣುಕುತ್ತಿದ್ದರು.

ಬಸವಪ್ಪಶಾಸ್ತ್ರಿಗಳ ಕವಿತ್ವ

ಅಷ್ಟರಲ್ಲಿ ಸಭೆಗೆ ಆಹ್ವಾನಿತರಾಗಿದ್ದ ಬಸವಪ್ಪಶಾಸ್ತ್ರಿಗಳು ಬಂದರು. ಅಲ್ಲಿಯ ಪ್ರಮುಖರು ತಮಗೆ ಬಂದಿದ್ದ ಕಷ್ಟವನ್ನು ವಿವರಿಸಲಾಗಿ ಬಸವಪ್ಪ ಶಾಸ್ತ್ರಿಗಳವರು ನಸುನಕ್ಕು ತಮ್ಮ ಎಡ ಹೆಬ್ಬೆರಳ ಮೇಲೆ ಅಲ್ಲಿದ್ದ ಒಂದು ಲೇಖನಿಯಿಂದ ಏನೋ ಗುರುತುಮಾಡಿಕೊಂಡು “ನಾನು ಹೇಳುವುದನ್ನು ಬರೆದುಕೊಳ್ಳಿ, ಹೇಗಿರುತ್ತದೋ ನೋಡೋಣ” ಎಂದು ಹೀಗೆ ಹೇಳಿದರು:

ಅವಳ ಕೈವಿಡಿದಾ ರಾ- ।
ಜೀವಭವಂ ನಿಖಿಲಲೋಕನಿರ್ಮಾಣಕಲಾ- ॥
ಕೋವಿದನಾದನೊ ಆ ವಾ- ।
ಗ್ದೇವತೆ ಮೆಯ್ವೆತ್ತು ಮೆರೆಗೆ ಹಿತಬೋಧಿನಿಯೊಳ್ ॥

ಇದನ್ನು ಕೇಳಿದೊಡನೆಯೇ ಅಲ್ಲಿದ್ದ ಎಲ್ಲರ ಮುಖಗಳೂ ಪ್ರಸನ್ನವಾದವು. "ಕವಿತೆಯೆಂದರೆ ಇಂಥದಲ್ಲವೆ ಕವಿತೆ!" ಎಂದರು.

***

ಬಸವಪ್ಪಶಾಸ್ತ್ರಿಗಳು ಕನ್ನಡ ಸಂಸ್ಕೃತ ಭಾಷೆಗಳೆರಡರಲ್ಲಿಯೂ ಪ್ರಭುತ್ವ ಸಂಪಾದಿಸಿ ಕೊಂಡಿದ್ದವರು. 'ಶಾಕುಂತಲ', 'ಶೂರಸೇನಚರಿತ್ರೆ', 'ರತ್ನಾವಳಿ', 'ಉತ್ತರರಾಮಚರಿತೆ' ಮೊದಲಾದ ನಾಟಕಗಳನ್ನು ಕನ್ನಡಕ್ಕೆ ಅನುವಾದಿಸಿರುವುದು ಮಾತ್ರವಲ್ಲದೆ ಕನ್ನಡದಲ್ಲಿ 'ದಮಯಂತೀ ಸ್ವಯಂವರ' 'ಕೃಷ್ಣರಾಜಾಭ್ಯುದಯ' ಮೊದಲಾದ ಚಂಪೂ ಗ್ರಂಥಗಳನ್ನೂ 'ಸಾವಿತ್ರೀ ಚರಿತ್ರೆ' ಮೊದಲಾದ ಲಲಿತ ಸುಂದರ ಷಟ್ಪದೀ ಗ್ರಂಥಗಳನ್ನೂ ಬರೆದಿದ್ದಾರೆ; ಸಂಸ್ಕೃತದಲ್ಲಿ 'ಶಿವಭಕ್ತಿ ಸುಧಾತರಂಗಿಣಿ' 'ಸರಸ್ವತೀ ದಂಡಕ' 'ಅಷ್ಟಮೂರ್ತಿ ತನಯಾಷ್ಟಕ' ಮೊದಲಾದ ಹತ್ತಾರು ಸ್ತೋತ್ರಗಳನ್ನು ರಚಿಸಿದ್ದಾರೆ. ಶ್ರೀಚಾಮರಾಜ ಒಡೆಯರವರ ಕಾಲದಲ್ಲಿ ಪ್ರಕಟವಾದ 'ಬಾಲಿಕಾಗೀತ ಮುಕ್ತಾಕಲಾಪ' ದ ಹಲವಾರು ಹಾಡುಗಳು ಬಸವಪ್ಪಶಾಸ್ತ್ರಿಗಳು ರಚಿಸಿದ್ದು. ಪ್ರಸಿದ್ಧವಾಗಿದ್ದ 'ಕಾಯೌ ಶ್ರೀ ಗೌರಿ' ಇವರ ರಚನೆ.

ಸಂಸ್ಕೃತ ಕನ್ನಡ ಎರಡು ಭಾಷೆಗಳಲ್ಲಿಯೂ ಮಹಾವಿದ್ವಾಂಸರೆಂದು ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯರವರ ಕಾಲದಲ್ಲಿ ಪ್ರಸಿದ್ಧರಾಗಿದ್ದ ವಿದ್ವಾನ್ ಗರಲಪುರಿ ಶಾಸ್ತ್ರಿಗಳ ಶಿಷ್ಯರು ಬಸವಪ್ಪಶಾಸ್ತ್ರಿಗಳು. ಬಸವಪ್ಪಶಾಸ್ತ್ರಿಗಳ ಕನ್ನಡ ಶಿಷ್ಯರು ಅಯ್ಯಶಾಸ್ತ್ರಿಗಳು-ಗರಲಪುರಿ ಶಾಸ್ತ್ರಿಗಳ ಮಕ್ಕಳು.

***

ಬಸವಪ್ಪಶಾಸ್ತ್ರಿಗಳು ಒಳ್ಳೆಯ ರಸಿಕರು. ಒಳ್ಳೆಯ ಆಕಾರ, ತೇಜಸ್ಸು, ಮೃದು ಮಧುರವಾದ ಮಾತು-ಈ ಸಂಪತ್ತಿನಿಂದ, ನೋಡಿದವರೆಲ್ಲ ಅವರ ಸ್ನೇಹವನ್ನು ಬಯಸುವಂತಿತ್ತು. ಅವರಿಗೆ ಬಹುಮಂದಿ ಆಢ್ಯರೂ ಪ್ರಭಾವವಂತರೂ ಆದ ಸ್ನೇಹಿತರಿದ್ದರು. ಅವರಲ್ಲಿ ನೀಲಗಿರಿ ಪಾಪಣ್ಣನವರೆಂಬ ಸಾಹುಕಾರರು ಮುಖ್ಯರು. ಬೆಂಗಳೂರಿನಲ್ಲಿ ಪಾಪಣ್ಣನವರ ಮನೆ ಕೋಟೆಯಲ್ಲಿ, ಈಗ ಹೆರಿಗೆ ಆಸ್ಪತ್ರೆ ಇರುವ ಕಡೆ. ಪಾಪಣ್ಣನವರು ಸಂಗೀತ ಸಾಹಿತ್ಯಗಳಲ್ಲಿ ಅಭಿಮಾನಿಗಳೆಂದೂ ಉದಾರಿಗಳೆಂದೂ ನಾನು ಬಹುಕಡೆಯಿಂದ ಕೇಳಿದ್ದೇನೆ. ವೆಂಕಟಕೃಷ್ಣಯ್ಯನವರು ಈ ಸಂಗತಿಯನ್ನು ಹೆಚ್ಚಾಗಿ ಹೇಳುತ್ತಿದ್ದರು.

ರಾಚೋಟಿ ಶಾಸ್ತ್ರಿಗಳು

೧೯೧೨-೧೩ರಲ್ಲಿ ದಸರಾ ಸಮಯದಲ್ಲಿ ನಾನು ಮೈಸೂರಿಗೆ ಹೋಗಿದ್ದಾಗ ಒಂದು ದಿನ ಮಧ್ಯಾಹ್ನ ವೆಂಕಟಕೃಷ್ಣಯ್ಯನವರನ್ನು ಕಾಣಬೇಕೆಂದು ಅವರ ಮನೆಗೆ ಹೋದೆ. ಯಜಮಾನರು ಸ್ಕೂಲಿನಲ್ಲಿದ್ದಾರೆಂದು ಅಲ್ಲಿ ಹೇಳಿದರು. ನಾನು ಮರಿಮಲ್ಲಪ್ಪನವರ ಸ್ಕೂಲಿಗೆ ಹೋಗಿ ವಿಚಾರಿಸಲಾಗಿ "ಅವರು ಮಹಡಿಯ ಮೇಲಿದ್ದಾರೆ" ಎಂದರು. ಅಲ್ಲಿಗೆ ಹೇಳಿಕಳುಹಿಸಿದೆ. ನನ್ನನ್ನು ಅಲ್ಲಿಗೇ ಕರೆತರಬೇಕೆಂದು ಅವರ ಅಪ್ಪಣೆಯಾಯಿತು. ಅಲ್ಲಿಗೆ ಹೋದಾಗ ಅಲ್ಲಿ ಭಾರಿ ಸಭೆ ಸೇರಿತ್ತು. ಎಂ. ಶಾಮರಾಯರು, ಬಾಪು ಸುಬ್ಬರಾಯರು ಮೊದಲಾದವರೆಲ್ಲ ಅಲ್ಲಿದ್ದರು. ಅಲ್ಲಿಯ ಆಗಿನ ಆಕರ್ಷಣೆ ರಾಚೋಟಿ ಶಾಸ್ತ್ರಿಗಳೆಂಬವರ ಭಾರತವಾಚನ. ಕುಮಾರವ್ಯಾಸನ ನಿರ್ಮಿತಿಯ ಸೊಗಸನ್ನು ರಾಚೋಟಿ ಶಾಸ್ತ್ರಿಗಳವರು ಬಗೆಬಗೆಯ ರಾಗಗಳಿಂದ ಸಭಿಕರಿಗೆ ಅನುಭವ ಮಾಡಿಸುತ್ತಿದ್ದರು. ಅದೆಂಥ ಕಂಠ! ಅದೆಂಥ ಸೊಗಸಾದ ಆರೋಹಣ-ಅವರೋಹಣಕ್ರಮ! ಅದೆಂಥ ಉಚ್ಚಾರಣೆ! ಅದೆಂಥ ಮುಖಾಭಿನಯ ಹಸ್ತಾಭಿನಯಗಳು! ಅಲ್ಲಿದ್ದವರೆಲ್ಲ ಮುಗ್ಧರಾಗಿ ಕೇಳುತ್ತಿದ್ದರು. ಶಾಮರಾಯರು ನನ್ನ ಕಡೆಗೆ ತಿರುಗಿ ಕೇಳಿದರು:

ಶಾ: "ನೀವು ಹಿಂದೆ ಕೇಳಿರಲಿಲ್ಲವೆ ಈ ಓದಿಕೆಯನ್ನು?"

ನಾನು: "ಇಲ್ಲ. ಇವರು ಯಾರು?"

ಶಾ: "ಇವರು ಬಸವಪ್ಪಶಾಸ್ತ್ರಿಗಳ ಶಿಷ್ಯರು, ಗುರುಗಳ ದಾರಿಯಲ್ಲಿಯೇ ಇದ್ದಾರೆ." ಬಸವಪ್ಪಶಾಸ್ತ್ರಿಗಳು ತೀರಿಹೋಗಿ ಆ ವೇಳೆಗೆ ಎಷ್ಟೋ ವರ್ಷಗಳಾಗಿದ್ದವು. ವೆಂಕಟಕೃಷ್ಣಯ್ಯನವರು ಹೇಳಿದರು:

"ಬಸವಪ್ಪಶಾಸ್ತ್ರಿಗಳವರ ವಾಚನ ಕೇಳಿದ್ದಿದ್ದರೆ ನೀವು ಇನ್ನೆಷ್ಟು ಸಂತೋಷಪಡುತ್ತಿದ್ದಿರೊ!"

ನನಗೆ ಆ ಯೋಗವಿರಲಿಲ್ಲ.

ಅಲ್ಲಿಂದೀಚೆಗೆ ಬೆಂಗಳೂರಿಗೆ ಬಂದ ಮೇಲೆ ಒಂದು ದಿನ ಪುಟ್ಟಣ್ಣಶೆಟ್ಟರವರಲ್ಲಿ ಈ ಮೇಲಣ ಸಂಗತಿಯನ್ನು ಪ್ರಾಸ್ತಾವಿಕವಾಗಿ ಹೇಳಿದೆ. ಅವರೂ ವೆಂಕಟಕೃಷ್ಣಯ್ಯನವರಂತೆಯೇ ನುಡಿದರು.

ಬಸವಪ್ಪಶಾಸ್ತ್ರಿಗಳಿಗೆ ಕವಿತಾಪ್ರತಿಭೆಯಿದ್ದಂತೆ ಗಾನಕಲೆಯಲ್ಲಿಯೂ ಸೂಕ್ಷ್ಮವಾದ ರುಚಿಪರಾಮರ್ಶೆಯಿತ್ತೆಂದು ನಾನು ಬಹುಮಂದಿ ಹಿರಿಯರ ಬಾಯಿಂದ ಕೇಳಿದ್ದೇನೆ.

ಬಸವಪ್ಪಶಾಸ್ತ್ರಿಗಳು ಬೆಂಗಳೂರಿಗೆ ಬಂದಾಗ ಉತ್ತರೋತ್ತರ ಸೀನಿಯರ್ ಸರ್ಜನ್‌ರಾದ ಡಾ ॥ ಆರ್ಮುಗಂ ಮೊದಲಿಯಾರ್ ಅವರ ಮನೆಯಲ್ಲಿಯೂ ಅವರ ಅಣ್ಣಂದಿರಾದ ಕುಪ್ಪುಸ್ವಾಮಿ ಮೊದಲಿಯಾರವರ ಮನೆಯಲ್ಲಿಯೂ ಬಿಡಾರ ಮಾಡುತ್ತಿದ್ದರಂತೆ. ಭವಭೂತಿ ಕವಿಯ ಉತ್ತರರಾಮಚರಿತೆಯ ಕನ್ನಡ ಅನುವಾದ ಕುಪ್ಪುಸ್ವಾಮಿ ಮೊದಲಿಯಾರ್‌ರವರ ಮನೆಯಲ್ಲಿ ಬರೆದದ್ದೆಂದೂ ಅದರ ಹಸ್ತಪ್ರತಿಯ ಭಾಗಗಳು ಅವರ ಮನೆಯಲ್ಲಿ ಕೆಲಕಾಲ ಇದ್ದವೆಂದೂ ನಾನು ಕೇಳಿದ್ದೇನೆ. ಆರ್ಮುಗಂ ಮೊದಲಿಯಾರ್‌ರವರೂ ಕುಪ್ಪುಸ್ವಾಮಿ ಮೊದಲಿಯಾರ್‌ರವರೂ ಪಾರಮಾರ್ಥಿಕ ಪ್ರವೃತ್ತಿಯುಳ್ಳವರೆಂದು ನಾನು ಕಂಡಿದ್ದೇನೆ. ಅವರಿಬ್ಬರೂ ಉದಾರಿಗಳು. ಅದರಲ್ಲಿಯ ವಿಶೇಷಾಂಶವೇನೆಂದರೆ ಅವರ ದಾನಧರ್ಮಗಳು ಗೂಢವಾಗಿರುತ್ತಿದ್ದದ್ದು. ಅವರು ಮಾಡಿದ ಒಳ್ಳೆಯ ಕೆಲಸವನ್ನು ಮತ್ತೊಬ್ಬರಿಗೆ ಹೇಳುತ್ತಿರಲಿಲ್ಲ. ಯಾರಾದರೂ ಹೇಗೋ ಅದನ್ನು ತಿಳಿದುಕೊಂಡು ಅವರನ್ನು ಕೇಳಿದರೆ ನಕಲಿಮಾಡಿ ಹಾಸ್ಯದಲ್ಲಿ ಮುಗಿಸಿಬಿಡುತ್ತಿದ್ದರು.

***

ಬಸವಪ್ಪಶಾಸ್ತ್ರಿಗಳ ದಮಯಂತೀ ಸ್ವಯಂವರದಲ್ಲಿ ಬರುವ ಸರಸ್ವತೀ ದಂಡಕವನ್ನು ನಮ್ಮ ವಿದ್ಯಾರ್ಥಿಗಳಿಗೆ ಬಾಯಿಪಾಠ ಮಾಡಿಸಿದರೆ ಅವರ ಉಚ್ಚಾರಣೆ ಕಿವಿಯಿಂದ ಕೇಳುವಂತಾದೀತೆಂದು ನನಗನ್ನಿಸುತ್ತದೆ.

ನನ್ನ ಈಗಿನ ಕೊರತೆಗಳಲ್ಲಿ ಮುಖ್ಯವಾದ ಒಂದು ಬಸವಪ್ಪಶಾಸ್ತ್ರಿಗಳ ಗ್ರಂಥಗಳನ್ನು ಕೂಡ ಈಗಿನ ಸ್ಕೂಲು ಕಾಲೇಜುಗಳಲ್ಲಿ ಹೆಚ್ಚು ಪಾಠ ಮಾಡುತಿಲ್ಲವೆಂಬುದು.

೪

ಎಂ.ಎಲ್. ಶ್ರೀಕಂಠೇಶಗೌಡರು

ಆಧುನಿಕ ಕನ್ನಡ ಪುನರುಜ್ಜೀವನದ ಪ್ರಸ್ತಾವಾರಂಭದಲ್ಲಿ ಮೈಸೂರಿನ ಜಿ.ಟಿ.ಎ. ಎಂಬ ವಿಶ್ವವಿದ್ಯಾನಿಲಯ ಪದವೀಧರರ ಸಂಘವನ್ನು ಸ್ಮರಿಸಿದ್ದಾಗಿದೆ (ಅಧ್ಯಾಯ ೧). ಆ ಸಂಘದ ಮುಖ್ಯಸ್ಥರಲ್ಲಿ ಎಂ.ಎಲ್.ಶ್ರೀಕಂಠೇಶಗೌಡರು ಒಬ್ಬರು. ಇವರು ಬಿ.ಎ. ಬಿ.ಎಲ್.ಪ್ಯಾಸ್ ಮಾಡಿ ಕೆಲವು ದಿವಸಗಳ ಮೇಲೆ ಸರಕಾರದಲ್ಲಿ ಜುಡಿಷಿಯಲ್ ಇಲಾಖೆಯಲ್ಲಿ ಉದ್ಯೋಗ ಸಂಪಾದಿಸಿದರು.

ಇವರು ಕೆಲವು ವರ್ಷ ಮಧುಗಿರಿಯಲ್ಲಿ ಮುನ್ಸೀಫರಾಗಿದ್ದರು. ನಿವೃತ್ತರಾದ ಮೇಲೆ ಬಸವನಗುಡಿಯಲ್ಲಿ ಮಹಾರಾಷ್ಟ್ರ ಮಹಿಳಾ ವಿದ್ಯಾಲಯದ ಎದುರು ಪಕ್ಕದ ಮೂಲೆಯ ಮಹಡಿಯ ಮನೆಯಲ್ಲಿದ್ದರು. ಅದು ಅವರ ಸ್ವಂತ ಮನೆ.

ಅವರನ್ನು ಮುಖತಃ ಕಂಡು ಮಾತನಾಡಬೇಕೆಂದು ಒಬ್ಬ ಸ್ನೇಹಿತರಲ್ಲಿ ವಿಚಾರ ಮಾಡಿದೆ. ಆ ಸ್ನೇಹಿತರೂ ಗೌಡರಂತೆ ಒಕ್ಕಲಿಗ ಜನಾಂಗದವರು. ಅವರು ಗೌಡರು ಬಹಳ ಮುಂಗೋಪಿಗಳೆಂದೂ ಅವರು ಕಟುಭಾಷೆಯ ಅಭ್ಯಾಸವುಳ್ಳವರೆಂದೂ ಹೇಳಿ ನನ್ನನ್ನು ನಿರುತ್ಸಾಹಗೊಳಿಸಿದರು.

ಶ್ರೀಕಂಠೇಶಗೌಡರ ಬಗೆಗೆ ಅವರ ಗ್ರಂಥಗಳ ಕಾರಣದಿಂದ ನನ್ನಲ್ಲಿ ಗೌರವ ವಿಶ್ವಾಸಗಳು ಅಂಕುರಿಸಿದ್ದವು. ಅಷ್ಟು ಹಿಂದಿನ ಕಾಲದಲ್ಲಿಯೇ, ಎಂದರೆ ಎಪ್ಪತ್ತು ಎಂಭತ್ತು ವರ್ಷಗಳ ಹಿಂದೆಯೇ ಅವರು ಕನ್ನಡಕ್ಕಾಗಿ ಶ್ರದ್ಧೆ ಸಾಮರ್ಥ್ಯಗಳಿಂದ ಕೆಲಸ ಮಾಡಿದ್ದವರು. ನನಗೆ ತಿಳಿದಮಟ್ಟಿಗೆ ಒಕ್ಕಲಿಗ ಜನಾಂಗದಲ್ಲಿ ಪ್ರಸಿದ್ಧರಾದ ಶ್ರೀಕಂಠೇಶಗೌಡರೇ ಪ್ರಪ್ರಥಮರು.

ಅವರು ಇಂಗ್ಲಿಷಿನಿಂದ ಎರಡು ಷೇಕ್‌ಸ್ಪಿಯರ್ ನಾಟಕಗಳನ್ನು ಕನ್ನಡಕ್ಕೆ ಅನುವಾದ ಮಾಡಿದ್ದರು: ಒಂದು 'ರೋಮಿಯೊ ಅಂಡ್ ಜುಲಿಯೆಟ್' ಅಥವಾ 'ರಾಮವರ್ಮ-ಲೀಲಾವತಿ' ; ಇನ್ನೊಂದು 'ಮ್ಯಾಕ್ಬೆತ್' ಅಥವಾ 'ಪ್ರತಾಪರುದ್ರ.' ಈ ಎರಡರಲ್ಲಿ ಮೊದಲನೆಯದನ್ನು ನನ್ನ ಬಾಲ್ಯದಲ್ಲಿ ನೋಡಿದ್ದೆ. ಈಗ ಕೆಲ ವರ್ಷಗಳಿಂದ ಅದರ ಪ್ರತಿಗಾಗಿ ಹುಡುಕುತ್ತಿದ್ದೇನೆ. 'ಪ್ರತಾಪರುದ್ರ' ಗ್ರಂಥಕ್ಕಾಗಿ ಬಹುಕಾಲ ಹುಡುಕಾಡಿದೆ. ಕೆಲವು ವರ್ಷಗಳ ಕೆಳಗೆ ಮೈಸೂರಿನಲ್ಲಿದ್ದ ವೃದ್ಧನಾಟಕ ರಸಿಕರು ಆನಂದರಾಯರೆಂಬವರು ದಯಮಾಡಿ ಅವರಲ್ಲಿದ್ದ ಪ್ರತಿಯನ್ನು ನನಗೆ ಕೊಟ್ಟರು.

ಆನಂದರಾಯರಲ್ಲಿ ಹಳೆಯ ನಾಟಕಶಾಸ್ತ್ರದ ಸಾಹಿತ್ಯ ಬಹುವಾಗಿತ್ತು. ಸರ್ ಹೆನ್ರಿ ಅರ್ವಿಂಗ್ ಮೊದಲಾದ ಪ್ರಸಿದ್ಧ ನಟರ ಜೀವನಚರಿತ್ರೆ, ಅವರ ಪಾತ್ರಧಾರಣೆಯ ಚಿತ್ರಗಳು ಮೊದಲಾದದ್ದಲ್ಲದೆ ಹಳೆಯ ಕಾಲದ ತೋಫನ್ನುಗಳು (ತಲೆಗೂದಲ ಟೊಪ್ಪಿಗೆ), ಮೀಸೆಗಳು, ಗಡ್ಡಗಳು, ಕತ್ತಿ ಕಠಾರಿಗಳು-ಇಂಥ ಸಾಮಾನುಗಳ ಸಂಗ್ರಹವಿತ್ತು. ಆನಂದರಾಯರು ಒಂದು ಕರಾರು ಮಾಡಿದರು: "ನೀವು ನಮ್ಮ ಮನೆಗೆ ಬಂದರೆ ಅಲ್ಲಿ ನಾನು ಪುಸ್ತಕ ಕೊಡುತ್ತೇನೆ" -ಎಂದು. ಬಹು ಅಭಿಮಾನದಿಂದ ನನ್ನನ್ನು ಬರಮಾಡಿಕೊಂಡು ಕಾಫಿ ತಿಂಡಿ ಕೊಟ್ಟು ನಾಟಕದ ಸಾಮಾನುಗಳನ್ನು ತೋರಿಸಿ ಆಮೇಲೆ 'ಪ್ರತಾಪರುದ್ರ' ಪುಸ್ತಕವನ್ನು ನನ್ನ ಕೈಯಲ್ಲಿಟ್ಟರು.

ಅನುವಾದ ವಿಧಾನ

ಶ್ರೀಕಂಠೇಶಗೌಡರು ಅನುಸರಿಸಿದ್ದ ಅನುವಾದ ವಿಧಾನ ಆ ಕಾಲದಲ್ಲಿ ರೂಢಿಗೆ ಬಂದಿದ್ದದ್ದು; ಇಂಗ್ಲಿಷ್ ಹೆಸರುಗಳಿಗೆ ಪ್ರತಿಯಾಗಿ ಸಂಸ್ಕೃತದ ಅಥವಾ ಕನ್ನಡದ ಹೆಸರುಗಳನ್ನಿಡುವುದು. ಕಥಾಸನ್ನಿವೇಶಗಳನ್ನು ಕೊಂಚ ಕೊಂಚ ಮಾರ್ಪಡಿಸಿ ಅದು ನಮ್ಮ ದೇಶದ ವಸ್ತುವೆಂಬಂತೆ ತೋರಿಸುವುದು. ಸಂಭಾಷಣೆಯಲ್ಲಿ ವಚನವನ್ನೂ ನಡುನಡುವೆ ಪದ್ಯಗಳನ್ನೂ ಹಾಡುಗಳನ್ನೂ ಸೇರಿಸುವುದು. ಒಟ್ಟಿನಲ್ಲಿ ಆ ನಾಟಕವನ್ನು ನಮ್ಮ ಜನ ತಮ್ಮದೇ ಎಂದು ಭಾವಿಸಿಕೊಳ್ಳುವಂತೆ ವೇಷಭಾಷೆಗಳನ್ನು ಅಳವಡಿಸುವುದು. ಈ ಮೇಲ್ಪಂಕ್ತಿಯನ್ನು ನಾನೂ ಕೊಂಚಮಟ್ಟಿಗೆ ಅನುಸರಿಸಿದವನೇ. ಬಸವಪ್ಪಶಾಸ್ತ್ರಿಗಳೂ ಸಿ. ಸುಬ್ಬರಾಯರೂ ಸೇರಿ 'ಒಥೆಲೊ' ನಾಟಕವನ್ನು 'ಶೂರಸೇನಚರಿತ್ರೆ' ಎಂದು ಕನ್ನಡದಲ್ಲಿ ರಚಿಸಿರುವುದೂ ಇದೇ ವಿಧಾನದಲ್ಲಿ.

ಶ್ರೀಕಂಠೇಶಗೌಡರು ಜನರೂಢಿಯ ಭಾಷಾಶೈಲಿಯನ್ನು ಸ್ವಾಧೀನಪಡಿಸಿಕೊಂಡಿದ್ದರು. ಅವರ ಒಂದು ಹಾಡು ನೆನಪಿಗೆ ಬರುತ್ತದೆ;

> ಹಂಗೂ ಕೆಟ್ಟೆ ಹಿಂಗೂ ಕೆಟ್ಟೆ ರಂಗಧಾಮ ।
> ತಂಗಳಿಟ್ಟು ಹಳಸಿಹೋಯ್ತು ಪಂಗನಾಮ ॥

ಶ್ರೀಕಂಠೇಶಗೌಡರು ಒಂದು ಸ್ವತಂತ್ರ ಪದ್ಯಗ್ರಂಥವನ್ನು ರಚಿಸಿದ್ದರು. ಅದರ ಹೆಸರು 'ಚಾಮನೃಪ ಚಂದ್ರಪ್ರಭೆ.' ಅದು ಸಣ್ಣ ಪುಸ್ತಕ, ಪದ್ಯ ರೂಪದ್ದು. ಅದರಲ್ಲಿ ಸಂಸ್ಕೃತದ ವೃತ್ತಛಂದಸ್ಸಿನ ಪದ್ಯಗಳೂ ಕಂದಪದ್ಯಗಳೂ ಇದ್ದವು. ಅದರ ವಿಷಯ ಶ್ರೀ ಚಾಮರಾಜೇಂದ್ರ ಒಡೆಯರವರ ರಾಜ್ಯನಿರ್ವಾಹದ ವರ್ಣನೆ ಮತ್ತು ಅವರ ಔದಾರ್ಯ

ವಿದ್ಯೋತ್ಸಾಹಗಳ ಪ್ರಶಂಸೆ. ಪ್ರಭುಗಳು ಅಂಥ ಮಹಾಮಹಿಮರಾಗಿರುವಲ್ಲಿ ಆ ಮಹಿಮೆಯ ಸ್ಫೂರ್ತಿಯಿಂದ-

ಸೋಜಿಗವೆ ಪೇಳೆ ಕಬ್ಬವ ಗೌಡಂ?

"ಹಳ್ಳಿಯ ಗೌಡನಂಥವನು ಕೂಡ ಕಾವ್ಯರಚನೆ ಮಾಡುವುದರಲ್ಲಿ ಆಶ್ಚರ್ಯವೇನಿದೆ?" ಎಂದು ಹಾಡಿದ್ದರು. ಆ ಪುಸ್ತಕವೂ ಈಗ ಸಿಕ್ಕುವಂತಿಲ್ಲ. ನಾನು ಅದನ್ನು ಓದಿದಾಗ ಅದರ ಶೈಲಿಯಿಂದ ಮುಗ್ಧನಾದೆ. ಅದು ಅರುವತ್ತು ಅರುವತ್ತೈದು ವರ್ಷಗಳ ಹಿಂದೆ. ಒಳ್ಳೆಯ ಶೈಲಿ, ಒಳ್ಳೆಯ ಭಾವಗಳು.

ಶ್ರೀಕಂಠೇಶಗೌಡರ ಕೃತಿಗಳನ್ನು ಕುರಿತು ಆ ಕಾಲದ 'ವಿದ್ಯಾದಾಯಿನಿ' ಎಂಬ ಮಾಸ ಪತ್ರಿಕೆಯಲ್ಲಿ ಒಂದು ದೀರ್ಘವಾದ ವಿಮರ್ಶನೆ ಬಂದಿತು. ಅದನ್ನು ಬರೆದವರು 'ಭಾಷಾಭಿಮಾನಿ' ಎಂದು ಹೆಸರು ಹಾಕಿಕೊಂಡಿದ್ದರು. ಆ ವಿಮರ್ಶನೆ ಸ್ನೇಹದೃಷ್ಟಿಯದಾಗಿರಲಿಲ್ಲ.

"ಗೌಡರು 'ಹಂದಿಯು ಗುಟುರುಹಾಕಿತು' ಎಂದಿದ್ದಾರೆ. ಅದು ಹಾಗಾದರೆ ಗೂಳಿಮಾಡಿದ್ದೇನು?" ಇಂಥ ಒಂದೆರಡು ಅಸಾಮಂಜಸ್ಯಗಳನ್ನು ವಿಮರ್ಶಕರು ಎತ್ತಿತೋರಿಸಿದರು. ಕೆಲವು ಮೂಲಪದ್ಯಗಳ ಭಾಷಾಂತರೀಕರಣ ಸಾಧುವಾಗಿರಲಿಲ್ಲವೆಂದರು. ಅಂಥ ಭಾಷಾಂತರಕ್ಕಿಂತ-

ಸಮ್ಮರ್ ಸನ್ನಿನ ಅರ್ಲಿ ಪವರುಂ
ಯೂಸ್ಡ್ ಟು ಗಿಲ್ಡ್ ಮೆಟಿಲ್ಡೆಯ ಬವರುಂ

-ಹೀಗೆ ಏಕೆ ಮಾಡಬಾರದು?-ಎಂದು ಮೂದಲಿಸಿದರು. ಕಡೆಗೆ, ಪ್ರಶ್ನಾರ್ಥಕವಾದ "ಸೋಜಿಗವೆ ಪೇಳೆ ಕಬ್ಬವ ಗೌಡಂ?" ಎಂಬ ಗೌಡರ ಮಾತನ್ನು ಅವಧಾರಣಾರ್ಥಕ್ಕೆ ತಿರುಗಿಸಿ, ಸೋಜಿಗವೆ ಪೇಳೆ ಕಬ್ಬವ ಗೌಡಂ! ಅದು ಸೋಜಿಗವೇ ಆಯಿತು-ಎಂದು ಅಪಹಾಸ್ಯ ಮಾಡಿದರು.

ಇದು ಬಹು ಕಟುವಾದ ವಿಮರ್ಶನೆ. ಇದಕ್ಕೆ ಅದೇ 'ವಿದ್ಯಾದಾಯಿನಿ' ಪತ್ರಿಕೆಯಲ್ಲಿ ಮತ್ತೊಬ್ಬರು ಉತ್ತರ ಕೊಟ್ಟು ಆ ವಿಮರ್ಶಕನು ತನ್ನನ್ನು 'ಭಾಷಾಭಿಮಾನಿ' ಎಂದು ಕರೆದುಕೊಳ್ಳುವುದಕ್ಕಿಂತ 'ದೋಷಾಭಿಮಾನಿ' ಎಂದು ಕರೆದುಕೊಳ್ಳುವುದು ನ್ಯಾಯವೆಂದು ಹೇಳಿದರು.

ಅಲ್ಲಿಂದ ಅರ್ಧ ಶತಮಾನದಷ್ಟು ದೂರವಿರುವ ಈ ಕಾಲದಲ್ಲಿ ನಾವು ಆ ವಾದ ಪ್ರತಿವಾದಗಳನ್ನು ವಿನೋದಕ್ಕಾಗಿ ಓದಬಹುದು. ಆಗಿನವರ ಪ್ರಯತ್ನ ಕನ್ನಡಕ್ಕೆ ಒಂದು ಹೊಸ ಜಾತಿಯ ವಸ್ತುವನ್ನೂ ಒಂದು ಹೊಸ ಪರಿಪಾಟಿಯನ್ನೂ ತಂದುಕೊಡಬೇಕೆಂಬುದು. ಅದು ಹೊಸ ಪ್ರಯತ್ನ, ಅಪೂರ್ವವಾದ ಪ್ರಯತ್ನ, ಮೇಲ್ಪಂಕ್ತಿ ಇಲ್ಲದಿದ್ದ ಪ್ರಯತ್ನ. ಅಂಥ ಪ್ರಯತ್ನದಲ್ಲಿ ದೋಷಗಳೂ ನ್ಯೂನತೆಗಳೂ ಸ್ವಾಭಾವಿಕವಾಗಿ ಬಂದುಬಿಡುತ್ತವೆ. ಅವುಗಳನ್ನು ಲಕ್ಷ್ಯಕ್ಕೆ ತೆಗೆದುಕೊಳ್ಳುವುದು ಗುಣಗ್ರಹಣದ ದಾರಿಯಲ್ಲ. ಆ ದೋಷಗಳು ಸಣ್ಣವು. ಆ ಗುಣ ದೊಡ್ಡದು. ಈ ದೃಷ್ಟಿಯಿಂದ ನೋಡಿದರೆ ಶ್ರೀಕಂಠೇಶಗೌಡರ ಪ್ರಯತ್ನ ಸ್ತೋತ್ರಾರ್ಹವಾದದ್ದು.

೫

‘ಶ್ರೀಕೃಷ್ಣಸೂಕ್ತಿ’

ಕನ್ನಡ ಪುನರುಜ್ಜೀವನದ ಚರಿತ್ರೆಯನ್ನು ಕುರಿತು ಚಿಂತಿಸುವಾಗ ಅವಶ್ಯವಾಗಿ ಸ್ಮರಣೆಗೆ ಬರುವ ಒಂದು ಸಂಗತಿ ಉಡುಪಿಯ ‘ಶ್ರೀಕೃಷ್ಣಸೂಕ್ತಿ’ ಯ ಪ್ರಕಟನೆ. ‘ಶ್ರೀಕೃಷ್ಣಸೂಕ್ತಿ’ ಮಾಸಪತ್ರಿಕೆ. ಅದರ ಸಂಪಾದಕರು ಕೆರೋಡಿ ಸುಬ್ಬರಾವ್ ಮತ್ತು ರಾಜ ಗೋಪಾಲಕೃಷ್ಣರಾವ್. ಕೆರೋಡಿ ಸುಬ್ಬರಾಯರ ಪರಿಚಯ ನನಗಿಲ್ಲ. ಅವರನ್ನು ದೂರದಿಂದ ನೋಡಿದ್ದೇನೆ. ಅವರ ಸ್ನೇಹಿತರಲ್ಲಿ ಕೆಲ ಮಂದಿಯನ್ನು ನಾನು ನೋಡಿ ಮಾತನಾಡಿದ್ದೇನೆ. ಸುಬ್ಬರಾಯರು ಬೆಂಗಳೂರಿನ ಸೆಂಟ್ರಲ್ ಕಾಲೇಜಿನ ವಿದ್ಯಾರ್ಥಿಯಂತೆ. ಕೆಲವು ಕಾಲ ಅವರು ಮದರಾಸಿನಲ್ಲಿಯೂ ಇದ್ದವರು. ಅವರು ತರುಣರಾಗಿದ್ದಾಗ ರಚಿಸಿದ್ದ ಪ್ರಣಯಗೀತೆಗಳ ಪುಸ್ತಕವೊಂದನ್ನು ನೋಡಿದ್ದು ನನಗೆ ಜ್ಞಾಪಕವಿದೆ. ಆದರೆ ಆ ಗೀತೆಗಳನ್ನು ಯಾರಾದರೂ ಹಾಡಿದ್ದನ್ನು ನಾನು ಕೇಳಿಲ್ಲ. ಕೆರೋಡಿ ಸುಬ್ಬರಾಯರು ರಸಿಕರೆಂದೂ ಸ್ನೇಹಪರರೆಂದೂ ಭಾಷೋತ್ಸಾಹಿಗಳೆಂದೂ ನಾನು ಕೇಳಿದ್ದೇನೆ. ಅವರು ಸಾತ್ತ್ವಿಕರೆಂದೂ ಉದಾರಿಗಳೆಂದೂ ಕೇಳಿದ್ದೇನೆ.

ರಾಜಗೋಪಾಲಕೃಷ್ಣರಾಯರು ಸುಬ್ಬರಾಯರಿಗಿಂತ ಕಿರಿಯರು. ಇವರನ್ನು ನಾಲ್ಕಾರು ಸಾರಿ ಕಾಣುವ ಅವಕಾಶ ನನ್ನ ಪಾಲಿಗೆ ಬಂದಿತ್ತು. ಅವರು ಖಂಡಿತವಾದಿಗಳೆಂದು ಹೆಸರಾಗಿತ್ತು. ಅವರು ನೆಮ್ಮದಿವಂತರು. ‘ಶ್ರೀಕೃಷ್ಣಸೂಕ್ತಿ’ ಯ ಮುಖ್ಯ ಸಂಚಾಲಕರು ರಾಜಗೋಪಾಲಕೃಷ್ಣರಾಯರೆಂದು ನಾನು ಕೇಳಿದ್ದೇನೆ.

‘ಶ್ರೀಕೃಷ್ಣಸೂಕ್ತಿ’ ಪ್ರಕಟವಾಗುತ್ತಿದ್ದುದ್ದು ೧೯೦೯-೭೮ ಸುಮಾರಿನಲ್ಲಿ. ಅದು ಈಹೊತ್ತು ಪ್ರಕಟವಾಗುತ್ತಿದ್ದಿದ್ದರೂ ಮಾನ್ಯವಾಗಿರುತ್ತಿತ್ತು. ಸೊಗಸಾದ ನುಣುಪುಕಾಗದದ ಮೇಲೆ ಸೊಗಸಾದ ಮತ್ತು ಬಗೆಬಗೆಯ ಅಕ್ಷರಗಳಲ್ಲಿ ಮುದ್ರಿತವಾಗುತ್ತಿದ್ದ ಕನ್ನಡ ಮಾಸಪತ್ರಿಕೆಯೆಂದರೆ ‘ಶ್ರೀಕೃಷ್ಣಸೂಕ್ತಿ’. ನೋಟಕ್ಕೂ ಮುಟ್ಟಲಿಕ್ಕೂ ಅದರಷ್ಟು ಸುಂದರವಾದ ಕನ್ನಡ ಮಾಸಪತ್ರಿಕೆ ಈಹೊತ್ತು ಯಾವುದಾದರೂ ಇದ್ದಲ್ಲಿ ಅದು ನನಗೆ ತಿಳಿದದ್ದಲ್ಲ.

ವಿಷಯಗಳೂ ಹಾಗೆಯೇ. ಅದರಲ್ಲಿ ಬರುತ್ತಿದ್ದ ಸಂಪಾದಕೀಯ ಟಿಪ್ಪಣಿಗಳು ಗಂಡು ಧ್ವನಿಯುಳ್ಳವಾಗಿರುತ್ತಿದ್ದವು. ಭಾಷಾಶೈಲಿಯ ದೃಷ್ಟಿಯಿಂದ ಅವು ಪ್ರೌಢವಾಗಿ ಆದರೂ ಪೆಡಸಾಗದೆ, ಚಿತ್ತರಂಜಕವಾಗಿರುತ್ತಿದ್ದವು. ಆ ಪತ್ರಿಕೆಯಲ್ಲಿ ಬಂದ ಕೆಲವು ಪ್ರಬಂಧಗಳು

ನನ್ನ ಜ್ಞಾಪಕದಲ್ಲಿ ನಿಂತಿವೆ. ಮಾಸ್ತಿ ವೆಂಕಟೇಶ ಅಯ್ಯಂಗಾರ್ಯರು ನಂಜನಗೂಡಿನ ಸತೀಹಿತೈಷಿಣೀ ಗ್ರಂಥಮಾಲೆಯ ಸಂಪಾದಕಿ ತಿರುಮಲಮ್ಮನವರ ಕಾದಂಬರಿ (ನಾವೆಲ್ಲು)ಗಳನ್ನು ವಿಮರ್ಶಿಸಿ ಬರೆದ ವಿಸ್ತಾರವಾದ ಲೇಖನ ಬಂದದ್ದು 'ಶ್ರೀಕೃಷ್ಣ ಸೂಕ್ತಿ' ಯಲ್ಲಿ. ಅದರಲ್ಲಿ ಅವರು ಆ ಜಾತಿಯ ಸಾಹಿತ್ಯಲಕ್ಷಣಗಳನ್ನು ಕುರಿತು ತಿಳಿವಳಿಕೆ ಕೊಟ್ಟಿದ್ದರು. ಗುಡಿಬಂಡೆಯ ವಿದ್ವಾನ್ ಎ.ಕೇಶವಯ್ಯನವರು 'ಮತಮಂಜರಿ' ಎಂಬ ಧಾರಾವಾಹಿ ಲೇಖನದಲ್ಲಿ ನಮ್ಮ ದೇಶದಲ್ಲಿ ಅಷ್ಟಿಷ್ಟಾದರೂ ತಿಳಿದಿರುವ ಮತಮತಾಂತರಗಳಲ್ಲಿ ಪ್ರತಿಯೊಂದನ್ನೂ ಒಂದೆರಡು ಪುಟಗಳಲ್ಲಿ ಸಂಗ್ರಹಮಾಡಿ ತಿಳಿಸಿದ್ದಾರೆ. ಅದು ನನಗೆ ಮೆಚ್ಚಿಕೆಯಾದ ಲೇಖನ. ಕೇಶವಯ್ಯನವರು ಸತ್ಪುರುಷರು. ಅವರು 'ಮತ ಮಂಜರಿ' ಪ್ರಬಂಧವನ್ನು ಒಂದಾನೊಂದು ತೆಲುಗು ಗ್ರಂಥದಿಂದಲೋ ಬೇರೆ ಯಾವುದೋ ಭಾಷೆಯ ಗ್ರಂಥದಿಂದಲೋ ಕನ್ನಡಕ್ಕೆ ಅನುವಾದ ಮಾಡಿದರೆಂದು ನನ್ನ ಜ್ಞಾಪಕ. ಅನೇಕ ಪದ್ಯ ಪ್ರಬಂಧಗಳೂ 'ಶ್ರೀಕೃಷ್ಣಸೂಕ್ತಿ' ಯಲ್ಲಿ ಬರುತ್ತಿದ್ದವು.

ಕೇಶವಯ್ಯನವರು 'ಭರ್ತೃಹರಿನಿರ್ವೇದಂ' ಎಂಬ ಸಂಸ್ಕೃತ ನಾಟಕವನ್ನೂ ಕನ್ನಡಕ್ಕೆ ಭಾಷಾಂತರಿಸಿದ್ದರು.

ಒಟ್ಟಿನ ಮೇಲೆ ಆ ಮಾಸಪತ್ರಿಕೆ ದಕ್ಷಿಣ ಕನ್ನಡ ಪ್ರಾಂತದ ಭಾಷಾಭಿಮಾನಕ್ಕೆ ಹೆಗ್ಗುರುತಾಗಿತ್ತೆಂದು ಹೇಳಬಹುದು. ಅದು ಸಮಸ್ತ ಕರ್ಣಾಟಕಕ್ಕೂ ಪ್ರಿಯವಾಗಿ ಯಶಸ್ಕಾರಕವಾಗಿದ್ದ ಪತ್ರಿಕೆ. ಅದನ್ನು ಉಳಿಸಿಕೊಳ್ಳುವ ಚೈತನ್ಯ ಕನ್ನಡ ಜನಕ್ಕೆ ಇಲ್ಲದೆ ಹೋಯಿತೆಂಬ ವಿಷಾದ ನನ್ನ ಮನಸ್ಸಿನಿಂದ ಇಂದೂ ಅಳಿಸಿಹೋಗಿಲ್ಲ.

೬

ಎಸ್.ಜಿ. ನರಸಿಂಹಾಚಾರ್ಯರು [1]

ನನಗೆ ತಿಳಿದಿರುವ ಹಳೆಯ ಕಾಲದ ಕನ್ನಡ ಸಾಹಿತ್ಯ ಪಂಡಿತರಲ್ಲಿ ಉದ್ದಾಮರಾದವರು ಎಸ್.ಜಿ. ನರಸಿಂಹಾಚಾರ್ಯರು, ಆರ್. ನರಸಿಂಹಾಚಾರ್ಯರು, ಎಂ.ಎ. ರಾಮಾನುಜಯ್ಯಂಗಾರ್ಯರು, ದೇವಶಿಖಾಮಣಿ ಅಳಸಿಂಗರಾಚಾರ್ಯರು.

ಎಸ್.ಜಿ. ನರಸಿಂಹಾಚಾರ್ಯರನ್ನು ನಾನು ಮೊದಲು ಕಂಡದ್ದು ೧೯೦೬-೭ರಲ್ಲಿ ಇರಬೇಕು. ಅವರ ಹೆಸರು ಅದಕ್ಕೆ ಮೊದಲೇ ನನಗೆ ಪರಿಚಯವಾಗಿತ್ತು. ಅವರ ಕೆಲವು ಲೇಖನಗಳನ್ನು ನಾನು ಪುಠ್ಯಪುಸ್ತಕಗಳಲ್ಲಿ ಓದಿದ್ದೆ. ಅವರು ಕನ್ನಡ ಷಟ್ಪದಿ ಕಾವ್ಯರೂಪದಲ್ಲಿ ಕಾಳಿದಾಸನ ರಘುವಂಶದ ಕೆಲವು ಪ್ರಕರಣಗಳನ್ನು ಅನುವಾದ ಮಾಡಿದ್ದದ್ದು ನನ್ನ ಮನಸ್ಸಿಗೆ ಬಹು ಸೊಗಸೆನ್ನಿಸಿತ್ತು. ಅನೇಕ ಪದ್ಯಗಳ ಮಾತಿನ ಲಾಲಿತ್ಯವೂ ಭಾವದ ಪುಷ್ಟಿಯೂ ನನಗೆ ಮೋಹವನ್ನುಂಟುಮಾಡಿದ್ದವು.

ಅಂಬರವದೆಂತು ಶಶಿ-
ಬಿಂಬದಿಂ ರಂಜಿಸುವು-
ದಂಬರಾ ಪಗೆಯೆಂತು ಶೈವಕಳೆಯಿಂ ॥
ತುಂಬಿ ರಂಜಿಪುದಂತು
ಕಂಬುಕಂಠಿಯ ಗರ್ಭ-
ಮಿಂಬಾಯ್ತು ಗುರುವಿತ್ತ ವರದ ಬಲದೆ ॥

ಇಂಥ ಪ್ರಸನ್ನವೂ ಮನೋಹರವೂ ಆದ ಲೇಖನಶೈಲಿ ಎಸ್.ಜಿ.ಎನ್.ಅವರದು. ಅವರು ರಚಿಸಿ ಮ್ಯಾಕ್‌ಮಿಲನ್ ಅವರು ಪ್ರಕಟಪಡಿಸಿದ್ದ ಒಂದು ರೀಡರ್-ವಾಚಕ ಪುಸ್ತಕವನ್ನು ನಾನು ಪಾಠಮಾಡಿದ್ದೆ-ನಾನು ಮೇಷ್ಟರಾಗಿದ್ದಾಗ. ಆ ಪುಸ್ತಕದಲ್ಲಿ ಅಭಿನವಪಂಪನ ರಾಮಾಯಣದ ಒಂದು ಭಾಗವನ್ನು ಆರಿಸಿಕೊಟ್ಟಿತ್ತು. ಅದನ್ನು ನಾನು ಉತ್ಸಾಹದಿಂದ ಪಾಠ ಹೇಳಿದ್ದು ಚೆನ್ನಾಗಿ ಜ್ಞಾಪಕವಿದೆ.

ಹೀಗೆ ನಾನು ಅವರಲ್ಲಿ ಪೂಜ್ಯಭಾವವನ್ನು ಬೆಳೆಸಿಕೊಂಡಿದ್ದೆ.

ಎಸ್.ಜಿ.ನರಸಿಂಹಾಚಾರ್ಯರಿಗಿದ್ದ ಹುದ್ದೆ ಸರಕಾರದ ಭಾಷಾಂತರಕರ್ತರದು (Translator). ಅದು ಆಗಿಗೇ ಬಹಳ ಸಾಮಾನ್ಯವೆನಿಸಿದ್ದ ಹುದ್ದೆ-ಸುಮಾರು ನೂರೈವತ್ತು ಇನ್ನೂರು ರೂಪಾಯಿಗಳದು. ಆದರೆ ಈ ವಿಷಯ ಅವರ ಮನಸ್ಸಿಗೆ ಬಂದಂತೆಯೇ ತೋರುವುದಿಲ್ಲ. ಅವರ ಮಾತುಕಥೆಯಲ್ಲಿ ಸಾವಿರ ರೂಪಾಯಿ ಸರದಾರರ ಸಂತೃಪ್ತಿ ಧ್ವನಿಸುತ್ತಿತ್ತು.

ಎಸ್.ಜಿ. ನರಸಿಂಹಾಚಾರ್ಯರ ದೊಡ್ಡ ಕಾರ್ಯಗಳಲ್ಲಿ ಗಣಿಸಬಹುದಾದದ್ದು ಕರ್ಣಾಟಕ ಕವಿಚರಿತೆಯ ಮೊದಲನೆಯ ಸಂಪುಟ. ಅದನ್ನು ಆರ್. ನರಸಿಂಹಾಚಾರ್ಯರೂ, ಎಸ್.ಜಿ.ನರಸಿಂಹಾಚಾರ್ಯರೂ ಇಬ್ಬರೂ ಸೇರಿ ರಚಿಸಿದರು. ಆರ್ ನರಸಿಂಹಾಚಾರ್ಯರು ಕವಿಯ ಕಾಲ, ದೇಶ, ಅವನ ಕರ್ತೃತ್ವ ಮೊದಲಾದವುಗಳನ್ನು ಕುರಿತು ಬರೆದಿರಬೇಕು. ಕವಿಯ ಮುಖ್ಯ ಸ್ವಾರಸ್ಯ, ಕವಿಶ್ರೇಣಿಯಲ್ಲಿ ಅವನ ಸ್ಥಾನ–ಇಂಥ ವಿಮರ್ಶನ ಭಾಗವನ್ನು ಎಸ್.ಜಿ.ನರಸಿಂಹಾಚಾರ್ಯರು ಬರೆದಿರಬೇಕು. ಈ ಊಹೆ ಆರ್. ನರಸಿಂಹಾಚಾರ್ಯರೊಬ್ಬರೇ ಪೂರ್ತಿ ಬರೆದ ಎರಡು ಮೂರನೆಯ ಸಂಪುಟಗಳಲ್ಲಿ ಎಸ್.ಜಿ. ಯವರ ಕೈವಾಡ ಸೇರದಿದ್ದುದರಿಂದ ಆದ ಭೇದದಿಂದ ಬಲಪಡುತ್ತದೆ.

ಎಸ್.ಜಿ. ನರಸಿಂಹಾಚಾರ್ಯರ ಅತ್ಯಂತ ಸಮೀಪದ ಸ್ನೇಹಿತರು ನಾಟಕ ಶಿರೋಮಣಿ ಎ.ವಿ. ವರದಾಚಾರ್ಯರು. ಅವರಿಬ್ಬರೂ ಯಾವಾಗಲೋ ಸ್ವಲ್ಪ ಕಾಲ ಚಿತ್ರದುರ್ಗದಲ್ಲಿದ್ದಾಗ ಇಬ್ಬರಿಗೂ ಸ್ನೇಹವಾಯಿತಂತೆ. ವರದಾಚಾರ್ಯರು ನಾಟಕ ಪ್ರಪಂಚದಲ್ಲಿ ಪ್ರಸಿದ್ಧರಾದಮೇಲೂ ಈ ಸ್ನೇಹ ಬೆಳೆದು ಫಲಕಾರಿಯಾಯಿತು. [2]

ಕಾಮದಹನದ ಹಾಡು

ನರಸಿಂಹಾಚಾರ್ಯರು ಕಾಮದಹನದ ಹಬ್ಬಕ್ಕಾಗಿ ಒಂದು ಹಾಡು ಕಟ್ಟಿದರು. ಆ ಹಾಡು ಆ ಕಾಲದ ಸೆಂಟ್ರಲ್ ಕಾಲೇಜಿನ ವಿದ್ಯಾರ್ಥಿಗಳಲ್ಲಿ ಕೆಲವರ ಮನಸ್ಸನ್ನು ಹಿಡಿದಿತ್ತು. ಅವರಲ್ಲಿ ಕೆಲವರು. ನನ್ನ ಆಪ್ತಮಿತ್ರರಾದ ಜಿ. ಶ್ರೀನಿವಾಸಯ್ಯ, ಮೋಕ್ಷಗುಂಡಂ ಕೃಷ್ಣಮೂರ್ತಿ, ಎಸ್. ರಾಮಚಂದ್ರ ಶಾಸ್ತ್ರಿ, ವಾಜಪೇಯಂ ವೆಂಕಟಸುಬ್ಬಯ್ಯ- ಇವರು ಆ ಹಾಡಿನ ತುಣುಕುಗಳನ್ನು ಆಗಾಗ ಹೇಳಿಕೊಳ್ಳುತ್ತಿದ್ದುದನ್ನು ನಾನು ಕೇಳಿದ್ದೇನೆ. ಆದರೆ ಯಾರಿಗೂ ಆ ಹಾಡು ಪೂರ್ತಿಯಾಗಿ ತಿಳಿದಿದ್ದಂತೆ ತೋರಲಿಲ್ಲ. ನನಗೆ ಈ ಹಾಡಿನ ವಿಷಯ ತಿಳಿದದ್ದು ಎಸ್.ಜಿ. ನರಸಿಂಹಾಚಾರ್ಯರು ತೀರಿಕೊಂಡ ಬಹು ದಿನಗಳ ಮೇಲೆ. ಆದದ್ದರಿಂದ ಹಾಡಿನ ಸಾಹಿತ್ಯವನ್ನು ನಾನು ಸಂಪಾದಿಸಲಾಗಲಿಲ್ಲ. ಅದರ ಒಂದು ಚರಣ

ಕೂಡ ಪೂರ್ತಿಯಾಗಿ ನಾನು ಕೇಳಲಿಲ್ಲ. ನಾನು ಕೇಳಿದ ಹರಕು ಮುರುಕುಗಳಿಂದ ಆ ಹಾಡು ಒಂದು ಆಸಾಧಾರಣ ಧಾಟಿಯಲ್ಲಿತ್ತೆಂದು ನನಗನ್ನಿಸಿದೆ, ಹೀಗೆ:

ಗಿರಿಜೆ ವರನನು ಬಯಸಿ ಬಂದಳು
ಹರನನು-ಶಶಿಧರನನು ।
ಹರನ ತಪವನು ಮುರಿಯ ಬಂದನು
ಮಾರನು-ಸುಕುಮಾರನು ॥

ನನ್ನ ಕಿವಿಗೆ ಇದು ಸೊಗಸಾದ ಧಾಟಿ. ನರಸಿಂಹಾಚಾರ್ಯರು ತಮ್ಮ ಹಾಡಿನಲ್ಲಿ ವಸ್ತುವನ್ನು ಹೇಗೆ ಅಳವಡಿಸಿದ್ದರೋ, ಹೇಗೆ ಕಥಾಸಂವಿಧಾನ ಮಾಡಿದ್ದರೋ ಅದನ್ನು ತಿಳಿದುಕೊಳ್ಳಬೇಕೆಂದು ನನ್ನಂತೆ ಕುತೂಹಲಪಡುವವರು ಈಹೊತ್ತೂ ನೂರಾರು ಮಂದಿ ಇದ್ದಾರೆಂದು ನಾನು ನಂಬಿದ್ದೇನೆ.

‘ಪದ್ಯಸಂಗ್ರಹ’, ‘ಪದ್ಯಸಾರ’

ಎಸ್.ಜಿ. ನರಸಿಂಹಾಚಾರ್ಯರು ಕನ್ನಡಕ್ಕೆ ಮಾಡಿದ ಮಹೋಪಕಾರಗಳಲ್ಲಿ ಎರಡು ಕಾವ್ಯಸಂಕಲನ ಪುಸ್ತಕಗಳು ಸೇರಿವೆ. ಒಂದು ‘ಪದ್ಯಸಂಗ್ರಹ’ ; ಇನ್ನೊಂದು ‘ಪದ್ಯಸಾರ’. ‘ಪದ್ಯಸಂಗ್ರಹ’ ದಲ್ಲಿ ಆರಿಸಿದ ಭಾಮಿನಿ ಷಟ್ಪದಿ ಪದ್ಯಗಳು ಮಾತ್ರವಲ್ಲದೆ ಕನಕದಾಸರ ‘ಧ್ರುವಚರಿತ್ರೆ’, ‘ನಳಚರಿತ್ರೆ’ ಗಳು ಬಹು ಹೃದಯಂಗಮವಾದ ರೀತಿಯಲ್ಲಿ ಸಂಕ್ಷಿಪ್ತಾಕಾರದಲ್ಲಿ ಬಂದಿದ್ದವು. ಆ ಎರಡು ಸುಂದರವಾದ ಕಾವ್ಯಗಳನ್ನು ಸಂಕ್ಷೇಪಮಾಡಿದ್ದರಿಂದ ಅಲ್ಲಲ್ಲಿ ಬಿಡಬೇಕಾಗಿ ಬಂದ ಅನೇಕ ಪದ್ಯಗಳ ಸ್ಥಾನದಲ್ಲಿ ಕಥಾಸರಣಿಯ ಸಂದರ್ಭ ಸೂಚನೆಗಾಗಿ ಉಚಿತವಾದ ಗದ್ಯವಾಕ್ಯಗಳನ್ನು ರಚಿಸಿ ಸೇರಿಸಿದವರು ಎಸ್.ಜಿ. ನರಸಿಂಹಾಚಾರ್ಯರು. ಈ ಸಣ್ಣ ಸಣ್ಣ ಗದ್ಯವಾಕ್ಯಗಳೇ ಅವರ ರಸಜ್ಞತೆಯನ್ನು ಎತ್ತಿ ತೋರಿಸುತ್ತವೆ. ‘ಪದ್ಯಸಾರ’ ವಾದರೋ ಕನ್ನಡ ಕಾವ್ಯದ ನಾನಾ ಯುಗಗಳನ್ನು ಉದಾಹರಣೆಗಳಿಂದ ಎತ್ತಿತೋರಿಸುವುದಾಗಿದೆ. ಅದರಲ್ಲಿ ಜನಪದ ಗೀತೆಗಳು, ಶತಕಗಳು ಮೊದಲಾದ ಜನಬೋಧಕ ಸಾಹಿತ್ಯದಿಂದ ಷಡಕ್ಷರಿ ಕವಿಯ ಪ್ರೌಢಮಟ್ಟದವರೆಗೂ ಉದಾಹರಣೆಗಳಿವೆ. ಇದು ಇಂಗ್ಲಿಷಿನ ಪ್ರಸಿದ್ಧ ಪದ್ಯಸಂಕಲನವಾದ ‘ಪಾಲ್‌ಗ್ರೇವ್ಸ್ ಗೋಲ್ಡನ್ ಟ್ರೆಷರಿ’ ಎಂಬ ಗ್ರಂಥವನ್ನು ಹೋಲುವುದಾಗಿದೆ. ‘ಪದ್ಯಸಂಗ್ರಹ’ ‘ಪದ್ಯಸಾರ’ ಗಳು ಇಂದಿನ ಪಠ್ಯಪುಸ್ತಕ ಪಟ್ಟಿಕೆಯಲ್ಲಿ ಸೇರಿಲ್ಲವೆಂದು ಕೇಳಿದ್ದೇನೆ. ಹಾಗಿರುವ ಪಕ್ಷದಲ್ಲಿ ಇದು ಒಂದು ದೊಡ್ಡ ಲೋಪವೇ. ಅದಕ್ಕಿಂತ ಸುಂದರವಾದ ಪದ್ಯಸಂಕಲನ ಮತ್ತಾರಿಂದಲೂ ಸಾಧ್ಯವಿಲ್ಲವೆಂದು ನಾನು ಸಾರಿ ಸಾರಿ ಹೇಳುತ್ತೇನೆ. ಮತ್ತು ಅವುಗಳ ಪಾಠವನ್ನು ತಪ್ಪಿಸಿದ್ದರಿಂದ ವಿದ್ಯಾರ್ಥಿಗಳಿಗೆ ಅಪಾರ ನಷ್ಟವಾಗಿದೆಯೆಂದೂ ಹೇಳುತ್ತೇನೆ.

ಎಸ್.ಜಿ. ನರಸಿಂಹಾಚಾರ್ಯರ ಬರವಣಿಗೆಯನ್ನೆಲ್ಲ ಸಂಗ್ರಹ ಮಾಡಿ ಪ್ರಕಟಪಡಿಸುವವರು ಕನ್ನಡ ಲೋಕಕ್ಕೆ ಭಾಷೆಯ ದೃಷ್ಟಿಯಿಂದಲೂ ಸರಸತೆಯ ದೃಷ್ಟಿಯಿಂದಲೂ ಮಹೋಪಕಾರ ಮಾಡುತ್ತಾರೆ. ಗಾತ್ರದಲ್ಲಿ ಅದು ಅನೇಕ ಸಂಪುಟಗಳಾಗವಷ್ಟು ಹೆಚ್ಚಾಗಿಲ್ಲ. ಆದದ್ದರಿಂದ ಆ ಸಂಕಲನವು ಹೆಚ್ಚು ಶ್ರಮಕಾರಿಯಾಗಲಾರದು. ಆದರೆ ಅದು ಭಾಷಾತತ್ತ್ವಜ್ಞರೂ ರಸವಿವೇಕವುಳ್ಳವರೂ ಮಾತ್ರವೇ ಚೆನ್ನಾಗಿ ಮಾಡಲಾಗುವ ಕೆಲಸ. ಆ ಕೆಲಸವನ್ನು ಯಾವ ಸರಕಾರವಾದರೂ ಮಾಡುತ್ತದೆಂದು ನನಗೆ ನಿರೀಕ್ಷೆಯಿಲ್ಲ. ಅದು ಸರಕಾರದ ಕೆಲಸವೂ ಅಲ್ಲ. ಅದು ಯಾವುದಾದರೊಂದು ಪ್ರಕಾಶನ ಸಂಸ್ಥೆಯಿಂದ ವಿದ್ವದ್ರಸಿಕರ ಸಂಪಾದಕತ್ವದಲ್ಲಿ ನಡೆಯಬೇಕಾದ ಕೆಲಸ. ದೇಶದ ಯೋಗ ಹೇಗಿದೆಯೋ!

೭

ಆರ್. ನರಸಿಂಹಾಚಾರ್ಯರು

ಪ್ರಾಕ್ತನವಿಮರ್ಶನವಿಚಕ್ಷಣ ಮಹಾಮಹೋಪಾಧ್ಯಾಯ ರಾವ್‌ಬಹದ್ದೂರ್ ಆರ್. ನರಸಿಂಹಾಚಾರ್ಯರು ಎಸ್.ಜಿ. ನರಸಿಂಹಾಚಾರ್ಯರ ಸಮೀಪದ ಬಂಧುಗಳು, ನಾನು ರಾ. ನರಸಿಂಹಾಚಾರ್ಯರನ್ನು ಮೊದಲು ಕಂಡದ್ದು ೧೯೧೪-೧೫ರಲ್ಲಿ ಎಂದು ಜ್ಞಾಪಕ. ಆದರೆ ಅವರ ಹೆಸರು ಅದಕ್ಕೆ ಹದಿನಾಲ್ಕು ಹದಿನೈದು ವರ್ಷಗಳ ಹಿಂದಿನಿಂದ ಪರಿಚಿತವಾಗಿತ್ತು. ಆಗ ನಾನು ನರಸಿಂಹಾಚಾರ್ಯರ 'ನೀತಿಮಂಜರಿ' ಯ ಎರಡು ಭಾಗಗಳನ್ನೂ ಓದಿದ್ದೆ; ಅವರು ಹಳೆಗನ್ನಡದಲ್ಲಿ ಎಂಥ ಉದ್ದಾಮ ಪಂಡಿತರಾಗಿದ್ದರೆಂಬುದು ಮನಸ್ಸಿಗೆ ಹೊಳೆದಿತ್ತು. ನಮ್ಮ ಉತ್ತರ ಕರ್ಣಾಟಕದ ಬಳಕೆಯ ಮಾತಿನಲ್ಲಿ ಅದು "ಅಗದಿ ಭಯಂಕರ" ಪಾಂಡಿತ್ಯವೆನ್ನಿಸಿತ್ತು. ಈ ಪ್ರತೀತಿ ಅವರ ಒಂದೆರಡು ಮಾತನ್ನು ಮುಖತಃ ಕೇಳಿದ ಕೂಡಲೆ ಮಾಯವಾಯಿತು. ಅವರು ಬಹು ಸುಲಭರು, ಸರಳಸ್ವಭಾವದವರು. ಭಯಂಕರವಾದದ್ದು ಅವರಲ್ಲಿ ಯಾವುದೂ ಇರಲಿಲ್ಲ.

೧೯೧೪-೧೫ರ ಸುಮಾರಿನಲ್ಲಿ ಅವರು ವಿದ್ಯಾ ಇಲಾಖೆಯ ಪಠ್ಯಪುಸ್ತಕ ಸಮಿತಿಯ (Text Book Committee) ಅಧ್ಯಕ್ಷರಾಗಿದ್ದರು. ನನ್ನನ್ನೂ ಸರಕಾರವು ಆ ಸಮಿತಿಯಲ್ಲಿ ಸೇರಿಸಿತ್ತು. ಅದರಿಂದ ನನಗಾದ ಲಾಭ ಕೆಲ ಮಂದಿ ಪ್ರಮುಖ ಸಾಹಿತಿಗಳ ವ್ಯಕ್ತಿ ಪರಿಚಯ. ಸೋಸಲೆ ಅಯ್ಯಶಾಸ್ತ್ರಿಗಳು, ಎಂ.ಎಸ್. ಪುಟ್ಟಣ್ಣನವರು, ತಿರುವಳ್ಳೂರು ಶ್ರೀನಿವಾಸರಾಘವಾಚಾರ್ಯರು ಮೊದಲಾದ ವಿದ್ವಾಂಸರು ಆ ಸಮಿತಿಯ ಇತರ ಸದಸ್ಯರು.

ಸಮಿತಿಯು ಸೇರಿದ ದಿನಗಳಲ್ಲಿ ರಾ. ನರಸಿಂಹಾಚಾರ್ಯರು ಕೊಠಡಿಯನ್ನು ಪ್ರವೇಶಿಸಿದ ಕೂಡಲೆ ಸದಸ್ಯರು ನಾಲ್ಕೈದು ಮಂದಿ ತಮ್ಮ ಪೀಠಗಳಿಂದೆದ್ದು ಅವರ ಬಳಿ ಹೋಗಿ "ಇದನ್ನು ತಾವು ನೋಡಬೇಕು" "ಇದನ್ನು ನೋಡೋಣವಾಗಲಿ. ಇದು ಚೆನ್ನಾಗಿದೆ" -ಎಂದು ಶಿಫಾರಸು ಮಾಡುತ್ತ ಪುಸ್ತಕಗಳನ್ನು ಅವರ ಕಣ್ಣ ಮುಂದೆ ಹಿಡಿಯುವರು. ಅವರು ಮುಗುಳ್ನಗೆ ನಗುತ್ತ ತಾಳ್ಮೆಯಿಂದ "ನೋಡೋಣ, ಎಲ್ಲ ನೋಡೋಣ" -ಎಂದು ಹೇಳಿಕೊಂಡು ಬಂದು ತಮ್ಮ ಪೀಠದಲ್ಲಿ ಕೂಡುವರು. ಶಿಫಾರಸುಗಾರರು ಪುಸ್ತಕದ ಪುಟಗಳನ್ನು ತೆರೆದು "ಇಲ್ಲಿ ನೋಡಬೇಕು" "ಇಲ್ಲಿ ನೋಡಬೇಕು" -ಎನ್ನುವರು. ರಾ. ನರಸಿಂಹಾಚಾರ್ಯರು ಒತ್ತಾಯವಾದ ಪುಸ್ತಕವನ್ನು ಕೈಗೆ ತೆಗೆದುಕೊಂಡು ಮೂಲುಗು

ಧ್ವನಿಯಲ್ಲಿ ಒಂದೆರಡು ಪಂಕ್ತಿ ಓದುವರು. ಹೀಗೆ ಎರಡು ಮೂರು ಓದಿದಂತೆ ಮಾಡಿದ ಮೇಲೆ "ಇದೇಪ್ಪಾ-ಇದೆ. ಶ್ರಮಪಟ್ಟಿದ್ದಾರೆ. ಪಾಪ ಪಾಪ!" -ಎನ್ನುವರು. ಅಲ್ಲಿಗೆ ಶಿಫಾರಸುಗಾರರ ಉತ್ಸಾಹ ಕೊಂಚ ತಣ್ಣಗಾಗುವುದು.

ಆಮೇಲೆ ಗ್ರಂಥವಿಮರ್ಶನಕಾರ್ಯ; ಸಮಿತಿಯ ನಿರ್ಣಯ.

ರಾ. ನರಸಿಂಹಾಚಾರ್ಯರು ಯಾರಲ್ಲಿಯೂ ಒರಟುತನ ತೋರುತ್ತಿರಲಿಲ್ಲ; ಪಕ್ಷಪಾತವನ್ನೂ ತೋರುತ್ತಿರಲಿಲ್ಲ.

ಸಾಹಿತ್ಯಾಭಿಮಾನ

ಅವರು ಸಾಹಿತ್ಯ ಪರಿಷತ್ತಿನ ವಿಷಯದಲ್ಲಿ ಪ್ರಾರಂಭದಿಂದ ಒಂದೇ ವಿಧವಾದ ಅಭಿಮಾನವನ್ನಿರಿಸಿದ್ದರು. ೧೯೩೩-೩೫ರಲ್ಲಿ ನಡೆದ ವಿಶೇಷ ಸಾಹಿತ್ಯೋತ್ಸವಗಳ ಕಾಲದಲ್ಲಿ ಪ್ರತಿಯೊಂದು ಕಾರ್ಯಕ್ಕೂ ದಿನಕ್ಕೆರಡು ಸಾರಿ ತಪ್ಪದೆ ಬರುತ್ತಿದ್ದರು. ಆಗಿನ ಜನೋತ್ಸಾಹವನ್ನು ನೋಡಿ ಅವರಿಗೆ ತುಂಬಾ ಆನಂದ. ಅಂಥ ಪಂಡಿತರೂ ವೃದ್ಧಮಹನೀಯರೂ ಮಲ್ಲೇಶ್ವರದಿಂದ ಚಾಮರಾಜಪೇಟೆಗೆ ಹಗಲೊಂದು ಸಾರಿ, ಸಂಜೆ ಒಂದು ಸಾರಿ ಬಂದುಹೋಗುತ್ತಿದ್ದದ್ದನ್ನು ನೋಡಿ ಪರಿಷತ್ತಿನ ಕಾರ್ಯಕರ್ತರಿಗೂ ತುಂಬ ಸಂಭ್ರಮ.

ಒಂದು ದಿನ ಬೆಳಗ್ಗೆ ಅವರು ನನ್ನನ್ನು ಕರೆದು ಕೇಳಿದರು:

"ಏನಪ್ಪಾ-ನಾನು ಬಹುವರ್ಷಗಳಿಂದ 'ಇಂಡಿಯನ್ ಆಂಟಿಕ್ವರಿ' (Indian Antiquary) ಪತ್ರಿಕೆಯನ್ನು ಬೈಂಡು ಮಾಡಿಸಿಟ್ಟುಕೊಂಡಿದ್ದೇನೆ. ಅದನ್ನು ಪರಿಷತ್ತಿಗೆ ಕೊಡೋಣವೆನಿಸಿದೆ. ಅದರಿಂದ ನಿಮಗೆ ಉಪಯೋಗವುಂಟೆ?"

ನಾನು: "ಅಂಥ ದಾನವನ್ನು ತಮ್ಮಿಂದ ಪಡೆಯಲು ತಲೆಯಿಂದ ನಡೆದುಕೊಂಡು ಬಂದೇನು!"

ಅವರು ಹಿಗ್ಗಿ ಆ ದಿನವೋ ಮಾರನೆಯ ದಿನವೋ ತಾವೇ ಆ ಪುಸ್ತಕಗಳನ್ನು ತಂದರು.

ಶಬ್ದಾನುಶಾಸನ

ಇನ್ನೊಂದು ಜ್ಞಾಪಕ.

ಪ್ರಸಿದ್ಧ ಕನ್ನಡ ವ್ಯಾಕರಣವಾದ ಶಬ್ದಾನುಶಾಸನ ಗ್ರಂಥದ ಮೊದಲನೆಯ ಮುದ್ರಣದ ಪ್ರತಿಗಳು ಮುಗಿದುಹೋಗಿ ಗ್ರಂಥ ದುರ್ಲಭವಾಗಿತ್ತು. ಬಳಿಕ ಅದರ ದ್ವಿತೀಯ ಮುದ್ರಣ ನಡೆದು ಪೂರ್ತಿಯಾಗಿ ಹೊರಕ್ಕೆ ಬಾರದೆ ಸರಕಾರದ ಅಚ್ಚಿನ ಮನೆಯಲ್ಲಿಯೇ ಉಳಿದುಕೊಂಡಿತ್ತು. ಈ ದ್ವಿತೀಯ ಮುದ್ರಣವನ್ನು ರಾ. ನರಸಿಂಹಾಚಾರ್ಯರೇ ಪರಿಷ್ಕರಿಸಿದ್ದರು. ಗ್ರಂಥಕ್ಕೆ ಒಂದು ಪೀಠಿಕೆ ಬರೆಯುವ ಕಾರ್ಯ ಉಳಿದಿತ್ತು. ಬಹು ವರ್ಷಗಳಾದರೂ ಪೀಠಿಕೆ ಬರೆಯಲು ನರಸಿಂಹಾಚಾರ್ಯರಿಗೆ ವ್ಯವಧಾನ ದೊರೆತಿರಲಿಲ್ಲ. ಈ ಸಂದರ್ಭ ವೆಂಕಟನಾರಣಪ್ಪನವರಿಗೆ ತಿಳಿದಿತ್ತು. ಗ್ರಂಥವನ್ನು ಹೊರಕ್ಕೆ ಹೊರಡಿಸುವುದು ಹೇಗೆ? ರಾ. ನರಸಿಂಹಾಚಾರ್ಯರ ಮೇಲೆ ಆಕ್ಷೇಪ ಹೊರಿಸುವುದು ಯುಕ್ತವೆನಿಸಲಿಲ್ಲ. ನಾವು ಮೂರು ನಾಲ್ಕು ಮಂದಿ ಸ್ನೇಹಿತರು ಒಂದು ಉಪಾಯ ಹೂಡಿದೆವು.

ಒಂದು ದಿನ ಮಧ್ಯಾಹ್ನ ವೆಂಕಟನಾರಣಪ್ಪನವರು, ನಂಗಪುರಂ ವೆಂಕಟೇಶಯ್ಯಂಗಾರ್ಯರು, ಟಿ.ಎಸ್. ವೆಂಕಣ್ಣಯ್ಯ, ನಾನು-ಈ ನಾಲ್ವರು (ನ್ಯೂ ಪಬ್ಲಿಕ್ ಆಫೀಸಸ್) ಹೊಸ ಅಠಾರಾ ಕಛೇರಿಗೆ ಹೋಗಿ ಅಲ್ಲಿ (ಆರ್ಕಿಯಾಲಜಿ) ಶಾಸನದ ಇಲಾಖೆಯ ಕೊಠಡಿಯ ಮುಂದೆ ನಿಂತು ಹೆಸರು ಚೀಟಿಯನ್ನು ಆಳಿನ ಮೂಲಕ ಒಳಕ್ಕೆ ಕಳುಹಿಸಿದೆವು. ಒಳಕ್ಕೆ ಹೋದ ಕೂಡಲೆ ಆಚಾರ್ಯರು ಎದ್ದು ನಿಂತು ನಗುಮುಖದಿಂದ ಕೇಳಿದರು:

"ಇದೇನಪ್ಪಾ ಈ Formality ?"

ನಾವು ನಗುವನ್ನು ಬಿಗಿಹಿಡಿದುಕೊಂಡು ನಿಂತೆವು. ನಂಗಪುರಂ ವೆಂಕಟೇಶಯ್ಯಂಗಾರ್ಯರು ಒಂದು ಭಾರಿ ಹೂವಿನ ಹಾರವನ್ನು ನರಸಿಂಹಾಚಾರ್ಯರ ಕೊರಳಿಗೆ ಹಾಕಿದರು. ವೆಂಕಟನಾರಣಪ್ಪನವರು ಎರಡು ದೊಡ್ಡ ನಿಂಬೆಹಣ್ಣುಗಳನ್ನು ಅವರ ಕೈಗೆ ಅರ್ಪಿಸಿದರು. ವೆಂಕಣ್ಣಯ್ಯನವರು ಹೇಳಿದರು:

"ನಾವು ಒಂದು ಡೆಪ್ಯುಟೇಷನ್ ಬಂದಿದ್ದೇವೆ."

ನಾವೆಲ್ಲ ಸೇರಿ ಬರೆದು ದೊಡ್ಡ ಕಾಗದದಲ್ಲಿ ಉಲ್ಲೇಖ ಮಾಡಿದ್ದ ಬಿನ್ನವತ್ತಳೆಯನ್ನು ನಾನು ಗಂಭೀರವಾಗಿ ಓದಿದೆ. ಅದರಲ್ಲಿ ಹೇಳಿದ್ದ ವಿಷಯ: ಭಟ್ಟಾಕಲಂಕನ ಶಬ್ದಾನು ಶಾಸನ ದೊರಕದೆ ಕನ್ನಡಲೋಕ ಪರಿತಪಿಸುತ್ತಿದೆ! ನರಸಿಂಹಾಚಾರ್ಯರೊಬ್ಬರೇ ಈ ಕಷ್ಟದಿಂದ ನಮ್ಮನ್ನು ಪಾರುಮಾಡಲು ಶಕ್ತರು. ಅವರಿಗೆ ಕಾಲವಿರಾಮವಿಲ್ಲವೆಂಬುದು ನಮಗೆ ತಿಳಿದಿದೆ. ಆದರೂ ಅವರು ಹೇಗಾದರೂ ಮಾಡಿ ನಮ್ಮ ಈ ಮನೋರಥವನ್ನು ಈಡೇರಿಸಬೇಕು.

ಇದನ್ನು ಕೇಳಿ ನರಸಿಂಹಾಚಾರ್ಯರು ಗಟ್ಟಿಯಾಗಿ ನಕ್ಕರು.

“ಇದಕ್ಕೆ ಇಷ್ಟು ರಗಳೆ ಯಾಕಪ್ಪಾ?”

ಕಡೆಗೆ ತಮ್ಮ ಕಷ್ಟಗಳನ್ನು ವಿವರಿಸಿದ್ದಾದ ಮೇಲೆ ಬೇಗನೆ ಪೀಠಿಕೆ ಬರೆಯುವುದಾಗಿ ಭರವಸೆ ಕೊಟ್ಟರು. ಅದು ನಡೆಯಿತು.

ಸಂಗೀತಪ್ರೇಮ

ರಾ. ನರಸಿಂಹಾಚಾರ್ಯರಿಗೆ ಸಂಗೀತದಲ್ಲಿ ಅತ್ಯಂತ ಪ್ರೇಮ. ಅವರ ಸ್ವರಜ್ಞಾನ ತಾಳಜ್ಞಾನಗಳು ಶಾಸ್ತ್ರೀಯವಾದವು. ಒಂದು ದಿನ ಮುಸುರಿ ಸುಬ್ರಹ್ಮಣ್ಯಯ್ಯರ್‌ರವರ ಕಛೇರಿಯಲ್ಲಿ ಕುಳಿತಿದ್ದೆವು. ನನ್ನನ್ನು ಕುರಿತು ನರಸಿಂಹಾಚಾರ್ಯರು ಕೇಳಿದರು:

“ಗ್ರಾಮೋಪೋನಿನಲ್ಲಿ ‘ನಗುಮೋಮು’ ಕೀರ್ತನೆ ಹಾಡಿರುವವರು ಇವರೇ ಏನು?”

“ಹೌದು.”

“ಅದನ್ನು ಈಗ ಪ್ರತ್ಯಕ್ಷವಾಗಿ ಇವರ ಬಾಯಿಂದ ಹಾಡಿಸಿ ಕೇಳಬೇಕಲ್ಲ?”

ನಾನು ಒಬ್ಬ ಸ್ನೇಹಿತರ ಮೂಲಕ ಈ ಸೂಚನೆಯನ್ನು ಅಯ್ಯರವರಿಗೆ ತಿಳಿಸಿದೆ. ಅವರು ಅದರಂತೆ ಹಾಡಿದರು. ಅತ್ಯಂತ ಮನೋಹರವಾಗಿತ್ತು. ನರಸಿಂಹಾಚಾರ್ಯರು ಆನಂದಪರವಶರಾದರು.

ಅವರು ನನಗೆ ಹೇಳಿದ ಒಂದು ಕಥೆ ಇದು.

ಅವರು ಮೈಸೂರಿನ ಮಹಾರಾಣಿ ಕಾಲೇಜಿನಲ್ಲಿ ಬೋಧಕರಾಗಿದ್ದರಂತೆ. ಆಗ ದರ್ಬಾರ್ ಬಕ್ಷಿ ಅಂಬಿಲ್ ನರಸಿಂಹಯ್ಯಂಗಾರ್ಯರ ಮನೆಯಲ್ಲಿ ಒಂದು ಪ್ರಕರಣ ನಡೆಯಿತು. ಮಹಾರಾಜರ ಸಮ್ಮುಖದಲ್ಲಿ ಹಾಡಬೇಕೆಂದು ಬರುವ ವಿದ್ವಾಂಸರನ್ನು ಪರೀಕ್ಷಾರ್ಥವಾಗಿ ತಾವು ಕೇಳಿ ಸನ್ನಿಧಾನಕ್ಕೆ ಶಿಫಾರಸು ಮಾಡುವುದು ಬಕ್ಷಿಯ ಕೆಲಸವಾಗಿತ್ತು. ಅದರಂತೆ ಒಂದು ದಿನ ಗವಾಯಿ ಬರಖತ್‌ಉಲಾಖಾನ್‌ರವರ ಸಿತಾರ್ (ಅಥವಾ ಸಾರಂಗಿ)ವಾದ್ಯದ ಕಛೇರಿ ಅಂಬಿಲ್ ನರಸಿಂಹಯ್ಯಂಗಾರ್ಯರ ಮನೆಯಲ್ಲಿ ಏರ್ಪಾಟಾಗಿತ್ತು. ಆರ್. ನರಸಿಂಹಾಚಾರ್ಯರಿಗೆ ಅದಕ್ಕಾಗಿ ಆಹ್ವಾನ ಬಂದಿತ್ತು; ಆಚಾರ್ಯರು ಹೋಗಿ ಸಭೆಯಲ್ಲಿ ಕುಳಿತಿದ್ದರು. ಸಂಗೀತ ಉಪಕ್ರಮವಾಗಬೇಕಾದ ವೇಳೆಗೆ ಗವಾಯಿ ಸಾಹೇಬರ ಸವಾರಿ ಬಂತು. ಮೊದಲು ಬಂದದ್ದು ಒಂದು ಲೇಪಿನ ಸುರುಳಿ. ಅಂಬಿಲ್ ನರಸಿಂಹಯ್ಯಂಗಾರ್ಯರಿಗೆ ಇದರ ಮರ್ಮ ತಿಳಿಯದೆ ತಮಿಳಿನಲ್ಲಿ ಕೇಳಿದರು.

“ಏನಂತೆ ಇದೆಲ್ಲ?”

ಆಗಲೇ ಅವರ ಮುಖ ಕೆಂಪೇರಿತ್ತು. ನರಸಿಂಹಾಚಾರ್ಯರು ಅಯ್ಯಂಗಾರ್ಯರನ್ನು ಕುರಿತು ಸಮಾಧಾನ ಹೇಳಿದರು:

"ಇದೆಲ್ಲ ಈಹೊತ್ತು ಬೇಕಾಗುತ್ತದೆ. ಇದು ಆತನ ಉಪಕರಣ"

ಕೆಲವು ನಿಮಿಷಗಳ ತರುವಾಯ ಸಂಗೀತ ಪ್ರಾರಂಭವಾಯಿತು. ಗವಾಯಿ ಸಾಹೇಬರು ತಮ್ಮ ಸಿತಾರ್ ಸಾರಂಗಿ ವಾದ್ಯವನ್ನು ಆ ಲೇಪಿನ ಸುರುಳಿಯ ಮೇಲೆ ನಿಲ್ಲಿಸಿಕೊಂಡು ನುಡಿಸಲಾರಂಭಿಸಿದರು. ಹಾಗೆ ನುಡಿಸುವ ವಿಧಾನದಲ್ಲಿ ಅವರು ಮೇಲಕ್ಕೇಳುತ್ತಲೂ ಕೂಡುತ್ತಲೂ ವಾದ್ಯದ ಮೆಟ್ಟಲುಗಳ ಮೇಲೆ ಬೆರಳಾಡಿಸುತ್ತಿದ್ದರು. ಮೇಲುಮೇಲಿನ ಮೆಟ್ಟಲಿಗೆ ಹೋದಂತೆಲ್ಲಾ ಏಳುತ್ತಲೂ ಮೆಟ್ಟಲಿಳಿದಂತೆಲ್ಲ ಕೂಡುತ್ತಲೂ ನಡುನಡುವೆ ಮೀಸೆ ಒರಸಿಕೊಳ್ಳುತ್ತಲೂ ಇದ್ದರು. ಈ ಸಾರಿ ಅಂಬಿಲ್ ನರಸಿಂಹಯ್ಯಂಗಾರ್ಯರು ಮತ್ತೆ ಮುಖ ಕೆಂಪೇರಿದವರಾಗಿ ಕಣ್ಣುಗಳನ್ನು ಕೆಂಪಗೆಮಾಡಿಕೊಂಡು ತಮಿಳಿನಲ್ಲಿ ಕೂಗಿದರು:

"ಇದೆಲ್ಲ ಪೋಕರಿತನ. ರಾಜರ ಆಸ್ಥಾನದ ಮರ್ಯಾದೆ ಗೊತ್ತಿಲ್ಲ."

ನರಸಿಂಹಾಚಾರ್ಯರು ಸಮಾಧಾನ ಹೇಳಿದರು:

"ತಾವು ಕೋಪ ಮಾಡಬಾರದು. ಈ ವಾದ್ಯ ನುಡಿಸುವುದೇ ಹಾಗೆ. ಆತ ಮಾಹಾವಿದ್ವಾಂಸ. ಕೆಳಗೆ ಲೇಪಿರುವುದರಿಂದ ಅದು ಸ್ಪಂದನಗಳನ್ನು (Vibrations) ಹೀರುತ್ತದೆ. ಸ್ವರಗಳು ಶುದ್ಧಪಟ್ಟು ನಮಗೆ ಇಂಪು ದೊರೆಯುತ್ತದೆ. ಅದೇ ಇದರ ರೀತಿ."

ಬಕ್ಷಿಯವರು: "ಅಪ್ಪಡಿಯಾ?" (ಹಾಗೇನು?) ಎಂದು ವಿಷಯ ತಿಳಿದುಕೊಂಡು ಸ್ತಿಮಿತಕ್ಕೆ ಬಂದರು.

ಸರಸತಿ

ಇಂಥ ಕಥೆಗಳು ಹತ್ತಾರು ನರಸಿಂಹಾಚಾರ್ಯರ ವಿನೋದದ ಸಂಚಿಗಳಲ್ಲಿದ್ದವು. ಅವರು "ಈಗಿನ ಕಾಲದ ದೊಡ್ಡಮನುಷ್ಯರು ಸಂಗೀತಶತ್ರುಗಳು, ಶಾರದಾವೈರಿಗಳು" ಎಂದು ಪದೇ ಪದೇ ಹೇಳುತ್ತಿದ್ದರು. ಸಂಗೀತದ ಸಭೆಗಳಲ್ಲಿ ಕುಳಿತು ದೊಡ್ಡ ಮನುಷ್ಯರು ಸಂಗೀತಕ್ಕೆ ಕಿವಿಗೊಡದೆ ಪಿಟಿಪಿಟಿ ಮಾತನಾಡುತ್ತಿರುವುದನ್ನೂ ಪಿಸುಗುಟ್ಟುವುದನ್ನೂ ನೋಡಿ ಬೇಸರದಿಂದ ಹಾಗನ್ನುತ್ತಿದ್ದರು.

ರಾ. ನರಸಿಂಹಾಚಾರ್ಯರ ಮನೆಗೆ ನಾನು ಮಧ್ಯಾಹ್ನ ೩ ಘಂಟೆಗೆ ಹೋಗಿ ಕುಳಿತರೆ ಕೊಠಡಿಯಲ್ಲಿ ಕತ್ತಲು ಬೀಳುವವರೆಗೆ ಹೊತ್ತೆಷ್ಟಾಯಿತೆಂಬ ಚಿಂತೆಯೇ ಸುಳಿಯುತ್ತಿರಲಿಲ್ಲ. ರಾಷ್ಟ್ರಕೂಟ ರಾಜನ ಸಾಹಸವನ್ನು ವರ್ಣಿಸುವರು. ಹೊಯ್ಸಳರ ರಸಿಕತೆಯನ್ನು ಪ್ರಶಂಸಿಸುವರು. ಗಂಗರಸರ ಪ್ರಜಾಭಿಮಾನವನ್ನು ಕುರಿತು ಹೇಳುವರು. ಸಂಸ್ಕೃತ ಪಂಡಿತರ ಕಥೆಗಳನ್ನು ಹೇಳುವರು. ಸಂಗೀತ ವಿದ್ವಾಂಸರ ಉಪಾಖ್ಯಾನಗಳನ್ನು ಹೇಳುವರು. ಚಾಟು ಶ್ಲೋಕಗಳನ್ನು ಬಂಡಿಗಟ್ಟಲೆ ಹೇಳುವರು. ಒಂದು ಜ್ಞಾಪಕಕ್ಕೆ ಬರುತ್ತದೆ.

"ಪೂರ್ವಕಾಲದಲ್ಲಿ ನರ್ತನ ಕಲಿಸುವವರು 'ಧಾ ಥೈಯ ಥೋಂ' ಎಂದು ಹೇಳುತ್ತಿದ್ದರು. ಈಗಿನ ಕಾಲದವರು 'ತಾತಯ್ಯ ತಾತಯ್ಯ' ಎನ್ನುವರು. ಅಷ್ಟು ದುರ್ಬಲತೆಗಿಳಿದಿದ್ದೇವೆ ನಾವು! ಇದು ಒಂದು ಪದ್ಯದ ತಾತ್ಪರ್ಯ.

ಇನ್ನೊಂದು ಪದ್ಯ. ಇದು ಶಿರಸ್ತೇದಾರರನ್ನು ಕುರಿತದ್ದು.

> ಮುಖ್ಯಸ್ಥದಾರೋ ಭಗವಾನ್ ಪ್ರಜೇಶಃ ।
> ಉರಃಸ್ಥದಾರೋ ಭಗವಾನ್ ರಮೇಶಃ ।
> ಪಾರ್ಶಸ್ಥದಾರೋ ಭಗವಾನುಮೇಶಃ ।
> ಶಿರಃಸ್ಥದಾರೋಽಯಮದೃಷ್ಟಪೂರ್ವಃ ॥

ಇನ್ನೊಂದು:

> ಚಾಮರೀವಾಮರೀ ಭಾಷಾ ಕ್ವಚಿದೇವ ವನಾಂತರೇ ।
> ರಾಜತೇ ಪಾಮರೀ ಭಾಷಾ ಸೂಕರೀವ ಗೃಹೇ ಗೃಹೇ ॥

ಈ ಪದ್ಯವನ್ನು ಕೇಳಿದಾಗ ನಾನು ತಕರಾರೆತ್ತಿದೆ. ದೇಶಭಾಷೆಯನ್ನು, ಸಾಮಾನ್ಯ ಜನಭಾಷೆಯನ್ನು ಹೀಗೆ ಹೀಯಾಳಿಸಬಹುದೆ? ಎಂದು. ಅವರು ಅದಕ್ಕೆ ಉತ್ತರವಾಗಿ "ನೀವು ಇದನ್ನು ಹೀಯಾಳಿಕೆ ಎಂದು ಭಾವಿಸಬಾರದು. ಸಂಸ್ಕೃತ ಭಾಷೆಗೆ ಈಗ ಬಂದಿರುವ ದುರವಸ್ಥೆಯನ್ನು ತೋರಿಸುವುದು ಈ ಪದ್ಯದ ತಾತ್ಪರ್ಯ. ಸಂಸ್ಕೃತ ಅಳಿಸಿ ಹೋದರೆ ನಮ್ಮ ದೇಶಭಾಷೆಗಳು ಹೇಗೆ ಉಳಿದಿರುತ್ತವೆ?" ಎಂದರು.

ಹೀಗೆ ಮಾತುಕತೆ ನಡೆಯುತ್ತಿದ್ದಾಗ ನಡುನಡುವೆ ಅವರ (ಆರ್ಕಿಯೊಲಾಜಿಕಲ್ ರಿಪೋರ್ಟ್) ಶಾಸನದ ಇಲಾಖೆಯ ವರದಿಗಳನ್ನು ಕುರಿತ ಮಾತು ಬರುವುದು. ನಾನಾ ದೇಶಗಳಿಂದ ಆ ವರದಿಗಳನ್ನು ಕುರಿತ ಪ್ರಶಂಸನ ಪತ್ರಗಳು ಅವರಿಗೆ ಬರುತ್ತಿದ್ದವು. ಅವರು ಆ ಪತ್ರಗಳನ್ನು ಬಂದ ಮಿತ್ರರಿಗೆ ತೋರಿಸುವರು. ನಾವು ಅದನ್ನು ನೋಡಿ ಹೆಮ್ಮೆ ಪಡುತ್ತಿದ್ದೆವು. ವಿದೇಶೀಯ ವಿದ್ವಾಂಸರಿಂದ ಇಂಥ ಮೆಚ್ಚಿಕೆ ಸಂಪಾದಿಸಿಕೊಳ್ಳಬಲ್ಲ ವಿದ್ವನ್ಮಣಿಗಳೊಬ್ಬರು ನಮ್ಮವರಿದ್ದಾರೆಂದು ಆ ಹೆಮ್ಮೆ.

***

ನರಸಿಂಹಾಚಾರ್ಯರು ಸರಳ ಹೃದಯರು, ಉದಾರಿಗಳು, ಸದಾಚಾರಶೀಲರು. ಮೇಲುಕೋಟೆಯಲ್ಲಿ ಉಭಯವೇದಾಂತ ಪ್ರವರ್ತನ ಸಭೆಯನ್ನು ಸ್ಥಾಪಿಸಿದವರಲ್ಲಿ ಅವರೂ ಒಬ್ಬರು. ಬಹುಕಾಲ ಅದರ ಕಾರ್ಯದರ್ಶಿಯಾಗಿದ್ದಲ್ಲದೆ ವರ್ಷವರ್ಷವೂ ಸಭಾಕಾಲದಲ್ಲಿ ಮೇಲುಕೋಟೆಗೆ ಹೋಗಿ ಕೆಲವು ದಿನ ಅಲ್ಲಿ ತಂಗಿದ್ದು ಸಭಾಕಾರ್ಯಗಳನ್ನು ಖುದ್ದಾಗಿ ಮುತುವರ್ಜಿಯಿಂದ ಸಾಂಗಪಡಿಸುತ್ತಿದ್ದರು. ಹಾಗೆಯೇ ಮಾರ್ಗಶಿರ ಮಾಸದಲ್ಲಿ ಆಂಡಾಳ್ ದೇವಿಯ ತಿರುಪ್ಪಾವೈಸ್ತೋತ್ರ ಪಾಠವನ್ನು ಮಲ್ಲೇಶ್ವರದ ಶ್ರೀ ಗೋಪಾಲಕೃಷ್ಣ ದೇವಾಲಯದಲ್ಲಿ ಪಾರಾಯಣ ಮಾಡಿಸುವ ಏರ್ಪಾಟನ್ನೂ ಬಹು ಶ್ರದ್ಧೆಯಿಂದ ನಿರ್ವಹಿಸುತ್ತಿದ್ದರು.

ಸೆಂಟ್ರಲ್ ಕಾಲೇಜ್ ಕರ್ಣಾಟಕ ಸಂಘದ ಎಲ್ಲ ಉತ್ಸವಗಳಿಗೂ ಸಂತೋಷದಿಂದ ಬರುತ್ತಿದ್ದರು.

ಅವರಿಗೆ "ರಾವ್‌ಬಹದ್ದೂರ್" ಪ್ರಶಸ್ತಿ ಬಂದಾಗ ಪರಿಷತ್ತು ಸಭೆ ನಡೆಸಿ ಸೊಗಸಾದ ಬಿನ್ನವತ್ತಳೆಯನ್ನರ್ಪಿಸಿ ಕನ್ನಡ ಜನತೆಗೆ ರಾ. ನರಸಿಂಹಾಚಾರ್ಯರ ವಿಷಯದಲ್ಲಿರುವ ಪೂಜ್ಯಭಾವವನ್ನೂ ಕೃತಜ್ಞತೆಯನ್ನೂ ಹೆಮ್ಮೆಯನ್ನೂ ವ್ಯಕ್ತಪಡಿಸಿತು.

ನಿರಾಡಂಬರ

ರಾ. ನರಸಿಂಹಾಚಾರ್ಯರ ಪಾಂಡಿತ್ಯ ಬಹುಮುಖವಾದದ್ದು. ಧರ್ಮಸ್ಥಳದಲ್ಲಿ ನಡೆದ ಸರ್ವಧರ್ಮ ಸಮ್ಮೇಳನದಲ್ಲಿ ಅವರು ಮಾಡಿದ ಅಧ್ಯಕ್ಷ ಭಾಷಣ ಅವರ ವಿಶಾಲ ಮನೋಭಾವಕ್ಕೆ ದೃಷ್ಟಾಂತವಾಗಿದೆ. ಅವರ 'ನೀತಿಮಂಜರಿ' ಯನ್ನು ಯಾರೋ ಕಬ್ಬಿಣದ ಕಡಲೆ ಎಂದು ಕರೆದಾಗ ತೋಗೆರೆ ನಂಜುಂಡಶಾಸ್ತ್ರಿಗಳು "ಅಂಥ ವಿದ್ವಾಂಸರು ಇದಕ್ಕಿಂತ ಸುಲಭವಾಗಿ ಬರೆಯುವುದು ಹೇಗೆ? ಇದೇ ಬಹು ಸುಲಭ" ಎಂದರು. ಆಚಾರ್ಯರ ಪಾಂಡಿತ್ಯ ಅಷ್ಟು ದೊಡ್ಡದಾದರೂ ಅವರು ಪಾಂಡಿತ್ಯದ ಭಾರವನ್ನು ಹೊತ್ತಿದ್ದಂತೆ ತೋರುತ್ತಿರಲಿಲ್ಲ. ಮಾತನಾಡುವುದರಲ್ಲಿ ಅವರದು ಸರ್ವಸಾಮಾನ್ಯವಾದ ಬಳಕೆಯ ರೀತಿ. ಇದಕ್ಕೆ ಅವರ 'ನಗೆಗಡಲು' ನಿದರ್ಶನ. ಅವರ ಇತರ ಲೇಖನಗಳೂ ಹಾಗೆಯೇ. ಸಭಾಮುಖದಲ್ಲಿ ಉಪನ್ಯಾಸ ಮಾಡುವಾಗಲೂ ಹಾಗೆಯೇ. ಎಲ್ಲರಿಗೂ ಸರಳವೆಂದೂ ಸಹಜವೆಂದೂ ತೋರುವ ಭಾಷೆಯಲ್ಲಿ ಮಾತನಾಡುತ್ತಿದ್ದರು. ಅವರಲ್ಲಿ Orator ರೀತಿಯ ವಾಗ್ಧೋರಣೆ ಕಾಣುತ್ತಿರಲಿಲ್ಲ. ಸಾವಕಾಶವಾಗಿ ನಗುಮುಖದಿಂದ ಚಿರಪರಿಚಿತರಾದ ಸ್ನೇಹಿತರೊಡನೆ ಸಂಭಾಷಣೆ ನಡೆಸುವ ರೀತಿಯಲ್ಲಿ ಉಪನ್ಯಾಸ ಮಾಡುತ್ತಿದ್ದರು. ಆಡಂಬರ ಕೊಂಚವೂ ಇರಲಿಲ್ಲ.

ವಚನಸಾಹಿತ್ಯ ಪಾಂಡಿತ್ಯ

೧೯೧೨-೧೩ರ ಸುಮಾರಿನಲ್ಲಿ ಶ್ರೀ ಮನ್ಮುರುಘರಾಜೇಂದ್ರ ಸ್ವಾಮಿಗಳ ಸವಾರಿ ಚಿತ್ರೈಸಿ ತೋಟದಪ್ಪನವರ ಸತ್ರದ ಆವರಣದಲ್ಲಿ ಬಿಜಯ ಮಾಡಿತು. ಸನ್ನಿಧಾನದಲ್ಲಿ ರಾ. ನರಸಿಂಹಾಚಾರ್ಯರ ಉಪನ್ಯಾಸವನ್ನು ಏರ್ಪಡಿಸಿತ್ತು. ವಿಷಯ ವೀರಶೈವ ವಾಙ್ಮಯ. ಅದು ಬಹುದೊಡ್ಡ ಸಭೆ. ಅದಕ್ಕಾಗಿ ಸೊಗಸಾದ ಚಪ್ಪರ ಹಾಕಿಸಿದ್ದರು. ಆಚಾರ್ಯರು ಆ ಉಪನ್ಯಾಸದಲ್ಲಿ ಶಿವಶರಣರ ವಚನಗಳ ಹಿರಿಮೆಯನ್ನು ಕುರಿತು ಮಾತನಾಡಿದರು. ಅದುವರೆಗೆ ಪ್ರಕಟವಾಗದೆ ಇದ್ದ ಅನೇಕ ಶಿವಶರಣರ ವಚನಗಳನ್ನು ರಾ. ನರಸಿಂಹಾಚಾರ್ಯರು ಮೊಟ್ಟಮೊದಲು ಉದಾಹರಿಸಿದರು. ಅವರು ಹತ್ತಾರು ಶೈವ ಮಠಗಳಿಗೆ ಹೋಗಿ ಅಲ್ಲಿಯ ಮುಖ್ಯಸ್ಥರನ್ನು ಕಂಡು ಒಡಂಬಡಿಸಿ ಹಸ್ತಲಿಖಿತ ಪ್ರತಿಯನ್ನು ಸಂಪಾದಿಸಿದ್ದರ ಕಥೆಯನ್ನೂ ಆ ಕಾರ್ಯಕ್ರಮದಲ್ಲಿ ಎದುರಿಸಬೇಕಾಗಿದ್ದ ಪ್ರಶ್ನೆಯನ್ನೂ ಸಹಿಸಬೇಕಾಗಿದ್ದ ಶ್ರಮವನ್ನೂ ವಿವರಿಸಿ ಹೇಳಿದರು. ಆಮೇಲೆ ಶಿವಶರಣರಲ್ಲಿ ಒಬ್ಬೊಬ್ಬರ ಹೆಸರನ್ನೂ ಎತ್ತಿ ಒಂದೆರಡು ಮಾತು ಪೀಠಿಕೆ ಹೇಳಿ ಒಂದೆರಡು ವಚನಗಳನ್ನು ಉದಾಹರಿಸಿದರು. ಯಾರೋ ಒಬ್ಬ ಶಿವಶರಣರನ್ನು ಕುರಿತು

“ಇವನೊಬ್ಬನಿದ್ದಾನಪ್ಪ ಭರ್ಜರಿ ಮನುಷ್ಯ-ಒಳ್ಳೆಯ ಜರ್ಬಿನ ಬರವಣಿಗೆ.” ಅವರು ಹೀಗೆಂದೊಡನೆ ನಮ್ಮ ಕುತೂಹಲ ಕೆರಳಿತು. ಆಚಾರ್ಯರು ಮುಂದುವರಿದು-

“ಅವನ ಮಾತುಗಳನ್ನು ಕೇಳಿ:

“ಮಲಾ...ಮೂತ್ರಾ...”

ಹೀಗೆ ಪ್ರಾರಂಭಮಾಡಿದೊಡನೆ ನನಗೂ ಹತ್ತಿರವಿದ್ದ ಕೆಲವರಿಗೂ ನಗು ಬಂತು. ಆಚಾರ್ಯರು ಅದನ್ನು ನೋಡಿ

“ಇನ್ನೂ ಕೇಳಿ. ಎದೆ ಚುಚ್ಚುತ್ತದೆ” ಎಂದು ಹೇಳಿ ಆ ವಚನದ ಮಿಕ್ಕ ಭಾಗವನ್ನು ಹೇಳಿದರು. ಆ ವಚನ ದೇಹಭೋಗದ ವಿಷಯದಲ್ಲಿ ಜುಗುಪ್ಸೆಯುಂಟುಮಾಡಿ ವೈರಾಗ್ಯವನ್ನೂ ಭಕ್ತಿಯನ್ನೂ ಹುಟ್ಟಿಸುವ ತಾತ್ಪರ್ಯವುಳ್ಳದ್ದು.

ಒಟ್ಟಿನ ಮೇಲೆ ಆ ಉಪನ್ಯಾಸವು ಶ್ಲಾಘನೆಗೆ ವಿಷಯವಾಯಿತು. ಬಹುಗಂಭೀರವಾದ ವಿಷಯವನ್ನು ಲಲಿತವಾದ ಶೈಲಿಯಲ್ಲಿ ಪ್ರತಿಪಾದಿಸಿದರು. ಈಗ ನನಗೆ ಅನ್ನಿಸುತ್ತದೆ, ಅದೇ ವೀರಶೈವ ಸಾಹಿತ್ಯದ ಸಾಂಪ್ರತಕಾಲದ ವ್ಯಾಸಂಗಕ್ಕೆ ಪ್ರಥಮ ಪ್ರೇರಕವಾದದ್ದು ಎಂದು.

ಬಹುಭಾಷಾ ಪ್ರತಿಭೆ

ರಾ. ನರಸಿಂಹಾಚಾರ್ಯರು ಕನ್ನಡ ಸಂಸ್ಕೃತ ಇಂಗ್ಲಿಷುಗಳಲ್ಲಿ ಮಾತ್ರವೇ ಅಲ್ಲ, ತಮಿಳಿನಲ್ಲಿ ಸಹ ಮಹಾ ಪಂಡಿತ ವರ್ಗಕ್ಕೆ ಸೇರಿದವರು. ಅವರು ತೆಲುಗು ಸಾಹಿತ್ಯದಲ್ಲಿಯೂ ತುಂಬ ಪರಿಶ್ರಮ ಮಾಡಿದ್ದರು. ಕನ್ನಡ ತಮಿಳು ತೆಲುಗುಗಳು ಒಂದೇ ಬುಡಕಟ್ಟಿಗೆ ಸೇರಿದ ಭಾಷೆಗಳು-ಸೋದರೀಪ್ರಾಯಗಳು. ಆದದ್ದರಿಂದ ಕನ್ನಡವನ್ನು ಚೆನ್ನಾಗಿ ಅಭ್ಯಾಸ ಮಾಡಬೇಕೆನ್ನುವವರು ತಮಿಳು ತೆಲುಗುಗಳನ್ನೂ ಅವಶ್ಯವಾಗಿ ಕಲಿಯಬೇಕೆನ್ನುತ್ತಿದ್ದವರಲ್ಲಿ ಅವರೂ ಒಬ್ಬರು. ತುಳು, ಮಲಯಾಳ ಭಾಷೆಗಳ ಪರಿಚಯವೂ ಅವರಿಗಿತ್ತು.

ಅವರಲ್ಲಿ ಭಾಷಾಪಾಂಡಿತ್ಯ ತುಂಬಿದ್ದದ್ದರಿಂದ ಅವರ ಲೇಖನವು ಪಾಂಡಿತ್ಯಪ್ರದರ್ಶಕವಾದದ್ದೆಂದು ಯಾರೂ ಭಾವಿಸತಕ್ಕದ್ದಲ್ಲ. ಅವರ 'ನಗೆಗಡಲು' ಕಥೆಯನ್ನು ಓದಿದವರು ಹಾಗೆ ಭಾವಿಸಲಾರರು. ಅದು ಜನಸಾಮಾನ್ಯದ ಬಳಕೆಯ ಮಾತಿನಲ್ಲಿದೆ. ಅದು ಗಾಂಪರೊಡೆಯರ ಕಥೆ. ಇದನ್ನೇ ಪರಮಾನಂದಯ್ಯನ ಶಿಷ್ಯರ ಕಥೆ ಎಂದೂ ಕರೆಯುವುದುಂಟು. ಅತಿಪಾಂಡಿತ್ಯ ಈ ಉದ್ದೇಶಕ್ಕೆ ಹೊಂದೀತೆ? ನರಸಿಂಹಾಚಾರ್ಯರಲ್ಲಿ ಪಾಂಡಿತ್ಯ ಎಷ್ಟು ಪರಿಪೂರ್ಣವಾಗಿತ್ತೋ ಔಚಿತ್ಯಪರಿಜ್ಞಾನವೂ ಅಷ್ಟು ಸಹಜವಾಗಿತ್ತು. ಸಾಮಾನ್ಯವಾದ ಮಾತುಕಥೆಯಲ್ಲಿಯೂ ಮಿತ್ರ ಸಂಭಾಷಣೆಯಲ್ಲಿಯೂ ಅವರು ಹಾಗೆಯೇ ಸರಳರೂ ಸುಲಭರೂ ಆಗಿದ್ದರು. ಪ್ರಸ್ತಾವೋಚಿತವಾದ ಸಂಸ್ಕೃತ ಉದಾಹರಣೆಗಳೂ ಆಗಾಗ ಬರುತ್ತಿದ್ದವು. ಆದರೆ ಅವು ಯಾರಿಗೂ ಕ್ಲಿಷ್ಟವೆಂದು ತೋರುತ್ತಿರಲಿಲ್ಲ. ಕೃತಕವೆನಿಸುತ್ತಿರಲಿಲ್ಲ. ಅವು ಸ್ವಾಭಾವಿಕವಾಗಿ ನಿರಾಯಾಸವಾಗಿ ಬರುತ್ತಿದ್ದವು. ಅದೇ ಸುಸಂಸ್ಕೃತ ಜನರ ಸಂಭಾಷಣೆಯಲ್ಲಿಯ ಸ್ವಾರಸ್ಯ.

ರಾ. ನರಸಿಂಹಾಚಾರ್ಯರು ಸ್ನೇಹಶೀಲರು. ಅವರ ತಮ್ಮಂದಿರು ಆಳ್ವಾರಯ್ಯಂಗಾರ್ಯರಲ್ಲಿ ತುಂಬಾ ಅಭಿಮಾನ. ಅವರಿಬ್ಬರೂ ಸಾಮಾನ್ಯವಾಗಿ ಜೊತೆಜೊತೆಯಲ್ಲಿಯೇ ಇರುತ್ತಿದ್ದರು. ಅವರ ಇನ್ನೊಬ್ಬ ಮಿತ್ರರು ಗಣಿತಶಾಸ್ತ್ರದ ಪ್ರೊಫೆಸರ್ ಎನ್.ಟಿ. ನಾರಣಯ್ಯಂಗಾರ್ಯರು. ಅವರಿಬ್ಬರೂ ಉಭಯವೇದಾಂತ ಪ್ರವರ್ತನ ಸಭೆಯ ಕಾರ್ಯಗಳಲ್ಲಿ ಭಾಗಸ್ಥರು. ಮತ್ತೊಬ್ಬ ಅತಿ ಪ್ರಿಯರಾದ ಮಿತ್ರರು, ಚ. ವಾಸು ದೇವಯ್ಯನವರು. [1] ಸಭೆ ಸಭೆಸಮಾರಂಭಗಳಿಗೆ ನರಸಿಂಹಾಚಾರ್ಯರೂ ವಾಸು ದೇವಯ್ಯನವರೂ ಒಟ್ಟಿಗೆ ಬರುತ್ತಿದ್ದರು.

೮

ಎಂ.ಎ. ರಾಮಾನುಜಯ್ಯಂಗಾರ್ಯರು, ಅಳಸಿಂಗರಾಚಾರ್ಯರು

ಎಸ್.ಜಿ. ನರಸಿಂಹಾಚಾರ್ಯರ ಹೆಸರು ನೆನಪಿಗೆ ಬಂದಾಗ ಅದನ್ನನುಗೂಡಿ ಬರುವ ಹೆಸರು ಮಂಡಯಂ ಆಜಿ ರಾಮಾನುಜಯ್ಯಂಗಾರ್ಯರದು. ಎಸ್.ಜಿ.ಎನ್., ಆರ್.ಎನ್., ಎಂ.ಎ.ಆರ್.-ಈ ಮೂವರೂ ಒಂದು ಗೋಷ್ಠಿ. ಎಲ್ಲರೂ ಬಂಧುಗಳು ಮತ್ತು ಎಲ್ಲರೂ ಪ್ರಾಚೀನ ಕನ್ನಡ ಸಾಹಿತ್ಯದ ವಿಷಯದಲ್ಲಿ ಅಭಿಮಾನದಿಂದ ದುಡಿದವರು.

ರಾಮಾನುಜಯ್ಯಂಗಾರ್ಯರು (೧೮೬೪-೧೯೩೭) ಮೈಸೂರಿನಲ್ಲಿ ವೆಸ್ಲಿಯನ್ ಮಿಷನ್ ಸ್ಕೂಲಿನಲ್ಲಿ ಬಹುಕಾಲ ಉಪಾಧ್ಯಾಯರಾಗಿದ್ದರು. ಕೆಲವು ಕಾಲ ಸರಕಾರದ ವಿದ್ಯಾ ಇಲಾಖೆಯಲ್ಲಿಯೂ ಕೆಲಸ ಮಾಡಿದರು. ರಾಮಾನುಜಯ್ಯಂಗಾರ್ಯರು ಮಾಡಿದ ಮುಖ್ಯ ಕಾರ್ಯವೆಂದರೆ 'ಕರ್ಣಾಟಕ ಕಾವ್ಯಮಂಜರಿ' ಯ ಸಂಪಾದನೆ.

ಗ್ರಂಥಶೋಧನೆ

ಪುರಸತ್ತು ದೊರೆತಾಗಲೆಲ್ಲ ರಾಮಾನುಜಯ್ಯಂಗಾರ್ಯರು ಹಳೆಗನ್ನಡ ಗ್ರಂಥ ಭಂಡಾರಗಳಿದ್ದ ಕಡೆ ಸಂಚಾರ ಮಾಡಿ ಹಳೆಯ ತಾಳೆಯೋಲೆಯ ಗ್ರಂಥಗಳನ್ನು ಸಂಪಾದಿಸಿ ಅವುಗಳನ್ನು ವ್ಯಾಸಂಗ ಮಾಡಿ ಅಚ್ಚಿಗೆ ಸಿದ್ಧಪಡಿಸುತ್ತಿದ್ದರು.

ಇದು ಎಷ್ಟು ಕಷ್ಟದ ಕೆಲಸ, ಎಂಥ ರೇಜಿಗೆಯ ಕೆಲಸ ಎಂಬುದನ್ನು ಅನುಭವವುಳ್ಳವರು ಮಾತ್ರವೇ ಬಲ್ಲರು. ಹಳೆಯ ತಾಳೆಯೋಲೆಗಳು ಒಣಗಿದ ಸೌದೆಯಂತಾಗಿರುತ್ತವೆ. ಮುಟ್ಟಿದರೆ ಮುರಿದುಹೋಗುವ ಹಾಗಿರುತ್ತವೆ. ಅವುಗಳನ್ನು ನಾಜೂಕಿನಿಂದ ಬಿಡಿಸಿ ಬೇರೆ ಮಾಡಬೇಕು. ಆಮೇಲೆ ಅವುಗಳನ್ನೋದುವ ಕೆಲಸ. ಪತ್ರಕ್ಕೆ ಸೊಪ್ಪಿನ ರಸವನ್ನು ಸವರಬೇಕು. ಆಗ ಅಕ್ಷರಗಳು ಕರಿಯ ರೇಖೆಗಳಲ್ಲಿ ಎದ್ದು ಕಾಣುತ್ತವೆ. ಆಮೇಲೆ ಮೋಡಿ ಅಕ್ಷರಗಳ ಸರಪಳಿಯನ್ನು ಬಿಡಿಸುವ ಕಷ್ಟ. ಈ ಕಷ್ಟವಂತೂ ಬಹಳ ದೊಡ್ಡದು-ಈ ಕಾಲದ ಜನರಿಗೆ ಅರ್ಥವಾಗುವುದಲ್ಲ. ತಾಳೆಯೋಲೆಯ ಪತ್ರದಲ್ಲಿ ಪದ್ಯಗಳನ್ನು ಪಾದ ಪಾದಗಳಾಗಿ ಬಿಡಿಸಿರುವುದಿಲ್ಲ; ಪದ್ಯಗಳನ್ನೇ ಒಂದರಿಂದೊಂದನ್ನು ಬಿಡಿಸಿರುವುದಿಲ್ಲ. ಗ್ರಂಥವೆಲ್ಲ ಒಂದೇ ವಾಕ್ಯವೆಂಬಂತೆ ಮೊದಲ ಮಾತಿನಿಂದ ಕಡೆಯ ಮಾತಿನವರೆಗೂ

ಒಂದೇ ಸರಪಳಿಯಾಗಿ ಬಿಗಿದಿರುತ್ತದೆ. ಒಂದು ತಾಳೆಯೋಲೆಯ ಒಂದು ಕಡೆಯ ಬರಹವನ್ನೋದಲು ಅರ್ಧ ದಿವಸ ಹಿಡಿದರೂ ಹೆಚ್ಚಲ್ಲ.

ಇಂಥ ಶ್ರಮದ ಕೆಲಸವನ್ನು ನಿರ್ವಹಿಸಿದರು ರಾಮಾನುಜಯ್ಯಂಗಾರ್ಯರು. ಬರಿಯ ಪಾಂಡಿತ್ಯ ಈ ಕೆಲಸಕ್ಕೆ ಸಾಲದು. ಅದರ ಜೊತೆಗೆ ಉತ್ಸಾಹವೂ ತಾಳ್ಮೆಯೂ ಸಹನೆಯೂ ಅಸಾಮಾನ್ಯವಾದಷ್ಟು ಸೇರಿರಬೇಕು. ಅಚ್ಚಿಗೆ ಮೂಲಪ್ರತಿಯನ್ನು ಸಿದ್ಧಪಡಿಸುವುದು ಹೊಸದಾಗಿ ಗ್ರಂಥವನ್ನು ರಚಿಸುವುದಕ್ಕಿಂತ ಹೆಚ್ಚಿನ ಶ್ರಮವಿದ್ದಿರಬೇಕೆಂದು ನನಗನ್ನಿಸುತ್ತದೆ.

ಈ ವ್ಯವಸಾಯದ ಕಷ್ಟದ ಜೊತೆಗೆ ಹಣವನ್ನೊದಗಿಸುವ ಕಷ್ಟ ಮಿಗಿಲಾದದ್ದಾಗಿರಬೇಕು. ಈಗ-ಏಕೀಕೃತ ಕರ್ಣಾಟಕವಾದ ಮೇಲೆ ಕನ್ನಡ ಕಾವ್ಯಗಳಿಗೆ ಎಷ್ಟು ಮಟ್ಟಿನ ಪ್ರೋತ್ಸಾಹವಿದೆಯೆಂಬುದನ್ನು ಬಲ್ಲವರು ಆಗ-ಅರುವತ್ತು ವರ್ಷಗಳ ಹಿಂದೆ-ಎಷ್ಟು ಮಟ್ಟಿನ ಮಹಾಜನ ಪ್ರೋತ್ಸಾಹವಿತ್ತೆಂಬುದನ್ನು ಊಹಿಸಬಲ್ಲರು. ಅಂಥ ಕಾಲದಲ್ಲಿ ಉತ್ಸಾಹಗುಂದದೆ 'ಕರ್ಣಾಟಕ ಕಾವ್ಯಮಂಜರಿ' ಯನ್ನು ಎಂ.ಎ.ರಾಮಾನುಜಯ್ಯಂಗಾರ್ಯರು ಅಷ್ಟು ದೀರ್ಘಕಾಲ ನಡೆಸಿಕೊಂಡುಬಂದದ್ದು ಎಂಥ ಮಹಾತ್ಯಾಗದ ಕೆಲಸವೆಂಬುದನ್ನು ಚಿಂತಿಸಿದರೆ ಆಶ್ಚರ್ಯವಾಗುತ್ತದೆ.

ಹೀಗೆ ಪಟ್ಟ ದ್ರವ್ಯನಷ್ಟವೂ ನಿಷ್ಫಲ ಪ್ರಯಾಸವೂ ಸಾಲದೆಂಬಂತೆ ರಾಮಾನುಜಯ್ಯಂಗಾರ್ಯರು ಅಂಥ ಹೊರೆ ಇನ್ನೊಂದನ್ನು ಹೊತ್ತುಕೊಂಡರು. ಇದು 'ಕರ್ಣಾಟಕ ಕಾವ್ಯಕಲಾನಿಧಿ.' ಇದರಲ್ಲಿ ಪ್ರಾಚೀನ ಕಾವ್ಯಗಳ ಜೊತೆಗೆ ಕೆಲವು ನವೀನ ಕೃತಿಗಳೂ ಬಂದುವು.

'ಕರ್ಣಾಟಕ ಕಾವ್ಯಕಲಾನಿಧಿ' ಗ್ರಂಥಮಾಲೆಯಲ್ಲಿ ಸುಮಾರು ಎಪ್ಪತ್ತು-ಎಪ್ಪತ್ತೈದಕ್ಕೂ ಹೆಚ್ಚು ಗ್ರಂಥಗಳು ಬೆಳಕನ್ನು ಕಂಡವು. ಆ ಬೃಹತ್ಪ್ರಯತ್ನದಲ್ಲಿ ಎಂ.ಎ.ರಾಮಾನುಜಯ್ಯಂಗಾರ್ಯರು ಪಟ್ಟ ಶ್ರಮ ಅಪಾರ. ಆದರೆ ದೇಹಶ್ರಮವನ್ನಾಗಲಿ ಧನವ್ಯಯವನ್ನಾಗಲಿ ಅವರು ಲೆಕ್ಕಿಸಲಿಲ್ಲ. ಅನೇಕ ಹಳೆಗನ್ನಡ ನಡುಗನ್ನಡ ಗ್ರಂಥಗಳು ಆ ಗ್ರಂಥ ಮಾಲೆಯಲ್ಲಿ ಮೊದಲು ಭಾಗಭಾಗವಾಗಿಯೂ, ಉತ್ತರೋತ್ತರ ಕವಿ ಕಾವ್ಯ ವಿಚಾರಾದಿ ವ್ಯಾಸಂಗ ಸಾಮಾಗ್ರಿಯಿಂದ ಕೂಡಿ ಪ್ರತ್ಯೇಕ ಪುಸ್ತಕರೂಪವಾಗಿಯೂ ಪ್ರಕಟಗೊಂಡವು. ರನ್ನನ ಗದಾಯುದ್ಧ, ನಾಗಚಂದ್ರನ ಮಲ್ಲಿನಾಥ ಪುರಾಣ, ನೇಮಿಚಂದ್ರನ ಲೀಲಾವತಿ, ಹರಿಹರನ ಗಿರಿಜಾಕಲ್ಯಾಣ, ಜನ್ನನ ಯಶೋಧರ ಚರಿತೆ, ಆಂಡಯ್ಯನ ಕಬ್ಬಿಗರ ಕಾವ, ಚೌಂಡರಾಯನ ಅಭಿನವ ದಶಕುಮಾರ ಚರಿತೆ-ಇವೇ ಮೊದಲಾದ ಕಾವ್ಯಗ್ರಂಥಗಳೂ, ರಾಘವಾಂಕನ ಹರಿಶ್ಚಂದ್ರ ಕಾವ್ಯ, ಕನಕದಾಸರ

ನಳಚರಿತ್ರೆ, ಮಹಾಲಕ್ಷ್ಮಿಯ ರಾಮ ಪಟ್ಟಾಭಿಷೇಕ-ಇತ್ಯಾದಿ ಷಟ್ಪದಿ ಗ್ರಂಥಗಳೂ, ಮುದ್ದಣನ ರಾಮಾಶ್ವಮೇಧ ಮೊದಲಾದ ಗದ್ಯಗ್ರಂಥಗಳೂ 'ಕಾವ್ಯಕಲಾನಿಧಿ' ಯಲ್ಲಿ ಪ್ರಕಟವಾದವು. ಇವಲ್ಲದೆ ಉದಯಾದಿತ್ಯಾಲಂಕಾರ, ನಾಗವರ್ಮನ ಛಂದೋಂಬುಧಿ ಮೊದಲಾದ ಲಕ್ಷಣ ಗ್ರಂಥಗಳನ್ನೂ ಶಬ್ದಸಾರ ನಿಘಂಟು, ಚತುರಾಸ್ಯ ನಿಘಂಟು ಮೊದಲಾದ ನಿಘಂಟುಗಳನ್ನೂ ಅಪ್ರತಿಮ ವೀರಚರಿತವೆಂಬ ಅಲಂಕಾರ ಗ್ರಂಥವನ್ನೂ ರಾಮಾನುಜಯ್ಯಂಗಾರ್ಯರು ಪ್ರಕಾಶಪಡಿಸಿದರು. ವೇದಾಂತ ವಿವೇಕಸಾರವೆಂಬ ಅದ್ವೈತ ಗ್ರಂಥವೂ ಚಿಕ್ಕದೇವರಾಯ ಬಿನ್ನಪಂ ಎಂಬ ವಿಶಿಷ್ಟಾದ್ವೈತ ಗ್ರಂಥವೂ ಅದೇ ಗ್ರಂಥಮಾಲೆಯಲ್ಲಿ ಹೊರಬಂದವು.

ಎಂ.ಎ.ರಾಮಾನುಜಯ್ಯಂಗಾರ್ಯರವರೇ ರಚಿಸಿದ 'ಪ್ರಬಂಧ ಮಂಜರಿ' ಯೂ, 'ಕವಿ ಸಮಯಂ' ಎಂಬ ರಸಬೋಧಕ ವಿಮರ್ಶೆಯೂ ಹಲವಾರು ನಾಟಕಗಳ ಗದ್ಯಾನುವಾದಗಳೂ 'ಕಾವ್ಯಕಲಾನಿಧಿ' ಯಲ್ಲಿ ಸೇರಿವೆ.

ಭಾಭಾರವರ ಪ್ರೋತ್ಸಾಹ

ಆಗಿನ ವಿದ್ಯಾ ಇಲಾಖೆಯಲ್ಲಿ ಗುಣಗ್ರಹಣಶೀಲರೂ ಉದಾರಿಗಳೂ ಅಧಿಕಾರಸ್ಥರಾಗಿದ್ದರು. ಅವರಿಗೆಲ್ಲ ಯಜಮಾನರಾಗಿದ್ದವರು ಎಚ್.ಜೆ.ಭಾಭಾರವರು.

ಭಾಭಾರವರನ್ನು ಕುರಿತು ಒಂದು ಅತಿಶಯದ ಮಾತನ್ನು ಬರೆಯಬೇಕೆಂದೆನಿಸಿದೆ. ಇವರು ಹದಿನೆಂಟನೆಯ ವಯಸ್ಸಿನ ವೇಳೆಗೆ ಎಂ.ಎ. ಪದವಿಯನ್ನು ಸಂಪಾದಿಸಿ ವಿದ್ವಾಂಸರೆಂದು ಹೆಸರುಗಳಿಸಿದ್ದರು. ಅವರು ಪಾರಸಿ ಜನಾಂಗದವರು. ಜಗತ್ಪ್ರಸಿದ್ಧರಾದ ಜೆಂಷೆಡ್ಜಿ ತಾತಾರವರಿಗೆ ಸಮೀಪ ಬಂಧುಗಳು. ಇವರನ್ನು ಮೈಸೂರಿಗೆ ಕರೆತಂದ ಕೀರ್ತಿ ಸರ್.ಕೆ.ಶೇಷಾದ್ರಯ್ಯರ್ ಅವರಿಗೆ ಸಲ್ಲತಕ್ಕದ್ದು. ಇವರು ಮೊದಲು ಮೈಸೂರಿನಲ್ಲಿರುವ ಮಹಾರಾಜಾ ಕಾಲೇಜಿನ ಅಧ್ಯಾಪಕರಾಗಿಯೂ ಅಧ್ಯಕ್ಷರಾಗಿಯೂ ಇದ್ದರು.ಇವರನ್ನು ವಿದ್ಯಾ ಇಲಾಖೆಗೆ ಮುಖ್ಯಸ್ಥರನ್ನಾಗಿ ಮಾಡಿದ ಮೇಲೆ ಸಂಸ್ಥಾನದ ನಾನಾ ಭಾಗಗಳಲ್ಲಿ ಸಂಚಾರಮಾಡಿ, ಕನ್ನಡದಲ್ಲಿ ಮಾತನಾಡುವುದನ್ನು ಅಭ್ಯಾಸಮಾಡಿಕೊಂಡಿದ್ದರು. ಇವರ ದೇಶಸಂಚಾರ ಬಹುಮಟ್ಟಿಗೆ ಬೈಸಿಕಲ್ಲಿನ ಮೇಲೆ. ನಮ್ಮ ದೇಶಕ್ಕೆ ಬಂದ ಮೊದಮೊದಲಿನ ಬೈಸಿಕಲ್ಲುಗಳಲ್ಲಿ ಇವರು ಉಪಯೋಗಿಸುತ್ತಿದ್ದದ್ದೂ ಒಂದು.

ಇವರು ಮುಳಬಾಗಲಿಗೆ ಬಂದಿದ್ದರು. ಅಲ್ಲಿಯ ಸ್ಕೂಲನ್ನು ಪರೀಕ್ಷೆ ಮಾಡಿದಾಗ ನಾನು ಅಲ್ಲಿ ವಿದ್ಯಾರ್ಥಿಯಾಗಿದ್ದೆ. ಆಗಿನ ಒಂದು ಸಂಗತಿ ನನ್ನ ಜ್ಞಾಪಕದಲ್ಲಿ ನಿಂತಿದೆ. 'ಓರಿಯಂಟಲ್ ರೀಡರ್' ಎಂಬುದು ನಮಗೆ ಆಗ ಇದ್ದ ಪಠ್ಯಪುಸ್ತಕ. ಅದರಲ್ಲಿಯ ಒಂದು ಪಾಠ ಸಿಂಹವನ್ನು ಕುರಿತದ್ದು. ಭಾಭಾರವರು ಪುಸ್ತಕವನ್ನು ತೆರೆದಾಗ ಆ ಪುಟ ಕಣ್ಣಿಗೆ ಬಿತ್ತು. ಅದನ್ನು ಓದು ಎಂದು ಹೇಳಿದರು. ಆಗ 'ಮೆಜೆಸ್ಟಿ' ಎಂಬ ಇಂಗ್ಲಿಷ್ ಪದ ಅಲ್ಲಿ ಸಿಕ್ಕಿತು. ಆ ಪದಕ್ಕೆ ಕನ್ನಡ ಮಾತು ಏನೆಂದು ಕೇಳಿದರು. ನಾನೋ ನನ್ನ ಪಕ್ಕದಲ್ಲಿದ್ದವನೋ "ಗಂಭೀರ" ಎಂದು ಹೇಳಿದಂತೆ ಜ್ಞಾಪಕ. ಭಾಭಾರವರು "ವೈಖರಿ ಎಂದರೆ ಹೇಗಿರುತ್ತದೆ?" ಎಂದು ಕೇಳಿದರು. ಹಾಗೆ ಕೇಳಿ ನಮ್ಮ ಹೆಡ್‌ಮಾಸ್ಟರರ ಕಡೆ ತಿರುಗಿದರು. ಚಂದ್ರಶೇಖರ ಶಾಸ್ತ್ರಿಗಳವರು "ವೈಖರಿ ಎಂದು ಒಂದು ಭಾಷಾವಿಶೇಷಕ್ಕೂ ಹೆಸರುಂಟು" -ಎಂದರು. ಭಾಭಾರವರು "ಹೌದು ಹೌದು. ಆದರೆ ಮಕ್ಕಳಿಗೆ ಪಾಠ ಹೇಳುವಾಗ ರೂಢಿಯ ಅರ್ಥವನ್ನು ಮೊದಲು ಹೇಳಬೇಕು" -ಎಂದರು. ಇದರಿಂದ ತೋರುತ್ತದೆ ಅವರಿಗಿದ್ದ ಕನ್ನಡ ಭಾಷಾಪರಿಚಯ ಎಷ್ಟು ನೇರವಾದದ್ದು ಎಂದು.

ಇನ್ನೊಂದು ಸಂಗತಿ ಹೇಳುತ್ತೇನೆ. ಇದು ನನಗೆ ಪ್ರಾಮಾಣಿಕವಾದ ಕಡೆಯಿಂದ ತಿಳಿದುಬಂದದ್ದು. ಕೋಲಾರ ಜಿಲ್ಲೆಯ ಒಂದಾನೊಂದು ಗ್ರಾಮದಲ್ಲಿ ಒಂದು ಸಂಸ್ಕೃತ

ಪಾಠಶಾಲೆ ಇತ್ತು. ಅದಕ್ಕೆ ಸರಕಾರವು ಸಹಾಯದ್ರವ್ಯ (Grant) ಕೊಡುತ್ತಿತ್ತು. ಆ ಕಾಲದ ಇನ್‌ಸ್ಪೆಕ್ಟರು ಆ ಪಾಠಶಾಲೆಯನ್ನು ತನಿಖೆಮಾಡಿ ಅದು ತೃಪ್ತಿಕರವಾಗಿ ಕೆಲಸ ನಡಸುತ್ತಿಲ್ಲವೆಂದೂ ಅದಕ್ಕೆ ಸಲ್ಲುತ್ತಿದ್ದ ಸಹಾಯದ್ರವ್ಯವನ್ನು ರದ್ದುಮಾಡಬಹುದೆಂದೂ ಶಿಫಾರಸು ಮಾಡಿದರು. ಇದನ್ನು ಭಾಭಾರವರು ಸರಕಾರಕ್ಕೆ ಕಳುಹಿಸುವ ಸಮಯದಲ್ಲಿ ಅದರ ಮೇಲೆ ತಾವು ಒಂದು ಟೀಕನ್ನು ಬರೆದರು: ಸಹಾಯದ್ರವ್ಯವನ್ನು ನಿಲ್ಲಿಸತಕ್ಕದ್ದಲ್ಲವೆಂದು ಅವರ ಶಿಫಾರಸು. ಆ ಟೀಕು ಸ್ವಾರಸ್ಯವುಳ್ಳದ್ದು, ಹೀಗೆ:

1. ಇನ್‌ಸ್ಪೆಕ್ಟರು ಪಾಠಶಾಲೆಯಲ್ಲಿ ವೇಳಾನಿಯಮವಿಲ್ಲವೆಂದು ದೂರು ಮಾಡಿದ್ದಾರೆ. ಆದರೆ ಸರಕಾರದವರು ಈ ಪಾಠಶಾಲೆಗೆ ಗಡಿಯಾರಗಳನ್ನು ಕೊಟ್ಟಿಲ್ಲ. ಹಳ್ಳಿಗರು ಮಾಮೂಲಿನಂತೆ ವೇಳೆ ಇಟ್ಟುಕೊಂಡಿದ್ದಾರೆ.
2. ಪಾಠಶಾಲೆಯಲ್ಲಿ ವಿದ್ಯಾರ್ಥಿಗಳಲ್ಲದ ಇತರರು ಯಾರು ಯಾರೋ ಇರುತ್ತಾರಂತೆ. ಇರಲಿ. ಆ ಇತರರಿಗೂ ಒಂದೆರಡು ಸಂಸ್ಕೃತ ಶಬ್ದ ಕಿವಿಯ ಮೇಲೆ ಬಿದ್ದರೆ ಅದು ಅವರಿಗೆ ಲಾಭವಲ್ಲದೆ ನಷ್ಟವೇನೂ ಅಲ್ಲ. ಅದೂ ಒಂದು ಬಗೆಯ ವಿದ್ಯಾಪ್ರಚಾರವೇ.
3. ಶಾಸ್ತ್ರಿಗಳು ಮಧ್ಯಾಹ್ನ ಎರಡು ಘಂಟೆಯಾದರೂ ಪಾಠ ಹೇಳುತ್ತಲೇ ಇರುತ್ತಾರಂತೆ. ಹಾಗಿದ್ದರೆ ಒಳ್ಳೆಯದೇ ಆಯಿತಲ್ಲ! ಅವರು ವೈದಿಕ ಬ್ರಾಹ್ಮಣರು, ಹವ್ಯ ಕವ್ಯ ಕರ್ಮಗಳನ್ನಿಟ್ಟುಕೊಂಡಿದ್ದಾರೆ. ಆ ಕರ್ತವ್ಯ ಹೆಚ್ಚಾದಾಗ ಪಾಠವನ್ನು ಸಂಕೋಚ ಮಾಡುವುದಕ್ಕೂ ಬಿಡುವಾಗಿದ್ದಾಗ ಪಾಠ ಬೆಳಸುವುದಕ್ಕೂ ಸರಿಹೋಯಿತು.
4. ಈ ದೇಶದಲ್ಲಿ ವಿದ್ಯಾಪ್ರಚಾರ ನಡೆಯಬೇಕೆಂದು ಸರಕಾರಕ್ಕೆ ಅಪೇಕ್ಷೆಯಿದ್ದಲ್ಲಿ, ನಾವು ವೈದಿಕ ಬ್ರಾಹ್ಮಣರನ್ನು ತುಂಬ ಕಟ್ಟುನಿಟ್ಟಿನಿಂದ ನೋಡಲಾಗದು. ಒಟ್ಟಿನಲ್ಲಿ ಅವರು ನಾಲ್ಕು ಮಂದಿಯನ್ನು ತಯಾರುಮಾಡುತ್ತಿದ್ದಾರೆಯೆ? ಊರಿನ ಜನ ಅವರ ಕೆಲಸದ ವಿಷಯದಲ್ಲಿ ಆದರವಿಟ್ಟುಕೊಂಡಿದ್ದಾರೆಯೆ? ಇಷ್ಟೇ ನಮಗಿರುವ ಪ್ರಶ್ನೆ. ಈ ಎರಡು ಪ್ರಶ್ನೆಗಳಿಗೂ ಪ್ರಸಕ್ತ ಪಾಠಶಾಲೆಯ ವಿಷಯದಲ್ಲಿ ಬಂದಿರುವ ಉತ್ತರ ಸಮಾಧಾನಕರವಾಗಿದೆ. ಆದ್ದರಿಂದ ಸಹಾಯದ್ರವ್ಯ ನಿಲ್ಲಿಸತಕ್ಕದ್ದಲ್ಲ.

ಸುಮಾರು ೧೯೩೦ನೆಯ ಇಸವಿ.ಎಚ್.ಜೆ.ಭಾಭಾರವರು ಯಾವುದೋ ಕಾರಣದಿಂದ-ಬಹುಶಃ ತಾತಾ ವಿಜ್ಞಾನಮಂದಿರದ ಕಾರ್ಯಕ್ಕೋಸ್ಕರ ಬೆಂಗಳೂರಿಗೆ ದಯಮಾಡಿ ವೆಸ್ಟ್ ಎಂಡ್ ಹೊಟೇಲಿನಲ್ಲಿ ಇಳಿದುಕೊಂಡಿದ್ದರು. ಈ ಸಂದರ್ಭ ಪ್ರೊ ॥ ವೆಂಕಟನಾರಣಪ್ಪನವರಿಗೆ ಹೇಗೋ ತಿಳಿದು ಬಂತು. ಅವರು ಉತ್ಸಾಹಭರಿತರಾದರು. ಆ ಸುಮಾರಿನಲ್ಲಿ ಬೆಂಗಳೂರು ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘವು ಒಂದು ಗ್ರಂಥವನ್ನು ಪ್ರಕಾಶಪಡಿಸುವುದರಲ್ಲಿತ್ತು. ವೆಂಕಟನಾರಣಪ್ಪನವರು ಸಂಘದ ಅಧ್ಯಕ್ಷರು. ಸಂಘವು ಪ್ರಕಟಿಸಲಿದ್ದ ಗ್ರಂಥದ ಮೊಟ್ಟಮೊದಲನೆಯ ಪ್ರತಿಯನ್ನು ಭಾಭಾ ಸಾಹೇಬರಿಗೆ

ಸಮರ್ಪಿಸತಕ್ಕದ್ದೆಂದು ವೆಂಕಟನಾರಣಪ್ಪನವರ ಯೋಚನೆ. ಅದನ್ನು ಇತರರು ಅನುಮೋದಿಸಿದ್ದು ಸ್ವಾಭಾವಿಕ ತಾನೆ? ಅದರಂತೆ ವೆಂಕಟನಾರಣಪ್ಪನವರು, ವೆಂಕಣ್ಣಯ್ಯನವರು, ವಾಸುದೇವಯ್ಯನವರು, ನಾನು-ವೆಸ್ಟ್‌ಎಂಡ್ ಹೋಟೇಲಿಗೆ ಹೋದೆವು. ಆಗ ಕಂಡೆ ಭಾಭಾ ಸಾಹೇಬರಿಗೆ ವಾಸುದೇವಯ್ಯನವರ ವಿಷಯದಲ್ಲಿ ಎಷ್ಟು ಗೌರವವೆಂಬುವನ್ನು. ವೆಂಕಟನಾರಣಪ್ಪನವರು ಪುಸ್ತಕವನ್ನು ಭಾಭಾಸಾಹೇಬರ ಕೈಯಲ್ಲಿಟ್ಟರು. ಭಾಭಾರವರು ಗ್ರಂಥವನ್ನು ತೆಗೆದು ಆಲ್ಲಲ್ಲಿ ಓದಿ ತಮ್ಮ ಮೆಚ್ಚಿಕೆಯನ್ನು ಸೂಚಿಸಿದರು. ಸಂಘ ಮಾಡುತ್ತಿದ್ದ ಕಾರ್ಯಕ್ಕಾಗಿ ತಮ್ಮ ಅಭಿನಂದನೆ ಹೇಳಿದರು.

ಭಾಭಾರವರ ಕನ್ನಡ ಅಭಿಮಾನ ಅತಿಶಯವಾದದ್ದು.

ಭಾಭಾ ಸಾಹೇಬರು ಎಂ.ಎ. ರಾಮಾನುಜಯ್ಯಂಗಾರ್ಯರ ಸಾಹಿತ್ಯ ಕಾರ್ಯದ ವಿಷಯದಲ್ಲಿ ಸಹಾನುಭೂತಿ ತೋರಿದ್ದು ಸ್ವಾಭಾವಿಕವಾಗಿಯೇ ಇದೆ. ಭಾಭಾರವರು ಕೊಟ್ಟ ಪ್ರೋತ್ಸಾಹದಿಂದ ಕಾವ್ಯಮಂಜರಿ, ಕಾವ್ಯ ಕಲಾನಿಧಿ ಪತ್ರಿಕೆಗಳು ಕೆಲವು ವರ್ಷ ನಡೆಯುವುದು ಸಾಧ್ಯವಾಯಿತು.

ರಾಮಾನುಜಯ್ಯಂಗಾರ್ಯರನ್ನು ನಾನು ಮೊದಲು ಕಂಡಾಗ ಅವರು ವೃದ್ಧರಾಗಿದ್ದರು. ಮೇಲುಕೋಟೆಯ ಶ್ರೀ ತಿರುನಾರಾಯಣಸ್ವಾಮಿಯ ಸೇವೆಗಾಗಿ ಅಲ್ಲಿಗೆ ಬಂದಿದ್ದರು. ನಾನು ಪ್ರವರ ಹೇಳಿಕೊಂಡ ಮೇಲೆ ತುಂಬ ಸ್ನೇಹವಾತ್ಸಲ್ಯದಿಂದ ಮಾತನಾಡಿದರು.

ಅವರ ಸ್ವಂತ ರಚನೆಗಳಲ್ಲಿ ಎರಡನ್ನು ನಾನು ನೋಡಿದ್ದೇನೆ. ಒಂದು 'ಕವಿ ಸಮಯಂ' ; ಎರಡನೆಯದು 'ಪ್ರಬಂಧಮಂಜರಿ'. ಈ ಎರಡೂ ಅವರ ಕಾವ್ಯಮರ್ಮಜ್ಞಾನಕ್ಕೂ ಭಾಷಾಪಟುತ್ವಕ್ಕೂ ವಿಷಯಶೋಧನಶೀಲತೆಗೂ ನಿದರ್ಶನಗಳಾಗಿವೆ. ಕನ್ನಡ ದೇಶದ ವಿದ್ಯಾಧಿಕಾರಿ ಪ್ರಪಂಚದಲ್ಲಿಯೂ ವಾಚಕವರ್ಗದಲ್ಲಿಯೂ ಗುಣಪರಾಮರ್ಶನವಿದ್ದಿದ್ದರೆ ಆ ಗ್ರಂಥಗಳು ನಾಲ್ಕಾರು ಬಾರಿ ಪುನರ್ಮುದ್ರಿತವಾಗಿರುತ್ತಿದ್ದವು.

ಅಳಸಿಂಗರಾಚಾರ್ಯರು

ಇದೇ ವರ್ಗಕ್ಕೆ ಸೇರಿದ ಮತ್ತೊಬ್ಬ ಕನ್ನಡ ಸಾಹಿತಿಗಳು ದೇವಶಿಖಾಮಣಿ ಅಳಸಿಂಗರಾಚಾರ್ಯರು. ಇವರು ಬರೆದ 'ಚೆಲ್ವನಾರಾಯಣಶತಕಂ' ಎಂಬ ಪದ್ಯಗ್ರಂಥವು ನನಗೆ ತುಂಬ ಪ್ರಿಯವಾದದ್ದು. ಅದರ ಶೈಲಿ ಸೊಗಸಾದದ್ದು. ನಾನು ಅದರಿಂದ ಮೋಹಿತನಾಗಿ ಅವರನ್ನು ಕಣ್ಣಾರೆ ನೋಡಬೇಕೆಂದು ಬಹುಕಾಲ ಪ್ರಯತ್ನಪಟ್ಟೆ. ಆ ಯೋಗ ದೊರೆತದ್ದು ಮೇಲುಕೋಟೆಯಲ್ಲಿ-ನಾನು ಅಲ್ಲಿಗೆ ಎರಡನೆಯ ಸಾರಿಯೋ ಮೂರನೆಯ ಸಾರಿಯೋ ಹೋಗಿದ್ದಾಗ. ಆಚಾರ್ಯರು ವೃದ್ಧರಾಗಿ ಕೊಂಚ ದುರ್ಬಲರಾಗಿದ್ದರು. ಅಲ್ಲಿಯ ದೇವಸ್ಥಾನದಲ್ಲಿ ಅವರು ಸ್ವಂತವಾಗಿ ತುಲಸೀ ಅರ್ಚನೆ ಮಾಡಿಸುತ್ತಿದ್ದರು.

ಆಚಾರ್ಯರು ತುಂಬ ವಿನಯಶೀಲರು. ಮನೋವಾಕ್ಕಾಯಗಳಲ್ಲಿ ಸದ್ವೈಷ್ಣವರಾಗಿದ್ದರು. ಭಗವಚ್ಛರಣತ್ವ, ವಿದ್ಯಾಭಿಮಾನ, ಸತ್ಕಾವ್ಯೋಪಾಸನೆ-ಇವೆಲ್ಲ ಅವರ ನಡೆನುಡಿಗಳಲ್ಲಿ ಎದ್ದು ಕಾಣುತ್ತಿದ್ದವು.

ಆಚಾರ್ಯರ ಸ್ವಪ್ನವಾಸವದತ್ತ, ಪಂಚರಾತ್ರಗಳ ಅನುವಾದಗಳು ಅವರ ಕಾವ್ಯರಸಜ್ಞತೆಯನ್ನು ಎತ್ತಿತೋರಿಸುತ್ತವೆ.

ಅವರು ಮೊದಲು ಮೈಸೂರಿನಲ್ಲಿ ಉಪಾಧ್ಯಾಯರಾಗಿದ್ದರು. ಅಲ್ಲಿಂದ ಮದರಾಸಿಗೆ ತೆರಳಿದ ಬಳಿಕ ಅಲ್ಲಿಯ ಕ್ರಿಶ್ಚಿಯನ್ ಕಾಲೇಜಿನಲ್ಲಿ ಪಂಡಿತರಾಗಿದ್ದರು. ಆಗ ಅವರು ಕನ್ನಡ ಸಾಹಿತ್ಯಕ್ಕೂ ಕನ್ನಡ ಜನತೆಗೂ ಒಂದು ಮಹೋಪಕಾರವನ್ನು ಮಾಡುವುದು ಸಾಧ್ಯವಾಯಿತು. ಶ್ರೀಮದ್ರಾಮಾಯಣ, ಶ್ರೀಮನ್ಮಹಾಭಾರತ, ಶ್ರೀಮದ್ಭಾಗವತ-ಸಂಸ್ಕೃತ ಸಾಹಿತ್ಯಭಂಡಾರದ ಈ ಪ್ರಸಿದ್ಧ ರತ್ನತ್ರಯವನ್ನು ಅಳಸಿಂಗರಾಚಾರ್ಯರು ಕನ್ನಡಕ್ಕೆ ಪರಿವರ್ತನೆಮಾಡಿಕೊಟ್ಟಿದ್ದಾರೆ. ಅವರ ಭಾಷಾಂತರವು ಪ್ರಮಾಣಭೂತವಾದದ್ದು. ಗ್ರಂಥಶೈಲಿ ಪಂಡಿತಸಮ್ಮತವಾದದ್ದಾಗಿ ವಿಷಯದ ಗಾಂಭೀರ್ಯಕ್ಕೆ ತಕ್ಕಂತಿದೆ. ಕನ್ನಡದಲ್ಲಿ ವಚನರೂಪದ ರಾಮಾಯಣ, ಭಾರತ, ಭಾಗವತಗಳು ಜನರಿಗೆ ದೊರೆಯದೆ ಇದ್ದ ಕಾಲದಲ್ಲಿ ಅಳಸಿಂಗರಾಚಾರ್ಯರ ಭಾಷಾಂತರಗಳು ಪ್ರಕಟವಾದದ್ದರಿಂದ ಜನಕ್ಕೆ ಒಂದು ನಿಧಿ ದೊರಕಿದಂತಾಯಿತು.

೯

ಚ. ವಾಸುದೇವಯ್ಯನವರು

ಆರ್. ನರಸಿಂಹಾಚಾರ್ಯರ ಹೆಸರನ್ನೆತ್ತಿದೊಡನೆಯೇ ಚ. ವಾಸುದೇವಯ್ಯನವರ ಹೆಸರು ನೆನಪಿನ ಮೇಲಕ್ಕೆ ಬರುತ್ತದೆ. ಅವರಿಬ್ಬರೂ ಸಭೆ ಸಮಾರಂಭಗಳಿಗೆ ಜೊತೆಯಾಗಿ ಬರುತ್ತಿದ್ದರು. ಜೊತೆಯಲ್ಲಿ ಕೂಡುತ್ತಿದ್ದರು. ಅತಿಶಯವಾದ ಪ್ರೇಮ ಗೌರವಗಳಿದ್ದವು ಅವರಿಬ್ಬರ ನಡುವೆ. ಹುದ್ದೆಯಲ್ಲಿ ವ್ಯತ್ಯಾಸವಿತ್ತು. ವಾಸುದೇವಯ್ಯನವರು ವಿದ್ಯಾಪ್ರಚಾರ ಇಲಾಖೆಯ ಆಫೀಸಿನ ಮ್ಯಾನೇಜರ್ ಆಗಿದ್ದು ನಿವೃತ್ತರಾಗಿದ್ದರು. ವ್ಯಾಕರಣಾದಿ ಶಾಸ್ತ್ರಪಾಂಡಿತ್ಯದಲ್ಲಿಯೂ ಇಬ್ಬರಿಗೂ ವ್ಯತ್ಯಾಸವಿತ್ತು. ಆದರೆ ನರಸಿಂಹಾಚಾರ್ಯರು ಈ ವ್ಯತ್ಯಾಸಗಳನ್ನು ನೆನಪಿನಲ್ಲಿರಿಸಿಕೊಂಡಿದ್ದಂತೆ ಒಂದು ಕ್ಷಣಮಾತ್ರವೂ ಎಂದೂ ಯಾರಿಗೂ ತೋರಿರಲಿಲ್ಲ. ಸಮಾನಸ್ಕಂಧರಂತೆಯೇ ಇದ್ದರು.

ಎಸ್.ಜಿ.ನರಸಿಂಹಾಚಾರ್ಯರು, ಎಂ.ಎ. ರಾಮಾನುಜಯ್ಯಂಗಾರ್ಯರು, ರಾ. ನರಸಿಂಹಾಚಾರ್ಯರು, ದೇ ॥ ಅಳಸಿಂಗರಾಚಾರ್ಯರು-ಇವರುಗಳ ಮನೆಮಾತು ತಮಿಳು. ಅವರು ಮಂಡಯಂ ಶ್ರೀವೈಷ್ಣವ ಬ್ರಾಹ್ಮಣ ಪಂಗಡದವರು. ಚ.ವಾಸುದೇವಯ್ಯನವರು, ಎಚ್.ವಿ. ನಂಜುಂಡಯ್ಯನವರು, ಬೆಳ್ಳಾವೆ ವೆಂಕಟನಾರಣಪ್ಪನವರು. ಟಿ.ಎಸ್. ವೆಂಕಣ್ಣಯ್ಯನವರು-ಇವರುಗಳ ಮನೆಮಾತು ತೆಲುಗು.

ವಾಸುದೇವಯ್ಯನವರನ್ನು ಕುರಿತು ನಾನು ಬೇರೆಕಡೆ ಒಂದೆರಡುಸಲ ಪ್ರಸ್ತಾವಮಾಡಿದ್ದೇನೆ. ಆದರೂ ಅವರನ್ನು ಕುರಿತು ತಕ್ಕಷ್ಟು ಹೇಳಿದ್ದೆನೆಂದು ನನಗನ್ನಿಸಿಲ್ಲ. ಅವರ ಮಹಿಮೆ ಅಷ್ಟು ಘನವಾದದ್ದು, ಮತ್ತು ಬಹುಮುಖವಾದದ್ದು.

ವ್ಯಕ್ತಿಜೀವನ-ಕಲಾಕೃತಿ

ಒಂದು ಕಲಾಕೃತಿಗೂ ಅದರ ಕರ್ತನಿಗೂ ಆಂತರಂಗಿಕವಾದ ಕಾರ್ಯಕಾರಣ ಸಂಬಂಧವುಂಟೆ? ಈ ವಿಚಾರದಲ್ಲಿ ವಿಪುಲವಾಗಿ ಚರ್ಚೆ ನಡೆದಿದೆ. ಕಲಾಕರ್ತನ ಜೀವನ ಎಂಥಾದ್ದಾದರೆ ನಮಗೇನು? ಅವನು ಕೊಳಕನಾಗಲಿ, ಕುಡುಕನಾಗಲಿ, ಕೆಟ್ಟವನಾಗಲಿ ಕುಲಗೇಡಿಯಾಗಲಿ, ಅದು ನಮಗೆ ಪ್ರಸಕ್ತವಾದ ವಿಷಯವಲ್ಲ. ನಮಗೆ ಪ್ರಸಕ್ತವಾಗಿರತಕ್ಕದ್ದು ಅವನ ಕೃತಿ. ಅವನ ಕೃತಿ ನಮಗೆ ಮೆಚ್ಚಿಕೆಯಾದರೆ ಅವನ

ಅಂತರ್ಗೃಹ (Private) ಜೀವನವನ್ನು ನಾವು ಗಣಿಸಬೇಕಾಗಿಲ್ಲ. ಹೀಗೆಂಬುದು ಒಂದು ವಾದ.

ಇದಕ್ಕೆ ಪ್ರತಿಯಾದದ್ದು ಇನ್ನೊಂದು ವಾದ. ಚಿತ್ರ ಚೆನ್ನಾಗಿ ಬರೆದರೇನು? ಹಾಡು ಚೆನ್ನಾಗಿ ಹಾಡಿದರೇನು? ಕಥೆ ಸ್ವಾರಸ್ಯವುಳ್ಳದ್ದಾದರೇನು? ಇದೆಲ್ಲ ಸೊಗಸಿರಬಹುದು. ಆದರೆ ಮನೆಯ ಜೀವನ ಹೊಲಸಾಗಿದ್ದರೆ ಅಂಥವನ ಕಲಾಕೃತಿಗೆ ಹೆಚ್ಚು ಬೆಲೆ ಸಲ್ಲಲಾರದು. ಇದು ಒಂದು ವಾದ.

ಈ ವಾದಗಳಲ್ಲಿ ಒಂದು ಭಾಗವನ್ನು ಸಾಮಾನ್ಯ ಕಲಾಕೃತಿಯ ವಿಷಯದಲ್ಲಿ ಒಪ್ಪಿದರೂ ಒಪ್ಪಬಹುದು. ಕಲಾಕೃತಿಯಲ್ಲಿ ಎರಡು ಜಾತಿಗಳುಂಟು: ಒಂದು ಸಾಮಾನ ಮನೋರಂಜನೆಯದು; ಇನ್ನೊಂದು ಜೀವಸ್ಪರ್ಶಿಯಾದದ್ದು. ಮನೋರಂಜನಪ್ರಧಾನವಾದ ಕಲಾಕೃತಿಯ ಕರ್ತನು ಮಡಿಯವನೋ ಮೈಲಿಗೆಯವನೋ, ಅದು ನಮಗೆ ಅಷ್ಟು ಅವಶ್ಯವಲ್ಲ. ಆದರೆ ಯಾವ ಕೃತಿಯಿಂದ ನಾವು ಒಂದು ಜೀವಪರಿಷ್ಕರಣವನ್ನು ಅಪೇಕ್ಷಿಸುತ್ತೇವೋ ಆ ಕಲಾಕೃತಿಯನ್ನು ರಚಿಸಿದವನು ತಪಸ್ವಿಯಾಗಿರಬೇಕು. ‘ಮೇಘ ಸಂದೇಶ’ ವನ್ನು ಬರೆದವನು ಎಂಥವನೋ ನಾವು ಕೇಳಬೇಕಾಗಿಲ್ಲ. ಆದರೆ ರಾಮಾಯಣವನ್ನು ಬರೆದಾತನು-

ವಾಲ್ಮೀಕಿರ್ಭಗವಾನೃಷಿಃ ॥

ಈ ನನ್ನ ಅಭಿಪ್ರಾಯವನ್ನೊಪ್ಪುವವರು ವಾಸುದೇವಯ್ಯನವರ ವ್ಯಕ್ತಿಜೀವನಕ್ಕೂ ಅವರ ಗ್ರಂಥಕ್ಕೂ ಇರುವ ಸಾಮೀಪ್ಯಕ್ಕೆ ನಿದರ್ಶನ ಕಾಣುವರು.

ಒಂದು ಪರಿಶುದ್ಧವಾದ ಜೀವನದ ಕುಸುಮಸೌರಭವೇ ‘ಆರ್ಯಕೀರ್ತಿ’ ‘ಭೀಷ್ಮ ಚರಿತೆ’ ಗಳಂಥ ಗ್ರಂಥ. ಲೇಖಕರ ಅಂತರಂಗದ ಧ್ಯೇಯಗಳೂ ತತ್ತ್ವನಿಷ್ಠೆಗಳೂ ಅವರ ಗ್ರಂಥಗಳಲ್ಲಿ ಹೊರಹೊಮ್ಮಿರುತ್ತವೆ.

‘ಆರ್ಯಕೀರ್ತಿ’

‘ಆರ್ಯಕೀರ್ತಿ’ ಗ್ರಂಥ ಮೊದಲು ಪ್ರಕಟವಾದದ್ದು ನನ್ನ ಬಾಲ್ಯಕ್ಕೆ ಹಿಂದೆಯೇ ಎಂದು ತೋರುತ್ತದೆ. ಮೊದಲ ಸಾರಿ ಅದನ್ನು ಓದಿದವರ ಮನಸ್ಸಿನ ಮೇಲೆ ಅದರ ವಾಕ್ಯಪ್ರಭಾವವು ಒಂದು ಅದ್ಭುತವೆಂದು ತೋರಿರಬೇಕು. ಬಹುಮಂದಿ ಆ ಶೈಲಿಗೆ ಮನಸೋತು, ಅದನ್ನನುಕರಿಸಲು ಪ್ರಯತ್ನಮಾಡಿದರು. ನಾನು ಕೆಲವು ವರ್ಷಗಳ ಕಾಲ ವಿದ್ಯಾ ಇಲಾಖೆಯ ಪಂಡಿತ ಪರೀಕ್ಷೆಯಲ್ಲಿ ಪರೀಕ್ಷಕನಾಗಿದ್ದೆ. ಆಗಿನ ಪ್ರಬಂಧರಚನೆಯ ಪರೀಕ್ಷೆಯಲ್ಲಿ ಒಪ್ಪಿಸಲಾದ ಹತ್ತಾರು ಪ್ರಬಂಧಗಳನ್ನು ನೋಡಿದ್ದೇನೆ. ಇತರ ಸಂಘ ಸಂಸ್ಥೆಗಳು ಏರ್ಪಡಿಸಿದ ಅನೇಕ ಪ್ರಬಂಧಲೇಖನ ಸ್ಪರ್ಧೆಗಳಲ್ಲಿಯೂ, ಭಾಷಣ ಸ್ಪರ್ಧೆಗಳಲ್ಲಿಯೂ ತೀರ್ಪುಗಾರನಾಗಿ ಕೆಲಸಮಾಡಿದ್ದೇನೆ. ಈ ನನ್ನ ಅನುಭವಗಳಲ್ಲಿ ನನಗೆ ಚೆನ್ನಾಗಿ ಕಣ್ಣಿಗೆ ಬಂದಿದೆ ವಾಸುದೇವಯ್ಯನವರ ಶೈಲಿ ಬಹು ಜನರ ಮನಸ್ಸನ್ನು ಹಿಡಿದಿದೆಯೆಂದು. “ಸ್ವದೇಶಪ್ರೀತಿಯನ್ನು ಗುರುತರ ಧರ್ಮವೆಂದೆಣಿಸಿ...” ಇದು ‘ಆರ್ಯಕೀರ್ತಿ’ ಯ ಪ್ರಾರಂಭ ವಾಕ್ಯ. ಎಷ್ಟೋ ಜನ ಇದನ್ನು ತಮ್ಮ ಲೇಖನ ಭಾಷಣಗಳಲ್ಲಿ ಬಳಸಿದ್ದಾರೆ. ಕೆಲವರು ಉಂಡುಂಡೆಯಾಗಿ, ಕೆಲವರು ಚೂರುಚೂರಾಗಿ. ಇಂಥ ಅನುಕರಣೆ ಸ್ವಾಭಾವಿಕವಾದದ್ದು. ಅದನ್ನು ನಾನು ಒಂದು ದೋಷವೆನ್ನಲಾರೆ. ಅದೇ ಕಲಿತು ಕೊಳ್ಳುವ ದಾರಿ. ಹೀಗೆ ವಾಸುದೇವಯ್ಯನವರು ಕನ್ನಡ ವಚನ ಶೈಲಿಗೂ ಮಾದರಿಯಾಗಿದ್ದಾರೆ

‘ಕನ್ನಡ ಬಾಲಬೋಧೆ’

ಅವರು ರಚಿಸಿದ ಗ್ರಂಥಗಳಲ್ಲಿ ಅತಿ ಮುಖ್ಯವಾದದ್ದಾಗಿ ಈಚೆಗೆ ಸರಕಾರದ ಆದರಣೆಯನ್ನು ಕಳೆದುಕೊಂಡಿರುವ ಪುಸ್ತಕ ‘ಕನ್ನಡ ಬಾಲಬೋಧೆ.’ ಈ ಪುಸ್ತಕವನ್ನು ಪಾಠಶಾಲೆಯ ಉಪಯೋಗದಿಂದ ತಪ್ಪಿಸಿದ್ದು ಭಾಷಾ ಬೋಧನೆಗೆ ಮೂಲದಲ್ಲಿ ಕೊಡಲಿಯಿಟ್ಟಂತಾಗಿದೆ. ಯಾರಮೇಲಿನ ದ್ವೇಷಾಸೂಯೆಗಳೋ ಇನ್ನಾರಮೇಲೋ ಬಿದ್ದು ನಷ್ಟವು ದೇಶದ ಬಾಲ ವಿದ್ಯಾರ್ಥಿಗಳಿಗೂ ಭಾಷೆಗೂ ತಪ್ಪದ್ದಾಗಿದೆ.

ಬೆಂಗಳೂರು ಸೆಂಟ್ರಲ್ ಕಾಲೇಜಿನ ಮೊದಮೊದಲಿನ ಬಿ. ಎ. ಪದವೀಧರರಲ್ಲಿ ಶ್ರೀನಿವಾಸರಾಯರೆಂಬವರೊಬ್ಬರು. ಇವರು ಕೆಲವು ಕಾಲ ಉಪಾಧ್ಯಾಯರಾಗಿದ್ದು ಬಳಿಕ ಬಿ.ಎಲ್. ಪ್ಯಾಸ್‌ಮಾಡಿ ನೆಲ್ಲೂರಿನಲ್ಲಿ ವಕೀಲರಾಗಿದ್ದರು. ಮೊದಮೊದಲಿನ ‘ಕನ್ನಡ ಬಾಲಬೋಧೆ’ ಯನ್ನು ರಚಿಸಿದವರಲ್ಲಿ ಒಂದು ಭಾಗದ ಲೇಖಕರು ಈ ಶ್ರೀನಿವಾಸರಾಯರು. ಇನ್ನೊಂದು ಭಾಗದ ಲೇಖಕರು ವಾಸುದೇವಯ್ಯನವರು. ಈ ಬಾಲಬೋಧೆಗಳನ್ನು ಮೂಲೆಗೆ ತಳ್ಳಿದ್ದಕ್ಕೆ ಯಾರು ಜವಾಬ್ದಾರರೊ! ಅವರು ಯಾರಾದರಾಗಲಿ, ಅವರು ಅವಶ್ಯವಾದದ್ದನ್ನು ಮಾಡಿದವರಲ್ಲ, ಹಿತಕರವಾದದ್ದನ್ನು ಮಾಡಿದವರೂ ಅಲ್ಲ; ಆಕಾರಣವಾಗಿ ಮಲ್ಲಿಗೆಯನ್ನು ಆಚೆಗೆ ನೂಕಿ ಅದರ ಜಾಗದಲ್ಲಿ ಲಾಂಟಾನಾ ಹೂವನ್ನು ತಂದಿಟ್ಟವರು.

ಶುದ್ಧ ಭಾಷಾಭಿಮಾನಿಗಳು ವಾಸುದೇವಯ್ಯನವರ ‘ಬಾಲಬೋಧೆ’ ಯನ್ನೂ ಎಸ್.ಜಿ. ನರಸಿಂಹಾಚಾರ್ಯರ ‘ಪದ್ಯಸಂಗ್ರಹ’, ‘ಪದ್ಯಸಾರ’ ಗಳನ್ನೂ ವಿದ್ಯಾ ಇಲಾಖೆಯಲ್ಲಿ ಅವಶ್ಯ ಪಠ್ಯಪುಸ್ತಕಗಳಾಗುವಂತೆ ಮಾಡಬೇಕೆಂದು ನಾನು ಕೈಮುಗಿದು ಬೇಡುತ್ತೇನೆ.

ಮಿತ್ರವರ್ಗ

ವಾಸುದೇವಯ್ಯನವರು ವಿಶ್ವೇಶ್ವರಯ್ಯನವರಿಗೆ ಮೇಷ್ಟರಾಗಿದ್ದರಂತೆ. ವಿಶ್ವೇಶ್ವರಯ್ಯನವರು ಆಗಾಗ ಅವರ ಮನೆಗೆ ಹೋಗಿ ಯೋಗಕ್ಷೇಮ ವಿಚಾರಿಸಿಕೊಂಡು ಬರುತ್ತಿದ್ದರು. ನನ್ನನ್ನೂ ಒಂದೆರಡು ಸಲ ಕೇಳಿದ್ದು ಜ್ಞಾಪಕವಿದೆ, ವಾಸುದೇವಯ್ಯನವರು ಹೇಗಿದ್ದಾರೆಂದು.

ವಿದ್ಯಾ ಇಲಾಖೆಯ ಅಧ್ಯಕ್ಷರಾಗಿ ವಾಸುದೇವಯ್ಯನವರಿಗೆ ಮೇಲಧಿಕಾರಿಯಾಗಿದ್ದ ಎಚ್.ಜೆ. ಭಾಭಾರವರು ವಾಸುದೇವಯ್ಯನವರಲ್ಲಿಟ್ಟಿದ್ದ ಪ್ರೀತಿ ಗೌರವಗಳನ್ನು ನಾನು ಕಣ್ಣಾರ ಕಂಡಿದ್ದೇನೆ. ಭಾಭಾ ಸಾಹೇಬರು ವಾಸುದೇವಯ್ಯನವರ ಜನ್ಮದಿನವನ್ನು ಗುರುತುಮಾಡಿರಿಸಿಕೊಂಡು ಪ್ರತಿವರ್ಷವೂ ಆ ದಿವಸ ಅವರ ಕೈಗೆ ತಲುಪುವಂತೆ ಒಂದು ನೂರು ರೂಪಾಯಿಗಳನ್ನು ಕಳುಹಿಸುತ್ತಿದ್ದರಂತೆ.

ಸರ್ ಎಂ.ಎನ್. ಕೃಷ್ಣರಾಯರವರಿಗೂ ವಾಸುದೇವಯ್ಯನವರಲ್ಲಿ ತುಂಬ ಭಕ್ತಿಯಿತ್ತು.

ಡೆಪ್ಯುಟಿ ಇನ್‌ಸ್ಪೆಕ್ಟರ್ ಜನರಲ್ ಆಗಿದ್ದ ಬಿ. ದಾಸಪ್ಪನವರಿಗೂ ನನಗೂ ಗುರುಶಿಷ್ಯರಂತೆ ಭಾವನೆಯಿತ್ತು. ಭಾನುವಾರ ಭಾನುವಾರವೂ ಮಧ್ಯಾಹ್ನ ಎರಡು ಘಂಟೆಗೆ ನಾನು ದಾಸಪ್ಪನವರ ಮನೆಗೆ ಹೋಗಬೇಕು. ತಿಂಡಿ ಕಾಫಿ ಆದಮೇಲೆ ಷೇಕ್‌ಸ್ಪಿಯರ್ನಿಂದಲೋ ಗಿಬ್ಬನ್ನನ ಚರಿತ್ರಗ್ರಂಥದಿಂದಲೋ ಕೆಲವು ಭಾಗವನ್ನು ನಾನು ಅವರಿಗೆ ಓದಬೇಕು. ಅದು ನಾಲ್ಕು-ನಾಲ್ಕೂವರೆ ಘಂಟೆಯವರೆಗೆ. ಬಳಿಕ ನಾವಿಬ್ಬರೂ ಅವರ ಗಾಡಿಯಲ್ಲಿ ಮಲ್ಲೇಶ್ವರಕ್ಕೆ ವಾಸುದೇವಯ್ಯನವರ ಮನೆಗೆ ಹೋಗಬೇಕು. ಅಲ್ಲಿ ಸಂಜೆ ಆರು-ಆರೂವರೆ ಘಂಟೆಯವರೆಗೆ. ವಾಸುದೇವಯ್ಯನವರ ಮನೆಯಲ್ಲಿ ಕುರ್ಚಿ ಸೋಫ ಮೊದಲಾದ ಪರಿಕರಗಳಿಗೆ ಅಭಾವ. ನಾವು ಸಾಮಾನ್ಯವಾಗಿ ಮನೆಯ ಪೂರ್ವಪಾರ್ಶ್ವದಲ್ಲಿದ್ದ ಖಾಲಿ ಜಾಗದಲ್ಲಿ ಯಾವುದೋ ಗಿಡಗಳ ನೆರಳಿನಲ್ಲಿ ಬಟ್ಟೆಯೊಗೆಯುವ ಬಂಡೆಗಳ ಮೇಲೆಯೋ ಕಲ್ಲು ದಿಮ್ಮಿಗಳ ಮೇಲೆಯೋ ಕೂಡುತ್ತಿದ್ದೆವು. ವಾಸುದೇವಯ್ಯನವರಿಗೆ ಅತ್ಯಂತ ಪ್ರಿಯರಾದ ಚೀಫ್ ಇಂಜಿನಿಯರ್ ಶರಭೋಜಯ್ಯಂಗಾರ್ಯರೂ ಇರುತ್ತಿದ್ದರು. ಎಂ.ಎನ್.ಕೃಷ್ಣರಾಯರೂ ಆಗಾಗ ನಮ್ಮೊಡನೆ ಸೇರುತ್ತಿದ್ದದ್ದುಂಟು ಅಲ್ಲಿ. ಹೀಗೆ ಐದಾರು ಮಂದಿ ಮಾತುಕಥೆಯಲ್ಲಿ ಕಾಲ ಕಳೆಯುತ್ತಿದ್ದೆವು. ವಾಸುದೇವಯ್ಯನವರು ಪ್ರಾಸ್ತಾವಿಕವಾಗಿ ಭಾರತದಿಂದಲೋ ಭಾಗವತದಿಂದಲೋ ಒಂದೆರಡು ಪದ್ಯ ಉದಾಹರಿಸಿ ನಮ್ಮ ಮಾತಿಗೆ ಕಳೆ ಕೊಡುತ್ತಿದ್ದರು.

ವಾಸುದೇವಯ್ಯನವರು ಬಹುಮಾತಿನವರಲ್ಲ; ಸಂದರ್ಭಕ್ಕೆ ತಕ್ಕಂತೆ ಮಿತವಾಗಿ ಒಂದೆರಡು ಮಾತನಾಡುವರು. ಪ್ರಸಕ್ತ ವಿಷಯದಲ್ಲಿ ಅಡಗಿದ ತತ್ತ್ವದ ಮೇಲೆ ಅವರ ಗಮನ.

ಕಡೆಯ ದಿನಗಳು

ವಾಸುದೇವಯ್ಯನವರ ಅವಸಾನ ದಿನಕ್ಕೆ ಸುಮಾರು ಒಂದು ತಿಂಗಳ ಹಿಂದೆ ಅವರ ಮನೆಗೆ ಹೋಗಿದ್ದೆ. ಅವರು ಮಲಗಿದ್ದ ಮಂಚದ ಮೇಲೆ ತಾವು ಸ್ವಲ್ಪ ಹಿಂದಕ್ಕೆ ಸರಿದು ಅಲ್ಲಿಯೇ ಅವರಿಗೆ ಅಂಟಿಕೊಂಡಂತೆ ಹತ್ತಿರ ಕುಳಿತುಕೊಳ್ಳುವಂತೆ ಹೇಳಿದರು. ಅವರಿಗೆ ತೊಂಭತ್ತರ ಮೇಲಾಗಿತ್ತು ವಯಸ್ಸು. ಮೈಯೆಲ್ಲ ತಲೆಯಿಂದ ಕಾಲಿನವರೆಗೂ ಆಗತಾನೆ ತೊಳೆದಂತೆ ಚೊಕ್ಕಟವಾಗಿತ್ತು. ಅವರ ಮೈ ಚಿನ್ನದ ಬಣ್ಣ. ಮನಸ್ಸಿಗೆ ಉದ್ರೇಕವಾದಾಗ ಅದು ಅಪರಂಜಿ ಬಣ್ಣಕ್ಕೆ ತಿರುಗುವುದು. ಕೊಳಕಿನ ಸೂಚನೆ ಮೈಮೇಲಾಗಲೀ ಬಟ್ಟೆಗಳ ಮೇಲಾಗಲೀ ರವೆಯಷ್ಟೂ ಇರಲಿಲ್ಲ. ಶುಭ್ರವಾಗಿ ತೇಜೋವಿಶಿಷ್ಟವಾಗಿದ್ದ ಮೂರ್ತಿ. ಲೋಕಾಭಿರಾಮವಾಗಿ ಮಾತನಾಡುತ್ತಿದ್ದರು. ನಾನು ಒಂದು ಸಾಹಸ ಮಾಡಿದೆ:- "ನಿಮಗೆ ಕಾಲ ಹೇಗೆ ಕಳೆಯುತ್ತದೆ?" -ಎಂದು ಕೇಳಿದೆ. ಅವರು ಹೇಳಿದರು:

"ಅದೇನು ಕಷ್ಟ? ರಾತ್ರಿಯೆಲ್ಲ ಆಗಾಗ ಎಚ್ಚರವಾಗುತ್ತದೆ. ಆಗ ಗಡಿಯಾರದ ಸದ್ದು ಕೇಳಿಸುತ್ತದೆ. ನಾಲ್ಕು ಘಂಟೆ ಹೊಡೆದಾಗ 'ಓಹೋ-ಇನ್ನೇನು ಕಾಫಿ ಬಂದೀತು' ಎಂದುಕೊಳ್ಳುತ್ತೇನೆ. ಒಂದೆರಡು ಕ್ಷಣ ದೇವರ ಸ್ಮರಣೆ ಮಾಡುವ ಹೊತ್ತಿಗೆ ಯಾರಾದರೊಬ್ಬರು ಬಿಸಿನೀರು ತರುತ್ತಾರೆ. ಬಚ್ಚಲವರೆಗೆ ಕರೆದುಕೊಂಡು ಹೋಗುತ್ತಾರೆ. ಮುಖ ಪ್ರಕ್ಷಾಳನವಾದ ಮೇಲೆ ಬಿಸಿ ಬಿಸಿ ಕಾಫಿ. ಹತ್ತು ನಿಮಿಷ ಸುಧಾರಿಸಿಕೊಂಡು ಬಳಿಕ ಶ್ರೀ ವಿಷ್ಣು ಸಹಸ್ರನಾಮ ಹೇಳುತ್ತೇನೆ. ಅಲ್ಲಿಗೆ ಆರು ಘಂಟೆಯಾಗುತ್ತದೆ. ಆಮೇಲೆ ಆದಿತ್ಯ ಹೃದಯ ಹೇಳುತ್ತೇನೆ. ಅಷ್ಟರೊಳಗೆ ಮನೆಯವರು ಬಂದು ವಿಚಾರಿಸಿಕೊಳ್ಳುತ್ತಾರೆ. ಬಳಿಕ ಸ್ನಾನ. ಆ ವೇಳೆಗೆ ಏಳೂವರೆ ಎಂಟು ಘಂಟೆಯಾಗುತ್ತದೆ. ಅನಂತರ ಹಾಸಿಗೆಯ ಮೇಲೆ ಮಲಗಿಕೊಂಡೇ ಸಂಧ್ಯಾವಂದನೆ ಹೇಳಿ ಒಂದುನೂರು ಗಾಯತ್ರಿ ಮಾಡುತ್ತೇನೆ. ಕುಳಿತು ಸಂಧ್ಯಾವಂದನೆ ಮಾಡಲಾರೆ. ಈ ದುರ್ಬಲ ಸಂಧ್ಯಾವಂದನೆ ಮುಗಿಯುವ ವೇಳೆಗೆ ಇನ್ನೊಂದು ಕಾಫಿ ಬರುತ್ತದೆ. 'ಈ ಹೊತ್ತು ಏನು ಅಡಿಗೆ?' ಎಂದು ವಿಚಾರಿಸುತ್ತೇನೆ, ಬಾಯಿ ಚಪ್ಪರಿಸಿಕೊಂಡು. ಊಟದ ಹೊತ್ತಿನವರೆಗೂ ಪಾಕ ಪರಿಶವಣೆಗಳ ಯೋಚನೆ. ಅಷ್ಟರಲ್ಲಿ ನಮ್ಮ ಶರಭೋಜಯ್ಯಂಗಾರ್ಯರೋ ಬೇರೆ ಸ್ನೇಹಿತರೋ ಬರುತ್ತಾರೆ. ಹನ್ನೊಂದು ಘಂಟೆಯವರೆಗೆ ಮಾತುಕಥೆ ನಡೆಯುತ್ತದೆ. ಆಮೇಲೆ ಊಟ.

"ಊಟವಾದ ಮೇಲೆ ಪಕ್ಕದ ಗೂಡಿನಲ್ಲಿರುವ ಪುಡಿ ಒಂದು ಚಮಚದಷ್ಟು ಬಾಯಲ್ಲಿ ಹಾಕಿಕೊಂಡು ನೀರು ಕುಡಿಯುವುದು. ಇದು ಜೀರ್ಣಕ್ಕಾಗಿ. ಆಮೇಲೆ ಹತ್ತು ಹದಿನೈದು ನಿಮಿಷ ಬಿಟ್ಟು ಇನ್ನೊಂದು ಪುಡಿ-ಇದು ಮೂಲವ್ಯಾಧಿಯ ಉಪಶಮನಕ್ಕಾಗಿ. ಆಮೇಲೆ

ಅರ್ಧ ಮುಕ್ಕಾಲು ಘಂಟೆ ವಿಶ್ರಾಂತಿ. ಸುಮಾರು ಒಂದು ಘಂಟೆಗೆ ಎಚ್ಚರವಾಗುತ್ತದೆ. ಆಗ ಮಹಾಭಾರತದಿಂದ ಎರಡು ಮೂರು ಸಂಧಿ ಹೇಳಿಕೊಳ್ಳುವುದು, ಸ್ತೋತ್ರಪಾಠ ಹೇಳುವುದು.

"ಮೂರು ಘಂಟೆ ಸುಮಾರಿಗೆ ಸ್ವಲ್ಪ ಕಾಫಿ ಅಥವಾ ನೀರು. ಆ ವೇಳೆಗೆ ಸ್ನೇಹಿತರು ಬರುತ್ತಾರೆ. ಆ ಸುದ್ದಿ ಈ ಸುದ್ದಿ ತರುತ್ತಾರೆ. ಸಂಜೆ ಆರು ಘಂಟೆಯವರೆಗೂ ಹೀಗೆ ಕಾಲ ಕಳೆಯುತ್ತದೆ. ಬಳಿಕ ಸಾಯಂ ಸಂಧ್ಯಾವಂದನೆಯ ನೆಪ. ಹಸಿವಾದರೆ ಒಂದು ಬಟ್ಟಲು ಹಾಲು. ಆಗದಿದ್ದರೆ ಒಂದು ಲೋಟ ನೀರು. ಮತ್ತೆ ಕಣ್ಣು ಮುಚ್ಚುವುದು. ನಿದ್ರೆ ಬಂದಷ್ಟು ಬರಲಿ. ಬಾರದಿದ್ದಾಗ ನಾನು ತಿಂದಿರುವ ತಿಂಡಿಗಳನ್ನು ಕುರಿತು ಧ್ಯಾನ ಮಾಡಿ ಬಾಯಿ ಚಪ್ಪರಿಸುವುದು. ಮಾರನೆಯದಿನ ಸಿಕ್ಕಬಹುದಾದ ತಿಂಡಿ ತೀರ್ಥಗಳನ್ನು ಕುರಿತು ಚಿಂತಿಸಿ ಸಂತೋಷಪಡುವುದು. ಇವೆರಡೂ ಬೇಸರವಾದರೆ ಇದ್ದೇ ಇದೆ, ರಾಮ-ಕೃಷ್ಣ-ಗೋವಿಂದ.

"ಹೀಗೆ ಕಳೆಯುತ್ತಿದೆ ಸ್ವಾಮಿ ಕಾಲ."

ಅವರೂ ನಗುತ್ತಿದ್ದರು, ಕೇಳಿದವರಿಗೂ ನಗು ಬಂತು.

ವಾಸುದೇವಯ್ಯನವರ ಜ್ಞಾಪಕಶಕ್ತಿ ಕಡೆಯವರೆಗೂ ಕುಗ್ಗದೆ, ಮಂಕು ಕವಿಯದೆ ಇತ್ತು.

ನಾನು ಹೊರಡಲು ಅಪ್ಪಣೆ ಬೇಡಿ ಎದ್ದೆ. ಅವರು "ಹೊರಡಬೇಕೆ?" ಎಂದರು. ನಾನು, ಒಂದು ವಾರ ಬಿಟ್ಟು ಮತ್ತೆ ಬರುವುದಾಗಿ ಹೇಳಿ ಹೊರಟೆ. ಹದಿನೈದಿಪ್ಪತ್ತು ದಿನಗಳಾದ ಮೇಲೆ ಅವರ ಮೊಮ್ಮಗ ಒಬ್ಬಾತ ನನ್ನ ಮನೆಗೆ ಬಂದು "ನೀವು ತಾತನಿಗೆ ಹೇಳಿದ್ದಿರಂತೆ ಮತ್ತೆ ಬರುತ್ತೇನೆಂದು. ಹದಿನೈದು ದಿವಸವಾಯಿತು ಎಂದು ಅವರು ಜ್ಞಾಪಕ ಮಾಡಿಕೊಂಡರು. ನಿಮಗೆ ತಿಳಿಸಬೇಕೆಂದು ಹೇಳಿದರು" ಎಂದ.

ಈ ಮಾತು ನನ್ನನ್ನು ಎಚ್ಚರಿಸಿತು. ನಾನು ಆ ದಿನವೇ ಮಧ್ಯಾಹ್ನದ ಮೇಲೆ ಅವರಲ್ಲಿಗೆ ಹೋದೆ. ಆ ಹದಿನೈದು ದಿನದಲ್ಲಿ ಅವರ ಸ್ಥಿತಿಯಲ್ಲಿ ಯಾವ ವ್ಯತ್ಯಾಸವೂ ನನಗೆ ಕಾಣಿಸಲಿಲ್ಲ. ಈ ಸಾರಿಯ ಮಾತು ಕೊಂಚ ಕಡಮೆಯಾಗಿತ್ತು. ನಾನು ಹದಿನೈದಿಪ್ಪತ್ತು ನಿಮಿಷ ಇದ್ದು ಹೊರಟು ಬಂದೆ. ಅನಂತರ ಐದಾರು ದಿವಸಕ್ಕೆ ಅವರ ಕಾಲ ಮುಗಿಯಿತು.

ನಿಃಸ್ಪೃಹತೆ

ವಾಸುದೇವಯ್ಯನವರ ನಿಃಸ್ಪೃಹತೆಯ ವಿಷಯದಲ್ಲಿ ನಾನು ಅನೇಕ ಉದಾಹರಣೆಗಳನ್ನು ಕೇಳಿದ್ದೇನೆ. ಅವರದು ಭಾರಿ ಕುಟುಂಬ. ಬಂಧುಬಳಗ ಹೆಚ್ಚಾಗಿದ್ದರು. ಎಲ್ಲರ ಭಾರವನ್ನೂ ಅವರೇ ಹೊತ್ತಿದ್ದರು. ಒಂದು ಸಾರಿ ಯಾವುದೋ ಗೃಹಕೃತ್ಯಕ್ಕಾಗಿ ಒಬ್ಬ ವೈಶ್ಯ ಸಾಹುಕಾರನಲ್ಲಿ ಎರಡು ಸಾವಿರ ರೂಪಾಯಿ ಸಾಲ ತೆಗೆದು ತಮ್ಮ ಮನೆಯನ್ನು ಆಧಾರ ಮಾಡಿಕೊಟ್ಟಿದ್ದರು. ನಾಲ್ಕೈದು ವರ್ಷ ಕಳೆದ ಮೇಲೆ ವಾಸುದೇವಯ್ಯನವರಿಗೆ ಆ ಸಾಲ ತೀರಿಸಬೇಕೆಂದು ಮನಸ್ಸು ಬಂದಿತು. ಭಾಭಾ ಸಾಹೇಬರು ಒಂದಾನೊಂದು ತಾತಾ ಕಂಪನಿಯಲ್ಲಿ ಅವರಿಗೆ ಕೊಡಿಸಿದ್ದ ಷೇರುಗಳನ್ನು ಮಾರಿ ಆ ವೈಶ್ಯ ಸಾಹುಕಾರನಲ್ಲಿಗೆ ತೆಗೆದುಕೊಂಡು ಹೋದರು. ಆತ “ನಾನೇನು ನಿಮ್ಮನ್ನು ಅವಸರಪಡಿಸಲಿಲ್ಲವಲ್ಲ?” ಎಂದು ಉಪಚಾರ ನುಡಿದ. ವಾಸುದೇವಯ್ಯನವರು “ಋಣ ತೀರಿಸುವುದು ನನ್ನ ಕರ್ತವ್ಯ. ಅವಸರಪಡಿಸದೆ ಇರುವುದು ನಿಮ್ಮ ಒಳ್ಳೆತನ. ನೀವು ಒಳ್ಳೆಯವರೆಂದು ನಾನು ಕರ್ತವ್ಯ ಮರೆಯತಕ್ಕದ್ದಲ್ಲ. ಬಡ್ಡಿ ಎಷ್ಟಾಗಿರಬಹುದು?” -ಎಂದು ಕೇಳಿ ಆತ ಹೇಳಿದಂತೆ ಎರಡು ಸಾವಿರದ ಎಂಟುನೂರು ರೂಪಾಯಿಗಳನ್ನು ಪಾವತಿ ಮಾಡಿದರು. ಆತ ಅವರಲ್ಲಿ ಅತ್ಯಂತ ಗೌರವವನ್ನಿಟ್ಟಿದ್ದವನು; ಒಂದು ತಟ್ಟೆಯಲ್ಲಿ ತಾಂಬೂಲವನ್ನಿರಿಸಿ ಅದರಲ್ಲಿ ಬಡ್ಡಿ ಎಂಟುನೂರು ರೂಪಾಯಿಗಳನ್ನಿಟ್ಟು ಅದನ್ನು ಸ್ವೀಕರಿಸಬೇಕೆಂದು ಬೇಡಿಕೊಂಡ.

ಮನೋದಾರ್ಢ್ಯ

ವಾಸುದೇವಯ್ಯನವರು ನನಗೆ ಹೇಳಿದ ಸಂಗತಿಗಳಲ್ಲಿ ಇನ್ನೊಂದು ಇದು.

ಅವರನ್ನು ಬಾಲ್ಯದಲ್ಲಿ ಬೆಳೆಸಿದವರು ಅವರ ಅತ್ತಿಗೆಯಂತೆ. ತಮ್ಮ ತಾಯಿ ತೀರಿ ಹೋಗಿದ್ದದ್ದರಿಂದ ಈ ಅತ್ತಿಗೆಯೇ ತಾಯಿಯಾಗಿದ್ದರು. ಈಕೆ ಮುದುಕಿ, ತನಗೆ ಅವಸಾನ ಕಾಲ ಸಮೀಪಿಸಿದಾಗ ಆಕೆ ವಾಸುದೇವಯ್ಯನವರನ್ನು ಬಳಿಗೆ ಕರೆದು ಕೇಳಿದರು:

“ಅಪ್ಪಾ, ನನಗೆ ಒಂದು ಉಪಕಾರ ಮಾಡುತ್ತೀಯಾ?"

ವಾಸುದೇವಯ್ಯನವರು : “ಅಮ್ಮ, ನನ್ನ ಬದುಕೆಲ್ಲ ನಿನ್ನದು. ನಾನು ಏನು ಮಾಡಿದರೆ ನೀನು ತೋರಿಸುವ ಅಭಿಮಾನ ವಾತ್ಸಲ್ಯಗಳ ಋಣ ತೀರೀತು? ನೀನು ಏನು ಹೇಳಿದರೆ ಅದನ್ನು ಮಾಡಲು ನಾವೆಲ್ಲ ಸಿದ್ಧರಾಗಿದ್ದೇವೆ."

ವಾಸುದೇವಯ್ಯನವರಿಗೂ ಅಲ್ಲಿದ್ದ ಇತರರಿಗೂ ಕಣ್ಣುಗಳಲ್ಲಿ ನೀರು ತುಂಬಿತು. ಆಕೆ ಅಷ್ಟು ಯಾತನೆ ಪಡುತ್ತಿದ್ದರು. ಆಕೆ ಹೇಳಿದರು:

“ಅಪ್ಪಾ, ನಾಳೆ ಗೋಕುಲಾಷ್ಟಮಿ. ನಾನಾದರೋ ಏಳಲಾರೆ. ಸ್ನಾನವಿಲ್ಲ, ಪೂಜೆಯಿಲ್ಲ ಹೀಗೆ ಬಿದ್ದಿದ್ದೇನೆ. ನಾಳೆ ನನಗೆ ಹೊಟ್ಟೆಯಲ್ಲಿ ಸಂಕಟ ಇನ್ನೂ ಹೆಚ್ಚಬಹುದು. ನೀವು ಯಾರೂ ಅದಕ್ಕೋಸ್ಕರ ಕನಿಕರಪಟ್ಟು ನನಗೆ ಹಾಲನ್ನೋ ಹಣ್ಣನ್ನೋ ಬಾಯಿಗೆ ಹಾಕಬಾರದು. ನಾಳೆ ಬೆಳಗ್ಗೆ ನಾನು ಬದುಕಿದ್ದರೆ ಸ್ನಾನ ಮಾಡಿಸಿ ದೇವರ ತೀರ್ಥ ಬಾಯಿಗೆ ಹಾಕಿರಿ. ಅಷ್ಟೇ ನನಗೆ ಬೇಕಾದದ್ದು.”

ಪೂರ್ವಿಕರ ಮನೋದಾರ್ಢ್ಯಕ್ಕೆ ಉದಾಹರಣೆಯಾಗಿ ವಾಸುದೇವಯ್ಯನವರು ಇದನ್ನು ಹೇಳಿದರು. ಇಂಥ ಮನೋದಾರ್ಢ್ಯವನ್ನೂ ಪವಿತ್ರ ಪ್ರಜ್ಞೆಯನ್ನೂ ಕಂಡು ಅನುಭವಿಸಿದ್ದವರು ‘ಭೀಷ್ಮಚರಿತೆ’ ಯನ್ನು ಬರೆಯುವುದರಲ್ಲಿ ಉತ್ಸುಕರಾದದ್ದು ಸ್ವಾಭಾವಿಕವೇ ಆಗಿದೆ. ಒಳ್ಳೆಯ ಬದುಕಿನಿಂದ ಒಳ್ಳೆಯ ಗ್ರಂಥ. ಭಗವದ್ಗೀತೆಯ ಹನ್ನೆರಡನೆಯ ಅಧ್ಯಾಯದ

ಅದ್ವೇಷ್ಟಾ ಸರ್ವಭೂತಾನಾಂ
ಮೈತ್ರಃ ಕರುಣ ಏವ ಚ ॥

ನಿರ್ಮಮೋ ನಿರಹಂಕಾರಃ
ಸಮದುಃಖಸುಖಃ ಕ್ಷಮೀ ॥

ಇತ್ಯಾದಿ ಶ್ಲೋಕಗಳು ವಾಸುದೇವಯ್ಯನವರಿಗೆ ಅನ್ವಯಿಸುವಂತೆ ಅನ್ವಯಾರ್ಹರಾದ ಮಹಾಪುರುಷರು ಲೋಕದಲ್ಲಿ ಬೇರೆ ಯಾರಿದ್ದಾರೋ ನಾನರಿಯೆ. ವಾಸುದೇವಯ್ಯನವರಿಗೆ ಪರಮಪ್ರಿಯವಾಗಿದ್ದ ಗ್ರಂಥ ಕುಮಾರವ್ಯಾಸ ಭಾರತ. ಅದರ ಒಂದು ಪದ್ಯ ವಾಸುದೇವಯ್ಯನವರನ್ನೇ ಕುರಿತದ್ದೆಂದೆನಿಸುತ್ತದೆ:

ಬೈಯರಾರನು ಬೈಯೆ ಕೇಳ್ವರು ।
ಅಯ್ಯ ಕೊಳಿರೆಂದೆನುತಲೀವರು ।
ಪ್ರೀಯವಚನವ ನುಡಿವರಾರಾದೊಡೆಯು ಮನ್ನಿಸುತ ।
ಮೈಯ ಮರೆವರು ಆತ್ಮಚಿಂತೆಯ- ।
ಲೊಯ್ಯನೇ ಕಣ್ದೆರೆದು-ಮುಚ್ಚುತ- ।
ಲಯ್ಯನೆನಿಪರು ಜಗಕೆ ಇದು ಸಾಧುಗಳ ಗುಣವೆಂದ ॥

೧೦

ಕನ್ನಡ ಸಾಹಿತ್ಯ ಪರಿಷತ್ತು

ನಮ್ಮ ದೇಶದ ಪ್ರಮುಖ ಸಾರ್ವಜನಿಕ ಸಂಸ್ಥೆಗಳಲ್ಲಿ ಕರ್ಣಾಟಕ ಸಾಹಿತ್ಯ ಪರಿಷತ್ತು ಒಂದು. ಕನ್ನಡ ಭಾಷೆಯನ್ನು ಪರಿಷ್ಕಾರಪಡಿಸಿ, ಕನ್ನಡ ಸಾಹಿತ್ಯವನ್ನು ಅಭಿವೃದ್ಧಿಪಡಿಸಿ, ಭಾಷೆಯೂ ಸಾಹಿತ್ಯವೂ ಇಂದಿನ ಜನಜೀವನದ ನಾನಾ ವ್ಯವಹಾರಗಳಿಗೆ ಉಪಯೋಗಕರವಾಗುವಂತೆಯೂ ವಿದ್ಯಾಸಂಸ್ಕೃತಿ ಪ್ರಚಾರಕ್ಕೆ ಪ್ರಯೋಜನಕರವಾಗುವಂತೆಯೂ, ಮಾಡುವುದು ಈ ಸಂಸ್ಥೆಯ ಉದ್ದೇಶವಾಗಿರಬೇಕೆಂಬುದು ಅದರ ಮೂಲಸ್ಥಾಪಕರ ತಾತ್ಪರ್ಯ.

ಅದರಲ್ಲಿ ರಾಜಕೀಯದ ಕೈವಾಡವೂ ಜಾತಿ ಮತಗಳ ಸ್ಪರ್ಶವೂ ಕಕ್ಷಿಪಕ್ಷಗಳ ವೈಷಮ್ಯಗಳೂ ಇರಬಾರದೆಂದು ಅವರ ನೀರಿಕ್ಷೆಯಾಗಿತ್ತು. ಆ ಕಾಲದಲ್ಲಿ ಇಂಥ ಒಡಕು ಬಿರುಕುಗಳ ಸೂಚನೆಯೂ ಇರಲಿಲ್ಲ.

ಕರ್ಣಾಟಕ ಸಾಹಿತ್ಯ ಪರಿಷತ್ತಿನ ಸ್ಥಾಪನೆಯಾದದ್ದು ೧೯೧೫ರಲ್ಲಿ. ಆ ಸಂಸ್ಥೆಯ ರೂಪ ರಚನೆಗಳು ಹೇಗಿರಬೇಕೆಂಬ ಆಲೋಚನೆ ಪ್ರಾರಂಭವಾದದ್ದು ಅಂದಿಗೆ ಎರಡು ಮೂರು ವರ್ಷಗಳ ಹಿಂದೆ. ಅದು ಮೈಸೂರು ಇಕನಾಮಿಕ್ ಕಾನ್‌ಫರೆನ್ಸ್ ಎಂಬ ಸಂಸ್ಥೆಯಲ್ಲಿ.

ಮೋಕ್ಷಗುಂಡಂ ವಿಶ್ವೇಶ್ವರಯ್ಯನವರು ಮೈಸೂರು ಸಂಸ್ಥಾನಕ್ಕೆ ಚೀಫ್ ಇಂಜಿನಿಯರ್ ಆಗಿ ಬಂದದ್ದು ೧೯೦೯ರಲ್ಲಿ. ಅವರು ಇಕನಾಮಿಕ್ ಕಾನ್‌ಫರೆನ್ಸ್ ಎಂಬ ಸಂಪದಭಿವೃದ್ಧಿ ವಿಚಾರ ಸಂಸ್ಥೆಯನ್ನು ಸ್ಥಾಪಿಸಬೇಕೆಂದು ಶ್ರೀಮನ್ಮಹಾರಾಜರವರಿಗೆ ಸಲಹೆ ಕೊಟ್ಟ ಮೇಲೆ ಆ ಸಂಸ್ಥೆ ರೂಪತಾಳಿತು. ಅದರ ಅಂಗವಾಗಿ ಮೂರು ಸಮಿತಿಗಳು ಏರ್ಪಟ್ಟಿದ್ದವು:

1. ಕಾರ್ಖಾನೆ ಕೈಗಾರಿಕೆಗಳ ಸಮಿತಿ. ಇದಕ್ಕೆ ಚೀಫ್ ಇಂಜಿನಿಯರ್ ವಿಶ್ವೇಶ್ವರಯ್ಯನವರೇ ಅಧ್ಯಕ್ಷರಾಗಿದ್ದರು.
2. ವಿದ್ಯಾ ಸಮಿತಿ.
3. ಭೂವ್ಯವಸಾಯ ಸಮಿತಿ.

ವಿದ್ಯಾ ಸಮಿತಿಯ ಅಧ್ಯಕ್ಷರು ಎಚ್.ವಿ. ನಂಜುಂಡಯ್ಯನವರು. ಕಾರ್ಯದರ್ಶಿ ವಿ. ಸುಬ್ರಹ್ಮಣ್ಯ ಅಯ್ಯರ್ ಅವರು. ಈ ವಿದ್ಯಾಸಮಿತಿಯಲ್ಲಿ ಪರ್ಯಾಲೋಚನೆಗೆ ಬಂದ

ಯೋಜನೆಗಳು ಮುಖ್ಯವಾಗಿ ಎರಡು:

1. ಮೈಸೂರು ವಿಶ್ವವಿದ್ಯಾನಿಲಯ.
2. ಕರ್ಣಾಟಕ ಸಾಹಿತ್ಯ ಪರಿಷತ್ತು.

ಪರಿಷದ್ವಿಷಯಕ ಸಮಾಲೋಚನೆ

ಸಾಹಿತ್ಯ ಪರಿಷತ್ತಿನ ರಚನೆಯ ವಿಷಯದಲ್ಲಿ ದೇಶದಲ್ಲಿ ವಿದ್ವಜ್ಜನರ ಅಭಿಪ್ರಾಯವನ್ನು ತಿಳಿದುಕೊಳ್ಳಬೇಕೆಂಬ ಉದ್ದೇಶದಿಂದ ಮೇಲೆ ಹೇಳಿದ ವಿದ್ಯಾಸಮಿತಿಯು ಕೆಲವು ಉಪನ್ಯಾಸಗಳನ್ನು ಸಂಕಲ್ಪಿಸಿತು. ಅಂಥ ಉಪನ್ಯಾಸವೊಂದು ೧೯೧೨-೧೩ರಲ್ಲಿ ನಡೆಯಿತು. ಅದು ಮೈಸೂರು ಪಟ್ಟಣದಲ್ಲಿ. ದಸರಾ ಅಧಿವೇಶನಕ್ಕಾಗಿ ಮೈಸೂರು ಪ್ರಜಾಪ್ರತಿನಿಧಿ ಸಭೆಯ ಸದಸ್ಯರು ಆಗ ಆ ಪಟ್ಟಣಕ್ಕೆ ಬಂದಿದ್ದರು. ಅದು ಸರಿಯಾದ ಕಾಲವೆಂದು ಒಂದು ಬೆಳಿಗ್ಗೆ ಮೈಸೂರಿನ ಗಾರ್ಡನ್ ಪಾರ್ಕಿನಲ್ಲಿರುವ ಡಿಸ್ಟ್ರಿಕ್ಟ್ ಆಫೀಸ್ ಕಟ್ಟಡದ ಮೇಲೆ ಸಭೆಯನ್ನು ಸೇರಿಸಿದ್ದಾಗಿತ್ತು. ಆಗ ಪ್ರಜಾಪ್ರತಿನಿಧಿ ಸಭೆಯ ಅಧಿವೇಶನ ಸೇರುತ್ತಿದ್ದದ್ದು ಅದೇ ಜಾಗದಲ್ಲಿ. ಈಗ ಹೇಳಿದ ಸಾಹಿತ್ಯ ಪರಿಷದ್ವಿಷಯಕ ಸಭೆ ಸೇರಿದಾಗ ಬಹುಮಂದಿ ಗಣ್ಯವ್ಯಕ್ತಿಗಳು ಅಲ್ಲಿ ಸೇರಿದ್ದರು. ಎಂ. ವೆಂಕಟಕೃಷ್ಣಯ್ಯನವರು, ಅಂಬಳೆ ಅಣ್ಣಯ್ಯ ಪಂಡಿತರು ಮೊದಲಾದ ಖಾಸಗಿ ಮಹಾಜನರೂ ಬಂದಿದ್ದರು. ಸರಕಾರಿ ಉದ್ಯೋಗಸ್ಥರಲ್ಲಿ ಕರ್ಪೂರ ಶ್ರೀನಿವಾಸರಾಯರು, ಕೆ.ಕೃಷ್ಣಯ್ಯಂಗಾರ್ಯರು ಬಂದಿದ್ದರು. ಉಪನ್ಯಾಸ ಬೆಳಿಗ್ಗೆ ೯ ಘಂಟೆಯಿಂದ ೧೧ರವರೆಗೆ. ಅಂದಿನ ಉಪನ್ಯಾಸಕರು ಪ್ರೊ ॥ ಬಿ.ಎಂ. ಶ್ರೀಕಂಠಯ್ಯನವರು.

ಬಿ.ಎಂ.ಶ್ರೀ ಅವರ ಉಪನ್ಯಾಸ

ನಾನು ಆಗಲೇ ಬಿ.ಎಂ.ಶ್ರೀಕಂಠಯ್ಯನವರನ್ನು ಮೊದಲ ಸಾರಿ ಕಂಡದ್ದು ಎಂದು ನನ್ನ ಜ್ಞಾಪಕ. ಅದಕ್ಕೆ ಹಿಂದೆ ಅವರ ಹೆಸರನ್ನು ಕೇಳಿದ್ದೆ. ಅವರು ಒಳ್ಳೆಯ ಸಾಹಿತ್ಯ ವಿದ್ವಾಂಸರೆಂದೂ ಪಾಠಪ್ರವಚನದಕ್ಷರೆಂದೂ ಹೆಸರಾಗಿದ್ದರು.

ಆ ದಿನದ ಭಾಷಣ ಇಂಗ್ಲಿಷಿನಲ್ಲಿ. ಭಾಷಣದ ಬಹುಭಾಗವನ್ನು ಅವರು ಬರೆದು ತಂದಿದ್ದ ಪ್ರಬಂಧದಿಂದ ಓದಿದರು. ಅದರ ಶೈಲಿಯೂ ರಚನೆಯೂ ಸಭಿಕರಿಗೆ ಮೆಚ್ಚಿಕೆಯಾಯಿತು. ಅದರಲ್ಲಿ ಅವರು ಪ್ರತಿಪಾದಿಸಿದ್ದದ್ದನ್ನು ಹೀಗೆ ಸಂಗ್ರಹ ಮಾಡಿ ಹೇಳಬಹುದು:

1. ಕನ್ನಡಕ್ಕೆ ಹೊಸ ಸಾಹಿತ್ಯ ಬೇಕಾಗಿದೆ.
2. ಪ್ರಾಚೀನ ಸಾಹಿತ್ಯ ದೊಡ್ಡದಾಗಿದೆ. ಅದರ ವ್ಯಾಸಂಗಕ್ಕೆ ಇನ್ನೂ ಪ್ರೋತ್ಸಾಹ ದೊರೆಯಬೇಕು. ಭಾಷೆಯ ಹಳೆಯ ಶಬ್ದರಾಶಿಯನ್ನೂ ಪ್ರಯೋಗಗಳನ್ನೂ ಚೆನ್ನಾಗಿ ತಿಳಿದುಕೊಳ್ಳುವುದು ಹೊಸ ಬರವಣಿಗೆಗೆ ಅತ್ಯಂತ ಅವಶ್ಯವಾದ ಸಿದ್ಧತೆ.
3. ಅಷ್ಟೇ ಸಾಲದು. ಹೊಸ ಬರವಣಿಗೆ ಬರೆಯುವವನು ಸಂಸ್ಕೃತದ ಪರಿಚಯವನ್ನು ಸಂಪಾದಿಸಿಕೊಳ್ಳಬೇಕು. ಸಂಸ್ಕೃತದ ಸಹಾಯವಿಲ್ಲದೆ ಹೊಸ ಸಾಹಿತ್ಯಕ್ಕೆ ಬೇಕಾದ ಶಬ್ದಸಾಮಾಗ್ರಿ ಒದಗಲಾರದು.
4. ಆದರೆ ಹೊಸ ಕನ್ನಡ ಬರವಣಿಗೆಯಲ್ಲಿ ಸಂಸ್ಕೃತ ಪದಗಳ ಬಳಕೆ ಮಿತವಾಗಿರಬೇಕು. ನಮ್ಮ ಹಳಗನ್ನಡ ಕಾವ್ಯಗಳಲ್ಲಿರುವಷ್ಟು ಅತಿಯಾಗಿರಬಾರದು.
5. ಸಂಸ್ಕೃತ ಹೇಗೆ ಆವಶ್ಯಕವೋ ಇಂಗ್ಲಿಷ್ ಸಾಹಿತ್ಯವೂ ಹಾಗೆ ಆವಶ್ಯಕ. ನಾವು ಹೊಸ ಹೊಸ ಭಾವನಾಧೋರಣೆಗಳನ್ನೂ ಹೊಸ ಹೊಸ ವಿಚಾರಧಾರೆಗಳನ್ನೂ ಇಂಗ್ಲಿಷಿನಿಂದ ಸಂಗ್ರಹಿಸಿಕೊಳ್ಳಬೇಕು. ನಮ್ಮ ಹೊಸ ಕನ್ನಡ ಸಾಹಿತ್ಯವು ಪ್ರಪಂಚದ ನಾನಾ ಸಾಹಿತ್ಯಗಳ ಕಲ್ಪನೆಗಳನ್ನೂ ಭಾವನೆಗಳನ್ನೂ ಸಮಾಲೋಚನೆಗಳನ್ನೂ ಸ್ವಾಧೀನಪಡಿಸಿಕೊಂಡು ಸಾರ್ವಲೌಕಿಕವಾಗಬೇಕು.
6. ಹೊಸ ಕನ್ನಡ ಸಾಹಿತ್ಯದಲ್ಲಿ ನಮ್ಮ ಹಳೆಯ ಸಾಹಿತ್ಯದ ರಸ ಪುಷ್ಟಿ, ಓಜಸ್ಸು, ಮನೋರಂಜಕತೆ, ಭಾಷಾಶುದ್ಧಿ-ಇವುಗಳ ಜೊತೆಗೆ ಹೊಸ ಹೊಸ ಛಂದಃಪ್ರಯೋಗಗಳೂ ಹೊಸ ಹೊಸ ಪದಸಂಯೋಜನೆಗಳೂ ಹೊಸ ಹೊಸ ಕಥಾಪ್ರಪಂಚನಿರ್ಮಿತಿಗಳೂ ಸೇರಿ ನಮ್ಮ ಸಾಹಿತ್ಯವು ಜನಜೀವನಕ್ಕೆ ಒಂದು ಹೊಸ ಪ್ರಚೋದಕಶಕ್ತಿಯಾಗಬೇಕು.

ಇದು ನನಗೆ ಜ್ಞಾಪಕವಿರುವ ಮಟ್ಟಿಗೆ ಶ್ರೀಕಂಠಯ್ಯನವರ ಭಾಷಣದ ಸಾರಾಂಶ.

ತಕರಾರು

ಅವರ ಉಪನ್ಯಾಸ ಮುಗಿದ ಬಳಿಕ ಸಭಿಕರಲ್ಲೊಬ್ಬರಾದ ಕೆ.ಕೃಷ್ಣಯ್ಯಂಗಾರ್ಯರು ಟೀಕೆ ಮಾಡಲು ಎದ್ದು ನಿಂತರು. ಕೃಷ್ಣಯ್ಯಂಗಾರ್ಯರು ಇಂಜಿನಿಯರಾಗಿದ್ದು, ಆ ಇಲಾಖೆಯ ಅಗ್ರಪದವಿಗೇರಿದವರು. ಪರಮ ಪ್ರಾಮಾಣಿಕರು. ಅಷ್ಟೇ ಅಲ್ಲದೆ ಅವರಿಗೆ ಇಂಗ್ಲಿಷ್ ಸಾಹಿತ್ಯದಲ್ಲಿ ಅಸಾಮಾನ್ಯವಾದ ಪಾಂಡಿತ್ಯವಿತ್ತು. ಅವರು ಗಿಬ್ಬನ್ ಚರಿತ್ರಕಾರನ ಮಹಾಗ್ರಂಥದಿಂದ ನೂರಾರು ಪುಟಗಳನ್ನು ಸ್ವಾಧೀನಪಡಿಸಿಕೊಂಡು ಎಲ್ಲಿಂದರಲ್ಲಿ ಹೇಳಲಾಗುವಷ್ಟು ಮುಖಸ್ಥ ಮಾಡಿಕೊಂಡಿದ್ದರು. ಅವರಿಗಿದ್ದ ಧಾರಣಾಶಕ್ತಿ ಅಷ್ಟು ಪ್ರಬಲವಾದದ್ದು. ಅವರು ಮಿಲ್ಟನ್ ಕವಿಯ ಎಷ್ಟೋ ಕಾವ್ಯಗಳನ್ನು ಕೇಳಿದ ಕಡೆ ಹೇಳುತ್ತಿದ್ದರು.

ಇದರ ಜೊತೆಗೆ ಅವರ ಸಂಸ್ಕೃತ ಪಾಂಡಿತ್ಯ ಪ್ರಾಚೀನಮಾರ್ಗದ್ದು. ಅವರು ವಿದ್ವತ್ಕುಲದಲ್ಲಿ ಹುಟ್ಟಿದವರು. ಅವರ ಅಣ್ಣಂದಿರು ವಿದ್ವಾನ್ ಕಂದಾಡೆ ಶ್ರೀನಿವಾಸಾಚಾರ್ಯರು ವಿಸ್ತಾರವಾದ ಸಂಸ್ಕೃತ ಕಾವ್ಯಪರಿಚಯವನ್ನು ಪಡೆದಿದ್ದದ್ದಲ್ಲದೆ ಸಂಸ್ಕೃತ ವ್ಯಾಕರಣವನ್ನು ಸಂಪ್ರದಾಯಕ್ರಮದಲ್ಲಿ ಕಲಿತಿದ್ದರು.

ಅವರಿಗೆ ಬಿ.ಎಂ.ಶ್ರೀಕಂಠಯ್ಯನವರು ಸಂಸ್ಕೃತವನ್ನು ಕುರಿತು ಆಡಿದ ಮಾತು ಸರಿದೋರಲಿಲ್ಲ. ಶ್ರೀಕಂಠಯ್ಯನವರು ಕನ್ನಡದ ಪೂರ್ವಕಾವ್ಯಗಳಲ್ಲಿ ಸಂಸ್ಕೃತ ಅತಿಯಾಯಿತೆಂದು ಹೇಳಿದರಲ್ಲ? ಸಂಸ್ಕೃತ ‘ಅತಿ’ ಯಾಗುವುದು ಎಂದರೇನು? ಒಳ್ಳೆಯದು ಅತಿಯಾಗುವುದುಂಟೆ? ಭಗವಂತನೂ ಭಗವತ್ಕೃಪೆಯೂ ಎಂದಿಗಾದರೂ ಯಾರಿಗಾದರೂ ಅತಿಯೆನಿಸೀತೆ? ಇದು ಕೃಷ್ಣಯ್ಯಂಗಾರ್ಯರ ಮನೋಗತ. ಅವರದು ಕೊಂಚ ಉದ್ವೇಗದ ಸ್ವಭಾವ, ಯಾವ ಮಾತನ್ನಾಡಿದರೂ ತೀವ್ರವಾಗಿ ಆಡುವುದು ಅವರ ಅಭ್ಯಾಸ. ಮುಖ ಕೆಂಪೇರುತ್ತಿತ್ತು. ಈ ಉದ್ವೇಗದಲ್ಲಿ ಅವರು ಶ್ರೀಕಂಠಯ್ಯನವರು ಸಂಸ್ಕೃತವನ್ನು ನಿಂದಿಸಿದರೆಂದೂ ಅದು ಅಪನಿಂದೆಯೆಂದೂ ಅನ್ಯಾಯವೆಂದೂ ಅನುಚಿತವೆಂದೂ ಕಟುವಾಗಿ ಟೀಕಿಸಿದರು.

ಬಳಿಕ ನಾನು ಎದ್ದು ಎರಡು ಮಾತು ಹೇಳಿದೆ:

“ಕೃಷ್ಣಯ್ಯಂಗಾರ್ಯರು ನನಗೆ ಎಲ್ಲ ದೃಷ್ಟಿಗಳಿಂದಲೂ ಪೂಜ್ಯರು. ಅವರು ಬಿ.ಎಂ.ಶ್ರೀಕಂಠಯ್ಯನವರ ತಾತ್ಪರ್ಯವನ್ನು ಗ್ರಹಿಸದೆ ಶ್ರೀಕಂಠಯ್ಯನವರ ಒಂದಾನೊಂದು ಹೇಳಿಕೆಯನ್ನು ತಪ್ಪಾಗಿ ಗ್ರಹಿಸಿ ಆಗ್ರಹಪಟ್ಟಿರುವಂತೆ ನನಗೆ ತೋರುತ್ತದೆ.

ಶ್ರೀಕಂಠಯ್ಯನವರು ಸಂಸ್ಕೃತದ್ವೇಷಿಯಲ್ಲ. ಕೃಷ್ಣಯ್ಯಂಗಾರ್ಯರಂತೆಯೇ ಅವರೂ ಸಂಸ್ಕೃತದ ಅಭಿಮಾನಿಗಳು. ಆದರೆ ಬಡ ಕನ್ನಡ ಬೆಳೆಯಬೇಕಾದರೆ ಕೂಡಿದ ಮಟ್ಟಿಗೆ ತನ್ನ ಸ್ವಂತ ಸಾಮಗ್ರಿಯನ್ನು ಬಳಸಿಕೊಳ್ಳಬೇಕು. ರಾಜರ ಮನೆಯ ಊಟದಿಂದ ಸುಖಪಡುವುದರಲ್ಲಿ ತನ್ನ ಸ್ವಂತ ಅಡಿಗೆ ಮನೆಯನ್ನು ಮರೆಯಬಾರದು. ತನ್ನ ಸ್ವಂತ ಉಗ್ರಾಣ ಎಷ್ಟಿದೆಯೋ ಅದನ್ನು ಬಳಸಿಕೊಂಡು ತನ್ನಲ್ಲಿಲ್ಲದ್ದಕ್ಕೆ ಸಂಸ್ಕೃತವನ್ನಾಶ್ರಯಿಸಬೇಕು-ಇದಿಷ್ಟು ಶ್ರೀಕಂಠಯ್ಯನವರ ಮತವೆಂದು ನನಗನ್ನಿಸುತ್ತದೆ. ಆ ಮತ ಸಾಧುವೆಂದೂ ನನಗೆ ತೋರುತ್ತದೆ.”

ಇಷ್ಟು ನಾನು ಹೇಳಿದ ಬಳಿಕ ಕೃಷ್ಣಯ್ಯಂಗಾರ್ಯರ ಮುಖದ ಮೇಲೆ ಕೊಂಚ ನಗೆತೋರಿತು. ಅವರು “ಏನಯ್ಯಾ, ಖಾಜಿ ನ್ಯಾಯ ಮಾಡುವುದಕ್ಕೆ ಬಂದೆಯಾ?” ಎಂದರು.

ಶ್ರೀಕಂಠಯ್ಯನವರು ನಾನಿದ್ದ ಕಡೆಗೆ ಬಂದು (ಷೇಕ್‌ಹ್ಯಾಂಡ್) ಕೈಕುಲುಕಿ “Blessed are the peace-makers” (ಸಮಾಧಾನ ಮಾಡುವವರು ಧನ್ಯರು)-ಎಂದರು. ಅದೇ ಅವರಿಗೂ ನನಗೂ ಸ್ನೇಹವಾಗಲು ಪ್ರಾರಂಭ.

ಆಮೇಲೆ ಒಂದೆರಡು ವರ್ಷಕಾಲ ಅವರೂ ನಾನೂ ಎಲ್ಲಿಯಾದರೂ ಭೇಟಿಯಾದಾಗ ಅವರು “ಏನು ಖಾಜಿ ಸಾಹೇಬರೇ” ಎಂದು ನನ್ನನ್ನು ಮಾತನಾಡಿಸುತ್ತಿದ್ದರು.

ಆಗಿನ ಜನರೆಲ್ಲ ಮನಸ್ಸಿನಲ್ಲಿ ಕಲ್ಮಷವಿಲ್ಲದವರು. ಸ್ವಾಭಾವಿಕವಾಗಿ ನಗೆ ಬಂದಾಗ ನಗುವರು; ಮುನಿಸು ಬಂದಾಗ ಮುನಿದುಕೊಳ್ಳುವರು; ಅವರನ್ನು ಇತರರು ಹಾಸ್ಯ ಮಾಡಿದರೆ ಹಾಸ್ಯಮಾಡಿಸಿಕೊಂಡು ಅವರೂ ನಗುವಿನಲ್ಲಿ ಸೇರಿಕೊಳ್ಳುವರು.

ಪರಿಷತ್ತಿನ ಸ್ಥಾಪನೆ

ಸಾಹಿತ್ಯ ಪರಿಷತ್ತಿನ ಸ್ಥಾಪನೆಯಾದದ್ದು ಬೆಂಗಳೂರು ಸೆಂಟ್ರಲ್ ಕಾಲೇಜಿನ ಎದುರುಗಡೆಯಿರುವ ಈಗಿನ ಆರ್ಟ್ಸ್ ಆಂಡ್ ಸಯನ್ಸ್ ಕಾಲೇಜ್ ಕಟ್ಟಡದ ನಡುವಣ ಸಭಾ ಮಂದಿರದಲ್ಲಿ.

ಪರಿಷತ್ತಿನ ಸಮಾರಂಭಕ್ಕಾಗಿ ಕನ್ನಡದೇಶದ ನಾನಾ ಭಾಗಗಳಿಂದ ಗಣ್ಯ ಜನ ಬಂದಿದ್ದರು. ಧಾರವಾಡದಿಂದ ರಾಮಚಂದ್ರ ಹಣಮಂತ ದೇಶಪಾಂಡೆ, ಮುದವೀಡು ಕೃಷ್ಣರಾಯರು, ಆಲೂರು ವೆಂಕಟರಾಯರು, (ಕರ್ಣಾಟಕ ಪ್ರಿಂಟಿಂಗ್ ಪ್ರೆಸ್ಸಿನ) ಜಠಾರ್ರವರು ಬಂದಿದ್ದರು. ಬಳ್ಳಾರಿಯಿಂದ ವಕೀಲ ತಿಮ್ಮಕೃಷ್ಣರಾಯರು, ಹೊಸಪೇಟೆಯ ರಾವ್‌ಬಹದ್ದೂರ್ ಸಿ.ಹನುಮಂತಗೌಡರು, ಮದರಾಸಿನಿಂದ ಬೆನಗಲ್ ರಾಮರಾಯರು, ಮಂಗಳೂರಿನಿಂದ ಮುಳಿಯ ತಿಮ್ಮಪ್ಪಯ್ಯನವರು, ಮೈಸೂರಿನಿಂದ ಪುಂಗನೂರು ರಾಘವೇಂದ್ರಾಚಾರ್ಯರು-ಮೊದಲಾದ ವಿದ್ವಾಂಸರು ದಯಮಾಡಿಸಿದ್ದರು. ಬೆಂಗಳೂರು ಹೊರಗಿನಿಂದ ಬಂದಿದ್ದವರು ನೂರೈವತ್ತು-ಇನ್ನೂರು ಮಂದಿ ಇರಬಹುದು. ಬೆಂಗಳೂರಿನ ಸ್ಥಳಿಕರು ಮುನ್ನೂರು-ನಾಲ್ಕುನೂರು ಮಂದಿ. ಒಟ್ಟಿನಲ್ಲಿ ಅದು ದೊಡ್ಡ ಸಭೆ. ಬಿ.ಎಂ.ಶ್ರೀಕಂಠಯ್ಯನವರು ಅದರಲ್ಲಿದ್ದ ಹಾಗೆ ನನಗೆ ಜ್ಞಾಪಕವಿಲ್ಲ. ವೆಂಕಣ್ಣಯ್ಯ, ಕೃಷ್ಣಶಾಸ್ತ್ರಿ-ಇವರು ಸಭೆಯಲ್ಲಿ ಎಲ್ಲಿಯೋ ಇದ್ದರಂತೆ. ಅವರಿಗೂ ನನಗೂ ಆಗ ಪರಿಚಯವಾಗಿರಲಿಲ್ಲ. ಅವರಿಬ್ಬರೂ ಆಗ್ಗೆ ಇನ್ನೂ ಅಪ್ರಸಿದ್ಧರು.

ಸಭೆ ಪ್ರಾರಂಭವಾದದ್ದು ಬೆಳಗ್ಗೆ ಸುಮಾರು ಒಂಭತ್ತು ಘಂಟೆಗೆ ಎಂದು ನನ್ನ ಜ್ಞಾಪಕ. ಎಚ್. ವಿ. ನಂಜುಂಡಯ್ಯನವರು [1] ಅಧ್ಯಕ್ಷರಾಗಿ ಪ್ರಾರಂಭೋಪನ್ಯಾಸ ಮಾಡಿದರು. ಆದರೆ ಇಂಗ್ಲಿಷಿನಲ್ಲಿ! ವೇದಿಕೆಯ ಎದುರುಗಡೆ ಮೊದಲನೆಯ ಸಾಲಿನ ನಾಲ್ಕೈದು ಪೀಠಗಳ ಪೈಕಿ ಒಂದರಲ್ಲಿ ಬೆಳ್ಳಾವೆ ವೆಂಕಟನಾರಣಪ್ಪನವರು ಕುಳಿತಿದ್ದರು. ನಾನು ಅವರ ಪಕ್ಕದಲ್ಲಿದ್ದೆ. ನಂಜುಂಡಯ್ಯನವರು ಇಂಗ್ಲಿಷಿನಲ್ಲಿ ತಮ್ಮ ಮೊದಲ ಮಾತುಗಳನ್ನು ನುಡಿಯುತ್ತಿದ್ದಂತೆಯೇ ವೆಂಕಟನಾರಣಪ್ಪನವರು ಮೆಲ್ಲನೆಯ ಧ್ವನಿಯಲ್ಲಿ-

“Nonsense. ಇದು ಶುದ್ಧ Nonsense ಅಷ್ಟೆ” -ಎಂದರು. ನಂಜುಂಡಯ್ಯನವರಿಗೆ ಅದು ಕೇಳಿಸಿರಬೇಕು. ಅವರ ಎಡಮೀಸೆ ಹಾರಿತು. ಅವರನ್ನು ಬಲ್ಲವರಿಗೆ ಅದು ನಗುವಿನ ಲಾಂಛನವೆಂಬುದು ಗೊತ್ತಿತ್ತು. ನಂಜುಂಡಯ್ಯನವರು ವೆಂಕಟನಾರಣಪ್ಪನವರ ಟೀಕೆಯನ್ನು ಕೇಳಲಿಲ್ಲವೋ ಏನೋ ಎಂಬಂತೆ ಉಪನ್ಯಾಸ ಮುಗಿಸಿ ಸಭೆ ಪುನಃ ಅದೇ ಜಾಗದಲ್ಲಿ ಆ ಮಧ್ಯಾಹ್ನ ಎರಡೂವರೆ ಘಂಟೆಗೆ

ಸೇರತಕ್ಕದ್ದೆಂದು ತೀರ್ಮಾನ ಹೇಳಿ, ವೇದಿಕೆಯಿಂದ ಇಳಿದು ಬಂದು ವೆಂಕಟನಾರಣಪ್ಪನವರ ಹತ್ತಿರ ನಿಂತು, “ಅದಕ್ಕೇನು ಕನ್ನಡದಲ್ಲಿ ಮಾತಿಲ್ಲವೋ?”

-ಎಂದು ಕೇಳಿದರು. ವೆಂಕಟನಾರಣಪ್ಪನವರು ನಕ್ಕರು. ನನ್ನ ಕಡೆ ತಿರುಗಿ “ಏನಪ್ಪಾ ‘Nonsense’ ಅಂಬೋದಕ್ಕೆ ಕನ್ನಡದಲ್ಲಿ?” -ಎಂದು ಕೇಳಿದರು. ನಾನು “ನಾನ್‌ಸೆನ್ಸೇ” ಎಂದೆ. ಆ ಕ್ಷಣ ನನಗೆ ಬೇರೆ ಏನೂ ಹೊಳೆಯಲಿಲ್ಲ. ಆಮೇಲೆ ನಂಜುಂಡಯ್ಯನವರು ಒಂದು ಸಣ್ಣ ವಿವರಣೆ ಕೊಟ್ಟರು:

“ನಾವು ಈಗ ಮಾಡುತ್ತಿರುವ ಪ್ರಯತ್ನ ಕನ್ನಡ ತಿಳಿಯದ ಜನರಿಗೂ ತಿಳಿಯಬೇಕಾದದ್ದು. ನಮ್ಮ ಪರಿಷತ್ತಿಗೆ ಹಣ ಕೊಡಬೇಕಾದ ಸರಕಾರಕ್ಕೂ ತಿಳಿಯಬೇಕು; ಸರಕಾರದ ಮೇಲೆ ಉಸ್ತುವಾರಿ ನಡಸುವ ಬ್ರಿಟಿಷ್ ರೆಸಿಡೆಂಟರಿಗೂ ತಿಳಿಯಬೇಕು. ಅವರಿಗೆಲ್ಲ ತಿಳಿದರೆ ನಮಗೇನೂ ನಷ್ಟವಾಗದು; ಕೊಂಚ ಪ್ರಯೋಜನವಿದ್ದರೂ ಇರಬಹುದು ಅಲ್ಲವೆ?”

***

ಅದೇ ಮಧ್ಯಾಹ್ನಾತ್ಪರ ಸುಮಾರು ಎರಡೂವರೆ ಘಂಟೆಯಿಂದ ಆರು ಘಂಟೆಯವರೆಗೂ ಉಪನ್ಯಾಸಗಳು. ಕನ್ನಡ ನಾಡಿನ ಹಿರಿಮೆ, ಕನ್ನಡ ಭಾಷೆಯ ಹಿರಿಮೆ, ನಮ್ಮ ಪೂರ್ವಕವಿಗಳು, ನಮ್ಮ ಜನಕ್ಕೆ ಬೇಕಾಗಿರುವಂಥ ಸಾಹಿತ್ಯ, ಪರಿಷತ್ತಿನಿಂದ ದೇಶಕ್ಕೆ ಆಗಬಹುದಾದ ಪ್ರಯೋಜನಗಳು-ಈ ನಾನಾ ವಿಷಯಗಳನ್ನು ಕುರಿತು ವಿದ್ವಾಂಸರುಗಳು ತೀವ್ರವಾದ ಅಹಮಹಮಿಕೆಯಿಂದ ಭಾಷಣ ಮಾಡಿದರು. ಅವುಗಳಲ್ಲಿದ್ದ ಶಬ್ದಾಡಂಬರಗಳಿಂದಲೂ ಚರ್ವಿತಚರ್ವಣದಿಂದಲೂ ಕೆಲ ಮಂದಿಗೆ ತಲೆಚಿಟ್ಟುಹಿಡಿದು ಹೋಯಿತು.

ಎರಡನೆಯ ದಿನ ಮತ್ತೆ ಉಪನ್ಯಾಸಗಳು. ಉದ್ದಿಷ್ಟವಾದ ಸಂಸ್ಥೆಗೆ ಹೆಸರೇನಿಡಬೇಕು?- ಇದು ವಿಷಯ. ಮೊದಲು ಕರ್ನಾಟಕವೆ, ಕರ್ಣಾಟಕವೆ, ಕನ್ನಡವೆ? ಅಥವಾ ಕರಿನಾಡೆ? ಮೂರನೆಯದಾಗಿ ಕರ್ಣಾಟವೆ, ಕರ್ಣಾಟಕವೇ? ಅಥವಾ ಕಾರ್ಣಾಟಕೀ ಎಂದೆ? ನಾಲ್ಕನೆಯದಾಗಿ ಪರಿಷತ್ತೆ, ಸಂಸತ್ತೆ ಅಥವಾ ಪರಿಷದವೆ, ಅಥವಾ ಸಂಸದವೆ, ಅಥವಾ ಸಭಾ ಎನ್ನತಕ್ಕದ್ದೆ? ಸಭೆ ಎಂದೆ? ಸಮಿತಿಯೆನ್ನತಕ್ಕದ್ದೆ? ಹೀಗೆ ಪುಂಖಾನು ಪುಂಖವಾಗಿ ಬೆಳೆಯಿತು ಹನ್ನೊಂದುವರೆ ಘಂಟೆಯವರೆಗೆ. ಪುನಃ ಅಪರಾಹ್ಣದಲ್ಲಿ ಸಭೆ ಸೇರಿದಾಗ ಅಧ್ಯಕ್ಷ ನಂಜುಂಡಯ್ಯನವರು ಹೀಗೆ ಹೇಳಿದರು:

“ಈಗ ಎರಡು ದಿನವೆಲ್ಲ ಹೆಸರನ್ನು ಚರ್ಚಿಸುವುದಕ್ಕಾಗಿ ಕಳೆದೆವಲ್ಲ. ಈಗಲಾದರೂ ಕೆಲಸಕ್ಕೆ ಉಪಕ್ರಮ ಮಾಡೋಣ. ನಿಮ್ಮಲ್ಲಿ ರಘುನಾಥರಾಯರೋ

ರಾಘವೇಂದ್ರಾಚಾರ್ಯರೋ ಇನ್ನು ಯಾರಾದರೂ ಒಂದು ಹೆಸರನ್ನು ಸೂಚಿಸೋಣವಾಗಲಿ. ಅದನ್ನು ಸಭೆಯ ವೋಟಿಗೆ ಹಾಕುತ್ತೇನೆ. ಭಾಷಣಗಳು ಸಾಕು. ಆ ಸೂಚನೆ ಅಂಗೀಕಾರವಾಗದೆ ಹೋದರೆ ಆಮೇಲೆ ಇನ್ನೊಂದು ಸೂಚನೆ. ಅನಂತರ ಮತ್ತೊಂದು-ಈ ಕ್ರಮವನ್ನನುಸರಿಸೋಣ."

ಸಭೆಯಲ್ಲಿ ಯಾರೋ ಒಬ್ಬರು "ಇನ್ನೂ ಮಾತನಾಡುವವರಿದ್ದಾರೆ, ಸ್ವಾಮಿ" ಎಂದರು. ನಂಜುಂಡಯ್ಯನವರು "ಹೌದು ಹೌದು. ನಾವೆಲ್ಲ ಅದೇ. ಊರು ತುಂಬ ಮಾತನಾಡುವವರೇ. ಆದರೆ ಕೆಲಸವೂ ನಡೆಯಬೇಕಲ್ಲ?" ಎಂದರು. ಕೆಲಸಕ್ಕೆ ಉಪಕ್ರಮ ಮಾಡಿಸಿದರು.

ನಿಯಮಾವಳಿ

ಅಂದಿನ ಬೆಳಗ್ಗೆ ಸಂಸ್ಥೆಯ ನಿಯಮಾವಳಿಯನ್ನು ತಯಾರು ಮಾಡುವುದಕ್ಕಾಗಿ ನೇಮಕವಾಗಿದ್ದ ಉಪಸಮಿತಿ ತನ್ನ ನಿಯಮಗಳ ಕರಡುಪ್ರತಿಯನ್ನು ಒಪ್ಪಿಸಿತು. ಆ ಉಪಸಮಿತಿಯಲ್ಲಿದ್ದವರು ಕರ್ಪೂರ ಶ್ರೀನಿವಾಸರಾಯರು, ಡಾ ||.ಪಿ.ಎಸ್. ಅಚ್ಯುತರಾಯರು, ಎಂ.ಎಸ್. ಪುಟ್ಟಣ್ಣನವರು, ಬಾಪು ಸುಬ್ಬರಾಯರು, ಆರ್.ರಘುನಾಥರಾಯರು, ಟಿ.ಲಕ್ಷ್ಮೀನರಸಿಂಹರಾಯರು; ನಾನೂ ಅದರಲ್ಲಿದ್ದೆ.

ಮೂರನೆಯ ದಿನ ಕರಡು ನಿಯಮಾವಳಿಯ ಸಭೆಯ ಪರ್ಯಾಲೋಚನೆಗೆ ಬಂದಿತು. ಅದರಮೇಲೂ ಪಂಡಿತ ಭಾಷಣಗಳು. ದಾತೃಗಳು, ಪ್ರದಾತೃಗಳು, ಮಹಾಪ್ರದಾತೃಗಳ ಆಶ್ರಯದಾತರು, ಆಶ್ರಯಕರ್ತರು, ಪೋಷಕರು, ಪರಿಪೋಷಕರು-ಇಂಥ ಮಾತುಗಳೆಲ್ಲ ಪಂಡಿತ ವರ್ಗದಿಂದ ಬಂದವು. 'ದಾತೃ' ಇರಬೇಕೆ, 'ಧಾತಾ' ಇರಬೇಕೆ? ಇದನ್ನು ಕುರಿತು ಚರ್ಚೆ. ಒಬ್ಬರು ಶಬ್ದಮಣಿದರ್ಪಣವನ್ನು ಹೇಳಿದರೆ ಇನ್ನೊಬ್ಬರು ಶಬ್ದಾನುಶಾಸನವನ್ನ. ಒಬ್ಬರು ಕಾವ್ಯಪ್ರಯೋಗ ಹೇಳಿದರೆ ಇನ್ನೊಬ್ಬರು ಶಾಸನಪ್ರಯೋಗವನ್ನ. ಹೀಗೆ ಬೆಳೆಯಿತು ವಿಚಾರಸರಣಿ.

ನಂಜುಂಡಯ್ಯನವರು ಬಹುಮಟ್ಟಿಗೆ ನಗುತ್ತ, ಒಂದೊಂದು ಸಾರಿ ಕಟು ಟೀಕೆ ಮಾಡುತ್ತ, ಹಾಗೂ ಈ ಕೆಲಸವನ್ನು ಮೂರನೆಯ ದಿನ ಸಂಜೆ ನಾಲ್ಕು ಘಂಟೆಗೆ ಮುಗಿಸಿದರು.

ಪರಿಷತ್ತಿನ ಸ್ಥಾಪನಕಾರ್ಯದಲ್ಲಿ ಮೊದಲಿನಿಂದ ಕಡೆಯವರೆಗೂ ಶ್ರಮಿಸಿದವರು ಸೆಕ್ರೆಟರಿ ಬಿ.ಕೃಷ್ಣಪ್ಪ, ಎಂ.ಎ., ಅವರು. ಅವರ ಪಾಂಡಿತ್ಯ ಎಷ್ಟು ದೊಡ್ಡದೋ ಅವರ ತಾಳ್ಮೆಯೂ ಕಾರ್ಯದಕ್ಷತೆಯೂ ಅಷ್ಟು ಪ್ರಶಂಸನೀಯವಾದವು. ಆ ಮಹನೀಯರು ಮೈಸೂರು ವಿಶ್ವವಿದ್ಯಾನಿಲಯದ ಮೊದಲನೆಯ ಕನ್ನಡ ಪ್ರೊಫೆಸರಾಗಿದ್ದರು.

ಸಂತೋಷಕೂಟ

ಅಂದು ಸಂಜೆ ಬಂದಿದ್ದ ಮಹನೀಯರ ಸಂತೋಷಕ್ಕಾಗಿ ಒಂದು ಸಂತೋಷಕೂಟವನ್ನೇರ್ಪಡಿಸಿತ್ತು. ಅದು ಸೆಂಟ್ರಲ್ ಕಾಲೇಜಿನ ವಿದ್ಯಾರ್ಥಿ ಮಂದಿರದ ಆವರಣದಲ್ಲಿ. ಸದಸ್ಯರಲ್ಲಿ ಬಹುಮಂದಿ ಅಲ್ಲಿಯೇ ಬಿಡಾರ ಮಾಡಿಕೊಂಡಿದ್ದರು.

ಈ ಸಂತೋಷಕೂಟವನ್ನು ಏರ್ಪಡಿಸುವ ಯೋಚನೆ ಮಾಡಿ ನಾನು ನನ್ನ ಮಾನ್ಯ ಮಿತ್ರರಾದ ಸರಕಾರದ ಸೆಕ್ರೆಟರಿ ಡಿ.ಎಂ. ನರಸಿಂಗರಾಯರ ಸಹಾಯವನ್ನು ಬೇಡಿದೆ. ಎರಡು ಡೇರಾಗಳು. ಐವತ್ತು ಮೇಜುಗಳು, ಇನ್ನೂರು ಕುರ್ಚಿಗಳು, ನಾಲ್ಕು ಜಮಖಾನೆಗಳು-ಇವಿಷ್ಟನ್ನು ಸರಕಾರದ ಉಗ್ರಾಣದಿಂದ ಸಾಲ ಕೊಡಿಸುವುದಾದರೆ ಅದಕ್ಕೆ ತಗಲುವ ಬಾಡಿಗೆಯನ್ನು ನಾನು ಕೊಡುವುದಾಗಿ ಹೇಳಿದೆ. ಅವರು "ನಿನಗೆ ಯಾಕಯ್ಯ ಅಷ್ಟು ಶ್ರಮ? ಅಲ್ಲಿ ಹಾಸ್ಟೆಲ್ ವಾರ್ಡನ್ ಬಿ.ವೆಂಕಟೇಶಾಚಾರ್ಯರಿದ್ದಾರಲ್ಲ, ಅವರು ಈ ಸಹಾಯವನ್ನೆಲ್ಲ ನಿನಗೆ ಸುಲಭವಾಗಿ ಒದಗಿಸಬಹುದು" ಎಂದರು.

"ನನಗೆ ವೆಂಕಟೇಶಾಚಾರ್ಯರ ಪರಿಚಯ ಇಲ್ಲವಲ್ಲ?"

"ಅದೇನು ಕಷ್ಟ?"

-ಎಂದು ನರಸಿಂಗರಾಯರು ನನ್ನೊಡನೆ ವೆಂಕಟೇಶಾಚಾರ್ಯರನ್ನು ನೋಡಲು ಬಂದರು. ಪೂಜ್ಯರಾದ ವೆಂಕಟೇಶಾಚಾರ್ಯರಿಗೂ ನನಗೂ ಮೊದಲು ಭೇಟಿಯಾದದ್ದು ಹೀಗೆ. ಅವರು ಉತ್ಸಾಹದಿಂದ ಸಹಕರಿಸಿ ಎಲ್ಲ ವಿಧಗಳಲ್ಲಿಯೂ ಸಹಾಯ ಕೊಟ್ಟರು. ಆ ಕೂಟದಲ್ಲಿ ಪಿಟೀಲು ವಿದ್ವಾನ್ ಪುಟ್ಟಪ್ಪನವರ ಬಾಯಿ ಹಾಡಿಕೆ ನಡೆಯಿತು. ಬಹಳ ಸೊಗಸಾಗಿತ್ತೆಂದು ಕೇಳಿದವರೆಲ್ಲ ಹೇಳಿದರು. ಗಂಧ ಪುಷ್ಪ ವಿನಿಯೋಗವಾದ ಮೇಲೆ ಎಲ್ಲರೂ ಅಲ್ಲಿಂದ ಹೊರಡುವ ಸಮಯದಲ್ಲಿ ನಂಜುಂಡಯ್ಯನವರು ನನ್ನನ್ನು ಬೇರೆಯಾಗಿ ಕರೆದು ಕೇಳಿದರು:

"ಎಷ್ಟು ಖರ್ಚು ಮಾಡಿದೆ? ಸಾಲ ಹೆಚ್ಚು ಮಾಡಿದ್ದರೆ ಹೇಳು."

ಆಗ ಎಂ.ಶಾಮರಾಯರೂ ಇದ್ದರು. ಅವರೆಂದರು:

"ಮಾಡಲೇಳಿ. ಹುಡುಗನ ಹುಚ್ಚು."

ಗುರುಶಿಷ್ಯಪರಂಪರೆ

ಪರಿಷತ್ತನ್ನು ಮೊದಮೊದಲು ಕಟ್ಟಿ ಬೆಳಸಿದವರಲ್ಲಿ ಮುಖ್ಯಮುಖ್ಯರಾದವರು ಒಂದು ಗುರುಶಿಷ್ಯಪರಂಪರೆಯಾಗಿ ಬಂದವರು. ನಂಗಪುರಂ ವೆಂಕಟೇಶಯ್ಯಂಗಾರ್ಯರ ಶಿಷ್ಯರು ವೆಂಕಟನಾರಣಪ್ಪನವರು. ವೆಂಕಟನಾರಣಪ್ಪನವರ ಶಿಷ್ಯರು ಬಿ.ಎಂ. ಶ್ರೀಕಂಠಯ್ಯ, ಮಾಸ್ತಿ ವೆಂಕಟೇಶಯ್ಯಂಗಾರ್, ಎಂ.ಆರ್. ಶ್ರೀನಿವಾಸಮೂರ್ತಿ-ಇವರು. ಶ್ರೀಕಂಠಯ್ಯನವರ ಶಿಷ್ಯರು ವೆಂಕಣ್ಣಯ್ಯ, ಕೃಷ್ಣಶಾಸ್ತ್ರಿ-ಇವರು. ಹೀಗೆ ಅನ್ಯೋನ್ಯ ಅಭಿಮಾನವಿದ್ದದ್ದು ಪರಿಷತ್ತಿಗೆ ಅನುಕೂಲವಾಯಿತು. ಅವರುಗಳಲ್ಲಿ ಅಭಿಪ್ರಾಯಭೇದಗಳು ಎಷ್ಟೋ ಇದ್ದವು. ಆದರೆ ಅವುಗಳನ್ನು ತಿಳಿಸುವ ಮಾತಿನಲ್ಲಿ ನವುರೂ ನಾಜೂಕೂ ಸ್ನೇಹ ಧ್ವನಿಯೂ ಇದ್ದದ್ದರಿಂದ ಸಂಘದಲ್ಲಿ ಕೊಂಚಮಾತ್ರವೂ ಬಿರುಕು ತೋರಲಿಲ್ಲ. ಚರ್ಚೆಯ ಕಾಲದ ಹೊರತು ಮಿಕ್ಕೆಲ್ಲ ಕಾಲಗಳಲ್ಲಿಯೂ ಅವರು ಏಕೈಕಮನಸ್ಕರಾಗಿರುತ್ತಿದ್ದರು. ಎಲ್ಲರೂ ಒಟ್ಟಿಗೆ ಕೂಡಬೇಕು, ಹರಟಬೇಕು, ತಿಂಡಿಯನ್ನು ಹಂಚಿಕೊಂಡು ತಿನ್ನಬೇಕು, ಒಬ್ಬರನ್ನೊಬ್ಬರು ಗೇಲಿಮಾಡಿ ನಗಬೇಕು, ಒಂದೇ ಕೈ ಕೆಲಸ ಮಾಡುತ್ತಿದೆಯೋ ಎನ್ನಿಸುವಂತೆ ಒಟ್ಟುಗೂಡಿ ಸಹಕರಿಸಬೇಕು.

ಇದು ಅನುಕೂಲ ಭಾಗ. ಪ್ರತಿಕೂಲ ಭಾಗವೂ ಉಂಟು. ಮೈಸೂರು ಜನ ಗುಂಪುಗಾರರು, ದುರಭಿಮಾನಿಗಳು. ಪಾಳೆಯ ಕಟ್ಟುವವರು-ಎಂದು ಕೆಲವರು ಆಡಿಕೊಂಡರು. ಹತ್ತು ಜನ ಸೇರಿ ಕೆಲಸಮಾಡುವ ಕಡೆ ಅಸೂಯೆಯ ಮಾತುಗಳೂ ಅಸಹನೆಯ ಮಾತುಗಳೂ ಒಂದೊಂದು ಸಾರಿ ಕೇಳಿಬರುತ್ತವೆ. ಆದರೆ ಮುಖ್ಯ ಕೆಲಸಗಾರರಲ್ಲಿ ನಿಜವಾದ ಸ್ನೇಹವೂ ಒಮ್ಮನಸ್ಸೂ ಇದ್ದಲ್ಲಿ ಅವರು ಕಡೆಯವರೆಗೂ ನಿಂತು ಗುರಿಮುಟ್ಟಲಾಗುತ್ತದೆ.

ಒಂದು ವಿಶೇಷ ಪ್ರಸಂಗ. ಪರಿಷತ್ತಿನ ಸ್ಥಾಪನೆಯಾದ ಎರಡನೆಯ ದಿನ ಸಂಜೆ ನಂಜುಂಡಯ್ಯನವರಿಗೂ ಎಂ.ಎಸ್. ಪುಟ್ಟಣ್ಣನವರಿಗೂ ಏನೋ ಒಂದು ತಕರಾರು ನಡೆಯಿತು. ಚುಚ್ಚುಮಾತನಾಡುವುದರಲ್ಲಿ ಇಬ್ಬರೂ ನಿಸ್ಸೀಮರು. ಪುಟ್ಟಣ್ಣನವರಿಗೆ ಕೋಪ ಬಂದು ಅವರು ಬಿರುಗಾಳಿಯಂತೆ ನಡೆದು ಸಭಾ ಪರಿತ್ಯಾಗ ಮಾಡಿದರು. ಅವರ ಪೂನಾ ಪಾದರಕ್ಷೆಯ ಟಪಟಪ ಶಬ್ದ ಕೇಳಿಬರುತ್ತಿತ್ತು. ವೆಂಕಟನಾರಣಪ್ಪನವರೆದ್ದು "ನಾನು ಹೋಗಿ ಅವರನ್ನು ಕರೆದುಕೊಂಡು ಬರುತ್ತೇನೆ" -ಎಂದರು. ನಂಜುಂಡಯ್ಯನವರು ಹೇಳಿದರು:

"ನಮ್ಮ ಪುಟ್ಟಣ್ಣನನ್ನೇ? ನೀವು ಯಾರೂ ಹೋಗಬೇಡಿ. ನಾನೇ ಹೋಗುತ್ತೇನೆ."

ಹದಿನೈದಿಪ್ಪತ್ತು ನಿಮಿಷ ಕಳೆದ ಮೇಲೆ ಸಭೆ ಬರಖಾಸ್ತಾಗಿ ನಂಜುಂಡಯ್ಯನವರು ಗಾಡಿಯಲ್ಲಿ ಕುಳಿತು ಪುಟ್ಟಣ್ಣನವರ ಮನೆಗೆ ಹೋದರು.

ಮಾರನೆಯ ದಿನ ಪುಟ್ಟಣ್ಣನವರು ನಗುಮುಖದಿಂದ ಸಭೆಗೆ ದಯಮಾಡಿಸಿದ್ದರು. ಹಿಂದಿನ ಸಂಜೆ ಏನೋ ವಿಶೇಷ ನಡೆದಿದ್ದಂತೆ ಯಾರಿಗೂ ಅನ್ನಿಸಲಿಲ್ಲ. ಎಲ್ಲ ಸುಮುಖವಾಗಿತ್ತು.

***

ಪರಿಷತ್ತಿನ ಕಾರ್ಯಸಮಿತಿಯ ಒಂದಾನೊಂದು ಅಧಿವೇಶನದಲ್ಲಿ ನಡೆದ ಒಂದು ಸಂಗತಿ ಬೋಧಪ್ರದವಾಗಿದೆ. ಮೀಟಿಂಗು ಸಂಜೆ ಆರು ಘಂಟೆಗೆ ಸೇರಿತ್ತು. ಮೊದಲನೆಯ ಕಾರ್ಯಾಂಶ ಯಾರೋ ಸತ್ತದ್ದಕ್ಕಾಗಿ ಸಂತಾಪ ಸೂಚನೆ. ಅದರ ಮೊದಲನೆಯ ಕರಡು ಬರಹ (Draft) ಹೀಗಿತ್ತು:

“ಉಜ್ಜ್ವಲ ದೇಶಾಭಿಮಾನಿಗಳಾದ ಮಹಾಪಂಡಿತರೂ ವರಕವಿಗಳೂ ದಾನಶೌಂಡರೂ ಆದ ಕಖಗಘಙ ಅವರು ಮೃತಪಟ್ಟದ್ದಕ್ಕಾಗಿ ಈ ಸಮಿತಿ ಸಂತಾಪಪಟ್ಟಿದೆ.”

ಇದರ ಮೇಲೆ ತಿದ್ದುಪಡಿಗಳಾದವು, ಹೀಗೆ:

1. “ಮೃತಪಟ್ಟದ್ದಕ್ಕಾಗಿ” ಎಂಬುದಕ್ಕೆ ಬದಲಾಗಿ “ನಿಧನರಾದುದಕ್ಕಾಗಿ.”
2. “ಮರಣ ಹೊಂದಿದ್ದಕ್ಕಾಗಿ.”
3. “ಕಾಲಾಧೀನರಾದದ್ದಕ್ಕಾಗಿ.”
4. “ದೈವಾಧೀನರಾದದ್ದಕ್ಕಾಗಿ.”
5. “ಪಂಚತ್ವವನ್ನೈದಿದ್ದಕ್ಕಾಗಿ.”
6. “ಸ್ವರ್ಗಸ್ಥರಾದದ್ದಕ್ಕಾಗಿ.”

ಮಧ್ಯೇ ಮಧ್ಯೇ ಚರ್ಚೆಗಳು. ದೈವಾಧೀನವೆಂದರೇನು? ಪಂಚತ್ವ ಹೇಗಾದೀತು? ಶೂನ್ಯತ್ವ ಎನ್ನಬೇಕಲ್ಲವೆ? ಸ್ವರ್ಗಸ್ಥರಾದರೆ ಸಂತಾಪವೇಕೆ? ಸಂತೋಷಪಡಬೇಕಾದದ್ದಲ್ಲವೆ?

ಹೀಗೆ ಪುಂಖಾನುಪುಂಖವಾಗಿ ವಾದ ಬೆಳೆದು ಘಂಟೆ ಆರೂವರೆಯಾಯಿತು. ಆಮೇಲೆ ಇನ್ನೊಂದು ತಿದ್ದುಪಡಿಗಳ ಮಾಲೆ:

“ಈ ಸಮಿತಿ ಸಂತಾಪಪಟ್ಟಿದೆ” ಎನ್ನುವುದಕ್ಕೆ ಬದಲಾಗಿ-

1. “ಲೋಕವೆಲ್ಲವೂ ಪರಿತಪಿಸುತ್ತದೆ.”
2. “ದೇಶಕ್ಕೆ ನಷ್ಟವಾಗಿದೆಯಲ್ಲವೆ?”
3. “ಅಪಾರ ನಷ್ಟವಾಗಿರುವುದು ಸರಿಯಷ್ಟೆ?”
4. “ನಷ್ಟವಾಗಿರುವುದು ಸರಿ.”
5. “ನಷ್ಟವಾದದ್ದು ಸರಿ ಎಂದು ನಾವು ಒಪ್ಪೋಣವೆ?”

ಹೀಗೆ ನಡೆಯಿತು ವಾದವೃದ್ಧಿ. ಏಳು ಘಂಟೆ ಬಡಿದಾಗ ಇನ್ನೂ ತೀರ್ಮಾನವಾಗಿರಲಿಲ್ಲ.

ನಮ್ಮ ದೇಶದಲ್ಲಿ ಸಭೆ ಸಮಾರಂಭಗಳು ಏಕೆ ಕಾರ್ಯಪರಿಣಾಮ ಪಡೆಯುತ್ತಿಲ್ಲವೆಂಬುದನ್ನು ಮಹಾಜನರು ಇದರಿಂದ ಕೊಂಚ ಊಹಿಸಬಹುದು.

೧೧

ನಂಗಪುರಂ ವೆಂಕಟೇಶಯ್ಯಂಗಾರ್ಯರು

ಕನ್ನಡ ಸಾಹಿತ್ಯ ಪರಿಷತ್ತನ್ನು ಕಟ್ಟಿದವರ ಪೈಕಿ ಮೊದಮೊದಲಿನ ಕೆಲವರನ್ನು ಸ್ಮರಿಸುವುದು ನನ್ನ ಮನಸ್ತೃಪ್ತಿಗೆ ತುಂಬ ಅವಶ್ಯವಾಗಿದೆ.

ನಂಗಪುರಂ ವೆಂಕಟೇಶಯ್ಯಂಗಾರ್ಯರೂ ಅವರಲ್ಲೊಬ್ಬರು. ಇವರು ಸರಕಾರದ ಮೀಟಿಯರೊಲಾಜಿಕಲ್ ಇಲಾಖೆಯಲ್ಲಿ ಮುಖ್ಯಸ್ಥರಾಗಿದ್ದರು. ಇವರು ಬೆಳ್ಳಾವೆ ವೆಂಕಟನಾರಣಪ್ಪನವರಿಗೆ ವಿದ್ಯಾಗುರುಗಳಾಗಿದ್ದವರಂತೆ. ಅವರಿಬ್ಬರಿಗೂ ಇದ್ದ ಅನ್ಯೋನ್ಯ ಪ್ರೀತಿ ಗೌರವಗಳು ಗಾಢವಾದವು. ವೆಂಕಟನಾರಣಪ್ಪನವರು ನಡಸುತ್ತಿದ್ದ ವಿಜ್ಞಾನ ಪ್ರಚಾರ ಸಂಘದ ಕಾರ್ಯದಲ್ಲಿಯೂ 'ವಿಜ್ಞಾನ' ಪತ್ರಿಕೆಯ ಪ್ರಕಟನ ಕಾರ್ಯದಲ್ಲಿಯೂ ನಂಗಪುರಂ ಅವರು ಕೊಟ್ಟ ಸಹಕಾರವು ಮನಃಪೂರ್ವಕವಾದದ್ದು, ಮತ್ತು ತುಂಬ ಬೆಲೆಯುಳ್ಳದ್ದು.

ಮತವಿಷಯದಲ್ಲಿಯೂ ಉದಾರಭಾವವುಳ್ಳವರು ನಂಗಪುರಂ ವೆಂಕಟೇಶಯ್ಯಂಗಾರ್ಯರು. ಶ್ರೀ ರಾಮಕೃಷ್ಣ ಪರಮಹಂಸರವರಲ್ಲಿ ಅವರಿಗೆ ನಿರತಿಶಯವಾದ ಭಕ್ತಿ. ಪರಮಹಂಸರ ಮತ್ತು ವಿವೇಕಾನಂದರ ಜನ್ಮದಿನೋತ್ಸವಗಳಲ್ಲಿ ಅವರಿಗೆ ತುಂಬಾ ಉತ್ಸಾಹ. ಅವರು ಪರಮಹಂಸರ 'ವಚನಾಮೃತ' ವನ್ನು ಕನ್ನಡದಲ್ಲಿ ಬರೆದಿದ್ದಾರೆಂದು ನನ್ನ ಜ್ಞಾಪಕ. ಹಾಗೆಯೇ ಭಕ್ತ ನಂದ, ಭಕ್ತೆ ಮೀರಾಬಾಯಿ ಇವರ ಚರಿತೆಗಳನ್ನು ಬರೆದಿದ್ದಾರೆ. ಅವರ ಶೈಲಿ ಒಳ್ಳೆ ಓಜಸ್ಸುಳ್ಳದ್ದು. ಅವರು ವಿದ್ಯಾರ್ಥಿಯಾಗಿದ್ದಾಗ 'ಸೌಗಂಧಿಕಾಪಹರಣ' ಎಂಬ ಚಂಪೂಶೈಲಿಯ ಗದ್ಯಕಾವ್ಯವನ್ನು ಮೆಚ್ಚುಗೆಯಿಂದ ಓದಿದ್ದರಂತೆ. ರುದ್ರಭಟ್ಟನ 'ಜಗನ್ನಾಥ ವಿಜಯ' ಅವರಿಗೆ ಪ್ರಿಯವಾದ ಕಾವ್ಯ. ಅವರ ಕಾಲದ ಉದ್ಗ್ರಂಥಗಳ ಪ್ರಭಾವಕ್ಕೆ ಅವರು ಒಳಗಾಗಿದ್ದರು.

ನಂಗಪುರಂ ವೆಂಕಟೇಶಯ್ಯಂಗಾರ್ಯರು ಪರಮ ಪ್ರಾಮಾಣಿಕರು. ಅಸತ್ಯವನ್ನಾಗಲಿ ಅನ್ಯಾಯವನ್ನಾಗಲಿ ಅವರು ಸಹಿಸುವವರಲ್ಲ. ಅವರು ಬಹುಭಾಷಿಗಳಲ್ಲ. ಸಂದರ್ಭ ಅವರನ್ನು ಕೆರಳಿಸಿದಾಗ ಅವರ ಬಾಯಿಂದ ಹೊರಟವು ಜಾಜಿ, ಮಲ್ಲಿಗೆ, ಸಂಪಿಗೆ, ಅಥವಾ ಕತ್ತಿ, ಪಂಜು, ಶೂಲ. ಅವರ ಸ್ವಭಾವ ತೀವ್ರವಾದದ್ದು. ಎಷ್ಟು ಕೋಮಲವೋ ಅಷ್ಟು ಕಠಿನ; ಎಷ್ಟು ಕಠಿನವೋ ಅಷ್ಟು ಕೋಮಲ. ಸಾಹಿತ್ಯ ಸಮ್ಮೇಳನಗಳಿಗೆ ಬಂದಾಗ ಅವರ ಜೊತೆಯಲ್ಲಿ ಒಂದು ಬೆತ್ತದ ಪೆಟ್ಟಿಗೆಯ ತುಂಬ ಪೂರಿ, ಸಜ್ಜಿಗೆ, ಚಕ್ಕುಲಿ, ಕಡಲೆ

ಕಾಯುಂಡೆ, ಎಳ್ಳುಂಡೆ, ಹುರಿಗಾಳು-ಇತ್ಯಾದಿಗಳು ಇರುತ್ತಿದ್ದವು. ಅವರು ನಮ್ಮ ಮಿತ್ರ ಗೋಷ್ಠಿಯನ್ನು "ಸ್ನಾನವಾಗಿದೆಯೆ?" ಎಂದು ವಿಚಾರಿಸುವರು. "ಆಗಿದೆ" ಎಂದೊಡನೆಯೇ ತಮ್ಮ ಕೋಣೆಯೊಳಕ್ಕೆ ನಮ್ಮನ್ನು ಕರೆದು ತಿಂಡಿಗಳನ್ನು ಹಂಚುವರು. "ಸಾಕು" ಎಂದರೆ ಇನ್ನೊಂದಷ್ಟನ್ನು ನಮ್ಮ ಕೈಮೇಲೆ ಹೇರಿ "ತಿನ್ನಿ ಎಂದರೆ ತೆಗೆದುಕೊಳ್ಳಬೇಕು" ಎಂದು ಬಲಾತ್ಕಾರ ಮಾಡುವರು. ನಮ್ಮ ಚೇಷ್ಟೆಗಳನ್ನು ನೋಡಿ ನಗುವರು.

ಒಂದು ಸಾರಿ ಬೆಳಗ್ಗೆ ಹರಿಹರಕ್ಕೆ ಬಂದೆವು. ವೆಂಕಟನಾರಣಪ್ಪನವರಿಗೆ "ಓಹೋ! ಈಹೊತ್ತು ಕಾರ್ತಿಕ ಸೋಮವಾರ, ಒಳ್ಳೆಯ ದಿನವೇ ಹರಿಹರಕ್ಕೆ ಬಂದಹಾಗಾಯಿತು! ಈಹೊತ್ತು ಇಲ್ಲಿ ಏಕಾದಶವಾರ ಅಭಿಷೇಕ ಮಾಡಿಸಿ ಹನ್ನೊಂದು ಮಂದಿಗೆ ಬ್ರಾಹ್ಮಣ ಭೋಜನ ಮಾಡಿಸಬೇಕಲ್ಲ?"

ವೆಂಕಟೇಶಯ್ಯಂಗಾರ್ಯರು "ಹಾಗಿಲ್ಲದೆ ಉಂಟೆ? ಬೇಕಾದ್ದು ಮಾಡೋಣ" ಎಂದರು.

ನಮ್ಮ ಗುಂಪಿನಲ್ಲಿ ಹತ್ತು ಮಂದಿ ಇದ್ದೆವು. ಸ್ಟೇಷನ್ನಿಗೆ ಭೀಮಸೇನರಾವ್ ಎಂಬವರು ತಮ್ಮ ಸ್ವಂತ ಕೆಲಸಕ್ಕಾಗಿ ಬಂದಿದ್ದರು. ಅವರು ವೆಂಕಟನಾರಣಪ್ಪನವರನ್ನು ಕಂಡೊಡನೆಯೇ ನಮಸ್ಕರಿಸಿ "ನಾನು ತಮ್ಮ ಶಿಷ್ಯ" ಎಂದು ಹೇಳಿಕೊಂಡರು. ವೆಂಕಟನಾರಣಪ್ಪನವರು ಜ್ಞಾಪಕ ಮಾಡಿಕೊಂಡು "ಹೌದಪ್ಪ, ಸಂತೋಷ. ನಿಮ್ಮಿಂದ ಒಂದು ಉಪಕಾರವಾಗಬೇಕಾಗಿದೆಯಲ್ಲ?" ಎಂದರು. ಭೀಮಸೇನರಾಯರು ಹರಿಹರದ ಸಬ್ ರಿಜಿಸ್ಟ್ರಾರರು. ಅವರು "ಏನಾಗಬೇಕು?" ಎಂದು ಕೇಳಿದರು. ವೆಂಕಟನಾರಣಪ್ಪನವರು ಅವರ ಕೈಗೆ ಐದು ರೂಪಾಯಿ ನೋಟೊಂದನ್ನು ಕೊಟ್ಟು "ಎರಡು ರೂಪಾಯಿಗೆ ಒಳ್ಳೆಯ ಅಕ್ಕಿ, ಒಂದು ರೂಪಾಯಿಗೆ ಹಾಲು, ಒಂದು ರೂಪಾಯಿಗೆ ಸಕ್ಕರೆ, ಇನ್ನೊಂದು ರೂಪಾಯಿಗೆ ಒಳ್ಳೆಯ ಹಸನ್ ತುಪ್ಪ-ಇವುಗಳನ್ನು ತರೆಸಿ ಟ್ರ್ಯಾವೆಲರ್ಸ್ ಬಂಗಲೆಗೆ ಕಳಿಸಬೇಕು. ಅಕ್ಕಿಯನ್ನು ಕೇರಿಸಿ ಚೊಕ್ಕಟ ಮಾಡಿಸಬೇಕು. ಅದರ ಕೂಲಿ ನಾನು ಕೊಡುತ್ತೇನೆ. ಇಷ್ಟರ ಜೊತೆಗೆ ಇಲ್ಲಿ ಭೋಜನಕ್ಕೆ ಬರಬೇಕು. ನೀವಿಲ್ಲದಿದ್ದರೆ ಹನ್ನೊಂದು ಮಂದಿಯಾಗುವುದಿಲ್ಲ" ಎಂದರು.

ಭೀಮಸೇನರಾಯರು ವಿನಯದಿಂದಲೂ ಭಕ್ತಿಯಿಂದಲೂ ಒಪ್ಪಿ ನಡೆಸಿಕೊಟ್ಟರು. ಆದರೆ ಆ ಸಮಾರಂಭದಲ್ಲಿ ಮುಖ್ಯ ಪಾತ್ರ ನಂಗಪುರಂ ವೆಂಕಟೇಶಯ್ಯಂಗಾರ್ಯರದು. ನದಿಯಲ್ಲಿ ಹೊಸ ನೀರು ಬಂದು ಬಗ್ಗಡವಾಗಿ ನೀರು ಕೆಂದೂಳಿನ ಕೆಸರಿನಂತಿತ್ತು. ವೆಂಕಟೇಶಯ್ಯಂಗಾರ್ಯರೂ, ವೆಂಕಟನಾರಣಪ್ಪನವರೂ ಅದರಲ್ಲಿ ಸ್ನಾನ ಮಾಡಿ ಒದ್ದೆ ಬಟ್ಟೆಗಳನ್ನುಟ್ಟು ಕೊಳಪಾತ್ರೆಗಳಲ್ಲಿ ನೀರನ್ನು ಎಂಟು ಹತ್ತು ಸಾರಿ ಗುಡ್ಡದ ಮೇಲಿದ್ದ

ಬಂಗಲೆಗೆ ಹೊತ್ತರು. ಅಲ್ಲಿ ನೀರು ಕಾಯಿಸಿ ನಮಗೆ ಸ್ನಾನಕ್ಕೆ ಅಣಿಮಾಡಿದರು. ಬೇರೆ ಪಾತ್ರೆಗಳಲ್ಲಿ ನೀರು ತಂದು ಕುಡಿಯುವುದಕ್ಕಾಗಿ ಕಾಯಿಸಿಟ್ಟರು. ಅವರಿಬ್ಬರೂ ಮಿಕ್ಕೆಲ್ಲರಿಗಿಂತ ವಯಸ್ಸಾದವರು. ಆದರೆ ನಾವೆಲ್ಲ ಮೊಂಡರು; ನಾಚಿಕೆ ಅಳಿಸಿಹೋಗಿತ್ತು.

ಒಂದು ಬಿಂದಿಗೆಯಲ್ಲಿ ನೀರಿಟ್ಟು ಕಲಶಾರ್ಚನೆ ಮಾಡಿ ವೆಂಕಟನಾರಣಪ್ಪನವರೂ ತೋಗೆರೆ ನಂಜುಂಡಶಾಸ್ತ್ರಿಗಳೂ ಕಡಬದ ನಂಜುಂಡಶಾಸ್ತ್ರಿಗಳೂ ರುದ್ರಸೂಕ್ತಗಳನ್ನು ಹೇಳಲುಪಕ್ರಮಿಸಿದರು. ಹೀಗೆ ಮೂರು ಮಂದಿ ಸಮೂಹದಲ್ಲಿ ನಾಲ್ಕಾವರ್ತಿ ಶ್ರೀರುದ್ರವನ್ನು ಹೇಳಿದರೆ ಮೂರು ನಾಲ್ಕಲ ಹನ್ನೆರಡಾಯಿತಷ್ಟೆ? ಹೀಗೆ ಏಕಾದಶವಾರ ರುದ್ರಪಾಠವಾದ ಮೇಲೆ ಆ ಕಲಶವನ್ನು ತೆಗೆದುಕೊಂಡು ಹರಿಹರೇಶ್ವರ ಸ್ವಾಮಿಯ ಸನ್ನಿಧಿಗೆ ಹೋಗಿ ಅದನ್ನರ್ಪಿಸಿ ಪೂಜೆಮಾಡಿಸಿ ತೀರ್ಥ ಪ್ರಸಾದಗಳನ್ನು ಪಡೆದು ಸುಮಾರು ಒಂದು ಘಂಟೆಯ ವೇಳೆಗೆ ಟ್ರ್ಯಾವೆಲರ್ಸ್ ಬಂಗಲೆಗೆ ಬಂದೆವು.

ಅಲ್ಲಿ ಊಟದ ಪರಿಠವಣೆ. ಮಾವಿನಕಾಯಿ ಉಪ್ಪಿನಕಾಯಿ, ಆಲೂಗಡ್ಡೆ ಬದನೆಕಾಯಿ ಹುಳಿ, ಬೋಂಡ, ಹೆಸರುಬೇಳೆಯ ಪಾಯಸ, ಆಗತಾನೆ ಹೆಪ್ಪು ಹಾಕಿ ಆಗಿದ್ದ ಸಿಹಿಮಜ್ಜಿಗೆ- ಇಷ್ಟು. ಭೋಜನ ಪಸಂದಾಗಿತ್ತು.

ತರಕಾರಿಗಳೂ ಕೊಂಚ ಅಕ್ಕಿ ಬೇಳೆಯೂ ಉಪ್ಪಿನಕಾಯಿ ತುಪ್ಪಗಳೂ ಸಾಂಬಾರ ದ್ರವ್ಯಗಳೂ ವೆಂಕಟನಾರಣಪ್ಪನವರ ಸರ್ಕೀಟ್ ಪೆಟ್ಟಿಗೆಗಳಲ್ಲಿ ಯಾವಾಗಲೂ ಇರುತ್ತಿದ್ದವು. ಅವರು ಬಹುಮಟ್ಟಿಗೆ ಸ್ವಯಂಪಾಕದ ನಿಯಮವಿಟ್ಟುಕೊಂಡಿದ್ದವರು.

೧೨

ಕರ್ಪೂರ ಶ್ರೀನಿವಾಸರಾಯರು

ಕರ್ಣಾಟಕ ಸಾಹಿತ್ಯ ಪರಿಷತ್ತಿನ ಮೂಲ ಸ್ಥಾಪಕರಲ್ಲಿ ಕರ್ಪೂರ ಶ್ರೀನಿವಾಸರಾಯರೂ ಒಬ್ಬರೆಂದು ಹಿಂದೆ ಪ್ರಸ್ತಾವಿಸಿದೆ. [1] ಎಲ್ಲ ದೇಶಹಿತ ಪ್ರಯತ್ನಗಳಲ್ಲಿಯೂ ಅವರು ಗಣ್ಯರಾಗಬೇಕಾದವರು.

ವಿಶ್ವೇಶ್ವರಯ್ಯನವರಂತೆಯೇ ಶ್ರೀನಿವಾಸರಾಯರು ತಮ್ಮ ನೌಕರಿಯನ್ನು ಬೊಂಬಾಯಿ ಸರಕಾರದಲ್ಲಿ ಪ್ರಾರಂಭಿಸಿ, ಮೈಸೂರು ಸರಕಾರದಲ್ಲಿ ಉನ್ನತ ಪದವಿಯಿಂದ ನಿವೃತ್ತರಾದರು. ೧೯೧೫ರ ಫೆಬ್ರವರಿ ತಿಂಗಳಲ್ಲಿ ಗೋಪಾಲಕೃಷ್ಣ ಗೋಖಲೆಯವರು ದೈವಾಧೀನರಾದ ಏಳೆಂಟು ದಿನಗಳಲ್ಲಿ ಶೋಕ ಪ್ರದರ್ಶನಕ್ಕಾಗಿ ಬೆಂಗಳೂರಿನಲ್ಲಿ ಒಂದು ಮಹಾಜನ ಸಭೆಯನ್ನು ನಡಸತಕ್ಕದ್ದೆಂದು ಕೆಲಮಂದಿ ಮಿತ್ರರು ತೀರ್ಮಾನಿಸಿದರು. ಸಭೆಗೆ ದಿವಾನ್ ವಿಶ್ವೇಶ್ವರಯ್ಯನವರು ಅಧ್ಯಕ್ಷರಾಗುವಂತೆ ಕೇಳಿಕೊಳ್ಳಬೇಕೆಂದು ರಾವ್ ಬಹಾದೂರ್ ಗರುಡಾಚಾರ್ಯರೂ ಕೆ.ಎಸ್. ಕೃಷ್ಣಯ್ಯರ್ ಅವರೂ ನಾನೂ ದಿವಾನರಲ್ಲಿಗೆ ಹೋಗಿದ್ದೆವು. ವಿಶ್ವೇಶ್ವರಯ್ಯನವರು ಹೀಗೆ ಹೇಳಿದರು:

ವಿ: "ಆ ಸಭೆಗೆ ಅಧ್ಯಕ್ಷರಾಗಲು ಕರ್ಪೂರ ಶ್ರೀನಿವಾಸರಾಯರನ್ನು ಕೇಳಿರಿ, ಅದು ಯುಕ್ತ."

ನಾವು: "ತಾವು ದಯಮಾಡಿಸಿದರೆ ಸಭೆಗೆ ಹೆಚ್ಚು ಗೌರವ ಬರುತ್ತದೆ."

ವಿ: "ನಾನು ಸಭೆಗೆ ಬರುತ್ತೇನೆ. ನೀವು ಬೇಕೆಂದರೆ ಎರಡು ಮಾತನ್ನಾಡುತ್ತೇನೆ. ಆದರೆ, ಅಧ್ಯಕ್ಷ ಸ್ಥಾನಕ್ಕೆ ಶ್ರೀನಿವಾಸರಾಯರು ಎಲ್ಲ ವಿಧಗಳಲ್ಲಿಯೂ ಅರ್ಹರು. ಅವರೂ ಗೋಖಲೆಯವರೂ ಸಹಪಾಠಿಗಳು, ಒಂದೇ ಕ್ಲಾಸಿನಲ್ಲಿ ಇದ್ದವರು. ನಾನು ಇಬ್ಬರಿಗಿಂತ ಒಂದೆರಡು ವರ್ಷ ಹಳಬ. ಗೋಖಲೆ ಎರಡು ವರ್ಷ ಇಂಜಿನಿಯರಿಂಗ್ ಕಾಲೇಜಿನಲ್ಲಿದ್ದು ಬಿಟ್ಟುಬಿಟ್ಟರು. ಶ್ರೀನಿವಾಸರಾಯರು ಇಂಜಿನಿಯರಿಂಗ್ ಕಾಲೇಜಿನಲ್ಲಿ ನಿಂತು ಮುಂದೆ ಬಂದರು. ಗಣಿತಶಾಸ್ತ್ರದಲ್ಲಿ ಗೋಖಲೆಯವರಿಗಿಂತ ಮೇಧಾವಿಯೆನ್ನಬಹುದು. ನಡವಳಿಕೆಯಲ್ಲಿ ಪ್ರಾಮಾಣಿಕರು. ಪರಿಪೂರ್ಣ ದೇಶಾಭಿಮಾನಿಗಳು ಮತ್ತು ನಿರ್ಭೀತರು. ಅವರು ಅಧ್ಯಕ್ಷರಾದಲ್ಲಿ ನಾನು ಬರುತ್ತೇನೆ."

ವಿಶ್ವೇಶ್ವರಯ್ಯನವರ ಸಲಹೆಯಂತೆ ಸಭೆ ನಡೆಯಿತು. ಆಗ ವಿಶ್ವೇಶ್ವರಯ್ಯನವರು ಮಾಡಿದ ಭಾಷಣ ನಮ್ಮ ಮನಸ್ಸಿನಿಂದ ಅಳಿದುಹೋಗಿಲ್ಲ. ಅದು ಮಿತಪದಗಳಿಂದ ಕೂಡಿ ಗಂಭೀರ ವಿಚಾರವನ್ನೊಳಗೊಂಡಿತ್ತು.

ಆ ದಿನ ಕರ್ಪೂರ ಶ್ರೀನಿವಾಸರಾಯರು ಅಧ್ಯಕ್ಷ ಭಾಷಣ ಮಾಡುವ ಕಾಲದಲ್ಲಿ ಅವರಿಗೆ ಮಾತನಾಡುತ್ತ ಮಾತನಾಡುತ್ತ ಹಳೆಯ ನೆನಪುಗಳು ಉಕ್ಕಿ ಬಂದು, ಅಳು ತಡೆಯಲಾರದಷ್ಟಾಯಿತು. ಬೆಳವಾಡಿ ನಂಜುಂಡಯ್ಯ, ರಾಮಣ್ಣ-ಇವರು ಮೈಸೂರಿನಿಂದ ಬೊಂಬಾಯಿಗೆ ಹೋಗಿ ಇಂಜಿನಿಯರುಗಳಾಗಿ ಹೆಸರು ಪಡೆದವರಲ್ಲಿ ಮೊದಲಿಗರು. ಶ್ರೀನಿವಾಸರಾಯರು ಗದ್ಗದಿತರಾಗಿ ಅವರ ಹೆಸರುಗಳನ್ನು ನೆನೆಯುತ್ತ "ಓ ರಾಮಣ್ಣಾ!" ಎಂದು ಕೋಟಿನ ಕೊನೆಯಿಂದ ಕಣ್ಣುಗಳನ್ನೂ ಮೂಗನ್ನೂ ಒರಸಿಕೊಳ್ಳುತ್ತಿದ್ದರು. ಮೈಮೇಲೆ ಉತ್ತರೀಯವಿದ್ದದ್ದೂ ಅವರ ಗಮನಕ್ಕೆ ಬರಲಿಲ್ಲ. ಒಂದೆರಡು ನಿಮಿಷ ಅವಾಕ್ಕಾಗಿ ನಿಂತರು. ಇದು ತೋರಿಸುತ್ತದೆ ಅವರ ಹೃದಯವನ್ನ.

ವಿಶ್ವೇಶ್ವರಯ್ಯನವರಿಗೂ ಶ್ರೀನಿವಾಸರಾಯರಿಗೂ ಕೆಲವು ವೈಲಕ್ಷಣ್ಯಗಳು ಕಾಣುತ್ತಿದ್ದವು. ವಿಶ್ವೇಶ್ವರಯ್ಯನವರದು ಆಕಾರದಲ್ಲಿಯೂ ಸಹ ನಯ ನಾಜೂಕು. ಶ್ರೀನಿವಾಸರಾಯರದು ಎಂಕರುಕೊಂಕರು. ವಿಶ್ವೇಶ್ವರಯ್ಯನವರದು ಮಾತುಕಥೆಯಲ್ಲಿ ಲೆಕ್ಕಾಚಾರದ ಸ್ವಭಾವ. ಶ್ರೀನಿವಾಸರಾಯರದು ವಿಷಯದಂತೆ, ಪುರಸತ್ತಿದ್ದಂತೆ ಹಿಗ್ಗಿ ವಿಸ್ತಾರವಾಗುತ್ತಿತ್ತು.

ಶಾಸ್ತ್ರಾಸಕ್ತಿ

೧೯೧೩-೧೪ರಲ್ಲಿ ಮೈಸೂರಿನಲ್ಲಿ ಪ್ರಜಾಪ್ರತಿನಿಧಿ ಸಭೆಯ ಅಧಿವೇಶನ. ಅದರ ಮೊದಲನೆಯ ದಿವಸ ಆಗಬೇಕಾಗಿದ್ದ ಭಾಷಣದಲ್ಲಿ ಕನ್ನಂಬಾಡಿ ಜಲಾಶಯಕ್ಕೆ ಸಂಬಂಧಪಟ್ಟ ಒಂದು ಲೆಕ್ಕಾಚಾರದ ಅಂಶವನ್ನು ಸೇರಿಸಬೇಕೆಂದು ದಿವಾನ್ ವಿಶ್ವೇಶ್ವರಯ್ಯನವರ ಸಂಕಲ್ಪ. ಆ ಅಂಶವನ್ನು ಅಲ್ಲಿ ಸೇರಿಸಿದರೆ, ಇಂಡಿಯ ಸರಕಾರದೊಡನೆ ನಡೆಯುತ್ತಿದ್ದ ವ್ಯವಹಾರಕ್ಕೆ ಅನುಕೂಲವಾದೀತೆಂದು ಅವರ ಪ್ರತೀಕ್ಷೆ. ಆ ಅಂಶವನ್ನು ಒದಗಿಸಬೇಕಾದವರು ಸಂಸ್ಥಾನದ ಚೀಫ್ ಇಂಜಿನಿಯರ್ ಕರ್ಪೂರ ಶ್ರೀನಿವಾಸರಾಯರವರು. ಇದಕ್ಕಾಗಿ ಸಭಾಪ್ರಾರಂಭದ ಹಿಂದಿನ ದಿನ ರಾತ್ರಿ ಏಳು ಘಂಟೆಯ ವೇಳೆಗೆ ಒಬ್ಬ ಆಳು ಶ್ರೀನಿವಾಸರಾಯರ ಬಳಿಗೆ ಬಂದ. ರಾಯರು ಆಗ ಒಬ್ಬ ಪಂಡಿತರೊಡನೆ ತರ್ಕವಿವಾದ ನಡೆಸುತ್ತಿದ್ದರು, ಸಂಸ್ಕೃತದಲ್ಲಿ. ಶ್ರೀನಿವಾಸರಾಯರು ದಿವಾನರ ಆಳನ್ನು ನೋಡಿ "ಇರು" ಎಂದರು. ಹದಿನೈದಿಪ್ಪತ್ತು ನಿಮಿಷ ಕಳೆಯಿತು. ಇನ್ನೊಬ್ಬ ಆಳು ಬಂದ. ರಾಯರು ಅವನನ್ನು ನೋಡಿ ನಕ್ಕು "ಇರು" ಎಂದರು. ತರ್ಕ

ನಡೆಯುತ್ತಲೇ ಇತ್ತು. ಇನ್ನು ಹದಿನೈದು ನಿಮಿಷವಾದ ಮೇಲೆ ಮೂರನೆಯ ಆಳು ಬಂದ! ರಾಯರು ಪಂಡಿತರಿಗೆ ಹೇಳಿದರು: "ಇವಾ, ಹಾಂಗೇನಪ್ಪ, ಈ ವಿಶ್ವೇಶ್ವರಯ್ಯ ಬಾಲ್ಯದಿಂದಲೂ ಹೀಗೇನೇ, -ಏಳನೇ ತಿಂಗ್ಳಾಗೆ ಹುಟ್ಟಿದೋವ, ಪರಂಗಿಯೋರ ಹಾಂಗೆ: ಭಾಷೆ, ವೇಷ-ಎಲ್ಲಾ ಹಾಂಗೇ." ಹೀಗೆ ಹೇಳುತ್ತ ತರ್ಕ ಬಿಟ್ಟು ಬಂದು ಬೇಕಾಗಿದ್ದ ತಿಳಿವಳಿಕೆಯನ್ನು ಬರೆದುಕೊಟ್ಟರು.

ಇದನ್ನೆಲ್ಲ ನಾನು ಪಕ್ಕದ ಮಹಡಿಯ ಮೇಲಿನಿಂದ ನೋಡುತ್ತಿದ್ದೆ. ಸೆಕ್ರೆಟರಿ ಡಿ.ಎಂ. ನರಸಿಂಗರಾಯರು ನನ್ನ ಪಕ್ಕದಲ್ಲಿ ನಿಂತು "ನೋಡೀಪ್ಪಾ, ನೋಡಿ!" ಎನ್ನುತ್ತಿದ್ದರು. ನಮಗಿಬ್ಬರಿಗೂ ತುಂಬಾ ನಗು.

ಕರ್ಪೂರ ಶ್ರೀನಿವಾಸರಾಯರು ರಾಜಕೀಯದಲ್ಲಿ ತಿಲಕರ ಪಕ್ಷಕ್ಕೆ ಸೇರಿದವರು. ತಿಲಕರವರಲ್ಲಿಯೂ ಅವರ 'ಕೇಸರಿ' ಪತ್ರಿಕೆಯಲ್ಲಿಯೂ ತುಂಬ ಮಮತೆ. ತಿಲಕರು ಸತ್ತ ಹತ್ತನೆಯ ದಿವಸ ರಾಯರು ಒಂದು ನೂರು ಮಂದಿಯನ್ನು ಜೊತೆ ಕಟ್ಟಿಕೊಂಡು ಕೆಂಪಾಂಬುಧಿ ಕೆರೆಗೆ ಹೋಗಿ ಸ್ನಾನ ಮಾಡಿ ಎಲ್ಲರೊಡನೆ ತಿಲಕರಿಗೆ ಧರ್ಮೋದಕ ಕೊಟ್ಟರು.

ಮರಾಠಿ ಸಾಹಿತ್ಯವನ್ನೂ ರಾಯರು ನೋಡಿದ್ದರು. ಸಂಸ್ಕೃತದಲ್ಲಿ ಅವರಿಗೆ ಅತ್ಯಂತ ಅಭಿಮಾನ. ಸಂಸ್ಕೃತ ಪಂಡಿತರುಗಳ ವಿಷಯದಲ್ಲಿ ಅವರು ವಿಶೇಷ ಔದಾರ್ಯದಿಂದ ನಡೆದುಕೊಳ್ಳುತ್ತಿದ್ದರು.

ಅವರು ಬಾಲ್ಯದಲ್ಲಿ ಸಂಸ್ಕೃತ ಕಲಿತವರಲ್ಲ, ಸಂಪ್ರದಾಯಕ್ರಮದಲ್ಲಿ ಕಲಿತವರೂ ಅಲ್ಲ. ಸ್ವಾಮಿ ವಿವೇಕಾನಂದರ ದಿಗ್ವಿಜಯಖ್ಯಾತಿಯಿಂದಲೂ ಅವರ ಭಾಷಣಗಳಿಂದಲೂ ಅಂಕುರಿತವಾದದ್ದು ಅವರ ಸಂಸ್ಕೃತಾಭಿಮಾನ. ಅವರು ಬಹುಮಂದಿಗೆ ಈ ಸಂಗತಿಯನ್ನು ಉದಾಹರಿಸಿ "ಸುಲಭವಾದ ಭಾಷೆ ದೇವರೂ. ನೀವಿನ್ನೇನೂ ಮಾಡಬೇಡ್ರಿ. ಶ್ರೀಮದ್ರಾಮಾಯಾಣ ಓದಿದರೆ ಸಾಕು. ಆನಂದವಾಗಿ ಸಂಸ್ಕೃತ ಕಲಿಯಬಹುದು" -ಎಂದು ಉಪದೇಶಿಸಿದರು.

ಪರಿಷದಭಿಮಾನ

ಕರ್ನಾಟಕ ಸಾಹಿತ್ಯ ಪರಿಷತ್ತನ್ನು ಕಟ್ಟುವುದಕ್ಕಾಗಿ ಕರ್ಪೂರ ಶ್ರೀನಿವಾಸರಾಯರು ಪಟ್ಟ ಶ್ರಮ ಅಸಾಮಾನ್ಯವಾದದ್ದು. ಅವರು ಎಲ್ಲೆಲ್ಲಿಂದಲೋ ಸದಸ್ಯರುಗಳನ್ನೂ ಹಣವನ್ನೂ ತಂದು ಸೇರಿಸುತ್ತಿದ್ದರು. ಸಮಸ್ತ ಕರ್ಣಾಟಕದ ವಿದ್ವಜ್ಜನದ ಪರಿಚಯವೂ ಅವರಿಗಿತ್ತು. ಅವರು ಪರಿಷತ್ತಿನ ಒಂದು ಸಮ್ಮೇಳನವನ್ನೂ ತಪ್ಪಿಸಿಕೊಂಡವರಲ್ಲ. ಪ್ರತಿಯೊಂದು ಸಮ್ಮೇಳನದಲ್ಲಿಯೂ ಹಾಜರಿದ್ದು, ಭಾಷಣ ಮಾತ್ರದಿಂದಲೇ ಅಲ್ಲದೆ, ತಮ್ಮ ವ್ಯಕ್ತಿಪ್ರಭಾವದಿಂದಲೂ ಕಳೆ ಕಟ್ಟಿಸುತ್ತಿದ್ದರು. ನನಗೆ ಜ್ಞಾಪಕವಿರುವ ಒಂದೆರಡು ಸಂದರ್ಭಗಳನ್ನು ಸಂಕ್ಷೇಪವಾಗಿ ಹೇಳುತ್ತೇನೆ.

***

ಸಮ್ಮೇಳನ ಸಮಾರಂಭದಲ್ಲಿ ಸಭಾಕಾಲಕ್ಕಿಂತ ಭೋಜನ ಕಾಲವು ಹೆಚ್ಚು ಸ್ವಾರಸ್ಯದ್ದಾಗಿತ್ತು. ಅಲ್ಲಿ ರಾಯರೇ ಅಧ್ಯಕ್ಷರು. ಊಟಕ್ಕೆ ಕುಳಿತ ಪ್ರತಿಯೊಬ್ಬನೂ ಒಂದು ಶ್ಲೋಕವನ್ನೋ ಒಂದು ಪದ್ಯವನ್ನೋ ಒಂದು ಚೂರ್ಣಿಕೆಯನ್ನೋ ಒಂದು ಹಾಡನ್ನೋ ಹೇಳಲೇಬೇಕೆಂದು ಅವರು ಕಟ್ಟಾಜ್ಞೆ ಮಾಡಿದ್ದರು. ಬಹು ಬಗೆಯಾದ ಪದ್ಯಗಳೂ ಗದ್ಯಗಳೂ ಆಗ ನಲಿದಾಡುತ್ತಿದ್ದವು. ಒಂದು ಸಾರಿ ನಂಗಪುರಂ ವೆಂಕಟೇಶಯ್ಯಂಗಾರ್ಯರು ಗುಬಳಾಳದ ಶಾಮಾಚಾರ್ಯರೆಂಬುವರು ಬರೆದ ಸೌಗಂಧಿಕಾಪರಿಣಯವೆಂಬ ಒಂದು ನಡುಗನ್ನಡ ಕಾವ್ಯದಿಂದ ಗದ್ಯಭಾಗವನ್ನು ಹೇಳಿದರು. ಕೆಲವರು ಜೈಮಿನಿ ಭಾರತದಿಂದ ಹೇಳಿದರು. ಕೆಲವರು ಗದುಗಿನ ಭಾರತದಿಂದ. ಕಡಪ ರಾಘವೇಂದ್ರರಾಯರು "ಲಂಗೋಟಿ ಬಲು ಒಳ್ಳೇದಣ್ಣ" ಹಾಡಿದರು. ಉಪಚಾರ ಹೇಳುವ ವೈಖರಿಯಲ್ಲಿ ಚಿತ್ರವಿಚಿತ್ರ ಗಾದೆಗಳು ಬರುತ್ತಿದ್ದವು. "ಸರಕಾರದ ಹುದ್ದೆಯಲ್ಲಿದ್ದು ಲಂಚ ತಗೊಳ್ಳದೋವ ಕುಟುಂಬದ್ರೋಹಿ. ಸಮಾರಾಧನೆಯಾಗೆ ಕೂತು ಹೊಟ್ಟೆಂಬಾ ಉಣ್ಣದೋವ ಆತ್ಮದ್ರೋಹಿ."

ಕರ್ಪೂರ ಶ್ರೀನಿವಾಸರಾಯರು ಇಂಥ ಪ್ರಸಂಗಳಲ್ಲೆಲ್ಲ ಮನಸಾರ ಸಮಾನಸ್ಕಂಧರಂತೆ ಸೇರಿ ನಗುತ್ತಿದ್ದರು.

ಒಂದು ವಿಶೇಷ ಪ್ರಸಂಗ.

ಸಾಹಿತ್ಯ ಪರಿಷತ್ತಿನ ಒಬ್ಬಾನೊಬ್ಬ ವಿದ್ವಾಂಸರು ಪ್ರತಿ ಸಮ್ಮೇಳನಕ್ಕೂ ಬರುತ್ತಿದ್ದರು. ಆದರೆ, ಅವರನ್ನು ವೆಂಕಟನಾರಣಪ್ಪನವರು ಹೆಚ್ಚಾಗಿ ಪುರಸ್ಕರಿಸುತ್ತಿರಲಿಲ್ಲ,

ದೂರದಲ್ಲಿಟ್ಟಿರುತ್ತಿದ್ದರು. ಅದಕ್ಕೆ ಕಾರಣಗಳೂ ಇದ್ದವೆಂದಿಟ್ಟುಕೊಳ್ಳೋಣ. ಆ ವಿದ್ವಾಂಸರನ್ನು ಕ್ಷ. ಎಂದು ಕರೆಯೋಣ.

ಚಿಕ್ಕಮಗಳೂರಿನಲ್ಲಿ ಸಾಹಿತ್ಯ ಸಮ್ಮೇಳನ. ವಿದ್ವಾನ್ ಕ್ಷ. ರವರು ಕರ್ಪೂರ ಶ್ರೀನಿವಾಸರಾಯರಲ್ಲಿ ಅಂಗಲಾಚಿ ದೂರು ಹೇಳಿಕೊಂಡಂತೆ ಕಾಣುತ್ತದೆ. ರಾಯರು "ವೆಂಕಟನಾರಣಪ್ಪ, ಆ ಮನುಷ್ಯನಿಗೆ ಈಹೊತ್ತಾದರೂ ಸ್ವಲ್ಪ ಅವಕಾಶ ಕೂಡಿ. ಅವ ಏನೋ ಹೇಳುತ್ತಾನಂತೆ, ನೀವು ಅವಕಾಶ ಕೊಡಲಿಲ್ಲವೆಂದು ಬಾಯಿ ಬಡಿದುಕೊಳ್ಳುತ್ತಾನೆ. ಕೊಂಚ ಕೃಪೆ ತೋರಿಸಿ ದೇವರು!" ಎಂದರು.

ವೆಂಕಟನಾರಣಪ್ಪನವರು ರಾಯರ ಮಾತು ಮೀರಲಾರದೆ ಆ ಸಂಜೆ ವಿದ್ವಾನ್ ಕ್ಷ. ರವರು ಹದಿನೈದು ಇಪ್ಪತ್ತು ನಿಮಿಷ ಮಾತನಾಡಿದರೆ ಆಗಬಹುದೆಂದರು. ಆ ಸಂಜೆ ಭರ್ತಿ ಸಭೆ, ನೂರಾರು ಮಂದಿ ಮಹಿಳೆಯರೂ ಬಂದಿದ್ದರು. ಸಭಾಕಾರ್ಯ ಕೊಂಚ ದೂರ ಸಾಗಿದ ಮೇಲೆ ವಿದ್ವಾನ್ ಕ್ಷ. ರವರನ್ನು ವೇದಿಕೆಗೆ ಕರೆಯಲಾಯಿತು.

ಕ್ಷ. ರವರು ಆಕಾರದಲ್ಲಿ ಕುಳ್ಳು. ಬಣ್ಣದಲ್ಲಿ ಕಪ್ಪು, ಅಂಥ ರೂಪವಂತರೆಂದು ಹೇಳುವಂತೆಯೂ ಇಲ್ಲ; ಆರೋಗ್ಯ ದೃಢಕಾಯರೂ ಅಲ್ಲ. ಆದರೂ ಏನೋ ಚಪಲ. ಆತ ವೇದಿಕೆಯ ಮೇಲೆ ಬಂದು ನಿಂತು ತಾನು ಭಾಷಣ ಮಾಡತಕ್ಕವನಲ್ಲವೆಂದೂ ಒಂದು ಪ್ರಸಿದ್ಧ ಕಾವ್ಯದಿಂದ ಕೆಲವು ವಾಕ್ಯಗಳನ್ನು ಉದಾಹರಿಸುವುದು ತನ್ನ ಉದ್ದೇಶವೆಂದೂ ಪೀಠಿಕೆ ಹೇಳಿ, 'ಕಬ್ಬಿಗರ ಕಾವ್ಯ' ದಿಂದ ಮನ್ಮಥನ ವಿಜಯಯಾತ್ರೆಯ ರಗಳೆಯನ್ನು ಹೇಳ ತೊಡಗಿದ, 'ಬಿಳಿಯ ನನೆಯ' ಇತ್ಯಾದಿಯಾಗಿ.

ಈ ವಾಕ್ಯಗಳನ್ನು ಹೇಳುವಾಗ ಕ್ಷ. ರವರು ಮನ್ಮಥನನ್ನು ಅನುಕರಣ ಮಾಡಹೊರಟರು. ಕಣ್ಣುಗಳನ್ನು ಹೊರಳಿಸುವುದು, ಹುಬ್ಬು ಹಾರಿಸುವುದು, ಎರಡು ಕೈಗಳಿಂದಲೂ ಚಿಟಿಕೆ ಹಾಕುವುದು, ಕಾಲೆತ್ತಿ ಕುಣಿಯುವುದು.

ಸಭಿಕರು ತಮ್ಮತಮ್ಮೊಳಗೇ ಅಸಹ್ಯಪಟ್ಟುಕೊಳ್ಳುತ್ತಿದ್ದರು. ಕರ್ಪೂರ ಶ್ರೀನಿವಾಸರಾಯರು:

"ವೆಂಕಟನಾರಣಪ್ಪಾ, ಆ ಹು...ಡೇನ ಕೆಳಕ್ಕೆ ಸೆಳೀರ್ರಿ-ಇಳಿಸಿಬಿಡ್ರಿ ಅವನ್ನ" ಎಂದು ಗಟ್ಟಿಯಾಗಿ ಕೂಗಿದರು. ಮುಂದೆ ನಡೆದದ್ದನ್ನು ಹೇಳಬೇಕಾಗಿಲ್ಲ.

ಒಂದು ಬಿಕ್ಕಟ್ಟು

ಇನ್ನೊಂದು ಪ್ರಕರಣ:

ಒಂದಾನೊಂದು ವರ್ಷ ಸಮ್ಮೇಳನದ ಅಧ್ಯಕ್ಷ ಪದವಿಗೆ ಯಾರನ್ನು ಚುನಾಯಿಸಬೇಕೆಂದು ಮುಖಂಡರ ಮನಸ್ಸಿನಲ್ಲಿ ಆಂದೋಳನ ನಡೆಯುತ್ತಿತ್ತು. ಆ ಪದವಿಗೆ ಉಮೇದುವಾರರಾಗಿದ್ದವರಲ್ಲಿ ಶ. ಎಂಬವರೊಬ್ಬರು. ಈ ಶ. ವಿದ್ವಾಂಸರು ಹಿಂದೆ ನಾಲ್ಕೈದು ವರ್ಷಗಳಿಂದ ಅದಕ್ಕಾಗಿ ಶ್ರಮ ಪಡುತ್ತಿದ್ದರು. ಮೇಲೆ ಹೇಳಿದ ಕ್ಷ. ರವರು ಶ. ರ ಪಂಗಡಕ್ಕೆ ಸೇರಿದವರು. ಹೀಗೆ ಶ. ರವರು ತಮ್ಮ ಗುಂಪನ್ನು ಕಟ್ಟುತ್ತಿದ್ದರು. ಈ ಗುಂಪುಗಾರಿಕೆ ವೆಂಕಟನಾರಣಪ್ಪನವರಿಗೂ ಶ್ರೀನಿವಾಸರಾಯರಿಗೂ ಇನ್ನು ಕೆಲವರಿಗೂ ಸರಿದೋರಲಿಲ್ಲ. ಆದರೆ, ಗುಂಪುಗಾರಿಕೆಯನ್ನು ತಡೆಯುವುದು ಹೇಗೆ? ಉಮೇದುವಾರಿಕೆಯನ್ನು ತಳ್ಳಿಹಾಕುವುದು ಹೇಗೆ? ಪರಿಷತ್ತಿನ ನಿಯಮಾವಳಿಯ ಪ್ರಕಾರ ಯಾವ ಮಾರ್ಗವೂ ತೋರಲಿಲ್ಲ. ಏತನ್ಮಧ್ಯೆ, ಉಮೇದುವಾರಿಕೆ ಪತ್ರಗಳ ಬಗೆಗೆ ಗೊತ್ತಾದ ದಿನ ಬಂದಿತು. ಆ ದಿನ ಬೆಳಗಿನ ಟಪಾಲಿನಲ್ಲಿ ಬಂದ ಪತ್ರಗಳಲ್ಲಿ ಶ. ರವರದು ಇರಲಿಲ್ಲ. ಅದರಿಂದ ಗಂಡಾಂತರ ತಪ್ಪಿಹೋಯಿತೆಂದು ಎಲ್ಲರ ಮನಸ್ಸೂ ಹಗುರವಾಯಿತು. ಆ ಸಾಯಂಕಾಲದವರೆಗೂ ಹಾಗಿತ್ತು. ಆದರೆ, ಆ ರಾತ್ರಿ ಯಾವಾಗಲೋ ಶ. ರವರ ಪತ್ರ ಬಂದು, ಪರಿಷತ್ತಿನ ಕಟ್ಟಡದ ಒಳಗಡೆ ಬಿದ್ದಿತ್ತು. ಆಗ ಪರಿಷತ್ತು ಶಂಕರಪುರದಲ್ಲಿ ಇತ್ತು. ಆ ಕಾಲದಲ್ಲೆಲ್ಲ ವೆಂಕಟನಾರಣಪ್ಪನವರು ರಾತ್ರಿ ಒಂದು ಸಾರಿ ಪರಿಷತ್ತಿನ ಕಟ್ಟಡಕ್ಕೆ ಬಂದು ಹೋಗುವ ಪದ್ಧತಿಯಿತ್ತು. ಅದರಂತೆ ಅವರು ಬಂದಾಗ ಅಲ್ಲಿ ಒಂದು ಲಕ್ಕೋಟೆ ಬಿದ್ದಿದ್ದದ್ದು ಕಾಣಿಸಿತು. ಅದರೊಳಗೆ ಶ. ರವರ ಉಮೇದುವಾರಿಕೆಯ ಪತ್ರವಿತ್ತು. ಹಗುರವಾಗಿದ್ದ ಮನಸ್ಸು ಭಾರವಾಯಿತು. ಅವರು ಆ ಹೊರೆಯನ್ನು ತಡೆಯಲಾರದೆ ಕೂಡಲೇ ಕರ್ಪೂರ ಶ್ರೀನಿವಾಸರಾಯರ ಮನೆಗೆ ಹೋಗಿ ತಮ್ಮ ಹೊಸ ಕಷ್ಟವನ್ನು ತೋಡಿಕೊಂಡರು. ರಾಯರಿಗೂ ಯೋಚನೆ ಬಂದಿತು. ಈಗ ಏನು ಉಪಾಯ?

ಮಾರನೆಯ ದಿನ ಬೆಳಗ್ಗೆ ಸುಮಾರು ಒಂಭತ್ತು ಘಂಟೆ. ವೆಂಕಟನಾರಣಪ್ಪನವರು ಪರಿಷತ್ತಿನ ಕಟ್ಟಡದಲ್ಲಿದ್ದರು. ನಂಗಪುರಂ ವೆಂಕಟೇಶಯ್ಯಂಗಾರ್ಯರೂ ನಾನೂ ಅಲ್ಲಿಗೆ ಬಂದಿದ್ದೆವು. ನಾವು ಬಂದ ಐದು ನಿಮಿಷದೊಳಗಾಗಿ ರಾಯರ ಧ್ವನಿ ನಮಗೆ ಕೇಳಿಸಿತು. ಅವರು ಸುಮಾರು ಅರ್ಧ ಫರ್ಲಾಂಗ್ ದೂರದಿಂದ "ವೆಂಕಟನಾರಣಪ್ಪಾ, ವೆಂಕಟನಾರಣಪ್ಪಾ" ಎಂದು ಕೂಗಿಕೊಂಡು ಬಂದರು. ಬೀದಿಯಿಂದಲೇ "ಏನೂ ಯೋಚನೆ ಮಾಡಬೇಡ್ರಿ. ನಿನ್ನೆ ಅವನದು ಬಂತಲ್ಲಾ, ಅದನ್ನ ಲೆಕ್ಕಕ್ಕೆ ತೆಗೊಳ್ಳಬೇಡ್ರಿ. ನಾನು

ಹಾಗಂತ ಬರೆದುಕೊಡುತ್ತೇನೆ. ನನ್ನದು ತಾನೆ ಜವಾಬ್ದಾರಿ?” ಎಂದರು. ಶ್ರೀನಿವಾಸರಾಯರು ಪರಿಷತ್ತಿನ ಉಪಾಧ್ಯಕ್ಷರು ಮತ್ತು ಸಮಸ್ತ ಅಧ್ಯಕ್ಷ ಕರ್ತವ್ಯವನ್ನೂ ನಿರ್ವಹಿಸಲು ಕ್ರಮವಾಗಿ ಅಧಿಕೃತರಾದವರು. ಅವರ ಮಾತನ್ನು ಕೇಳಿ, ವೆಂಕಟನಾರಣಪ್ಪನವರಿಗೆ ಕೊಂಚ ತಬ್ಬಿಬ್ಬಾಯಿತು. ನಾನು ಏನೋ ಒಳ್ಳೆ ವಿವರಣೆ ಬಂದೀತೆಂದು ಕುತೂಹಲದಿಂದ ಕೇಳುತ್ತಿದ್ದೆ. ರಾಯರು ಹೇಳಿದರು:

“ನೋಡ್ರಿ. ನಾನು ಒಂದೆರಡು ವರ್ಷಗಳಿಂದ ಸುಧಾ ಗ್ರಂಥದ ಮೇಲೆ ಟೀಕಾ ಬರೆಯಬೇಕೆಂದು ಸಿದ್ಧಪಡಿಸಿಕೊಳ್ಳುತ್ತಾ ಇದ್ದೇನೆ. ಅದರಲ್ಲಿ ಹೆಗೆಲ್ ತಾತ್ತ್ವಿಕನ ವಾದಗಳನ್ನು ಪ್ರಸ್ತಾವಿಸಬೇಕಾಗುತ್ತದೆ. ಆದದ್ದರಿಂದ ಸುಧಾ ಗ್ರಂಥವನ್ನೂ ಹೆಗೆಲ್ಲಿನ ಲೇಖನಗಳನ್ನೂ ತದೇಕಚಿತ್ತದಿಂದ ವ್ಯಾಸಂಗ ಮಾಡಬೇಕೆಂದು ಅದಕ್ಕಾಗಿ ಒಂದು ಮನೆಯನ್ನು ಪ್ರತ್ಯೇಕವಾಗಿರಿಸಿಕೊಂಡಿದ್ದೇನೆ. ಸ್ನಾನಾನಂತರ ಸ್ವಾಮಿಗಳು ಕೊಟ್ಟ ಶೇಷವಸ್ತ್ರವನ್ನು ಹೊದ್ದುಕೊಂಡು ಮನೆಯ ಬಾಗಿಲುಗಳನ್ನೆಲ್ಲ ಮುಚ್ಚಿ, ನಡುಮನೆಯಲ್ಲಿ ಏಕಾಂತವಾಗಿ ಕುಳಿತು ಧ್ಯಾನ ಮಾಡುವುದೂ ಆಲೋಚನೆ ಮಾಡುವುದೂ ಪದ್ಧತಿ. ಈಹೊತ್ತು ಬೆಳಗ್ಗೆ ಪಾರಾಯಣ ಕಾಲದಲ್ಲಿ- ‘ಎಲಾ! ಈ ತಾ-ಗಂ. ನ ಹೇಗೆ ತಪ್ಪಿಸುವುದು?’ ಎಂದು ಯೋಚನೆ ಮಾಡುತ್ತಿದ್ದೆ. ಆಗ ನೋಡ್ರಿ ಹೊಳೆಯಿತು. ಹದಿನೈದನೆಯ ತಾರೀಖು ಸೋಮವಾರ ಎಂದರೆ ಅಂದು ಸೂರ್ಯಾಸ್ತಮದವರೆಗೆ ಎಂದರ್ಥ. ಸೂರ್ಯಾಸ್ತದ ಅನಂತರ ಬಂದದ್ದು ಆ ದಿನಕ್ಕೆ ಸೇರತಕ್ಕದ್ದಲ್ಲ. ಆದದ್ದರಿಂದ ಶ. ಪತ್ರಿಕೆ ಸಕಾಲದಲ್ಲಿ ಬರಲಿಲ್ಲ ವಜಾ.”

ಹೀಗೆ ಪರಿಷತ್ತಿಗೆ ಬಂದಿದ್ದ ಅಪಾಯ ತಪ್ಪಿತು. ಪರಿಷತ್ತಿನ ನಿಯಮಾವಳಿಯನ್ನೂ ಭಂಗಮಾಡದೆ ಪಾಲಿಸಿದ್ದಾಯಿತು. ಆದರೆ ಧ್ಯಾನಸಮಾಧಿಯಲ್ಲಿ ಎಂಥ ಯೋಚನೆ!

ವಾಗ್ಮಿತೆ

ಕರ್ಪೂರ ಶ್ರೀನಿವಾಸರಾಯರು ವಾಗ್ಮಿಗಳೂ ಹೌದು. ವಿಷಯ ಯಾವುದಾದರಾಗಲಿ-ಸಾಹಿತ್ಯ, ಮತಾಚಾರ, ತತ್ತ್ವಶಾಸ್ತ್ರ, ಸಮಾಜ ಸುಧಾರಣೆ, ವಿದ್ಯಾಭ್ಯಾಸ-ಎಂಥದೇ ಆಗಲಿ, ಘಂಟೆಗಳ ಕಾಲ ನಿರರ್ಗಳವಾಗಿ ಭಾಷಣ ಮಾಡಬಲ್ಲವರಾಗಿದ್ದರು. ಒಂದು ಸಾರಿ ಶ್ರೀ ರಾಮಕೃಷ್ಣ ಮಠದಲ್ಲಿ ಶ್ರೀ ವಿವೇಕಾನಂದ ಸ್ವಾಮಿಗಳ ವರ್ಧಂತ್ಯುತ್ಸವ. ಬೇಕಾದ ಹಾಗೆ ಜನಸ್ತೋಮ ಸೇರಿತ್ತು. ಸುಮಾರು ೪ ಘಂಟೆಯ ವೇಳೆಗೆ ರಾಯರು ಬಂದಿಳಿದರು. ಆ ಸಮೀಪದಲ್ಲಿದ್ದ ನಮ್ಮ ಪೈಕಿ ಒಬ್ಬರು “ರಾಯರಿಗೆ ಆಯಾಸವಾಗಿರಬೇಕು; ಸರ್ಕೀಟಿನಿಂದ ಈಗ ತಾನೆ ಬಂದ ಹಾಗಿದೆ” ಎಂದರು.

ರಾಯರು: “ಹೌದಪ್ಪಾ, ಸಾಗರದ ಕಡೆಯಿಂದ ಅಲ್ಲಲ್ಲಿ ಇನ್‌ಸ್ಪೆಕ್ಷನ್ ಮುಗಿಸಿಕೊಂಡು ಬರಲು ಇಷ್ಟು ಹೊತ್ತಾಯಿತು.”

“ಇಷ್ಟರಮೇಲೆ ಈ ಹೊತ್ತು ಏಕಾದಶಿ. ಉಪವಾಸದಿಂದ ಹೆಚ್ಚು ಆಯಾಸವಾಗಿರಬೇಕು.”

ರಾಯರು: “ಆಯಾಸವಲ್ಲಪ್ಪ, ಅನುಕೂಲ. ಮೂರು ನಾಲ್ಕು ಘಂಟೆ ಹೊತ್ತು ಸಾವಕಾಶವಾಗಿ ಉಪನ್ಯಾಸ ಮಾಡಬಹುದು.”

ಆ ದಿನ ಬೇರೆ ಉಪನ್ಯಾಸಕರೂ ಒಬ್ಬ ಅಧ್ಯಕ್ಷರೂ ಇದ್ದದ್ದರಿಂದ ರಾಯರ ಭಾಷಣ ಅಷ್ಟು ಕಾಲ ನಡೆಯಲಿಲ್ಲ.

ಮೈಸೂರಿನ ಇಂಜಿನಿಯರುಗಳಲ್ಲಿ ಸಾಹಿತ್ಯ ಸಾಮರ್ಥ್ಯವಿದ್ದವರು (೧) ವಿಶ್ವೇಶ್ವರಯ್ಯನವರು, (೨) ಕರ್ಪೂರ ಶ್ರೀನಿವಾಸರಾಯರು, (೩) ಕೆ.ಕೃಷ್ಣಯ್ಯಂಗಾರ್ಯರು, (೪) ಸಿ.ಕಡಾಂಬಿಯವರು, (೫) ವೈ.ಶ್ರೀನಿವಾಸರಾಯರು. ಈ ಐವರೂ ಸಾಮಾನ್ಯ ಲೋಕ ಹಿತ ವಿಚಾರಗಳಲ್ಲಿಯೂ ಸಮಾಜ ವಿಚಾರಗಳಲ್ಲಿಯೂ ಶ್ರದ್ಧಾಸಕ್ತಿಗಳುಳ್ಳವರು. ಇವರಲ್ಲಿ ಮೂವರು ಸಭಾಭಾಷಣ ಪ್ರವೀಣರು: ಕರ್ಪೂರ ಶ್ರೀನಿವಾಸರಾಯರು, ಕೆ. ಕೃಷ್ಣಯ್ಯಂಗಾರ್ಯರು, ಸಿ. ಕಡಾಂಬಿಯವರು.

ಕರ್ಪೂರ ಶ್ರೀನಿವಾಸರಾಯರು ವಿಶ್ವವಿದ್ಯಾನಿಲಯದ ಸೆನೆಟ್ ಸಭೆಯಲ್ಲಿ ಭಾಷಣ ಮಾಡಲು ಪ್ರಾರಂಭಿಸುವರು-ಇಂಗ್ಲಿಷಿನಲ್ಲಿ “Mr. Vice-Chancellor, what I have to say is...” ಹೀಗೆ ಉಪಕ್ರಮಿಸಿ ಒಂದೆರಡು ವಾಕ್ಯಗಳಾದ ಮೇಲೆ ಕನ್ನಡಕ್ಕೆ ತಿರುಗುವರು: “ಹಾಗಲ್ಲ ಸ್ವಾಮಿ. ನಾನು ಹೇಳೋದೇನೆಂದರೆ ದೇವರೂ,...ಇಲ್ಲಿ

ಕೇಳ್ಬೋಣವಾಗಬೇಕು..." ಇದು ಒಂದೆರಡು ನಿಮಿಷವಾದ ಮೇಲೆ ಮತ್ತೆ ಇಂಗ್ಲಿಷಿಗೆ. ಮಧ್ಯೇ ಮಧ್ಯೇ Mr. Vice-Chancellor" ಎಂಬುದನ್ನು ಬಿಟ್ಟು Mr. Nanjundayya,..." ಎಂದೇ ಸಂಬೋಧಿಸತೊಡಗುವರು.

ಹೀಗೆ ಇಂಗ್ಲಿಷಿನಿಂದ ಕನ್ನಡಕ್ಕೆ. ಕನ್ನಡದಿಂದ ಇಂಗ್ಲಿಷಿಗೆ ತಿರುಗುವುದಲ್ಲದೆ ಇಂಗ್ಲಿಷ್ ಮಾತುಗಳನ್ನು ಕನ್ನಡದಂತೆಯೂ ಕನ್ನಡ ಮಾತುಗಳನ್ನು ಇಂಗ್ಲಿಷಿನಂತೆಯೂ ಉಚ್ಚರಿಸುವರು: "ವಾಟ್ ಐ ಸಬ್‌ಮಿಟ್ಟೂ", "ದೇರ್ಫೋರೂ"...ಹೀಗೆ.

ಅದು ಸಂಪೂರ್ಣ ಸ್ವತಾವಿಸ್ಮರಣೆ.

***

ಕರ್ಪೂರ ಶ್ರೀನಿವಾಸರಾಯರ ಮನೆಗೆ ನಾವಿಬ್ಬರು ಮೂವರು ಮಿತ್ರರು ಸಂಜೆ ಹೋಗುತ್ತಿದ್ದೆವು. ಕಾರಣ ಈಗಲೇ ಸ್ಪಷ್ಟಪಡುತ್ತದೆ. ರಾಯರು ಫಲಾಹಾರಕ್ಕೆ ಕೂಡುತ್ತಿದ್ದರು. ಹದಿನೈದು-ಇಪ್ಪತ್ತು ಚಪಾತಿಗಳು, ಅಥವಾ ಪೂರಿ. ಅದರ ಜೊತೆಗೆ ಎರಡು ದಿನಸುಗಳು: ಒಂದು ಕೊಬ್ಬರಿಚಟ್ನಿ; ಇನ್ನೊಂದು ಸೀಕರಣೆ. ಒಂದಡಿ ವ್ಯಾಸವುಳ್ಳ ಬೆಳ್ಳಿಯ ಬಟ್ಟಲಿನ ತುಂಬ, (ಮಾವಿನ ಹಣ್ಣು, ಹಲಸಿನ ಹಣ್ಣುಗಳಿಲ್ಲದಿದ್ದ ಕಾಲದಲ್ಲಿ) ರಸಬಾಳೆಯ ಹಣ್ಣಿನ ಸೀಕರಣೆ. ಅನಂತರ ಒಂದು ಲೋಟ ಹಾಲು. ನಾವು ಹೋಗಿ ಕುಳಿತೊಡನೆಯೇ ಅವರ ಅಡಿಗೆಯಾತ ನಮಗೆ ಎರಡೆರಡು ಚಪಾತಿ ಅಥವಾ ಪೂರಿ, ಅದಕ್ಕೆ ತಕ್ಕಷ್ಟು ಚಟ್ನಿ ಸೀಕರಣೆ ತಂದುಕೊಡುವನು. ನಾವು ಅದರಲ್ಲಿ ಅರ್ಧ ತಿಂದು ಹೊಟ್ಟೆ ಭಾರವಾಯಿತೆನ್ನುತ್ತಿದ್ದೆವು.

ಶ್ರೀನಿವಾಸರಾಯರು ಈಜುವುದರಲ್ಲಿ ನಿಸ್ಸೀಮರು. ಪ್ರತಿ ದಿನ ಬೆಳಗ್ಗೆ ಒಂದೆರಡು ಘಂಟೆಗಳು ಅವರು ಕೆರೆಯಲ್ಲಿ ಈಜುತ್ತಿದ್ದರು. ತುಂಬ ಪರಿಶುದ್ಧರು. ಈಜು ಕಲಿಯಬೇಕೆಂದು ಎಲ್ಲರಿಗೂ ಉಪದೇಶಿಸುತ್ತಿದ್ದರು; ಕಲಿಸಲು ತಾವಾಗಿ ಮುಂದೆಬರುತ್ತಿದ್ದರು. ಸ್ವಭಾವದಲ್ಲಿ ಉದಾರಿಗಳು. ತಮ್ಮ ಸಂಪಾದನೆಯೆಲ್ಲವನ್ನೂ ಹಿಂದು ಮುಂದು ನೋಡದೆ ವೆಚ್ಚ ಮಾಡಿದರು. ಸಂಸ್ಕೃತ ತಿಳಿದವರೂ ವೈದಿಕರೂ ಅವರ ಬಳಿ ಹೋಗಿ ಬರಿಗೈಯಿಂದ ಹಿಂದಿರುಗಿದ್ದಿಲ್ಲ. ಶ್ರೀನಿವಾಸರಾಯರು ಸದಾ ಸಂತೋಷಚಿತ್ತರು, ಮತ್ತು ಧೀರ ಸ್ವಭಾವದವರು.

***

ಶ್ರೀನಿವಾಸರಾಯರ ಕಡೆಯ ದಿನಗಳನ್ನು ನೆನೆದರೆ ಕೊಂಚ ಸಂಕಟವಾಗುತ್ತದೆ. ಪಾರ್ಶ್ವವಾಯುವಿನಿಂದ ಅವರು ನಿಶ್ಚೇಷ್ಟರಾಗಿದ್ದರು. ಪರಿಷತ್ತಿನ ಕಟ್ಟಡಕ್ಕೆ ಅವರ

ಕೈಯಿಂದ ವಾಸ್ತುಶಿಲೆಯನ್ನು ನೆಡಿಸಬೇಕೆಂದು ವೆಂಕಟನಾರಣಪ್ಪನವರ ಸಂಕಲ್ಪ. ಆದರೆ ರಾಯರ ದೇಹಸ್ಥಿತಿ ಅನುಕೂಲವಾಗಿರಲಿಲ್ಲ. ಆದದ್ದರಿಂದ ರಾಯರನ್ನು ಮೋಟಾರು ಕಾರಿನಲ್ಲಿ ಆ ಜಾಗಕ್ಕೆ ಕರೆತಂದು ಕಾರನ್ನು ರಸ್ತೆಯಲ್ಲಿ ನಿಲ್ಲಿಸಿ ರಾಯರ ಕೈಗೆ ಸೂತ್ರದ ಒಂದು ಕೊನೆಯನ್ನು ಕಟ್ಟಿ ಸೂತ್ರದ ಇನ್ನೊಂದು ಕೊನೆಗೆ ಗಾರೆಯ ಕರಣೆಯನ್ನು ಕಟ್ಟಿ ವೆಂಕಟನಾರಣಪ್ಪನವರು ಅಸ್ತಿಭಾರ ಹಾಕಿದರು. ಹೀಗೆ ಸೂತ್ರದ ಮೂಲಕ ರಾಯರ ಕೈಯಿಂದಲೇ ಕೆಲಸ ನಡೆಯಿತೆಂದು ಸಂಕೇತ. ಈ ಸಂಕೇತದಿಂದ ವೆಂಕಟನಾರಣಪ್ಪನವರ ಮನಸ್ಸಿಗೆ ತೃಪ್ತಿ. ನಮಗೆಲ್ಲ ವೆಂಕಟನಾರಣಪ್ಪನವರು ತೃಪ್ತರಾದರೆಂದು ತೃಪ್ತಿ.

೧೨

ವೈ.ಕೆ. ರಾಮಚಂದ್ರರಾಯರು

ಪರಿಷತ್ತಿನ ಮೊದಮೊದಲಿನ ಚರಿತ್ರೆಯಲ್ಲಿ ಸ್ಮರಣೆಗೆ ಬರಬೇಕಾದವರಲ್ಲಿ ವೈ.ಕೆ. ರಾಮಚಂದ್ರರಾಯರು ಒಬ್ಬರು. ಇವರು ರೈಲ್ವೆ ಚೀಫ್ ಇಂಜಿನಿಯರಾಗಿದ್ದು ನಿವೃತ್ತರಾದವರು. ಅವರು ಎಳಂದೂರಿನವರು. ಕನ್ನಡದಲ್ಲಿ ನೈಜವಾದ ಉತ್ಸಾಹವುಳ್ಳವರು; ೧೯೧೫ರಲ್ಲಿ ಗೋಖಲೆಯವರು ಮೃತರಾದಾಗ ಆ ಮಹನೀಯರನ್ನು ಕುರಿತು ಕನ್ನಡದಲ್ಲಿ ಪ್ರಬಂಧ ಬರೆದವರಲ್ಲಿ ಅತ್ಯುತ್ತಮರೆನಿಸಿದವರಿಗೆ ಒಂದು ಬಹುಮಾನವನ್ನು ಕೊಡಲು ಏರ್ಪಡಿಸಿದರು. ಹಾಗೆ ಬಹುಮಾನಿತವಾದ ಪ್ರಬಂಧ-ಯಾರೋ ಒಬ್ಬ ವಿದ್ಯಾರ್ಥಿಯದು-ಪರಿಷತ್ಪತ್ರಿಕೆಯಲ್ಲಿ ಪ್ರಕಟಗೊಂಡಂತೆ ನನಗೆ ಜ್ಞಾಪಕ.

ವೈ.ಕೆ.ರಾಮಚಂದ್ರರಾಯರು ಕನ್ನಡಲ್ಲಿ ಅನೇಕ ಗ್ರಂಥಗಳನ್ನು ಬರೆದರು. ಅವುಗಳಲ್ಲಿ ಒಂದು ಸ್ವಾಮಿ ವಿವೇಕಾನಂದರ 'ನನ್ನ ಆಚಾರ್ಯ' ಎಂಬುದು. ಇನ್ನೊಂದು ಗ್ಲಾಡ್‌ಸ್ಟನ್ನರ ರಾಜ್ಯಕಾರ್ಯ ವಿಚಕ್ಷಣೆಯನ್ನು ಕುರಿತದ್ದು. ಮತ್ತೊಂದು ಅಮೆರಿಕದ ಪ್ರೆಸಿಡೆಂಟ್ ಏಬ್ರಹಾಮ್ ಗಾರ್ಫೀಲ್ಡನ ಜೀವನಚರಿತ್ರೆ.

ಗಾರ್ಫೀಲ್ಡನ ಜೀವನಚರಿತ್ರೆಯನ್ನು ಸರಕಾರದ ವಿದ್ಯಾ ಇಲಾಖೆಯು (ಬಹುಶಃ ಲೋವರ್ ಸೆಕಂಡರಿ ಪರೀಕ್ಷೆಗೆ) ಪಠ್ಯಪುಸ್ತಕವಾಗಿ ನಿಯಮಿಸಿತು. ಆಗ ಪರಿಷತ್ತಿನ ಕಾರ್ಯದರ್ಶಿಗಳಲ್ಲೊಬ್ಬರಾಗಿದ್ದ ರಾ. ರಘುನಾಥರಾಯರವರು ಆ ಪುಸ್ತಕವನ್ನು ಪುನಃಪರಿಷ್ಕಾರ ಮಾಡಿ ಪ್ರಕಟಪಡಿಸಿದರು. ಅವರು ಮಾಡಿದ್ದ ಪುನಃಪರಿಷ್ಕರಣದ ವಿಷಯದಲ್ಲಿ ಅಭಿಪ್ರಾಯ ಏಕಮುಖವಾಗಿರಲಿಲ್ಲ. ಉದಾಹರಣೆಗಾಗಿ-ಗಾರ್ಫೀಲ್ಡನ ಹುಟ್ಟುಸಂಸ್ಥಾನವಾದ ಓಹಿಯೋ ಪ್ರಾಂತವನ್ನು ಕುರಿತ ಸಂದರ್ಭದಲ್ಲಿ ರಘುನಾಥರಾಯರು ಅಭಿನವ ಪಂಪನ 'ಗಾಡಿನ ಸೀಮೆ ಚೆಲ್ವಿಗಾಗರಂ' ಮೊದಲಾದ ಪದ್ಯವನ್ನು ಕೊಂಚ ಕೊಂಚ ಬದಲಾಯಿಸಿ ಅನ್ವಯಿಸಿದ್ದರು. ರಾಮಚಂದ್ರರಾಯರ ವಾಕ್ಯಗಳನ್ನೂ ಬದಲಾಯಿಸಿದ್ದರು. ಆದದ್ದರಿಂದ ವಿಮರ್ಶಕರು ಹೇಳಿದರು-ಇದು ರಘುನಾಥರಾಯರ ಪುಸ್ತಕವೇ ಹೊರತು ನಾವು ಒಪ್ಪಿಕೊಂಡಿದ್ದ ರಾಮಚಂದ್ರರಾಯರ ಪುಸ್ತಕವಾಗಲಿಲ್ಲ-ಎಂದು.

ರಘುನಾಥರಾಯರು ಮಹಾ ವಿದ್ವಾಂಸರು. ಅವರಿಗೆ ಉದ್ದಾಮ ಪ್ರಯೋಗಗಳಲ್ಲಿ ಒಲವು ಹೆಚ್ಚು. ಸ್ವಭಾವದಲ್ಲಿಯೂ ಅವರು ಸಪ್ಪೆಯಲ್ಲ. ಸಾಹಿತ್ಯಶೈಲಿಯಲ್ಲಿಯೂ ಅಲ್ಲ. ಎಲ್ಲವೂ

ವೀರ್ಯವತ್ತಾಗಿರಬೇಕು. ಹೀಗೆ ಅವರು ಮುಟ್ಟಿದ್ದು ರೂಪ ಮಾರ್ಪಡುತ್ತಿತ್ತು.

ನಮ್ಮ ವೆಂಕಟನಾರಣಪ್ಪನವರ ಪರಿಷ್ಕರಣಕ್ರಮದ ವಿಷಯದಲ್ಲಿಯೂ ಈ ಆಕ್ಷೇಪಣೆ ಇದೆ. ಅವರು ಚ.ವಾಸುದೇವಯ್ಯನವರ 'ಆರ್ಯಕೀರ್ತಿ' ಯನ್ನು ಒಂದು ಸಾರಿ ಪರಿಷ್ಕರಿಸಿದ್ದರು. ಅನಂತರ ಅದು ವಾಸುದೇವಯ್ಯನವರ 'ಆರ್ಯಕೀರ್ತಿ' ಯಾಗದೆ ವೆಂಕಟನಾರಣಪ್ಪನವರ 'ಆರ್ಯಕೀರ್ತಿ' ಯಾಯಿತು.

ಹೇಗಾದರಾಗಲಿ. ವೈ.ಕೆ. ರಾಮಚಂದ್ರರಾಯರ ಗಾರ್ಫೀಲ್ಡ್ ಪುಸ್ತಕದ ದ್ವಿತೀಯ ಮುದ್ರಣದಿಂದ ಬಂದ ವರಮಾನವನ್ನು ಅವರು ಪರಿಷತ್ತಿಗೆ ಕೊಟ್ಟರು. ಸುಮಾರು ಹದಿನೈದು ಸಾವಿರ ರೂಪಾಯಿಗಿಂತ ಹೆಚ್ಚಾಗಿ ಬಂತೆಂದು ನನಗಿರುವ ಜ್ಞಾಪಕ. ಪರಿಷತ್ತಿಗೆ ಆಗ ಹಣದ ಮುಗ್ಗಟ್ಟು ಹೆಚ್ಚಾಗಿತ್ತು. ಧನಸಹಾಯ ತುಂಬ ಅವಶ್ಯವಾಗಿತ್ತು. ಆಪತ್ಕಾಲದಲ್ಲಿ ಅದರ ಸಹಾಯಕ್ಕೆ ಬಂದವರು ವೈ.ಕೆ.ರಾಮಚಂದ್ರರಾಯರು.

ವೈ.ಕೆ.ರಾಮಚಂದ್ರರಾಯರು ಸ್ನೇಹತತ್ಪರರು; ಸ್ವಾಭಾವಿಕವಾಗಿ ದೊಡ್ಡಮನುಷ್ಯರು ಮತ್ತು ಭಗವದ್ಭಕ್ತರು. ಎಲ್ಲರಿಗೂ ಪ್ರಿಯರಾಗಿ ಮಾನ್ಯರಾದವರು.

೧೪

ತೋಗೆರೆ ನಂಜುಂಡಶಾಸ್ತ್ರಿಗಳು

ಕನ್ನಡ ಸಾಹಿತ್ಯ ಪರಿಷತ್ತು ಇಬ್ಬರು ಪೂರ್ವಪಂಡಿತರನ್ನು ತನ್ನ ಕಾರ್ಯಕ್ಕಾಗಿ ನಿಯಮಿಸಿಕೊಂಡಿತ್ತು. ಒಬ್ಬರು ತೋಗೆರೆ ನಂಜುಂಡಶಾಸ್ತ್ರಿಗಳು. ಇನ್ನೊಬ್ಬರು ಕಡಬದ ನಂಜುಂಡಶಾಸ್ತ್ರಿಗಳು. ಇಬ್ಬರೂ ಮಹಾ ಪಂಡಿತರು.

ತೋಗೆರೆ ನಂಜುಂಡಶಾಸ್ತ್ರಿಗಳನ್ನು ಪರಿಷತ್ತಿಗೆ ಶಿಫಾರಸು ಮಾಡಿ ಕಳಿಸಿದವರು ಮಹಾ ಮಹೋಪಾಧ್ಯಾಯ ಆರ್.ನರಸಿಂಹಾಚಾರ್ಯರು. ಶಾಸ್ತ್ರಿಗಳು ಆಚಾರ್ಯರ ಕೈಕೆಳಗೆ ಶಾಸನದ ಇಲಾಖೆಯಲ್ಲಿ ಕೆಲಸ ಮಾಡಿದ್ದವರು. ಅವರಿಗೆ ಎಲ್ಲ ಪ್ರಸಿದ್ಧ ಹಳಗನ್ನಡ ಕಾವ್ಯಗಳೂ ಮುಖ್ಯಸ್ಥವಾಗಿದ್ದವು. ಅದರ ಜೊತೆಗೆ ಸಾವಿರಾರು ಕನ್ನಡ ಶಾಸನಗಳನ್ನು ಅವರು ಪರಿಶೀಲಿಸಿ ಅಲ್ಲಲ್ಲಿಯ ಪದಪ್ರಯೋಗಗಳನ್ನು ಜ್ಞಾಪಕದಲ್ಲಿ ಧರಿಸಿದ್ದರು. ಪಾಣಿನಿಯ ಸಂಸ್ಕೃತ ವ್ಯಾಕರಣಸೂತ್ರಗಳೂ ವೃತ್ತಿವ್ಯಾಖ್ಯೆಗಳೂ ಅವರಿಗೆ ವಾಚೋವಿಧೇಯವಾಗಿದ್ದವು. ಅವರು ನಡತೆಯಲ್ಲಿ ಸದಾಚಾರನಿಷ್ಠರು, ಪರಿಶುದ್ಧರು.

ಒಂದು ಸಾರಿ ಕಡೂರಿನಲ್ಲಿ ನಾವು ಹತ್ತಬೇಕಾಗಿದ್ದ ರೈಲುಗಾಡಿ ನಾವು ಆ ಸ್ಥಳವನ್ನು ಮುಟ್ಟುವ ವೇಳೆಗೆ ಹೊರಟುಹೋಗಿತ್ತು. ನಾವು ಅಲ್ಲಿ ಹನ್ನೆರಡು ಹದಿನೈದು ಘಂಟೆಗಳ ಕಾಲ ಕಾಯಬೇಕಾಗಿತ್ತು. ಶಾಸ್ತ್ರಿಗಳು ಪರಾನ್ನ ಭೋಜನ ಮಾಡುವವರಲ್ಲ. ಅವರು ಮಡಿಯುಟ್ಟು ಕೊಂಚ ಬಾಳೆಹಣ್ಣು ಮೊದಲಾದ ಫಲಾಹಾರ ಮಾಡಿ ಹಾಗೆಯೇ ನನ್ನ ವ್ಯಾಕರಣ ಪ್ರಶ್ನೆಗೆ ಉತ್ತರ ಹೇಳುತ್ತಿದ್ದರು. ಶಬ್ದಮಣಿದರ್ಪಣಕಾರನ ವಿಧಿ, ಅದಕ್ಕೆ ಸಂವಾದಿಯಾದ ಭಟ್ಟಾಕಳಂಕನ ಸೂತ್ರ, ಅದಕ್ಕೆ ಸಂಬಂಧಪಟ್ಟಂತೆ ಭಾಷಾಭೂಷಣಕಾರನ ನಿಯಮ, ನಾನಾ ಕಾವ್ಯಗಳ ಪ್ರಯೋಗಗಳು, ಶಾಸನಗಳಲ್ಲಿಯ ವಾಕ್ಯಗಳು, ಎಲ್ಲಕ್ಕಿಂತ ಮೇಲೆ ಪಾಣಿನಿಯ ಮತ, ಅದಕ್ಕೆ ಉದಾಹರಣೆಗಳು-ಹೀಗೆ ಪುಂಖಾನುಪುಂಖವಾಗಿ ಎರಡು ಮೂರು ಘಂಟೆಗಳ ಕಾಲ ಅವಿಚ್ಛಿನ್ನವಾಗಿ ಉಪನ್ಯಾಸ ಮಾಡಿ ತಮ್ಮ ಸಿದ್ಧಾಂತವನ್ನು ಪ್ರತಿಪಾದಿಸಿದರು. ಅದು ಪ್ರಾಚೀನ ಪಾಂಡಿತ್ಯದ ಒಂದು (Sample) ಮಾದರಿ ಚೂರು.

ಕಾವ್ಯಪಾಠದಲ್ಲಿಯೂ ಅವರು ಹಾಗೆಯೇ. ಪಂಪಭಾರತದ ಪರಿಷ್ಕರಣ ಕಾರ್ಯದಲ್ಲಿ ಅವರೂ ನೆರವಾಗಿದ್ದರು. ಆ ಚರ್ಚೆಗಳಲ್ಲಿ ಅಭಿವ್ಯಕ್ತವಾಗುತ್ತಿತ್ತು ಅವರ ರಸವಿವೇಕ.

ಅವರು ಕನ್ನಡ ಲಿಪಿಯ ಚರಿತ್ರೆಯನ್ನು ಕುರಿತು ಒಂದು ಪ್ರಬಂಧ ಬರೆದರು. ಅದು ಸಾಹಿತ್ಯ ಪರಿಷತ್ಪತ್ರಿಕೆಯಲ್ಲಿ ಪ್ರಕಟವಾದದ್ದಲ್ಲದೆ ಬೇರೆ ಲಘು ಪುಸ್ತಕವಾಗಿಯೂ ಪ್ರಕಟವಾಯಿತು. ನಮ್ಮ ಈ ಹೊತ್ತಿನ ಲಿಪಿ ಬ್ರಾಹ್ಮೀಲಿಪಿಯಿಂದ ಹೇಗೆ ಇಳಿದುಬಂದಿದೆ ಎಂಬುದರ ಪೂರ್ವೋತ್ತರ ವಿವರಣೆಗಳನ್ನು ಅವರು ಶಾಸನಗಳಿಂದ ತೆಗೆದ ನಿದರ್ಶನಗಳೊಡನೆ ತೋರಿಸಿದ್ದಾರೆ.

ತೋಗೆರೆ ಶಾಸ್ತ್ರಿಗಳು ಸ್ವಭಾವದಲ್ಲಿ ಸರಳರು. ಅತ್ಯಲ್ಪ ವರಮಾನದಲ್ಲಿ ತೃಪ್ತಜೀವನವನ್ನು ನಡೆಸಿದವರು. ಸ್ವಲ್ಪ ಮುಂಗೋಪಿಗಳು. ಶಾಸ್ತ್ರವಿಷಯದಲ್ಲಿ ಹಠವಾದಿಗಳು.

ನರಸಿಂಹಾಚಾರ್ಯರ ಬರವಣಿಗೆ ಕಷ್ಟವೆಂದು ಯಾರಾದರೂ ಆಕ್ಷೇಪಣೆ ಮಾಡಿದರೆ ಅದು ಪಾಂಡಿತ್ಯವಿಲ್ಲದವರ ಮಾತೆಂದು ಜವಾಬು ಹೇಳುವರು, “ಅಂಥ ವಿದ್ವಾಂಸರು ನೀತಿಮಂಜರಿಗಿಂತ ಸುಲಭವಾದ ಶೈಲಿಯಲ್ಲಿ ಬರೆಯುವುದು ಅಸಾಧ್ಯ. ನರಸಿಂಹಾಚಾರ್ಯರ ಪಾಂಡಿತ್ಯದ ಮಟ್ಟಕ್ಕೆ ಅದು ಬಹು ಸುಲಭವಾದ ಶೈಲಿ” ಎನ್ನುವರು.

ತೋಗೆರೆ ನಂಜುಂಡಶಾಸ್ತ್ರಿಗಳು ಚರ್ಮ, ಮೂಳೆ, ವಿದ್ವತ್ತೆ-ಈ ಮೂರರ ಸಮ್ಮೇಳನ. ಮಾಂಸವೇನೂ ಇದ್ದಂತೆ ತೋರುತ್ತಿರಲಿಲ್ಲ.

***

ಒಂದಾನೊಂದು ಸಾರಿ ಒಬ್ಬ ದೊಡ್ಡ ಮನುಷ್ಯರು ಪಾರ್ಶ್ವವಾಯುವಿನಿಂದ ಹಾಸಿಗೆ ಹಿಡಿಯಬೇಕಾಗಿ ಬಂತು. ಅವರ ಸಮೀಪದಲ್ಲಿದ್ದವರು, ಅವರ ಬೇಸರ ಕಳೆಯಲು ಪುರಾಣ ಕೇಳಬಹುದೆಂದು ಸಲಹೆ ಕೊಟ್ಟರು. ಆ ದೊಡ್ಡ ಮನುಷ್ಯರು ಪಂಡಿತವರ್ಗದಲ್ಲಿ ಅಭಿಮಾನವಿದ್ದವರು. ಅವರು ನನಗೆ ಹೇಳಿ ಕಳುಹಿಸಿ ಯಾರಾದರೂ ಪಂಡಿತರನ್ನು ಪುರಾಣ ಹೇಳಲು ಗೊತ್ತು ಮಾಡಿಕೊಡಬೇಕೆಂದು ಕೋರಿದರು. ನಾನು ತೋಗೆರೆ ನಂಜುಂಡಶಾಸ್ತ್ರಿಗಳನ್ನು ಶಿಫಾರಸುಮಾಡಿ ಅವರು ಭಾರತ ಪುರಾಣ ಹೇಳತಕ್ಕದ್ದೆಂದು ಗೊತ್ತು ಮಾಡಿದೆ. ಅದರಂತೆ ಶಾಸ್ತ್ರಿಗಳು ಮಧ್ಯಾಹ್ನ ಮೂರು ಘಂಟೆಗೆ ಅಲ್ಲಿಗೆ ಹೋಗುವುದು; ಸಂಸ್ಕೃತ ಭಾರತ ಮೂಲಗ್ರಂಥವಿಟ್ಟುಕೊಂಡು ಓದುತ್ತ ಕನ್ನಡದಲ್ಲಿ ಅನುವಾದ ಮಾಡುತ್ತ ಹೇಳುವುದು; ಹೀಗೆ ಐದು ಐದೂವರೆ ಘಂಟೆಯವರೆಗೆ ನಡೆಯುವುದು. ಇದು ಏರ್ಪಾಟು. ಆ ಮೇರೆಗೆ ಶಾಸ್ತ್ರಿಗಳು ವಿರಾಟಪರ್ವದಿಂದ ಪ್ರಾರಂಭಿಸಿ ಪುರಾಣ ಹೇಳುತ್ತಿದ್ದರು.

ನಾಲ್ಕೈದು ದಿನ ಕಳೆದ ಮೇಲೆ ಆ ದೊಡ್ಡ ಮನುಷ್ಯರು, ತಮ್ಮಲ್ಲಿಗೆ ಬಂದಿದ್ದ ಸ್ನೇಹಿತರು ಹೇಗಿದೆ? ಎಂದು ಕೇಳಿದಾಗ “ಏನಪ್ಪಾ-ತುಂಬ ಬೇಸರವಾಗುತ್ತದೆ, ಒಂದೇ ಪಕ್ಕದಲ್ಲಿ

ಮಲಗಿ ನೋವು ಬಂದುಬಿಡುತ್ತದೆ” ಎಂದರು.

ಬಂದಿದ್ದವರಲೊಬ್ಬರು “ಪುರಾಣ?” ಎಂದು ಕೇಳಿದರು.

ದೊಡ್ಡಮನುಷ್ಯರು “ಏನು ಪುರಾಣವಪ್ಪಾ! ಆ ಋಷಿ ಬಂದ, ಈ ಋಷಿ ಬಂದ. ಈ ತೀರ್ಥ, ಆ ತೀರ್ಥ. ಇದೂ ಬೇಸರವೇ!” ಎಂದರು.

ಬಂದಿದ್ದ ಸ್ನೇಹಿತರು “ಹೌದು ಹೌದು. ಅದು ರಗಳೆಯೇ. ಈಗ ನೀವು ನಿಮ್ಮ ವಯಸ್ಸಿನಲ್ಲಿ ಕಥೆ ಕೇಳುವುದಕ್ಕಿಂತ ತತ್ತ್ವೋಪದೇಶ ಕೇಳುವುದು ಯುಕ್ತ. ಭಗವದ್ಗೀತೆ ಕೇಳಬಹುದಲ್ಲ?” ಎಂದರು.

ಬಂದಿದ್ದವರು ಹೊರಟುಹೋದ ಬಳಿಕ ಆ ದೊಡ್ಡ ಮನುಷ್ಯರು ನಮ್ಮ ತೋಗೆರೆ ಶಾಸ್ತ್ರಿಗಳನ್ನು ಕುರಿತು

“ಏನಪ್ಪಾ-ಅದೇನೋ ಗೀತೆಗಳು ಎಂದಿವೆಯಂತಲ್ಲ-ಅದನ್ನು ಕೇಳಬೇಕೆನ್ನುತ್ತಾರೆ, ನಾಳೆಯಿಂದ ಅದಾಗಲಿ” ಎಂದರು. ಶಾಸ್ತ್ರಿಗಳು “ಹಾಗೆಯೇ ಆಗಲಿ” ಎಂದು ಉತ್ತರ ಕೊಟ್ಟು ಮಾರನೆಯ ದಿನ ಭಗವದ್ಗೀತೆಯ ಎರಡನೆಯ ಅಧ್ಯಾಯದಿಂದ ಉಪಕ್ರಮಿಸಿದರು. ಇದು ಮೂರನಾಲ್ಕು ದಿನ ನಡೆಯಿತು. ಐದನೆಯ ದಿನ ದೊಡ್ಡ ಮನುಷ್ಯರು-

“ಏನಪ್ಪಾ-ಗೀತೆಗಳು ಗೀತೆಗಳು ಎಂದು ಬಡುಕೋತಾರಲ್ಲ-ಏನು ಕಗ್ಗ ಇದು? ಇಂದ್ರಿಯದಮನ, ಶಮನ, ಇದೇ ಮಾತೆ? ಹಾಡಿದ್ದೇ ಹಾಡೋ ಕಿಸಬಾಯಿದಾಸ ಎಂದ ಹಾಗಿದೆಯಲ್ಲ?”

-ಎಂದರು.

ಈಗ ನಂಜುಂಡಶಾಸ್ತ್ರಿಗಳು ಬೆಂಕಿಬೆಂಕಿಯಾದರು. ಗೀತೆಯನ್ನು “ಬಡುಕೋತಾರೆ” ಎಂದದ್ದು ಅವರ ಮನಸ್ಸಿಗೆ ದೊಡ್ಡ ಅಪರಾಧವೆನಿಸಿತು. ಅವರು ಆ ಕೋಪದಲ್ಲಿ (ತೆಲುಗಿನಲ್ಲಿ):

“ಇದಕ್ಕೆಲ್ಲ ಪೂರ್ವಜನ್ಮ ಸಂಸ್ಕಾರವಿರಬೇಕು. ನಿಮ್ಮ ಜನ್ಮಾಂತರವಾಸನೆ ಇದಕ್ಕಲ್ಲ. ನಿಮಗೆ ಹಿಡಿಯುವುದು ಚಂದ್ರವದನೆಯ ವಾಸನೆಯೊಂದೇ.”

ಹೀಗೆ ಹೇಳಿ ನನ್ನ ಮನೆಗೆ ಬಂದು ಗೀತೆಯ ಪುಸ್ತಕದ ಕಟ್ಟನ್ನು ಅಲ್ಲಿಟ್ಟು "ಇದು ಮುಗಿದುಹೋಯಿತೆಂದು ಅವರಿಗೆ ಹೇಳಿ" ಎಂದು ಹೊರಟುಹೋಗಿದ್ದರು. ನಾನು ರಾತ್ರಿ ಒಂಭತ್ತು ಘಂಟೆಗೆ ಮನೆಗೆ ಬಂದಾಗ ಈ ವರ್ತಮಾನ ತಿಳಿಯಿತು.

ಮಾರನೆಯ ದಿನ ಬೆಳಗ್ಗೆ ಶಾಸ್ತ್ರಿಗಳ ಮನೆಗೆ ಹೋದೆ. ಅವರು ದೇವತಾರ್ಚನೆ ಮಾಡುತ್ತಿದ್ದರು. ನನ್ನನ್ನು ನೋಡಿದೊಡನೆಯೇ ಅವರ ಮರೆತುಹೋಗಿದ್ದ ಆಗ್ರಹ ಮತ್ತೆ ಕೆರಳಿತು.

"ಏನು ಸ್ವಾಮಿ-ಇಂಥ ಮನುಷ್ಯನಲ್ಲಿಗೆ ನನ್ನನ್ನು ಕಳಿಸಿದಿರಲ್ಲಾ-ಎಂದು ಹೇಳಿ ನಡೆದುದನ್ನೆಲ್ಲ ವಿವರಿಸಿದರು. ನಾನು ಅವರಿಗೆ ಸಮಜಾಯಿಷಿ ಹೇಳಬೇಕಾಯಿತು.

೧೫

ಕಡಬದ ನಂಜುಂಡಶಾಸ್ತ್ರಿಗಳು

ಕಡಬದ ನಂಜುಂಡಶಾಸ್ತ್ರಿಗಳು ತೋಗೆರೆಯವರಂತೆಯೇ ಸಾಂಪ್ರದಾಯಿಕ ರೀತಿಯ ವಿದ್ವಾಂಸರು. ಸಂಸ್ಕೃತ ಹಳಗನ್ನಡಗಳೆರಡರಲ್ಲಿಯೂ ಪೂರ್ಣ ಪಾಂಡಿತ್ಯವಿದ್ದವರು. ತೋಗೆರೆಯವರಿಗೆ ಶಾಸನಸಾಹಿತ್ಯದ ಪರಿಚಯ ಹೆಚ್ಚಾಗಿತ್ತೆಂದರೆ ಕಡಬದವರಿಗೆ ಸಂಗೀತ ಪರಿಜ್ಞಾನ ವಿಶೇಷವಾಗಿತ್ತು. ಅವರು ಷಟ್ಪದಿ ಮೊದಲಾದ ಕನ್ನಡ ಛಂದಸ್ಸುಗಳು ಹೇಗೆ ತಾಳಬದ್ಧವಾಗಿವೆಯೆಂಬುದನ್ನು ಕುರಿತು ಒಂದು ಬೋಧಪೂರ್ಣವಾದ ಪ್ರಬಂಧವನ್ನು ಬರೆದಿದ್ದಾರೆ. ಅದು ಸಾಹಿತ್ಯ ಪರಿಷತ್ಪತ್ರಿಕೆಯಲ್ಲಿ ಅಚ್ಚಾಗಿದೆ.

ಕಡಬದ ಶಾಸ್ತ್ರಿಗಳು ದೊಡ್ಡ ಸಂಸಾರವನ್ನು ನಿರ್ವಹಿಸಬೇಕಾಗಿತ್ತು. ಅದಕ್ಕಾಗಿ ಅವರು ಅಹೋರಾತ್ರವೂ ದುಡಿಯುತ್ತಿದ್ದರು. ಪೇಟೆಯ ಪುಸ್ತಕದಂಗಡಿಗಳಿಗೆ ಕಥೆ ಕಾದಂಬರಿಗಳನ್ನು ಬರೆದುಕೊಡುವುದು, ಗ್ರಂಥಗಳಿಗೆ ಟೀಕು ಬರೆಯುವುದು, ಅಚ್ಚಿನ ಕರಡುಪ್ರತಿಗಳನ್ನು ತಿದ್ದಿ ಕೊಡುವುದು-ಇಂಥ ಚಿಲ್ಲರೆ ಕೂಲಿಯಿಂದ (Hack-work) ಒಂದೆರಡು ಕಾಸು ಗಿಟ್ಟಿಸಬೇಕಾಗಿತ್ತು. ಈ ಪ್ರಯಾಸದಲ್ಲಿ ಅವರಿಗೆ ಶುದ್ಧ ಸಾರಸ್ವತ ವೃತ್ತಿಯನ್ನು ಕೈಗೊಳ್ಳಲು ಅವಕಾಶವಿಲ್ಲದೆಹೋಯಿತು.

ಆದರೆ ಈ ಹಂಬಲವನ್ನು ಅವರು ಬಿಟ್ಟಿರಲಿಲ್ಲ. ಅವರಿಗೆ ತುಂಬ ಇಷ್ಟವಾದ ಒಂದು-ಸಂಸ್ಕೃತ ಸ್ತೋತ್ರಕ್ಕೆ-ಬಹುಶಃ ಶಿವಾನಂದಲಹರಿಗೆ ಅಥವಾ ಭಜಗೋವಿಂದ ಸ್ತೋತ್ರಕ್ಕೆ ಸಂಸ್ಕೃತದಲ್ಲಿ ವ್ಯಾಖ್ಯಾನವನ್ನು ಬರೆದು ತಮ್ಮ ಬದುಕನ್ನು ಸಫಲಗೊಳಿಸಬೇಕೆಂದು ಹಂಬಲಿಸುತ್ತಿದ್ದರು.

ಕವಿ ರವೀಂದ್ರನಾಥ ಠಾಕೂರರು ಬೆಂಗಳೂರಿಗೆ ಬಂದಿದ್ದಾಗ ನನ್ನ ಬೇಡಿಕೆಯಂತೆ ಕಡಬದ ಶಾಸ್ತ್ರಿಗಳು ಎರಡು ಸಂಸ್ಕೃತ ಗೀತೆಗಳನ್ನು ರಚಿಸಿಕೊಟ್ಟರು. ಒಂದು ಹೀಗೆ:

> ನಿಖಿಲ ಜನನಿ ಸಾದರಂ
> ತ್ವಾಂ ನಮಾಮಿ ಮಾತರಂ ॥ ಪ.
>
> ಮಂದಹಸಿತ ನಿಂದಿತ ಸಿತ
> ಸರಸಿಜಮುಖಿ ದೇವ್ಯಹಂ ॥

ಎರಡನೆಯದು ಹೀಗೆ:

> ಸ್ವಾಗತಪೂರ್ವ ನಿಗಮವಿದಂ ತ್ವಾಂ
> ಸುಕುಶಲಮೌರ್ಯಂ ಪರಿಪೃಚ್ಛಾಮಃ ॥

ವೆಂಕಟನಾರಣಪ್ಪನವರೂ ಕಡಬದ ಶಾಸ್ತ್ರಿಗಳೂ ಬಾಲ್ಯದಲ್ಲಿ ಸಹಾಧ್ಯಾಯಿಗಳಾಗಿದ್ದವರು. ವೆಂಕಟನಾರಣಪ್ಪನವರಿಗೆ ಅವರ ಮೇಲೆ ತುಂಬ ಅಭಿಮಾನ, ಮತ್ತು ಅವರ ಮಾತಿನಲ್ಲಿ ನಂಬಿಕೆ. ವೆಂಕಟನಾರಣಪ್ಪನವರು ಕೋರಿದಂತೆ ಶಾಸ್ತ್ರಿಗಳು ಭಾಸಕವಿಯ ಒಂದಾನೊಂದು ನಾಟಕವನ್ನು ಕನ್ನಡಕ್ಕೆ ಅನುವಾದ ಮಾಡಿದ್ದಾರೆಂದು ಜ್ಞಾಪಕ. ಅದು ಪರಿಷತ್ಪತ್ರಿಕೆಯಲ್ಲಿ ಪ್ರಕಟವಾಗಿದೆ. ಬಹುಶಃ ಅದು "ದೂತವಾಕ್ಯ."

ಕಡಬದ ಶಾಸ್ತ್ರಿಗಳು ಸರಸಿಗಳಾಗಿದ್ದದ್ದಲ್ಲದೆ ಹಾಸ್ಯಪ್ರವೃತ್ತಿಯುಳ್ಳವರೂ ಆಗಿದ್ದರು. ಒಂದು ದಿನ ಅವರೂ ನಾನೂ ಪರಿಷತ್ತಿನ ಕಾರ್ಯಾಲಯದಲ್ಲಿ ಕುಳಿತಿದ್ದೆವು. ಆಗ ವಿದ್ವಾನ್ ಗಂಜಿಗುಂಟೆ ಕೃಷ್ಣಪ್ಪನವರು ಅಲ್ಲಿಗೆ ದಯಮಾಡಿಸಿದರು ಕೃಷ್ಣಪ್ಪನವರು ಸಂಸ್ಕೃತ ಹಳಗನ್ನಡಗಳಲ್ಲಿ ತುಂಬ ಪರಿಶ್ರಮ ಮಾಡಿದ್ದವರು: ಸರಸಿಗಳು ಮತ್ತು ಸೌಜನ್ಯ ಶೋಭಿತರು. ಡಂಭವಿಲ್ಲದವರು, ಕೊಂಚವೂ ಕಾಪಟ್ಯವಿಲ್ಲದವರು. ಅವರು ತಮ್ಮ ಮನಸ್ಸಿಗೊಪ್ಪಿದ್ದ ನೂರು ನೂರಿಪ್ಪತ್ತು ಸಂಸ್ಕೃತ ಶ್ಲೋಕಗಳನ್ನು ಸೊಗಸಾದ ಕನ್ನಡಕ್ಕೆ ಪರಿವರ್ತನೆ ಮಾಡಿ ಅಚ್ಚು ಮಾಡಿಸಿದ್ದರು. ಅದು ಅಚ್ಚಿನ ಮನೆಯಿಂದ ತಮ್ಮ ಕೈಗೆ ಬಂದ ಕೂಡಲೆ ಮಿತ್ರರಿಗೆ ಕೊಡಬೇಕೆಂದು ಎರಡು ಮೂರು ಪ್ರತಿಗಳನ್ನು ಕೈಯಲ್ಲಿ ತಂದು ಒಂದು ಪ್ರತಿಯನ್ನು ಶಾಸ್ತ್ರಿಗಳ ಮುಂದೆಯೂ ಇನ್ನೊಂದನ್ನು ನನ್ನ ಮುಂದೆಯೂ ಇರಿಸಿದರು. ಶಾಸ್ತ್ರಿಗಳು ಅದನ್ನು ನೋಡಿ ಒಡನೆಯೇ "ಇದು ಆಗಿ ಹೋಯಿತಲ್ಲ-ಆ ಹೊತ್ತೇ ಆಗಿಹೋಯಿತು" ಎಂದರು.

ಕೃಷ್ಣಪ್ಪನವರು: "ಏನಾಗಿಹೋಯಿತು?"

ಶಾಸ್ತ್ರಿಗಳು: "ನೀವು ಹೇಳಿರುವ ಕೆಲಸ-ಸುಭಾಷಿತವನ್ನು ಜರಿಯುವುದು." ಪುಸ್ತಕದ ಹೆಸರು 'ಸುಭಾಷಿತಮಂಜರಿ.' ಇದನ್ನು ಶಾಸ್ತ್ರಿಗಳು 'ಸುಭಾಷಿತಮಂ ಜರಿ' ಎಂದು ಓದಿದರು.

ಕೃಷ್ಣಪ್ಪನವರೂ ನಾನೂ ತುಂಬ ನಕ್ಕೆವು. ಶಾಸ್ತ್ರಿಗಳ ಹಾಸ್ಯಸ್ಫೂರ್ತಿ ಅಂಥಾದ್ದು.

ಕಡಬದ ಶಾಸ್ತ್ರಿಗಳಿಗೆ ಹತ್ತಾರು ಹಳಗನ್ನಡ ಕಾವ್ಯಗಳಲ್ಲದೆ ಹತ್ತಾರು ಸಂಸ್ಕೃತ ಕಾವ್ಯಗಳೂ ಕಂಠಸ್ಥವಾಗಿದ್ದವು. ಒಂದು ದಿನ ಅವರಿಗೂ ನನಗೂ ಯಾರೋ ಒಬ್ಬ ಹೊಸ ಕವಿಗಳ

ರಚನೆಯ ವಿಷಯದಲ್ಲಿ ಮಾತುಕಥೆ ನಡೆಯುತ್ತಿದ್ದಾಗ ಅವರು ಹೇಳಿದರು:

“ಬಡಬಡಕಲು ಮಾತುಗಳಿಂದ ಆಗುವುದು ಎಂಥ ಕವಿತ್ವ? ಕವಿತ್ವವೆಂದರೆ ಹೀಗಿರಬೇಕು” ಎಂದು ಜಗನ್ನಾಥ ಪಂಡಿತನ ‘ಸುಧಾಲಹರಿ’ ಯಿಂದ ಒಂದು ಶ್ಲೋಕವನ್ನು ಹೇಳಿದರು,

> ಯಾ ಸೂತೇ ಸರ್ವಭೂತೇಷ್ವನುದಿನಮುದಿತೇ
> ಚೇತನಾಯಾ ವಿಲಾಸಾನ್ ।
> ಯಾನ್ತೀ ಸಾಯಂ ನಿಕಾಯಂ ಜಲನಿಧಿಜಠರಂ
> ಸಂಜರೀಹರ್ತಿ ಸದ್ಯಃ ।
> ಅತ್ಯರ್ಥಂ ವರ್ಧಯನ್ತೀ ಮಣಿಗಣಸುಷಮಾ
> ಸಂಪದಂ ರತ್ನಸಾನೋಃ ।
> ಸಾನೋ ಭಾನೋಃ ಪ್ರಭಾನೋ ನಯನಸರಣಿತೋ
> ದೂರತೋ ಜಾತು ಯಾತು ॥

ಕಡಬದ ಶಾಸ್ತ್ರಿಗಳ ಎರಡನೆಯ ಮಗ ಕೃಷ್ಣ ಎಂಬಾತ ಕೊಂಚ ಕೊಂಚ ಹಾಡುತ್ತಿದ್ದ. ನಾನು ಒಂದು ದಿನ ಶಾಸ್ತ್ರಿಗಳನ್ನು ಕೇಳಿದೆ:

ನಾನು: “ಕೃಷ್ಣ ಏನು ಮಾಡುತ್ತಿದ್ದಾನೆ?”

ಶಾ: “ಏನೋ ಸಂಗೀತ ಕಲಿಯಬೇಕಂತೆ. ಪೇಚಾಡುತ್ತಿದ್ದಾನೆ.”

ನಾನು: “ಒಳ್ಳೆಯದೇ ಆಯಿತಲ್ಲ-ಮೈಸೂರಿನಲ್ಲಿ ಅನುಕೂಲ ಮಾಡೋಣ.”

ಶಾ: “ಅದೇತರ ಸಂಗೀತ ಸ್ವಾಮಿ! ತಂಜಾವೂರಿಗೋ ತಿರುಚಿನಾಪಳ್ಳಿಗೋ ಹೋಗಬೇಕು. ಅದಕ್ಕೆ ಅನುಕೂಲ ಬೇಕು.”

ಹೀಗೆ

> ಉತ್ಪದ್ಯನ್ತೇ ವಿಲೀಯನ್ತೇ
> ದರಿದ್ರಾಣಾಂ ಮನೋರಥಾಃ ॥

೧೬

ಎಂ.ಎಸ್. ಪುಟ್ಟಣ್ಣನವರು

ಎಂ.ಎಸ್. ಪುಟ್ಟಣ್ಣನವರು ಭಾಷೆಯ ಪುನರುಜ್ಜೀವನದ ಪ್ರಯತ್ನದಲ್ಲಿ ಮೊದಲಿನಿಂದ ಶ್ರಮಿಸಿದವರು. ಅವರು ಮೊದಮೊದಲು ವೆಂಕಟಕೃಷ್ಣಯ್ಯನವರೊಡನೆಯೂ ಕೊಂಚ ಕಾಲ ಎಂ.ಬಿ.ಶ್ರೀನಿವಾಸಯ್ಯಂಗಾರ್ಯರೊಡನೆಯೂ ಸೇರಿ ಕೆಲಸಮಾಡಿದರು. ಸ್ವತಂತ್ರವಾಗಿಯೂ ಕೆಲಸ ಮಾಡಿದರು.

ಪುಟ್ಟಣ್ಣನವರ ಸರಕಾರಿ ಉದ್ಯೋಗ ಪ್ರಾರಂಭವಾದದ್ದು ಆಗಿನ ಚೀಫ್ ಕೋರ್ಟಿನಲ್ಲಿ ಎಂದು ಕೇಳಿದ್ದೇನೆ. ಅಲ್ಲಿ ಅವರು ಭಾಷಾಂತರಕರ್ತರಾಗಿದ್ದರು. ಆ ಕಾಲದ ಒಂದು ಕಥೆ ಸ್ವಾರಸ್ಯಕರವಾಗಿದೆ.

ಆ ಕಾಲದಲ್ಲಿ ಚೀಫ್ ಕೋರ್ಟ್ ಆಫೀಸಿನ ಮ್ಯಾನೇಜರ್ ಆಗಿದ್ದವರು ಭೀಮಾಜಿರಾವ್ ಎಂಬವರು. ಆ ಕಛೇರಿಗೆ ಒಬ್ಬ ಸಹಾಯಕರು ಅವಶ್ಯವಿದ್ದ ಸಂಗತಿಯನ್ನು ಪ್ರಕಟಪಡಿಸಲಾಯಿತು. ಆಗ ಆ ಹುದ್ದೆಗೋಸ್ಕರ ಎಷ್ಟೋ ಮಂದಿ ಬೇಡಿಕೆಯ ಅರ್ಜಿಗಳನ್ನು ಬರೆದುಕೊಂಡರು. ಅವರಲ್ಲಿ ವೆಂಕಣ್ಣ ಶ್ರೌತಿ ಎಂಬವರೊಬ್ಬರು. ಕೃಷ್ಣಸ್ವಾಮಯ್ಯ ಎಂಬವರು ಇನ್ನೊಬ್ಬರು. ಭೀಮಾಜಿರಾಯರು ಅವರಿಬ್ಬರನ್ನೂ ಖುದ್ದಾಗಿ ಕಂಡು ಮಾತನಾಡಿ ಅವರು ಒಂದು ವಾರ ಕಳೆದು ತಮ್ಮನ್ನು ಕಂಡರೆ ತೀರ್ಮಾನ ತಿಳಿಸುವುದಾಗಿ ಭರವಸೆ ಕೊಟ್ಟರಂತೆ. ಭೀಮಾಜಿರಾಯರು ಮಾತನಾಡಿದ ರೀತಿಯಿಂದ ಶ್ರೌತಿಗಳು ಪ್ರೋತ್ಸಾಹಗೊಂಡು ಆಸೆಯಿಟ್ಟುಕೊಂಡಿದ್ದರು.

ಭೀಮಾಜಿರಾಯರಾದರೋ ತಮ್ಮ ಸಹೋದ್ಯೋಗಿಗಳಾಗಿದ್ದ ಎಂ.ಎಸ್. ಪುಟ್ಟಣ್ಣನವರನ್ನು ಬಳಿಗೆ ಕರೆದು ತೆಲುಗಿನಲ್ಲಿ ಕೇಳಿದರು:

ಭೀ: “ಶ್ರೌತಿ ಎಂದರೆ ಏನಯ್ಯ?”

ಪು: “ಶ್ರೌತಿ ಎಂದರೆ ಶ್ರುತಿಯನ್ನನುಸರಿಸುವವನು. ಶ್ರುತಿ ಎಂದರೆ ವೇದ ವೇದೋಕ್ತಗಳಾದ ಯಜ್ಞಯಾಗಾದಿ ಕರ್ಮಗಳನ್ನು ಅನುಷ್ಠಾನ ಮಾಡುವವನು, ಮಾಡಿಸುವವನು ಶ್ರೌತಿ.”

ಭೀ: “ಹಾಗಾದರೆ ಬ್ರಾಹ್ಮಣನೇ?”

ಪು: “ಹೌದು. ಬ್ರಾಹ್ಮಣರಲ್ಲಿ ಶ್ರೇಷ್ಠವಾದ ವರ್ಗದವನು.”

ಭೀ: “ಬೇರೆ ಯಾರೋ ಅಂದುಕೊಂಡೆನಲ್ಲಾ? ಬಿ.ಎ. ಪ್ಯಾಸ್ ಮಾಡಿದ್ದಾನೆ. ಬುದ್ಧಿವಂತನಹಾಗೆ ಕಾಣುತ್ತಾನೆ. ಬೇರೆ ಜಾತಿಯವನಿರಬಹುದೋ ಏನೋ ಅಂದುಕೊಂಡು ಭರವಸೆ ಕೊಟ್ಟೆ.”

ಒಂದು ವಾರ ಕಳೆಯಿತು. ವೆಂಕಣ್ಣ ಶ್ರೌತಿಗಳು ಆಶೆಪಟ್ಟುಕೊಂಡು ಭೀಮಾಜಿರಾಯರನ್ನು ಕಂಡರು. ರಾಯರು ಒಂದು ಕೈಬರಹದ ಕಾಗದವನ್ನು ಶ್ರೌತಿಗಳ ಕೈಗೆ ಕೊಟ್ಟು ಅದನ್ನು ಓದುವಂತೆ ಹೇಳಿದರು. ಆ ಬರಹ ಮೋಡಿ ಅಕ್ಷರದಲ್ಲಿದ್ದದ್ದರಿಂದ ಶ್ರೌತಿಗಳಿಗೆ ಕೊಂಚ ಕಷ್ಟವಾಯಿತು. ಭೀಮಾಜಿರಾಯರು ಕೇಳಿದರು:

“ಏನಯ್ಯಾ? ನೀವು ಕನ್ನಡದವರು ಎಂದು ಹೇಳುತ್ತೀರಿ? ಕನ್ನಡ ಓದುವುದಕ್ಕೇ ಬಾರದಲ್ಲ ನಿಮಗೆ?”

ಹೀಗೆ ಆಕ್ಷೇಪಣೆ ಹೊರಿಸಿ ವಾಪಸ್ ಕಳಿಸಿದರು. ಉದ್ಯೋಗ ಇನ್ನೊಬ್ಬರಿಗೆ ಸಿಕ್ಕಿತು.

ಶ್ರೌತಿಗಳು ತಮ್ಮ ಆಶಾಭಂಗವನ್ನು ಶಿವಮೊಗ್ಗದಲ್ಲಿ ಡೆಪ್ಯುಟಿ ಕಮಿಷನರಾಗಿದ್ದ ಎಚ್.ವಿ. ನಂಜುಂಡಯ್ಯನವರಲ್ಲಿ ಹೇಳಿಕೊಂಡರು. ನಂಜುಂಡಯ್ಯನವರು ಎಂ.ಎಸ್. ಪುಟ್ಟಣ್ಣನವರಿಗೆ ಕಾಗದ ಬರೆದರು:

“ಪಾಪ! ಆ ಶ್ರೌತಿಗೆ ದೊರೆಯುತ್ತಿದ್ದ ಉದ್ಯೋಗ ನಿಮ್ಮಿಂದ ತಪ್ಪಿಹೋಯಿತಲ್ಲ? ‘ಶ್ರೌತಿ’ ಎಂದರೆ ‘ಶ್ರುತಿ ಹಿಡಿಯುವವನು’ ಎಂದೂ ಅರ್ಥವಾಗುತ್ತದೆ. ಮೇಳ ಊದುವಾಗ ಒಬ್ಬಾತ ‘ತೂ...’ ಎಂದು ಶ್ರುತಿ ಊದುತ್ತಾನಲ್ಲ? ಆದದ್ದರಿಂದ ಬಾಜಾ ಬಜಂತ್ರಿ ಜಾತಿಯವನು ಎಂದು ಹೇಳಬಹುದಾಗಿತ್ತು. ಹಾಗೆ ಹೇಳಿದ್ದಿದ್ದರೆ ಚಾಕರಿ ದೊರೆಯುತ್ತಿತ್ತು. ಪಾಪ! ಆತ ಆಶಾಭಂಗದಿಂದ ನೋಯುತ್ತಿದ್ದಾನಲ್ಲ? ಇದು ನಿಮ್ಮ ಸತ್ಯವಂತಿಕೆಯ ಫಲ!”

***

ಪುಟ್ಟಣ್ಣನವರು ಪರಮ ಪ್ರಾಮಾಣಿಕರು. ಲಂಚ ರುಷುವತ್ತುಗಳನ್ನು ಸಹಿಸಿದವರಲ್ಲ. ಕೆಟ್ಟವರ ಪಾಲಿಗೆ ಅವರು ಬೆಂಕಿ. ಅಸತ್ಯವನ್ನೂ ಅನಾಚಾರವನ್ನೂ ಕಂಡರೆ ಕಿಡಿಕಿಡಿಯಾಗುತ್ತಿದ್ದರು. ಅತ್ಯಂತ ಪರಿಶುದ್ಧರು. ಅವರು ವಿದ್ಯಾರ್ಥಿಯಾಗಿದ್ದಾಗಲೂ ಆಮೇಲೂ ದಿವಾನ್ ರಂಗಾಚಾರ್ಲುರವರ ದಕ್ಷತೆಗೂ ವ್ರತನಿಷ್ಠೆಗೂ ಮನಸೋತು ಅವರ ಪ್ರಭಾವಕ್ಕೆ ಸಿಕ್ಕಿದ್ದವರು; ರಂಗಾಚಾರ್ಲುರವರೊಡನೆ ಮಾತುಕಥೆ ನಡಸುತ್ತಿದ್ದವರು.

ಚಿಕ್ಕಂದಿನಲ್ಲಿ ಬಡತನ ಕಂಡವರು ಪುಟ್ಟಣ್ಣನವರು. ಅವರು ಚೀಫ್ ಕೋರ್ಟಿನಿಂದ ರೆವಿನ್ಯು ಇಲಾಖೆಗೆ ವರ್ಗಪಟ್ಟು ಅಮಲ್ದಾರರಾದರು. ಅಮಲ್ದಾರ ಹುದ್ದೆಯಲ್ಲಿದ್ದಾಗ ಅವರ ನಿಃಸ್ಪೃಹತೆ ಮತ್ತಷ್ಟು ಪ್ರಸಿದ್ಧವಾಯಿತು. ಸರಕಾರಿ ಉದ್ಯೋಗದಿಂದ ಅವರು ನಿವೃತ್ತರಾದ ಮೇಲೆ ಅವರು ಕೆಲವು ಕಾಲ ಲಾಯರಾಗಿದ್ದರು. ಅವರು ಪರಿಷತ್ತಿನ ಕಾರ್ಯದರ್ಶಿಯಾಗಿದ್ದದ್ದು ಈ ಸುಮಾರಿನಲ್ಲಿ.

ಪುಟ್ಟಣ್ಣನವರು ಭಾಷೆ ಸಾಹಿತ್ಯಗಳ ವಿಷಯದಲ್ಲಿ ಮೊದಲಿನಿಂದ ಉತ್ಸಾಹಿಗಳು. ಅವರು ಷೇಕ್‌ಸ್ಪಿಯರಿನ 'ಸಿಂಬೆಲೈನ್' ನಾಟಕವನ್ನು 'ಜಯಸಿಂಹರಾಜ ಚರಿತ್ರೆ' ಎಂಬ ಹೆಸರಿನಿಂದ ಅನುವಾದ ಮಾಡಿದ್ದಾರೆ. 'ಸ್ಯಾನ್‌ಫರ್ಡ್ ಅಂಡ್ ಮೆರ್ಟನ್' ಎಂಬ ಬಾಲಕ ಕಥಾರತ್ನವನ್ನು ಅನುವಾದ ಮಾಡಿಕೊಟ್ಟಿದ್ದಾರೆ. ಅವರ ಹತ್ತಾರು ಕೃತಿಗಳ ಹೆಸರುಗಳನ್ನು ಬೇರೆ ಕಡೆ ಕಾಣಬಹುದು. ಅವುಗಳಲ್ಲೆಲ್ಲ ಬಾಲಸಾಹಿತ್ಯದ ದೃಷ್ಟಿಯಿಂದ ಸರ್ವೋತ್ಕೃಷ್ಟವಾದ ಮೆಚ್ಚಿಕೆ ಪಡೆದಿರುವ ಗ್ರಂಥ 'ನೀತಿ ಚಿಂತಾಮಣಿ.'

ಪುಟ್ಟಣ್ಣನವರು ಬರೆದ ಕುಣಿಗಲು ರಾಮಶಾಸ್ತ್ರಿಗಳ ಜೀವನಚರಿತ್ರೆಯೂ, 'ಮಾಡಿದ್ದುಣ್ಣೋ ಮಹಾರಾಯ', 'ಮುಸಗ ತೆಗೆಯೇ ಮಾಯಾಂಗನೆ' ಮೊದಲಾದ ಕಾದಂಬರಿಗಳೂ ಪೂರ್ವದ ಮೈಸೂರಿನ ಸಾಮಾಜಿಕ ವಿದ್ಯಮಾನಗಳನ್ನು ದೃಷ್ಟಾಂತಪಡಿಸುವುವಾಗಿವೆ.

ಸುಮಾರು ೧೮೫೦-೬೦ರಿಂದ ೧೯೦೦ರವರೆಗಿನ ಕಾಲದಲ್ಲಿ ಮೈಸೂರು, ಶ್ರೀರಂಗಪಟ್ಟಣ, ಮೇಲುಕೋಟೆ, ನಂಜನಗೂಡು, ಚಾಮರಾಜನಗರ-ಈ ಪ್ರದೇಶಗಳ ಜನ ಜೀವನ, ಜನದ ಶೀಲ ಸ್ವಭಾವಗಳು, ಜೀವಿತಾಶಯಗಳು, ಅವರ ಮಾನಮರ್ಯಾದೆಗಳು, ಆಚಾರ ವಿಚಾರಗಳು-ಇವೆಲ್ಲ ಚಿತ್ರ ಕಟ್ಟಿದಂತೆ ವರ್ಣಿತವಾಗಿವೆ ಪುಟ್ಟಣ್ಣನವರ ಕೃತಿಗಳಲ್ಲಿ.

ಪುಟ್ಟಣ್ಣನವರ ಭಾಷಾ ಶೈಲಿ ಸರಳವಾದದ್ದು; ಜನದ ಸಾಮಾನ್ಯ ಬಳಕೆಯದು. ಕನ್ನಡಕ್ಕೆ ಸಹಜವಾದ ನುಡಿಗಟ್ಟನ್ನು (Idiom) ಅವರ ಲೇಖನಗಳಲ್ಲಿ ಕಾಣಬಹುದು.

ಕಿರಿಯ ಲೇಖಕರ ವಿಷಯದಲ್ಲಿ ಅವರು ಆದರಣೆ ತೋರಿದರು. ನಾನು ಜಾನ್ ಸ್ಟೂ ಆರ್ಟ್ ಮಿಲ್ ತಾತ್ತ್ವಿಕನ ಸ್ವಾತಂತ್ರ್ಯ ವಿಚಾರಕ ಪ್ರಬಂಧವನ್ನು (On Liberty by John Stuart Mill) ಕನ್ನಡಕ್ಕೆ ಅನುವಾದಿಸುವ ಪ್ರಯತ್ನ ಮಾಡಿದ್ದಾಗ ಪುಟ್ಟಣ್ಣನವರು ನನ್ನನ್ನು ಹುಡುಕಿಕೊಂಡು ಬಂದು ಪ್ರೋತ್ಸಾಹ ಕೊಟ್ಟದ್ದು ಜ್ಞಾಪಕವಿದೆ.

ಸಾರ್ವಜನಿಕ ವಿಚಾರಗಳಲ್ಲಿ ಪುಟ್ಟಣ್ಣನವರಿಗೆ ಇದ್ದ ಆಸಕ್ತಿ ಆಳವಾದದ್ದು ಮತ್ತು ತೀವ್ರವಾದದ್ದು. ಬೆಂಗಳೂರಿನಲ್ಲಿ 'ರೇಟ್‌ಪೇಯರ್ಸ್ ಅಸೋಸಿಯೇಷನ್'

(Ratepayers' Association) ತೆರಿಗೆದಾರರ ಸಂಸ್ಥೆಯನ್ನು ಬಹುಕಾಲ ನಡಸಿದರು. ಇತರ ಸಂಸ್ಥೆಗಳಲ್ಲಿಯೂ ಶ್ರದ್ಧೆಯಿಂದ ಕೆಲಸ ಮಾಡಿದರು.

ಪರಿಷತ್ತನ್ನು ಕಟ್ಟಿ ಬಲಪಡಿಸಲು ಶ್ರಮಿಸಿದವರಲ್ಲಿ ಪುಟ್ಟಣ್ಣನವರು ಒಬ್ಬರು.

೦೭

ಬೆಳ್ಳಾವೆ ವೆಂಕಟನಾರಣಪ್ಪನವರು [1]

ಯಾವ ಸಾರ್ವಜನಿಕ ಸಂಸ್ಥೆಯೇ ಆಗಲಿ ಚಿರಕಾಲ ಬಾಳಿ ಕೃತಕೃತ್ಯವೆನ್ನಿಸಬೇಕಾದರೆ ಅದಕ್ಕೆ ಮೊದಲು ಬೇಕಾದದ್ದು ತನ್ನಿಷ್ಠರಾದ ಕಾರ್ಯಕರ್ತರು. ಒಬ್ಬನಂತೂ ಅಂಥವನು ಹಗಲೂ ರಾತ್ರಿಯೂ ಸಂತತವಾಗಿ ದುಡಿಯುತ್ತಿರಬೇಕು. ಆ ಒಬ್ಬ ಕಾರ್ಯ ಕರ್ತನು ಮೂಲಸ್ತಂಭದಂತೆ ಇರುತ್ತಾನೆ. ಮಿಕ್ಕವರು ಅವನನ್ನು ಅವಲಂಬಿಸಿಕೊಂಡಿರುತ್ತಾರೆ. ಪರಿಷತ್ತಿಗೆ ಹೀಗೆ ೧೯೧೫ರಿಂದ ಇಪ್ಪತ್ತು ವರ್ಷಕಾಲ ಏಕಪ್ರಕಾರವಾದ ನಿಷ್ಠೆಯಿಂದ ಕಾರ್ಯಕರ್ತರಾಗಿ ನಿಂತು ಅವಲಂಬನ ಕೊಟ್ಟವರು ಬೆಳ್ಳಾವೆ ವೆಂಕಟನಾರಣಪ್ಪನವರು. ಅವರು ಬಹುಕಾಲ ಕಾರ್ಯದರ್ಶಿಯಾಗಿದ್ದರು, ಕೆಲವು ಕಾಲ ಕೋಶಾಧಿಕಾರಿಯಾಗಿದ್ದರು. ಇನ್ನು ಕೆಲವು ಕಾಲ ಪತ್ರಿಕೆಯ ಸಂಪಾದಕರಾಗಿದ್ದರು. ಆದರೆ ಅವರಿಗೆ ಗೊತ್ತಾದ ಅಧಿಕಾರಸ್ಥಾನವಿರಲಿ ಇಲ್ಲದಿರಲಿ, ಅವರು ಒಂದೇ ರೀತಿಯ ಶ್ರದ್ಧೋತ್ಸಾಹಗಳಿಂದ ಕೆಲಸಮಾಡಿದವರು. ಪರಿಷತ್ತು ಎಂದರೆ ವೆಂಕಟನಾರಣಪ್ಪನವರು.

ಈ ತೆರದ ತದೇಕನಿಷ್ಠೆ ನಮ್ಮ ದೇಶದಲ್ಲಿ ಈಗ ಕಾಣಬರುತ್ತಿಲ್ಲ. ತನ್ನಿಷ್ಠನಾದ ಕಾರ್ಯಕರ್ತನೊಬ್ಬನಿಲ್ಲದ ನಮ್ಮ ಎಲ್ಲ ಸಂಸ್ಥೆಗಳೂ ಕೆಲವು ಕಾಲದ ಅನಂತರ ಕುಸಿದು ಬೀಳುತ್ತವೆ. ನಮ್ಮ ಪೂರ್ವಾಚಾರ್ಯರುಗಳು ಲೋಕೋಪಕಾರಕ್ಕಾಗಿ ಸ್ಥಾಪಿಸಿದ ಮಠಗಳೇ ಈ ಗತಿಗೆ ಬಂದಿವೆ. ಆಧುನಿಕ ಭಾರತದ ಮಹಾಪುರುಷರಾದ ತಿಲಕ್, ಗೋಖಲೆ, ಗಾಂಧಿ, ಲಜಪತರಾಯ್, ರವೀಂದ್ರನಾಥ ಠಾಕೂರ್ ಮೊದಲಾದ ಮಹನೀಯರು ಸ್ಥಾಪಿಸಿದ ಸಂಸ್ಥೆಗಳಿಗೂ ಅದೇ ಅವಸ್ಥೆ ಬರುತ್ತಿದೆ. ಇದಕ್ಕೆ ಕಾರಣ ಸತ್ತ್ವಶುದ್ಧಿಯುಳ್ಳ ಕಾರ್ಯಕರ್ತರ ಅಭಾವ. ಸಂಸ್ಥೆಗಳಿಗೆ ಅಧ್ಯಕ್ಷರಾಗುವುದಕ್ಕೂ ಕಾರ್ಯದರ್ಶಿಯಾಗುವುದಕ್ಕೂ ಅಭ್ಯರ್ಥಿಗಳ ಸಂಖ್ಯೆಗೇನೂ ಕೊರತೆಯಿಲ್ಲ. ರಾಜಕೀಯ ಚುನಾವಣೆಗೆ ಜನ ಮುನ್ನುಗ್ಗಿ ಬರುವಂತೆ ಕಾರ್ಯದರ್ಶಿತನ, ಕಾರ್ಯಕಾರಿ ಸಮಿತಿಯ ಸದಸ್ಯತನ ಮುಂತಾದ ಗೌರವ ಪದವಿಗಳಿಗೆ ಪೈಪೋಟಿ ನಡಸಲು ಜನ ಮುಂದೆ ಬರುತ್ತಾರೆ. ಸ್ಪರ್ಧೆ ನಡಸುತ್ತಾರೆ. ಕೋರ್ಟುಗಳಿಗೂ ಹತ್ತುತ್ತಾರೆ. ಆದರೆ ಪ್ರಸಕ್ತಸಂಸ್ಥೆಗೆ ಅದರಿಂದ ಹೆಚ್ಚಿನ ಬಲವಾಗಲಿ ಕೀರ್ತಿಯಾಗಲಿ ದೊರೆಯಲಾರದು. ಕಾರ್ಯದರ್ಶಿ ಎಂದು ಕರೆಯಿಸಿಕೊಂಡರೆ ಅಥವಾ ಅಧ್ಯಕ್ಷನೆನಿಸಿಕೊಂಡರೆ ಕೆಲವು ಸ್ಥಳಗಳಲ್ಲಿ ಅಂಥವರಿಗೆ ಪ್ರತಿಷ್ಠೆ ಸಿಕ್ಕುತ್ತದೆ; ಸಣ್ಣಪುಟ್ಟ ಪ್ರಯೋಜನಗಳೂ ದೊರೆಯುತ್ತವೆ, ಹೀಗೆ ಸಂಸ್ಥೆಯು ಅವರಿಗೆ ಕಾಲಿಟ್ಟು ಮೇಲಕ್ಕೆ ಹತ್ತಲು ಒಂದು ಮೆಟ್ಟಿಲಾಗುತ್ತದೆ. ಸಂಸ್ಥೆಯನ್ನು ದೊಡ್ಡದು ಮಾಡಬೇಕೆನ್ನುವವರು

ವೆಂಕಟನಾರಣಪ್ಪನವರಂತೆ ಪ್ರಾಮಾಣಿಕವಾಗಿ ಸ್ವಪ್ರಯೋಜನದ ಚಿಂತೆ ಬಿಟ್ಟವರಾಗಿರಬೇಕು.

ವಿದ್ಯಾರ್ಥಿದಶೆ

ಬೆಳ್ಳಾವೆ ವೆಂಕಟನಾರಣಪ್ಪನವರ ತಂದೆ ಹಳೆಯ ಮೈಸೂರಿನ ಹಳೆಯ ಅಂಚೆ ಇಲಾಖೆಯಲ್ಲಿ ಪೋಸ್ಟ್‌ಮಾಸ್ಟರಾಗಿದ್ದರು. ಬೆಳ್ಳಾವೆ ಇರುವುದು ತುಮಕೂರು ಜಿಲ್ಲೆಯಲ್ಲಿ. ಬೆಳ್ಳಾವೆಯು ಸಂತೆಗೆ ಪ್ರಸಿದ್ಧವಾದ ಊರು. ವೆಂಕಟನಾರಣಪ್ಪನವರ ಮನೆತನ ಅಲ್ಲಿ ಗಣ್ಯವಾದದ್ದು; ಸೌಜನ್ಯ ಸದಾಚಾರಗಳಿಗೆ ಹೆಸರಾದದ್ದು.

ವೆಂಕಟನಾರಣಪ್ಪನವರು ತುಮಕೂರು ಹೈಸ್ಕೂಲನ್ನು ಬಿಟ್ಟಬಳಿಕ ಅವರ ಪ್ರೌಢ ವಿದ್ಯಾಭ್ಯಾಸ ನಡೆದದ್ದು ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ. ಪ್ರಸಿದ್ಧರಾದ ಜಾನ್ ಕುಕ್‌ರವರು ಆಗ ಕಾಲೇಜಿನ ಮುಖ್ಯಸ್ಥರಾಗಿದ್ದರು. ಅವರಿಗೆ ವೆಂಕಟನಾರಣಪ್ಪನವರು ಮೆಚ್ಚಿನ ಶಿಷ್ಯರಾಗಿದ್ದರು. ಕುಕ್‌ರವರು ಭೌತಶಾಸ್ತ್ರ (Physics) ದಲ್ಲಿ ಪ್ರವೀಣರು. ಆ ಶಾಸ್ತ್ರವನ್ನು ಕುರಿತ ಅವರ ಗ್ರಂಥ ಬಹುಕಾಲ ಪಠ್ಯಗ್ರಂಥವಾಗಿ ಅಂಗೀಕಾರ ಪಡೆದಿತ್ತು. ಕಾಲೇಜಿನ ಅಡಳಿತದಲ್ಲಿಯೂ ಕುಕ್ ಅವರು ಕಟುನಿಟ್ಟಿನ ಸ್ವಭಾವದವರು. ಅವರಿಗೆ ತಮ್ಮ ಕಾಲೇಜಿನ ವಿಷಯದಲ್ಲಿಯೂ ತಮ್ಮ ವಿದ್ಯಾರ್ಥಿಗಳ ವಿಷಯದಲ್ಲಿಯೂ ತುಂಬ ಹೆಮ್ಮೆ. ಹೊಸದಾಗಿ ಕಾಲೇಜಿಗೆ ಸೇರಬಂದ ಹುಡುಗ ತಾನು ಹಿಂದಿನ ಒಬ್ಬ ಆ ಕಾಲೇಜಿನ ವಿದ್ಯಾರ್ಥಿಯ ಹತ್ತಿರದ ಸಂಬಂಧಿಯೆಂದು ಹೇಳಿದ ಕೂಡಲೆ ಅವನಿಗೆ ಪ್ರವೇಶ ಸುಲಭವಾಗುತ್ತಿತ್ತು.

ಬಹುಶಃ ಅಂಚೆ ಅಧಿಕಾರಸ್ಥರ ಅಭ್ಯಾಸದ ಪ್ರಭಾವದಿಂದಲೋ, ಕುಕ್ ಸಾಹೇಬರ ರೀತಿಯ ಪ್ರಭಾವದಿಂದಲೋ, ಎಲ್ಲ ನಡವಳಿಕೆಗಳಲ್ಲಿಯೂ ಕಟ್ಟುನಿಟ್ಟಿನಿಂದ ನಡೆಯುವುದೂ ಲೆಕ್ಕಾಚಾರದಿಂದ ಗೊತ್ತುಮಾಡುವುದೂ ವೆಂಕಟನಾರಣಪ್ಪನವರಿಗೆ ಸ್ವಭಾವವಾಗಿ ಬಂದಿತ್ತು. ಅವರ ತಮ್ಮಂದಿರಿಗೂ ಹಾಗೆಯೇ ಎಂದು ತೋರುತ್ತದೆ.

ವೆಂಕಟಪತಯ್ಯನವರು

ವೆಂಕಟನಾರಣಪ್ಪನವರ ತಮ್ಮಂದಿರಾದ ಬೆಳ್ಳಾವೆ ವೆಂಕಟಪತಯ್ಯನವರೂ, ಮೋಕ್ಷಗುಂಡಂ ಕೃಷ್ಣಮೂರ್ತಿ, ಡಿ.ರಾಘವೇಂದ್ರ ರಾವ್, ಜಿ.ಕೃಷ್ಣಮೂರ್ತಿ ಮೊದಲಾದ ಬೆಂಗಳೂರಿಗರೂ ಬೊಂಬಾಯಿಯಲ್ಲಿ ಲಾ ಕಾಲೇಜಿನಲ್ಲಿ ಸಹಾಧ್ಯಾಯಿಗಳಾಗಿದ್ದರು. ಅವರು ಒಂದು ಕೊಠಡಿಯನ್ನು ಬಾಡಿಗೆಗೆ ತೆಗೆದುಕೊಂಡು ಒಬ್ಬ ಅಡಿಗೆಯವನನ್ನು ಕೆಲಸಕ್ಕಿರಿಸಿಕೊಂಡು ಆ ಎಲ್ಲ ಖರ್ಚುಗಳನ್ನೂ ತಾವೆಲ್ಲ ಸಮವಾಗಿ ಹಂಚಿಕೊಂಡು ಇರುತ್ತಿದ್ದರು. ಆಡಳಿತದ ಜವಾಬ್ದಾರಿಯನ್ನೆಲ್ಲ ವೆಂಕಟಪತಯ್ಯನವರಿಗೆ ಒಪ್ಪಿಸಿದ್ದರು. ಒಂದು ಸಾರಿ ಬೇಸಿಗೆಯ ರಜ ಬಂದಾಗ ತಮ್ಮ ತಮ್ಮ ಊರುಗಳಿಗೆ ಹೊರಡುವ ಮುನ್ನ ಅವರು ತಮ್ಮಿಂದ ಸಲ್ಲಬೇಕಾದ ಹಣ ಎಷ್ಟಾಗಬಹುದೆಂಬುದನ್ನು ಅಂದಾಜುಮಾಡಿ ಆ ಹಣವನ್ನು ವೆಂಕಟಪತಯ್ಯನವರ ಕೈಗೆ ಕೊಟ್ಟರು. ವೆಂಕಟಪತಯ್ಯನವರು ಕರಾರಾಗಿ ಲೆಕ್ಕ ನೋಡಿ ಮೋಕ್ಷಗುಂಡಂ ಕೃಷ್ಣಮೂರ್ತಿ ಕೊಟ್ಟ ಹಣದಲ್ಲಿ ಆತನಿಂದ ಸಲ್ಲಬೇಕಾದದ್ದನ್ನು ಸಲ್ಲಿಸಿದ ಬಳಿಕ ಮೂರುಕಾಸು ಉಳಿದಿತ್ತು. ಇದನ್ನು ಆತನಿಗೆ ಹಿಂದಿರುಗಿಸುವ ಬಗೆ ಹೇಗೆ? ವೆಂಕಟಪತಯ್ಯನವರು ತಮ್ಮ ಮನೆಗೆ ಬರೆದ ಕಾಗದದೊಡನೆ ಆ ಲಕ್ಕೋಟೆಯಲ್ಲಿ ಇನ್ನೊಂದು ಚೀಟಿಯನ್ನಿರಿಸಿದ್ದರು. ಇದು ಮೋಕ್ಷಗುಂಡಂ ಕೃಷ್ಣಮೂರ್ತಿಯ ಹೆಸರಿಗೆ ಬರೆದ On Demand ಪತ್ರ. ಅದನ್ನು ವೆಂಕಟಪತಯ್ಯನವರು ಬೊಂಬಾಯಿಗೆ ಹಿಂದಿರುಗಿದ ಬಳಿಕ ಕೃಷ್ಣಮೂರ್ತಿ ಆ ಚೀಟಿಯನ್ನು ತೋರಿಸಿ ತನ್ನ ಮೂರುಕಾಸನ್ನು ವಸೂಲುಮಾಡಿಕೊಳ್ಳತಕ್ಕದ್ದು. ಮೂರುಕಾಸನ್ನು ಮನಿಆರ್ಡರಿಗೆ ಅಂಗೀಕರಿಸುವುದಿಲ್ಲ, ಮತ್ತು ಆ ಖರ್ಚು ಮಾಡಿದರೆ ಅಥವಾ ಕಾರ್ಡು ಮೊದಲಾದದ್ದನ್ನು ಕಳಿಸಿದರೆ ಮೂರು ಕಾಸಿಗಿಂತ ಹೆಚ್ಚು ವೆಚ್ಚವಾದೀತು.


ಇದು ಲೆಕ್ಕಾಚಾರದ ಸ್ವಭಾವದ ಲಕ್ಷಣ.

ವ್ಯಕ್ತಿ ಲಕ್ಷಣಗಳು

ವೆಂಕಟನಾರಣಪ್ಪನವರ ರೂಪಲಕ್ಷಣಗಳೂ ಗಮನಕ್ಕೆ ಬರತಕ್ಕವು. ಆಳು ಎತ್ತರ, ದಪ್ಪವಲ್ಲ; ತೆಳುವೆಂದೇ ಹೇಳಬಹುದು. ಮೈಬಣ್ಣ ಸುಮಾರು ಬಿಳುಪು, ದೇಹದ ಯಾವ ಭಾಗದಲ್ಲಿಯೂ ಸೋಮಾರಿತನದ ಸೂಚನೆಯಾಗಲಿ ಅಜಾಗರೂಕತೆಯ ಸೂಚನೆಯಾಗಲಿ ಇರಲಿಲ್ಲ. ಕೈ, ಕಾಲು, ಬೆನ್ನು, ಕತ್ತುಗಳು ದೃಢವಾಗಿ ನೇರವಾಗಿ ನಿಂತಿರುತ್ತಿದ್ದುವು-ಯಾವುದಾದರೂ ಕೆಲಸಕ್ಕೆ ಸಿದ್ಧವಾಗಿ.

ಮುಖ ಪ್ರಸನ್ನವಾಗಿರುತ್ತಿತ್ತು. ತಲೆಯ ಮೇಲೆ ರುಮಾಲು, ಪೂರ್ವ ಕಾಲದ ಕಟ್ಟು, ಸರಿಗೆ ಅಲ್ಲಲ್ಲಿ ಕೊಂಚ ಕಾಣಿಸುವುದು. ಶುಭ್ರವಾದ ಬಿಳಿಯ ಕೋಟು. ಸಣ್ಣ ಸರಿಗೆಯಂಚಿನ, ಚೆನ್ನಾಗಿ ಮಡಿಸಿ ಇಸ್ತ್ರಿಮಾಡಿದ ಉತ್ತರೀಯ. ಉಡುತ್ತಿದ್ದದ್ದು ಶುಭ್ರವಾದ ಧೋತ್ರ, ಪಂಚೆಗಚ್ಚೆ ಹಾಕಿದ್ದು. ಒಂದೊಂದು ವೇಳೆ ಕೈಯಲ್ಲಿ ಬೆತ್ತವಿರುತ್ತದ್ದದ್ದೂ ಉಂಟು. ಅದು ಊರೆಗೋಲಲ್ಲ. ಆಯುಧವೂ ಅಲ್ಲ. ಅದೊಂದು ಸಣ್ಣ ಅಲಂಕಾರ.

ಆದರೆ ಮುಖ್ಯವಾಗಿ ಹೇಳಬೇಕಾದ ಲಕ್ಷಣ ಅವರ ಗಡಿಯಾರದ ಸರಪಳಿಯ ಪದಕ. ಅವರು ಗಡಿಯಾರವನ್ನು ಎಡಗಡೆಯ ಮೇಲ್ಜೇಬಿನಲ್ಲಿಟ್ಟು ಅದರ ಸರಪಳಿಯ ಇನ್ನೊಂದು ಕೊನೆಯನ್ನು ಕೋಟಿನ ಗುಂಡಿಯಲ್ಲಿ ಸಿಕ್ಕಿಸಿಕೊಂಡಿರುವರು, ಆ ಸರಪಳಿ ಬೆಳ್ಳಿಯ ಉಡುದಾರದ ಮಾದರಿಯದು-ಪೂರ್ವಕಾಲದ ತರಹ. ಗುಂಡಿಗೆ ಅದರ ಕೊನೆಯನ್ನು ಸೇರಿಸುವ ಕೊಂಡಿಯಿಂದ ಪದಕವು ನೇತಾಡುತ್ತಿತ್ತು, ಆ ಪದಕದ ಸ್ವರೂಪ ಹೀಗೆ:



ಈ ಮಾದರಿಯ ಎರಡೂವರೆ-ಮೂರು ಅಂಗುಲ ಅಗಲವೂ, ಮೂರೂವರೆ ನಾಲ್ಕು ಅಂಗುಲ ಉದ್ದವೂ ಇದ್ದ ಒಂದು ತಗಡಿನ ಹಲಗೆ. ಅದರ ಮೇಲ್ಭಾಗದಲ್ಲಿ ಕ್ಲಿಪ್ ಹಿಡಿಕೆ. ಆ ಹಿಡಿಕೆಯಿಂದ ಅದೇ ಆಕಾರದ ಹತ್ತು-ಹದಿನೈದು ತೆಳ್ಳನೆಯ ಕಾಗದದ ತುಂಡುಗಳು. ಈ ತುಂಡುಗಳ ಮೇಲೆ ಇನ್ನೊಂದು ಸಣ್ಣ ತಗಡಿನ ಮುಚ್ಚಳ. ಇದರ ಜೊತೆಗೆ ಒಂದು ಸ್ಕ್ರೂಪೆನ್ಸಿಲ್. ಈ ಸಣ್ಣ ಹಲಗೆಪುಸ್ತಕವೂ ಪೆನ್ಸಿಲ್ ಕಡ್ಡಿಯೂ ಅವರ ಮೈಮೇಲಿಲ್ಲದಿದ್ದ ಕಾಲವೇ ಇಲ್ಲ. ಯಾವಾಗ ಯಾರು ಏನು ಮುಖ್ಯ ವಿಷಯ ಹೇಳಿದರೂ, ತಮಗೆ

ಯಾವುದು ಜ್ಞಾಪಕಕ್ಕೆ ಬಂದರೂ, ತಾವು ಯಾವ Engagement ಮಾಡಿಕೊಂಡರೂ, ಒಡನೆಯೇ ಅದನ್ನು ಈ ಹಲಗೆಪುಸ್ತಕದಲ್ಲಿ ಗುರುತು ಮಾಡುವರು. ಅಲ್ಲಿ ಗುರುತಾಯಿತೆಂದರೆ ಚಿತ್ರಗುಪ್ತನ ಲೆಕ್ಕದಲ್ಲಿ ಬರೆದಂತೆಯೇ. ಇದರಿಂದಲೇ ನಮಗೆಲ್ಲ ಕಾಟ. ಮದುವೆ "ಬೆಳಗ್ಗೆ ಏಳರಿಂದ ಏಳೂವರೆಯ ಒಳಗೆ ಸಲ್ಲುವ ಶುಭ ಮಿಥುನ ಲಗ್ನದಲ್ಲಿ" ಎಂದು ಲಗ್ನಪತ್ರಿಕೆಯಲ್ಲಿದ್ದರೆ ಆರು ಘಂಟೆ ಐವತ್ತೊಂಭತ್ತು ನಿಮಿಷಕ್ಕೆ ವೆಂಕಟನಾರಣಪ್ಪನವರು ಹಾಜರು. ಆರು ಐವತ್ತೆಂಟಕ್ಕೆ ಮುಂಚೆ ಅಲ್ಲ; ಏಳು ಘಂಟೆ ಒಂದು ನಿಮಿಷವಾದ ಮೇಲೂ ಅಲ್ಲ. ಹೀಗೆ ಕಟ್ಟುನಿಟ್ಟು. ಅದೇ ನಮ್ಮಂಥವರಿಗೆ ಹಿಂಸೆ.

ಸರ್ವಾಯುಧಿ

ವೆಂಕಟನಾರಣಪ್ಪನವರ ಸಜ್ಜಿನಲ್ಲಿದ್ದ ಇನ್ನೊಂದು ಪದಾರ್ಥವನ್ನು ಸರ್ವಾಯುಧಿ ಎಂದು ಕರೆಯೋಣ. ಅದು ಜರ್ಮನಿ ದೇಶದಲ್ಲಿ ತಯಾರಾದದ್ದಂತೆ. ವೆಂಕಟನಾರಣಪ್ಪನವರಿಗೆ ಜರ್ಮನಿ ದೇಶದ ವಿಷಯದಲ್ಲಿ ಬಹುಮೆಚ್ಚಿಕೆ. ಕಾರಣವೇನೆಂದರೆ ಜರ್ಮನಿಯವರು ವಿಜ್ಞಾನಶಾಸ್ತ್ರಗಳಲ್ಲಿ ಬಹುದೂರ ಮುಂದುವರಿದಿದ್ದರಂತೆ. ಆ ಸರ್ವಾಯುಧಿ ಎಂಬ ಸಾಮಾನನ್ನು ವೆಂಕಟನಾರಣಪ್ಪನವರು ಯಾವಾಗಲೂ ಜೇಬಿನಲ್ಲಿರಿಸಿಕೊಂಡಿರುತ್ತಿದ್ದರು. ಮೊದಲ ನೋಟಕ್ಕೆ ಅದು ಒಂದು ದೊಡ್ಡ ಚಾಕು. ಅದರಲ್ಲಿದ್ದ ಇತರ ಆಯುಧಗಳು: ದಬ್ಬಳ, ಕತ್ತರಿ, ಸ್ಕ್ರೂಡ್ರೈವರ್, ಕಾರ್ಕ್‌ಸ್ಕ್ರೂ, ಅರ, ಮೊಳೆಕೀಳಿ, ಉಗುರುಕೀಳಿ; ಇನ್ನೂ ಎರಡುಮೂರು ಸಣ್ಣ ಸಣ್ಣ ಆಯುಧಗಳನ್ನು ಅದರಲ್ಲಿ ಜೋಡಿಸಿರುತ್ತಿತ್ತು. ವೆಂಕಟನಾರಣಪ್ಪನವರು ಈ ಎಲ್ಲ ಆಯುಧಗಳನ್ನೂ ಸಮಯಬಂದಂತೆ ಉಪಯೋಗಿಸುತ್ತಿದ್ದರು. ಅವರ ಗಡಿಯಾರವೂ ಹಲಗೆಪುಸ್ತಕವೂ ಸರ್ವಾಯುಧಿಯೂ ಅವರು ಎಂಥ ಕರಾರುವಾಕ್ಕು ಮನುಷ್ಯರು ಮತ್ತು ಕಾರ್ಯಶೀಲರು ಎಂಬುದನ್ನು ತೋರಿಸುತ್ತವೆ.

ಅಧ್ಯಾಪಕವೃತ್ತಿ

ವೆಂಕಟನಾರಣಪ್ಪನವರ ವಿದ್ಯಾನಿಷ್ಠೆಯನ್ನೂ ನೀತಿನಿಷ್ಠೆಯನ್ನೂ ಮೆಚ್ಚಿಕೊಂಡಿದ್ದ ಕುಕ್‌ಸಾಹೇಬರು ಅವರು ಬಿ.ಎ. ಪರೀಕ್ಷೆಯಲ್ಲಿ ಉತ್ತೀರ್ಣರಾದ ಕೂಡಲೆ ಅವರು ತಮ್ಮ ಕಾಲೇಜಿನಲ್ಲಿಯೇ ಉಪಾಧ್ಯಾಯರನ್ನಾಗಿ ನಿಯಮಿಸಿಕೊಂಡರು. ಆಗಿನ ಒಂದು ಚಿತ್ರ.

ವೆಂಕಟನಾರಣಪ್ಪನವರ ಶಿಷ್ಯರಲ್ಲಿ (ಉತ್ತರೋತ್ತರ ಫಾರೆಸ್ಟ್ ಇಲಾಖೆಯ ಮುಖ್ಯಾಧಿಕಾರಿಗಳಾದ) ಬಿ.ವಿ. ರಾಮಯ್ಯಂಗಾರ್ಯರು ಒಬ್ಬರು. ಒಂದು ದಿನ ಪಾಠ ನಡೆಯುತ್ತಿದ್ದಾಗ ರಾಮಯ್ಯಂಗಾರ್ಯರು ಅಕ್ಕಪಕ್ಕದ ವಿದ್ಯಾರ್ಥಿಗಳೊಡನೆ ಪಿಸುಗುಟ್ಟುತ್ತ ಕೈಚೇಷ್ಟೆ ಮಾಡುತ್ತ ಇದ್ದದ್ದು ವೆಂಕಟನಾರಣಪ್ಪನವರ ಕಣ್ಣಿಗೆ ಬಿತ್ತು. ಅವರು ರಾಮಯ್ಯಂಗಾರ್ಯರನ್ನು ಹೆಸರು ಹಿಡಿದು ಕರೆದು, ತಾವು ಕಪ್ಪು ಹಲಗೆಯ ಮೇಲೆ ಬರೆದಿದ್ದ ಲೆಕ್ಕವನ್ನು ಪೂರ್ತಿಮಾಡು ಎಂದರು. ರಾಮಯ್ಯಂಗಾರ್ಯರು ಆ ಪಾಠಕ್ಕೆ ಗಮನ ಕೊಟ್ಟಿರಲಿಲ್ಲ. ತಬ್ಬಿಬ್ಬಾಗಿ ನಿಂತರು. ವೆಂಕಟನಾರಣಪ್ಪನವರಿಗೆ ಕೋಪ ಬಂತು. ಕೈಯಲ್ಲಿದ್ದ ಧೂಳುಬಟ್ಟೆ (ಡಸ್ಟರ್)ಯನ್ನು ಶಿಷ್ಯನ ಮುಖಕ್ಕೆ ತಿಕ್ಕಿದರು. ರಾಮಯ್ಯಂಗಾರ್ಯರ ಮೈಬಣ್ಣ ಕೆಂಪು. ಮುಖ ಅಂದವಾದದ್ದು. ಧೂಳುಬಟ್ಟೆಯ ಸೀಮೆಸುಣ್ಣದ ಪುಡಿ ಕಣ್ಣಿನಲ್ಲೆಲ್ಲ ಬಿದ್ದು ಕಣ್ಣು ಕೆಂಪಾಯಿತು. ಕಣ್ಣಿನಲ್ಲಿ ನೀರೂ ಬಂತು. ವೆಂಕಟನಾರಣಪ್ಪನವರು ಏನೋ ಯೋಚಿಸಿದ್ದು ಇನ್ನೇನೋ ಆಯಿತೆಂದು ದಿಗಿಲುಪಟ್ಟು ಕ್ಲಾಸನ್ನು ನಿಲ್ಲಿಸಿ ತಾವು ಬೇಗ ಬೇಗ ಪೇಟೆಗೆ ಹೋಗಿ ಬಾಳೆಹಣ್ಣು, ಕಲ್ಲುಸಕ್ಕರೆ, ದ್ರಾಕ್ಷಿ, ಖರ್ಜೂರಗಳನ್ನು ಕೊಂಡು ಪೊಟ್ಟಣ ಕಟ್ಟಿಸಿ ರಾಮಯ್ಯಂಗಾರ್ಯರ ಮನೆಗೆ ಓಡಿದರು.

ರಾಮಯ್ಯಂಗಾರ್ಯರ ತಂದೆ ವೆಂಕಟಪತಯ್ಯಂಗಾರ್ಯರು. ಇವರು ಮೈಸೂರು ಸಂಸ್ಥಾನದ ವಿದ್ಯಾ ಇಲಾಖೆಗೆ ತಳಪಾಯ ಕಟ್ಟಿದವರು. ಇನ್‌ಸ್ಪೆಕ್ಟರಾಗಿ ಪ್ರಸಿದ್ಧರಾಗಿದ್ದರು. ಅವರು ಸೌಜನ್ಯದಿಂದಲೂ ವಾತ್ಸಲ್ಯದಿಂದಲೂ ಪ್ರಖ್ಯಾತರಾಗಿದ್ದ ಮಹಾನುಭಾವರು. ನೂರಾರು ಮನೆಗಳಲ್ಲಿ ದೇವರ ಮುಂದೆ ದೀಪ ಹೊತ್ತಿಸಿ ವೆಂಕಟಪತಯ್ಯಂಗಾರ್ಯರು ಅನ್ನವಿಟ್ಟ ಮಹೋಪಕಾರಿ ಎಂದು ಅವರನ್ನು ನೆನೆಯುತ್ತಿದ್ದರು. ಈ ಮಹನೀಯರು ಅಲಸೂರು ಪೇಟೆಯಲ್ಲಿದ್ದ ದೊಡ್ಡಿ ವೆಂಕಟರಮಣಶೆಟ್ಟಿಯವರ ಮನೆಯಲ್ಲಿ ವಾಸವಾಗಿದ್ದರು. ಅವರದು ದೊಡ್ಡ ಕುಟುಂಬ ಬಹುಮಂದಿ ಅವರ ಪೋಷಣೆಯಲ್ಲಿದ್ದರು.

ವೆಂಕಟನಾರಣಪ್ಪನವರು ಆಗ ವಾಸವಾಗಿದ್ದದ್ದೂ ಅಲಸೂರುಪೇಟೆಯಲ್ಲಿಯೇ. ಆದದ್ದರಿಂದ ಅವರಿಗೂ ವೆಂಕಟಪತಯ್ಯಂಗಾರ್ಯರಿಗೂ ನೆರೆಹೊರೆಯ ಸ್ನೇಹವಿತ್ತು.

ಮೇಲೆ ಹೇಳಿದ ದಿವಸ ವೆಂಕಟಪತಯ್ಯಂಗಾರ್ಯರು ಮನೆಯ ಮುಂಭಾಗದ ವಿಶಾಲವಾದ ಮೊಗಸಾಲೆಯಲ್ಲಿ ಕುಳಿತಿದ್ದರು. ವೆಂಕಟನಾರಣಪ್ಪನವರು, ವಿಷಯ ಅವರಿಗೆ ತಿಳಿಯುವುದಕ್ಕೆ ಮುಂಚೆಯೇ ಶಿಷ್ಯನನ್ನು ಸಮಾಧಾನಪಡಿಸಬೇಕೆಂದು ಸಂಕಲ್ಪಿಸಿ ವೆಂಕಟಪತಯ್ಯಂಗಾರ್ಯರ ಬಳಿ ಹೋಗದೆಯೇ ಮನೆಯ ಪಕ್ಕದ ಬಾಗಿಲಿನಿಂದ ಒಳಕ್ಕೆ ಹೋಗಬೇಕೆಂದು ಸರಸರನೆ ನಡೆಯುತ್ತಿದ್ದರು. ವೆಂಕಟಪತಯ್ಯಂಗಾರ್ಯರು ತಾವಿದ್ದ ಕಡೆಯಿಂದಲೇ ಅದನ್ನು ಕಂಡು ನಗುತ್ತಾ “ವೆಂಕಟನಾರಣಪ್ಪಾ, ಬನ್ನಿ. ಇನ್ನೂ ನಾಲ್ಕು ಬಿಗಿಯಬೇಕಾಗಿತ್ತು ಆ ಹು...ಡೇಗೆ. ಅವನ ತುಂಟಾಟಕ್ಕೆ ಫಲಾಹಾರ ಬೇರೆ ತಂದಿದ್ದೀರಿ!” ಎಂದು ಹೇಳುತ್ತ ಬಾಳೆಹಣ್ಣು ಕಲ್ಲುಸಕ್ಕರೆಗಳನ್ನು ತಾವೇ ಭಕ್ಷಿಸಲಾರಂಭಿಸಿದರು. ಹುಡುಗರನ್ನು ದಂಡಿಸುವ ಪದ್ಧತಿಯನ್ನು ಬಾಯಿ ತುಂಬ ಹೊಗಳಿದರು.

ವೆಂಕಟನಾರಣಪ್ಪನವರಲ್ಲಿ ನೈಜವಾಗಿದ್ದ ಪ್ರವೃತ್ತಿ, ಅದು ಅವರು ಯಾರನ್ನೂ ಎಂದೂ ಹೊಡೆದದ್ದಿಲ್ಲ. ಆದರೆ ಹೊಡೆಯಹೊರಟವರಂತೆ ನಟಿಸುತ್ತಿದ್ದರು.

ಕೋಮಲತೆ

ಅವರು ಕಾಲೇಜಿನಲ್ಲಿ ತಮ್ಮ ಲಾಬೋರೇಟರಿಯಲ್ಲಿ ಚಿಲ್ಲರೆ ಕೆಲಸಕ್ಕಾಗಿ ವೆಂಕಟ ಎಂಬ ಹುಡುಗನನ್ನು ಇರಿಸಿಕೊಂಡಿದ್ದರು. ಆವನನ್ನೇ ಪರಿಷತ್ತಿನಲ್ಲಿಯೂ ಕೆಲಸಕ್ಕೆ ನಿಯಮಿಸಿದರು. ಅವನನ್ನು “Clever rascal” ಎಂದು ಬಯ್ಯುತ್ತಿದ್ದರು. ಕೈಯಲ್ಲಿದ್ದ ಪುಸ್ತಕದಿಂದ ಅವನನ್ನು ಹೊಡೆದ ಹಾಗೆ ಮಾಡುತ್ತಿದ್ದರು. ಅವನು ನಗುತ್ತಿರುವನು; ಅವರು “ನೀನು Rascal, ಬಲಿಹಾಕಿಬಿಡುತ್ತೇನೆ ನೋಡು” ಎನ್ನುವರು: ಅವನು ಇನ್ನೂ ನಗುವನು.

ವೆಂಕಟನಾರಣಪ್ಪನವರ ಖಡಾಖಡಿಯೆಲ್ಲ ಬಾಯಿಮಾತಿನಲ್ಲಿ, ಮನಸ್ಸಿನಲ್ಲಿ ಅವರು ಅತ್ಯಂತ ಕೋಮಲರು.

ಒಬ್ಬಾನೊಬ್ಬ ಸ್ನೇಹಿತರ ಮನೆಯಲ್ಲಿ ಒಂದು ಸಂಜೆ ಬೆಂಕಿಯ ಆಕಸ್ಮಿಕ ಸಂಭವಿಸಿತು. ಆ ಸ್ನೇಹಿತರ ಭಾರ್ಯೆ ಬಾಣಂತಿಯಾಗಿದ್ದಾಕೆ. ಬಟ್ಟೆ ಆಕೆ ಮೈಕಾಯಿಸಿಕೊಳ್ಳುತ್ತಿದ್ದ ಅಗ್ಗಿಷ್ಟಿಕೆಯ ಬೆಂಕಿ ತಗುಲಿ ಜ್ವಾಲೆಯಾಯಿತು. ಮನೆಯವರೂ ಡಾಕ್ಟರುಗಳೂ ಆಕೆಯನ್ನು ಆಸ್ಪತ್ರೆಗೆ ಸಾಗಿಸುವ ಚಿಂತೆಯಲ್ಲಿದ್ದಾರೆ. ವೆಂಕಟನಾರಣಪ್ಪನವರೇ ಅಲ್ಲಿಗೆ ಮೊದಲು ಬಂದು ಈ ಸಹಾಯಕ್ಕೆಲ್ಲ ಮುಂದೆ ನಿಂತು ಕಷ್ಟಭಾಗಿಯಾಗಿದ್ದಾರೆ. ಆಗ ಆಕೆಯ ಐದು ವರ್ಷದ ಮಗ ತನ್ನ ತಾಯಿಗೆ ಏನೋ ಆಗಿದೆಯೆಂದು ತಿಳಿದು ಅಳುತ್ತ ನಿಂತಿದ್ದಾನೆ. ವೆಂಕಟನಾರಣಪ್ಪನವರು ಅವನ ಬಳಿ ನಿಂತು ತಮ್ಮ ಕಣ್ಣನ್ನು ಕೈವಸ್ತ್ರದಿಂದ ಒರೆಸಿಕೊಳ್ಳುತ್ತ

“ಯಾಕೋ ಅಳತ್ತಿ? ಯಾಕೋ ಅಳುವುದು?”

-ಎಂದು ಗದ್ದರಿಸುವ ಧ್ವನಿಯಲ್ಲಿ ಕೇಳುತ್ತಿದ್ದಾರೆ. ತಾವೇ ಯಾಕೆ ಅಳುತ್ತಿದ್ದರು?

> ವಜ್ರಾದಪಿ ಕಠೋರಾಣಿ
> ಮೃದೂನಿ ಕುಸುಮಾದಪಿ ॥

ಎಂ.ಎ. ಪದವಿ

ವೆಂಕಟನಾರಣಪ್ಪನವರು ಎಂ.ಎ.ಪರೀಕ್ಷೆಗೆ ಕುಳಿತು ಆ ಪದವಿ ಸಂಪಾದಿಸತಕ್ಕದ್ದೆಂದು ಕುಕ್ ಸಾಹೇಬರು ವಿಧಾಯಕಮಾಡಿದರು. ಅದಕ್ಕಾಗಿ ವೆಂಕಟನಾರಣಪ್ಪನವರು ಒಂದೆರಡು ತಿಂಗಳ ರಜ ತೆಗೆದುಕೊಂಡು ಗಾಢ ವ್ಯಾಸಂಗಕ್ಕಾಗಿ ಮದರಾಸಿಗೆ ಹೋದರು. ಅಲ್ಲಿ ರೋಗಕ್ಕೆ ಸಿಕ್ಕಿದರು. ಎಂ.ಎ. ಪರೀಕ್ಷೆಯ ಗೀಳು ಅವರ ಮನಸ್ಸನ್ನು ಹಿಡಿದು ಬಾಧಿಸುತ್ತಿತ್ತು. ಆಗ ಈ ಸಂಗತಿ ಬೆಂಗಳೂರು ಅಲಸೂರುಪೇಟೆಯ ವೆಲ್ನಾಡು ಸುಬ್ಬಯ್ಯನವರ ಮೂಲಕ ಅವರ ಸಮೀಪ ಬಂಧು ಮಹಾಮಹೋಪಾಧ್ಯಾಯ ಸಿದ್ಧಾಂತಿ ಶಿವಶಂಕರಶಾಸ್ತ್ರಿಗಳಿಗೆ ತಿಳಿಯಿತು. ಶಿವಶಂಕರಶಾಸ್ತ್ರಿಗಳು ಆಗ ಮದರಾಸಿನ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಸಂಸ್ಕೃತ ಕನ್ನಡ ಪಂಡಿತರಾಗಿದ್ದರು. ಅವರು ಮಂತ್ರಶಾಸ್ತ್ರದಲ್ಲೂ ಪಾರಂಗತರು. ವೆಂಕಟನಾರಣಪ್ಪನವರಿಗೆ ವಿಭೂತಿ ಕುಂಕುಮಗಳ ಮೂಲಕ ಧೈರ್ಯೋತ್ಸಾಹಗಳನ್ನು ತಂದು ಭರವಸೆಕೊಟ್ಟರು. ಎಂ.ಎ. ಪ್ಯಾಸ್ ಆಯಿತು.

ಪರಿಚಯ

ವೆಂಕಟನಾರಣಪ್ಪನವರಿಗೂ ನನಗೂ ಪರಿಚಯವಾದದ್ದು ೧೯೧೨ರ ಕೊನೆಯಲ್ಲಿ. ಆಗ ನಾನು 'ಕರ್ಣಾಟಕ' ಎಂಬ ಇಂಗ್ಲಿಷ್ ಅರ್ಧವಾರ ಪತ್ರಿಕೆಯನ್ನು ಹೊರಡಿಸುವ ತರದೂದಿನಲ್ಲಿದ್ದೆ. ನನ್ನ ಸ್ನೇಹಿತರು ಕೆಲವರು ನಾನು ವೆಂಕಟನಾರಣಪ್ಪನವರನ್ನು ಕಂಡು ಅವರ ಸಲಹೆಗಳನ್ನು ತೆಗೆದುಕೊಳ್ಳತಕ್ಕದ್ದೆಂದು ಹಿತವಚನ ಹೇಳಿದರು. ಅದರಂತೆ ನಾನು ವೆಂಕಟನಾರಣಪ್ಪನವರ ಮನೆಯಲ್ಲಿ ಅವರನ್ನು ಕಂಡಾಗ ಅವರು ನನ್ನನ್ನು ಕುಳಿತಿರ ಹೇಳಿ ಅಲ್ಲಿದ್ದ ಪುಸ್ತಕದ ಕಪಾಟಿನಿಂದ ಎರಡು ಮೂರು ಸಣ್ಣ ಸಣ್ಣ ಪುಸ್ತಕಗಳನ್ನು ತೆಗೆದು ನನ್ನ ಮುಂದೆ ಹಿಡಿದು "ಇದನ್ನು ಬರೆದವರು ನೀವು ತಾನೆ?" ಎಂದು ಕೇಳಿದರು. ನನಗೆ ಕೊಂಚನಾಚಿಕೆಯಾತು.

ವೆಂ: "ನಿಮ್ಮ ಪೂರ್ತಿ ಹೆಸರನ್ನು ಏಕೆ ಹಾಕಲಿಲ್ಲ?"

ನಾನು: "ಇದೇನು ಅಂಥ ದೊಡ್ಡ ಬರವಣಿಗೆ? ಏನೋ ಹುಡುಗತನದ್ದು. ನನ್ನ ಅವಿವೇಕವನ್ನು ಯಾರೂ ಕಂಡುಹಿಡಿಯಲು ಆಗದಂತೆ ಮಾಡಲು ಇದು ಒಂದು ಉಪಾಯವೆಂದು ಯೋಚಿಸಿದೆ."

ವೆಂ: "ಅಲ್ಲಪ್ಪ-ಈರುಳ್ಳಿ ತಿನ್ನುವುದೇ ಉಂಟಂತೆ ಅದರ ವಾಸನೆಯನ್ನು ಮುಚ್ಚಿಡುವುದಕ್ಕಾಗುತ್ತದೆಯೆ?"

ಇಬ್ಬರೂ ನಕ್ಕೆವು. ಅವರೆಂದರು: "ಒಳ್ಳೆಯ ಕೆಲಸ ಮಾಡಿದ್ದೀರಿ. ಇದಕ್ಕಾಗಿ ನಾಚಿಕೆ ಪಡಬೇಕಾಗಿಲ್ಲ. ಹೆಮ್ಮೆಪಡಬೇಕು."

ನಾನು ಅವರಲ್ಲಿ ಹೋಗಿದ್ದ ಉದ್ದೇಶವನ್ನು ವಿವರಿಸಿದೆ. ಅವರು ಸುತರಾಂ ಸಮ್ಮತಿಸಲಿಲ್ಲ.

"ನೀವು ಹಣವಂತರಲ್ಲ. ಸಾಲವಾಗಿಯೋ ದಾನವಾಗಿಯೋ ಕೈಗೆ ಬಂದ ಎರಡು ಕಾಸನ್ನು ಈ ಪ್ರಯತ್ನದಲ್ಲಿ ಹಾಳುಮಾಡಿಕೊಳ್ಳುತ್ತೀರಿ. ತುಂಬ ಶ್ರಮವಾಗುತ್ತದೆ. ಈಗ ಪ್ರೋತ್ಸಾಹಿಸುವವರು ಆಗ ನಿಮ್ಮ ಕಡೆ ತಿರುಗಿ ನೋಡುವುದಿಲ್ಲ. ದೇಶಕ್ಕೋಸ್ಕರ ಎನ್ನುತ್ತೀರಿ. ದೇಶ ಯಾರಿಗೆ ಬೇಕಾಗಿದೆ? ನಮ್ಮ ದೇಶದಲ್ಲಿ ದೇಶದ ಚಿಂತೆ ಹಚ್ಚಿಕೊಂಡವನಿಗೆ ಹುಚ್ಚಾಸ್ಪತ್ರೆಯೊಂದೇ ಗತಿ. ನಿಮಗೆ ನಾನು ಖಂಡಿತವಾಗಿ ಹೇಳುತ್ತೇನೆ. ಈ ಯೋಚನೆಯನ್ನು ಬಿಟ್ಟುಬಿಡಿ."

ಹೀಗೆ ನನಗೆ ಉತ್ಸಾಹಭಂಗವಾಯಿತು. ಆದರೂ ಹುಚ್ಚು ಬಿಡಲಿಲ್ಲ. ೧೯೧೩ ರ ಮಾರ್ಚಿ-ಏಪ್ರಿಲ್ ತಿಂಗಳಲ್ಲಿ ಪತ್ರಿಕೆ ಪ್ರಾರಂಭವಾಯಿತು. ಎರಡು ವರ್ಷಗಳೊಳಗಾಗಿ ವೆಂಕಟನಾರಣಪ್ಪನವರು ಹೇಳಿದ ಮಾತು ರುಜುವಾತಿಗೆ ಬಂತು-ಬಹುಶಃ ೧೯೧೪-೧೫ರಲ್ಲಿ ಯುಗಾದಿಯ ಹಿಂದಿನ ರಾತ್ರಿ ಅವರು ನನ್ನ ಮನೆಗೆ ಬಂದು ಹೊಸ ವರ್ಷದ ಶುಭಾಶಯಗಳನ್ನು ಹೇಳಿ ಹೊರಡುವಾಗ ನನ್ನ ಕೈಯಲ್ಲಿ ಒಂದು ಲಕ್ಕೋಟೆಯನ್ನು ತುರುಕಿ ನನ್ನ ಪ್ರತಿಮಾತಿಗೆ ಅವಕಾಶವಿಲ್ಲದಂತೆ ಸರಸರ ನಡೆದುಹೋದರು. ಆ ಲಕ್ಕೋಟೆಯಲ್ಲಿದ್ದದ್ದು ಒಂದು ಚೆಕ್ಕು-ಅದು ತಮ್ಮ ಆಜೀವ ಚಂದಾದಾರತನಕ್ಕಾಗಿ. ಬಹುಶಃ ೨೦೦-೨೫೦ ರೂಪಾಯಿಗಳಿರಬಹುದು; ಎಷ್ಟೆಂಬುದು ಈಗ ನೆನಪಿಲ್ಲ.

ಪ್ರಾಮಾಣಿಕತೆ

ಬೆಳ್ಳಾವೆ ವೆಂಕಟನಾರಣಪ್ಪನವರನ್ನು ಬಲ್ಲವರಿಗೆಲ್ಲ ಅವರನ್ನು ಪೂಜಾರ್ಹವಾಗಿ ಮಾಡಿರುವ ಗುಣಗಳಲ್ಲಿ ಮೊಟ್ಟಮೊದಲನೆಯದು ಅವರ ಪ್ರಾಮಾಣಿಕತೆ. ಎಲ್ಲ ವಿಷಯಗಳಲ್ಲೂ ಪ್ರಾಮಾಣಿಕತೆಯಿಂದ ನಡೆದುಕೊಳ್ಳಬೇಕು.

ಈ ಗುಣ ಒಂದೊಂದು ಸಾರಿ ಅವರನ್ನು ಹಾಸ್ಯ ವಿಷಯವನ್ನಾಗಿ ಮಾಡುತ್ತಿತ್ತು.

೧೯೧೪-೧೫ರಲ್ಲಿ ಮೊದಲನೆಯ ಪ್ರಪಂಚ ಮಹಾಯುದ್ಧದ ಕಾಲ. ಆಗ ಯುದ್ಧಕ್ಕೆ ಅವಶ್ಯವಾದ ಹಣವನ್ನೊದಗಿಸಿಕೊಳ್ಳಲು ಬ್ರಿಟಿಷ್ ಸರಕಾರದವರು “ವಾರ್ ಲೋನ್ ಬಾಂಡ್” (War Loan Bond) ಎಂಬ ಸಾಲದ ಆಲೋಚನೆ ಮಾಡಿ ಆ ಸಾಲಪತ್ರಗಳನ್ನು ಜನರಲ್ಲಿ ಬಿಕರಿ ಮಾಡಲು ಮೈಸೂರು ಸರಕಾರವೂ ಸಹಾಯ ಮಾಡಬೇಕೆಂದು ಬೇಡಿದ್ದರು. ಆ ಬಗ್ಗೆ ಸರಕಾರ ಅಲ್ಲಲ್ಲಿ ಮಹಾಜನ ಸಭೆಗಳನ್ನು ನಡೆಯಿಸಿತು. ಈ ಸಾಲ ಪ್ರಚಾರದ ಸಭೆಗಳಲ್ಲಿ ಮುಖ್ಯವಾದದ್ದು ಬೆಂಗಳೂರಿನಲ್ಲಿ ನಡೆಯಿತು. ದಿವಾನ್ ವಿಶ್ವೇಶ್ವರಯ್ಯನವರು ಅದರ ಅಧ್ಯಕ್ಷರಾಗಿದ್ದರು. ಸಭೆ ಬೆಂಗಳೂರು ನಗರದ ನಾನಾ ಭಾಗಗಳಲ್ಲಿ ಸಾಲಪತ್ರಕ್ಕೆ ಗಿರಾಕಿಗಳನ್ನೊದಗಿಸಲು ನಾನಾ ಪ್ರದೇಶಗಳಿಗೆ ನಾನಾ ಸಮಿತಿಗಳನ್ನು ಗೊತ್ತುಮಾಡಿತು. ಬಸವನಗುಡಿ ಪ್ರದೇಶಕ್ಕೆ ಗೊತ್ತಾದ ಸಮಿತಿಯಲ್ಲಿ ವೆಂಕಟನಾರಣಪ್ಪನವರು ಮುಖ್ಯಸ್ಥರು. ಇನ್ನಿಬ್ಬರೋ ಮೂವರೋ ಸದಸ್ಯರು. ಅವರಲ್ಲಿ ನಾನೊಬ್ಬ. ಸಾಲದ ಪತ್ರ ಕೊಂಡುಕೊಳ್ಳುವವರನ್ನು ಒಡಂಬಡಿಸುವುದಕ್ಕಾಗಿ ನಾವು ಗಣ್ಯ ವ್ಯಕ್ತಿಗಳನ್ನು ಹೋಗಿ ನೋಡಬೇಕೆಂದು ವೆಂಕಟನಾರಣಪ್ಪನವರು ಪದೇಪದೇ ಒತ್ತಾಯ ಪಡಿಸುತ್ತಿದ್ದರು. ನಾನು ಕೊಂಚ ಉದಾಸೀನನಾಗಿದ್ದೆ. “ಯಾರು ತೆಗೆದುಕೊಳ್ಳುತ್ತಾರೆ ಸಾರ್ ನಮ್ಮ ಮುಖ ನೋಡಿ? ಹಣ ಯಾರಿಗೆ ಹೆಚ್ಚಾಗಿದೆಯೋ ಅವರು ಬಡ್ಡಿಯ ಆಸೆಗೆ ತಾವಾಗಿ ಪತ್ರ ಕೊಂಡುಕೊಳ್ಳುತ್ತಾರೆ. ಅವರಿಗೆ ನಮ್ಮ ಪುಸಲಾವಣೆ ಅವಶ್ಯವಿಲ್ಲ. ಯಾರು ಪ್ರಸಿದ್ಧರೋ ಅವರು ಸರಕಾರಕ್ಕೆ ಹೆದರಿ ಕೊಂಡುಕೊಳ್ಳುತ್ತಾರೆ. ನಮ್ಮ ಪ್ರಯತ್ನ ಅಲ್ಲಿ ಬೇಕಿಲ್ಲ. ಇನ್ನು ಪಾಪ ಬಡಪಾಯಿಗಳ ಮನೆಗೆ ಹೋಗಿ ಅವರನ್ನು ನಾವು ಏಕೆ ಹಿಂಸೆಪಡಿಸಬೇಕು?” -ಎನ್ನುತ್ತಿದ್ದೆ ನಾನು.

ವೆಂಕಟನಾರಣಪ್ಪನವರು “ನಿಮ್ಮ ಅಭಿಪ್ರಾಯವೇ ಹೀಗಿದ್ದರೆ ನೀವು ಸಮಿತಿಯಲ್ಲಿರಲು ಯಾಕೆ ಒಪ್ಪಿಕೊಂಡಿರಿ? ಒಪ್ಪಿಕೊಂಡ ಮೇಲೆ ಅದರಂತೆ ನಡೆಯಬೇಕು” ಎಂದು ನನ್ನ ಕೊರಳು ಅದುಮುತ್ತಿದ್ದರು. ಈ ಹಿಂಗಟ್ಟು ಮುರಿಗಟ್ಟನ್ನು ನಾನು ತಡೆಯಲಾರದೆ ಒಂದು ಮಧ್ಯಾಹ್ನ ಅವರ ಜೊತೆಯಲ್ಲಿ ಯಾತ್ರೆ ಹೊರಟೆ. ಒಂದೆರಡು ಮನೆತಿರುಗಿ

ವೆಂಕಟನಾರಣಪ್ಪನವರ ಉತ್ಸಾಹವೂ ಕುಗ್ಗಿದಾಗ, ನಾವು ಶ್ರೀ ಕೆ.ಎಲ್.ದತ್ತ, ಸಿ.ಎಸ್.ಐ.ರವರ ಮನೆಗೆ ಹೋದೆವು. ಕೃಷ್ಣರಾವ್ ಪಾರ್ಕಿನ ಆಗ್ನೇಯದ ಕಡೆಯ ಮನೆಯೊಂದರಲ್ಲಿದ್ದರು ಅವರು. ದತ್ತರವರು ಬಂಗಾಳಿ ದೊಡ್ಡ ಮನುಷ್ಯರು. ಇಂಡಿಯ ಸರಕಾರದ ಹಣಕಾಸಿನ ಇಲಾಖೆಯಲ್ಲಿ ಮೇಲು ಹುದ್ದೆಗೆ ಏರಿದ್ದವರು. ಮೈಸೂರು ಸರಕಾರದ ಹಣಕಾಸಿನ ಪರಿಸ್ಥಿತಿಯನ್ನು ಪರಿಶೀಲಿಸಿ ವ್ಯಯಮಿತಿಗೂ ಆದಾಯಾಭಿವೃದ್ಧಿಗೂ ಸಲಹೆ ಕೊಡಲಿಕ್ಕಾಗಿ ವಿಶ್ವೇಶ್ವರಯ್ಯನವರ ಕೋರಿಕೆಯಂತೆ ಅವರು ಬೆಂಗಳೂರಿಗೆ ಬಂದು ಕೆಲವು ಕಾಲ ನೆಲೆಸಿದ್ದರು. ಅವರು ಸರ್ ಎಂ.ಎನ್. ಕೃಷ್ಣರಾಯರ ಜೊತೆಯಲ್ಲಿ ಸಹಕರಿಸಿ ಕೆಲಸ ಮಾಡುತ್ತಿದ್ದರು.

ನಾವು ಅವರಲ್ಲಿಗೆ ಹೋದಾಗ ದತ್ತರವರು ನಮ್ಮನ್ನು ನಗುಮುಖದಿಂದ ಬರಮಾಡಿಕೊಂಡರು. ವೆಂಕಟನಾರಣಪ್ಪನವರ ಮನಸ್ಸಿನಲ್ಲಿ ಆಸೆ ಪುನಃ ಅಂಕುರಿಸಿತು. ಇಲ್ಲಿ ಭಾರಿ ವ್ಯಾಪಾರವಾದೀತೆಂದು ಅವರಲ್ಲಿ ಆಸೆ ಹುಟ್ಟಿತು.

ದತ್ತರವರು ನಮ್ಮ ಉದ್ದೇಶವನ್ನು ನಾವು ವಿವರಿಸಿದ ಕೂಡಲೆ ಗಟ್ಟಿಯಾಗಿ ನಕ್ಕು- “ನೀವು ಯಾಕೆ ಹೀಗೆ ಪ್ರಯಾಸಪಡುತ್ತೀರಿ? ಯುದ್ಧ ಹೇಗಾದರೂ ನಡೆಯುತ್ತದೆ. ನಿಮ್ಮ ಪುಡಿಕಾಸು ಇಲ್ಲದಿದ್ದರೆ ಬ್ರಿಟಿಷ್ ಸರಕಾರವು ಯುದ್ಧವನ್ನು ನಿಲ್ಲಿಸುವುದಿಲ್ಲ. ಇಲ್ಲಿ ನಿಮ್ಮ ಊರಲ್ಲಿ ನಮ್ಮ ದೊಡ್ಡ ಮನುಷ್ಯರೊಬ್ಬರು (“A great Indian”) ನಮ್ಮ ದೇಶಕ್ಕೆ ಏನಾದರೂ ಅನುಕೂಲ ಮಾಡಬೇಕೆಂದು ಒದ್ದಾಡುತ್ತಿದ್ದಾರೆ. ನಿಮ್ಮ ಜನರಲ್ಲಿರುವ ಪುಡಿಕಾಸನ್ನು ಮೈಸೂರು ಸರಕಾರದ ಖಜಾನೆಯಲ್ಲಿರಿಸಿರಿ; ಅದು ಮೈಸೂರಿನ ಉಪಯೋಗಕ್ಕೆ ಬರುತ್ತದೆ. ವಿಶ್ವೇಶ್ವರಯ್ಯನವರ ಮಹಾಪ್ರಯತ್ನಗಳನ್ನು ನೋಡಿದರೆ ಅವರಿಗೆ ಸಹಾಯ ಮಾಡಬೇಕೆಂದು ನಿಮಗನಿಸುವುದಿಲ್ಲವೆ?”

ವೆಂಕಟನಾರಣಪ್ಪನವರಿಗೆ ಈ ವಾದ ಕೇಳಿ ಏನು ಹೇಳುವುದಕ್ಕೂ ತೋರದೆ ಹೋಯಿತು. ವಾದವಾದರೋ ನ್ಯಾಯವಾಗಿದೆ. ಹೇಳುವವರಾದರೋ ಬ್ರಿಟಿಷ್ ವಿರೋಧಿ ಅಲ್ಲವೇ ಅಲ್ಲ. ವೆಂಕಟನಾರಣಪ್ಪನವರಿಗೆ ಸಮಾಧಾವವೇ ಆಯಿತು. ಅವರು ತಮ್ಮ ಮೆಚ್ಚಿಕೆಯನ್ನು ದತ್ತರವರಿಗೆ ಹೇಳಿ, ಬಂದಂತೆ ಹಿಂದಿರುಗಿದರು. ಮುಖದಲ್ಲಿ ಕಹಿಯಿರಲಿಲ್ಲ.

ಎಂಪೈರ್ ಡೇ

ಬ್ರಿಟಿಷರ ಕಾಲದಲ್ಲಿ “ಎಂಪೈರ್ ಡೇ” (Empire Day) ಎಂಬ ಒಂದು ವಾರ್ಷಿಕೋತ್ಸವ ನಡೆಯುತ್ತಿತ್ತು. ಸೆಂಟ್ರಲ್ ಕಾಲೇಜಿನಲ್ಲಿ ಆ ಬಗ್ಗೆ ವೆಂಕಟನಾರಣಪ್ಪನವರನ್ನು ಕಾರ್ಯಕರ್ತರನ್ನಾಗಿ ನಿಯಮಿಸಿದರು. ವಿದ್ಯಾರ್ಥಿಗಳನ್ನು ಆಕರ್ಷಿಸುವುದಕ್ಕಾಗಿ ತಿಂಡಿ ಹಂಚಲು ಸರಕಾರವು ಹಣವನ್ನೂ ಮಂಜೂರು ಮಾಡಿತು. ಆದರೆ ಜನ ಬರಬೇಕಲ್ಲ? ವೆಂಕಟನಾರಪ್ಪನವರು ರಸಬಾಳೆ ಹಣ್ಣು, ಒಳ್ಳೆ ಕಿತ್ತಿಳೆ ಹಣ್ಣು, ದ್ರಾಕ್ಷಿ ಮೊದಲಾದ ಮುಸುರೆಯಿಲ್ಲದ ಫಲಾಹಾರಗಳನ್ನು ಒದಗಿಸಿಟ್ಟಿರುತ್ತಿದ್ದರು. ಯಾರೋ ಹತ್ತಿಪ್ಪತ್ತು ಮಂದಿ ಬಂದು ಅದನ್ನು ಸೇವಿಸಿ ಸಭೆಗೆ ನಿಲ್ಲದೆ ಹೊರಟು ಹೋಗುತ್ತಿದ್ದರು. ವೆಂಕಟನಾರಣಪ್ಪನವರು “ಏನಪ್ಪಾ, ಹೀಗೆ ಮಾಡುತ್ತಾರಲ್ಲಾ?” ಎಂದು ಪೇಚಾಡುತ್ತಿದ್ದರು. “ಸಾರ್, ಬ್ರಿಟಿಷ್ ಚಕ್ರಾಧಿಪತ್ಯಕ್ಕೋಸ್ಕರ ಯಾರು ಅಳುತ್ತಾರೆ? ಜನ ಸ್ವರಾಜ್ಯ ಬೇಕೆಂದು ಹೋರಾಡುತ್ತಿರುವಾಗ ನೀವು ಎಂಪೈರ್ ಡೇಯನ್ನು ಯಾಕೆ ಕಟ್ಟಿ ಕೊಂಡಿರಿ?” ಎಂದು ಕೇಳಿದರೆ “ಜನಕ್ಕೆ ಬ್ರಿಟಿಷರು ಬೇಡವಾದರೆ ನಾವು ಈ ಸರಕಾರವನ್ನು ಓಡಿಸುತ್ತೇವೆಂದು ಸ್ಪಷ್ಟವಾಗಿ ಹೇಳಬೇಕಲ್ಲ? ಹಾಗೆ ಸ್ಪಷ್ಟವಾಗಿ ಹೇಳದೆ ಎಂಪೈರ್ ಡೇ ಹೆಸರು ಹೇಳಿ ರಜ ತೆಗೆದುಕೊಳ್ಳುವುದು ಯಾವ ನ್ಯಾಯ? ಸರಕಾರದ ಹಣ ಖರ್ಚು ಮಾಡಿಸುವುದು ಯಾವ ನ್ಯಾಯ? ಇದೆಲ್ಲ ಶುದ್ಧ ಹಂಬಗ್ (Humbug)" ಎನ್ನುತ್ತಿದ್ದರು. ಆಗ ನಾವು ನಕ್ಕರೆ ಅವರೂ ನಮ್ಮೊಡನೆ ಸೇರಿ ನಗುತ್ತಿದ್ದರು.

ಒಂದು ಪಿತೂರಿ

ವೆಂಕಟನಾರಣಪ್ಪನವರು ಸೆಂಟ್ರಲ್ ಕಾಲೇಜಿನಲ್ಲಿ ಭೌತಶಾಸ್ತ್ರಬೋಧಕರಾಗಿದ್ದ ಕಾಲದಲ್ಲಿ ಒಂದು ಪಿತೂರಿ ನಡೆಯುತ್ತಿತ್ತು. ಅವರಿಗೆ ಸಲ್ಲಬೇಕಾಗಿದ್ದ ಬಡ್ತಿಯನ್ನು (Promotion) ತಪ್ಪಿಸಿ ತಾವು ಅದನ್ನು ಲಪಟಾಯಿಸಿಕೊಳ್ಳಬೇಕೆಂದು ಸಂಚುಮಾಡುತ್ತಿದ್ದ ಒಬ್ಬ ಸಹಾಧ್ಯಾಪಕರು ಒಂದು ಹುನ್ನರು ಮಾಡಿಕೊಂಡಿದ್ದರಂತೆ. ವೆಂಕಟನಾರಣಪ್ಪನವರು ಕ್ಲಾಸು ತೆಗೆದುಕೊಂಡು ಪಾಠ ನಡೆಸುತ್ತಿದ್ದ ವೇಳೆಯಲ್ಲಿ ಆ ಕೋಣೆಯ ಕಿಟಕಿಯ ಬಳಿ ವರಾಂಡದಲ್ಲಿ ನಿಂತು ಕೇಳುತ್ತಿರುವುದು; ತಪ್ಪು ಸಿಕ್ಕೀತೇ ಎಂದು ಹೊಂಚಿ ನೋಡುತ್ತಿರುವುದು; ಯಾವುದಾದರೊಂದು ಮಾತು ಹೆಚ್ಚು ಕಡಮೆಯಾಯಿತೆಂದು ಪ್ರಿನ್ಸಿಪಲ್ ಕುಕ್ ಸಾಹೇಬರಿಗೆ ಚಾಡಿ ಹೇಳುವುದು. ಆಗ ವೆಂಕಟನಾರಣಪ್ಪನವರ ಹೆಸರು ಕೆಟ್ಟು ಅವರ ಬಡ್ತಿಯ ಸರದಿ ತಪ್ಪಿಹೋಗುತ್ತದೆ, ಇದು ಹುನ್ನರು. ಅದರಂತೆ ಕೆಲವು ದಿನ ನಡೆಯಿತು. ಇಂಥದನ್ನು ಎಲ್ಲರಿಂದಲೂ ಬಚ್ಚಿಡಲಾಗುತ್ತದೆಯೆ? ವರಾಂಡದಲ್ಲಿ ದಿನ ದಿನವೂ ನೂರಾರು ಮಂದಿ ಓಡಾಡುತ್ತಾರಲ್ಲವೆ? ಅವರಲ್ಲಿ ಒಬ್ಬರು ಆ ಆಸಾಮಿ ವರಾಂಡದಲ್ಲಿ ಹೊಂಚಿಕೇಳುತ್ತಿದ್ದದ್ದನ್ನು ಕಂಡು ಗುಮಾನಿಪಟ್ಟರು; ತಮ್ಮ ಗುಮಾನಿಯನ್ನು ಪ್ರಿನ್ಸಿಪಲ್ ಕುಕ್‌ರವರಿಗೆ ತಿಳಿಸಿದರು. ಕುಕ್‌ಸಾಹೇಬರು ಒಂದು ದಿನ ತಾವೇ ಹಠಾತ್ತಾಗಿ (Surprise Visit) ಪಾಠಕಾಲಕ್ಕೆ ಅಲ್ಲಿಗೆ ಬಂದು, ಹೊಂಚಿ ಕೇಳುತ್ತಿದ್ದಾತನನ್ನು ಎದುರಿಸಿ "ನೀವು ಕ್ಲಾಸಿನೊಳಕ್ಕೆ ಹೋಗಿ ಕುಳಿತು ಕೇಳಬಹುದುದಲ್ಲ-ನಿಮಗೆ ಅಷ್ಟು ಕುತೂಹಲವಾಗಿದ್ದರೆ?" ಎಂದರು. ಅಲ್ಲಿಗೆ ಆ ಪಿತೂರಿ ಮುಗಿಯಿತು.

ಅಧ್ಯವಸಾಯ

ವೆಂಕಟನಾರಣಪ್ಪನವರು ಕಾಲೇಜಿನಲ್ಲಿ ಬೋಧಕರಾಗಿದ್ದಾಗ, ಸೀನಿಯರ್ ಪ್ರೊಫೆಸರಾಗಿದ್ದ ಮೇಲೆ ಕೂಡ ಅಂದಂದಿನ ಪಾಠವನ್ನು ಆಯಾ ದಿನ ಬೆಳಿಗ್ಗೆ ತಾವೇ ಸ್ವಂತವಾಗಿ ಚಿಂತನೆ ಮಾಡಿಕೊಳ್ಳುತ್ತಿದ್ದರು. ಒಂದು ದಿನ ಬೆಳಗ್ಗೆ ಸುಮಾರು ಏಳು ಘಂಟೆಯ ವೇಳೆಗೆ ಒಬ್ಬ ಸ್ನೇಹಿತರೂ ನಾನೂ ವಾಕಿಂಗ್ ಹೋಗುತ್ತಿದ್ದವರು ನರಹರಿರಾಯರ ಗುಡ್ಡದ ಮೇಲೆ ಹೋದೆವು. ಅಲ್ಲಿ ವೆಂಕಟನಾರಣಪ್ಪನವರು ಗುಡಿಯ ಮೊಗಸಾಲೆಯಲ್ಲಿ ಒಂದು ಗೋಣಿಚೀಲವನ್ನು ಹಾಸಿ ಅದರ ಮೇಲೆ ಕುಳಿತು ಪುಸ್ತಕವನ್ನೂ ಕಾಗದವನ್ನೂ ಇಟ್ಟುಕೊಂಡು ಒಂದು ಹಾಳೆಯ ಮೇಲೆ ಪೆನ್ಸಿಲಿನಿಂದ ಲೆಕ್ಕ ಮಾಡುತ್ತಿದ್ದರು.

ನಾನು: "ಇದೇನು ಸಾರ್?"

ವೆಂ: "ಈಹೊತ್ತಿನ ಪಾಠದ ಲೆಕ್ಕವಪ್ಪ."

ನಾನು: "ಏನು ಸಾರ್? ನೀವೂ ಮನೆಯಲ್ಲಿ ಲೆಕ್ಕ ಮಾಡಬೇಕೆ? ನೀವು ಗಣಿತ ಶಾಸ್ತ್ರದಲ್ಲಿ ಮಹಾ ಪಂಡಿತರು."

ವೆಂ: "ನಮ್ಮ ಪಾಂಡಿತ್ಯವೆಲ್ಲ ಪರೀಕ್ಷೆಗೆ ಬರುತ್ತದೆ. ನನ್ನ ಕ್ಲಾಸಿನಲ್ಲಿ ಮಹಾ ಬುದ್ಧಿವಂತರಿದ್ದಾರೆ. ಅವರು ನಮ್ಮ ತಪ್ಪುಗಳನ್ನು ಕಂಡುಕೊಳ್ಳಬಲ್ಲವರು; ಸೂಕ್ಷ್ಮವಾದ ಪ್ರಶ್ನೆಗಳನ್ನು ಕೇಳಬಲ್ಲವರು. ಅವರೆದುರಿಗೆ ನಿಲ್ಲುವಾಗ ನಾವು ತಯಾರಿಲ್ಲವೆಂದು ಅವರಿಗೆ ತಿಳಿದರೆ ನಮ್ಮ ದೃಷ್ಟಿಯಲ್ಲಿ ನಾವೇ ಸಣ್ಣವರಾಗಬೇಕಾಗುತ್ತದೆ. ಪ್ರತಿದಿನವೂ ತಪ್ಪದೆ ಶಾಸ್ತ್ರಾಧ್ಯಯನ ಮಾಡಬೇಕಾದದ್ದು ಉಪಾಧ್ಯಾಯನ ಕರ್ತವ್ಯ. ಅದು ಅವನ ಪ್ರಥಮ ಕರ್ತವ್ಯ. ನಾವು ಪಾಠವಿಷಯವನ್ನು ಮುನ್ನಾಲೋಚನೆಯಿಂದ ವ್ಯಾಸಂಗಮಾಡಿಕೊಳ್ಳದೆ ಕ್ಲಾಸಿಗೆ ಹೋದರೆ ಕರ್ತವ್ಯಭ್ರಷ್ಟರಾಗುತ್ತೇವೆ."

ಇಂಥ ಸಂಗತಿ ಇನ್ನೊಂದು ನೆನಪಿಗೆ ಬರುತ್ತದೆ.

ಡಿ. ವೆಂಕಟರಾಮಯ್ಯನವರು

ನಮ್ಮ ದೇಶದ ಪ್ರಸಿದ್ಧ ಬೋಧಕರಲ್ಲಿ ಡಿ. ವೆಂಕಟರಾಮಯ್ಯನವರು [2] ಒಬ್ಬರು. ಇವರು ಬಿ.ಎ.ಪರೀಕ್ಷೆಗೆ ಕುಳಿತಾಗ ಬರೆದಿದ್ದ ಉತ್ತರಪತ್ರಿಕೆಗಳನ್ನು ನೋಡಿ ಭಾಭಾಸಾಹೇಬರು ಪರೀಕ್ಷೆಯ ಫಲಿತಾಂಶ ಪ್ರಕಟವಾಗುವುದಕ್ಕೆ ಮುಂಚೆಯೇ ವೆಂಕಟರಾಮಯ್ಯನವರನ್ನು ಬೋಧಕರನ್ನಾಗಿ ನಿಯಮಿಸಿಕೊಂಡರು. ಇಂಥ ಒಳ್ಳೆಯ ವಿದ್ಯಾರ್ಥಿ ಕೈತಪ್ಪಿ ಹೋಗಬಾರದೆಂದು ಭಾಭಾ ಸಾಹೇಬರ ಆತುರ. ವೆಂಕಟರಾಮಯ್ಯನವರಿಗೆ ಚಾಕರಿ ಬೇಕಾಗಿತ್ತು. ಅವರನ್ನು ಮಹಾರಾಣಿ ಪಾಠಶಾಲೆಯಲ್ಲಿ ಇಂಗ್ಲಿಷ್ ಸಾಹಿತ್ಯ ಬೋಧಕರಾಗಿ ನಿಯಮಿಸಲಾಯಿತು. ಅವರು ಒಂದು ತಿಂಗಳು ಕೆಲಸ ಮಾಡಿ ಮಾರನೆಯ ತಿಂಗಳು ಮೊದಲನೆಯ ತಾರೀಖು ಮನೆಗೆ ಬಂದಾಗ ಅವರ ತಂದೆಯವರು ತಿಂಗಳ ಸಂಬಳ ಮಗನು ಕೈಗೆ ತಂದುಕೊಟ್ಟಾನೆಂದು ನಿರೀಕ್ಷಿಸಿಕೊಂಡಿದ್ದರು. ಆದರೆ ಮಗ ಕೊಟ್ಟ ವಿವರಣೆ ಹೀಗೆ: “ಸಂಬಳ ಕೈಗೆ ಬಂದಿತು-ಐವತ್ತು ರೂಪಾಯಿ. ಆದರೆ ನನ್ನ ಬೋಧನ ಕಾರ್ಯದ ಸಿದ್ಧತೆಗಾಗಿ ನಾನು ಒಂದು ಇಂಗ್ಲಿಷ್ ನಿಘಂಟುವನ್ನು ಕೊಂಡುಕೊಳ್ಳಬೇಕಾಯಿತು. ಅದರ ಬೆಲೆ ಅರುವತ್ತು ರೂಪಾಯಿ. ಮುಂದಿನ ತಿಂಗಳ ಸಂಬಳದಿಂದ ಇನ್ನು ಹತ್ತು ರೂಪಾಯಿ ಕೊಟ್ಟರೆ ಆ ಸಾಲ ತೀರುತ್ತದೆ.”

ತಂದೆ: “ನಾವು ಬಡವರಲ್ಲವೇನಪ್ಪ! ನಿನ್ನನ್ನೇ ನಂಬಿಕೊಂಡಿದ್ದೇವೆ. ಇಷ್ಟು ದಿನ ಓದಿದ್ದು ಸಾಲದೆ ಇನ್ನೂ ಪುಸ್ತಕಕ್ಕೆ ಹಣ ಹಾಕಬೇಕೆ?”

ವೆಂ: “ಕಾಲೇಜಿನಲ್ಲಿ ನನ್ನ ಪಾಠ ಸಾರ್ಥಕವಾಗಬೇಕಾದರೆ ನಾನು ಅದಕ್ಕೆ ಮೊದಲು ಸಿದ್ಧತೆ ಮಾಡಿಕೊಳ್ಳಬೇಕು. ಕಾಲೇಜಿನಲ್ಲಿ ನಾನು ಹೇಳಬೇಕಾಗಿರುವ ಗ್ರಂಥ ಮಹಾಕವಿಯಾದ ಷೇಕ್‌ಸ್ಪಿಯರಿನ ‘ಮರ್ಚೆಂಟ್ ಆಫ್ ವೆನಿಸ್’ ನಾಟಕ. ಷೇಕ್‌ಸ್ಪಿಯರನ್ನು ನಾನು ಚೆನ್ನಾಗಿ ಅಧ್ಯಯನ ಮಾಡದಿದ್ದರೆ ನನ್ನ ಬೋಧನೆ ತೃಪ್ತಿಕರವಾಗಲಾರದು. ಆ ಮಹಾಕವಿಯ ಕಾವ್ಯಗಳನ್ನು ವಿವರಿಸಲು ಷ್ಮಿಟ್ (Schmidt) ಎಂಬಾತನು ಒಂದು ಭಾರಿ ನಿಘಂಟುವನ್ನು ಬರೆದಿದ್ದಾನೆ. ಆ ನಿಘಂಟುವಿನ ಸಹಾಯವಿಲ್ಲದೆ ನನ್ನ ವ್ಯಾಸಂಗ ನಡೆಯಲಾರದು. ನಾನು ಚೆನ್ನಾಗಿ ವ್ಯಾಸಂಗ ಮಾಡಿದ್ದಲ್ಲದೆ ನನ್ನ ಬೋಧನೆ ಸಾರ್ಥಕವಾಗಲಾರದು. ಆದದ್ದರಿಂದ ಆ ಗ್ರಂಥ ನನಗೆ ಅವಶ್ಯ. ಅದರ ಉಪಯೋಗದಿಂದಲೇ ಈ ಚಾಕರಿ ನನಗೆ ದಕ್ಕತಕ್ಕದ್ದು.”

ಈ ವಿವರಣೆಯನ್ನು ಕೇಳಿ ವೆಂಕಟರಾಮಯ್ಯನವರ ತಂದೆಯವರು ತೃಪ್ತರಾಗಿ ಮಗನ ವಿಷಯದಲ್ಲಿ ಹೆಮ್ಮೆಪಟ್ಟರು. ಆ ಹೆಮ್ಮೆ ಬಡತನವನ್ನು ಮರೆಯಸಿರಬೇಕು.

ವಿಜ್ಞಾನಬೋಧೆ


ವೆಂಕಟನಾರಣಪ್ಪನವರು ವಿಜ್ಞಾನ ವಿದ್ಯಾಭ್ಯಾಸ ವಿಷಯದಲ್ಲಿ ಅತಿಶಯವಾದ ಉತ್ಸಾಹವನ್ನಿಟ್ಟುಕೊಂಡಿದ್ದರು. ಈ ಉದ್ದೇಶದಿಂದ ಅವರು ಒಂದು ಸಾರಿ ಕೆಲವು ಸಾಮಾನ್ಯ ಪಾಠಶಾಲೆಗಳಿಗೆ ತಾವು ಖುದ್ದು ಹೋಗಿ ಅಲ್ಲಿಯ ವಿದ್ಯಾರ್ಥಿಗಳಿಗೆ ವೈಜ್ಞಾನಿಕ ಪ್ರವೃತ್ತಿ ಎಷ್ಟು ಮಾತ್ರ ಇರಬಹುದೆಂಬುದನ್ನು ಪರೀಕ್ಷಿಸಬೇಕೆಂದು ಪ್ರಯತ್ನ ಪಟ್ಟರು.

ವಿಜ್ಞಾನದಲ್ಲಿ ಮುಖ್ಯಭಾಗ (Facts) ಸಂಗತಿಗಳದಲ್ಲ; ಬುದ್ಧಿಯ ಸಹಜವಾದ ಒಲವಿನದು ಕಾರ್ಯಕಾರಣ ಸಂಬಂಧವನ್ನು ತರ್ಕ ಮಾಡತಕ್ಕದ್ದು ವಿಜ್ಞಾನದ ಕೆಲಸ. ಇದು ಏಕೆ? ಅದು ಹೇಗೆ? ಇದು ಏನು? ಅದಕ್ಕೂ ಇದಕ್ಕೂ ಸಂಬಂಧವೇನು?-ಹೀಗೆ ತರ್ಕಮಾಡಬೇಕು.

ವೆಂಕಟನಾರಣಪ್ಪನವರು ಒಂದಾನೊಂದು ಸ್ಕೂಲಿಗೆ ಹೋಗಿ ಒಂದು ಕ್ಲಾಸಿನಲ್ಲಿ ಬ್ಲ್ಯಾಕ್‌ಬೋರ್ಡಿನ ಮುಂದೆ ನಿಂತು ಸೀಮೆಸುಣ್ಣವನ್ನು ತೆಗೆದುಕೊಂಡು ನಾಲ್ಕು ಗೀಟು ಹಾಕಿದರು. ಹೀಗೆ:



ಅನಂತರ ಅದರ ಮೇಲುಗಡೆ ಎರಡು ಉದ್ದ ಗೀಟುಗಳನ್ನು ಹಾಕಿದರು: ಪಕ್ಕಪಕ್ಕದಲ್ಲಿ ಮತ್ತೆರಡು ಗೀಟುಗಳನ್ನು ಹಾಕಿದರು. ಆಗ ತೋರಿದ ರೂಪ:



“ಇದು ಏನು” ?-ಎಂದು ಹುಡುಗರನ್ನು ಕೇಳಿದರು. ಉತ್ತರ ಬರಲಿಲ್ಲ.

“ನೀವು ಇಂಥಾದ್ದನ್ನು ನೋಡಿಲ್ಲವೆ?” ಉತ್ತರವಿಲ್ಲ.

“ನಿಮ್ಮ ಮನೆಯಲ್ಲಿ ಅಡಿಗೆ ಮನೆಯಲ್ಲಿಯೋ, ಸ್ನಾನದ ಮನೆಯಲ್ಲಿಯೋ ದೀಪ ಅಂಟಿಸುವುದು ಹೇಗೆ?” -ಎಂದು ಕೇಳಿದರು.

ಆಗ ಒಬ್ಬ ಹುಡುಗ “ಹೌದು ಸಾರ್. ಇಂಥಾದ್ದರಲ್ಲಿಯೇ ದೀಪ ಬರುವುದು” -ಎಂದ.

“ಅದರ ಹೆಸರೇನು?” -ಎಂದರು.ಉತ್ತರವಿಲ್ಲ. “ಇದನ್ನು ‘ಬುಡ್ಡಿ’ ಎಂದು ಹೇಳುವುದಿಲ್ಲವೇನಯ್ಯಾ?”

ಎಲ್ಲಾ ಹುಡುಗರೂ “ಹೌದು ಸಾರ್. ಇದು ಬುಡ್ಡಿ” -ಎಂದರು.

ವೆಂಕಟನಾರಣಪ್ಪನವರು ಉಪಾಧ್ಯಾಯರ ಕಡೆ ತಿರುಗಿ ಹೇಳಿದರು:

“ಇದಪ್ಪಾ ಮುಖ್ಯವಾದದ್ದು ವಿಜ್ಞಾನದಲ್ಲಿ. ಪದಾರ್ಥಗಳ ಸಾದೃಶ್ಯವನ್ನು ನೋಡಿ ಊಹೆ ಮಾಡಬೇಕು. ಈ ಶಕ್ತಿ ಬೆಳೆಯದೆ ಹೋದರೆ ವಿಜ್ಞಾನ ಬೆಳೆಯುವುದಿಲ್ಲ. ನಾನಾ ಪದಾರ್ಥಗಳಿಗೆ ಇರುವ ಸಾದೃಶ್ಯ, ಅಸಾದೃಶ್ಯಗಳನ್ನು ಮೊದಲು ಗಮನಿಸಿ ಆಮೇಲೆ ಕಾರ್ಯಕಾರಣವಿಚಾರಮಾಡಬೇಕು.”

ಇಂಥ ಅನುಭವಗಳಿಂದ ವೆಂಕಟನಾರಣಪ್ಪನವರಿಗೆ ವಿಜ್ಞಾನ ಪ್ರಚಾರದ ಆವಶ್ಯಕತೆ ಮಂದಟ್ಟಾಯಿತು.

ಮಡಿ

ವೆಂಕಟನಾರಣಪ್ಪನವರು ಸೆಂಟ್ರಲ್ ಕಾಲೇಜಿನಲ್ಲಿ ಭೌತ ವಿಜ್ಞಾನದ (ಫಿಸಿಕ್ಸ್) ಪ್ರೊಫೆಸರಾಗಿದ್ದರಷ್ಟೆ? ಅವರು ದೇಹಸ್ವರೂಪ ವಿಜ್ಞಾನ (ಫಿಸಿಯಾಲೊಜಿ)ವನ್ನೂ (ಅಂದಿನ ಕ್ರಮವಿದ್ದಂತೆ) ಕಲಿಸಬೇಕಾಗಿತ್ತು.

ದೇಹದ ಅಂಗಾಂಗರಚನೆಯನ್ನು ಪ್ರತ್ಯಕ್ಷಗೊಳಿಸಲಿಕ್ಕಾಗಿ ಪಿಂಗಾಣಿಯ ದೇಹಾಕಾರಗಳನ್ನು ಇರಿಸಿರುತ್ತಾರಷ್ಟೆ? ವೆಂಕಟನಾರಣಪ್ಪನವರು ಪಾಠ ಹೇಳುವಾಗ ಒಂದು ಸಣ್ಣ ಕೋಲನ್ನೋ ಅಥವಾ ಪೆನ್ಸಿಲ್ ಕಡ್ಡಿಯನ್ನೋ ಕೈಯಲ್ಲಿ ಹಿಡಿದು, ಅದು ಆ ವಸ್ತುವನ್ನು ಸೋಕದಂತೆ ಒಂದೆರಡು ಅಂಗುಲ ದೂರದಿಂದ ಉದ್ದಿಷ್ಟಾವಯವವನ್ನು ತೋರಿಸಿಕೊಡುತ್ತಿದ್ದರು. "ಇದು ಜಠರ, ಇದು ಕರುಳು, ಇದು ಪಿತ್ಥಕೋಶ, ಇದು ಶ್ವಾಸಕೋಶ" -ಈ ರೀತಿಯಾಗಿ. ಕಡ್ಡಿಯನ್ನು ವಸ್ತುವಿಗೆ ಸೋಕಿಸದೆ ಇದ್ದದ್ದಕ್ಕೆ ವಿದ್ಯಾರ್ಥಿಗಳಲ್ಲಿ ಎರಡು ಬಗೆಯ ವಿವರಣೆಗಳು ಹೊರಟಿದ್ದವು: (೧)ಅದು ಶವ ಪ್ರಾಯವಾದದ್ದು. ಮೈಲಿಗೆ. (೨)ಅದು ಮಣ್ಣಿನದು. ಮುಟ್ಟಿದರೆ ಮುರಿದು ಹೋದೀತು. ಮೊದಲನೆಯ ಕಾರಣದಿಂದ ಹೆಚ್ಚು ನಗು, ಮಡಿವಂತಿಕೆ ಅಷ್ಟು ದೂರ ಹೋಗುತ್ತಿತ್ತೆಂದು.

ಆದರೆ ಅದರಿಂದ ಪಾಠಪಟುತ್ವಕ್ಕೆ ಎಷ್ಟು ಮಾತ್ರವೂ ಕುಂದಾಗಲಿಲ್ಲ. ವೆಂಕಟನಾರಣಪ್ಪನವರ ಶಿಷ್ಯರಾಗಿದ್ದು ವೈದ್ಯದ ಇಲಾಖೆಯಲ್ಲಿ ಸೀನಿಯರ್ ಸರ್ಜನ್ ಹುದ್ದೆಗೆ ಏರಿದ ಡಾ ॥ ಎಸ್. ಸುಬ್ಬರಾವ್, ಡಾ ॥ ಬಿ.ಕೆ. ನಾರಾಯಣರಾವ್ ಮೊದಲಾದ ಅನೇಕರು ತಮ್ಮ ಪ್ರೊಫೆಸರು ದೇಹಸ್ವರೂಪ ವಿಜ್ಞಾನವನ್ನು ಬೋಧಿಸುತ್ತಿದ್ದ ಕ್ರಮ ಚೆನ್ನಾಗಿತ್ತೆಂದು ಮೆಚ್ಚಿಕೊಳ್ಳುತ್ತಿದ್ದರು, ಮಡಿಗೆ ಮಡಿ; ದಕ್ಷತೆಗೆ ದಕ್ಷತೆ.

ವೆಂಕಟನಾರಣಪ್ಪನವರು ಮೈಸೂರು ವಿಶ್ವವಿದ್ಯಾನಿಲಯಕ್ಕಾಗಿ ಬರೆದು ಕೊಟ್ಟ ಜೀವ ವಿಜ್ಞಾನ ಗ್ರಂಥವು ಎಲ್ಲ ದೃಷ್ಟಿಗಳಿಂದಲೂ ಪ್ರಮಾಣಭೂತವಾದದ್ದೆಂದು ಅಂಗೀಕಾರ ಪಡೆದಿದೆ: ವಿಷಯವಿಸ್ತರಣೆಯಲ್ಲಿ, ನಿರೂಪಣ ವಿಧಾನದಲ್ಲಿ, ಭಾಷಾಶೈಲಿಯಲ್ಲಿ ಶಬ್ದಗಳ ಔಚಿತ್ಯದಲ್ಲಿ-ಹೇಗೆ ನೋಡಿದರೂ ಪ್ರಶಂಸಾರ್ಹವಾದ ಗ್ರಂಥ ಅದು.

ಅಚಲನಿಷ್ಠೆ

ಕಾಲೇಜಿನಲ್ಲಿದ್ದಾಗ ವೆಂಕಟನಾರಣಪ್ಪನವರು ಲಘುಶಂಕೆಗಾಗಿ ಹೋಗಬೇಕಾದರೆ ಒಂದು ಸಣ್ಣ ಸೀಸೆಯಲ್ಲಿ ನೀರು ತುಂಬಿಕೊಂಡು ಹೋಗುತ್ತಿದ್ದರು. ತುಂಟ ಹುಡುಗರು ಈ ಸಮಯವನ್ನು ನೋಡಿಕೊಂಡಿದ್ದು, ಆ ವೇಳೆಗೆ ಆ ದಾರಿಯಲ್ಲಿ ಎರಡು ಸಾಲಾಗಿನಿಂತು "ಸೀಸೆ ಮೆರವಣಿಗೆ ಬಂತು, ಸೀಸೆ ಮೆರವಣಿಗೆ" -ಎನ್ನುವರು; ವೆಂಕಟನಾರಣಪ್ಪನವರಿಗೆ ಅದು ಕೇಳಿಸಲಿಲ್ಲವೆಂದೆನಿಸುವಂತೆ, ಅವರು ಆ ಸಾಲುಗಳ ನಡುವೆ ಅತ್ತಿತ್ತ ತಿರುಗಿ ನೋಡದೆ ನೇರವಾಗಿ ನಡೆದುಹೋಗಿ ಹಿಂತಿರುಗಿ ಬರುವರು. ಹೀಗೆ ನಾಲ್ಕೈದು ಸಾರಿ ಆದ ಬಳಿಕ ತುಂಟರು ತಮ್ಮ ಹಾಸ್ಯ ಅಲ್ಲಿ ಸಾಗದೆಂದು ತಿಳಿದು ಆ ಹಾಸ್ಯವನ್ನು ಬಿಟ್ಟರು.

ತಮಗೆ ಸರಿಯೆಂದು ಗೊತ್ತಾದ ವಿಷಯದಲ್ಲಿ ಹಾಗೆ ನಡೆಯಲು ವೆಂಕಟನಾರಣಪ್ಪನವರು ತಮಗೆ ಜೊತೆಯಿಲ್ಲವೆಂಬ ಕಾರಣದಿಂದ ಹೆದರಿದವರಲ್ಲ. ಯೂನಿವರ್ಸಿಟಿ ಸೆನೆಟ್ ಸಭೆಯಲ್ಲಿಯೂ ಇತರ ಸಾರ್ವಜನಿಕ ಸ್ಥಳಗಳಲ್ಲಿಯೂ ಒಂದು ಅಭಿಪ್ರಾಯವನ್ನು ಅನುಮೋದಿಸುವಾಗಲಾಗಲಿ ವಿರೋಧಿಸುವಾಗಲಾಗಲಿ ತಮ್ಮ ಸಂಗಡಿಗರು ಎಷ್ಟು ಮಂದಿ ಇದ್ದಾರೆಂಬ ವಿಚಾರದ ಕಡೆಗೆ ಅವರ ಮನಸ್ಸು ಹೋಗುತ್ತಲೇ ಇರಲಿಲ್ಲ. ಎಷ್ಟೋ ಸಾರಿ ಅನುಮೋದನೆಯಲ್ಲಿಯೂ ವಿರೋಧದಲ್ಲಿಯೂ ಅವರು ಒಬ್ಬರೇ ಒಬ್ಬರಾಗಿರುತ್ತಿದ್ದರು.

ಮೋಂಬತ್ತಿಯ (Candle) ವಿಷಯದಲ್ಲಿಯೂ ವೆಂಕಟನಾರಣಪ್ಪನವರು ನೇಮಿಷ್ಠರು. ಮಡಿಯಲ್ಲಿರುವಾಗ ಅದನ್ನು ಮುಟ್ಟರು. ಪರಸ್ಥಳ ಹೋದಾಗ ಬೇರೆ ದೀಪವಿಲ್ಲದೆ ಮೋಂಬತ್ತಿಯೊಂದೇ ಗತಿಯಾದಾಗ ವೆಂಕಣ್ಣಯ್ಯನವರೋ ಇನ್ನು ಯಾರೋ ಮೈಲಿಗೆಯಲ್ಲಿದ್ದವರು ಉರಿಯುವ ಮೋಂಬತ್ತಿಯನ್ನು ಹಿಡಿದು ಅಡಿಗೆಗೆ ಬೆಳಕು ತೋರಿಸಬೇಕು. ನಾನು ಒಂದೆರಡು ಸಾರಿ ಉರಿಯುವ ಮೋಂಬತ್ತಿಯನ್ನು ಹಿಡಿಯುವೆನೆಂದೆ. ಅವರು "ನೀವು ಬೇಡ. ನೀವು ಹರಟುತ್ತೀರಿ. ಆಗ ನೀವು ನಗುತ್ತೀರಿ. ಮೋಂಬತ್ತಿಯ ತೊಟ್ಟುಗಳು ಪಾತ್ರೆಯ ಮೇಲೆ ಬಿದ್ದು ಮೈಲಿಗೆಯಾಗುತ್ತದೆ" -ಎಂದರು.

***

ನಾವು ಜಮಖಂಡಿಗೆ ಹೋಗಿದ್ದಾಗ ಆಲಬಾಳ ವೆಂಕಟರಾಯರು ಕೃಷ್ಣಾನದಿಯ ತೀರದಲ್ಲಿದ್ದ ತಮ್ಮ ತೋಟಕ್ಕೆ ಕರೆದುಕೊಂಡು ಹೋದರು. ಆ ವರ್ಷ ವೆಂಕಟನಾರಣಪ್ಪನವರೇ ಸಮ್ಮೇಳನಾಧ್ಯಕ್ಷರು. ಆ ದಿನಕ್ಕೆ ವೆಂಕಟನಾರಣಪ್ಪನವರು

ಕ್ಷೌರಮಾಡಿಸಿಕೊಂಡು ಎಂಟು ಹತ್ತು ದಿನವಾಗಿದ್ದಿರಬಹುದು. ಗ್ರಹಚಾರವಶಾತ್ ನನ್ನ ಕಣ್ಣಿಗೆ ಅಲ್ಲಿ ಒಬ್ಬ ಹಜಾಮನು ಕಾಣಿಸಲಾಗಿ ನಾನು ಅದನ್ನು ವೆಂಕಟನಾರಣಪ್ಪನವರಿಗೆ ಶಿಫಾರಸುಮಾಡಿದೆ. ಕ್ಷೌರಕರ್ಮವೇನೋ ನಡೆಯಿತು. ನದಿಯೊಳಗೆ ಸ್ನಾನಕ್ಕಾಗಿ ಇಳಿಯುತ್ತಿದ್ದಾಗ ಅವರು ಜ್ಞಾಪಕಮಾಡಿಕೊಂಡು “ಏನಪ್ಪಾ-ಈ ಹೊತ್ತು ಅಮಾವಾಸ್ಯೆಯಲ್ಲವೆ? ನಿಮ್ಮ ಮಾತಿನಲ್ಲಿ ಎಲ್ಲ ಮರೆತುಹೋಗಿಬಿಟ್ಟೆ. ಹೀಗೆ ಮಾಡಿಸಿಬಿಟ್ಟಿರಲ್ಲ! ಏನು ವ್ರಾತ್ಯತನವಪ್ಪ...” ಎಂದು ವಿಧವಿಧವಾಗಿ ಬೈದರು.

ಒಂದು ಬಿಕ್ಕಟ್ಟು

ವೆಂಕಟನಾರಣಪ್ಪನವರ ಮನೆಯಲ್ಲಿ ಒಂದು ಮದುವೆಯ ಸಂದರ್ಭ. ಲಗ್ನದ ದಿವಸಕ್ಕೆ ಮೂರು-ನಾಲ್ಕು ದಿವಸ ಹಿಂದೆ ರಾತ್ರಿ ಸುಮಾರು ಹನ್ನೆರಡು ಘಂಟೆಯ ವೇಳೆಗೆ ವೆಂಕಟನಾರಣಪ್ಪನವರು ನನ್ನ ಮನೆಗೆ ಬಂದು ನನ್ನನ್ನು ಕೂಗಿದರು. ನಾನು, ಮದುವೆಯ ದಿನವಾಯಿತಲ್ಲ, ಈ ಅವೇಳೆಯಲ್ಲಿ ಬಂದಿದ್ದಾರಲ್ಲ, ಏನು ಕಾರಣವಿದ್ದೀತು-ಎಂದು ಕೊಂಚ ಗಾಬರಿಪಟ್ಟು ಹೊರಕ್ಕೆ ಬಂದೆ.

ನಾನು: "ಏನು ಸಾರ್ ಸಮಾಚಾರ?"

ವೆಂ: "ಒಂದು ಕಷ್ಟ ಬಂದಿದೆಯಲ್ಲಪ್ಪ? ನಿಮ್ಮ ಸಲಹೆ ಕೇಳುವುದಕ್ಕೆ ಬಂದೆ..."

ನಾನು: "ಏನು ಸಾರ್?"

ವೆಂ: "ಎಕ್‌ಸ್‌ವೈಜೆಡ್ ಇದ್ದಾನಲ್ಲ, ಆತನನ್ನು ಮದುವೆಗೆ ಕರೆಯಬೇಕೆ, ಬೇಡವೆ?

ನಾನು: "ಕರೆಯಬಹುದಲ್ಲ? ಒಳ್ಳೆಯ ಮನುಷ್ಯ."

ವೆಂ: "ಕರೆದರೆ ಬಂದುಬಿಟ್ಟರೆ?"

ನಾನು: "ಬಂದರೆ ಏನಂತೆ?"

ವೆಂ: "ಆತ ಸೀಮೆಗೆ ಹೋಗಿಬಂದಿದ್ದಾನಲ್ಲಪ್ಪ?"

ನಾನು: "ಹಾಗಾದರೆ ಬಿಟ್ಟುಬಿಡಿ."

ವೆಂ: "ಬಿಟ್ಟುಬಿಡುವುದಕ್ಕೆ ಹೇಗಾಗುತ್ತದಪ್ಪ? ಹತ್ತಿರದ ನೆಂಟ."

ನಾನು: "ಆದರೇನಂತೆ? ಬಂದರೆ ಒಂದು ಕಡೆ ಕುಳಿತಿರುತ್ತಾರೆ. ತಾಂಬೂಲ ತೆಗೆದುಕೊಂಡು ಹೊರಟುಹೋಗುತ್ತಾರೆ."

ವೆಂ: "ಹಾಗಾಗುವುದಿಲ್ಲ. ಆತ ಊಟಕ್ಕೆ ನಿಂತುಬಿಡುತ್ತಾರೆ."

ನಾನು: "ನಿಲ್ಲಲಿ ಬಿಡಿ. ಅಷ್ಟು ಮಂದಿ ಊಟ ಮಾಡುವ ಕಡೆ-"

ವೆಂ: "ಹಾಗಲ್ಲಪ್ಪ. ಅವರ ಮನೆಯ ಹೆಂಗಸರೂ ಬರುತ್ತಾರೆ. ಅಡಿಗೆಯ ಮನೆಯಲ್ಲಿ ಪದಾರ್ಥಗಳನ್ನು ಮುಟ್ಟಿ ಬಡಿಸುವುದಕ್ಕೆ ಹೊರಡುತ್ತಾರೆ. ಬೇಡವೆನ್ನುವ ಹಾಗಿಲ್ಲ. ಆಗಲಿ ಎಂದು ಸಹಿಸುವ ಹಾಗಿಲ್ಲ. ಎಲ್ಲರಿಗೂ ಮೈಲಿಗೆ-ಏಕವಾಗಿಹೋಗುತ್ತದಲ್ಲ?"

ನಾನು ನಕ್ಕು "ಇಂತಹ ಸಂದರ್ಭವನ್ನು ಉಪಾಯದಿಂದ ನಿರ್ವಾಹ ಮಾಡಬೇಕು. ನಿಮ್ಮ ಕಣ್ಣಿಗೆ ಕಂಡ ದೋಷವನ್ನು ನೀವು ನಿಲ್ಲಿಸಬಹುದು. ಎಲ್ಲಿಯೋ ಪರೋಕ್ಷದಲ್ಲಿ ನಡೆಯಬಹುದಾದದ್ದನ್ನು ನೀವು ಹುಡುಕಿಕೊಂಡು ಹೋಗಬೇಕಾದದ್ದಿಲ್ಲ" -ಎಂದು ಸಮಜಾಯಿಷಿ ಹೇಳಿದೆ.

ಆಹೊತ್ತಿನ ಮಟ್ಟಿಗಾದರೂ ಅವರು ಅದನ್ನು ಅಂಗೀಕರಿಸಿದರೆಂದು ತೋರುತ್ತದೆ.

ಧರ್ಮಸಂಕಟ

ಬೆಂಗಳೂರಿನ ಶ್ರೀ ಚಾಮರಾಜೇಂದ್ರ ಸಂಸ್ಕೃತ ಕಾಲೇಜಿನಲ್ಲಿ ಪಂಡಿತ ಮಂಡಲದ ವಾರ್ಷಿಕ ಸಮ್ಮೇಳನ ನಡೆದ ದಿವಸ. ಬೆಳಗ್ಗೆ ಒಂಭತ್ತು ಘಂಟೆ. ಪ್ರೊ ॥ ಸಿ.ಆರ್. ನರಸಿಂಹಶಾಸ್ತ್ರಿಗಳವರ ಅಧ್ಯಕ್ಷಭಾಷಣವನ್ನು ಕೇಳಿ ಸಂತುಷ್ಟರಾಗಿ ಸಭಿಕರು ಹೊರಕ್ಕೆ ಬರುತ್ತಿದ್ದಾರೆ. ಆಗ ಯಾರೋ ಒಬ್ಬರು ಬಂದು ವೆಂಕಟನಾರಣಪ್ಪನವರನ್ನು ಬೇರೆಯಾಗಿ ಕರೆದುಕೊಂಡು ಹೋಗಿ ಏನನ್ನೋ ಹೇಳಿದರು. ವೆಂಕಟನಾರಣಪ್ಪನವರ ಮುಖ ಪ್ರಸನ್ನವಾಗಿದ್ದದ್ದು ಕೊಂಚ ವ್ಯಾಕುಲಿತವಾಯಿತು; ವ್ಯಾಕುಲದಿಂದ ಕಟುವಾಯಿತು. ಅವರು ನನ್ನನ್ನು ಬಳಿಗೆ ಕರೆದು ಕೇಳಿದರು:

ವೆಂ: “ಕೇಳಿದಿರೇನಪ್ಪ ಈ ಅವಿವೇಕವನ್ನ?”

ನಾನು: “ಏನು ಸಾರ್ ಅದು?”

ವೆಂ: “ಗೊತ್ತಿಲ್ಲವೆ? ಬಸವಣ್ಣನ ಗುಡಿಯ ಸಮೀಪದಲ್ಲಿರುವ ದೊಡ್ಡ ಗಣಪತಿಯ ಸನ್ನಿಧಿಯಲ್ಲಿ ಕಖ ಶಾಸ್ತ್ರಿಗಳು ಲಕ್ಷಮೋದಕ ಯಾಗವನ್ನು ನಡಸುತ್ತಿದ್ದಾರಲ್ಲ-ಅಲ್ಲಿ ನಿನ್ನೆ ರಾತ್ರಿ ನಡೆಯಿತಂತೆ ಅಸಂಗತ. ಋತ್ವಿಕ್ಕುಗಳ ಪೈಕಿ ಒಬ್ಬಾತ ಅಲ್ಪಶಂಕೆಗಾಗಿ ಹೋದವನು ಮತ್ತೆ ಕಾಲು ಕೂಡ ತೊಳೆಯದೆ, ಆಚಮನ ಮಾಡದೆ ಪುನಃ ಹೋಮಕ್ಕೆ ಕುಳಿತು ಆಹುತಿ ಹಾಕಿದನಂತೆ! ಏನಪ್ಪಾ ಈ ಅನ್ಯಾಯ!”

ನನಗೆ ಕೊಂಚ ನಗು ಬಂದಿತು.

ವೆಂ: “ಏನಪ್ಪ ನಗುತ್ತೀರಿ? ಇಷ್ಟೇನೆ ಧರ್ಮಶ್ರದ್ಧೆ?”

ನಾನು: “ನಾವು ಏನು ಮಾಡುವುದಕ್ಕಾಗುತ್ತದೆ ಸಾರ್?”

ವೆಂ: “ಏನು ಮಾಡುವುದೇ? ಆತನನ್ನು ದಂಡಿಸಬೇಕಪ್ಪ. ಇಂಥವರು ಬ್ರಾಹ್ಮಣ ಮಂಡಲಿಯಲ್ಲಿಲ್ಲದಂತೆ ಮಾಡಬೇಕು.”

ನಾನು: “ಅದೆಲ್ಲ ಸರಿ. ಆದರೆ ಅದು ನಿಜವೋ? ಹಾಗೆ ನಡೆದದ್ದನ್ನು ನೋಡಿದವರು ಯಾರು?”

ವೆಂ: “ಚಛ ಶಾಸ್ತ್ರಿಗಳು ಹೇಳುತ್ತಾರಲ್ಲ-ಅವರು ಸುಳ್ಳು ಹೇಳುತ್ತಾರೆಯೆ?”

ನಾನು: “ಸುಳ್ಳಲ್ಲವೆಂದಿಟ್ಟುಕೊಳ್ಳೋಣ. ತಪ್ಪು ತಿಳಿವಳಿಕೆಯಿಂದ ಹೇಳಿರಬಹುದಲ್ಲ? ಆ ಬ್ರಾಹ್ಮಣ ಮೂಗು ಸೀದುವುದಕ್ಕೋ ಮೈ ತುರಿಸಿಕೊಳ್ಳುವುದಕ್ಕೋ ಹೊಟ್ಟೆಯುಬ್ಬರ ಕಳೆದುಕೊಳ್ಳುವುದಕ್ಕೋ ಒಂದು ಕ್ಷಣ ಹೊರಕ್ಕೆ ಹೋಗಿರಬಹುದು. ಅದರಿಂದ ಮೈಲಿಗೆಯಾಯಿತೆಂದು ನಾವು ಹೇಗೆ ನಿಶ್ಚಯಕ್ಕೆ ಬರುವುದು? ಇಷ್ಟಕ್ಕೂ ಆ ಬ್ರಾಹ್ಮಣನನ್ನೂ ಒಂದು ಮಾತು ಕೇಳಬೇಡವೆ? ಆತನನ್ನು ಕೇಳದೆಯೇ ದಂಡಿಸುವುದು ನ್ಯಾಯವಾಗುತ್ತದೆಯೆ? ಆತನನ್ನು ವಿಚಾರಿಸಿಕೊಂಡು ಹೋದರೆ ಈ ಪುಕಾರು ಮಾಡಿದ ಮನುಷ್ಯನ ವಿಷಯದಲ್ಲಿ ಆತ ಏನು ಹೇಳುತ್ತಾನೋ? ಈ ವಿಚಾರಣೆಯ ಅವಸರದಲ್ಲಿ ವಿಷಯ ಎಲ್ಲಿಂದೆಲ್ಲಿಗೋ ಹೋಗಿ ನಾವು ಯಾರು ಯಾರನ್ನೋ ಸಾಕ್ಷ್ಯಕ್ಕೆ ಕರೆಯಬೇಕಾದೀತು. ಆಗ ಯಾರು ಯಾರು ಯಾರು ಯಾರನ್ನೆತ್ತಿಹಾಕಿಯಾರೋ! ಸತ್ಯ ತಿಳಿಯುವುದು ನಮಗೆ ಇನ್ನೂ ಕಷ್ಟವಾಗುತ್ತದೆ. ಅದರಿಂದಾಗುವ ಫಲ ಮತ್ತಷ್ಟು ಮತ್ಸರ, ಮತ್ತಷ್ಟು ವೈಷಮ್ಯ.”

ವೆಂ: “ಹಾಗಾದರೆ ಏನು ಮಾಡಬೇಕೆನ್ನುತ್ತೀರಿ? ಇದೆಲ್ಲಾ ಸರಿಯೋ?”

ನಾನು: “ನಾವು ಮಾಡಬೇಕಾದದ್ದು ಏನೂ ಇಲ್ಲ. ಇದು ನಮ್ಮ ಅವಶ್ಯ ಕರ್ತವ್ಯಕ್ಕೆ ಸೇರಿದ ವಿಚಾರವಲ್ಲ. ಯಾರೋ ಯಾರ ವಿಷಯದಲ್ಲಿಯೋ ಆಡಿದ ಕ್ಷುದ್ರವನ್ನು ನಾವು ಹುಡುಕಿಕೊಂಡು ಹೋಗಬೇಕಾಗಿಲ್ಲ.”

ಈ ವೇಳೆಗೆ ಶ್ರೀಮಾನ್ ಮೋಟಗಾನಹಳ್ಳಿ ಸುಬ್ರಹ್ಮಣ್ಯಶಾಸ್ತ್ರಿಗಳು ನಾವಿದ್ದ ಕಡೆಗೆ ಬಂದರು. ನಮ್ಮ ಅದೃಷ್ಟದಿಂದ ಅವರು ನನ್ನ ಪಕ್ಷವನ್ನು ಸಮರ್ಥನೆ ಮಾಡಿದರು:

ಸು: “ಈ ವೈದಿಕ ಬ್ರಾಹ್ಮಣರ ಜಗಳ ಮೊದಲು ಕೊನೆ ಇಲ್ಲದ್ದು. ಇದಕ್ಕೆ ನೀವು ಕೈಹಾಕಿದರೆ ಕೆಂಪಿರುವೆ ಗೂಡಿನಲ್ಲಿ ಕೈಯಿಟ್ಟ ಹಾಗೆ.”

ಇಷ್ಟು ಹೊತ್ತಿಗೆ ವೆಂಕಟನಾರಣಪ್ಪನವರ ಉದ್ವೇಗ ಕೊಂಚ ಇಳಿದಿತ್ತು.

ವೆಂ: “ಏನಪ್ಪಾ-ಹೀಗನ್ನುತ್ತೀರಾ?”

ಕೊನೆಗೆ, ಆ ವಿಚಾರವನ್ನು ಅಲ್ಲಿಗೇ ಬಿಟ್ಟುಬಿಡತಕ್ಕದ್ದೆಂದು ತೀರ್ಮಾನಕ್ಕೆ ಬಂದದ್ದಾಯಿತು.

ಮನೋದಾರ್ಢ್ಯ

ವೆಂಕಟನಾರಣಪ್ಪನವರು ಸಂಸಾರದ ಕಷ್ಟನಿಷ್ಠುರಗಳನ್ನು ಅನುಭವಿಸಿದ್ದವರು. ರೋಗದ ದುಃಖ, ವಿಯೋಗದ ದುಃಖ, ಬಡತನದ ದುಃಖ, ಕೀಳುಮನಸ್ಸಿನ ದುಃಖ-ಇಂಥ ಬಗೆಬಗೆಯ ದುಃಖಗಳನ್ನು ಕಂಡಿದ್ದರು. ಅವರ ಮನಸ್ಸು ಬೇಗನೆ ಉದ್ವೇಗಕ್ಕೆ ಬರುತ್ತಿದ್ದದ್ದಾದರೂ ಯುಕ್ತಾ ಯುಕ್ತ ವಿಚಾರದಿಂದ ವಿಮುಖವಾದದ್ದಲ್ಲ. ಸಾವಕಾಶವಾಗಿ ವಿಷಯದ ಪೂರ್ವಾಪರಗಳನ್ನು ವಿವರಿಸಿ ಹೇಳಿ ಅನುಕೂಲ ಪ್ರತಿಕೂಲಗಳನ್ನು ಸಕಾರಣವಾಗಿ ತಿಳಿಸಿದಲ್ಲಿ ಅವರು ತಮ್ಮ ಪೂರ್ವನಿರ್ಧಾರವನ್ನು ಪುನರ್ವಿಮರ್ಶೆಯಿಂದ ತಿದ್ದಿಕೊಳ್ಳಲು ಸಿದ್ಧರಾಗಿದ್ದರು. ಅವರ ಗುಣಗಳಲ್ಲೆಲ್ಲ ಉನ್ನತೋನ್ನತವಾದದ್ದೆಂದರೆ ಅವರ ಮನೋದಾರ್ಢ್ಯ.

ನಿಯಮ ನಿಷ್ಠೆ

ವೆಂಕಟನಾರಣಪ್ಪನವರು ತಿಂಡಿ ತೀರ್ಥಗಳ ವಿಷಯದಲ್ಲಿ ಉತ್ಸಾಹಿಗಳಾಗಿರಲಿಲ್ಲ. ಅವು ಕೆಲಸವನ್ನು (Business) ಹಾಳುಡುತ್ತವೆಂದೇ ಅವರ ಅಭಿಪ್ರಾಯ. ನಾನು ಪರಿಷತ್ತಿನ ಉಪಾಧ್ಯಕ್ಷನಾದಾಗ ಸೇರಿದಮೊಟ್ಟ ಮೊದಲ ಕಾರ್ಯಕಾರಿ ಸಮಿತಿಯಲ್ಲಿ ನನ್ನ ಈ ಚಪಲ ಅವರ ಗಮನಕ್ಕೆ ಬಂದಿತು. ಮೀಟಿಂಗ್ ಸೇರಿ ಕಾರ್ಯಾರಂಭವಾಗುವುದಕ್ಕೆ ಮುಂಚೆ ಫಲಾಹಾರವೆಂದು ನಾನೂ ವೆಂಕಣ್ಣಯ್ಯ ಮೊದಲಾದ ಸ್ನೇಹಿತರೂ ಗೊತ್ತು ಮಾಡಿದ್ದೆವು. ಅದರಂತೆ ದೊನ್ನೆಗಳಲ್ಲಿ ಬಿಸಿ ಬಿಸಿ ವಾಂಗಿಭಾತು, ಸಿಹಿ ಸಜ್ಜಿಗೆ ಬಂದವು. ವೆಂಕಟನಾರಣಪ್ಪನವರು ಅದನ್ನು ಕಂಡೊಡನೆಯೇ ಹಾವು ಕಂಡವರಂತೆ ಥಟ್ಟನೆ ಎದ್ದುನಿಂತು “ಇದೇನಪ್ಪ Nonsense?” ಎಂದರು. ನಾವು ಅವರಿಗೆ ಸಮಾಧಾನ ಹೇಳಲು ಪ್ರಯತ್ನಮಾಡಿದೆವು. ನಮ್ಮ ಮಾತನ್ನು ಅವರು ಕಿವಿಗೇ ಹಾಕಿಕೊಳ್ಳದೆ ಮೀಟಿಂಗಿನಿಂದ ಹೊರಟೇಹೋದರು. ನಾವು ಎದ್ದು ಹೋಗಿ ಬೇಡಿಕೊಂಡಮೇಲೆ ಆ “Nonsense ಎಲ್ಲ ಮುಗಿಯಲಿ. ಆಮೇಲೆ ಬರುತ್ತೇನೆ” ಎಂದರು.

ವೆಂಕಟನಾರಣಪ್ಪನವರು ಎಲ್ಲದರಲ್ಲಿಯೂ ಮಡಿ, ಎಲ್ಲದರಲ್ಲಿಯೂ ನಿಯಮ. ಅವರು ತಿಂಡಿ ತೀರ್ಥ ಬೇಡವೆನ್ನುವವರಲ್ಲ. ನಮ್ಮನ್ನು ಎಷ್ಟೋ ಸಲ ಅವರ ಮನೆಗೆ ಕರೆದು ಒಳ್ಳೆಯ ಸೊಗಸಾದ ತಿಂಡಿಗಳನ್ನು ಕೊಟ್ಟು ಆದರಿಸಿದ್ದಾರೆ. ಆದರೆ ಎಲ್ಲ ಮಡಿ.

ಪಾಕಕೌಶಲ

ನಾವು ಎಲ್ಲಿ ಹೋದರೂ ಅವರೇ ನಮ್ಮ ಮುಖಂಡರು, ಮತ್ತು ಅವರೇ ಅನ್ನದಾತರು. ಪರಸ್ಥಳಗಳಲ್ಲಿ ಎಷ್ಟೋ ಕಡೆ ವಿದ್ಯುದ್ದೀಪಗಳಿಲ್ಲವಷ್ಟೇ? ಅಲ್ಲೆಲ್ಲ ಅವರು ರಾತ್ರಿಯ ಅಡಿಗೆ ಮಾಡುವಾಗ ವೆಂಕಣ್ಣಯ್ಯ ಕೈಯಲ್ಲಿ ಮೋಂಬತ್ತಿ ದೀಪ ಹಿಡಿದಿರಬೇಕು. ನಾನು ಹಿಡಿಯುತ್ತೇನೆಂದು ಹೇಳಿದರೆ “ನೀವು ಬೇಡ. ನಿಮ್ಮ ಹರಟೆ ನಗುವಿನಲ್ಲಿ ಮೋಂಬತ್ತಿ ಸೊಟ್ಟೆಯಾಗಿ ಅದರ ತೊಟ್ಟು ಪಾತ್ರೆಗಳ ಮೇಲೆ ಬೀಳುತ್ತದೆ” ಎನ್ನುವರು. ಹಂಪೆಯಲ್ಲಿ ಹೀಗೆ ನಡೆಯಿತು. ನಾವು ಸಂಜೆ ಸುಮಾರು ಆರು ಘಂಟೆಗೆ ಸೇರಿದೆವು. ಅಲ್ಲಿ ಮಂಡರಗಪ್ಪೆಗಳ ಅವಾಂತರ ಮತ್ತು ನಾವು ಅಲ್ಲಿ ಹೋಗುವುದಕ್ಕೆ ಒಂದು ತಿಂಗಳ ಮುಂಚೆ ಜಾತ್ರೆ ನಡೆದು ಅದರ ಕಸ ಮಂಟಪದ ತುಂಬಾ ತುಂಬಿತ್ತು. ವೆಂಕಟನಾರಣಪ್ಪನವರು “ನೀವು ನೋಟಕ್ಕೆ ಪ್ರಾರಂಭ ಮಾಡಿಯಪ್ಪ. ತಿರುಗಾಡಿಕೊಂಡು ಬನ್ನಿ ಕೊಂಚ” ಎಂದು ನಮ್ಮನ್ನು ಕಳುಹಿಸಿದರು.

ನಾವು ಹಿಂದಿರುಗಿ ಬರುವಷ್ಟರೊಳಗಾಗಿ ಒಂದು ಮಂಟಪವನ್ನೆಲ್ಲಾ ಚೊಕ್ಕಟವಾಗಿ ಗುಡಿಸಿ ಅಲ್ಲಿದ್ದ ಬೂದಿ ಎಂಜಲುಗಳನ್ನೆಲ್ಲ ಹೊರಕ್ಕೆ ಹಾಕಿ ಒಲೆ ಗುಂಡಿಗಳನ್ನು ತೊಳೆದು ಅಡಿಗೆಗೆ ಸಿದ್ಧಪಡಿಸಿಕೊಂಡಿದ್ದರು. ವೆಂಕಣ್ಣಯ್ಯ ಹಿಡಿದ ಮೋಂಬತ್ತಿಯ ಬೆಳಕಿನಲ್ಲಿ ಸೊಗಸಾದ ಅಡಿಗೆಯಾಯಿತು. ನಾವು ಉಂಡು ಮಂಡರಗಪ್ಪೆಗಳ ಭಯದಿಂದ ಗುಡಿಯ ಒಳಗಡೆಯ ನವರಂಗ ಮಂಟಪದಲ್ಲಿ ಮಲಗಿದೆವು. ದಣಿದಿದ್ದದ್ದರಿಂದಲೂ ಊಟ ರುಚಿಯಾಗಿದ್ದದ್ದರಿಂದಲೂ ಮೈಮರೆತು ನಿದ್ರಿಸಿದೆವು.

ವಾತ್ಸಲ್ಯ

ಮಾರನೆಯ ಬೆಳಗ್ಗೆ ಸುಮಾರು ಐದೂವರೆ ಘಂಟೆಗೆ ವೆಂಕಟನಾರಣಪ್ಪನವರು ಬಂದು "ಏನಪ್ಪಾ, ನಿದ್ದೆ ಚೆನ್ನಾಗಿ ಬಂತೊ? ಕಾಫಿ ಸಿದ್ಧವಾಗಿದೆ. ಮುಖ ತೊಳೆದುಕೊಂಡು ಕುಡಿಯುತ್ತೀರೋ ಬೆಡ್ ಕಾಫಿಯೋ?" ಎಂದು ಕೇಳಿದರು. ವೆಂಕಟನಾರಣಪ್ಪನವರು ಕಾಫಿ ಕುಡಿಯುತ್ತಿದ್ದವರಲ್ಲ.

ಇಂಥವರನ್ನು ಜ್ಞಾಪಕವಿಟ್ಟುಕೊಳ್ಳದಿರುವುದು ಹೇಗೆ? ಕೊಂಡಾಡದಿರುವುದು ಹೇಗೆ?

ಆ ಮಧ್ಯಾಹ್ನ ಹಂಪೆಯ ಪ್ರೇಕ್ಷಣೀಯ ಸ್ಥಳಗಳನ್ನು ನೋಡಿ ಬರಬೇಕೆಂದು ಸಂಕಲ್ಪವಾಗಿತ್ತು. ಅದಕ್ಕಾಗಿ ನಾವೆಲ್ಲ ಊಟಮಾಡಿ ಸಿದ್ಧವಾಗಿ ನಿಂತೆವು. ವೆಂಕಟನಾರಣಪ್ಪನವರು ನಾಲ್ಕು ರೈಲುತೊಂಬಿಗೆಗಳ ತುಂಬ ಕಾಫಿ ತುಂಬಿ ತಿರುಗಣೆ ಮುಚ್ಚಳ ತಿರುಗಿಸಿ ತೊಂಬಿಗೆಗಳ ಸುತ್ತ ಬಟ್ಟೆ ಸುತ್ತಿ "ಮೂರು ಜನ ಮೂರು ತೆಗೆದುಕೊಳ್ಳಿ. ನಾನೊಂದು ತರುತ್ತೇನೆ" ಎಂದರು. ಬಟ್ಟೆ ಸುತ್ತಿದ್ದದ್ದು ಉಷ್ಣವನ್ನು ಕಾಪಾಡುವುದಕ್ಕೋಸರ. ನಾವು ಕಾಫಿಪ್ರಿಯರೆಂದು ತಿಳಿದಿದ್ದ ಆ ಇಂಗಿತಜ್ಞ ಮಹಾಶಯರು ನಮ್ಮ ಅನುಕೂಲಕ್ಕಾಗಿ ಇಷ್ಟು ಶ್ರಮ ತೆಗೆದುಕೊಂಡಿದ್ದರು.

ನಾವು ಒಂದಾನೊಂದು ಸಾಹಿತ್ಯ ಸಮ್ಮೇಳನಕ್ಕೆ ಹೋಗಿ ಬರುವಾಗ ಗದುಗಿನಲ್ಲಿ ಇಳಿದುಕೊಂಡೆವು. ಆ ರಾತ್ರಿ ನಮಗೆ ವೆಂಕಟನಾರಣಪ್ಪನವರ ಅಡಿಗೆಯೆ ಊಟ. ಮಾರನೆಯ ಬೆಳಗ್ಗೆಯೂ ಹಾಗೆಯೆ. ಗದುಗಿನಿಂದ ರೈಲು ಬೆಳಗ್ಗೆ ಸುಮಾರು ಒಂಭತ್ತೂವರೆ ಘಂಟೆಗೆ ಹೊರಡುತ್ತಿತ್ತು. ಆದದ್ದರಿಂದ ನಮಗೆ ಊಟ ಆ ಅವಸರದಲ್ಲಿ ಹಿಡಿಸಲಿಲ್ಲ. ಮಾಡಿದ್ದ ಅಡಿಗೆ ಉಳಿದು ಹೋಯಿತು. ಆದರೆ ಬಹು ರುಚಿಯಾಗಿತ್ತು. ವೆಂಕಣ್ಣಯ್ಯ, ನಾನು ಮಾತನಾಡಿಕೊಂಡು ವೆಂಕಟನಾರಣಪ್ಪನವರು ನೀರು ಸೇದಲು ಹೊರಗೆ ಹೋಗಿದ್ದಾಗ ಒಂದು ತಪ್ಪಲೆಯಲ್ಲಿ ಅನ್ನವನ್ನೂ ಹುಳಿಯನ್ನೂ ತುಪ್ಪವನ್ನೂ ಹಾಕಿ ಕಲಸಿ ತುಂಬಿದೆವು. ಇನ್ನೊಂದು ತಪ್ಪಲೆಯಲ್ಲಿ ಮೊಸರನ್ನವನ್ನು ಕಲಸಿದೆವು. ಎರಡು ತಪ್ಪಲೆಗಳಿಗೂ ಬಟ್ಟೆಯಿಂದ ಮೂತಿ ಕಟ್ಟಿ ಅದನ್ನು ಇತರ ಸಾಮಾನುಗಳೊಡನೆ ರೈಲಿಗೆ ಸಾಗಿಸಿದೆವು. ಅಲ್ಲಿ ಎರಡನೆಯ ದರ್ಜೆಯ ಕಂಪಾರ್ಟ್‌ಮೆಂಟಿನಲ್ಲಿ ಕುಳಿತು ತಪ್ಪಲೆಗಳನ್ನು ಪಕ್ಕದಲ್ಲಿರಿಸಿಕೊಂಡೆವು. ನನಗೆ ತಿಂದು ಮುಗಿಸಬೇಕೆಂದು ಆತುರ. ವೆಂಕಣ್ಣಯ್ಯನಿಗೆ ಸಂಜ್ಞೆ ಮಾಡಿದೆ. ಅವರು ವೆಂಕಟನಾರಣಪ್ಪನವರ ಕಡೆ ಕಣ್ಣು ತಿರುಗಿಸಿದರು. ಆ ಗಾಡಿಯಲ್ಲಿ ಇಬ್ಬರು ಮುಸಲ್ಮಾನ್ ದೊಡ್ಡ ಮನುಷ್ಯರು ಕುಳಿತಿದ್ದರು. ವೆಂಕಟನಾರಣಪ್ಪನವರು "ಏನಪ್ಪಾ, ಅವರು ಹೋಗುವವರೆಗೆ

ತೊಳೆಯುವುದಕ್ಕಾಗುವುದಿಲ್ಲವೊ?” ಎಂದರು. ನಾವು ನಗುವನ್ನು ತಡೆದುಕೊಂಡೆವು. ಮುಂದಿನ ನಿಲ್ದಾಣದಲ್ಲಿ ಸಾಹೇಬರುಗಳು ಇಳಿದರು. ವೆಂಕಟನಾರಣಪ್ಪನವರು “ಏನಪ್ಪಾ, ನಿಮಗೇನು ಮಡಿ ಮೈಲಿಗೆ ಇಲ್ಲವೆ?” ಎಂದರು. ನಾವು ಹೋದ ಮಾನ ಹೇಗೂ ಹೋಯಿತು ಎಂದು ಆ ಪಕ್ವಾನ್ನವನ್ನು ಕಬಳಿಸಿದೆವು.

***

ಹಳ್ಳಿಗಾಡುಗಳಲ್ಲಿ ಜನಕ್ಕೆ ಬಳಕೆಯಾಗಿರುವ ಎಷ್ಟೋ ಮರಗಿಡಗಳು ವೆಂಕಟನಾರಣಪ್ಪನವರಿಗೆ ತಿಳಿದಿದ್ದವು. ಕನ್ನಡ ಸಾಹಿತ್ಯ ಪರಿಷತ್ತಿಗಾಗಿ ಸೋಮೇಶ್ವರ ಶತಕವನ್ನು ಸಂಪಾದನೆಮಾಡುತ್ತಿದ್ದ ಕಾಲದಲ್ಲಿ “ಕಂಚವಾಳ” ವೆಂಬ ಮರದ ಪ್ರಸ್ತಾವ ಬಂದಿತು. ಆ ಮರದ ಹೆಸರನ್ನು ನಾನು ಕೇಳಿರಲಿಲ್ಲ. ವೆಂಕಟನಾರಣಪ್ಪನವರು ಆ ಮರ ಇದ್ದ ಸ್ಥಳವನ್ನು ತೋರಿಸಿದರು. ಅದು ಶಂಕರಪುರದಲ್ಲಿ ಶಂಕರಮಠದ ಪೂರ್ವ ದಿಕ್ಕಿನ ರಸ್ತೆಯಲ್ಲಿ ಈಗ ಕಲ್ಯಾಣಮಂಟಪ ಇರುವ ಜಾಗಕ್ಕೆ ಎದುರಾಗಿ ಇತ್ತಂತೆ. ಯಾರೋ ಆ ಮರಕ್ಕೆ ನೇಣುಹಾಕಿಕೊಂಡಿದ್ದರಂತೆ. ಈ ಕಥೆಯನ್ನು ಹೇಳಿದ್ದಲ್ಲದೆ ಮಾರನೆಯದಿನ ಕಂಚವಾಳದ ಎಲೆ ಹೂವು ಕಾಯಿಗಳನ್ನು ಎಲ್ಲಿಂದಲೋ ತಂದು ನನಗೆ ತೋರಿಸಿದರು.

ಅವರು ನನಗೆ ತೋರಿಸಿದ ಇನ್ನೊಂದು ಗಿಡದ ಹೆಸರು (ತೆಲುಗಿನಲ್ಲಿ) “ಲಂಜಮುಂಡ ಕೂರ” ಎಂದು. ಇದು ಹುಳಿ, ಹುಳಿತೊವ್ವೆ ಮೊದಲಾದ ಅಡಿಗೆಗಳಿಗೆ ಪಸಂದಾದ ತರಕಾರಿಯಂತೆ.

ವೆಂಕಟನಾರಣಪ್ಪನವರಿಗೆ ಅತ್ಯಂತ ಪ್ರಿಯವಾದ ತರಕಾರಿ ಬದನೆಕಾಯಿ.

> ವಂಕಾಯಿವಂಟಿ ಕೂರಯು ।
> ಪಂಕಜಮುಖಿ ಸೀತವಂಟಿ ಸಾಧ್ವೀಮಣಿಯುನ್ ॥
> ಶಂಕರುಣಿವಂಟಿ ದೈವಮು ।
> ನಿಂಕೆಚ್ಚಟನಿಟ್ಟಿ ಭಾಗ್ಯಮುಂಡುನು ಸುಮತೀ ॥

ಇದು ಅವರು ಉದಾಹರಿಸುತ್ತಿದ್ದ ಪ್ರಮಾಣವಾಕ್ಯ.

ಕಾಫಿತೋಟ

ವೆಂಕಟನಾರಣಪ್ಪನವರು ತಮ್ಮ ಮನೆಯಲ್ಲಿ ಒಂದು-ಒಂದೇ ಒಂದು-ಕಾಫಿಗಿಡವನ್ನು ಬೆಳಸಿದ್ದರು. ಅದು ಸೊಂಪಾಗಿ ಬೆಳೆದಿತ್ತು. ಅದರಲ್ಲಿ ಹೂ ಬಂದಾಗ ಅವರಿಗೆ ಬಹು ಸಂಭ್ರಮ. ಎಲ್ಲರಿಗೂ ಅದನ್ನು ತೋರಿಸುವರು.

ನಾನು ಅವರನ್ನು ಕೇಳಿದೆ: “ನೀವು ಕಾಫಿ ಕುಡಿಯುವವರಲ್ಲವಲ್ಲ?”

ಅವರ ಜವಾಬು: “ನಾನು ಕುಡಿಯದಿದ್ದರೆ ಇನ್ನು ಯಾರೂ ಕುಡಿಯಬೇಡವೆ? ಮನೆಗೆ ಬಂಧುಗಳು, ಇಷ್ಟರು ಬರುವುದಿಲ್ಲವೆ? ಅವರಲ್ಲಿ ಕಾಫಿ ಕುಡಿಯುವವರು ಇರುತ್ತಾರಲ್ಲ?”

ಆತಿಥ್ಯ

ವೆಂಕಟನಾರಣಪ್ಪನವರು ತಮ್ಮ ಗೌರವಕ್ಕೆ ಅರ್ಹರೆನಿಸಿದವರನ್ನು ತಮ್ಮ ಮನೆಗೆ ಕರೆದು ಔತಣ ಮಾಡಿಸುವುದುಂಟು. ಅಂಥ ಮಾನ್ಯ ಅತಿಥಿಗಳಲ್ಲಿ ಒಬ್ಬರು ಧಾರವಾಡದ ವಿದ್ವಾಂಸರಾದ ಮಹಾದೇವಶಾಸ್ತ್ರಿ ಪ್ರಭಾಕರಶಾಸ್ತ್ರಿ ಪೂಜಾರರವರು. ಅವರು ತಮ್ಮ ಪಾಂಡಿತ್ಯದಿಂದ ಹೇಗೋ ತಮ್ಮ ಸೌಜನ್ಯ ಸದಾಚಾರಗಳಿಂದಲೂ ಹಾಗೆ ಪೂಜಾರ್ಹರಾಗಿದ್ದರು. ಅವರು ವಿನಯದ ಮೂರ್ತಿ. ಅನೇಕ ಉತ್ತಮ ಗ್ರಂಥಗಳನ್ನು ಬರೆದಿದ್ದಾರೆ. ಅವರ ವಿಷಯದಲ್ಲಿ ವೆಂಕಟನಾರಣಪ್ಪನವರಿಗೆ ಗೌರವವಿದ್ದದ್ದು ಸ್ವಾಭಾವಿಕ. ಮಹಾದೇವಶಾಸ್ತ್ರಿಗಳ ಗೌರವಾರ್ಥವಾಗಿ ಅವರು ಏರ್ಪಡಿಸಿದ್ದ ಔತಣಕ್ಕೆ ಬ್ರಹ್ಮಶ್ರೀ ತೋಗೆರೆ ನಂಜುಂಡಶಾಸ್ತ್ರಿಗಳೂ, ಕಡಬದ ನಂಜುಂಡಶಾಸ್ತ್ರಿಗಳೂ ಬಂದಿದ್ದರು. ವೆಂಕಣ್ಣಯ್ಯ ಬಂದಿದ್ದರೆಂದು ಜ್ಞಾಪಕ. ನಾನೂ ಹೋಗಿದ್ದೆ. ಸೊಗಸಾದ ಬಾಳೆಯೆಲೆ, ಸೊಗಸಾದ ಅಡಿಗೆ, ಪಾಯಸ, ಭಕ್ಷ್ಯಗಳು; ಸಾವಕಾಶವಾಗಿ ಊಟ ಮಾಡಿದೆವು. ಎಲ್ಲವೂ ಶುಚಿ. "ಶುಚೀ ರೋಚತ ಆಹುತಃ" ಎಂಬ ವೇದವಾಕ್ಯ ಜ್ಞಾಪಕಕ್ಕೆ ಬರುತ್ತದೆ.

ಪೂಜಾರರು

ಮ.ಪ್ರ.ಪೂಜಾರರು ಕನ್ನಡ ಸಂಸ್ಕೃತಗಳೆರಡರಲ್ಲಿಯೂ ಪ್ರಕಾಂಡ ಪಂಡಿತರು. ಅನೇಕ ವರ್ಷಕಾಲ ಅವರು ಧಾರವಾಡದ ಟ್ರೈನಿಂಗ್ ಕಾಲೇಜೊಂದರಲ್ಲಿ ಅಧ್ಯಾಪಕರಾಗಿದ್ದರು. ಕನ್ನಡ ಸಾಹಿತ್ಯ ವ್ಯಾಕರಣಗಳಲ್ಲಿ ಅವರಿಗಿದ್ದ ಪ್ರಾವೀಣ್ಯ ಅನನ್ಯಸಾಧಾರಣ. ಶಬ್ದಾನುಶಾಸನದ ನಾಲ್ಕನೆಯ ಅಧ್ಯಾಯಕ್ಕೆ ಕುಂಡಲಗಿರಿಯಾಚಾರ್ಯರ ಟೀಕೆ ಅಪ್ರಾಪ್ಯವಾಗಿರಲು, ಕರ್ಣಾಟಕ ವಿದ್ಯಾವರ್ಧಕ ಸಂಘದ ಕೋರಿಕೆಯಂತೆ ಟೀಕೆಯನ್ನು ಬರೆದು ಕೊಟ್ಟು ಆ ಶಾಸ್ತ್ರಗ್ರಂಥವನ್ನು ಪೂರಣಮಾಡಿದವರು ಪೂಜಾರರು. ಇದರಿಂದ ಊಹಿಸಬಹುದು ಪೂಜಾರರ ವಿದ್ವತ್ತೆಯನ್ನು. ೧೯೫೨ರಲ್ಲಿ ಧಾರವಾಡದ ಕನ್ನಡ ಸಂಶೋಧನ ಸಂಸ್ಥೆಯಲ್ಲಿ ಪೂಜಾರರು ಕೆಲವು ಕನ್ನಡ ವ್ಯಾಕರಣ ವಿಚಾರಗಳನ್ನು ಕುರಿತು ಮಾಡಿದ ಎರಡು ಉಪನ್ಯಾಸಗಳು ಅತ್ಯಂತ ಸ್ಮರಣೀಯವಾಗಿವೆ. ಅಕ್ಷರಮೀಮಾಂಸೆ, ಕನ್ನಡಕ್ಕೆ ಒಂದು ಶಿಕ್ಷಾಗ್ರಂಥದ ಆವಶ್ಯಕತೆ, ಶ್ರುತಿಕಟುಸಂಧಿ, ವಿಭಕ್ತಿಲೋಪ ವಿಚಾರ, ಗಮಕ ಸಮಾಸ, ಹೊಸಗನ್ನಡದ ಕೆಲವು ಅಶಾಸ್ತ್ರೀಯ ರೂಪಗಳು-ಮೊದಲಾದ ಅನೇಕ ಮುಖ್ಯ ವಿಷಯಗಳ ಪರಾಮರ್ಶೆಯನ್ನೊಳಗೊಂಡ ಆ ಉಪನ್ಯಾಸಗಳು ಭಾಷಾಶಾಸ್ತ್ರದಲ್ಲಿ ಆಸಕ್ತಿಯುಳ್ಳವರೆಲ್ಲ ಅವಶ್ಯವಾಗಿ ವ್ಯಾಸಂಗ ಮಾಡಬೇಕಾದವು.

ಮುಗ್ಧತೆ

ವೆಂಕಟನಾರಣಪ್ಪನವರು ಹೆಚ್ಚು ಲೋಕ ತಿಳಿದವರಲ್ಲ. ಕೆಲವು ವೇಷಗಳು ಅವರಿಗೆ ಅರ್ಥವಾಗುತ್ತಿರಲಿಲ್ಲ. ಅವರ ಸ್ನೇಹಿತರೊಬ್ಬರು ವಿಕ್ಟೋರಿಯ ಆಸ್ಪತ್ರೆಯಲ್ಲಿ ರೋಗಿಯಾಗಿ ಮಲಗಿದ್ದರು. ಆತನನ್ನು ವಿಚಾರಿಸಿಕೊಂಡು ಬರುವುದಕ್ಕಾಗಿ ಅವರು ದಿನವೂ ಸಂಜೆ ಅಲ್ಲಿಗೆ ಹೋಗಿಬರುತ್ತಿದ್ದರು. ಇವರು ಅಲ್ಲಿಗೆ ಹೋದಾಗಲೆಲ್ಲ ಒಬ್ಬ ಹೆಂಗಸು ಆ ರೋಗಿಯ ಬಳಿ ಕುಳಿತು ಅಳುತ್ತಿದ್ದಳು. ಆದರೆ ಆಕೆಯ ಮೈಮೇಲೆ ಸೊಗಸಾದ ಹೊಸ ಸೀರೆ, ಮೈತುಂಬ ಚಿನ್ನದ ರತ್ನದ ಒಡವೆಗಳು ಕಾಣುತ್ತಿದ್ದವು. ತಲೆಯಲ್ಲಿ ತುಂಬ ಹೂ ಮುಡಿದುಕೊಂಡಿರುತ್ತಿದ್ದರು. ಒಂದು ಸಂಜೆ ವೆಂಕಟನಾರಣಪ್ಪನವರು ಅಲ್ಲಿಗೆ ಹೋಗಿದ್ದಾಗ ಮತ್ತೊಬ್ಬ ಸ್ನೇಹಿತರು ಅಲ್ಲಿಗೆ ಬಂದು ಸೇರಿದರು. ವೆಂಕಟನಾರಣಪ್ಪನವರು ಈ ಸ್ನೇಹಿತರನ್ನು ಕುರಿತು ಕೇಳಿದರು:

ವೆಂ: “ಏನಪ್ಪ ಇದು ಈಕೆ ಮಾಡುವುದು? ದಿನಾಗಲೂ ಹೀಗೆ ಅಳುತ್ತಾಳಲ್ಲ? ಈಕೆಯ ಗತಿ ಏನಾದೀತು? ಅವನಿಗೆ ಅಧೈರ್ಯವಾಗುತ್ತದಲ್ಲ?”

ಸ್ನೇಹಿತ:(ಕೊಂಚ ಸುಮ್ಮನಿದ್ದು, ಆಸ್ಪತ್ರೆಯಿಂದ ಹೊರಬಂದಮೇಲೆ) “ತಿಳಿಯದೆ? ಆಕೆ ಆತನ ಹೆಂಡತಿ.”

ವೆಂ: “ಅದು ಸರಿಯೆ. ಆಕೆ ಹೀಗೆ ದಿನವೂ ಅಳುವುದೇಕೆ?”

ಸ್ನೇ: “ತನ್ನ ವಿಷಯದಲ್ಲಿ ಹೆಂಡತಿ ಎಷ್ಟು ಚಿಂತೆಪಡುತ್ತಿದ್ದಾಳೆ ಎಂದು ಗಂಡನು ಕಳವಳಪಡುವಂತೆ ಮಾಡುವುದಕ್ಕೋಸ್ಕರ. ‘ಆಹಾ! ನನ್ನ ಹೆಂಡತಿ ಎಂಥ ಪತಿವ್ರತೆ!’ ಎಂದು ಆತ ತಿಳಿದುಕೊಳ್ಳಬೇಡವೆ?”

ವೆಂ: “ಹಾಗಾದರೆ ಅವನೆದುರಿಗೆ ಸಿಂಗಾರ ಮಾಡಿಕೊಂಡು ಬರುವುದು ಏಕೆ?”

ಸ್ನೇ: “ಗಂಡನು ಸಂತೋಷಪಡಲೆಂದು. ಸಂತೋಷಪಟ್ಟು ಉತ್ಸಾಹ ತಾಳಿ ಆದಷ್ಟು ದಿನ ಬದುಕಲೆಂದು.”

ವೆಂ: “ಇದೇನಪ್ಪ? ಅಳು, ಸೊಗಸು-ಎರಡೂ ಒಂದೇ ಸಾರಿಯೆ?”

ಸ್ನೇ: “ನಿಮಗೆ ಈ ವಿಷಯ ತಿಳಿಯುವುದಿಲ್ಲ. ಗೋಳು ಗಂಡನಿಗೆ; ಸೊಗಸು ಬೀದಿಯವರಿಗೆ.”

ವೆಂ: “ಎಲ್ಲಾದರೂ ಹಾಳಾಗಿಹೋಗಲಿ. ಅವನು ಈ ವಿಷಯ ಚಿಂತಿಸದಿದ್ದರೆ ಸಾಕು.”

ಕೆಲವು ದಿನಗಳ ತರುವಾಯ ಆ ರೋಗಿ ಪರಮಪದವನ್ನು ಸೇರಿದನಂತೆ.

ಭ್ರಷ್ಟಾಚಾರ ನಿವಾರಣೆ

ವೆಂಕಟನಾರಣಪ್ಪನವರು ಜನಹಿತಕ್ಕೆ ಸಂಬಂಧಪಟ್ಟ ಅನೇಕ ಕಾರ್ಯಕ್ಷೇತ್ರಗಳಲ್ಲಿ ಪ್ರವೃತ್ತರಾಗಿದ್ದವರು. ಅಂಥ ಕ್ಷೇತ್ರಗಳಲ್ಲಿ ಸಹಕಾರದ್ದೊಂದು (ಕೋ-ಆಪರೇಟಿವ್). ಅವರ ಪ್ರಾಮಾಣಿಕತೆಯನ್ನೂ ಕಾರ್ಯದಕ್ಷತೆಯನ್ನೂ ಕಂಡಿದ್ದ ಕೆಲವರು ಅವರನ್ನು ಒಂದಾನೊಂದು ಸಹಕಾರ ಸಂಘದ ಕಾರ್ಯ ಸಮಿತಿಗೆ ಚುನಾಯಿಸಿದರು. ಅದು ಧಾನ್ಯಾದಿ ಗೃಹಸಾಮಗ್ರಿಗಳನ್ನು ಒದಗಿಸುವ ಸಂಘ. ಆ ಸಂಘಕ್ಕೆ ದಾಸ್ತಾನಿಗಾಗಿ ಬತ್ತ, ಅಕ್ಕಿ, ರಾಗಿ ಮೊದಲಾದ ದವಸಧಾನ್ಯಗಳನ್ನು ಕೊಂಡುಕೊಳ್ಳುವುದಕ್ಕಾಗಿ ಕಾರ್ಯಸಮಿತಿಯು ಒಂದು ಉಪ ಸಮಿತಿಯನ್ನು ನಿಯಮಿಸುವುದು ವಾಡಿಕೆಯಾಗಿತ್ತು. ಆ ಉಪಸಮಿತಿಯಲ್ಲಿ ದೊಡ್ಡೂರಾಯರು, ಗಿಡ್ಡೂರಾಯರು-ಎಂಬ ಇಬ್ಬರು ಜಹಗೀರುದಾರರಿದ್ದರು. ಅವರಿಬ್ಬರ ಕೈವಾಡದಿಂದ ಅವರ ಜೇಬು ಭರ್ತಿಯಾಗುತ್ತಿತ್ತೇ ಹೊರತು ಸಂಘದ ಸದಸ್ಯರಿಗೆ ಪ್ರಯೋಜನವೇನೂ ಆಗುತ್ತಿರಲಿಲ್ಲವೆಂದು ಎಲ್ಲರೂ ಆಡಿಕೊಳ್ಳುತ್ತಿದ್ದರು. ವೆಂಕಟನಾರಣಪ್ಪನವರು ಇದನ್ನು ತಪ್ಪಿಸಬೇಕೆಂದು ಹೊರಟರು. ಸಂಘದ ಕಾರ್ಯಸಮಿತಿಯು ಆ ವರ್ಷದ ಕೊಳ್ಳುಗಾರಿಕೆಯನ್ನು ವೆಂಕಟನಾರಣಪ್ಪನವರೇ ನಿರ್ವಹಿಸತಕ್ಕದ್ದೆಂದು ತೀರ್ಮಾನಮಾಡಿತು. ದೊಡ್ಡೂರಾಯರೂ ಗಿಡ್ಡೂರಾಯರೂ ಇದರಿಂದ ಕೈಕಟ್ಟಿ ಕೂಡುತ್ತಾರೆಯೆ?

ವೆಂಕಟನಾರಣಪ್ಪನವರು ಮೂರುನಾಲ್ಕು ದಿನ ರಜಾ ಪಡೆದು ಶ್ರೀರಂಗಪಟ್ಟಣ, ಎಡತೊರೆ ಪ್ರಾಂತಗಳಲ್ಲಿ ಬತ್ತ ಬೆಳೆದು ಮಾರುವ ರೈತರಲ್ಲಿ ಗಿರಾಕಿಯ ಮಾತನ್ನು ಆರಂಭಿಸಿದರು ಒಂದೆರಡು ಕಡೆ ಒಡಂಬಂಡಿಕೆಯೂ ಆಯಿತು. ಆದರೆ ಯಾವ ಕಡೆ ಹೋದರೂ ಅಲ್ಲಿ ಸಲೀಸಾಗಿ ಮಾತುಕಥೆಯಿಲ್ಲ, ಏನೋ ಹಿಡಿತ ಕಾಣುತ್ತಿತ್ತು. ದೊಡ್ಡೂರಾಯ ಗಿಡ್ಡೂರಾಯರ ಸ್ನೇಹಿತರಾದ ಅಡ್ಡೂರಾಯ ಬಡ್ಡೀರಾಯರು ಬೇರೆ ಸಂಘವೊಂದರ ಪರವಾಗಿ ಮೊದಲೇ ಹೋಗಿ ಒಪ್ಪಂದಗಳನ್ನು ಬರೆಯಿಸಿಕೊಂಡಿದ್ದರು. ಆದದ್ದರಿಂದ ವೆಂಕಟನಾರಣಪ್ಪನವರಿಗೆ ಸರಕು ಬೇಕಾದಷ್ಟು ದೊರೆಯುವ ಭರವಸೆ ತಪ್ಪಿಹೋಯಿತು. ಒಪ್ಪಂದ ಮಾಡಿಕೊಂಡ ರೈತರಿಂದ ಸಹ "ನಮಗೆ ಗೋಣಿ ಚೀಲವಿಲ್ಲ" ; "ಹೊಲಿಯಲು ಗೋಣಿದಾರವಿಲ್ಲ" ; "ದಾರವಿದೆ ದಬ್ಬಳವಿಲ್ಲ; "ನಮ್ಮ ಮೂಟೆ ಸಿದ್ಧವಾಗಿದೆ, ಆದರೆ ವ್ಯಾಗನ್ ಸಿದ್ಧವಿಲ್ಲ" -ಹೀಗೆ ಸಬೂಬುಗಳು ಬಂದವು. ಪ್ರಾಮಾಣಿಕರ ಕೈ ಹೀಗೆ ಕಟ್ಟಿಹೋಯಿತು. ದೊಡ್ಡೂರಾಯ ಗಿಡ್ಡೂರಾಯರ ಮುಂದೆ ತಮ್ಮ ಕೈ ಸಾಗದೆಂದು ವೆಂಕಟನಾರಣಪ್ಪನವರು ಕಂಡುಕೊಂಡರು.

ಆದರೂ ಎದುರಿಗೆ ಕಂಡಾಗ ದೊಡ್ಡೂರಾಯರು ವೆಂಕಟನಾರಣಪ್ಪನವರಿಗೆ ಕೈ ಮುಗಿಯುವುದೇನು! ಅವರ ಸತ್ಯಸಂಧತೆಯನ್ನು ಕೊಂಡಾಡುವುದೇನು! ಅವರನ್ನು ಗೌರವಿಸುವುದೇನು! ಇದನ್ನು ನೋಡಿ ವೆಂಕಟನಾರಣಪ್ಪನವರು ಆಶ್ಚರ್ಯಪಡುತ್ತಿದ್ದರು. “ಏನಪ್ಪಾ! ಈತ ನನ್ನ ಶಿಷ್ಯನೆಂದು ಹೇಳಿಕೊಳ್ಳುತ್ತಾನೆ. ಒಳಗೊಳಗೇ ಹೀಗೆ ಮಾಡುತಾನಲ್ಲ?” -ಎಂದು ಆಪ್ತರಲ್ಲಿ ತಮ್ಮ ಸೋಜಿಗವನ್ನು ಸೂಚಿಸುತ್ತಿದ್ದರು.

ವ್ಯವಸಾಯೋದ್ಯಮ

ವೆಂಕಟನಾರಣಪ್ಪನವರು ನಿರಾಡಂಬರದ ಜೀವನದಲ್ಲಿ ಒಲುಮೆಯುಳ್ಳವರು. ಬ್ರಾಹ್ಮಣ ಜೀವನ ಹೇಗೆ, ಬ್ರಾಹ್ಮಣ ಧರ್ಮವನ್ನು ಉಳಿಸುವುದು ಹೇಗೆ-ಈ ಪ್ರಶ್ನೆಗಳು ಅವರನ್ನು ಸತತವಾಗಿ ಕಾಡುತ್ತಿದ್ದವು. ಕೃಷಿಯೇ ಇನ್ನು ಮುಂದೆ ಬ್ರಾಹ್ಮಣನಿಗೆ ತಕ್ಕ ಜೀವನ; ಅದರಿಂದ ಅವನು ನಿರುಪಾಧಿಕವಾಗಿ ಜೀವನ ನಡಸಿ ತನ್ನ ಕುಲವಿದ್ಯೆಯನ್ನುಳಿಸಿಕೊಂಡು ಲೋಕಕ್ಕೆ ಪ್ರಯೋಜಕನಾಗಬಹುದು-ಎಂದು ಅವರು ದೃಢವಾದ ತೀರ್ಮಾನಕ್ಕೆ ಬಂದಿದ್ದರು. ತೀರ್ಮಾನವಾದ ಮೇಲೆ ಅದನ್ನು ಕಾರ್ಯದಲ್ಲಿ ಅನುಸರಿಸಬೇಕಷ್ಟೆ?

ಜಮೀನುಗಳನ್ನು ಹುಡುಕಲಾರಂಭಿಸಿದರು. ಮಾಗಡಿ ರಸ್ತೆಯಲ್ಲಿ ಮೂರು ನಾಲ್ಕು ಮೈಲಿಗಳೊಳಗೆ ಒಂದು ತೋಟವನ್ನು ಕೊಂಡುಕೊಂಡರು. ಅದರಲ್ಲಿ ಒಂದು ಮಾವಿನ ತೋಪು. ಆ ತೋಪಿನಲ್ಲಿ ಮಧ್ಯಾಹ್ನ ಇವರು ನೋಡಿದಾಗ ಫಲ ಯಥೇಷ್ಟವಾಗಿರುತ್ತಿತ್ತು, ಮಾರನೆಯ ದಿನ ಬೆಳಗ್ಗೆ ಒಂದು ದೊಡ್ಡ ಕಾಯಿಹೀಚೂ ಇರುತ್ತಿರಲಿಲ್ಲ. ಅದರಲ್ಲಿ ಕಳ್ಳತನವಾಗಿತ್ತಿದೆಯೆಂದು ವೆಂಕಟನಾರಣಪ್ಪನವರು ಅನುಮಾನಿಸಿ ಕಳ್ಳತನವನ್ನು ತಪ್ಪಿಸಲು ಅಲ್ಲಿ ಒಂದು ದೀಪವನ್ನಿಡತಕ್ಕದ್ದೆಂದು ನಿಶ್ಚಯಿಸಿದರು. ಒಂದು ಲಾಂದ್ರ, ಸೀಮೆಎಣ್ಣೆ ಡಬ್ಬ-ಇದನ್ನೆಲ್ಲ ಸಿದ್ಧಪಡಿಸಿಕೊಂಡು ಸಂಜೆ ಲಾಂದ್ರ ಹೊತ್ತಿಸಿ ಬೆಳಕುಮಾಡಿ ಮನೆಗೆ ಬಂದರು. ಮಾರನೆಯ ದಿನ ನೋಡಿದಾಗ ಮಾವಿನ ಕಾಯಿಗಳ ಜೊಂತೆಗೆ ಲಾಂದ್ರವೂ ಎಣ್ಣೆ ಡಬ್ಬವೂ ಮಾಯವಾಗಿದ್ದವು. ವೆಂಕಟನಾರಣಪ್ಪನವರು "ಎಂಥ Clever rascals ಅಪ್ಪ!" ಎಂದು ಆಶ್ಚರ್ಯದ ಜೊತೆಗೆ ಮೆಚ್ಚಿಗೆಯನ್ನೂ ವ್ಯಕ್ತಪಡಿಸಿದರು.

ತೋಟದ ವ್ಯಾಪಾರ ಹೀಗೆ ಮುಗಿಯಿತು.

ಆಮೇಲೆ ದೊಡ್ಡಬಳ್ಳಾಪುರದ ರೈಲ್ವೆಸ್ಟೇಷನ್ನಿನ ಬಳಿ ಒಂದು ಗದ್ದೆಯನ್ನು ಕೊಂಡರು, ಸ್ವಂತ ವ್ಯವಸಾಯಕ್ಕಾಗಿ. ಪ್ರತಿದಿವಸವೂ ಬೆಳಗ್ಗೆ ಆಹ್ನಿಕ ಮುಗಿಸಿ, ಸ್ವಯಂಪಾಕ ಭೋಜನ ಮಾಡಿಕೊಂಡು ಏಳು ಘಂಟೆಗೆ ಸರಿಯಾಗಿ ಮನೆಯನ್ನು ಬಿಡತಕ್ಕದ್ದು, ಫಸ್ಟ್‌ಬೆಲ್ ಆಗಿ ಸೆಕೆಂಡ್ ಬೆಲ್ ಆಗುವಷ್ಟರೊಳಗಾಗಿ ರೈಲು ಹತ್ತುವುದು, ಎಂಟೂವರೆ ಘಂಟೆಯೊಳಗಾಗಿ ಬಟ್ಟೆ ಬದಲಾಯಿಸಿ ನೇಗಿಲು ಗುದ್ದಲಿ ಇತ್ಯಾದಿಗಳನ್ನು ಕೈಗೆ ತೆಗೆದುಕೊಳ್ಳುವುದು-ಇದು ಏರ್ಪಾಟು. ಇದಕ್ಕಾಗಿ ರೈಲ್ವೆ ಪಾಸನ್ನೂ ತೆಗೆದಿಟ್ಟುಕೊಂಡಿದ್ದು, ಮಧ್ಯಾಹ್ನ ಫಲಾಹಾರಕ್ಕಾಗಿ ಎರಡೇ ಎರಡು (೧+೧) ಬಾಳೆಹಣ್ಣು; ಓದಲಿಕ್ಕಾಗಿ ಒಂದು ಪುಸ್ತಕ; ಗಣಿತ ಲೆಕ್ಕ ಮಾಡಲಿಕ್ಕಾಗಿ ನಾಲ್ಕು ಬಿಳಿ ಹಾಳೆಯ ಕಾಗದ, ಒಂದು ಪೆನ್ಸಿಲ್ಲು-ಇಷ್ಟನ್ನು ಯೂನಿವರ್ಸಿಟಿ

ಪರೀಕ್ಷಾಪತ್ರಿಕೆಗಳಿಗೆ ಆಚ್ಛಾದನೆಗಾಗಿ ಉಪಯೋಗಿಸುವ ಬಟ್ಟೆ ಕಾಗದದ ಚೀಲವೊಂದರಲ್ಲಿ ತೆಗೆದುಕೊಂಡು ಹೋಗುತ್ತಿದ್ದರು. ಆ ನಡಿಗೆ ಜೂಜಿನ ಕುದುರೆಯ ನಡಿಗೆ. ಹಾಗೆ ಮಾಡಿಯೇ ಮೊಣಕಾಲು ನೋವನ್ನು ತಂದುಕೊಂಡಿದ್ದು. ಅದು ಹಾಗಿರಲಿ.

ಒಂದು ದಿನ ಸಂಜೆ ನಾನು, ವೆಂಕಣ್ಣಯ್ಯ ಚಿಕ್ಕಪೇಟೆಯಲ್ಲಿ ಪೂರ್ವದ ಕಡೆಗೆ ಹೋಗುತ್ತಿದ್ದೆವು. ವೆಂಕಟನಾರಣಪ್ಪನವರು ಎದುರುಗಡೆಯಿಂದ ಬರುತ್ತಿದ್ದವರು "ಏನಪ್ಪಾ, ನಿಮ್ಮನ್ನೇ ನೋಡಬೇಕೆಂದಿದ್ದೆ. ನನಗೆ ವೈಸ್‌ಟ್‌ಕೋಟಿಗಾಗಿ ಒಂದು ನಯವಾದ ಕಂಬಳಿ ವ್ಯಾಪಾರ ಮಾಡಿಕೊಡಿ" -ಎಂದರು. ಚಿಕ್ಕ ಕಾಶಿ ವಿಶ್ವೇಶ್ವರನ ಗುಡಿಯ ಪಕ್ಕದಲ್ಲಿ ನನಗೆ ಪರಿಚಿತರಾದ ಕಂಬಳಿ ವ್ಯಾಪಾರಿಗಳೊಬ್ಬರಿದ್ದರು. ಅವರಲ್ಲಿ ಕಂಬಳಿ ಕೊಂಡುಕೊಟ್ಟು "ಇದು ಯಾತಕ್ಕೆ?" ಎಂದು ಕೇಳಿದೆ.

ಅವರು "ಉಳುವಾಗ, ಅಗೆಯುವಾಗ ಮಳೆ ಚಳಿ ಆದರೆ ಮೈ ಬೆಚ್ಚಗಿರುವುದಕ್ಕೆ ಕಂಬಳಿಯ ವೈಸ್‌ಟ್‌ಕೋಟು. ಇನ್ನೇನು ಮಳೆಗಾಲ ಬಂತಲ್ಲಪ್ಪ?" ಎಂದರು. ದರ್ಜಿ ಅಂಗಡಿಗೆ ಹೋಗಿ ಕಂಬಳಿಯ ವೈಸ್‌ಟ್ ಕೋಟಿಗೆ ಏರ್ಪಾಟು ಮಾಡಿದ್ದೂ ಆಯಿತು.

ಎರಡು ಮೂರು ತಿಂಗಳಾದ ಮೇಲೆ ಒಂದು ದಿನ ಕೇಳಿದೆ:

ನಾನು: "ಹೇಗೆ ನಡಯುತ್ತಿದೆ ಶೇದ್ಯ?"

ವೆಂ: "ಚೆನ್ನಾಗಿದೇಪ್ಪ. ಎದೆಯುದ್ದ ಬಂದುಬಿಟ್ಟಿದೆ ಪೈರು."

ನಾನು: "ನಿಮ್ಮ ಸ್ವಂತ ದುಡಿಮೆ ತಾನೆ-ಆ ವೈಸ್‌ಟ್ ಕೋಟ್ ಹಾಕ್ಕೊಂಡು?"

ವೆಂ: "ನನ್ನ ಜೊತೆಯಲ್ಲಿ ಕೆಲಸಮಾಡಲು ಇಬ್ಬರು ಆಳುಗಳನ್ನು ಇಟ್ಟುಕೊಂಡಿದ್ದೇನೆ. ಬೆಳೆಯೇನೋ ಹುಲುಸಾಗಿದೆ. ಅಕ್ಕಪಕ್ಕದ ಜಮೀನುಗಳವರು ದನಗಳನ್ನು ಬಿಟ್ಟುಬಿಡುತ್ತಾರೆ. ಆ ದನ ಬಂದು ನಮ್ಮ ಬೆಳೆಯನ್ನು ಮೇದುಬಿಡುತ್ತವೆ."

ನಾನು: "ಅದಕ್ಕೆ ನಾವೇನು ಮಾಡಲಾಗುತ್ತದೆ?"

ವೆಂ: "ಏನು ಮಾಡಲಾಗುತ್ತದೆಯೇ? ಗೋಡೆ ಕಟ್ಟಬೇಕು."

ಅದರಂತೆ ಅವರೂ ಆಳುಗಳೂ ನಿಂತು ಎದೆಯುದ್ದ ಮಣ್ಣುಗೋಡೆಯನ್ನೆಬ್ಬಿಸಿದರು, ಗದ್ದೆಯ ನಾಲ್ಕು ಪಕ್ಕಗಳಲ್ಲಿಯೂ.

ಇನ್ನು ಎರಡು ತಿಂಗಳು ಕಳೆಯಿತು.

ನಾನು: "ಶೇದ್ಯ ಹೇಗಿದೆ?"

ವೆಂ: "ಹಾಳಾಗಿಹೋಯಿತಪ್ಪ."

ನಾನು: "ಯಾಕೆ ಸಾರ್? ಹುಲುಸಾಗಿದೆಯೆಂದು ಹೇಳಿದ್ದಿರಲ್ಲ?"

ವೆಂ: "ಹೌದಪ್ಪ. ಅತಿ ಹುಲುಸಾಗಿಹೋಯಿತು. ಪೈರು ನನ್ನ ಎತ್ತರವಾಯಿತು. ತೆನೆಯೇ ಬರಲಿಲ್ಲ. ಎಲ್ಲ ಒಣಗಿ ಹುಲ್ಲಾಯಿತು."

ನಾನು: "ಕಾರಣವೇನಿರಬಹುದು?"

ವೆಂ: "ಆ ಹಾಳು ಗೋಡೆ ಕಟ್ಟಿದಪ್ಪಾ-ಪಕ್ಕದ ಜಮೀನುಗಳವರೆಲ್ಲ ಗೋಡೆಯನ್ನು ನೋಡಿ ತಮ್ಮ ತಮ್ಮಲ್ಲೇ ನಗುತ್ತ ಮಾತನಾಡಿಕೊಳ್ಳುತ್ತಿದ್ದರು Rascals. ಗೋಡೆ ಕಟ್ಟಿದರೆ ದಂಟಿಗೆ ಪೋದಿ-ತೆನೆ ಬರುವುದಿಲ್ಲ ಎಂದು ಸ್ಪಷ್ಟವಾಗಿ ನನಗೆ ಹೇಳಲೇ ಇಲ್ಲ. ಬತ್ತ ಬೆಳೆಯಲು ಹೊರಟು ಒಣಹುಲ್ಲು ಬೆಳಸಿದ್ದಾಯಿತು."

ಹೀಗೆ ಹೇಳಿ ನಕ್ಕರು. ತೆಲುಗಿನಲ್ಲಿ ಒಂದು ಜನಪದಗೀತೆಯುಂಟು:

ಯಾಲೇಸ್ತ್ವೀ ನರಸಪ್ಪ
ಚೆರುಕು ತೋಟ-
ಬಂಕನಾಲೇಸ್ತ್ವಿ ನರಸಪ್ಪ
ಚೆರುಕು ತೋಟ....

ಸ್ವಸಹಾಯ ಸಂಘ

ವೆಂಕಟನಾರಣಪ್ಪನವರ ಮನಸ್ಸು ಈಗಿನ ಧರ್ಮಗ್ಲಾನಿಯ ವಿಷಯದಲ್ಲಿ ತುಂಬಾ ಚಿಂತಾಕ್ರಾಂತವಾಗಿತ್ತು. ತುರ್ತು ಕೆಲಸ ಬೇರೆ ಇಲ್ಲದಿದ್ದಾಗ "ನಮ್ಮ ದೇಶದಲ್ಲಿ ಧರ್ಮ ಅಳಿಸಿಹೋಗುತ್ತಿದೆಯಲ್ಲ! ಬ್ರಾಹ್ಮಣ್ಯ ಭ್ರಷ್ಟವಾಗುತ್ತಿದೆಯಲ್ಲ! ವಿದ್ಯಾರ್ಥಿಗಳು ನೀತಿಗೆಡುತ್ತಿದ್ದಾರಲ್ಲಾ!" -ಈ ಮಾತನ್ನೆತ್ತುವರು. ಬಹುಜನ ಸ್ನೇಹಿತರೊಡನೆ ಈ ಪ್ರಶ್ನೆಗಳನ್ನೆತ್ತಿದ್ದರು. ಯಾರಿಂದಲೂ ಯಾವ ಸಮಾಧಾನವೂ ಬರುವಂತೆ ತೋರಲಿಲ್ಲ. ಕಡೆಗೆ ಅವರು ಒಂದೆರಡು ನಿರ್ಧಾರಗಳಿಗೆ ಬಂದರು.

(೧) ಬ್ರಾಹ್ಮಣರು ಹೆಚ್ಚು ಹೆಚ್ಚಾಗಿ ಭೂವ್ಯವಸಾಯವನ್ನು ಹಿಡಿಯಬೇಕಾದದ್ದು. ಅದರಲ್ಲಿ ಎಷ್ಟೋ ಕಷ್ಟಗಳಿರುವುದು ನಿಜ, ಆದರೂ ಗಟ್ಟಿ ಮನಸ್ಸು ಮಾಡಿ ಅದರಿಂದ ಸ್ವಾವಲಂಬಿಯಾಗಬೇಕು. ಬ್ರಾಹ್ಮಣ್ಯಕ್ಕೆ ಪರಾವಲಂಬನೆಯೇ ಮೃತ್ಯು. ಕೃಷಿಯು ಸ್ವಾವಲಂಬನದ ಮಾರ್ಗ. ಬ್ರಾಹ್ಮಣ ಅದರಿಂದ ಹೊಟ್ಟೆಪಾಡು ನಡೆಸಿಕೊಂಡು, ತನ್ನ ವಿರಾಮಕಾಲವನ್ನೆಲ್ಲ ವೇದಶಾಸ್ತ್ರ ವಿಜ್ಞಾನಾದಿಗಳಿಗೆ ವಿನಿಯೋಗಿಸಬೇಕು.

(೨) ಬ್ರಾಹ್ಮಣ ವಿದ್ಯಾರ್ಥಿಗಳು ಸ್ವಾವಲಂಬಿಗಳಾಗಿ ವಿದ್ಯಾರ್ಜನೆ ಮಾಡಬೇಕು. ಇದಕ್ಕಾಗಿ Self-Help Club (ಸ್ವಸಹಾಯ ಸಂಘ) ಒಂದು ಏರ್ಪಡಬೇಕು. ಸಂಘದ ಚಾಲಕರು ವಿದ್ಯಾರ್ಥಿಗಳಿಗೆ ಒಂದು ವಸತಿ ಗೃಹವನ್ನು ಉಚಿತಾರ್ಥವಾಗಿ ಒದಗಿಸತಕ್ಕದ್ದು. ಹಾಗೆಯೇ ಅಡಿಗೆಯ ಪಾತ್ರೆಪರಿಕರಗಳನ್ನು ಒದಗಿಸತಕ್ಕದ್ದು. ಈ ಸಂಸ್ಥೆಯನ್ನು ಸೇರುವ ವಿದ್ಯಾರ್ಥಿಗಳಾದರೋ ತಾವೇ ಒಟ್ಟುಗೂಡಿ ಅಡಿಗೆ ಮಾಡತಕ್ಕದ್ದು; ಒಬ್ಬೊಬ್ಬನದು ಒಂದೊಂದು ದಿನದ ಸರದಿ. ತಮ್ಮ ಬಟ್ಟೆಗಳನ್ನು ತಾವೇ ಒಗೆದುಕೊಳ್ಳ ತಕ್ಕದ್ದು, ಮನೆಯನ್ನು ತಾವೇ ಗುಡಿಸಿ ಚೊಕ್ಕಟಮಾಡಿಕೊಳ್ಳತಕ್ಕದ್ದು ಮತ್ತು ತಮ್ಮ ಭೋಜನಕ್ಕಾಗಿ ತಗಲುವ ವೆಚ್ಚವನ್ನು ತಿಂಗಳಿಗೊಂದಾವರ್ತಿ ಹಂಚಿಕೊಂಡು ಭರಿಸತಕ್ಕದ್ದು.

ಹೀಗೆ ಐದು ಮಂದಿ ಬ್ರಾಹ್ಮಣ ವಿದ್ಯಾರ್ಥಿಗಳು ಸೇರಿ Self-Help Club ಪ್ರಾರಂಭ ಮಾಡಿದ್ದಾಯಿತು. ವೆಂಕಟನಾರಣಪ್ಪನವರು ಆಗ ನಾಗಸಂದ್ರ ರಸ್ತೆಯಲ್ಲಿ ತಮ್ಮ ಅಧೀನದಲ್ಲಿದ್ದ ಮನೆಯನ್ನು ಈ ಕಾರ್ಯಕ್ಕಾಗಿ ಕೊಟ್ಟರು ಧರ್ಮಾರ್ಥ; ಬಾಡಿಗೆಯಿಲ್ಲದೆ. ವಿದ್ಯಾರ್ಥಿ ಮಂದಿರವು ಕೆಲವು ತಿಂಗಳ ಕಾಲ ನಡೆಯಿತು. ಅದು ನಿಂತುಹೋದದ್ದಕ್ಕೆ ಕಾರಣ ವಿದ್ಯಾರ್ಥಿಗಳಲ್ಲಿ ಕೆಲವರ ನಿರುತ್ಸಾಹವೆಂದು ವೆಂಕಟನಾರಣಪ್ಪನವರ ಅಭಿಪ್ರಾಯ. ಮನೆ ಗುಡಿಸುವುದು, ಮುಸುರೆ ತಿಕ್ಕುವುದು, ಅಡಿಗೆ ಮನೆಯ ನೂರಾರು

ಚಿಲ್ಲನೆ ಕೆಲಸಗಳನ್ನು ಮಾಡುವುದು-ಈ ವಿಧವಾದ ರೇಜಿಗೆ (Drudgery) ವಿದ್ಯಾರ್ಥಿಗಳ ಸಹನೆಗೆ ಮೀರಿದ್ದಾಯಿತೇನೊ! ಒಬ್ಬೊಬ್ಬರಾಗಿ ಕಳಚಿಕೊಂಡರು.

ಈ ಮನೋವೃತ್ತಿ ಎಲ್ಲ ಮನುಷ್ಯರಿಗೂ ಸಹಜವಾದದ್ದೇ. ಆದರೆ ಬ್ರಾಹ್ಮಣರು ತಪಸ್ವಿಗಳ ವಂಶದವರೆಂದು ಹೇಳಿಕೊಳ್ಳುತ್ತಾರೆ. ಪ್ರವರ ಹೇಳುವಾಗ ಮಹರ್ಷಿಗಳನ್ನು ಸ್ಮರಿಸುತ್ತಾರೆ. ಆದರೆ ತಪಶ್ಚರ್ಯೆ ಇತರ ಜನರಿಗೆ ಹೇಗೆ ಬೇಡವೆನ್ನಿಸುತ್ತದೆಯೋ ಹಾಗೆಯೇ ಬ್ರಾಹ್ಮಣರಿಗೂ ಅದು ಬೇಡವಾಗಿದೆ. ಅವರೂ ಇತರರಂತೆ ಲೋಲುಪರಾಗಬೇಕೆನ್ನುವವರೇ ಆಗಿದ್ದಾರೆ ಈಗ.

***

ಇಂಥ ಅನುಭವ ನನ್ನದಿನ್ನೊಂದಿದೆ. ಒಂದಾನೊಂದು ಅನಾಥ ಸ್ತ್ರೀ ರಕ್ಷಣಾಲಯದಲ್ಲಿ ಒಂದು ದಿನ ಕಿಟಕಿಗಳಿಗೆ ತುಂಬ ಗೆದ್ದಲು ಹತ್ತಿದ್ದದ್ದು ಕಾಣಿಸಿತು. ಆ ಸಂಸ್ಥೆಯ ಒಬ್ಬ ನಿವಾಸಿಯನ್ನು ಕರೆದು ಕೇಳಿದೆ:

"ಏನಮ್ಮ ಹೀಗೆ ಗೆದ್ದಲು ಬೆಳಸಿಕೊಂಡಿದ್ದೀರಿ?"

"ಎರಡು ಮೂರು ದಿನದಿಂದ ಗುಡಿಸುವವಳು ಬರಲಿಲ್ಲ."

"ನೀವೇ ಪೊರಕೆ ತೆಗೆದುಕೊಂಡು ಗುಡಿಸುವುದಕ್ಕಾಗುವುದಿಲ್ಲವೆ? ನಿಮ್ಮ ಸ್ವಂತ ಮನೆಯಾಗಿದ್ದಿದ್ದರೆ ಮಾಡುತ್ತಿರಲಿಲ್ಲವೆ?"

"ಅವಳು ಹೇಳಿದ ಮಾತು ಕೇಳುವುದೇ ಇಲ್ಲ."

ಅನಾಥೆಯಾಗಿರುವಾಕೆಗೆ ಸಹ ಸ್ವಪ್ರಯಾಸದ ಔಚಿತ್ಯ ತಿಳಿದುಬಂದಿರಲಿಲ್ಲ.

ಇಂಥ ಅಕಟ ವಿಕಟ ಪ್ರಪಂಚದಲ್ಲಿ ವೆಂಕಟನಾರಣಪ್ಪನವರ ಸುಧಾರಣ ಪ್ರಯತ್ನ.

ಸೌಂದರ್ಯ ಜಿಜ್ಞಾಸೆ

ಒಂದು ಸಾರಿ ಬೆಂಗಳೂರು ಮಿಥಿಕ್ ಸೊಸೈಟಿಯ ಮೆಂಬರುಗಳು ಕೆಲವರು ಚರಿತ್ರಾರ್ಹವಾದ ಹಂಪೆಯನ್ನು ನೋಡಹೋದರು. ಆ ಗುಂಪಿನಲ್ಲಿದ್ದವರು ಫಾದರ್ ಟಬಾರ್ಡ್, ಮಿ ॥ ಎಫ್.ಜೆ.ರಿಚರ್ಡ್ (ಐಸಿಎಸ್), ಪ್ರೊ ॥ ಸಿ. ಮೆಟ್‌ಕಾಫ್ ಮೊದಲಾದ ನಾಲ್ವರೈವರು ಯೂರೋಪಿಯನ್ನರು, (ಹಿಸ್ಟರಿ ಪ್ರೊಫೆಸರ್) ಎಸ್.ಕೃಷ್ಣಸ್ವಾಮಿ ಐಯಂಗಾರ್, ವೆಂಕಟನಾರಣಪ್ಪ ಮೊದಲಾದ ನಾಲ್ಕೈದು ಮಂದಿ ಭಾರತೀಯರು ಇದ್ದರು. ಆ ದಿವಸ ನೋಡಬೇಕಾಗಿದ್ದದ್ದನ್ನೆಲ್ಲ ನೋಡಿದ್ದಾದ ಮೇಲೆ ಸಂಜೆ ಸೂರ್ಯಾಸ್ತಮಾನದ ಸೊಗಸನ್ನು ಒಂದು ಬೆಟ್ಟದ ಮೇಲ್ಗಡೆಯಿಂದ ನೋಡಬೇಕೆಂದು ಉದ್ದೇಶ ಪಟ್ಟು ಆ ಗುಂಪು ಗುಡ್ಡದ ಕಡೆಗೆ ಅವಸರವಸರವಾಗಿ ನಡೆಯುತ್ತಿತ್ತು. ದಾರಿಯಲ್ಲಿ ಕೃಷ್ಣಸ್ವಾಮಿ ಐಯಂಗಾರ್ಯರಿಗೂ ವೆಂಕಟನಾರಣಪ್ಪನವರಿಗೂ ಒಂದು ವಾಗ್ವಾದ ಹುಟ್ಟಿತು: ಸೂರ್ಯಾಸ್ತಮಾನದ ಸೊಗಸು ಋಷ್ಯಮೂಕ ಪರ್ವತದಿಂದ ನೋಡಲು ಚೆನ್ನವೆ, ಮಾಲ್ಯವಂತದಿಂದಲೆ?-ಇದು ಪ್ರಶ್ನೆ. ಆ ಎರಡು ಬೆಟ್ಟಗಳ ಪೈಕಿ ಯಾವುದೋ ಒಂದರ ತುದಿಯಿಂದ ಬಹು ಸೊಗಸೆಂದು ಒಂದಾನೊಂದು ಪುಸ್ತಕದಲ್ಲಿ ವರ್ಣಿಸಿತ್ತಂತೆ. ಆ ಪುಸ್ತಕ ಈಗ ಒಬ್ಬರ ಬಳಿಯೂ ಇರಲಿಲ್ಲ. ಆದ್ದರಿಂದ ವಾಗ್ವಾದ.

ಚರ್ಚೆ ನಡೆದಂತೆಲ್ಲ ಧ್ವನಿ ಜೋರಾಯಿತು. ಮಾತು ಬಿಸಿಬಿಸಿಯಾಯಿತು. ಇಬ್ಬರೂನಿಂತು ಜಗಳವಾಡುತ್ತಿದ್ದರು. ಮಿಕ್ಕವರು ವೇಗವೇಗವಾಗಿ ಮುಂದೆ ನಡೆದು ಹೋಗುತ್ತಿದ್ದರು. ಮೆಟ್‌ಕಾಫ್‌ರವರು ತಮ್ಮ ಸಹೋದ್ಯೋಗಿಗಳಾದ ಇಬ್ಬರು ಪ್ರೊಫೆಸರುಗಳೂ ಕಾದಾಡಿಕೊಂಡು ಹಿಂದೆ ನಿಂತಿದ್ದನ್ನು ಗಮನಿಸಿದರು. ಅವರು, ಟಬಾರ್ಡ್‌ರವರು ಹಿಡಿದಿದ್ದ ಕಟ್ಟಿಗೆಯನ್ನು ಅವರ ಕೈಯಿಂದಲೂ ರಿಚರ್ಡ್ ರವರು ಹಿಡಿದಿದ್ದ ಕಟ್ಟಿಗೆಯನ್ನು ಅವರ ಕೈಯಿಂದಲೂ ತೆಗೆದುಕೊಂಡು ಪ್ರೊಫೆಸರುಗಳಿದ್ದ ಕಡೆಗೆ ಬಂದು ಒಬ್ಬೊಬ್ಬರ ಕೈಗೆ ಒಂದೊಂದು ಕಟ್ಟಿಗೆಯನ್ನು ಕೊಟ್ಟರು. ವೆಂಕಟನಾರಣಪ್ಪನವರು ಕೇಳಿದರು:

ವೆಂ: “ಇದು ಏನು?”

ಮೆ: “ಈ ಕಟ್ಟಿಗೆಗಳ ಬಡಿದಾಟದಿಂದ ನಿಮ್ಮ ವ್ಯಾಜ್ಯ ಬೇಗ ಫೈಸಲಾಗಲಿ. ಹಾಗಾಗದಿದ್ದರೆ ಸೂರ್ಯಾಸ್ತಮಾನ ನಿಮಗಾಗಿ ಕಾದುಕೊಂಡಿರುವುದಿಲ್ಲ.”

ಇಬ್ಬರು ಪ್ರೊಫೆಸರುಗಳಿಗೂ ಅರ್ಥವಾಗಿ ಇಬ್ಬರೂ ನಕ್ಕು ಮಿಕ್ಕವರೊಡನೆ ಮುಂದಕ್ಕೆ ನಡೆದರು. ವೆಂಕಟನಾರಣಪ್ಪನವರೂ ಕೃಷ್ಣಸ್ವಾಮಿ ಐಯ್ಯಂಗಾರ್ಯರೂ ಅದಕ್ಕೆ

ಹಿಂದೆಯೂ ಗಾಢ ಸ್ನೇಹಿತರು, ಆಮೇಲೂ ಗಾಢ ಸ್ನೇಹಿತರೇ. ಸ್ನೇಹದಷ್ಟಕ್ಕೆ ಸ್ನೇಹ, ತರ್ಕವೆದ್ದರೆ ತರ್ಕ. ಎರಡೂ ತೀವ್ರವೇ.

ಒಂದು ಪ್ರವಾಸ

ಚಿಕ್ಕಮಗಳೂರಿನ ಸಾಹಿತ್ಯಸಮ್ಮೇಳನ ಮುಗಿದ ದಿವಸ ರಾತ್ರಿ ಎಂಟು ಹತ್ತು ಮಂದಿ ಪ್ರಯಾಣ ಮಾಡಿ ಮಾರನೆಯ ದಿನ ಬಾಬಾಬುಡನ್ ಶಿಖರವನ್ನು ಸೇರಿ ಅಲ್ಲಿ ದತ್ತಾತ್ರೇಯ ಪೀಠ ಮೊದಲಾದ ಪ್ರೇಕ್ಷಣೀಯ ಸ್ಥಳಗಳನ್ನು ನೋಡತಕ್ಕದ್ದೆಂದು ನಿಶ್ಚಯಿಸಿಕೊಂಡೆವು. ಅದರಂತೆ ಎಲ್ಲ ಸಿದ್ಧತೆಯೂ ಆಯಿತು. ಡೆಪ್ಯುಟಿ ಕಮಿಷನರ್ ಕೆ.ಮೈಲಾರಿರಾಯರ ಕೃಪೆಯಿಂದ ನಾಲ್ಕೈದು ಜೋಡೆತ್ತಿನ ಗಾಡಿಗಳು ಸಿದ್ಧವಾಗಿ ನಿಂತವು. ರಾತ್ರಿ ಸುಮಾರು ಒಂಭತ್ತು ಘಂಟೆ. ನಮ್ಮ ಏರ್ಪಾಟನ್ನು ಯಾರಿಗೂ ತಿಳಿಸತಕ್ಕದ್ದಲ್ಲವೆಂದು ಗುಟ್ಟಾಗಿ ಇಟ್ಟುಕೊಂಡಿದ್ದೆವು. ನೂರು ಮಂದಿ ಒಟ್ಟಿಗೆ ಬಿಡಾರ ಮಾಡಿರುವ ಕಡೆ ಗುಟ್ಟು ಸಾಧ್ಯವೆ? ಸಮ್ಮೇಳನಕ್ಕೆಂದು ಬಂದಿದ್ದವರಲ್ಲಿ ಯಾರೋ ಸುಳಿವು ಕಂಡುಕೊಂಡು, ನಮಗಿಂತ ಮುಂಚೆ ಆ ಗಾಡಿಗಳಲ್ಲಿ ಕುಳಿತುಬಿಟ್ಟರು. ಅವರಲ್ಲಿ ಗಂಡಸರು ಮಾತ್ರವೇ ಅಲ್ಲ, ಅವರ ಹೆಂಡತಿಯರೂ ಇತರ ಹೆಂಗಸರೂ ಇದ್ದರು.

ಗಾಡಿ ಒಂದೆರಡು ಮೈಲಿ ಸಾಗುವಷ್ಟರೊಳಗಾಗಿ ಅವರು ತೂಕಡಿಸೋಣ, ಪಕ್ಕದವರಿಗೆ ಮೈ ತಗುಲೋಣ-ಮೊದಲಾದ ಅವಸ್ಥೆಗಳು ಆರಂಭಿಸಿದವು. ಇದು ಅಸಹ್ಯವೆನಿಸಿದ ನಾಲ್ವರು ಗಾಡಿಯಿಂದಿಳಿದು ಕಾಲುನಡಿಗೆಗೆ ಮನಸ್ಸು ಮಾಡಿದೆವು-ವೆಂಕಣ್ಣಯ್ಯ ಶ್ರೀನಿವಾಸಮೂರ್ತಿ, ನಾನು, ಇನ್ನೊಬ್ಬರು. ನಾವು ನಾಲ್ವರೂ ಹರಟಿಕೊಂಡೂ ಹಾಡಿಕೊಂಡೂ ರಾತ್ರಿಯೆಲ್ಲ ಬೆಟ್ಟ ಹತ್ತಿದೆವು.

ಸ್ವಲ್ಪ ದೂರ ಕಳೆದ ಮೇಲೆ ಬೆಳುದಿಂಗಳು ಬಂದಿತು-ಸೊಗಸಾದ ಬೆಳುದಿಂಗಳು. ನಾವು ನಡೆದುಬರುತ್ತಿರುವಾಗ ದಾರಿಯಲ್ಲೊಂದು ಕಡೆ ನಮ್ಮ ಪಾರ್ಟಿಯ ಗಾಡಿಗಳು ನಿಂತಿದ್ದವು. ಕಾರಣವೇನೆಂದು ವಿಚಾರಿಸಿದೆವು. ಆ ಪಕ್ಕದಲ್ಲೆಲ್ಲೋ ಹುಲಿಯೋ ಚಿರತೆಯೋ ನಡೆಯುತ್ತಿದ್ದದ್ದು ಕಾಣಿಸಿತಂತೆ. ಗಂಡ ಕಳೆಯಿತೆಂದು ತೋರಿದಕೂಡಲೆ ಗಾಡಿಗಳು ಮುಂದಕ್ಕೆ ಸಾಗಿದವು. ನಾವು ಎಲ್ಲಿಯೂ ನಿಲ್ಲದೆ ನಡೆಯುತ್ತಲೇ ಇದ್ದೆವು. ಕವೀಕಲ್ಲು ಕಂಡಿ ಎಂಬಲ್ಲಿಗೆ ನಾವು ಬರುವಾಗ್ಗೆ ಬೆಳಗ್ಗೆ ಸುಮಾರು ಐದು ಘಂಟೆ.

ಅಲ್ಲಿ ಬೆಟ್ಟದ ದಾರಿ ಒಂದು ಪಾರ್ಶದಿಂದ ಇನ್ನೊಂದು ಪಾರ್ಶಕ್ಕೆ ಹೊರಳುತ್ತದೆ. ಆಗ ನಮ್ಮ ಕಾಲುಗಳು ಗೋಳಾಟಕ್ಕಾರಂಭಿಸಿದ್ದವು. ನಾವು ಆಗ ಬೆಟ್ಟದ ಒಳಪಕ್ಕದ ಮಾಳಿಗೆಯ ಮೇಲೆ ಕೊಂಚ ವಿಶ್ರಾಂತಿಗಾಗಿ ಕುಳಿತುಕೊಂಡೆವು. ತಂಗಾಳಿ ಬೇಗನೆ ನಮ್ಮ ದಣಿಯನ್ನು ಮರೆಯಿಸಿತು. ಮುಂಬೆಳಗು ಜಾಗರ್ ಕಣಿವೆಯನ್ನು ಹಸಿರು ಮುಖಮಲ್ ಜಮಖಾನವೆಂಬಂತೆ ತೋರಿಸಿತು. ಸುಮಾರು ಅರ್ಧಘಂಟೆ ನವಚೈತನ್ಯ

ತುಂಬಿಸಿಕೊಂಡು ನಾವು ಮತ್ತೆ ನಡೆದೆವು-ಕೆಮ್ಮಣ್ಣುಗುಂಡಿಯ ಬಂಗಲೆಯವರೆಗೆ. ಅಲ್ಲಿ ಆ ಹೊತ್ತು ನಮ್ಮ ಬಿಡಾರ.

ವೆಂಕಟನಾರಣಪ್ಪನವರೂ ಇಬ್ಬರು ನಂಜುಂಡಶಾಸ್ತ್ರಿಗಳೂ ಪಂಡಿತ ಹನುಮಂತರಾಯರೂ ಮೊದಲು ಸ್ನಾನಮಾಡಿ ಪಾಕಕ್ಕೆ ನಿಂತರು. ನಮಗೆ ಕಾಫಿಯನ್ನು ಮಾಡಿಟ್ಟರು. ನಾವು ಚೇತರಿಸಿಕೊಂಡು ಸ್ನಾನಮಾಡಿದ್ದಾದ ಮೇಲೆ ಒಂದು ಪ್ರಶ್ನೆ: ಊಟವಾದ ಮೇಲೆ ದತ್ತಾತ್ರೇಯ ಪೀಠವೆ, ಪೀಠಕ್ಕೆ ಹೋಗಿಬಂದ ಮೇಲೆ ಊಟವೆ? ಯಜಮಾನರಿಗೂ ಪಂಡಿತರುಗಳಿಗೂ ಮಡಿಯ ಅವಾಂತರ. ಪೀಠಕ್ಕೆ ಹೋಗಿಬಂದ ಮೇಲೆಂದರೆ ಮತ್ತೆ ಮಡಿಯಾಗಬೇಕಾಗುತ್ತದೆ. ಅದು ಕಾಲವನ್ನು ತಿನ್ನುತ್ತದೆ, ಆದದ್ದರಿಂದ ಕೂಡಲೆ ಭೋಜನವಾಯಿತು. ಬಳಿಕ ದತ್ತಾತ್ರೇಯ ಗುಹೆ ಮೊದಲಾದ ಸ್ಥಳಗಳಿಗೆ ನಡೆದುಹೋಗಿ ಹಿಂದಕ್ಕೆ ಬರುವ ವೇಳೆಗೆ ಘಂಟೆ ಮಧ್ಯಾಹ್ನ ೧ ಆಗಿದ್ದಿರಬೇಕು.

ನಾವು ಬರುತ್ತಿರುವಂತೆಯೇ ವೆಂಕಟನಾರಣಪ್ಪನವರು ಗಾಡಿಯವರನ್ನು ಕರೆದು ಹೇಳಿದರು:

ವೆಂ: “ಕಟ್ಟೀಪ್ಪ ಗಾಡಿಗಳನ್ನ.”

ನಾನು: “ಏಕೆ ಸಾರ್ ಗಾಡಿ?”

ವೆಂ: “ವಾಪಸ್ಸು ಹೋಗುವುದಕ್ಕೆ.”

ನಾನು: “ರಾತ್ರಿ ಇಲ್ಲಿರಬೇಡವೆ ಸಾರ್?”

ವೆಂ: “ರಾತ್ರಿ ಯಾಕೆ, ಮೊಣ್ಣು ಹೊಯ್ಕೊಳ್ಳೋಕೆ?”

ನಾನು: “ಅಲ್ಲ ಸಾರ್; ಇಷ್ಟು ದೂರ ಬಂದೂ ಚೆನ್ನಾಗಿ ನೋಡಬೇಡವೆ?”

ವೆಂ: “ಇಷ್ಟು ಹೊತ್ತು ಮಾಡಿದ್ದೇನು ನೋಡಿದ್ದೇ ಅಲ್ಲವೆ?”

ನಾನು: “ಪ್ರಕೃತಿಯ ವೈಭವವನ್ನು ಹೀಗೇನೆ ಸಾರ್ ನೋಡುವುದು? ಸೂರ್ಯನ ಝಳದಲ್ಲಿ ಎಲ್ಲ ಒಡ್ಡೊಡ್ಡು, ಒರಟೊರಟು. ಎಲ್ಲ ನೀರಸ. ಇದು ಬರಿಯ ಪ್ರೋಸ್ (Prose -ವಚನ, ಗದ್ಯ), ರಾತ್ರಿಯಾದರೆ ಬೆಳುದಿಂಗಳು ಇರುತ್ತದೆ. ಚಂದ್ರಿಕೆಯಲ್ಲಿ ಎಲ್ಲ ಮೃದುವಾಗಿ, ನುಣುಪಾಗಿ, ರಸವಂತವಾಗಿ ಕಣ್ಣಿಗೆ ಕಾಣುತ್ತದೆ.”

ವೆಂ: “ಅದೆಲ್ಲ ನಿಮ್ಮ ಭ್ರಾಂತಿ. ಗಾಡಿಯಲ್ಲಿ ಕುಳಿತು ಹೋಗುವಾಗ ಕಣ್ಣು ಪಿಳಪಿಳ ಬಿಟ್ಟುಕೊಂಡು ಕುಳಿತಿರಿ, ಬೆಳುದಿಂಗಳನ್ನೇ ನೋಡುತ್ತಿರಿ.”

ನಾನು: “ಹಾಗೇ ನೋಡುವುದಕ್ಕಾಗುತ್ತದೆಯೆ ಸಾರ್, ಬೆಟ್ಟವನ್ನ, ಕಾಡನ್ನ?”

ವೆಂ: “ನಿನ್ನೆ ರಾತ್ರಿ ಬಂದದ್ದು ಜ್ಞಾಪಕವಿದೆಯೋ ಇಲ್ಲವೋ? ಹುಲಿಯೋ ಚಿರತೆಯೋ ಬಂದರೆ ಏನು ಮಾಡುತ್ತೀರಿ?”

ನಾನು: “ದಾರಿಯಲ್ಲಿ ಆ ಭಯ. ನಾವು ಇಲ್ಲೇ ಇದ್ದು ಬಂಗಲೆಯ ವರಾಂಡದಿಂದ ನೋಡೋಣ. ಆಕಾಶದಿಂದ ಪ್ರಕೃತಿವೈಭವ, ಭೂಮಿಯಿಂದ ಪ್ರಕೃತಿವೈಭವ.”

ವೆಂ: “ಸರಿ ಸರಿ. ಊರಿಗೆ ಹೋಗಿ ರಾಜಶೇಖರವಿಲಾಸವನ್ನೋ ಜೈಮಿನಿಯನ್ನೋ ಓದಿ ಆ ವೈಭವಗಳನ್ನು ನೋಡಿ.”

ಮಾತು ಹೀಗೆ ನಡೆಯುತ್ತಿದ್ದಾಗ ಗಾಡಿಗಳು ಭರ್ತಿಯಾಗಿ ಸಾಗ ಹೊರಟವು. ವೆಂಕಟನಾರಣಪ್ಪನವರು ನಮಗೆ ಒಂದು ಅನುಕೂಲ ಮಾಡಿಸಿದ್ದರು. ಹೆಂಗಸರನ್ನೂ ಅವರ ಗಂಡಸರನ್ನೂ ಪಾತ್ರೆಪದಾರ್ಥಗಳನ್ನೂ ಆಳುಗಳನ್ನೂ ಒಂದು ಗಾಡಿಯಲ್ಲಿ ರವಾನೆ ಮಾಡಿ, ಹಿಂದಿನ ರಾತ್ರಿ ನಿದ್ದೆಗೆಟ್ಟಿದ್ದ ನಮಗಾಗಿ ಒಂದು ಗಾಡಿಯನ್ನು ಇರಿಸಿದ್ದರು. ಎಲ್ಲ ಅವಸರವಸರವಾಯಿತೆಂದೂ ಬಾಬಾಬುಡನ್‌ಗಿರಿ ಬೆಳುದಿಂಗಳಲ್ಲಿ ಎಷ್ಟು ಚೆನ್ನಾಗಿದ್ದೀತೋ ಎಂದೂ ಗೊಣಗಾಡಿಕೊಂಡು ನಾವು ಪಯಣಿಸಿದೆವು.

ಎರಡು ಸಮುದ್ರಗಳ ಸಂಗ ಬೆಳುದಿಂಗಳಲ್ಲಿ ಚೆಂದ ಎಂದಾಗ, “ಅದರಲ್ಲೇನಿರುತ್ತೆ ವಿಶೇಷ?” -ಎಂದರು ವಿಶ್ವೇಶ್ವರಯ್ಯನವರು.

ಬೆಟ್ಟ ಕಣಿವೆ ಕಾಡುಗಳು ಬೆಳುದಿಂಗಳಲ್ಲಿ ಚೆಂದ ಎಂದಾಗ, “ಅದರಲ್ಲೇನಿರುತ್ತೆ ಮೊಣ್ಣು?” -ಎಂದರು ವೆಂಕಟನಾರಣಪ್ಪನವರು.

ಏನಿರುತ್ತದೆ ಹೇಳುವುದಕ್ಕೆ? ಹೇಳಲಾಗದೆ ಒಳಗೇ ಅನುಭವಿಸುವುದಕ್ಕೆ ಏನಾದರೂ ಇದ್ದೀತು.

ಒಪ್ಪ ಓರಣ

ಪರಿಷತ್ತಿನ ಕಾರ್ಯಾಲಯದಲ್ಲಿ ಸಹಾಯಕನಾಗಿರಲು ಒಬ್ಬ ಇಸಮು ಬೇಕಾಗಿತ್ತು. ನಾನು -ರಾವ್ ಎಂಬಾತನನ್ನು ಶಿಫಾರಸು ಮಾಡಿದೆ. ಈತ ನಾಲ್ಕೈದು ಕಡೆ ಕೆಲಸ ಮಾಡಿ ಏನೋ ಜಗಳಮಾಡಿಕೊಂಡು ಕೆಲಸ ಕಳೆದುಕೊಂಡಿದ್ದ. ಈಗ ಆತ ವಿನಯ ಕಲಿತಿರಬಹುದೆಂದು ತಿಳಿದಿದ್ದೆ. ಆತ ತಾನು ಇಂಗ್ಲಿಷಿನಲ್ಲಿ ಬಹು ಸಮರ್ಥನೆಂದು ತಿಳಿದು ಕೊಂಡಿದ್ದ. ಸ್ವಭಾವದಲ್ಲಿ ಸ್ವಪ್ರತಿಷ್ಠೆಯೂ ಧೋರಣೆಯೂ ಇದ್ದವು. ಆದರೆ ಪ್ರಾಮಾಣಿಕ.

ಆತ ಒಂದು ದಿನ ಬಂದು ವೆಂಕಟನಾರಣಪ್ಪನವರು ಚಿಲ್ಲರೆ ವಿಷಯಗಳಲ್ಲೆಲ್ಲ ರಗಳೆ ಮಾಡುವವರು ಎಂದು ಮೊದಲಾಗಿ ದೂರುಮಾಡಿದ. ಮಾರನೆಯ ದಿನ ನಾನು ಷರಿಷತ್ತಿಗೆ ಹೋದಾಗ ವೆಂಕಟನಾರಣಪ್ಪನವರು

“ಇಲ್ಲಿ ನೋಡಪ್ಪಾ ನಿಮ್ಮ ಸ್ನೇಹಿತ ಮಾಡಿರೋದನ್ನ.”

-ಎಂದು ಹೇಳಿ, ಮೂರು ನಾಲ್ಕು ವಾಪಸ್ಸು ಬಂದಿದ್ದ ಕಾರ್ಡು ಕವರುಗಳನ್ನು ನನ್ನ ಮುಂದೆ ಇಟ್ಟರು. ಆ ಕಾರ್ಡು ಕವರುಗಳು, ಪರಿಷತ್ತಿನ ಕಛೇರಿಯಿಂದ ಯಾರು ಯಾರಿಗೋ ಹೋಗಿ ವಿಳಾಸದಾರರು ಪತ್ತೆಯಿಲ್ಲವೆಂಬ ಕಾರಣದಿಂದಲೋ ಇನ್ನು ಏಕೋ ಹಿಂದಕ್ಕೆ ಬಂದಿದ್ದವು. ನನಗೆ ಅದರಲ್ಲಿ ತಪ್ಪೇನೂ ಕಾಣಿಸಲಿಲ್ಲ. “ವಿಳಾಸದಾರರು ಸಿಕ್ಕದಿದ್ದರೆ ಪೋಸ್ಟ್ ಆಫೀಸಿನವರು ಇನ್ನು ಏನು ಮಾಡಿಯಾರು?” ಎಂದು ಕೇಳಿದೆ.

ವೆಂಕಟನಾರಣಪ್ಪನವರು ಹೇಳಿದರು:

“ನಾನು ಹೇಳುವುದು ಪೋಸ್ಟಾಫೀಸಿನ ಮಾತಲ್ಲ. ನಿಮ್ಮ ರಾಯರು ಪೋಸ್ಟ್‌ಸ್ಟಾಂಪನ್ನು ಅಂಟಿಸಿರುವ ರೀತಿ ನೋಡಿ.”

ನಮ್ಮ ರಾಯರು ಸ್ಟಾಂಪ್ ಚೀಟಿಯನ್ನು ಸೊಟ್ಟಾಪಟ್ಟೆ ಮೆತ್ತಿದ್ದರು. ಕೆಲವು ತಲೆ ಕೆಳಗಾಗಿದ್ದವು. ಕಾರ್ಡಿನ ಮೇಲೆ ಎಲ್ಲೆಲ್ಲಿಯೋ ಮೆತ್ತಿದ್ದರು. ವೆಂಕಟನಾರಣಪ್ಪನವರ ಇಂಗಿತ ನನಗೆ ತಿಳಿಯಿತು. ನಾನು ಹೇಳಿದೆ:

“ಪೋಸ್ಟ್ ಆಫೀಸಿಗೆ ಬೇಕಾದದ್ದು ಹಣ ತಾನೆ ಸಾರ್? ಹಣ ಸಂದಿದೆ.”

ವೆಂ: "ಪೋಸ್ಟ್ ಆಫೀಸಿಗೆ ಬೇಕಾದದ್ದು ಹಣ; ವಿಳಾಸದಾರರಿಗೆ ಸಲ್ಲಬೇಕಾದದ್ದು ಮರ್ಯಾದೆ. ಅವರು ಇದನ್ನು ನೋಡಿದ್ದಿದ್ದರೆ ಸಂತೋಷಪಡುತ್ತಿದ್ದರೋ? ಅದು ಹೋಗಲಿ. ನಿಮ್ಮ ಕಣ್ಣಿಗೆ ಇದು ಅಂದವಾಗಿದೆಯೋ?"

ಇಷ್ಟೇ ಆ ರಾಯರಿಗೂ ವೆಂಕಟನಾರಣಪ್ಪನವರಿಗೂ ತಕರಾರು ಬರುವುದಕ್ಕೆ ಕಾರಣ. ರಾಯರು ಆ ಹುದ್ದೆಯನ್ನು ಬಿಡಬೇಕಾಯಿತು.

ವಿಶ್ವೇಶ್ವರಯ್ಯನವರು ಈ ವಿಷಯದಲ್ಲಿ ವೆಂಕಟನಾರಣಪ್ಪನವರಂತೆಯೇ ಛಾನಸವಿಟ್ಟುಕೊಂಡಿದ್ದರು. ಕಾರ್ಡಾಗಲೀ, ಕವರಾಗಲೀ, ಅದರ ಬಲಗಡೆಯ ಮೇಲ್ಮೂಲೆಯಲ್ಲಿ ಸ್ಟಾಂಪ್ ಅಂಟಿಸಬೇಕು. ಅದು ತಲೆಕೆಳಗಾಗಿರಬಾರದು. ಅಂಚಿನಿಂದ ಕಾಲು ಅಂಗುಲ ಮಾತ್ರ ಬಿಡುವು ಬಿಟ್ಟಿರಬೇಕು. ಬಿಡುವು ಎರಡು ಕಡೆಯೂ ಸಮಾನವಾಗಿರಬೇಕು. ಗೋಂದು ಹೊರಕ್ಕೆ ಕಾಣಿಸಬಾರದು. ಇದು ಶ್ರಾದ್ಧನಿಯಮ. ಕೊಂಚವೂ ಹೆಚ್ಚುಕಡಿಮೆಯಾಗಬಾರದು.

ಯಾವ ಕೆಲಸ ಮಾಡಿದರೂ ಅದರಲ್ಲಿ ಚೊಕ್ಕಟ, ಒಂದು ಕಟ್ಟುಪಾಡು, ಒಪ್ಪ ಓರಣ ಇರಬೇಕು. ನೀಟಾಗಿರಬೇಕು.

ಇಡಿಗಾಯಿ ಉಪ್ಪಿನಕಾಯಿ ವೆಂಕಟನಾರಣಪ್ಪನವರಿಗೆ ಇಷ್ಟ. ಅವರ ಸರ್ಕೀಟ್ ಪೆಟ್ಟಿಗೆಯಲ್ಲಿ ಯಾವಾಗಲೂ ಒಂದು ಸೀಸೆ ಇಡಿಗಾಯಿ ಉಪ್ಪಿನಕಾಯಿ ಇರುತ್ತಿತ್ತು. ಉಪ್ಪಿನಕಾಯಿಗೆ ಹುಳು ತಗಲದಂತೆ ಅದನ್ನು ಕಾಪಾಡುವುದಕ್ಕಾಗಿ ಕಾಯ ಬುಡದಲ್ಲಿ ರಂಧ್ರಕೊರೆದು ಏನೋ ರಕ್ಷಣ ಸಾಮಗ್ರಿ ಅದರಲ್ಲಿ ತುಂಬಿರುತ್ತಿದ್ದರು.

ಸ್ವಾವಲಂಬನ

ದಾವಣಗೆರೆಯ ಸಾಹಿತ್ಯ ಸಮ್ಮೇಳನದ ಕಾಲದಲ್ಲಿ ಕಾರ್ಯಾರಂಭದ ಸಮಯ ಬಂತು. ಮೊದಲು ಆಗಬೇಕಾದದ್ದು ಅಧ್ಯಕ್ಷರ ಮೆರವಣಿಗೆ, ಅದಕ್ಕೆ ಒಂದೆರಡು ನಿಮಿಷ ಮುಂಚೆ ನಾನು, ವೆಂಕಣ್ಣಯ್ಯ ಮೊದಲಾದವರು ಏನೋ ಹರಟುತ್ತಾ ಕುಳಿತಿದ್ದೆವು. ವೆಂಕಟನಾರಣಪ್ಪನವರು ಬಂದು "ಏನಪ್ಪಾ ಹೀಗಿದ್ದೀರಿ ಇನ್ನೂ? ಮೆರವಣಿಗೆ ಹೊರಡಬೇಕಲ್ಲ? ದಿರಸು ಹಾಕಿಕೊಳ್ಳಿ ಬೇಗ" ಎಂದರು. ನಾನು "ನೀವೇ ಇನ್ನೂ ತಯಾರಾಗಿಲ್ಲವಲ್ಲ?" ಎಂದೆ. ಅವರು "ನನ್ನದೆಷ್ಟು ಹೊತ್ತು! ನೀವು ಡ್ರೆಸ್ ಮಾಡಿಕೊಳ್ಳುವುದರೊಳಗಾಗಿ ನಾನು ಸಿದ್ಧವಾಗುತ್ತೇನೆ" ಎಂದು ಹೇಳಿ ತಮ್ಮ ಟ್ರಂಕಿನ ಬಳಿ ಕುಳಿತರು. ಅದರೊಳಗಿನಿಂದ ಸೂಜಿ, ದಾರ, ಗುಂಡಿಗಳು-ಇದನ್ನು ತೆಗೆದು ತಮ್ಮ ಕೋಟಿಗೆ ಗುಂಡಿ ಹೊಲಿಯುತ್ತ ಕುಳಿತರು, ನಾನು ಇದೇನೆಂದು ಕೇಳಿದೆ. ಅವರು "ಹೌದಪ್ಪ, ಗುಂಡಿಯ ಸಹಿತ ಕೋಟನ್ನು ಅಗಸನಿಗೆ ಹಾಕಿದರೆ ಅವನು ಒಗೆಯುವಾಗ ಗುಂಡಿಗಳನ್ನು ಒಡೆದುಹಾಕುತ್ತಾನೆ. ಆದದ್ದರಿಂದ ಅಗಸನಿಗೆ ಬಟ್ಟೆ ಹಾಕುವಾಗ ಗುಂಡಿಗಳನ್ನು ಕತ್ತರಿಸಿಟ್ಟುಕೊಂಡು, ಆ ಬಟ್ಟೆಗಳನ್ನು ಮೈಗೆ ತಗಲಿಸಿಕೊಳ್ಳುವಾಗ ಗುಂಡಿಗಳನ್ನು ಮತ್ತೆ ಹೊಲಿಯಬೇಕಾಗಿದೆ" ಎಂದರು. "ಇದಕ್ಕೆ ಹೊತ್ತಾಗುತ್ತದಲ್ಲ?" ಎಂದರೆ "ಗಡಿಯಾರವಿಟ್ಟುಕೊಂಡು ನೋಡಿ ಎಷ್ಟು ನಿಮಿಷವಾಗುತ್ತದೊ" ಎಂದರು. ಆ ಕೆಲಸಕ್ಕೆ ಎರಡು ಮೂರು ನಿಮಿಷಗಳಿಗಿಂತ ಹೆಚ್ಚು ಹಿಡಿಯಲಿಲ್ಲ.

ಅವರು ಎಲ್ಲ ವಿಷಯಗಳಲ್ಲಿಯೂ ಹೀಗೆಯೇ. ಅವರ ಪೆಟ್ಟಿಗೆಯಲ್ಲಿ ಕರಿಮಸಿಯ ದೌತಿ, ಕೆಂಪು ಮಸಿಯ ದೌತಿ, ಒಂದು ಕರಿಮಸಿಯ ಜಾಡಿ, ಗೋಂದು ಸೀಸೆ, ಪಿನ್ನುಗಳು, ಟ್ಯಾಗುಗಳು, ಚಾಕು, ಕತ್ತರಿ, ಸೂಜಿ, ದಾರ-ಈ ಸಮಸ್ತ ಲೇಖನ ಸಾಮಗ್ರಿಯೂ ಹೋದ ಕಡೆಯೆಲ್ಲ ಅವರ ಜೊತೆಯಲ್ಲಿ ಬರುತ್ತಿತ್ತು.

ಭೋಜನ ವಸ್ತ್ರ ವಿಷಯಗಳಲ್ಲಿ ಮಾತ್ರವೇ ಅಲ್ಲ, ಮಿಕ್ಕೆಲ್ಲ ವಿಷಯಗಳಲ್ಲಿಯೂ ಹಾಗೆಯೇ ಅವರ ಸ್ವತಃಪರ್ಯಾಪ್ತಿ (Self-suffciency): ತಾವು ಬರೆಯುವ ಮಶಿ ತಾವೇ ತಯಾರುಮಾಡಿಕೊಳ್ಳುತ್ತಿದ್ದರು, ರಾಗಿಯನ್ನು ಹುರಿದು ಅದರ ಕರಿಯಿಂದ.

ಯಾತ್ರೆಯ ಪರಿಕರ

ಒಂದು ಸಾರಿ ಅವರು ಮೂರು ನಾಲ್ಕು ತಿಂಗಳ ಕಾಲ ದೇಶಯಾತ್ರೆ ಮಾಡಿ ಬಂದರು -ಒಬ್ಬರೇ, ಅನ್ಯಸಹಾಯವಿಲ್ಲದೆ. ಒಂದು ದೊಡ್ಡ ಕೊಳಪಾತ್ರೆ, ಒಂದು ಸ್ಟೊವ್, ಒಂದು ಬೆತ್ತದ ಪೆಟ್ಟಿಗೆ, ಒಂದು ಟ್ರಂಕ್, ಒಂದು ಸಣ್ಣ ಹಾಸಿಗೆಯ ಸುರುಳಿ-ಇದಿಷ್ಟು ಅವರ ಪರಿವಾರ. ಸ್ಟೊವನ್ನು ಹೊತ್ತಿಸುವುದು, ಕೊಳಪಾತ್ರೆಯಲ್ಲಿ ನೀರು ಕಾಯಿಸುವುದು, ಸ್ನಾನವಾದ ಮೇಲೆ ಅದೇ ಕೊಳಪಾತ್ರೆಯಲ್ಲಿ ಕಾಲು ಭಾಗಕ್ಕೆ ನೀರುಹಾಕಿ ಕಾಯಿಸಿ ಅದರ ತಳದಲ್ಲಿ ಒಂದು ಕಬ್ಬಿಣದ ಮುಕ್ಕಾಲುಮಣೆಯನಿಟ್ಟು ಅದರ ಮೇಲೆ ಎರಡು ಪಾತ್ರೆಗಳಲ್ಲಿ ಅಕ್ಕಿ ಬೇಳೆ ತರಕಾರಿಗಳನ್ನು ಹಾಕಿ ಮೇಲೆ ಮುಚ್ಚಳ ಮುಚ್ಚಿ ಆಹ್ನಿಕಕ್ಕೆ ಕೂಡುವುದು. ೪೫-೫೦ ನಿಮಿಷಗಳಲ್ಲಿ ಪಾಕ ಸಿದ್ಧವಾಗುವುದು. ಬೆತ್ತದ ಪೆಟ್ಟಿಗೆಯಲ್ಲಿ ಚೊಕ್ಕಟಪಡಿಸಿದ ಅಕ್ಕಿ, ಬೇಳೆ, ಬದನೆಕಾಯಿ, ಆಲೂಗೆಡ್ಡೆ, ಒಂದು ಸೀಸೆಯಲ್ಲಿ ಮೆಣಸಿನಪುಡಿ, ಒಂದರಲ್ಲಿ ಉಪ್ಪು, ಒಂದರಲ್ಲಿ ತುಪ್ಪ, ಒಂದರಲ್ಲಿ ಇಡಿಗಾಯಿ ಉಪ್ಪಿನಕಾಯಿ, ಒಂದರಲ್ಲಿ ಮೊಸರು, -ಇಷ್ಟು ಪರಿಕರಗಳಿರುತ್ತಿದ್ದವು. ಉಪ್ಪಿನಕಾಯಿ ಅವರೇ ಹಾಕಿದ್ದು. ಅದರ ವಿಷಯದಲ್ಲಿ ತುಂಬ ಹೆಮ್ಮೆ. ಬದನೆಯಕಾಯಿ ಎರಡು ಮೂರು ದಿನ ಕೆಡದೆ ಇರುವುದೆಂದು ಅದರ ಪ್ರಶಂಸೆ.

ಪೆಪ್ಪರ್ಮಿಂಟ್ ತಯಾರಿ

ಒಂದು ಸಾರಿ ಮಕ್ಕಳಿಗೆ ಪೆಪ್ಪರ್ಮಿಂಟ್ ವಿಷಯದಲ್ಲಿರುವ ಪ್ರೀತಿಯನ್ನು ಕಂಡುಕೊಂಡು, ತಾವೇ ಅದನ್ನು ತಯಾರುಮಾಡಬೇಕೆಂದು ಹೊರಟರು. ಅವರು ರಸಾಯನ ಶಾಸ್ತ್ರಜ್ಞರೂ (Chemist), ಪಾಕಪ್ರವೀಣರೂ ಆಗಿದ್ದದ್ದರಿಂದ ಬಿಲ್ಲೆಗಳನ್ನು ತಯಾರು ಮಾಡುವುದೂ ಅದಕ್ಕೆ ಬಣ್ಣ ಕಟ್ಟುವುದೂ ಕಷ್ಟವಾಗಲಿಲ್ಲ. ಆದರೂ ತಮ್ಮ ಕೈವಾಡದ ಪೆಪ್ಪರ್ಮಿಂಟುಗಳು ಏಕೋ ವಿದೇಶೀ ಪೆಪ್ಪರ್ಮಿಂಟುಗಳಂತೆ ಮೆರುಗುಮೆರುಗಾಗಿ, ನುಣುಪುನುಣುಪಾಗಿ ಇರಲಿಲ್ಲ. ತಮ್ಮ ಕೈವಾಡದಲ್ಲಿ ಕೊರತೆ ಏನಿರಬಹುದೆಂದು ವಿಮರ್ಶನೆಮಾಡುವ ಕ್ರಮದಲ್ಲಿ ಪೆಪ್ಪರ್ಮಿಂಟ್ ತಯಾರಿಕೆಯನ್ನು ಕುರಿತು ವಿದೇಶೀ ಗ್ರಂಥಗಳನ್ನು ಓದಿದರು. ಪಾಶ್ಚಾತ್ಯರು ಕೋಳಿಮೊಟ್ಟೆಯ ಬಿಳಿಯ ಸಾರ (White of the egg) ವನ್ನು ಪೆಪ್ಪರ್ಮಿಂಟಿನ ಮೇಲೆ ಸವರುತ್ತಾರೆಂದು ತಿಳಿದು ಬಂತು.

ಕೂಡಲೆ ಆ ಯೋಚನೆಯನ್ನು ಅಲ್ಲಿಗೆ ಬಿಟ್ಟರು. ಇತರರು ಪೆಪ್ಪರ್ಮಿಂಟನ್ನು ಚಪ್ಪರಿಸುತ್ತಿದ್ದರೆ ಅವರು ಮುಖವನ್ನು ಬೇರೆ ಕಡೆ ತಿರುಗಿಸುತ್ತಿದ್ದರು.

ಮಲ್ಲಿಕಾರ್ಜುನ ದೇವಾಲಯ

ಬಸವನಗುಡಿ ಬಡಾವಣೆಯ ನೈಋತ್ಯ ಪ್ರಾಂತದಲ್ಲಿ ಮೊದಮೊದಲು ಮನೆಕಟ್ಟಿದವರ ಪೈಕಿ ವೆಂಕಟನಾರಣಪ್ಪನವರೊಬ್ಬರು. ಮನೆಕಟ್ಟಿ ಅಲ್ಲಿ ವಾಸಕ್ಕೆ ಬಂದಮೇಲೆ ಅವರಿಗೆ ಒಂದು ಯೋಚನೆ ಬಂತು. "ಈ ಪ್ರದೇಶದಲ್ಲಿ ಒಂದು ಶಿವಾಲಯವಿಲ್ಲವಲ್ಲ! ಗುಡಿಯಿಲ್ಲದ ಕಡೆ ವಾಸಮಾಡುವುದು ಮಂಗಳಕರವಲ್ಲವಲ್ಲ?" ಎಂದು ಚಿಂತಿಸುತ್ತಾ ಅವರು ಈ ಪ್ರದೇಶದಲ್ಲೆಲ್ಲಾ ಸುತ್ತಾಡಿದರು. ಆಗ ಇದೆಲ್ಲ ಕಾಡಾಗಿತ್ತು. ಹೀಗೆ ಹುಡುಕಿಕೊಂಡು ಅಲೆಯುತ್ತಿದ್ದಾಗ ಒಂದು ದಿನ ಒಂದು ಸಣ್ಣ ಹಳೆಯ ಮಂಟಪ ಅವರ ಕಣ್ಣಿಗೆ ಗೋಚರಿಸಿತು. ಒಳಕ್ಕೆ ಹೋಗಿ ನೋಡಿದರು: ಶಿವಲಿಂಗ! ಸಂತೋಷವಾಯಿತು. ಆದರೆ ಅದು ಯಾರು ಪ್ರತಿಷ್ಠಿಸಿದ್ದೋ, ಎಂಥಾದ್ದೋ-ಎಂಬ ಶಂಕೆ ಹುಟ್ಟಿತು. ಆಮೇಲೆ ಸರಕಾರದ ಮುಜರಾಯಿ ಕಛೇರಿಗೆ ಹೋಗಿ ವಿಚಾರಮಾಡಿದರು. ಶ್ರೀ ಮಲ್ಲಿಕಾರ್ಜುನಸ್ವಾಮಿ ದೇವಾಲಯವೊಂದು ಆ ಪ್ರದೇಶದಲ್ಲಿದ್ದದ್ದೆಂದು ತಿಳಿದು ಬಂತು. ಆದರೂ ಭೂಶೋಧನೆಯಿಂದ ಮನಸ್ಸನ್ನು ಸಮಾಧಾನಪಡಿಸಿಕೊಳ್ಳಬೇಕೆಂದು ಅದಕ್ಕಾಗಿ ಅಧಿಕಾರಿಗಳ ಅಪ್ಪಣೆ ಪಡೆದರು. ಆಮೇಲೆ ಆ ಹಳೆಯ ಮಂಟಪವನ್ನುಳಿಸಿ ಲಿಂಗವಿದ್ದ ಸ್ಥಳದ ಸುತ್ತ ಅಗೆದು ಲಿಂಗದ ಕೆಳಭಾಗದ ನೆಲದಲ್ಲಿ ಎಲುಬು, ಮೂಳೆ ಮೊದಲಾದ ಯಾವ ಅಶುದ್ಧವೂ ಇಲ್ಲವೆಂದು ಸ್ಥಿರಮಾಡಿಕೊಂಡರು. ಅನಂತರ ಹೊಸ ಕಟ್ಟಡದ ಕೆಲಸ.

ಎಲೆಕ್ಟ್ರಿಕ್ ಇಲಾಖೆಗೆ ಆಗ ದೊಡ್ಡ ದೊಡ್ಡ ಯಂತ್ರಗಳು ಬರುತ್ತಿದ್ದಕಾಲ. ಆ ಯಂತ್ರಗಳೂ, ಯಂತ್ರಭಾಗಗಳೂ ದಪ್ಪ ದಪ್ಪವಾದ ಗಟ್ಟಿ ಜಾಯಿಕಾಯಿ ಪೆಟ್ಟಿಗೆಗಳಲ್ಲಿ ಪ್ಯಾಕ್ ಆಗಿ ಬರುತ್ತಿದ್ದವು. ಆಗಿನ ಎಲೆಕ್ಟ್ರಿಕ್ ಮುಖ್ಯಾಧಿಕಾರಿಗಳಾದ ಶೇಷಾದ್ರಿ, ಕಾರಿಯಪ್ಪ, ಎನ್.ಎನ್. ಐಯಂಗಾರ್-ಇವರು ವೆಂಕಟನಾರಣಪ್ಪನವರ ಶಿಷ್ಯರು. ವೆಂಕಟನಾರಣಪ್ಪನವರು ಅವರಲ್ಲಿ ಮುಖ್ಯರಾದವರನ್ನು ಕಂಡು ಆ ಜಾಯಿಕಾಯಿ ಪೆಟ್ಟಿಗೆಗಳನ್ನು ಕ್ರಯಕೊಟ್ಟು ಕೊಂಡುಕೊಂಡರು. ಆ ದೊಡ್ಡ ದೊಡ್ಡ ಹಲಗೆಗಳಿಂದ ತಾವು ಒಂದು ಹೊಸ ದೊಡ್ಡ ಪೆಟ್ಟಿಗೆಯನ್ನು ತಯಾರುಮಾಡಿ ಅದನ್ನು ಶಿವಲಿಂಗದ ಮೇಲೆ ಬೋರಲು ಹಾಕಿದರು. ಅನಂತರ ಹೊಸ ಮಂಟಪದ ಕೆಲಸ.

ವೆಂಕಟನಾರಣಪ್ಪನವರಿಗೆ ಗೋಡೆ ಕಟ್ಟುವುದರ ಅಭ್ಯಾಸವಿತ್ತೆಂದು ತೋರುತ್ತದೆ. ಮೂಲೆಮಟ್ಟ ನೋಡುವುದು, ಗೋಡೆಯ ಸಮ ನೋಡುವುದು, ತೂಗುಗುಂಡು ಹಿಡಿಯುವುದು-ಇದೆಲ್ಲ Physics ಶಾಸ್ತ್ರದ ಉಪಾಂಗ ಪ್ರಕರಣಗಳು. ಕೆಲವು

ತಿಂಗಳೊಳಗಾಗಿ ಹೊಸ ಗುಡಿಯ ಗೋಡೆಗಳೆದ್ದು ಮೇಲಿನ ಕಲ್ಲುಚಪ್ಪಡಿಯ ಚಾವಣಿಯ ಕೆಲಸವೂ ಮುಗಿಯಿತು. ಶಾಸ್ತ್ರೋಕ್ತವಾಗಿ ಸಂಪ್ರೋಕ್ಷಣೆ ಹಾಗೂ ಮಹಾಭಿಷೇಕಗಳು ನಡೆದು ಕ್ರಮವಾಗಿ ನಿತ್ಯಪೂಜೆ ಆರಂಭವಾಯಿತು. ಇದು ಬಹುಶಃ ೧೯೦೩-೪ರಲ್ಲಿ.

ತಸ್ತೀಕು

ಮಲ್ಲಿಕಾರ್ಜುನ ದೇವಸ್ಥಾನಕ್ಕೆ ಸರಕಾರದ ತಸ್ತೀಕನ್ನು ಸಂಪಾದಿಸಬೇಕೆಂದು ವೆಂಕಟನಾರಣಪ್ಪನವರ ದೃಢಸಂಕಲ್ಪ. ಅದು ವರ್ಷಕ್ಕೆ ಎರಡು ಮೂರು ರೂಪಾಯಿನ ವರಮಾನವಿರಬಹುದು. ಈ ಜುಜುಬಿ ಬಾಬಿಗೆ ಅಷ್ಟು ಮಹಾಪ್ರಯತ್ನವೇಕೆ? ಎಂದು ಒಂದು ಸಾರಿ ನಾನು ಅವರನ್ನು ಕೇಳಿದೆ. ಅವರು "ಸರಕಾರದ Recognition ಬಹಳ ಮುಖ್ಯವಪ್ಪ. ಅದೊಂದಿದ್ದರೆ ಈ ದೇವಸ್ಥಾನಕ್ಕೆ ಯಾವ ಚ್ಯುತಿಯೂ ಬರಲಾರದು" ಎಂದು ಉತ್ತರಕೊಟ್ಟರು.

ತಸ್ತೀಕು ಸಂಪಾದಿಸುವ ಪ್ರಯತ್ನ ಬಹುಕಾಲ ಸಾರ್ಥಕವಾಗಲಿಲ್ಲ. ದೇವಸ್ಥಾನಕ್ಕೆ ಸಂಬಂಧಪಟ್ಟವರೆಲ್ಲ ತುಂಬಾ ಬೇಸರಗೊಂಡಿದ್ದರು. ೧೯೦೫ರ ಸುಮಾರಿನಲ್ಲಿ ವಿ.ಪಿ. ಮಾಧವರಾಯರು ದಿವಾನರಾಗಿದ್ದ ಕಾಲದಲ್ಲಿ ಒಂದು ದಿನ ಶ್ರೀ ಮಲ್ಲಿಕಾರ್ಜುನಸ್ವಾಮಿ ದೇವಾಲಯದಲ್ಲಿ ಅತಿಶಯವಾದ ವಿಜೃಂಭಣೆಯಿಂದ ದೀಪಾರಾಧನೆ ನಡೆಯಿತು. ದೊಡ್ಡ ರಸ್ತೆಯಿಂದ ಗುಡಿಯವರೆಗೂ ಎರಡು ಪಕ್ಕಗಳಲ್ಲಿಯೂ ಮರದ ನಿಲುವುತುಂಡುಗಳ ಮೇಲೆ ಹಣತೆಯ ದೀಪಗಳು ಮಿನುಗುತ್ತಿದ್ದುವು. ಅವುಗಳ ನಡುವೆ ದಿವಾನ್ ವಿ.ಪಿ.ಮಾಧವರಾಯರ ಸವಾರಿ ಚಿತ್ತೈಸಿತು. ದೊಡ್ಡ ದೊಡ್ಡ ಅಧಿಕಾರಿಗಳೆಲ್ಲ ದಯಮಾಡಿಸಿದ್ದರು. ಬೆಳ್ಳಾವೆ ನರಸಿಂಹಶಾಸ್ತ್ರಿಗಳ ಮತ್ತು ಶಿವರಾಮಶಾಸ್ತ್ರಿಗಳ ಕಂಠದಿಂದ ವೇದ ಮಂತ್ರಗಳು ಹರಿದುಬಂದು ರಾಜಾಶೀರ್ವಾದ ಘೋಷಣೆಯಾಯಿತು.

ದಿವಾನ್ ಮಾಧವರಾಯರು ಕಾಂತಿಗೂಡಿದ ಮುಖದಿಂದ ಕೇಳಿದರು: "ವೆಂಕಟನಾರಣಪ್ಪಾ, ಏನಿದೆಲ್ಲ ಈ ಹೊತ್ತಿನಸಂಭ್ರಮ?"

ವೆಂಕಟನಾರಣಪ್ಪನವರು ಹೇಳಿದರು: "ಸ್ವಾಮಿ, ಈಶ್ವರ ಸನ್ನಿಧಿ ಸಮಸ್ತ ರಾಜ್ಯಕ್ಕೂ ಮಂಗಳಕರವಾದದ್ದು. ಈಗ ತಾನೆ ರಾಜಾಶೀರ್ವಾದವನ್ನು ಕೇಳೋಣವಾಯಿತು. ಈ ದಿವ್ಯಸಾನ್ನಿಧ್ಯವನ್ನು ಇಲ್ಲಿ ನೆಲೆಗೊಳಿಸುವುದಕ್ಕಾಗಿ ಬಹುಕಾಲದಿಂದ ಬಹುಮಂದಿ ಶ್ರಮ ಪಟ್ಟಿದ್ದಾಯಿತು. ದೈವಕೃಪೆ ನಮಗೆ ದೊರೆಯಿತು; ಸರಕಾರದ ಕೃಪೆ ಇನ್ನೂ ಬಂದಿಲ್ಲ. ಒಂದು ತಸ್ತೀಕಿಗಾಗಿ ಅರ್ಜಿ ಸಲ್ಲಿಸಿ ಮೂರು ನಾಲ್ಕು ವರ್ಷವಾಯಿತು. ಕಡೆಗೆ ನಾವು ಆಶೆಬಿಟ್ಟೆವು. ಸರಕಾರ ಬದಲಾಯಿಸಿದರೆ ಸಂದರ್ಭ ಅನುಕೂಲಿಸೀತೆಂದು ನಮಗನ್ನಿಸಿತು. ಅದಕ್ಕಾಗಿ ಹರಸಿಕೊಂಡೆವು; ಹಿಂದಿನ ದೌಲತ್ತು ಮುಗಿದು ಬೇರೆ ದೌಲತ್ತು ಬಂದರೆ ದೇವರಿಗೆ ಸಹಸ್ರ ದೀಪಾರ್ಚನೆಮಾಡಿ ಎರಡು ಮಣ ಸಕ್ಕರೆ ಹಂಚುವುದಾಗಿ ಹರಸಿಕೊಂಡೆವು. ಅದು ಈ ಹೊತ್ತಿನ ಉತ್ಸವದ ಕಾರಣ."

ಹಂಚಿದ ಸಕ್ಕರೆ ಒಳ್ಳೆಯ ತರತೀಪು. ವೆಂಕಟನಾರಣಪ್ಪನವರು ಯಾವಾಗ ಸಕ್ಕರೆ ಹಂಚಿದರೂ ಅದರಲ್ಲಿ ಕೊಬ್ಬರಿ, ಹುರಿದ ಗಸಗಸೆ, ಏಲಕ್ಕಿ, ಗೋಡಂಬಿಯ ಚೂರು, ಕಲ್ಲುಸಕ್ಕರೆಯ ಚೂರುಗಳು ಬಾಯಿ ಬಾಯಿಗೆ ಸಿಕ್ಕುತ್ತಿದ್ದವು.

ವೆಂಕಟನಾರಣಪ್ಪನವರ ಸಣ್ಣ ಭಾಷಣ ಮುಗಿದ ಕೂಡಲೆ ದಿವಾನ್ ವಿ.ಪಿ.ಮಾಧವರಾಯರು ಬೆಂಗಳೂರು ಡೆಪ್ಯುಟಿ ಕಮಿಷನರ ಕಡೆಗೆ ತಿರುಗಿ "ಕೃಷ್ಣರಾವ್, ಈ ಹೊತ್ತು ಸೋಮವಾರ. ಗುರುವಾರದ ಒಳಗಾಗಿ ತಸ್ತೀಕು ಪತ್ತೆಮಾಡಿ ಈ ದೇವಸ್ಥಾನದ ಹೆಸರಿಗೆ ಅದನ್ನು ಬರೆದು ಸರಕಾರದ ಆರ್ಡರನ್ನು ವೆಂಕಟನಾರಣಪ್ಪನವರ ಕೈಗೆ ತಲುಪಿಸಬೇಕು" ಎಂದರು. ಡೆಪ್ಯುಟಿ ಕಮಿಷನರು "ಅಪ್ಪಣೆ" ಎಂದರು. ದಿವಾನರು ವೆಂಕಟನಾರಣಪ್ಪನವರ ಕಡೆ ತಿರುಗಿ "ಗುರುವಾರದೊಳಗಾಗಿ ನಿಮ್ಮ ಕೈಗೆ ಹುಕುಂ ಬಾರದಿದ್ದಲ್ಲಿ ನೀವು ನನಗೆ ಜ್ಞಾಪಕಕೊಡತಕ್ಕದ್ದು" ಎಂದರು.

ಪುನಃ ದಿವಾನರನ್ನು ತೊಂದರೆಪಡಿಸಬೇಕಾದ ಆವಶ್ಯಕತೆ ಬರಲಿಲ್ಲ. ಅವರು ಹೇಳಿದ ಕಾಲಾವಧಿಯೊಳಗಾಗಿ ಕೆಲಸ ನಡೆಯಿತು. ಶ್ರೀ ಮಲ್ಲಿಕಾರ್ಜುನಸ್ವಾಮಿ ದೇವಸ್ಥಾನ ಸರಕಾರದ ಮುಜರಾಯಿ ಸಂಸ್ಥೆಯಾಯಿತು.

ವ್ರತನಿಷ್ಠೆ

ವೆಂಕಟನಾರಣಪ್ಪನವರು ಶ್ರೀ ಮಲ್ಲಿಕಾರ್ಜುನ ದೇವಾಲಯವನ್ನು ಅದು ತಮ್ಮ ವಾಸಗೃಹದ ಒಂದು ಅಂಕಣವೋ ಎಂಬಂತೆ ಭಾವಿಸಿದ್ದರು. ದಿನಕ್ಕೊಂದು ಸಾರಿಯಾದರೂ ದೇವಸ್ಥಾನಕ್ಕೆ ಹೋಗುವುದು ತಪ್ಪುತ್ತಿರಲಿಲ್ಲ. ಸೋಮವಾರವಂತೂ ರಾತ್ರಿ ಎಷ್ಟು ಹೊತ್ತಾದರೂ ತಾವೇ ಅಲ್ಲಿಗೆ ಹೋಗಿ ಮಂಗಳಾರತಿ ಮಾಡಿ ಬರುವವರೆಗೂ ಫಲಾಹಾರ ಮಾಡುತ್ತಿರಲಿಲ್ಲ. ಅಮಾವಾಸ್ಯೆಗಳ ರಾತ್ರಿಯೂ ಹಾಗೆಯೇ. ಇದನ್ನು ನಾನು ಕಣ್ಣಾರ ಕಂಡಿದ್ದೇನೆ. 'ವಿಜ್ಞಾನ' ಪತ್ರಿಕೆ ನಡಸುತ್ತಿದ್ದ ಕಾಲದಲ್ಲಿ ಮುದ್ರಣಾಲಯದಿಂದ ಹಿಂದಿರುಗುವ ವೇಳೆಗೆ ರಾತ್ರಿ ಹನ್ನೆರಡು ಘಂಟೆಯಾಗಿಬಿಡುತ್ತಿತ್ತು. ನಮಗೆಲ್ಲ ಸುಸ್ತಾಗಿರುತ್ತಿತ್ತು. ಆದರೆ ವೆಂಕಟನಾರಣಪ್ಪನವರು ಬೇಸರಪಡದೆ, ಪಾಲುಮಾರದೆ ಅಷ್ಟು ಹೊತ್ತಿನಲ್ಲಿಯೂ ಗುಡಿಗೆ ಹೋಗಿ ಸೇವೆ ಸಲ್ಲಿಸಿ ಬರುತ್ತಿದ್ದರು.

ಕಾರ್ತಿಕಮಾಸದ ಅಮಾವಾಸ್ಯೆಯ ರಾತ್ರಿ ಮಲ್ಲಿಕಾರ್ಜುನಸ್ವಾಮಿಯ ಭಕ್ತಾದಿಗಳ ವಾರ್ಷಿಕ ಸಭೆ. ದೇವರ ಮಂಗಳಾರತಿಯಾದ ಬಳಿಕ ವೆಂಕಟನಾರಣಪ್ಪನವರು ಗುಡಿಯ ವರ್ಷದ ಆದಾಯ ವ್ಯಯಗಳ ಲೆಕ್ಕಗಳನ್ನು ಸಭೆಗೆ ಒಪ್ಪಿಸುವರು. ಅದರಲ್ಲಿ "ಮಂಗಳಾರತಿಯ ತಟ್ಟೆಯಲ್ಲಿ ಬಿದ್ದ ಹಣ ಮೂರು ರೂಪಾಯಿ ಏಳಾಣೆ ಐದು ಕಾಸು" ಹೀಗೆ ಕಾಸು ಕಾಸಿಗೂ ಲೆಕ್ಕ ಕೊಡುವರು. "ಕರ್ಪೂರದಲ್ಲಿ ಉಳಿದಿರುವುದು ಕಾಲು ತೊಲೆ; ದೇವರ ದೀಪದ ಎಣ್ಣೆ ಶಿಲ್ಕು ಇರುವುದು ಮುಕ್ಕಾಲು ಸೊಲಿಗೆ" -ಈ ರೀತಿ. ಒಂದು ಸಾರಿ ನಾನು ಅವರನ್ನು ಕೇಳಿದೆ, "ಈ ಚಿಲ್ಲರೆ ಕಾಸಿನ ಲೆಕ್ಕವನ್ನು ಬಿಡಬಾರದೆ?" ಎಂದು. ಅವರು "ಉಂಟೇನಪ್ಪಾ-ಚಿಲ್ಲರೆಯಿಂದಲೇ ಬಂದಾ ಆಗುವುದು. ದೇವರ ಕಾಸು ಎಲ್ಲಕ್ಕೂ ಲೆಕ್ಕವಿರಬೇಕು. ಜನರ ನಂಬಿಕೆ ಮುಖ್ಯ" ಎನ್ನುತ್ತಿದ್ದರು.

ತನಿಖೆ

ಶ್ರೀ ಮಲ್ಲಿಕಾರ್ಜುನ ದೇವರ ಗುಡಿ, ಶ್ರೀ ಬಸವೇಶ್ವರನ ಗುಡಿ, ದೊಡ್ಡ ಗಣಪತಿಯ ಗುಡಿ- ಈ ಮೂರು ಸಂಸ್ಥೆಗಳ ಆಡಳಿತದ ಮೇಲ್ವಿಚಾರಣೆಗಾಗಿ ಸರಕಾರದ ಮುಜರಾಯಿ ಇಲಾಖೆ ಒಂದು ಧರ್ಮದರ್ಶಿಗಳ ಸಮಿತಿಯನ್ನು ನೇಮಕ ಮಾಡಿ ಅದಕ್ಕೆ ವೆಂಕಟನಾರಣಪ್ಪನವರನ್ನು ಕನ್ವೀನರನ್ನಾಗಿ ನಿಯಮಿಸಿತು. ಒಂದು ಸಾರಿ ಮುಜರಾಯಿ ಕಮಿಷನರವರು ಶ್ರೀ ಮಲ್ಲಿಕಾರ್ಜುನ ದೇವಾಲಯ ಮೊದಲಾದ ಸಂಸ್ಥೆಗಳ ಲೆಕ್ಕಪತ್ರಗಳನ್ನು ತನಿಖೆ ಮಾಡುವುದಕ್ಕಾಗಿ ತಮ್ಮ ಆಫೀಸಿನಿಂದ ಒಬ್ಬ ಪ್ರತಿನಿಧಿಯನ್ನು ಕಳಿಸುವುದಾಗಿ ವೆಂಕಟನಾರಣಪ್ಪನವರಿಗೆ ತಿಳಿಯಪಡಿಸಿದರು. ವೆಂಕಟನಾರಣಪ್ಪನವರು ಗೊತ್ತಾದ ದಿವಸ ಲೆಕ್ಕಪತ್ರಗಳನ್ನು ಸಿದ್ಧಪಡಿಸಿಕೊಂಡು ಗುಡಿಯಲ್ಲಿ ಹಾಜರಾದರು. ಕರಿಯ ನಿಲುವಂಗಿ, ಉತ್ತರೀಯ, ರುಮಾಲು ಮೊದಲಾದ ದುಬಾರಿ ಪೋಷಾಕನ್ನು ಧರಿಸಿದ್ದರು. ತನಿಖೆ ಮಾಡಲು ಬಂದವರಾರೋ ಮುಜರಾಯಿ ಆಫೀಸಿನ ಮ್ಯಾನೇಜರ್ ಜಿ.ಶ್ರೀನಿವಾಸಯ್ಯನವರು.

ಶ್ರೀನಿವಾಸಯ್ಯನವರು ಕಣ್ಣಿಗೆ ಕಾಣಿಸಿದ ಕೂಡಲೆ ವೆಂಕಟನಾರಣಪ್ಪನವರು ಎದ್ದುನಿಂತು ಕೈಮುಗಿದು “ದಯಮಾಡಬೇಕು” ಎಂದು ಹೇಳುತ್ತ ಒಂದು ದೊಡ್ಡ ಹೂವಿನ ಹಾರವನ್ನೂ ಎರಡು ನಿಂಬೆಹಣ್ಣುಗಳನ್ನೂ ಹಿಡಿದುಕೊಂಡು ಶ್ರೀನಿವಾಸಯ್ಯನವರನ್ನು ಸಮೀಪಿಸಿದರು. ಅವರು ನಾಚಿಕೆಯ ಮುಖ ತೊಟ್ಟು “ನಾನ್ನು ತಮ್ಮ ಶಿಷ್ಯ ಸಾರ್” ಎಂದು ಹೇಳುತ್ತ ವೆಂಕಟನಾರಣಪ್ಪನವರ ಪಾದ ಮುಟ್ಟಿ ನಮಸ್ಕಾರ ಮಾಡಲು ಬಗ್ಗಿದರು. ವೆಂಕಟನಾರಣಪ್ಪನವರು ಅವರನ್ನು ತಡೆದು “ಅದೆಲ್ಲ ಇಲ್ಲಿ ಅಲ್ಲಪ್ಪ-ಅದರ ಜಾಗ ಹೊತ್ತು ಬೇರೆ. ಈಗ ಇಲ್ಲಿ ನೀವು ಮಹಾರಾಜರ ಪ್ರತಿನಿಧಿಗಳು. ಅವರಿಗೆ ಸಲ್ಲಿಸಬೇಕಾದ ಗೌರವವನ್ನು ನೀವು ತೆಗೆದುಕೊಳ್ಳಬೇಕು. ಮಹಾರಾಜರಿಗೆ ಶ್ರೇಯಸ್ಸನ್ನು ಬಯಸುವುದಕ್ಕಾಗಿ ಇರುವುದು ಈ ಗುಡಿ. ಮಹಾರಾಜರಿಲ್ಲದೆ ರಾಜ್ಯವಿಲ್ಲ, ಪ್ರಜೆಯಿಲ್ಲ. ಅವರಿದ್ದ ಮೇಲೆ ಎಲ್ಲ. ಆದದ್ದರಿಂದ ನಾವು ಸಮರ್ಪಿಸಿದ್ದನ್ನು ನೀವು ಸ್ವೀಕರಿಸಬೇಕು” -ಹೀಗೆ ಹೇಳುತ್ತ ಗುಡಿಯೊಳಗೆ ಮಂಗಳಾರತಿ ರಾಜಾಶೀರ್ವಾದಗಳು ನಡೆಯುವಂತೆ ಆಜ್ಞೆ ಮಾಡಿದರು. ಲೆಕ್ಕಪತ್ರಗಳ ತನಿಖೆ ಆಮೇಲೆ ನಡೆಯಿತು. ಅನಂತರ ಜಿ.ಶ್ರೀನಿವಾಸಯ್ಯನವರು ತಮ್ಮ ಅಂದಿನ ಅನುಭವವನ್ನು ಯಾವಜ್ಜೀವವೂ ಸ್ಮರಿಸಿಕೊಳ್ಳುವುದಾಗಿ ಹೇಳುತ್ತ ವೆಂಕಟನಾರಣಪ್ಪನವರಿಗೆ ಸಾಷ್ಟಾಂಗ ನಮಸ್ಕಾರ ಮಾಡಿ ಧನ್ಯವಾದವನ್ನು ಹೇಳಿದರು.

ಪ್ರಾಕಾರ ಪ್ರಯತ್ನ

ವೆಂಕಟನಾರಣಪ್ಪನವರು ಶ್ರೀ ಮಲ್ಲಿಕಾರ್ಜುನಸ್ವಾಮಿ ದೇವಸ್ಥಾನವನ್ನು ತಮ್ಮ ಸ್ವಂತ ಕೈಯಿಂದ ಕಟ್ಟಿದರೆಂದು ಹೇಳಿಯಾಯಿತು. ಕೆಲಮಂದಿ ಸ್ನೇಹಿತರೂ ಅವರೊಡನೆ ಸಹಕರಿಸಿದರು. ಅವರಲ್ಲಿ ಮುಖ್ಯರಾದವರು ಕೆ.ಜಿ.ಶಾಮಣ್ಣನವರು, ಬೆಳ್ಳಾವೆ ನರಸಿಂಹಶಾಸ್ತ್ರಿಗಳು, ಶಿವರಾಮಶಾಸ್ತ್ರಿಗಳು, ಬಿ.ರಾಮಯ್ಯನವರು. ಈ ದೇವಸ್ಥಾನಕ್ಕೆ ಪ್ರಾಕಾರದ ಗೋಡೆ ಕಟ್ಟಿಸಬೇಕೆಂದು ವೆಂಕಟನಾರಣಪ್ಪನವರ ಸಂಕಲ್ಪ. ಬೆಂಗಳೂರಿನ ಹಳೆಯ ಕೋಟೆಯ ಗೋಡೆಗಳನ್ನು ಉರುಳಿಸಿದಾಗ ಅಲ್ಲಿ ದೊಡ್ಡ ದೊಡ್ಡ ಕಲ್ಲು ಗುಂಡುಗಳು ರಾಶಿರಾಶಿಯಾಗಿ ಬಿದ್ದವು. ಆ ದೊಡ್ಡ ರಾಶಿಗಳನ್ನು ಕೊಂಡುಕೊಂಡರೆ ದೇವಸ್ಥಾನದ ಪ್ರಾಕಾರಕ್ಕೆ ಆಗುತ್ತದೆಂದು ಮನಸ್ಸು ಮಾಡಿ ವೆಂಕಟನಾರಣಪ್ಪನವರು ಈ ಆಲೋಚನೆಯನ್ನು ಒಬ್ಬ ಆಪ್ತ ಸ್ನೇಹಿತರಿಗೆ ಹೇಳಿದರು. ಅವರಿಬ್ಬರೂ ಹರಾಜಿನ ಸ್ಥಳಕ್ಕೆ ಹೋಗಿ ಸವಾಲು ಮಾಡಿದರು. ಆ ಸ್ನೇಹಿತರು ಸರಕಾರದಲ್ಲಿ ವೆಂಕಟನಾರಣಪ್ಪನವರಿಗಿಂತ ಹೆಚ್ಚು ಪ್ರಭಾವಶಾಲಿಯಾದ ಹುದ್ದೆಯಲ್ಲಿದ್ದವರು; ಮತ್ತು ಲೌಕಿಕ ಲೆಕ್ಕಾಚಾರಗಳಲ್ಲಿ ತುಂಬಾ ನಿಪುಣರು. ಆದದ್ದರಿಂದ ಅವರು ಸವಾಲು ಮಾಡಲಿ ಎಂದು ವೆಂಕಟನಾರಣಪ್ಪನವರು ಅವರಿಗೆ ಜವಾಬ್ದಾರಿ ವಹಿಸಿದರು. ಆ ಸ್ನೇಹಿತರು ಸವಾಲು ಹೇಳಿದೊಡನೆ ಸವಾಲು ಅಲ್ಲಿಗೆ ನಿಂತಿತು. ಅದರಂತೆ ಹರಾಜಿನ ಮೊಬಲಗಿನಲ್ಲಿ ನಾಲ್ಕನೆಯ ಒಂದು ಭಾಗವನ್ನು ಅಲ್ಲಿಯೇ ಪಾವತಿ ಮಾಡಿ ಹರಾಜನ್ನು ಸ್ಥಿರಪಡಿಸಬೇಕಾಗಿತ್ತು. ಅದರಂತೆ ಆ ಸ್ನೇಹಿತರು ಹಣ ಮುಂಗಡ ಕೊಟ್ಟು ಖರೀದಿಯನ್ನು ಸ್ಥಿರಪಡಿಸಿದ್ದೂ ಆಯಿತು. ವೆಂಕಟನಾರಣಪ್ಪನವರು ತಮ್ಮ ಸಂಕಲ್ಪ ನೆರವೇರಿತೆಂದು ಸಂತೋಷಪಟ್ಟುಕೊಂಡು ಸ್ವಾಮಿ ಮಂಗಳಾರತಿ ಮಾಡಿದರು.

ಆಮೇಲೆ ಎರಡುಮೂರು ವರ್ಷ ಕಳೆಯಿತು. ವೆಂಕಟನಾರಣಪ್ಪನವರು ಪ್ರಾಕಾರ ಕಟ್ಟಿಸಲು ಬೇಕಾಗುವ ಹಣದ ತರದೂದಿನಲ್ಲಿದ್ದರು. ಕೊಂಚ ಹಣ ಒದಗಿದ ಮೇಲೆ ಅವರು ಆ ಸ್ನೇಹಿತರ ಬಳಿಗೆ ಹೋಗಿ ಕೋಟೆ ಗೋಡೆ ಕಲ್ಲಿನ ಪ್ರಸ್ತಾವ ಮಾಡಲಾಗಿ ಅವರು ಆ ಕಲ್ಲನ್ನು ತಾವೇ ಸ್ವಂತಕ್ಕಾಗಿ ಉಪಯೋಗಿಸಿಕೊಂಡಂತೆಯೂ ತಾವು ಹರಾಜಿನ ದಿವಸ ಮುಂಗಡವಾಗಿ ಹಣ ಕೊಟ್ಟಿದ್ದದ್ದರಿಂದ ಸ್ವತ್ತು ತಮ್ಮದೇ ಆಯಿತೆಂದೂ ವಾದಿಸಿದರು.

ವೆಂಕಟನಾರಣಪ್ಪನವರು ತಮಗಾದ ಆಶ್ಚರ್ಯವನ್ನು ನುಂಗಿಕೊಂಡು ಅಲ್ಲಿಂದ ಮುಂದೆ ಆ ಸ್ನೇಹಿತರೊಡನೆ ಆಪ್ತವ್ಯವಹಾರವನ್ನು ಬಿಟ್ಟರು. ಆದರೆ ಕುಶಲಪ್ರಶ್ನೆ

ಮೇಲುಪಚಾರಗಳನ್ನು ಬಿಡಲಿಲ್ಲ. ಅವರು ಆಗಾಗ ಹೇಳುತ್ತಿದ್ದರು: “ಸ್ನೇಹವನ್ನು ಪರೀಕ್ಷೆ ಮಾಡುವುದು ಹಣ” ಎಂದು.

ವೆಂಕಟರಾಮಯ್ಯನವರ ಮನೋಧರ್ಮ

ವೆಂಕಟನಾರಣಪ್ಪನವರಿಗೆ ಪರಿಚಿತರಾದ ಬಡ ಜನರಲ್ಲಿ ವೆಂಕಟರಾಮಯ್ಯ ಎಂಬವರೊಬ್ಬರು. ಅವರು ಯಾವ ಒಂದು ಉದ್ಯೋಗದಲ್ಲಿಯೂ ಸ್ಥಿರವಾಗಿ ನೆಲಸದೆ ಅಲ್ಲಿಗೂ ಇಲ್ಲಿಗೂ ಹಾರಾಡುತ್ತಿದ್ದರು. ಮುನಿಸಿಪಾಲಿಟಿಯಲ್ಲಿ ಕೆಲವು ದಿನ ಆಕ್ಟ್ರಾಯ್ ಮುತ್ಸದ್ದಿಯಾಗಿದ್ದರು. ಇನ್ನು ಏನೇನೋ ಇಂಥ ಸಣ್ಣಪುಟ್ಟ ಕೆಲಸಗಳನ್ನು ಮಾಡಿ ಜೀವನ ಸಂಪಾದಿಸುತ್ತಿದ್ದರು. ಅವರ ಹೆಂಡತಿ ಅವರವರ ಮನೆಯಲ್ಲಿ ಅಡಿಗೆ, ಮೆಣಸಿನ ಪುಡಿ ಕೆಲಸ-ಇಂಥಾದ್ದರಿಂದ ಜೀವನಕ್ಕೆ ಸಹಾಯವಾಗಿದ್ದರು.

ಕಡೆಕಡೆಯ ದಿನಗಳಲ್ಲಿ ವೆಂಕಟರಾಮಯ್ಯನವರು ಸ್ಮಶಾನದಲ್ಲಿ ಕಾವಲುಗಾರ ಗುಮಾಸ್ತೆಯಾಗಿದ್ದರು. ಆತನ ಹೆಂಡತಿ ತೀರಿಕೊಂಡ ಮೇಲೆ ಆತನಿಗೂ ಕಾಯಿಲೆ ಬಂದು ಮಲಗಿದ. ತನ್ನ ಅವಸಾನ ಕಾಲ ಸಮೀಪವಾಯಿತೆಂದು ಆತನಿಗೆ ತೋರಿದಾಗ ಆತ ವೆಂಕಟನಾರಣಪ್ಪನವರಿಗೆ ಹೇಳಿಕಳುಹಿಸಿದ. ಇವರು ಹೋಗಿ ಆತನನ್ನು ನೋಡಿದಾಗ ಆತ ಹೀಗೆ ಹೇಳಿದ:

“ಸ್ವಾಮಿ. ನಾನು ಇನ್ನು ಬಹು ದಿನ ಬದುಕಲಾರೆ. ನನಗೆ ಮಕ್ಕಳು ಮರಿ ಯಾರೂ ಇಲ್ಲ. ಹತ್ತಿರದ ದಾಯಾದಿಗಳೂ ಯಾರೂ ಇಲ್ಲ. ನನಗೆ ಇರುವುದು ಈ ಒಂದು ಸಣ್ಣ ಮನೆ ಮಾತ್ರ. ನಾನೂ ನನ್ನ ಹೆಂಡತಿಯೂ ದುಡಿದು ಸಂಪಾದಿಸಿದ ಪುಡಿಕಾಸುಗಳನ್ನು ಈ ಮನೆಯ ಮೇಲೆ ಹಾಕಿದ್ದೇನೆ. ಇದರ ಮೇಲೆ ಯಾವ ಸಾಲವೂ ಇಲ್ಲ. ಈ ಮನೆಯನ್ನು ತಾವು ಮಾರಿ, ಬಂದ ಹಣವನ್ನು ನೀವು ಕಟ್ಟಿಸಿರುವ ಮಲ್ಲಿಕಾರ್ಜುನ ಸ್ವಾಮಿಯ ಗುಡಿಯ ಸೇವೆಗೆ ಉಪಯೋಗಿಸಬೇಕು. ಇಷ್ಟು ಉಪಕಾರವನ್ನು ತಮ್ಮಿಂದ ನಾನು ಬೇಡುತ್ತೇನೆ.”

ವೆಂಕಟನಾರಣಪ್ಪನವರು ಆ ಬೇಡಿಕೆಯನ್ನೊಪ್ಪಿಕೊಂಡರು. ಅದರಂತೆ ಕ್ರಮವಾಗಿ ಪತ್ರ ಬರೆಯಿಸಿ ಅದಕ್ಕೆ ವೆಂಕಟರಾಮಯ್ಯನವರ ರುಜುವನ್ನೂ ಸಾಕ್ಷಿಗಳನ್ನೂ ಹಾಕಿಸಿ ಅದನ್ನು ತಮ್ಮ ಬಳಿ ಇಟ್ಟುಕೊಂಡರು.

ವೆಂಕಟರಾಮಯ್ಯ ಮೃತರಾದ ಬಳಿಕ ಕೆಲ ಮಂದಿ ಪುಣ್ಯಾತ್ಮರು ತಾಲ್ಲೂಕು ಕಛೇರಿಯ ಅಧಿಕಾರಿಗಳೊಂದಿಗೆ ಸಂಚುಮಾಡಿ ಆ ಮನೆಯನ್ನು ಹರಾಜು ಮಾಡಿದೆವೆಂಬ ನೆವದಿಂದ ನೂರು-ಇನ್ನೂರು ರೂಪಾಯಿಗಳಿಗೆ ಗಿಟ್ಟಿಸಿಕೊಳ್ಳಬೇಕೆಂದು ಉಪಾಯ ಹೂಡಿದರು.

ವೆಂಕಟನಾರಣಪ್ಪನವರು ಆಗಿನ ಮುಜರಾಯಿ ಕಮಿಷನರ ಬಳಿಗೆ ಹೋಗಿ "ಸ್ವಾಮಿ ಅದು ದೇವರ ಸ್ವತ್ತು. ದೇವಸ್ಥಾನದ ಪರವಾಗಿ ನಾನು ನಿಮ್ಮಲ್ಲಿ ಹೇಳುತ್ತಿದ್ದೇನೆ. ತಾವು ಖುದ್ದು ನೇಮಕ ಮಾಡಿದ ಅಧಿಕಾರಿ ಆ ಸ್ವತ್ತನ್ನು ಬಹಿರಂಗವಾಗಿ ಹರಾಜು ಹಾಕುವಂತೆ ಅಪ್ಪಣೆಯಾಗಬೇಕು" ಎಂದರು. ಅದರಂತೆ ಹರಾಜು ನಡೆಯಿತು. ದೇವಸ್ಥಾನದ ಪರವಾಗಿ ವೆಂಕಟನಾರಣಪ್ಪನವರು ಹಾಜರಿದ್ದರು. ಆ ಮನೆಗೆ ಸುಮಾರು ಮೂರು ಸಾವಿರ ರೂಪಾಯಿಗಳಷ್ಟು ಬೆಲೆ ಬಂದಿತು. ಈ ಹಣವನ್ನು ಸರಕಾರದ ಖಜಾನೆಯಲ್ಲಿ ಪುದುವಟ್ಟಾಗಿ ಇಟ್ಟು ಅದರ ವರಮಾನದಿಂದ (೧)ವೆಂಕಟರಾಮಯ್ಯನವರ ಮೃತಿ ದಿವಸ ಅಭಿಷೇಕ, ಬ್ರಾಹ್ಮಣ ಭೋಜನ, (೨) ಆತನ ಹೆಂಡತಿಯ ಮೃತಿದಿವಸ ಅಮ್ಮನವರ ಸನ್ನಿಧಿಯಲ್ಲಿ ಕುಂಕುಮಾರ್ಚನೆ, ಬ್ರಾಹ್ಮಣ ಭೋಜನ: (೩)ನವರಾತ್ರಿಯಲ್ಲಿ ಒಂದು ದಿವಸ ಅಭಿಷೇಕ ಪೂಜೆ-ಇವಿಷ್ಟರಲ್ಲಿ ಸಾಧ್ಯವಾದಷ್ಟು ನಡೆಯತಕ್ಕದ್ದೆಂದು ವೆಂಕಟನಾರಣಪ್ಪನವರು ಏರ್ಪಡಿಸಿದರು. ಈ ಏರ್ಪಾಟಿನಲ್ಲಿ ಸಾಧ್ಯವಾದಷ್ಟು ಭಾಗ ಈಗಲೂ ನಡೆಯುತ್ತಿದೆಯೆಂದು ಕೇಳಿದ್ದೇನೆ.

‘ವಿಜ್ಞಾನ’ ಪತ್ರಿಕೆ

ವೆಂಕಟನಾರಣಪ್ಪನವರು ಪ್ರತಿಪಾದನೆ ಮಾಡಹೊರಟ ವಿಷಯ ವಿಜ್ಞಾನ. ಅದು ಜನದ ಮನಸ್ಸಿಗೆ ಹಿಡಿಯಬೇಕಾದರೆ ಭಾಷೆ ಸುಲಭವಾಗಿರಬೇಕು. ಮತ್ತು ನಿಷ್ಕೃಷ್ಟವಾಗಿರಬೇಕು. ಈ ಉದ್ದೇಶಗಳಿಗಾಗಿ ವೆಂಕಟನಾರಣಪ್ಪನವರು ಪಟ್ಟ ಶ್ರಮ ನೋಡಿಯೇ ತಿಳಿಯಬೇಕಾದದ್ದು. ಅವರಿಗೆ ಹೆಚ್ಚು ಶ್ರಮವಾಗುತ್ತಿದ್ದದ್ದು ಕನ್ನಡದ ಮಾತುಗಳ ರೂಪಗಳ ಅನಿಶ್ಚತೆಯಿಂದ, ‘ಬಂತು’ ‘ಬಂದಿತು’ ‘ಬಂದದ್ದಾಯಿತು’ ಈ ಮೂರು ರೂಪಗಳಲ್ಲಿ ಯಾವುದನ್ನಿಟ್ಟುಕೊಳ್ಳಬೇಕು? ಬಾಯಲ್ಲಿ ಈ ಮಾತುಗಳನ್ನು ತಮ್ಮಷ್ಟಕ್ಕೆ ತಾವೇ ಹತ್ತು ಸಾರಿ ಜಪಿಸುವರು. ಆಮೇಲೆ ಈ ಮಾತುಗಳನ್ನು ವಾಕ್ಯಗಳಲ್ಲಿ ಪ್ರಯೋಗಿಸಿ ಅವುಗಳ ಧ್ವನಿ ಕಿವಿಗೆ ಹೇಗಿರುತ್ತದೆಂದು ನೋಡುವರು. ಮಾತು ಒಟ್ಟು ವಾಕ್ಯದ ಗಾತ್ರಕ್ಕೆ ಹೊಂದುವಂತೆ ಇರಬೇಕು. ವಾಕ್ಯದ ನಾನಾ ಭಾಗಗಳು ಸಮಭಾರದಲ್ಲಿರಬೇಕು. ಈ ಪರೀಕ್ಷೆಯು ಲೇಖನ ಅಚ್ಚಾಗುವವರೆಗೂ ನಡೆಯುತ್ತಿತ್ತು. ಎಷ್ಟೋ ಸಾರಿ ರಾತ್ರಿ ಹತ್ತು ಘಂಟೆಯಲ್ಲಿ (ಪ್ರೂಫ್) ಅಚ್ಚಿನ ಕರಡನ್ನು ಮುಂದಿರಿಸಿಕೊಂಡು ಯಾವುದೋ ಒಂದು ಪದಕ್ಕಾಗಿ, ಯಾವುದೋ ಒಂದು ಪ್ರಯೋಗಕ್ಕಾಗಿ ಒದ್ದಾಡುತ್ತಿದ್ದರು. ನಂಗಪುರಂ ವೆಂಕಟೇಶಯ್ಯಂಗಾರ್ಯರೂ ನಾನೂ ಹತ್ತಿರ ಇರುತ್ತಿದ್ದೆವು. ಕಡೆಯ ತೀರ್ಮಾನವಾದದ್ದು ಅವರ ಆಲೋಚನೆಯಿಂದಲ್ಲ; ಕಾಲದ ನಿಯಮದಿಂದ. ಅಮಾವಾಸ್ಯೆಯ ದಿನ ರಾತ್ರಿ ಹನ್ನೆರಡು ಘಂಟೆಗೆ ಮುಂಚೆ ಆ ತಿಂಗಳಿನ ‘ವಿಜ್ಞಾನ’ ಪತ್ರಿಕೆ ಪ್ರಕಟವಾಗಬೇಕು. ಆದದ್ದರಿಂದ ಹತ್ತುಘಂಟೆಗೆ ಪ್ರಿಂಟ್ ಆರ್ಡರ್ ಕೊಟ್ಟು ಅಲ್ಲಿಯೇ ಕುಳಿತು ಅಚ್ಚುಮಾಡಿಸಿ ಆರು ಪ್ರತಿಗಳನ್ನು ಹೊಲಿಸಿ ಬೈಂಡು ಮಾಡಿಸಿ ಅಂಚು ಸವರಿಸಿ ತೆಗೆದುಕೊಂಡು ಹೋಗುತ್ತಿದ್ದರು. ತಮ್ಮ ಮನೆ ಸೇರುವ ಮುಂಚೆ ಐದಾರು ಜನದ ಮನೆಗಳಲ್ಲಿ ತಾವೇ ಒಂದೊಂದು ಪ್ರತಿ ಹಾಕಿ “ಈಹೊತ್ತು ಪ್ರಕಟವಾಗಿದೆಯಪ್ಪೋ!” ಎಂದು ಕೂಗುಹಾಕಿ ಹೋಗುತ್ತಿದ್ದರು.

ಶಾಸ್ತ್ರಶುದ್ಧಿ, ನೀತಿಬೋಧೆ

ವೆಂಕಟನಾರಣಪ್ಪನವರ ಸಾಹಿತ್ಯದೃಷ್ಟಿಯನ್ನು ಕುರಿತು ಒಂದು ಮಾತನ್ನು ಹೇಳಬೇಕೆನ್ನಿಸುತ್ತದೆ. ಅವರ ಗಮನ ಮುಖ್ಯವಾಗಿದ್ದದ್ದು ಶಾಸ್ತ್ರದ ಕಡೆ, ಮತ್ತು ನೀತಿಯ ಕಡೆ. ರಸಭಾವಗಳಿಗೆ ಎರಡನೆಯ ಸ್ಥಾನ. ಅವರ ಸಹೋದ್ಯೋಗಿಗಳಲ್ಲಿ ಮುಖ್ಯರಾದ ಕೆಲವರಿಗೆ ಗಮನವಿದ್ದದ್ದು ಮುಖ್ಯವಾಗಿ ಮಾತಿನ ಸೊಗಸಿನ ಕಡೆ, ರಸಪುಷ್ಟಿಯ ಕಡೆ. ವೆಂಕಟನಾರಣಪ್ಪನವರು ಮಾತಿನ ಸೊಗಸು ಬೇಡವೆನ್ನುವವರಲ್ಲ. ಆದರೆ ಅದಕ್ಕಿಂತ ಮುಖ್ಯವಾದದ್ದು ಶಾಸ್ತ್ರಶುದ್ಧಿ ಮತ್ತು ನೀತಿಬೋಧನೆ. ನಮ್ಮ ವಿದ್ಯಾರ್ಥಿಗಳಲ್ಲಿ ನೀತಿಯ ಮಟ್ಟ ಸಾಲದು, ಅವರ ಹಿರಿಯರಲ್ಲಿ ಇನ್ನೂ ಸಾಲದು; ಸೌಶೀಲ್ಯ ಸದಾಚಾರಗಳನ್ನು ಬೆಳಸುವುದು ಸಾಹಿತ್ಯದ ಮುಖ್ಯ ಕೆಲಸ-ಇದು ಅವರ ತತ್ತ್ವ. ಈ ಉದ್ದೇಶದಿಂದ ಅವರು ಬರೆದದ್ದು 'ಗುಣಸಾಗರ' ಎಂಬ ಕಥೆ. ಇದು Dick Whittington ಎಂಬ ಲಂಡನ್ ಪಟ್ಟಣ ಪ್ರತಿಷ್ಠಾಪಕನೆನಿಸಿದ ಪುರಾಣ ಪುರುಷನನ್ನು ಕುರಿತದ್ದು. ಈ ವೀರ ಕಥೆಯನ್ನು ವಿಸ್ತರಿಸುವ ವ್ಯಾಜದಲ್ಲಿ ಅವರು ನಮ್ಮ ಯುವಕರಿಗೆ ಅನೇಕ ನೀತಿನಿಯಮಗಳನ್ನು ಬೋಧಿಸಿದ್ದಾರೆ. ಅವರ ಶಿಷ್ಯರೂ ಮಿತ್ರರೂ ಆದವರಲ್ಲಿ ಈ ಗ್ರಂಥವನ್ನು ಕುರಿತು ಬಗೆಬಗೆಯಾಗಿ ಟೀಕೆ ನಡೆಯಿತು. ವೆಂಕಟನಾರಣಪ್ಪನವರಾದರೋ ಅದರಿಂದ ಕೊಂಚವೂ ಆಯಾಸಪಟ್ಟವರಲ್ಲ. ಯಾರು ಮೆಚ್ಚಲಿ, ಯಾರು ಮೆಚ್ಚದಿರಲಿ; ಅವರ ಆತ್ಮಸಾಕ್ಷಿ ಅವರದು.

ಸೆನೇಟ್ ಸಭೆಯಲ್ಲಿ

ವಿಶ್ವವಿದ್ಯಾನಿಲಯದ ಸೆನೇಟ್ ಮೀಟಿಂಗುಗಳಲ್ಲಿ ಅವರು ಎಷ್ಟೋ ಬಾರಿ ಸಾಮಾನ್ಯ ಅಭಿಪ್ರಾಯಕ್ಕೆ ವಿರುದ್ಧವಾಗಿ ವಾದ ಹೂಡುತ್ತಿದ್ದರು. ಎಷ್ಟೋ ಸಮಯಗಳಲ್ಲಿ ಅವರ ವಾದಕ್ಕೆ ಬೆಂಬಲ ಕೊಟ್ಟವರು ಅವರೊಬ್ಬರೇ, ಅದಕ್ಕೆ ಅವರದೊಂದೇ ಎತ್ತಿದ ಕೈ.

ಒಂದು ಸಾರಿ ಕಾಲೇಜಿನ ವಿದ್ಯಾರ್ಥಿಗಳ (Roll call) ಹಾಜರಿ-ಗೈರುಹಾಜರಿಗಳನ್ನು ಗುರುತುಮಾಡಬೇಕಾದದ್ದಿಲ್ಲ-ಎಂಬ ಸೂಚನೆ ಬಂದಿತ್ತು. ಕೆಲಮಂದಿ ಯೂರೋಪಿಯನ್ ವಿದ್ವಾಂಸರು ಆ ಸೂಚನೆಯನ್ನು ಸಮರ್ಥಿಸುತ್ತಿದ್ದರು. ವೆಂಕಟನಾರಣಪ್ಪನವರು ಅದಕ್ಕೆ ವಿರೋಧ. ಕಾಲೇಜಿಗೆ ಬರುವ ವಿದ್ಯಾರ್ಥಿಗಳು Gentlmen (ದೊಡ್ಡಮನುಷ್ಯರು); ಅವರಿಗೆ ತಮ್ಮ ಜವಾಬ್ದಾರಿ ತಿಳಿದಿರುತ್ತದೆ; ಆದದ್ದರಿಂದ ನಾವು ಅವರನ್ನು ತನಿಖೆ ಮಾಡಬೇಕಾದದ್ದಿಲ್ಲ ಎಂಬುದು ಆ ಸೂಚನೆಯನ್ನು ಸಮರ್ಥಿಸುತ್ತಿದ್ದವರ ವಾದ. ವೆಂಕಟನಾರಣಪ್ಪನವರ ಪ್ರತಿವಾದ: "Gentlemen ಅಂತೆ!ನಮ್ಮ Gentlemen ಗಳನ್ನು ನಾವು ಬಲ್ಲೆವು. ಯಾರಾದರೂ ಒಳ್ಳೊಳ್ಳೆಯ ಬಟ್ಟೆಗಳನ್ನು ಹೊಲಿಸಿಕೊಟ್ಟರೆ ಎಲ್ಲರೂ Gentlemen ಗಳೇ! ತನಿಖೆಯಿಲ್ಲದಿದ್ದರೆ ಕೆಡುವವರು ನಮ್ಮ ಹುಡುಗರು. ಅವರು ಕೆಟ್ಟರೆ ನಷ್ಟಪಡುವವರು ನಾವು." ವೆಂಕಟನಾರಣಪ್ಪನವರ ಈ ಮಾತುಗಳನ್ನು ಕೇಳಿದ ಮೇಲೆ, ಮುಂಚೆ ನಗುತ್ತಿದ್ದ ಸಭೆ ಗಂಭೀರವಾಯಿತು. ಅವರ ಮಾತು ನಿಷ್ಠುರವಾದದ್ದು: ಅದರ ಒಳತಿರುಳು ಮಧುರವಾದದ್ದು.

ಇನ್ನೊಂದು ಸಾರಿ ಅವರು ಮಾಡಿದ ಯಾವುದೋ ಸೂಚನೆಯನ್ನು ಕಟ್ಟಿಮಂಚಿ ರಾಮಲಿಂಗ ರೆಡ್ಡಿಯವರು ಕೊಂಚ ಲೇವಡಿ ಮಾಡಿ ಇಂಗ್ಲಿಷಿನಲ್ಲಿ "My friend the Don Quixote of this house" ಎಂದರು. ವೆಂಕಟನಾರಣಪ್ಪನವರು 'I protest' ಎಂದರು. ರೆಡ್ಡಿಯವರು ಆ ಕೂಡಲೆ ವ್ಯಸನದ ಮುಖ ಮಾಡಿ "I apologize, and I would apologize to nobody in this house more readily than to Mr. Venkatanaranappa. I respect him most profoundly and would not offend him under any circumstances" ಎಂದರು, ಕೊಂಚ ಹೊತ್ತಿನಲ್ಲಿ ಸಭೆ ಮುಗಿಯಿತು.

ಎಲ್ಲರೂ ಹೊರಕ್ಕೆ ಬಂದಾಗ ರೆಡ್ಡಿಯವರು ವೆಂಕಟನಾರಣಪ್ಪನವರ ಬಳಿಗೆ ಬಂದು Mr. Venkatanaranappa, are we not all Quixotic now and then? And Quixote was a good man" ಎಂದರು.

ವೆಂಕಟನಾರಣಪ್ಪನವರು “Yes, yes, we are all Quixotic at times” ಎಂದು ಒಪ್ಪಿಕೊಂಡರು. ಇಬ್ಬರೂ ಗಟ್ಟಿಯಾಗಿ ನಗುತ್ತಿದ್ದರು.

ಪಂಪಭಾರತ

೧೯೩೦ರ ಸುಮಾರಿನಲ್ಲಿ ಪಂಪಭಾರತವನ್ನು ಪುನಃಪರಿಷ್ಕರಣಮಾಡಿ ಪುನಃ ಪ್ರಕಟನೆ ಮಾಡುವ ಭಾರವನ್ನು ಪರಿಷತ್ತು ಕೈಗೊಂಡಿತು. ಆಗ ಪರಿಷತ್ತು ಶಂಕರಪುರದಲ್ಲಿ ಬಾಡಿಗೆ ಕಟ್ಟಡದಲ್ಲಿತ್ತು. ಪರಿಷ್ಕರಣಕಾರ್ಯಕ್ಕಾಗಿ ಗೊತ್ತಾಗಿದ್ದ ಉಪಸಮಿತಿಯಲ್ಲಿದ್ದವರು- ವೆಂಕಟನಾರಣಪ್ಪನವರು, ಉಪಸಮಿತಿಯ ಅಧ್ಯಕ್ಷರು; ಬಿ.ಎಂ. ಶ್ರೀಕಂಠಯ್ಯನವರು, ಟಿ.ಎಸ್. ವೆಂಕಣ್ಣಯ್ಯನವರು, ನಾನು, ಇನ್ನೂ ಒಬ್ಬಿಬ್ಬರಿದ್ದರು. ಪರಿಷ್ಕರಣಕಾರ್ಯದಲ್ಲಿದ್ದ ಮುಖ್ಯ ಕಷ್ಟ ಗ್ರಂಥಪಾತಗಳನ್ನು ಭರ್ತಿಮಾಡುವುದು. ಪಂಪಭಾರತದ ಪ್ರಥಮ ಮುದ್ರಣದಲ್ಲಿ ಆಗ ತಕ್ಕಷ್ಟು ಶುದ್ಧವಾದ ಓಲೆಯ ಪ್ರತಿಗಳು ಸಿಕ್ಕದೆ ಇದ್ದ ಕಾರಣದಿಂದಲೋ ಆಗಿನ ಪರಿಷ್ಕರ್ತರ ಅನವಧಾನದ ಕಾರಣದಿಂದಲೋ ಅಲ್ಲಲ್ಲಿ ಪದಗಳೂ ವಾಕ್ಯಗಳೂ ಲುಪ್ತವಾಗಿದ್ದವು. ಕೆಲವು ಕಡೆ ಗ್ರಂಥ ಅರ್ಥವಾಗದೆಯೂ ಇತ್ತು. ಹೀಗೆ ಆಗಿದ್ದ ಲೋಪಗಳನ್ನು ನಿವಾರಣೆಮಾಡಿ ಉಚಿತ ಪಾಠಗಳನ್ನು ಸೇರಿಸುವುದು ನಮಗಿದ್ದ ಕರ್ತವ್ಯ. ಇದಕ್ಕಾಗಿ ಪ್ರತಿರಾತ್ರಿಯೂ ಎಂಟು ಘಂಟೆಗೆ ಸೇರಿ ಹನ್ನೊಂದು ಘಂಟೆಯವರೆಗೆ ಕೆಲಸ ಮಾಡತಕ್ಕದ್ದೆಂದು ನಿಶ್ಚಯಮಾಡಿಕೊಂಡೆವು. ಬಿ.ಎಂ.ಶ್ರೀಕಂಠಯ್ಯನವರು ಆಗ ಮೈಸೂರಿನಲ್ಲಿದ್ದದ್ದರಿಂದ ತಮ್ಮ ಸೂಚನೆಗಳನ್ನು ಬರೆದು ಕಳಿಸುತ್ತಿದ್ದರು. ಅದರಲ್ಲಿ ಅವರು ಪಂಪನು ಜಾಗರೂಕನಾದ ಕವಿಯೆಂದೂ ಆತನ ಶೈಲಿ ಇತರರ ಶೈಲಿಯಂತಲ್ಲವೆಂದೂ ಆತನು ನಿರರ್ಥಕವಾಗಿ ಪದಗಳನ್ನು ಭರ್ತಿಮಾಡುವವನಲ್ಲವೆಂದೂ ಆತನ ಪ್ರಯೋಗಗಳು ಒಂದು ವೈಶಿಷ್ಟ್ಯ (Individuality) ವುಳ್ಳವೆಂದೂ ಪದೇ ಪದೇ ಹೇಳುತ್ತಿದ್ದರು. ಶ್ರೀಕಂಠಯ್ಯನವರ ಸೂಚನೆಗಳು ಬಹುಮಟ್ಟಿಗೆ ಅಂಗೀಕೃತವಾದವು.

ನಾವು ಸೇರಿದಾಗ ಪರಿಷತ್ತಿನ ಇಬ್ಬರು ಪಂಡಿತರಾದ ನಂಜುಂಡಶಾಸ್ತ್ರಿಗಳಲ್ಲಿ ಒಬ್ಬರಾದರೂ ನಮ್ಮ ಜೊತೆಗೆ ಇರುತ್ತಿದ್ದರು. ವೆಂಕಟನಾರಣಪ್ಪನವರ ಹೊರತು ಮಿಕ್ಕನಾವೆಲ್ಲ ಶಂಕರಪುರದಲ್ಲಿಯೇ ವಾಸವಾಗಿದ್ದವರು.

ರಾತ್ರಿ ಸುಮಾರು ೮-೩೦ ಘಂಟೆಗೆ ಒಂದು ಪ್ರಸಂಗ ಬಂತೆಂದಿಟ್ಟುಕೊಳ್ಳೋಣ. ಅಲ್ಲಿಯ ಗ್ರಂಥಪಾತವನ್ನು ಭರ್ತಿಮಾಡಬೇಕು. ಅಥವಾ ಅಲ್ಲಿದ್ದ ಅರ್ಥವಾಗದ ಪಾಠವನ್ನು ಉಚಿತಾರ್ಥ ಕೊಡುವಂತೆ ತಿದ್ದಬೇಕು. ವೆಂಕಟನಾರಣಪ್ಪನವರು “ಏನಪ್ಪಾ, ಇದಕ್ಕೆ ಐದು ನಿಮಿಷ ಬೇಕೋ ಮೂರು ನಿಮಿಷ ಸಾಕೋ?” ಎಂದು ಕೇಳುವರು. ವೆಂಕಣ್ಣಯ್ಯನವರೂ ನಾನೂ “ಹೀಗೆ ಅವಸರಪಡಿಸಿದರೆ ಹೇಗೆ ಸಾರ್?” ಎನ್ನುವೆವು. ಎಷ್ಟೋ ತಿಣುಕುವೆವು.

ಎಷ್ಟೋ ಮುಕ್ಕುವೆವು. ಪಾಠ ನಮಗೆ ಹೊಳೆಯುತ್ತಿರಲಿಲ್ಲ. ಆಗ ವೆಂಕಟನಾರಣಪ್ಪನವರು "ಇನ್ನೆರಡು ನಿಮಿಷ ಕೊಡುತ್ತೇನೆ" ಎನ್ನುವರು. ಪುನಃ ಅದೇ ಕಷ್ಟ. ಅವರು "ಇನ್ನೂ ಮೂರು ನಿಮಿಷ ಕೊಡುತ್ತೇನೆ" ಎನ್ನುವರು ಆಗಲೂ ನಾವು ಇದ್ದಂತೆಯೇ ಇದ್ದರೆ- "ಇನ್ನು ಇದನ್ನು ಫೈಸಲು ಮಾಡಬೇಕು. ಗ್ರಂಥ ಹಿಂದಿನ ಮುದ್ರಣದಲ್ಲಿದ್ದಂತೆ ಅದನ್ನು ಬಿಟ್ಟು ಮುಂದಕ್ಕೆ ಹೋಗೋಣ" -ಎನ್ನುವರು. ಹೀಗೆ ತಕರಾರುಗಳಿಂದಲೇ ಮುಂದೆ ನಡೆದು ಮುಗಿದದ್ದು ಆ ಕೆಲಸ. ವೆಂಕಟನಾರಣಪ್ಪನವರು ಅಷ್ಟು ಕಟ್ಟುನಿಟ್ಟಾಗಿದ್ದದ್ದರಿಂದ ಗ್ರಂಥ ಹೊರಗೆ ಬರುವಂತಾಯಿತು. ಅವರು ಸಡಿಲ ಬಿಟ್ಟಿದ್ದಿದ್ದರೆ ಗ್ರಂಥ ಈಹೊತ್ತಿನವರೆಗೂ ಪ್ರಕಟವಾಗುತ್ತಿರಲಿಲ್ಲ.

ಆಮೇಲೆ ಅನೇಕ ವರ್ಷಗಳಾದನಂತರ ನನ್ನ ವಿದ್ಯಾಗುರುಗಳಲ್ಲೊಬ್ಬರಾದ ಕಾನಕಾನಹಳ್ಳಿ ವರದಾಚಾರ್ಯರು ಪರಿಷತ್ತಿಗೆ ಬಂದು ನನ್ನನ್ನು ಕಂಡಾಗ "ಏನಯ್ಯಾ ನಿನ್ನ ಪಂಪ ಭಾರತವನ್ನು ನಾರುತಾ ಇರುವ ಹಾಗೆ ಮಾಡಿದ್ದೀ?" ಎಂದರು.

ನಾನು ಹೇಳಿದೆ: "ಅದು ಎಷ್ಟು ಕಷ್ಟದ ಕೆಲಸವೆಂಬುದು ನಿಮಗೆ ಗೊತ್ತಿದೆ."

ಅವರು: "ನಿಮಗೆ ಅರ್ಥವಾಗದೆಹೋದರೆ ಪಂಪನ ತಲೆಯ ಮೇಲೆ ಟೊಕ್ ಅನ್ನಿಸುವುದು!"

ನಾನು: "ಅಂಥ ಸಮಯದಲ್ಲಿ ತಮ್ಮ ಸಹಾಯ ಬೇಕಾಗಿತ್ತು. ಅದು ಬರಲಿಲ್ಲವಲ್ಲ?"

ಅವರ ಸಹಾಯವನ್ನು ಬೇಡಿಕೊಂಡದ್ದಾಗಿತ್ತು. ಅವರು ಹೇಳಿದರು: "ನನ್ನ ತಲೆಗೆ ಒಂದು ಪಿಶಾಚಿ ಇದೆಯಲ್ಲಪ್ಪ-ಭಟ್ಟಾಕಲಂಕ ಎಂಬುದು. ಆ ಪಿಶಾಚಿ ಬಿಟ್ಟರಲ್ಲವೆ ಇನ್ನೊಂದಕ್ಕೆ ಸ್ಥಾನ?"

ನಾನು: "ಅದು ದೇಶದ ಗ್ರಹಚಾರ. ತಾವು ಮಾಡಬೇಕಾಗಿದ್ದದ್ದು ಈ ಕೆಲಸ. ತಮ್ಮನ್ನು ಬಿಡಬೇಕಾಗಿ ಬಂದಮೇಲೆ ನಾವು ನಾಲ್ವರು ಗ್ರಂಥ ಹೇಗಾದರೂ ಹೊರಗೆ ಬಂದರೆ ಸಾಕೆಂದು ತೀರ್ಮಾನಿಸಿ ನಮ್ಮಿಂದಾದಷ್ಟು ಮಾಡಿದೆವು. ಪಂಪಭಾರತದಂಥ ಮಹಾಗ್ರಂಥ ಇನ್ನೂ ಎಷ್ಟೋ ಸಾರಿ ಪುನರ್ಮುದ್ರಣವಾಗಬೇಕಾಗುತ್ತದೆ. ಮೂರನೆಯ ಮುದ್ರಣದ ವೇಳೆಗಾದರೂ ತಮಗೆ ಬಿಡುವಾದರೆ ಗ್ರಂಥ ಸರ್ವಾಂಗಸಂಪೂರ್ಣವಾಗುತ್ತದೆ."

ಅವರು ನಕ್ಕರು. ನಾನೂ ನಕ್ಕೆ. ಪುನಃಪರಿಷ್ಕರಣದಲ್ಲಿ ಸೇರುವ ಅವಕಾಶ ನಮ್ಮ ಪಾಲಿಗೆ ಬರತಕ್ಕದ್ದಲ್ಲವೆಂದು ಇಬ್ಬರೂ ತಿಳಿದುಕೊಂಡಿದ್ದೆವು.

ವಿಶ್ವೇಶ್ವರಯ್ಯನವರ ಗ್ರಂಥಭಂಡಾರ

ವಿಶ್ವೇಶ್ವರಯ್ಯನವರು ದಿವಾನರಾಗುವ ಸಮಯದ ಸುಮಾರಿನಲ್ಲಿ ಅವರಿಗೂ ವೆಂಕಟನಾರಣಪ್ಪನವರಿಗೂ ಇದ್ದ ಪರಿಚಯ ಹೆಚ್ಚಾಯಿತು. ವಿಶ್ವೇಶ್ವರಯ್ಯನವರು ತಮ್ಮ ಖಾಸಗಿ (Private) ಗ್ರಂಥಭಂಡಾರವನ್ನು ಕ್ರಮಪಡಿಸಿಕೊಡಬೇಕೆಂದು ವೆಂಕಟನಾರಣಪ್ಪನವರನ್ನು ಕೋರಿದರು. ವೆಂಕಟನಾರಣಪ್ಪನವರು ಆ ಕಾರ್ಯವನ್ನು ಬಹು ಸಂತೋಷದಿಂದ ನಡಸಿಕೊಟ್ಟರು. ವಿಶ್ವೇಶ್ವರಯ್ಯನವರಿಗೆ ತುಂಬ ಮೆಚ್ಚಿಕೆಯಾಯಿತು. ಅವರು ತಮ್ಮ ಪದ್ಧತಿಯಂತೆ ಒಂದು ಕೃತಜ್ಞತೆಯ ಗುರುತನ್ನು ದ್ರವ್ಯರೂಪದಲ್ಲಿ ವೆಂಕಟನಾರಣಪ್ಪನವರಿಗೆ ಕೊಡಬಯಸಿದರು. ಆಗ ಅವರಿಬ್ಬರಿಗೂ ತಕರಾರು ಬಂತು. ಇಂಥ ಒಳ್ಳೆಯ ಕೆಲಸಮಾಡಲು ಅವಕಾಶ ದೊರೆತದ್ದೇ ತಮಗೆ ಸಾಕಷ್ಟು ಲಾಭವೆಂದೂ ವಿಶ್ವೇಶ್ವರಯ್ಯನವರು ಹಣಕೊಡುವುದೆಂದರೆ ಅದು ತಮ್ಮನ್ನು ಅಗೌರವ (Insult) ಪಡಿಸಿದಂತಾದೀತೆಂದೂ ವೆಂಕಟನಾರಣಪ್ಪನವರು ಹಠ ಹಿಡಿದರು.

ವಿಶ್ವೇಶ್ವರಯ್ಯನವರಾದರೋ ತಾವೂ ಯಾರಿಂದಲೂ ಉಚಿತ ಸೇವೆ ತೆಗೆದುಕೊಳ್ಳಲಿಷ್ಟವಿಲ್ಲವೆಂದೂ ತಮಗೆ ದ್ರವ್ಯಾನುಕೂಲವಿರುವುದರಿಂದ ಬಿಟ್ಟಿಸೇವೆ ಪಡೆದುಕೊಂಡರೆ ಅದು ಕಳ್ಳತನವಾದೀತೆಂದೂ ವಾದಿಸಿದರು. ಕಡೆಗೆ ವಿಶ್ವೇಶ್ವರಯ್ಯನವರು ತಮಗೆ ಇಷ್ಟ ಬಂದ ಯಾವುದಾದರೂ ಪುಸ್ತಕವನ್ನು ಗುರುತಾಗಿ ಕಳಿಸಿದರೆ ವೆಂಕಟನಾರಣಪ್ಪನವರು ಸ್ವೀಕರಿಸಿಯಾರೆಂದು ಸೂಚನೆ ಕೊಟ್ಟಿದ್ದಾಯಿತು. ಆ ಮೇರೆಗೆ ವಿಶ್ವೇಶ್ವರಯ್ಯನವರು Scientific American ಎಂಬ ಪುಸ್ತಕದ ಸಂಪುಟಗಳನ್ನೂ ಇತರ ಕೆಲವು ಪುಸ್ತಕಗಳನ್ನೂ ತಮ್ಮ ಕೃತಜ್ಞತೆಯ ಗುರುತಾಗಿ ವೆಂಕಟನಾರಣಪ್ಪನವರಿಗೆ ಕೊಟ್ಟರು.

ವಿಜ್ಞಾನ ಪ್ರಚಾರ

ಈ ಮಾತುಕಥೆ ನಡೆಯುತ್ತಿದ್ದಾಗ ಮೈಸೂರು ದೇಶದಲ್ಲಿ ವಿಜ್ಞಾನ ಪ್ರಚಾರಕ್ಕಾಗಿ (Science education) ನಡೆಯಬೇಕಾದ ಪ್ರಯತ್ನಗಳ ವಿಚಾರ ಬಂತು. ಆಗ ಅವರಿಬ್ಬರೂ ಮಾಡಿಕೊಂಡ ತೀರ್ಮಾನದ ಮೇರೆಗೆ 'ವಿಜ್ಞಾನ ಪ್ರಚಾರ ಸಮಿತಿ' ಎಂಬ ಸಂಸ್ಥೆಯನ್ನು ಸ್ಥಾಪಿಸತಕ್ಕದ್ದೆಂದೂ ಅದು 'ವಿಜ್ಞಾನ' ಎಂಬ ಹೆಸರಿನ ಮಾಸಪತ್ರಿಕೆಯನ್ನು ನಡಸತಕ್ಕದ್ದೆಂದೂ ಗೊತ್ತಾಯಿತು. ಈ ವಿಜ್ಞಾನ ಸಮಿತಿಯ ಪ್ರಾರಂಭೋತ್ಸವ ಜನೋಪಕಾರಿ ದೊಡ್ಡಣ್ಣಶೆಟ್ಟರವರ ಸಭಾಮಂದಿರದಲ್ಲಿ ನಡೆಯಿತು. ಆ ದಿನ ವಿಶ್ವೇಶ್ವರಯ್ಯನವರು ಪ್ರಾರಂಭ ಭಾಷಣ ಮಾಡಿದರು. ವೆಂಕಟನಾರಣಪ್ಪನವರು ಭೌತಶಾಸ್ತ್ರದ ಕೆಲವು ವಿಷಯಗಳನ್ನು ಕುರಿತು Magic Lantern ಚಿತ್ರಗಳನ್ನು ತೋರಿಸಿ ಕನ್ನಡದಲ್ಲಿ ಉಪನ್ಯಾಸ ಮಾಡಿದರು. ನಂಗಪುರಂ ವೆಂಕಟೇಶಯ್ಯಂಗಾರ್ಯರು ಖಗೋಳ ಶಾಸ್ತ್ರವನ್ನು ಕುರಿತು ಮಾತನಾಡಿದರು. ಅದೇ ಉಪನ್ಯಾಸ ಮಾಲಿಕೆಯಲ್ಲಿ ಭಾಷಣ ಮಾಡಲೊಪ್ಪಿದ್ದವರು ಇನ್ನೂ ಕೆಲವರಿದ್ದರು. ಅವರ ಪೈಕಿ ಒಬ್ಬರು ವೈ.ಕೆ.ರಾಮಚಂದ್ರರಾಯರು. ಇವರು ಗೃಹರಚನೆಯ ವಾಸ್ತುಶಿಲ್ಪ ಎಂಬ ವಿಷಯವನ್ನು ತೆಗೆದುಕೊಂಡಿದ್ದರು.

ಮೊದಲನೆಯ ಉಪನ್ಯಾಸದ ದಿನ ಸಭಾಮಂದಿರದಲ್ಲಿ ಕಾಲಿಡಲು ಜಾಗವಿಲ್ಲದಂತೆ ಜನ ಸೇರಿದ್ದರು. ಎರಡನೆಯ ದಿನ ಆ ಮಂದಿರದ ಅರ್ಧದಷ್ಟಕ್ಕೂ ಜನರಿರಲಿಲ್ಲ. ಮೂರನೆಯ ದಿನ ಇನ್ನೂ ಕಡಿಮೆ. ಹೀಗಾದದ್ದರಿಂದ ವೆಂಕಟನಾರಣಪ್ಪನವರ ಉತ್ಸಾಹ ಕುಗ್ಗಲಿಲ್ಲ. ಆದರೆ ಉಪನ್ಯಾಸ ಮಾಡಲೊಪ್ಪಿದವರ ಉತ್ಸಾಹ ಮೊದಲಿನಂತೆ ನಿಲ್ಲಲಿಲ್ಲ. ಆ ಪ್ರಯತ್ನವನ್ನು ಕಾಲಾನುಕಾಲಕ್ಕೆ ಪುನಃ ಪ್ರಾರಂಭ ಮಾಡೋಣವೆಂದು ಆಗ್ಗೆ ಬದಿಗಿರಿಸಿದ್ದಾಯಿತು. ಆಗ ನಡೆದ ಉಪನ್ಯಾಸಗಳಲ್ಲಿ ಒಂದೆರಡು ಪುಸ್ತಕರೂಪದಲ್ಲಿ ಪ್ರಕಟವಾದವೆಂದು ನನ್ನ ಜ್ಞಾಪಕ.

ಇಂಗ್ಲಿಷ್-ಕನ್ನಡ ನಿಘಂಟು

‘ವಿಜ್ಞಾನ’ ಮಾಸಪತ್ರಿಕೆ ನಡಸುತ್ತಿದ್ದಾಗ ವೆಂಕಟನಾರಣಪ್ಪನವರಿಗೆ ಒಂದು ಇಂಗ್ಲಿಷ್-ಕನ್ನಡ ನಿಘಂಟಿನ ಆವಶ್ಯಕತೆ ಚೆನ್ನಾಗಿ ಮನದಟ್ಟಾಯಿತು. ಅದಕ್ಕೆ ಹಿಂದಿನಿಂದಲೂ ಅವರು ಇಂಥ ನಿಘಂಟಿನ ಆವಶ್ಯಕತೆಯನ್ನು ಕುರಿತು ಜನಬೋಧನೆ ಮಾಡುತ್ತಿದ್ದರು. ಹಿಂದೆ ಇದ್ದ ಜೈಗ್ಲರ್ ಮೊದಲಾದ ವಿದೇಶೀಯರ ನಿಘಂಟುಗಳು ಲೇಖನಪ್ರಯೋಗದಲ್ಲಿ ತಕ್ಕಷ್ಟು ಉಪಯುಕ್ತವಲ್ಲವೆಂದು ಕಂಡುಬಂದಿತ್ತು. ವಿಜ್ಞಾನಲೇಖನದಲ್ಲಿ ಅನೇಕ ಹೊಸಹೊಸ ವಿಷಯಗಳನ್ನು ಹೊಸಹೊಸ ಛಾಯೆಗಳಲ್ಲಿ ಹೊಸಹೊಸ ಸಂದರ್ಭಗಳಲ್ಲಿ ಹೇಳಬೇಕಾಗುತ್ತದೆ. ವಿಜ್ಞಾನಕ್ಕೆ ಇಂಗ್ಲಿಷ್ ಭಾಷೆ ಸಹಜವಾಗಿ ಬೆಳೆದು ಪಳಗಿದೆ. ಅಂಥ ಇಂಗ್ಲಿಷ್ ಮಾತುಗಳಿಗೆ ಸಮನಾಗಿ ಉಪಯೋಗಿಸಲಾಗುವ ಕನ್ನಡ ಮಾತುಗಳು ಸಿದ್ಧವಾಗಿಲ್ಲ. ತಕ್ಕ ಪಾರಿಭಾಷಿಕ ಶಬ್ದಗಳನ್ನು ಕನ್ನಡದಲ್ಲಿ ತಯಾರು ಮಾಡಿ ಈ ಲೋಪವನ್ನು ಪರಿಹರಿಸುವವರೆಗೂ ನಮ್ಮ ಭಾಷೆ ವಿಜ್ಞಾನ ಕ್ಷೇತ್ರದಲ್ಲಿ ಬೆಳವಣಿಗೆ ಹೊಂದಲಾರದೆಂದು ವೆಂಕಟನಾರಣಪ್ಪನವರು ಅನುಭವ ಪ್ರಯೋಗಗಳಿಂದ ತಿಳಿದುಕೊಂಡಿದ್ದರು.

ದಿವಾನ್ ಸರ್ ಮಿರ್ಜಾ ಸಾಹೇಬರವರಿಗೆ ವೆಂಕಟನಾರಣಪ್ಪನವರ ವಿಷಯದಲ್ಲಿದ್ದ ಅಪಾರ ವಿಶ್ವಾಸ ಗೌರವಗಳನ್ನು ಕುರಿತು ಬೇರೆಕಡೆ ಪ್ರಸ್ತಾವ ಮಾಡಿದೆ. [3] ವೆಂಕಟನಾರಣಪ್ಪನವರು ತಮ್ಮ ಮನಸ್ಸಿನಲ್ಲಿದ್ದ ಇಂಗ್ಲಿಷ್-ಕನ್ನಡ ನಿಘಂಟಿನ ಆಲೋಚನೆಯನ್ನು ಮಿರ್ಜಾ ಸಾಹೇಬರವರಿಗೆ ತಿಳಿಯಪಡಿಸಿದರು. ಮಿರ್ಜಾರವರು ಆ ಆಲೋಚನೆಯನ್ನು ಶ್ರೀಮನ್ಮಹಾರಾಜರವರಿಗೆ ತಕ್ಕ ಸಮಯದಲ್ಲಿ ಅರಿಕೆ ಮಾಡಿ ಅವರ ಅನುಮತಿಯನ್ನು ಪಡೆದುಕೊಂಡರು. ಹೀಗೆ ಉಪಕ್ರಮವಾದದ್ದು; ೧೯೪೬ ರಲ್ಲಿ ಪ್ರಕಟವಾದ ಮೈಸೂರು ವಿಶ್ವವಿದ್ಯಾನಿಲಯದ ಇಂಗ್ಲಿಷ್-ಕನ್ನಡ ನಿಘಂಟು.

ಆದರೆ ಸರಕಾರವು ಈ ವಿಷಯದಲ್ಲಿ ತೀರ್ಮಾನ ಕೊಟ್ಟದ್ದು ಅಷ್ಟೇನೂ ಸುಲಭದ ಕೆಲಸವಾಗಲಿಲ್ಲ. ಮಿರ್ಜಾ ಸಾಹೇಬರ ಸಹಸಚಿವರಲ್ಲಿ ಕೆಲವರು ಈ ವಿಷಯದಲ್ಲಿ ಉತ್ಸಾಹಿಗಳಾಗಿರಲಿಲ್ಲ. ಮ್ಯಾಥನ್ ಸಾಹೇಬರವರು ನನ್ನನ್ನು ಒಂದು ಸಾರಿ ಕೇಳಿದರು:

“ಈಗ ಈ ಬಗ್ಗೆ ಹೊಸ ಪ್ರಯತ್ನ ನಡೆಯಬೇಕಾದ ಕಾರಣವೇನಿದೆ? ಬ್ಯಾಸಲ್ ಮಿಷನ್ ಪ್ರೆಸ್ಸಿನವರು ಇಂಗ್ಲಿಷ್-ಕನ್ನಡ ಕನ್ನಡ-ಇಂಗ್ಲಿಷ್ ನಿಘಂಟುಗಳನ್ನು ಪ್ರಕಟಿಸಿದ್ದಾರೆ. ಎಷ್ಟೋ ಕಾಲದಿಂದ ಆ ಗ್ರಂಥಗಳು ಉಪಯೋಗದಲ್ಲಿವೆ. ಅವು ಸಾಲದೆಂದರೆ ಆ ನಿಘಂಟುಗಳನ್ನೇ ಇನ್ನೂ ವಿಸ್ತಾರಪಡಿಸಿ ಪರಿಷ್ಕರಣ ಮಾಡಿ ಪ್ರಕಟಿಸುವಂತೆ ನಾವು

ಬ್ಯಾಸಲ್ ಮಿಷನ್ ಪ್ರೆಸ್ಸಿನವರನ್ನೇ ಕೇಳಿಕೊಳ್ಳೋಣ. ಅವರಿಗೆ ಇಂಥ ಕೆಲಸದ ಮಾಹಿತಿ ಚೆನ್ನಾಗಿದೆ. ಸರಕಾರ ಪ್ರೋತ್ಸಾಹಕೊಟ್ಟರೆ ಅವರು ಕೆಲಸವನ್ನು ಇನ್ನೂ ಚೆನ್ನಾಗಿ ಮಾಡಿಯಾರು."

ಇದಕ್ಕೆ ಉತ್ತರವಾಗಿ ನಾನು ಹೇಳಿದೆ: "ಅಂಥ ವಿದೇಶೀಯರ ಕೆಲಸದಿಂದ ಪ್ರಕೃತಕ್ಕೆ ಹೆಚ್ಚು ಉಪಯೋಗವಾಗಲಾರದು. ಇಂಗ್ಲಿಷಿನ ಪದಗಳಿಗೆ ಎಂಥ ಪದಗಳು ಕನ್ನಡದಲ್ಲಿ ಸರಿಹೊಂದುತ್ತವೆ ಎಂಬುದನ್ನು ನಿರ್ಣಯ ಮಾಡಬಲ್ಲವರು ಕನ್ನಡದಲ್ಲಿ ಬರೆಯುವ ಮತ್ತು ಭಾಷಣ ಮಾಡುವ ಕೆಲಸದಲ್ಲಿ ನಿರತರಾಗಿರುವವರು. ನಾವು ಕನ್ನಡವೇ ಹುಟ್ಟು ಭಾಷೆಯಾಗಿರುವ ಜನದಲ್ಲಿ ದಿನೇ ದಿನೇ ಕ್ಷಣೇ ಕ್ಷಣೇ ಮಾತುಕಥೆ ನಡೆಸುತ್ತೇವೆ. ಯಾವ ವಿಷಯವನ್ನು ಹೇಗೆ ಹೇಳಿದರೆ ನಮ್ಮ ಜನಕ್ಕೆ ಅದು ಸುಲಭವಾಗಿಯೂ ವಿಶದವಾಗಿಯೂ ತಿಳಿಯಲಾಗುತ್ತದೆ ಎಂಬುದನ್ನು ನಾವು ಬಲ್ಲೆವು. ವಿದೇಶೀಯರಿಗೆ ಇಂಥ ಜನಾನುಭವವಿಲ್ಲ. ಆ ವಿದೇಶೀಯರು ವಿಜ್ಞಾನ ಲೇಖನದಲ್ಲಿ ಪ್ರವೃತ್ತರಾದವರೂ ಅಲ್ಲ. ಮೇಲಾಗಿ, ನಮ್ಮ ಭಾಷೆಯ ಕೆಲಸವನ್ನು ಮಾಡಲು ನಮಗೆ ಸಾಮರ್ಥ್ಯವಿಲ್ಲವೆಂದಾಗಲಿ ಶ್ರದ್ಧೆಯಿಲ್ಲವೆಂದಾಗಲಿ ಒಪ್ಪಿಕೊಳ್ಳಲಾದೀತೆ?"

ನಿರ್ಧಾರ

ಹೀಗೆ ಸ್ವಲ್ಪ ಕಾಲ ತಕರಾರು ನಡೆದ ಬಳಿಕ ಸರಕಾರದ ತೀರ್ಮಾನ ಗೊತ್ತಾಗಿ ಮೈಸೂರು ವಿಶ್ವವಿದ್ಯಾನಿಲಯದ ಆಡಳಿತದ ಮೂಲಕ ಇಂಗ್ಲಿಷ್-ಕನ್ನಡ ನಿಘಂಟಿನ ಕೆಲಸ ನಡೆಯತಕ್ಕದೆಂದು ನಿರ್ಧಾರವಾಯಿತು. ಅದರಂತೆ ಬೆಳ್ಳಾವೆ ವೆಂಕಟನಾರಣಪ್ಪನವರು ಪ್ರಧಾನ ಸಂಪಾದಕರಾದರು. ಸಂಪಾದಕ ಮಂಡಲಿಯಲ್ಲಿ ಏಳೆಂಟು ಮಂದಿ ಸದಸ್ಯರಿದ್ದರು. ವೆಂಕಟನಾರಣಪ್ಪನವರ ಸಂಕಲ್ಪಶ್ರದ್ಧೆಯೂ ಮಿರ್ಜಾ ಸಾಹೇಬರ ಸಂತತ ವಿಶ್ವಾಸವೂ ಇಲ್ಲದೆ ಹೋಗಿದ್ದಲ್ಲಿ ಆ ನಿಘಂಟಿನ ಪ್ರಯತ್ನ ರೂಪಕ್ಕೆ ಬರುತ್ತಿರಲಿಲ್ಲವೆಂದು ನಾನು ಧಾರಾಳವಾಗಿ ಹೇಳಬಲ್ಲೆ. ವೆಂಕಟನಾರಣಪ್ಪನವರು ದೈವಾಧೀನರಾದ ಬಳಿಕ ಎಂ.ಆರ್. ಶ್ರೀನಿವಾಸಮೂರ್ತಿಯವರು ಪ್ರಧಾನ ಸಂಪಾದಕರಾದರು.

ಸಮಿತಿ ಕೆಲಕಾಲ ತಿಂಗಳಿಗೆ ಒಂದು ಸಲದಂತೆ ಸೇರುತ್ತಿತ್ತು. ಅದು ಶೀಘ್ರವಾಗಿ ಕೆಲಸ ನಡೆಯಲು ಸಾಲದು ಎಂದು ಅನುಭವದಿಂದ ತಿಳಿದುಬಂದ ಮೇಲೆ ಇನ್ನೂ ಬೇಗ ಬೇಗ ಸಮಿತಿಯ ಸಭೆ ಸೇರುತ್ತಿತ್ತು. ಸಭೆ ಹನ್ನೆರಡು ಘಂಟೆಯಿಂದ ಐದು ಘಂಟೆಯವರೆಗೆ ನಡೆಯತಕ್ಕದೆಂದು ನಿಯಮ. ಆದರೆ ಅದು ಐದಕ್ಕೇ ಮುಗಿದದ್ದು ಅಪರೂಪ. ಅನೇಕ ದಿವಸ ಆರು-ಆರೂವರೆ ಘಂಟೆಯವರೆಗೂ ಸಭೆ ನಡೆಯುತ್ತಿತ್ತು.

ಕೃಷ್ಣಶಾಸ್ತ್ರಿಗಳ ತರತೀಪು

ಇಲ್ಲಿ ಒಂದು ಹಗುರದ ವಿಷಯವನ್ನು ಹೇಳುತ್ತೇನೆ. ಸಮಿತಿ ಬಹುದಿನ ಹನ್ನೊಂದು ಘಂಟೆಗೇ ಸೇರುತ್ತಿತ್ತು. ಕಾರಣವೇನೆಂದರೆ ಪೂರ್ವ ಫಲಾಹಾರ. ಸಾಮಾನ್ಯವಾಗಿ ಕೃಷ್ಣಶಾಸ್ತ್ರಿಗಳು ಸಮಿತಿಯ ದಿನ ಮೈಸೂರಿನಿಂದ ಬರಬೇಕಾಗಿತ್ತು. ಮೈಸೂರು ರೈಲು ಹನ್ನೊಂದು ಘಂಟೆಗೆ ಬರುತ್ತಿತ್ತು. ಶಾಸ್ತ್ರಿಗಳು ಬೆಂಗಳೂರಿನಲ್ಲಿದ್ದಾಗಲೂ ಸಭೆ ಅವರ ಆಗಮನವನ್ನು ನಿರೀಕ್ಷಿಸಿಕೊಂಡಿತ್ತು. ಅವರು ಬರುವಾಗ ಒಂದು ದೊಡ್ಡ ಪೊಟ್ಟಣ ಅಂಬೊಡೆ ಅಥವಾ ಚಕ್ಕುಲಿ-ಇಂಥ ಸಿಹಿಯಲ್ಲದ ಭಕ್ಷ್ಯಗಳನ್ನೂ, ಇನ್ನೊಂದು ಪೊಟ್ಟಣ ಸಿಹಿ ತಿಂಡಿಯನ್ನೂ, ಜೊತೆಗೆ ಆಯಾ ಕಾಲದ ಹಣ್ಣುಹಂಪಲನ್ನೂ ತರುತ್ತಿದ್ದರು. ಹನ್ನೊಂದು ಘಂಟೆಯಿಂದ ಹನ್ನೆರಡರವರೆಗೆ ನಮಗಿದ್ದ ಕೆಲಸ ಇದು. ಬಿ.ಎಂ.ಶ್ರೀಕಂಠಯ್ಯನವರಿಗೆ ಸಿಹಿ ಕೂಡದೆಂದು ಡಾಕ್ಟರು ಕಟ್ಟಪ್ಪಣೆ ಮಾಡಿದ್ದರು. ಆದದ್ದರಿಂದ ಜಿಲೇಬಿಯನ್ನೋ ಲಾಡುವನ್ನೋ ಕಂಡಕೂಡಲೆ ಅವರು ಕೈಯೆತ್ತಿ "ಇದು ನಮಗೆ ಕೂಡದಪ್ಪಾ!" ಎನ್ನುವರು. ನಾವು ಯಾರಾದರೂ "ಇದು ಏನು ಮಾಡುತ್ತದೆ ಸಾರ್-ಒಂದು ಚೂರು? ಈ ಸಕ್ಕರೆಯನ್ನು ಆ ಉಪ್ಪುಖಾರ ಹೊಡೆದುಬಿಡುತ್ತದೆ. ಇದರ ಮೇಲೆ ಕೃಷ್ಣಶಾಸ್ತ್ರಿಗಳ ತರತೀಪು. ಅವರು ವೈದ್ಯ ಬಲ್ಲವರು" -ಎನ್ನುತ್ತಿದ್ದೆವು. ನಮ್ಮ ಪುಸಲಾವಣೆ ಬೇಗ ಫಲಕ್ಕೆ ಬರುತ್ತಿತ್ತು. ವೆಂಕಟನಾರಣಪ್ಪನವರು ಇದನ್ನೆಲ್ಲ ಕೇಳಿಕೊಂಡು ತಮ್ಮ ಮುಂದಿದ್ದ ಪುಸ್ತಕದಿಂದ ಕಣ್ಣನ್ನು ಅತ್ತಿತ್ತ ಹರಿಸದೆ ನಗುಮುಖದಿಂದ ಇರುತ್ತಿದ್ದರು. ಹನ್ನೆರಡಾಯಿತೆಂದರೆ ಕಟ್ಟುನಿಟ್ಟಿನ ಕಾಲನೇಮಿ!

ಸುಬ್ಬರಾಯಪ್ಪನವರು

ನಮ್ಮ ಸಮಿತಿಯ ಇಬ್ಬರು ಸದಸ್ಯರನ್ನು ಕುರಿತು ಒಂದು ಮಾತನ್ನು ವಿಶೇಷವಾಗಿ ಹೇಳಬೇಕೆನಿಸುತ್ತದೆ; ಡಿ.ಸಿ.ಸುಬ್ಬರಾಯಪ್ಪನವರು ಮತ್ತು ಬಿ. ಪುಟ್ಟಯ್ಯನವರು-ಈ ಮಹನೀಯರಿಬ್ಬರೂ ನಿಘಂಟಿನ ಕಾರ್ಯಕ್ಕೆ ತುಂಬ ಸಹಾಯ ಮಾಡಿದವರು. ಅವರಲ್ಲಿ ಧೋರಣೆಯ ಮನೋಭಾವ ಕೊಂಚವೂ ತೋರಿಬಂದದ್ದಲ್ಲ. ಅವರ ಶ್ರದ್ಧೆ ಪರಿಶ್ರಮಗಳು ಅನುಕರಣೀಯವಾಗಿದ್ದವು. ವೆಂಕಟನಾರಣಪ್ಪನವರು ಮೊದಲೇ ಸದಸ್ಯರಿಗೆ ಕಳಿಸಿದ್ದ ಕರಡು ಪ್ರತಿಗಳನ್ನು ಅವರಿಬ್ಬರೂ ಸಾವಧಾನವಾಗಿ ಮನೆಯಲ್ಲಿ ಓದಿ ಪರೀಕ್ಷಿಸಿ ಪದಗಳ ಯುಕ್ತಾಯುಕ್ತತೆಗಳನ್ನು ಆಲೋಚಿಸಿ ತಮಗೆ ತೋರಿದ ಸಲಹೆಗಳನ್ನು ಗುರುತು ಮಾಡಿಕೊಂಡು ಬರುವರು. ಸಭೆಯಲ್ಲಿ ತಮ್ಮ ಸಂದೇಹಗಳನ್ನು ಹೇಳುವರು. ಆಗ್ರಹವಿಲ್ಲದೆ ಚರ್ಚಿಸುವರು. ಹೊಸ ಸಂಗತಿಗಳೇನಾದರೂ ತಮಗೆ ತಿಳಿದುಬಂದರೆ ಅವನ್ನು ಗುರುತು ಹಾಕಿಕೊಳ್ಳುವರು. ಹೀಗೆ ಅವರೊಡನೆ ಕೆಲಸ ಮಾಡುವುದು ಸಂತೋಷಕರವೂ ಪ್ರಯೋಜನಕರವೂ ಆಗಿತ್ತು.

ಸುಬ್ಬರಾಯಪ್ಪನವರ ಲಿಪಿಯನ್ನು ಕುರಿತು ಎಷ್ಟು ಪ್ರಶಂಸೆ ಮಾಡಿದರೂ ಅದು ಕೊಂಚವೆಂದೇ ನನಗೆ ಅನ್ನಿಸುತ್ತದೆ. ಈಗಿನ ಕಾಲದ ವಿದ್ಯಾರ್ಥಿಗಳ ಬರಹವನ್ನು ಕನ್ನಡದಲ್ಲಿಯೂ ಇಂಗ್ಲಿಷಿನಲ್ಲಿಯೂ ಆಗಾಗ ನೋಡಬೇಕಾದ ಸಂದರ್ಭವಿರುವ ನನ್ನ ಕಣ್ಣುಗಳಿಗೆ ಸುಬ್ಬರಾಯಪ್ಪನವರ ಅಕ್ಷರ ಜಕಣಾಚಾರಿಯ ಶಿಲ್ಪದಂತೆ ನಯನಮೋಹಕವಾದದ್ದು. ಅಕ್ಷರಗಳು ಬಿಡಿಬಿಡಿಯಾಗಿ ದುಂಡುದುಂಡಾಗಿ ಮುತ್ತಿನ ಸರದಂತಿರುತ್ತವೆ.

ನಾನು ಒಳ್ಳೆಯ ಕನ್ನಡ ಹೇಗಿರುತ್ತದೆಂಬುದನ್ನು ಮೊದಲು ಕಂಡುಕೊಂಡದ್ದು ಸುಬ್ಬರಾಯಪ್ಪನವರ ಲೇಖನದಿಂದ. ನಾನು ಎ.ವಿ.ಸ್ಕೂಲ್ ವಿದ್ಯಾರ್ಥಿಯಾಗಿದ್ದಾಗ 'ವಿದ್ಯಾದಾಯಿನಿ' ಎಂಬ ಕನ್ನಡ ಮಾಸಪತ್ರಿಕೆ ಅಲ್ಲಿಗೆ ಬರುತ್ತಿತ್ತು. ಅದರ ಕೆಲವು ಸಂಚಿಕೆಗಳಲ್ಲಿ ಸುಬ್ಬರಾಯಪ್ಪನವರ ಒಂದಾನೊಂದು ಪ್ರವಾಸದ ವರದಿ ಪ್ರಕಟವಾಗಿತ್ತು. ವಿಷಯವು ಲಲಿತವಾಗಿ ಸರಳವಾಗಿ ವರದಿಯಾಗಿತ್ತು. ಅವರನ್ನು ಕಣ್ಣಿನಿಂದ ನೋಡಬೇಕೆಂಬ ಕುತೂಹಲ ಹುಟ್ಟಿತು. ಅಲ್ಲಿಂದ ಬಹು ವರ್ಷಗಳಾದ ಮೇಲೆ ಆ ಸಂತೋಷ ಲಭಿಸಿತು. ಸುಬ್ಬರಾಯಪ್ಪನವರು ಬಿ.ಎಂ. ಶ್ರೀಕಂಠಯ್ಯನವರ ಸಹಾಧ್ಯಾಯಿ (Classmate)-ಎಂದು ತಿಳಿದ ಮೇಲೆ ಅವರು ಮತ್ತೂ ಪ್ರಿಯರಾದರು.

ಪುಟ್ಟಯ್ಯನವರು

ಪುಟ್ಟಯ್ಯನವರಿಗೂ ನನಗೂ ಪರಿಚಯವಾದದ್ದು ಸುಮಾರು ೧೯೦೭-೭ರಲ್ಲಿ. ಆಗ ಅವರು ಒಕ್ಕಲಿಗರ ಪತ್ರಿಕೆಯ ಚಾಲಕರಾಗಿದ್ದರು. ಆ ಪತ್ರಿಕೆ ಮೊದಮೊದಲು ಕೋಟೆಯಲ್ಲಿದ್ದ ಸ್ಟ್ಯಾಂಡರ್ಡ್ ಪ್ರೆಸ್ ಮುದ್ರಣಾಲಯದಲ್ಲಿ ಅಚ್ಚಾಗುತ್ತಿತ್ತು. ನಾನು ಸ್ಟ್ಯಾಂಡರ್ಡ್ ಪ್ರೆಸ್ಸಿಗೆ ವಾರಕ್ಕೆ ಎರಡು ಮೂರು ಸಾರಿ ಹೋಗುತ್ತಿದ್ದೆ. ಆದದ್ದರಿಂದ ನಮಗಿಬ್ಬರಿಗೂ ಪರಿಚಯ ಮಾಡಿಕೊಳ್ಳುವ ಅವಕಾಶ.

ಸುಬ್ಬರಾಯಪ್ಪನವರೂ ಪುಟ್ಟಯ್ಯನವರೂ ಮಾತಿನಲ್ಲಿಯೂ ನಡವಳಿಕೆಯಲ್ಲಿಯೂ ಪ್ರಾಮಾಣಿಕರು. ಗೊತ್ತಾದ ವೇಳೆಯನ್ನು ಎಂದೂ ಮೀರಿದವರಲ್ಲ; ಆಡಿದ ಮಾತಿನಿಂದ ನುಣುಚಿಕೊಂಡವರಲ್ಲ. ಚಾಲಾಕಿನಿಂದ ಬದುಕಬೇಕೆಂದವರಲ್ಲ. ಅವರ ಸ್ವಭಾವದಲ್ಲಿ ಸೌಜನ್ಯವೂ ಗಂಭೀರತೆಯೂ ವಿನಯವೂ ಹುಟ್ಟುಗುಣಗಳಾಗಿದ್ದವು.

ಒಂದು ವಿವಾದ

ಇಂಗ್ಲಿಷ್-ಕನ್ನಡ ನಿಘಂಟಿನ ಸಂದರ್ಭದಲ್ಲಿ ಒಂದು ತಕರಾರು ಎದ್ದಿತು. ಕಾರ್ಯಕರ್ತರಿಗೆ ಸಂಭಾವನೆಯುಂಟೆ, ಇಲ್ಲವೆ? ಸರಕಾರದವರು ಸಂಭಾವನೆ ಕೊಡಬೇಕೆಂದರು. ವಿಶ್ವವಿದ್ಯಾನಿಲಯದ ಕೆಲಮಂದಿ ಐರೋಪ್ಯರು ಸಂಭಾವನೆ ಸಲ್ಲಿಸಲೇಬೇಕೆಂದರು. ಈ ಪ್ರಶ್ನೆಯನ್ನು ಕುರಿತು ಯೂನಿರ್ವಸಿಟಿ ಕೌನ್ಸಿಲಿನಲ್ಲಿ ನಡೆದ ಚರ್ಚೆ ನನಗೆ ಜ್ಞಾಪಕವಿದೆ.

“ಕೆಲಸ ಅವಶ್ಯವಾದದ್ದಾದರೆ ಅದು ಚೆನ್ನಾಗಿ ನಡೆಯಬೇಕು. ಚೆನ್ನಾಗಿ ನಡೆಯಬೇಕಾದರೆ ಕೆಲಸಗಾರರಿಗೆ ತಕ್ಕ ಪ್ರತಿಫಲ ಸಲ್ಲಬೇಕು. ಬಿಟ್ಟಿ ಚಾಕರಿಯನ್ನು ತೆಗೆದುಕೊಳ್ಳುವುದು ಸರಕಾರಕ್ಕೆ ಯೋಗ್ಯವಲ್ಲ; ಆಗಬೇಕಾದ ಕೆಲಸಕ್ಕೆ ಸಹಾಯವಲ್ಲ. ಕೆಲಸ ಒಳ್ಳೆಯದಾದರೆ ಅದಕ್ಕಾಗಿ ತಗಲುವ ವೆಚ್ಚವನ್ನು ವಹಿಸಿಕೊಳ್ಳಲು ಸರಕಾರ ಸಿದ್ಧವಾಗಿರಬೇಕು.” -ಇದು ಯುರೋಪಿಯನ್ ಸದಸ್ಯರು ಹೂಡಿದ ನ್ಯಾಯ. ಇದನ್ನು ಅನುಮೋದಿಸಿದವರು ಇತರರೂ ಇದ್ದರು.

ವೆಂಕಟನಾರಣಪ್ಪನವರು ಇದಕ್ಕೆ ತೀವ್ರವಾಗಿ ವಿರೋಧ. ಅವರು ಅನೇಕ ಕೋ-ಆಪರೇಟಿವ್ ಸಂಸ್ಥೆಗಳಲ್ಲಿ ಕೆಲಸ ಮಾಡಿ ಹಣ ಏನೇನನ್ನು ಕೆಡಿಸಬಲ್ಲದು ಎಂಬುದನ್ನು ಕಂಡುಕೊಂಡಿದ್ದರು. “ನಾವು ಮಾಡ ಹೊರಟಿರುವುದು ಸರಸ್ವತೀಸೇವೆಯನ್ನು. ಅದರಲ್ಲಿ ನಾವು ಕೂಲಿಗಾಗಿ ಕೈಯೊಡ್ಡುವುದೇ?” -ಇದು ಅವರ ವಾದ.

ನಮ್ಮಲ್ಲಿ ಇನ್ನು ಕೆಲವರು ಉದಾಸೀನರಾಗಿದ್ದರು; ಅಥವಾ ದ್ವಿಮುಖಿಗಳಾಗಿದ್ದರು. ಕೊಡದಿದ್ದರೆ ಕೇಳುವುದು ಬೇಡ; ಕೊಟ್ಟರೆ ಬೇಡವೆನ್ನುವುದು ಬೇಡ.

“ಸರಕಾರವು ಭಿಕ್ಷುಕನಂತೆ ನಡೆಯಬಾರದು; ಬಿಟ್ಟಿ ಚಾಕರಿ ತೆಗೆದುಕೊಳ್ಳುವುದು ಪ್ರಜೆಗೆ ಗೌರವವಲ್ಲ. ಸಂಬಳ ಪಡೆದು ಚಾಕರಿ ಮಾಡುವವರು ಗೌರವಾರ್ಥಿಗಳಿಗಿಂತ ಕೆಳಗಿನ ದರ್ಜೆಯವರೆಂದು ಗಣಿಸುವಂತೆ ಆಗಬಾರದು.-ಇದು ನನ್ನ ನಿಲುವು.

ತೀರ್ಮಾನದಲ್ಲಿ ಒಂದು ರಾಜಿಗೆ ಬಂದೆವು. ಸರಕಾರವು ಸದಸ್ಯರುಗಳಿಗೆ ಪ್ರಯಾಣದ ಭತ್ಯವನ್ನೂ ದಿನಭತ್ಯವನ್ನೂ ಮಾತ್ರ ಕೊಡತಕ್ಕದ್ದು.

ಈ ವಿವರವನ್ನು ಜ್ಞಾಪಕದಿಂದ ಬರೆದಿದ್ದೇನೆ.

‘ತಲಬು’

ವೆಂಕಟನಾರಣಪ್ಪನವರು ಪ್ರತಿದಿನವೂ ಬೆಳಗ್ಗೆ ಏಳೂವರೆ ಘಂಟೆಗೆ ತಪ್ಪದೆ ಮನೆಯಿಂದ ಹೊರಡುತ್ತಿದ್ದರು. ಅವರ ನೆರೆಹೊರೆಯಲ್ಲಿದ್ದ ಒಬ್ಬ ದೊಡ್ಡ ಮನುಷ್ಯರು ಇದನ್ನು ಆಗಾಗ ನೋಡುತ್ತಿದ್ದರು. ಒಂದು ದಿನ ಅವರು ಕೇಳಿದರು:

“ಏನು ವೆಂಕಟನಾರಣಪ್ಪ-ದಿನಾಗಲೂ ಹೋಗುತ್ತೀರಲ್ಲಾ ಇಷ್ಟು ಹೊತ್ತಿಗೆ- ಎಲ್ಲಿಗೆ?”

“ಪರಿಷತ್ತಿಗೆ.”

“ನಿಮಗೆ ಏನು ದೊರೆಯುತ್ತದೆ ತಲಬು ಅಲ್ಲಿ?”

“ತಲಬು ಏನೂ ಇಲ್ಲ. ನಮ್ಮ ಸಂತೋಷಕ್ಕೋಸ್ಕರ ಕೆಲಸಮಾಡುವುದು.”

“ಅಲ್ಲಪ್ಪಾ-ನಿಮಗೆ ಕಾಲೇಜಿನಾಗೆ ಸಂಬಳ ದೊರೆಯುತ್ತದೆ. ಇಲ್ಲಿ ಏನೂ ತಲಬು ಕೊಡುವುದಿಲ್ಲವೇ?”

“ಇಲ್ಲ ರಾಯರೇ. ಇದು ದೇಶಕ್ಕೆ ಸೇರಿದ ಸಂಸ್ಥೆ. ಅದರಲ್ಲಿ ಹಣವಿಲ್ಲ. ಅಲ್ಲಿ ಕೆಲಸ ಮಾಡುವವರು ದೇಶಾಭಿಮಾನದಿಂದ ಕೆಲಸ ಮಾಡಬೇಕು.”

“ಹಾಗಂದರೇನಪ್ಪಾ? ಧಾರಾರೂ ಬಿಟ್ಟಿ ದುಡೀತಾರೆಯೇ? ನನ್ನ ನೋಡ್ರಿ. (ಚೀಲವನ್ನು ತೋರಿಸಿ) ನೋಡ್ರಿ ಈ ಚೀಲವನ್ನು. ಮಾರ್ಕೆಟ್ಟಿಗೆ ಹೋಗ್ತೇನು. ಎರಡು ಮೂರು ದಿನದ ತರಕಾರಿ ಬರುತ್ತದೆ-ಮುನಿಸಿಪಲ್ ಕೌನ್ಸಿಲಿನಲ್ಲಿ ನಾನಿರುವುದರಿಂದ; ಬೆಂಚ್ ಮ್ಯಾಜಿಸ್ಟ್ರೇಟ್ ಆಗಿರುವುದರಿಂದ. ಇಷ್ಟು ಮಾತ್ರವೂ ಇಲ್ಲದಿದ್ದರೆ ಅದೆಂಥ ಪರಿಷತ್ತಯ್ಯಾ! ಅಭಿಮಾನವಂತೆ ಒಣ ಅಭಿಮಾನ-ತರಕಾರಿ ಕೂಡ ಗಿಟ್ಟಲಾರದ ಅಭಿಮಾನ!”

ಹೀಗೆ ಹಾಸ್ಯಮಾಡಿ ನಕ್ಕರು.

ಅಂಥವರು ಈಗ ಇಲ್ಲವೇ ಇಲ್ಲವೆಂದು ಹೇಳಲಾದೀತೇನು? ವಾಚಕರು ತಮ್ಮ ಅನುಭವದಿಂದ ವಿಚಾರಮಾಡಿಕೊಳ್ಳಲಿ.

ಪ್ರೊಫೆಸರ್ ನೇಮಕ

ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡಕ್ಕೆ ಒಬ್ಬ ಪ್ರೊಫೆಸರ್ ಇರತಕ್ಕದ್ದೆಂದು ಸೆನೆಟಿನವರು ನಿಷ್ಕರ್ಷೆ ಮಾಡಿದ ಮೇಲೆ ಆ ಹುದ್ದೆಗೆ ಹತ್ತಾರು ಅಪ್ಲಿಕೇಷನ್‌ಗಳು ಬಂದವು. ಅವರಲ್ಲಿ ಗೊತ್ತಾದ ಯಾರೋ ಒಬ್ಬರನ್ನು ನಿಯಮಿಸಿಕೊಳ್ಳಬೇಕೆಂದು ವೈಸ್‌ಛಾನ್ಸಲರ್ ಎಚ್.ವಿ. ನಂಜುಂಡಯ್ಯನವರಿಗೆ ಅಭಿಪ್ರಾಯವುಂಟೆಂದು ಅವರಿವರು ಆಡಿಕೊಳ್ಳುತ್ತಿದ್ದರು. ಆ ನಿರ್ದಿಷ್ಟ ಮನುಷ್ಯನ ಯೋಗ್ಯತೆ ಸಾಮರ್ಥ್ಯಗಳನ್ನು ಕುರಿತು ಅಭಿಪ್ರಾಯಭೇದವೂ ಇತ್ತು. ವೆಂಕಟನಾರಣಪ್ಪನವರು ಆ ನಿರ್ದಿಷ್ಟ ಮನುಷ್ಯನ ಕನ್ನಡ ಲೇಖನಗಳನ್ನೆಲ್ಲ ಸಂಗ್ರಹಿಸಿ ಓದಿ, ಅವುಗಳಲ್ಲಿದ್ದ ತಪ್ಪುಗಳನ್ನು ಒಂದು ಪಟ್ಟಿ ಮಾಡಿದರು, ಹೀಗೆ:

೧ನೆಯ ಕಾಲಮ್-ನಿರ್ದಿಷ್ಟ ಪುರುಷನ ವಾಕ್ಯ.

೨ನೆಯ ಕಾಲಮ್-ಅದರಲ್ಲಿದ್ದ ತಪ್ಪುಗಳು.

೩ನೆಯ ಕಾಲಮ್-ಆ ವಾಕ್ಯಕ್ಕೆ ಅನ್ವಯಿಸುವ ಶಬ್ದಾನುಶಾಸನದ ಅಥವಾ ಶಬ್ದಮಣಿದರ್ಪಣದ ಸೂತ್ರ.

ಈ ಪಟ್ಟಿಯನ್ನು ಅಚ್ಚುಮಾಡಿಸಿದರು. ಎರಡು ಫೂಲ್‌ಸ್ಕ್ಯಾಪ್ ಪುಟಗಳಿಗಿಂತ ಹೆಚ್ಚಾಗಿ ತಪ್ಪುಗಳು ಸಿಕ್ಕಿದ್ದವು. ಎರಡು ಪುಟದಷ್ಟು ಸಾಕೆಂದು ವೆಂಕಟನಾರಣಪ್ಪನವರು ತೀರ್ಮಾನಿಸಿ ಅಷ್ಟನ್ನು ಅಚ್ಚುಮಾಡಿಸಿದರು. ಹಾಗೆ ಅಚ್ಚಾದ ತಪ್ಪಿನ ಪಟ್ಟಿಗಳನ್ನು ಸೆನೆಟ್ ಸಭೆಯ ಸದಸ್ಯರಿಗೆಲ್ಲ ಹಂಚಿದರು. ನಂಜುಂಡಯ್ಯನವರಿಗೆ ಕೋಪ ಬಂತು. ಅವರು ವೆಂಕಟನಾರಣಪ್ಪನವರನ್ನು ಕರೆಯಿಸಿ, "ನೀವು ಮಾಡಿರುವ ಕೆಲಸ ಎಂಥಾದ್ದೆಂದು ನಿಮಗೆ ಗೊತ್ತಿದೆಯೆ?" ಎಂದು ಕೋಪದಿಂದ ಕೇಳಿದರು. ವೆಂಕಟನಾರಣಪ್ಪನವರು ಹೇಳಿದರು:

"ನನ್ನ ಬುದ್ಧಿಗೆ ತಿಳಿದಷ್ಟನ್ನು ಮಾಡಿದ್ದೇನೆ. ಪ್ರೊಫೆಸರ್ ಕೆಲಸ ಜವಾಬ್ದಾರಿಯದು. ಅದಕ್ಕೆ ಬರುವವರ ಪಾಂಡಿತ್ಯ ಎಲ್ಲರೂ ಒಪ್ಪತಕ್ಕದ್ದಾಗಿರಬೇಕು."

ನಂಜುಂಡಯ್ಯನವರು: "ಅದೆಲ್ಲಾ ಸರಿ. ಆದರೆ ನೀವು ಮಾಡಿರುವುದು ಡಿಫೆಮೇಷನ್".

ವೆಂಕಟನಾರಣಪ್ಪನವರು: "ಆ ತಪ್ಪಿಗೆ ಕೋರ್ಟಿನವರು ಕೊಡುವ ಶಿಕ್ಷೆಯನ್ನು ಅನುಭವಿಸುತ್ತೇನೆ."

ನಂಜುಂಡಯ್ಯನವರು: "ಸರಕಾರದ ಏರ್ಪಾಟುಗಳ ವಿಷಯದಲ್ಲಿ ನೀವು ಕೈ ಹಾಕಿದ್ದೀರಿ. ಕೆಲಸ ಕಳೆದುಕೊಳ್ಳಬೇಕಾದೀತು."

ವೆಂಕಟನಾರಣಪ್ಪನವರು: "ಈ ಕ್ಷಣವೇ ರಾಜೀನಾಮೆ ಕೊಡುತ್ತೇನೆ."

ಹೀಗೆ ಹೇಳಿ ಅಲ್ಲಿಯೇ ರಾಜೀನಾಮೆ ಬರೆದುಕೊಟ್ಟರು.

ಆಗ ಸೆಂಟ್ರಲ್ ಕಾಲೇಜಿನ ಪ್ರಿನ್ಸಿಪಾಲರಾಗಿದ್ದ ಮೆಟ್‌ಕಾಫ್‌ರವರು ಇದನ್ನೆಲ್ಲ ಕೇಳಿ ತಾವೇ ನಂಜುಂಡಯ್ಯನವರ ಬಳಿಗೆ ಹೋದರು.

"ವೆಂಕಟನಾರಣಪ್ಪನವರು ಮಾಡಿರುವುದು ಅವಶ್ಯವಾದ ಕಾರ್ಯ. ಅವರ ಕರ್ತವ್ಯವನ್ನು ಅವರು ಮಾಡಿದ್ದಾರೆ. ಅದಕ್ಕಾಗಿ ಆವರನ್ನು ನಾವು ವಂದಿಸಬೇಕು."

-ಹೀಗೆ ಹೇಳಿ ವೆಂಕಟನಾರಣಪ್ಪನವರು ಕೊಟ್ಟಿದ್ದ ರಾಜಿನಾಮೆ ಪತ್ರವನ್ನು ವಾಪಸ್ ತಂದರು.

ಕನ್ನಡದ ಪ್ರೊಫೆಸರ್ ಪದವಿಗೆ ಯಾವ ದೊಡ್ಡ ಮನುಷ್ಯರನ್ನು ತರಲು ವೆಂಕಟನಾರಣಪ್ಪನವರು ಅಡ್ಡ ಹಾಕಿದ್ದಾರೋ ಅವರ ಪರಿಚಯ ನನಗಿಲ್ಲ. ಅವರು ಎಂ.ಎ. ಪ್ಯಾಸ್ ಮಾಡಿದ್ದವರೆಂದೂ ವಿದ್ವಾಂಸರೆಂದೂ ಒಂದಿಷ್ಟು ಗ್ರಂಥರಚನೆ ಮಾಡಿದ್ದವರೆಂದೂ ಕೇಳಿದ್ದೇನೆ. ಅವರು ಕೊಂಚ ಹಾಸ್ಯ ಪ್ರವೃತ್ತಿಯುಳ್ಳವರೆಂದು ತೋರುತ್ತದೆ. ಪ್ರಸಿದ್ಧ ನಿಘಂಟುಕರ್ತ ಕಿಟ್ಟೆಲ್‌ನನ್ನು ಕಿತ್ತೀಳೆಯೆಂದೂ ಕ್ರಿಶ್ಚಿಯನ್ ಮಿಷನರಿಗಳನ್ನು ಮಿಶೀನರಿಗಳೆಂದೂ ಕರೆದಿದ್ದರಂತೆ. ಹೇಗೋ ಅವರ ಅಪೇಕ್ಷೆ ಸಫಲವಾಗಲಿಲ್ಲ.

ವೆಂಕಟನಾರಣಪ್ಪನವರ ಪ್ರಯಾಸ ವ್ಯರ್ಥವಾಗಲಿಲ್ಲ. ಕನ್ನಡದ ಪ್ರೊಫೆಸರ್ ಪದವಿ ಬಿ. ಕೃಷ್ಣಪ್ಪನವರಿಗೆ ದೊರೆಯಿತು. ಬಿ.ಕೃಷ್ಣಪ್ಪನವರು ಪರಿಷತ್ತಿನ ಸ್ಥಾಪಕ ಸದಸ್ಯರಲ್ಲೊಬ್ಬರು. ಬಹುಶಃ ಅವರೇ ಮೊದಲನೆಯ ಕಾರ್ಯದರ್ಶಿ. ಅವರೂ ಗಣ್ಯವಿದ್ವಾಂಸರೆನ್ನಲು ಅಡ್ಡಿಯಿರದು. ಅವರೂ ಅನೇಕವಾಗಿ ಗ್ರಂಥರಚನೆ ಮಾಡಿದವರು. ಗ್ರೀಕರ ಚರಿತ್ರೆ ಸಾಹಿತ್ಯಗಳಿಗೆ ಸಂಬಂಧಿಸಿದಂತೆ ಕನ್ನಡದಲ್ಲಿ ಬರೆದವರಲ್ಲಿ ಅವರೇ ಮೊದಲಿಗರೆಂದು ತೋರುತ್ತದೆ.

ಗ್ರಂಥಪರಿಷ್ಕರಣ

ಅಸಾಧ್ಯವ್ರತಗಳ ವಿಷಯದಲ್ಲಿ ಬೆಳ್ಳಾವೆ ವೆಂಕಟನಾರಣಪ್ಪನವರಿಗೆ ತುಂಬ ಉತ್ಸಾಹ. ಅಂಥ ವ್ರತಗಳಲ್ಲಿ ಒಂದು, ಕನ್ನಡ ಪುಸ್ತಕಗಳಲ್ಲಿ ಅಚ್ಚಿನ ತಪ್ಪುಗಳಿಲ್ಲದಂತೆ ಮಾಡಬೇಕೆಂಬುದು. ಅವರ ಬಂಧುಗಳಾದ ಬೆಳ್ಳಾವೆ ಸೋಮನಾಥಯ್ಯನವರು 'ರಾಜಶೇಖರ ಚರಿತ್ರೆ' ಎಂಬ ಗ್ರಂಥವನ್ನು ಬರೆದಿದ್ದರು, ಸೋಮನಾಥಯ್ಯನವರು ಪ್ರಾಮಾಣಿಕರಾದ ವಿದ್ವಾಂಸರು; ವಿಮರ್ಶನ ಪ್ರವೃತ್ತಿಯುಳ್ಳವರು. ಅವರು ಶಂಕರಚರಿತ್ರಕಾಲವಿಚಾರ ಮೊದಲಾದ ಅನೇಕ ಕನ್ನಡ ಗ್ರಂಥಗಳನ್ನು ಬರೆದಿದ್ದರು. ಅವರ 'ರಾಜಶೇಖರ ಚರಿತ್ರೆ' ಒಂದಾನೊಂದು ವರ್ಷ ಯಾವುದೋ ಪರೀಕ್ಷೆಗೆ ಪಠ್ಯಪುಸ್ತಕವಾಗಿತ್ತು. ಸೋಮನಾಥಯ್ಯನವರು ತೀರಿಕೊಂಡಿದ್ದದ್ದರಿಂದ ಆ ಗ್ರಂಥವನ್ನು ಪುನರ್ಮುದ್ರಣಮಾಡಿಸುವ ಭಾರವನ್ನು ವೆಂಕಟನಾರಣಪ್ಪನವರು ಕೈಕೊಂಡಿದ್ದರು. ಗ್ರಂಥ ಸುಮಾರು ಇನ್ನೂರು ಪುಟಗಳಷ್ಟಿರಬಹುದು. ಅದರಲ್ಲಿ ಸುಮಾರು ನೂರು ತಪ್ಪುಗಳು ಬಿದ್ದಿರಬಹುದು. ವಿದ್ಯಾರ್ಥಿಗಳು ಓದುವ ಪುಸ್ತಕದಲ್ಲಿ ಹೀಗಾಯಿತಲ್ಲ!-ಎಂದು ವೆಂಕಟನಾರಣಪ್ಪನವರ ಚಿಂತೆ. ಅಚ್ಚಿನಲ್ಲಿರುವ ತಪ್ಪುಗಳನ್ನು ವಿದ್ಯಾರ್ಥಿಗಳು ಅದೇ ಸರಿಯಾದ ರೂಪವೆಂದು ಗ್ರಹಿಸಿಯಾರು! ಹೀಗೆ ವಿದ್ಯಾಪ್ರಚಾರಕ್ಕಾಗಿ ಹೊರಟ ಗ್ರಂಥ ಅವಿದ್ಯಾಪ್ರಚಾರಕವಾಗುತ್ತದೆ. ಇದರ ಜವಾಬ್ದಾರಿ ಇಷ್ಟು ಮಹತ್ತರವಾದದ್ದು. ಆದರೆ ಈಗ ಮಾಡತಕ್ಕದ್ದೇನು? ಪುಸ್ತಕದ ಮುದ್ರಣವಾಗಿಹೋಯಿತಲ್ಲ! ಇದನ್ನು ವೆಂಕಟನಾರಣಪ್ಪನವರು ದೀರ್ಘವಾಗಿ ಆಲೋಚನೆ ಮಾಡಿ ಒಂದು ನಿರ್ಧಾರಕ್ಕೆ ಬಂದರು. ಆ ನಿರ್ಧಾರ ಕಾರ್ಯರೂಪಕ್ಕೆ ಬಂದದ್ದನ್ನು ನಾನು ಕಣ್ಣಾರ ನೋಡಿದ್ದೇನೆ. ಅದು ಹೀಗೆ:

ರಾತ್ರಿ ಭೋಜನಾನಂತರ ಎಂಟು ಘಂಟೆಗೆ ವೆಂಕಟನಾರಣಪ್ಪನವರು ನಡುಮನೆಯಲ್ಲಿ ಕೂಡತಕ್ಕದ್ದು. ಪುಸ್ತಕದ ಫಾರ್ಮುಗಳನ್ನು (Forme) ತಮ್ಮ ಮುಂದೆ ಇರಿಸಿಕೊಳ್ಳತಕ್ಕದ್ದು, ಫಾರಂ ಎಂದರೆ ಅಚ್ಚಾದ ಎಂಟೆಂಟು ಪುಟಗಳಾಗಿ ಮಡಿಸಿದ ಕಾಗದದ ಥಾನು. ಅವರ ಎಡಗಡೆಯಿಂದ ಇಬ್ಬರು ಗಂಡು ಮಕ್ಕಳು, ಇಬ್ಬರು ಹೆಣ್ಣು ಮಕ್ಕಳು, ಸೋದರಳಿಯಂದಿರು, ಇತರ ಬಂಧುಗಳು-ಹೀಗೆ ಹತ್ತು ಮಂದಿ ಮಂಡಲಾಕಾರವಾಗಿ ಕೂಡತಕ್ಕದ್ದು. ಪ್ರತಿಯೊಬ್ಬರ ಮುಂದೆಯೂ ಒಂದು ಇಂಡಿಯನ್ ಇಂಕಿನ ದೌತಿ ಮತ್ತು ಸಣ್ಣ ಮೊನೆಯುಳ್ಳ ಲೇಖನಿ, ಒತ್ತುವ ಕಾಗದದ ಚೂರು-ಇಷ್ಟು ಸಾಮಗ್ರಿ ಇರತಕ್ಕದ್ದು. ವೆಂಕಟನಾರಣಪ್ಪನವರು ಫಾರ್ಮ್ ಕೈಯಲ್ಲಿ ಹಿಡಿದು "ಪುಟ ೨೫, ಪಂಕ್ತಿ ಮೇಲಿನಿಂದ ಐದು, 'ಯ' ಕ್ಕೆ 'ಯ' ಒತ್ತು ಸರಿಯಾಗಿಲ್ಲ; ಏಳನೆಯ ಪಂಕ್ತಿ, 'ಬಂದನು' ಎಂಬಲ್ಲಿನ

ಪಕ್ಕದ ಕೊಂಬು ಮುರಿದಿದೆ; ಹದಿನೈದನೆಯ ಪಂಕ್ತಿಯಲ್ಲಿ 'ಪ' ಕ್ಕೆ ಬದಲಾಗಿ 'ಮ' ಬಿದ್ದಿದೆ. ಹೀಗೆ ಈ ಪುಟದಲ್ಲಿ ಮೂರು ತಪ್ಪುಗಳು" ಎಂದು ಕೂಗಿ ಹೇಳಿ ಪಕ್ಕದಲ್ಲಿದ್ದವನ ಕೈಗೆ ಕೊಡುವರು. ಆತ 'ಯ' ಒತ್ತು ಅಷ್ಟನ್ನು ಮಾತ್ರವೇ ತಿದ್ದಬೇಕು: ಎರಡನೆಯವನು ಕೊಂಬನ್ನು ಮಾತ್ರ ತಿದ್ದಬೇಕು. ಹೀಗೆ ಮೂರು ಜನ ಮೂರು ತಿದ್ದಾವಣೆಗಳನ್ನು ಮಾಡಿದ ಮೇಲೆ ನಾಲ್ಕನೆಯಾತ ಥಾನನ್ನು ಸರಿಯಾಗಿ ಮಡಿಸಬೇಕು. ಐದನೆಯಾತ ಅದನ್ನು ಗೊತ್ತಾದ ಜಾಗದಲ್ಲಿರಿಸಬೇಕು. ಹೀಗೆ ಕಟ್ಟುಪಾಡಿನಿಂದ ೧೦ ಘಂಟೆಯವರೆಗೂ ಕೆಲಸ ನಡೆಯುವುದು. ಈ ರೀತಿ ನಾಲ್ಕೈದು ದಿನ ಮಾಡಿದರೆ ಪುಸ್ತಕವೆಲ್ಲ ಶುದ್ಧವಾಗುವುದು.

ಪರಿಷತ್ತಿನ 'ಶಬ್ದಮಣಿದರ್ಪಣ' ಗ್ರಂಥದ ಸಂಬಂಧದಲ್ಲಿಯೂ ಇದೇ ರೀತಿ ನಡೆಯಿತು. ಕನ್ನಡ ಪುಸ್ತಕಗಳಿಗೆ ಶುದ್ಧಾಶುದ್ಧ ಪತ್ರಿಕೆ ಅನಾವಶ್ಯಕವಾಗುವಂತೆ ಮಾಡಬೇಕೆಂದು ಅವರ ಹಠ. "ಅದು ಹೇಗಾದೀತು? ಹಣೆಯ ಮೇಲೆ ಕುಂಕುಮವಿಲ್ಲದೆ ಸುಮಂಗಲಿ ಹೇಗಿದ್ದಾಳು?" ಎಂದು ವೆಂಕಣ್ಣಯ್ಯ ಮತ್ತು ನಾನು ಮಾಡುತ್ತಿದ್ದ ಪ್ರತಿವಾದ. ಕಡೆಗೆ ವೆಂಕಟನಾರಣಪ್ಪನವರು ಒಂದು ತೀರ್ಮಾನ ಹೇಳಿದರು. ಶುದ್ಧಾಶುದ್ಧ ಪತ್ರಿಕೆ ಒಂದು ಪುಟಕ್ಕಿಂತ ಹೆಚ್ಚಾಗಬಾರದೆಂದು! ಹೀಗೆಂದರೇನಾಯಿತು? ಅಚ್ಚಿನಲ್ಲಿ ಒಂದು ಪುಟ ಶುದ್ಧಾಶುದ್ಧ ಪತ್ರಿಕೆ; ತಪ್ಪುಗಳು ಅದಕ್ಕಿಂತ ಹೆಚ್ಚಾಗಿದ್ದರೆ ಕೈಯಲ್ಲಿ ತಿದ್ದುವುದು!

ಹೇಗೂ ಅವರಿಗೆ ಶ್ರಮ ತಪ್ಪಲಿಲ್ಲ.

***

ಭಾಷಾಶುದ್ಧಿಯ ಪ್ರಯತ್ನದಲ್ಲಿ ವೆಂಕಟನಾರಣಪ್ಪನವರು ನಮ್ಮ ಮೇಲೆ ಹೊಸದೊಂದು ಹೊರೆಯನ್ನು ಹೊರಿಸುವವರಾಗಿದ್ದರು. ತಮ್ಮ ಹೆಸರನ್ನು "ವೆಂಕಟನಾರಾಯಣಪ್ಪ" ಎಂದು ಬರೆಯಲು ಆರಂಭಿಸಿದರು. ನಾವೆಲ್ಲ ಬೇಡಿಕೊಂಡೆವು:

"ಸಾರ್, ಈಗಲೇ ದೊಡ್ಡದಾಗಿದೆ-ಏಳಕ್ಷರಗಳು. ಅದನ್ನು ಎಂಟಕ್ಷರ ಮಾಡಿದರೆ ಬರೆಯುವುದಕ್ಕೆ ಇನ್ನೂ ಕಷ್ಟವಾಗುತ್ತದೆ, ಇನ್ನೂ ಹೆಚ್ಚು ಹೊತ್ತು ಹಿಡಿಯುತ್ತದೆ-ರಾ ಎಂಬ ದೀರ್ಘಾಕ್ಷರ ಬೇರೆ; ಹೆಚ್ಚು ಶ್ರಮ."

-ಇತ್ಯಾದಿಯಾಗಿ ಅಂಗಲಾಚಿದೆವು. ಸ್ವಲ್ಪ ತಕರಾರುಮಾಡಿ ಕಡೆಗೆ ಅವರು ಕನಿಕರಿಸಿದರು.

ಪರಿಭಾಷೆ

ವೆಂಕಟನಾರಣಪ್ಪನವರಿಗೆ ಎರಡು (Vogue Words) ಅಭ್ಯಾಸದ ಮಾತುಗಳು ಪದೇ ಪದೇ ಬಾಯಿಗೆ ಬರುತ್ತಿದ್ದದ್ದನ್ನು ನಾವೆಲ್ಲಾ ಕೇಳಿದ್ದೆವು.

ಕರ್ಣಾಟಕ ಸಂಘದ ಮೊಟ್ಟಮೊದಲನೆಯ ಗ್ರಂಥ ಪ್ರಕಟನೆಯ ವಿಷಯದಲ್ಲಿ ಅವರಿಗೆ ತುಂಬಾ ಉತ್ಸಾಹ. ವೆಂಕಣ್ಣಯ್ಯನವರಿಗೆ ಇನ್ನೂ ಉತ್ಸಾಹ. ಒಳ್ಳೆಯ ನುಣುಪುಕಾಗದ, ಸ್ಫುಟವಾದ ಅಕ್ಷರ, ಅಚ್ಚುಕಟ್ಟಾದ ಮುದ್ರಣ, ಒಳ್ಳೆಯ ಮುಖಪತ್ರ. ಎಲ್ಲಕ್ಕಿಂತ ಹೆಚ್ಚಾಗಿ, ತಪ್ಪಿಲ್ಲದ ಮುದ್ರಣ, ಇದು ಅವರಿಬ್ಬರಿಗೂ ಇದ್ದ ಚಟ. ಗ್ರಂಥ ಮುದ್ರಣವಾಗಿ ಕೈಗೆ ಬಂದ ಬಳಿಕ ಅದನ್ನು ಎಚ್.ಎಚ್.ಭಾಭಾಸಾಹೇಬರಿಗೆ [4] ಕೊಡಬೇಕೆಂದು ವೆಂಕಟನಾರಣಪ್ಪ, ವೆಂಕಣ್ಣಯ್ಯ, ನಾನು ಮೂವರೂ ಒಂದು ಜಟಕಾದಲ್ಲಿ ಕುಳಿತು ಹೊರಟೆವು, ವೆಂಕಣ್ಣಯ್ಯನವರು "ಪುಸ್ತಕ ಚೆನ್ನಾಗಿ ಬಂದಿದೆ ಸಾರ್" -ಎಂದರು.

ವೆಂಕಟನಾರಣಪ್ಪನವರು "ನಾಶನವಾಗಿಹೋಯಿತಪ್ಪಾ" -ಎಂದರು.

ಇನ್ನೊಂದು ಸಾರಿ ಯಾರ ಮನೆಯಲ್ಲಿಯೋ ಮದುವೆ ನಡೆದಾಗ ಯಾರೋ "ಒಳ್ಳೆಯ ವಿಜೃಂಭಣೆಯಾಗಿತ್ತು ಸಾರ್" ಎಂದರು.

ವೆಂಕಟನಾರಣಪ್ಪನವರು: "ನಾಶನವಾಗಿಹೋಯಿತಪ್ಪಾ,"

"ನಾಶನ" ಶಬ್ದಕಿಂತ ಹೆಚ್ಚಾಗಿ ಅವರ ಬಾಯಲ್ಲಿ ಬರುತ್ತಿದ್ದ ಮಾತು 'ಫೈಸಲ್'.

"ಅಡಿಗೆ ಆಯ್ತೇ ಸಾರ್?"

"ಫೈಸಲಾಗಿಹೋಯಿತು."

"ಅವರಿಗೆ ಹೆರಿಗೆಗೆ ಕಷ್ಟವಾಯಿತಂತೆ."

"ಕಡೆಗೆ ಆಯಿತು-ಫೈಸಲಾಗಿಹೋಯಿತು."

"ಈ ಸಲ ಸಮ್ಮೇಳನ ಬೆಳಗಾವಿಯಲ್ಲಿ ಅಲ್ಲವೇ ಸಾರ್?"

"ಹಾಗೇ ಫೈಸಲಾಗಿದೆ."

ವೆಂಕಟನಾರಣಪ್ಪನವರ ಭಾಷೆಯಲ್ಲಿ "ನಾಶನ" ಎಂದರೆ "ಸಮಾಪ್ತಿ". "ಫೈಸಲ್" ಎಂದರೆ "ಇತ್ಯರ್ಥ."

ನಿವೃತ್ತಿ

ಮೈಸೂರು ಸರಕಾರದಲ್ಲಿ ಕೆಲವು ಕಾಲ ಕೌನ್ಸಿಲರ್ ಆಗಿದ್ದ ಸಿ.ಎಸ್.ಬಾಲಸುಂದರಂ ಅಯ್ಯರ್ ಅವರು ವಿದ್ಯಾ ಇಲಾಖೆಯ ಅಧ್ಯಕ್ಷರಾಗಿದ್ದ ಕಾಲದಲ್ಲಿ ಒಂದು ದಿನ ನನ್ನನ್ನು ಕರೆದು ಹೇಳಿದರು:

"ಅಯ್ಯ, ನಿಮ್ಮ ಮಾನ್ಯ ಸ್ನೇಹಿತರ ಸಂಗಡ ಮಾತಾನಾಡಿ ಅವರ ಮನೋಗತವನ್ನು ನನಗೆ ತಿಳಿಸಲಾದೀತೆ? ವೆಂಕಟನಾರಣಪ್ಪನವರಿಗೆ ಸೆಂಟ್ರಲ್ ಕಾಲೇಜಿನಲ್ಲಿ ಈಗಿರುವುದಕ್ಕಿಂತ ಮೇಲಕ್ಕೇಳಲು ಅವಕಾಶ ತೋರುವುದಿಲ್ಲ. ಅಂಥವರು ವಿದ್ಯಾ ಇಲಾಖೆಗೆ ಬೇಕಾಗಿದೆ. ಅವರು ಇಷ್ಟಪಟ್ಟು ಬರುವುದಾದರೆ ಅವರ ಅಭಿವೃದ್ಧಿಗೆ ನನ್ನಿಂದಾದ ಸಹಾಯವನ್ನು ಮಾಡಿಯೇನು. ಆದರೆ ಅವರ ಸಂಗಡ ಮಾತನಾಡುವ ಭಾರ ನಿನ್ನದು. ಸಮಯ ನೋಡಿ ಮಾತನಾಡು."

ನಾನು ಸಮಯ ಕಾದುನೋಡಿ ಪ್ರಸ್ತಾವಮಾಡಿದೆ. ವೆಂಕಟನಾರಣಪ್ಪನವರ ಉತ್ತರ ಹೀಗಿತ್ತು:

"ಸ್ವಾಮಿ, ನನಗೆ ಇಲ್ಲಿಯ ಕಿರುಕುಳ ಅನುಭವಿಸಿ ಸಾಕಾಗಿಹೋಗಿದೆ. ಇನ್ನು ನನಗೆ ಯಾವ ತಾಪೇದಾರಿಯೂ ಬೇಡ. ಕೆಲವು ದಿನ ನಾನು ಸ್ವತಂತ್ರನಾಗಿದ್ದುಕೊಂಡು ನನಗೆ ಇಷ್ಟಬಂದ ಕೆಲಸವನ್ನು ನನಗೆ ತೋರಿದ ರೀತಿಯಲ್ಲಿ ಮಾಡಿಕೊಂಡು ನೆಮ್ಮದಿಯಾಗಿರಬೇಕೆಂದಿದ್ದೇನೆ. ಸರ್ವೀಸು ಸಾಕು."

ಆಮೇಲೆ ಅವರು ಕೊಂಚ ಕಾಲ ರಜ ಪಡೆದುಕೊಂಡಿದ್ದು ಬಳಿಕ ನಿವೃತ್ತರಾದರು. ಅವರ ಸಹೋದ್ಯೋಗಿಗಳಲ್ಲಿ ಕೆಲವರು ಅವರಿಗೆ ಗೌರವಮಾಡಲು ಒಂದು ಸಂತೋಷ ಕೂಟ (Entertainment) ನಡಸಬೇಕೆಂದು ಪ್ರಯತ್ನಪಟ್ಟರು. ಅವರೊಡನೆ ಈ ಮಾತನ್ನು ಎತ್ತಿದಾಗ ಅವರೆಂದರು:

"ಇನ್ನೆಷ್ಟಪ್ಪಾ ಎಂಟರ್ಟೈನ್‌ಮೆಂಟು? ಇಷ್ಟು ದಿವಸವೂ ಮಾಡಿದ್ದು ಇನ್ನೇನು? ಅದೇ ನನಗೆ ಸಾಕಾಗಿಹೋಗಿದೆ."

ರಾಜಸೇವಾಸಕ್ತ

ಶ್ರೀಮನ್ ಮಹಾರಾಜರವರು ಅವರಿಗೆ 'ರಾಜಸೇವಾಸಕ್ತ' ಎಂಬ ಬಿರುದನ್ನು ಕೊಟ್ಟು ಬಹುಮಾನಿಸಿದಾಗ ವೆಂಕಟನಾರಣಪ್ಪನವರಿಗೆ ನಿಜವಾದ ಸಂತೋಷವಾಯಿತು. ತಮ್ಮ ಶಿಷ್ಯರಾದ ಮಿರ್ಜಾ ಸಾಹೇಬರು ಅದಕ್ಕೆ ಕಾರಣರಾದರೆಂಬುದು ಅವರ ಸಂತೋಷ. ವೆಂಕಟನಾರಣಪ್ಪನವರಿಗೆ ತಮ್ಮ ಶಿಷ್ಯರ ವಿಷಯದಲ್ಲಿ ಅಭಿಮಾನವೂ, ಹೆಮ್ಮೆಯೂ ಅಪಾರವಾಗಿದ್ದವು.

ಬಸವನಗುಡಿ ಕ್ಲಬ್

ವೆಂಕಟನಾರಣಪ್ಪನವರು ನಿಃಸ್ಪೃಹರು, ನಿಯಮನಿಷ್ಠೆಯುಳ್ಳವರು, ಸತ್ಯಸಂಧರು, ಮಹಾ ಪ್ರಯತ್ನಶೀಲರು-ಎಂದು ಹೇಳಿದ್ದಾಯಿತು. ಆದರೆ ಈ ಗುಣಗಳಲ್ಲಿ ಸಾಮಾನ್ಯವಾಗಿ ಬೆರೆಯದೆ ಇರುವ ಒಂದು ಅವರಲ್ಲಿತ್ತು. ಅದು ಸ್ನೇಹಪರತೆ ಮತ್ತು ವಿನೋದ ಶೀಲತೆ. ಅವರು ಮಡಿಮಡಿಯಾಗಿ ಕಟ್ಟುನಿಟ್ಟಾಗಿ ಇದ್ದರೂ ಮನುಷ್ಯಸಹಜವಾದ ಮೃದುತ್ವ ಅವರಲ್ಲಿ ಅಪರೂಪವಾಗಿರಲಿಲ್ಲ. ಅವರಿಗೆ ಸ್ನೇಹಿತರು ಬೇಕು, ವಿನೋದ ಬೇಕು ಮನುಷ್ಯ ಸಂಪರ್ಕ ಬೇಕು.

ಈ ಗುಣ ಅವರಲ್ಲಿ ಸ್ವಾಭಾವಿಕವಾಗಿದ್ದದ್ದರ ಗುರುತು ಅವರು ಕಟ್ಟಿದ ಬಸವನ ಗುಡಿ ಕ್ಲಬ್. ಅದು ಈಗ ಬಸವನಗುಡಿ ಯೂನಿಯನ್ ಅಂಡ್ ಸರ್ವೀಸ್ ಕ್ಲಬ್ ಎಂಬ ಹೆಸರಿನಿಂದ ಪ್ರಖ್ಯಾತವಾಗಿದೆ. ಅದರ ಕಟ್ಟಡ ಬೆಳೆದು ವಿಸ್ತಾರವಾಗಿ ಈಗ ಬಸವನ ಗುಡಿಯ ಮಧ್ಯಭಾಗದಲ್ಲಿ ಶೋಭಿಸುತ್ತಿದೆ. ಬಹುಮಂದಿ ಪ್ರಮುಖ ಜನರು ಈ ಸಂಸ್ಥೆಯ ಸದಸ್ಯರಾಗಿದ್ದಾರೆ. ಅದರ ಅಂಗಗಳಾಗಿ ಒಂದು ವಾಚನಾಲಯವೂ, ಒಂದು ಪುಸ್ತಕ ಭಂಡಾರವೂ, ಇಸ್ಪೀಟ್ ಮುಂತಾದ ಆಟಗಳ ಸೌಕರ್ಯಗಳೂ ಇವೆ.

ಈ ಸಂಸ್ಥೆಯ ಯೋಚನೆ ಮೊದಲು ಉತ್ಪನ್ನವಾದದ್ದು ವೆಂಕಟನಾರಣಪ್ಪನವರ ಮನಸ್ಸಿನಲ್ಲಿ. ಅವರ ಕಾಲಕ್ಕಾಗಲೇ ಬಸವನಗುಡಿ ಪ್ರಬಲವಾದ ಬಡಾವಣೆಯಾಗಿ ಇನ್ನೂ ದೊಡ್ಡದಾಗುವ ಸೂಚನೆ ತೋರುತ್ತಿತ್ತು. ಈ ಬಡಾವಣೆಯಲ್ಲಿ ಮೊದಮೊದಲು ಮನೆಕಟ್ಟಿದವರೂ ವಾಸಕ್ಕೆ ಬಂದವರೂ ಬಹುಮಟ್ಟಿಗೆ ವಿದ್ಯಾವಂತರು-ಸರಕಾರದ ಅಧಿಕಾರಸ್ಥರು, ಲಾಯರುಗಳು, ಡಾಕ್ಟರುಗಳು, ಭಾರಿ ವರ್ತಕರು. ಇಷ್ಟು ಮಂದಿ ಸಭ್ಯ ಜನರಿರುವ ಪ್ರದೇಶದಲ್ಲಿ ಒಂದು ಸಂತೋಷಗೋಷ್ಠಿಯ ಸ್ಥಳವಿಲ್ಲದಿರುವುದು ಒಂದು ದೊಡ್ಡ ಕೊರತೆ; ಅದನ್ನು ಹೋಗಲಾಡಿಸಬೇಕು-ಎಂದು ವೆಂಕಟನಾರಣಪ್ಪನವರು ಟೊಂಕ ಕಟ್ಟಿ ನಿಂತರು. ಕೆಲ ಮಂದಿ ಸಹಾಯಕ್ಕೆ ಬಂದರು. ಮುನಿಸಿಪಾಲಿಟಿಯಿಂದ ಕಟ್ಟಡದ ನಿವೇಶನವನ್ನು ಸಂಪಾದಿಸಿದ ಬಳಿಕ ಒಂದು ದಿನ ವೆಂಕಟನಾರಣಪ್ಪನವರು ಖುದ್ದಾಗಿ ನಿಂತು ಕರಣೆ ಹಿಡಿದು ಕಟ್ಟಡದ ಕೇಂದ್ರ ಕೋಣೆಯ ಗೋಡೆಯನ್ನು ಕಟ್ಟಿದರು. ಹಾಗೆ ಪ್ರಾರಂಭವಾದದ್ದು ಈ ಹೊತ್ತು ನಿಂತಿರುವ ಕಟ್ಟಡ.

ವೆಂಕಟನಾರಣಪ್ಪನವರು ನನ್ನನ್ನು ಈ ಕಟ್ಟಡಕ್ಕೆ ಮೊದಲ ಸಾರಿ ಕರೆದುಕೊಂಡು ಹೋದದ್ದು ನನಗೆ ಚೆನ್ನಾಗಿ ಜ್ಞಾಪಕವಿದೆ. ನನಗೆ ಇಸ್ಪೀಟಾಟ ಬರುತ್ತಿರಲಿಲ್ಲ. ಇದನ್ನು ಕೇಳಿ ವೆಂಕಟನಾರಣಪ್ಪನವರು ಆಶ್ಚರ್ಯ ಸೂಚಿಸಿ ಲಘುವಾಗಿ ಹಾಸ್ಯ ಮಾಡಿ, ಆಟವನ್ನು

ನನಗೆ ಹೇಳಿಕೊಟ್ಟರು. ನಾನು ಅವರೊಡನೆ ಒಂದೆರಡು ಸಾರಿ ಇಸ್ಪೀಟಾಡಿ ಸೋತಿದ್ದೇನೆ. ಅವರು ಆ ಆಟವನ್ನು ಕಲಿಯುವ ಸಾಮರ್ಥ್ಯ ನನಗಿಲ್ಲವೆಂಬುದನ್ನು ಕಂಡು ಒಪ್ಪಿಕೊಂಡರು. ಇತರ ಎಷ್ಟೋ ವಿಷಯಗಳಲ್ಲಿ ಹೇಗೋ ಇದರಲ್ಲಿಯೂ ಹಾಗೆಯೇ ಪಟುವಾದ ಶಿಷ್ಯನಲ್ಲವೆಂದು ಅವರಿಗೆ ಮನದಟ್ಟಾಯಿತು. ನಾನು ಲೆಕ್ಕಾಚಾರಬಲ್ಲವನಲ್ಲ.

ಆದರೆ ವೆಂಕಟನಾರಣಪ್ಪನವರು ಇಸ್ಪೀಟಿನಲ್ಲಿ ನಿಪುಣರೊ? ಅದು ನನಗೆ ಗೊತ್ತಿಲ್ಲ. ಇಸ್ಪೀಟು ಪ್ರಶಂಸೆಯಲ್ಲಿ ಯಾರಾದರೂ ಅವರನ್ನು ಹೆಸರಿಸಿದ್ದನ್ನು ನಾನು ಕೇಳಿಲ್ಲ.

ಅವರು ಹೆಚ್ಚಾಗಿ ಇಸ್ಪೀಟಾಡುತ್ತಲೂ ಇರಲಿಲ್ಲ. ಅವರು ಆ ಆಟದ Theory ಯನ್ನು ತಿಳಿದುಕೊಂಡಿದ್ದರು. ಆದರೆ ಆಟವಾಡಿ ಪ್ರವೀಣತೆ ಸಂಪಾದಿಸಿಕೊಳ್ಳಲು ಅವರಿಗೆ ಪುರಸತ್ತು ಎಲ್ಲಿಂದ ಬರಬೇಕು? ಇಷ್ಟರ ಮೇಲೆ ಇಷ್ಪೀಟು ಪಾಂಡಿತ್ಯ ಅವರ ಉದ್ದೇಶದಲ್ಲಿರಲಿಲ್ಲ. ಅವರಿಗೆ ಬೇಕಾಗಿದ್ದುದ್ದು ವಿನೋದ-ಒಂದೆರಡು ಕ್ಷಣ ಬೇಸರಿಕೆ ಕಳೆಯುವ ಉಪಾಯ. ಅವರು ಒಂದು ತಿಂಗಳಲ್ಲಿ ಒಂದು ಸಂಜೆ ಒಂದು ಘಂಟೆಯಷ್ಟನ್ನು ಕೂಡ ಇಸ್ಪೀಟಿಗೆ ಕೊಟ್ಟವರಲ್ಲ.

ಇತರರು ವಿನೋದಪಡಲೆಂದು ಉದ್ದೇಶಪಟ್ಟವರು ಅವರು. ಇತರರ ವಿನೋದವೇ ಅವರ ವಿನೋದ. ಅವರು ತಾವು ಸ್ವಯಂ ಕಾಫಿ ಕುಡಿಯುತ್ತಿದ್ದವರಲ್ಲ. ನಾವು ಕಾಫಿ ಸವಿದು ಬಾಯಿ ಚಪ್ಪರಿಸುತ್ತಿದ್ದರೆ ಅವರಿಗೆ ಆ ಸುಖಾನುಭವದ ಸುಖ. ಇದು ದೊಡ್ಡವರ ದಾರಿ.

ಪರ್ಯವಸಾನ

ಕಡೆಯ ದೃಶ್ಯ.

ವೆಂಕಟನಾರಣಪ್ಪನವರು ಕಡೆಕಡೆಯ ದಿನಗಳಲ್ಲಿ-ಅವರ ಜನ್ಮದಲ್ಲಿ ಅದೇ ಮೊದಲನೆಯ ಸಾರಿ ಮತ್ತು ಅದೇ ಕಡೆಯ ಸಾರಿ-ವ್ಯಾಧಿಗ್ರಸ್ತರಾದರು. ಅದು ಕಾಲುನೋವಿನ ರೂಪದಲ್ಲಿ ಪ್ರಾರಂಭವಾಯಿತು. ಬೆಂಗಳೂರಿನ ಪ್ರಸಿದ್ಧ ಡಾಕ್ಟರುಗಳಲ್ಲಿ ಅನೇಕರು ಅವರ ಶಿಷ್ಯರು. ಅವರಲ್ಲೊಬ್ಬರು ಸೀನಿಯರ್ ಸರ್ಜನ್ ಡಾ ॥ ಎಸ್. ಸುಬ್ಬರಾಯರು. ಇನ್ನೊಬ್ಬರು ಡಾ ॥ ಬಿ.ಕೆ. ನಾರಾಯಣರಾಯರು. ಮೂರನೆಯವರು ಡಾ ॥ ಕೆ. ಶ್ರೀನಿವಾಸಾಚಾರ್ಯರು. ಸುಬ್ಬರಾಯರು ಅವರನ್ನು ಪರೀಕ್ಷಿಸಿ ಹೇಳಿದರು:

“ಈಗ ನಿಮಗೆ ದೇಹದಲ್ಲಿ ರೋಗವೇನೂ ಇಲ್ಲ ಸಾರ್. ಆದರೆ ಕಾಲಿನ ಮೂಳೆಗಳೂ ನರಗಳೂ ದುರ್ಬಲವಾಗಿವೆ. ಇದಕ್ಕೆ ಕಾರಣ ನಿಮ್ಮ ನಡಿಗೆ. ಕೆಲವು ಕಾಲ ಕಾಲಿಗೆ ವಿಶ್ರಾಂತಿ ಕೊಡಬೇಕು ಸಾರ್.”

ಈ ಸಲಹೆಯನ್ನು ವೆಂಕಟನಾರಣಪ್ಪನವರ ಬುದ್ಧಿಯೇನೋ ಅಂಗೀಕರಿಸಿತು. ಆದರೆ ಮನಸ್ಸು ತನ್ನ ಬಹುಕಾಲದ ಅಭ್ಯಾಸವನ್ನು ಬಿಟ್ಟುಕೊಡಲು ಒಪ್ಪಲಿಲ್ಲ. ವೆಂಕಟನಾರಣಪ್ಪನವರ ಸಾಮಾನ್ಯ ನಡಿಗೆ ನನ್ನಂಥವನ ಓಟಕ್ಕಿಂತ ವೇಗವಾದದ್ದು. ಅವರು ಎಡಬಲ ತಿರುಗದೆ ಸೂರ್ಯಚಂದ್ರಾದಿ ಗ್ರಹಗಳು ಕ್ಲ್ಪಪ್ತಮಾರ್ಗದಲ್ಲಿ, ಕ್ಲ್ಪಪ್ತಕಾಲದಲ್ಲಿ, ಕ್ಲ್ಪಪ್ತವೇಗದಲ್ಲಿ ನಡೆಯುವಂತೆ ನಡೆಯುತ್ತಿದ್ದರು. ಅವರಿಗೆ ಒಂದು ನಿಮಿಷವೂ ವ್ಯರ್ಥವಾಗಕೂಡದು. ರೈಲಿಗೆ ಹೊರಟರೆ ಮೊದಲ ಘಂಟೆ ಬಾರಿಸುವುದಕ್ಕೆ ಮುಂಚೆ ತಾವು ಅಲ್ಲಿಗೆ ಹೋಗತಕ್ಕದ್ದಲ್ಲ; ಎರಡನೆಯ ಘಂಟೆ ಬಡಿದು ಮೂರನೆಯದು ಬಡಿಯುವುದರೊಳಗಾಗಿ ಅಲ್ಲಿ ತಲಪಬೇಕು. ಅಂಥ ವೇಗದ ಅಭ್ಯಾಸವುಳ್ಳವರ ಕಾಲು ಸವೆದು ದುರ್ಬಲವಾಗದೆ ಹೇಗಿದ್ದೀತು?

ಕೆಲವು ಕಾಲದ ಅನಂತರ ಕರಾಚಿ ಕೃಷ್ಣರಾಯರವರಲ್ಲಿ ಚಿಕಿತ್ಸೆ ನಡೆಯಿತು; ನೀವುವುದು, ಹಿಸುಕುವುದು, ಮೊದಲಾದದ್ದು. ಇದರಿಂದಲೂ ಗುಣ ಕಾಣಲಿಲ್ಲ. ಕೆಲವು ಕಾಲದ ಮೇಲೆ ಹಾಸಿಗೆ ಹಿಡಿಯಬೇಕಾಯಿತು. ಕಾಲಿನ ದುರ್ಬಲತೆಯ ಜೊತೆಗೆ ಕೊಂಚ ಪುಡಿಕೆಮ್ಮು ಸೇರಿತು. ಕೊಂಚ ಕೊಂಚ ಜ್ವರವೂ ಬಂದಿತು.

ಅವರು ಈ ಅವಸ್ಥೆಯಲ್ಲಿದ್ದಾಗ ನಾನು ಅವರಿಗೆ ಒಂದು ಸಾರಿ ಹೇಳಿದೆ:

“ಸಾರ್, ಈ ರೂಮು ರಸ್ತೆಯ ಪಕ್ಕದಲ್ಲಿದೆ. ಧೂಳು, ಮಣ್ಣು ಇಲ್ಲಿ ಉಸಿರಬೇಕಾಗಿದೆ. ಇದರ ಜೊತೆಗೆ ಬಸ್ಸುಗಳ, ಜಟಕಗಳ ಗುಡುಗುಡು ಶಬ್ದ, ಟರ್ ಟರ್ ಶಬ್ದ. ಈ ರೂಮನ್ನು ಬಿಟ್ಟು ನೀವು ಪೂರ್ವದ ಕಡೆಗಿರುವ ನಿಮ್ಮ ಸಣ್ಣ ಮನೆಯಲ್ಲಿದ್ದರೆ ಒಳ್ಳೆಯದಲ್ಲವೆ?”

ವೆಂ: “ಯೋಚನೆ ಮಾಡುತ್ತೇನೆ.”

ಎರಡು ದಿನ ಕಳೆದ ಬಳಿಕ ಈ ಪ್ರಸ್ತಾವ ಬಂದಾಗ ಹೇಳಿದರು:

“ನಾನು ಇಲ್ಲಿಯೇ ಇರುತ್ತೇನಪ್ಪ. ನೀವು ಹೇಳಿದ್ದೇನೋ ಸರಿ. ಆದರೆ ಈ ರೂಮಿನಲ್ಲಿ ನನಗಿರುವ ಎರಡು ಸಂತೋಷಗಳು ಬೇರೆಕಡೆ ಇರುವುದಿಲ್ಲ. ಮೊದಲನೆಯದು-ಇಲ್ಲಿ ಪಕ್ಕದ ರೂಮಿನಲ್ಲಿ ನನ್ನ ಮೊಮ್ಮಕ್ಕಳು ಇರುತ್ತಾರೆ; ಅವರ ಆಟಪಾಠ, ಮಾತುಕತೆ ಕೇಳಿದರೆ ಕೊಂಚ ಉಲ್ಲಾಸವಾಗುತ್ತದೆ. ಎರಡನೆಯದಾಗಿ-ನನ್ನ ಮೊಮ್ಮಗಳು ಪಕ್ಕದ ರೂಮಿನಲ್ಲಿ ಸಂಗೀತಪಾಠ ಮಾಡುತ್ತಾಳೆ. ಅದನ್ನು ಕೇಳುವುದು ನನಗಿಷ್ಟ.”

ಇದಕ್ಕೆ ನಾನು ಏನು ಉತ್ತರ ಹೇಳಲಾದೀತು? ಯಾರು ತಾನೆ ಏನು ಹೇಳಿಯಾರು? ಸಣ್ಣ ಮಕ್ಕಳ ಆಟಪಾಠಗಳಲ್ಲಿಯೂ, ಸಂಗಿತದಲ್ಲಿಯೂ ಸಂತೋಷಪಡುವ ಶಕ್ತಿಯನ್ನು ಯಾರು ಉಳಿಸಿಕೊಂಡಿದ್ದಾರೆಯೋ ಅವರು ಭಗವಂತನಿಗೆ ಸಮೀಪರು.

ನೇದಿಷ್ಠೋ ಬ್ರಹ್ಮಣೋ ಭವತಿ ॥

೧೮

ಮಿರ್ಜಾ ಸಾಹೇಬರ ಗುರುಭಕ್ತಿ

ಒಂದು ರಾತ್ರಿ, ೧೯೧೪-೧೫. ವೆಂಕಟನಾರಣಪ್ಪನವರು ನನ್ನ ಮನೆಗೆ ಬಂದು ಹೀಗೆಂದರು:

"ಮೊನ್ನೆ ನಾನು ಮೈಸೂರಿಗೆ ಹೋಗಿದ್ದೆ, ಸೆನೇಟ್ ಮೀಟಿಂಗಿಗಾಗಿ. ಅಲ್ಲಿ ಮಿರ್ಜಾ ಸಾಹೇಬರಿದ್ದರು. ಅವರು ಸೆನೇಟ್ ಮೆಂಬರು, ನನ್ನ ಹಳೆಯ ಶಿಷ್ಯರು. ಆತ ನನ್ನ ಪಕ್ಕದಲ್ಲಿ ಕುಳಿತು "ಸಾರ್, ನಿಮಗೆ 'ಕರ್ಣಾಟಕ' ಪತ್ರಿಕೆಯ ಎಡಿಟರು ಗೊತ್ತಿದೆಯೆ?" ಎಂದು ಕೇಳಿದರು. ನಾನು 'ಚೆನ್ನಾಗಿ ಗೊತ್ತಿದೆ. ಆತನ ತಂದೆಯೂ ನಾನೂ ಸ್ನೇಹಿತರು' ಎಂದು ಹೇಳಿದೆ. ಮಿರ್ಜಾ ಸಾಹೇಬರು 'ಅವರು ಚೆನ್ನಾಗಿ ಬರೆಯುತ್ತಾರೆ. ಅವರ ಇಂಗ್ಲಿಷ್ ಚೆನ್ನಾಗಿದೆ. ನನಗೆ ಅವರನ್ನು ಕಾಣಬೇಕೆನಿಸುತ್ತದೆ. ನೀವು ದಯಮಾಡಿ ಅವರು ಬೆಂಗಳೂರಿನಲ್ಲಿ ರಿಚ್‌ಮಂಡ್ ರಸ್ತೆಯ ಬಳಿ ಇರುವ ನನ್ನ ತಂದೆಯ ಮನೆಯಲ್ಲಿ ದರ್ಶನ ಕೊಡುವಂತೆ ಹೇಳುವುದಕ್ಕಾದೀತೆ?' ಎಂದು ಕೇಳಿದರು. ನಾನು ಸಂತೋಷದಿಂದ 'ಆದೀತು. ಅದಕ್ಕೇನು ಕಷ್ಟ?' ಎಂದು ಉತ್ತರ ಕೊಟ್ಟೆ. ನನ್ನ ಮಾತನ್ನು ನೀವು ನಡಸಿಕೊಡಬೇಕಲ್ಲ?" -ಎಂದರು.

ವೆಂಕಟನಾರಣಪ್ಪನವರಂಥವರು ಮಾಡಿದ ಕೋರಿಕೆ ಗುರುಸನ್ನಿಧಿಯಿಂದ ಬಂದ ಆಜ್ಞೆಯಂತೆ. ಅದಕ್ಕೆ ಮೊದಲು ದಿವಾನ್ ವಿಶ್ವೇಶ್ವರಯ್ಯನವರು ಮಿರ್ಜಾರವರನ್ನು ನಾನು ಕಾಣಬೇಕೆಂದು ಎರಡುಮೂರು ಸಾರಿ ಸೂಚನೆ ಕೊಟ್ಟಿದ್ದರು. "ನನಗೆ ಅವರಲ್ಲೇನು ಕೆಲಸ?" ಎಂದು ನಾನು ಹೇಳಿ ಕ್ಷಮೆ ಬೇಡಿದ್ದೆ. ಈಗ ಹಾಗೆ ಮಾಡಲು ಮನಸ್ಸೊಪ್ಪಲಿಲ್ಲ.

ಮಿರ್ಜಾರವರಿಗೆ ವೆಂಕಟನಾರಣಪ್ಪನವರಲ್ಲಿ ಅತ್ಯಂತ ಭಕ್ತಿ. ವೆಂಕಟನಾರಣಪ್ಪನವರು ಪ್ರಜಾಪ್ರತಿನಿಧಿ ಸಭೆಗಾಗಲಿ ಸೆನೇಟ್ ಸಭೆಗೋಸ್ಕರವಾಗಲಿ ಮೈಸೂರಿಗೆ ಹೋದಾಗ ನಂಜರಾಜ ಬಹದೂರ್ ಛತ್ರದಲ್ಲಿಯೋ ಇನ್ನೆಲ್ಲಿಯೋ ಇಳಿದುಕೊಳ್ಳುತ್ತಿದ್ದರು. ಆ ಮಾರನೆಯ ದಿನವೇ ಬೆಳಗ್ಗೆ ಮಿರ್ಜಾರವರು ಅಲ್ಲಿಗೆ ಹೋಗಿ ಮೇಷ್ಟರ ದರ್ಶನಮಾಡುತ್ತಿದ್ದರು. ವೆಂಕಟನಾರಣಪ್ಪನವರು ಮಡಿಯುಟ್ಟು ಸ್ವಯಂಪಾಕದ ಪ್ರಯತ್ನದಲ್ಲಿರುವರು; ನಡುವಿನಿಂದ ಮೇಲಕ್ಕೆ ಬರಿ ಮೈ. ಮಿರ್ಜಾ ಸಾಹೇಬರವರು ನಿಂತುಕೊಂಡೇ ಮಾತನಾಡುವರು. ಹತ್ತು ಹದಿನೈದು ನಿಮಿಷ ಹೀಗೆ ಕುಶಲಪ್ರಶ್ನೆ ನಡಸಿದಲ್ಲದೆ ಮಿರ್ಜಾ ಸಾಹೇಬರಿಗೆ ತೃಪ್ತಿಯಿಲ್ಲ.

ವೆಂಕಟನಾರಣಪ್ಪನವರು ಕಟುವಚನಗಳನ್ನಾಡುವುದಕ್ಕೆ ಕೊಂಚವೂ ಹಿಂತೆಗೆಯುತ್ತಿರಲಿಲ್ಲ. ಮಿರ್ಜಾ ಸಾಹೇಬರು ಮೆಚ್ಚಿಕೊಳ್ಳುವಂಥ ಮಾತನ್ನು ಒಂದನ್ನಾಡಿದರೆ ಅವರು ಎದೆಮುಟ್ಟಿ ಹುಡುಕಿ ನೋಡಿಕೊಳ್ಳುವಂತೆ ಮಾಡಿಸುವ ಮಾತನ್ನು ಎರಡನ್ನಾಡುತ್ತಿದ್ದರು. “It's all nonsense, this modern fashion” ಎಂದು ಪದೇ ಪದೇ ಹೇಳುವರು. ಮಿರ್ಜಾ ಸಾಹೇಬರು ನಗುವರು; “ಹೀಗೆ ಹೇಳುವವರು ಇನ್ನು ಯಾರಿದ್ದಾರೆ?” ಎಂದು ಕೇಳುವರು.

ಒಂದು ಗೀಳು

ಮಿರ್ಜಾ ಸಾಹೇಬರಿಗಿದ್ದ ಗೀಳುಗಳಲ್ಲಿ ನಮ್ಮ ದೇವಸ್ಥಾನಗಳ ಪ್ರಾಕಾರದ ಗೋಡೆಗಳನ್ನು ತಗ್ಗಿಸಬೇಕೆಂಬುದು ಒಂದು. ಮನೆಗಳ ವಿಷಯದಲ್ಲಿಯೂ ಮಿರ್ಜಾ ಸಾಹೇಬರು ಅದೇ ಮಾತನ್ನು ಹೇಳುತ್ತಿದ್ದರು. ಅವರ ಆಶಯವೇನೆಂದರೆ, “ಮನೆಗಳ ಮುಂದೆ ಸಣ್ಣ ಸಣ್ಣ ಹುಲ್ಲು ಹಸಿರುಗಳೂ ಹೂಗಿಡಗಳೂ ಇರುತ್ತವೆ; ಇತರರ ಕಣ್ಣಿಗೆ ಆ ಸಂತೋಷ ಯಾಕೆ ದೊರಕಬಾರದು? ಮನೆಗೂ ಮನೆಗೂ ನಡುವೆ ಗೋಡೆ ಇರಬೇಕಾದದ್ದಿಲ್ಲ; ತಂತಿಯ ಬೇಲಿ ಬೇಕಾದರೆ ಹಾಕಿಕೊಳ್ಳಬಹುದು. ಮನೆಸಾಲಿನ ಒಂದು ಕಡೆ ನಿಂತು ದೃಷ್ಟಿ ಪ್ರಸಾರ ಮಾಡಿದರೆ ಆ ಸಾಲಿನ ಕೊನೆಯವರೆಗೂ ಹುಲ್ಲು ಹಸಿರೂ ಹೂಗಳ ಬಣ್ಣವೂ ಅಖಂಡವಾಗಿ ಕಾಣಿಸುತ್ತಿರಬೇಕು. ಬೀದಿಯಿಂದ ನೋಡುವವರಿಗೂ ಈ ಅಂದ ಚೆಂದಗಳು ಲಭ್ಯವಾಗಬೇಕು.” ಇದು ಮಿರ್ಜಾಸಾಹೇಬರ ವಾದ.

ವೆಂಕಟನಾರಣಪ್ಪನವರು: “ನೀವು ಹೇಳುವುದೆಲ್ಲ ಸರಿ, ಜನ ಸಭ್ಯರಾಗಿ ಸಾಧುಗಳಾಗಿರುವ ಕಡೆ. ನಮ್ಮ ದೇಶ ಅಂಥದ್ದಲ್ಲ. ಇಲ್ಲಿ ಕಾಂಪೌಂಡ್ ಗೋಡೆ ಇದ್ದರೂ ಕಳ್ಳತನ ತಪ್ಪಿದ್ದಲ್ಲ. ಆದದ್ದರಿಂದ ನಿಮ್ಮ ಯೋಚನೆ ಈ ದೇಶದಲ್ಲಿ ನಡೆಯತಕ್ಕದ್ದಲ್ಲ.”

ತಮ್ಮ ಗೀಳಿನಂತೆ ಕೆಲಸ ನಡಸಬೇಕೆಂದು ಮಿರ್ಜಾ ಸಾಹೇಬರು ಬಸವಣ್ಣನ ಗುಡಿಯ ವಿಷಯದಲ್ಲಿ ಸಲಹೆ ಕೊಟ್ಟರು. “ದೇವಸ್ಥಾನದ ಪಶ್ಚಿಮದ ಕಡೆಯ ಪ್ರಾಕಾರದ ಗೋಡೆ ತುಂಬ ಎತ್ತರವಾಗಿದೆ. ಅದರಿಂದಾಚೆಗಿರುವ ರಸ್ತೆ ದೊಡ್ಡ ರಸ್ತೆ, ಬಹಳ ಮುಖ್ಯವಾದದ್ದು. ಆ ರಸ್ತೆಯಲ್ಲಿ ಹೋಗಿ ಬರುವವರಿಗೆ ದೇವಸ್ಥಾನದ ಅಂದ ಕಾಣುವುದಿಲ್ಲ. ಗುಡಿಯ ಮುಖಮಂಟಪ ಸೊಗಸಾಗಿದೆ. ಗೋಪುರ ಚೆನ್ನಾಗಿದೆ. ಪಶ್ಚಿಮದ ಗೋಡೆಯನ್ನು ತಗ್ಗಿಸಿದರೆ ಈ ಗುಡಿಯ ಅಂದವೆಲ್ಲ ದಾರಿನಡೆಯುವವರಿಗೆ ಸಂತೋಷಕರವಾಗುತ್ತದೆ.”

ಇದನ್ನು ವೆಂಕಟನಾರಣಪ್ಪನವರು ತೀವ್ರವಾಗಿ ಖಂಡಿಸಿದರು:

“ಅಯ್ಯಾ! ಹಿಂದೂ ಜನಕ್ಕೆ ನಿಮ್ಮ ಮೇಲೆ ಈಗಾಗಲೇ ಕೋಪವೂ ಅಸಮಾಧಾನವೂ ಇವೆ. ಅದೆಲ್ಲ ಆಧಾರವಿಲ್ಲದ್ದೆಂದು ನಾನು ಬಲ್ಲೆ. ನಿಮ್ಮ ವಿಷಯದಲ್ಲಿ ಅನ್ಯಾಯ ಮಾಡುವ ಜನ ಎಷ್ಟೋ ಇದ್ದಾರೆ. ನೀವು ಹಿಂದೂ ದೇವಾಲಯಗಳ ಗೊಡವೆಗೆ ಬಂದರೆ ಅಂಥವರ ಬಾಯಿಗೆ ಬಲ ಬರುತ್ತದೆ. ಆ ಜನ ನಿಮ್ಮ ಹೆಸರಿನಲ್ಲಿ ಅಪಪ್ರಚಾರ ಮಾಡಿ ಹೆಸರನ್ನು ಕೆಸರಿಗೆಳೆಯುತ್ತಾರೆ. ನೀವು ಗುಡಿಗಳ ತಂಟೆಗೆ ಹೋಗಬೇಡಿ. ಇದು ನಾನು ಖಂಡಿತವಾಗಿ ಹೇಳುವ ಮಾತು.”

ಮಿರ್ಜಾ ಸಾಹೇಬರು ಈ ಹಿತೋಕ್ತಿಯನ್ನು ಪೂರ್ತಿ ಗೌರವಿಸಿದರೆಂದು ನಾನು ಹೇಳಬಲ್ಲೆ. ವೆಂಕಟನಾರಣಪ್ಪನವರು ನಿಷ್ಕಪಟಿಗಳು, ಮತ್ತು ಸತ್ಯಸಂಧರು-ಎಂದು ಅವರು ನಂಬಿದ್ದರು.

ಪರಿಷತ್ತಿನ ಸಭಾಮಂದಿರ

೧೯೩೨-೩೩ರ ಸುಮಾರಿನಲ್ಲಿ, ಪರಿಷತ್ತು ಈಗಿನ ಕಟ್ಟಡಕ್ಕೆ ಆಗತಾನೆ ಪ್ರವೇಶ ಮಾಡಿದ್ದ ಸಮಯದಲ್ಲಿ, ಒಂದು ದಿನ ಬೆಳಿಗ್ಗೆ ದಿವಾನ್ ಮಿರ್ಜಾ ಸಾಹೇಬರು ಮಾಮೂಲಿನಂತೆ ಕುದುರೆಯ ಮೇಲೆ ಸವಾರಿ ಮಾಡಿಕೊಂಡು ಪರಿಷತ್ತಿನ ಕಡೆಗೆ ಬಂದರು. ಅವರ ಜೊತೆಯಲ್ಲಿ ಮಿತಪರಿವಾರವೂ ಇತ್ತು. ಮಿರ್ಜಾರವರು ತಮ್ಮ ಬಳಿ ಇದ್ದವರಿಗೆ "I must pay my respects to my revered teacher." (ನನ್ನ ಪೂಜ್ಯ ಗುರುಗಳಿಗೆ ನಾನು ನಮಸ್ಕಾರ ಸಲ್ಲಿಸಬೇಕು)-ಎಂದು ಹೇಳುತ್ತಾ ಕುದುರೆಯಿಂದಿಳಿದು ಕಟ್ಟಡದೊಳಕ್ಕೆ ಪ್ರವೇಶಿಸಿದರು. ವೆಂಕಟನಾರಣಪ್ಪನವರು ಒಂದು ಕೊಠಡಿಯಲ್ಲಿ ಕುಳಿತು ಯಾವುದೋ ಬರವಣಿಗೆ ಕೆಲಸ ಮಾಡುತ್ತಿದ್ದರು. ಶಿಷ್ಯರನ್ನು ನೋಡಿದ ಕೂಡಲೆ ಎದ್ದು ನಿಂತರು: ಕುಶಲಪ್ರಶ್ನೆಗಳಾದ ಮೇಲೆ ಮಿರ್ಜಾರವರು ಕೇಳಿದರು:

ಮಿ: "ನಿಮ್ಮ ಲೆಕ್ಚರ್ ಹಾಲ್ ಯಾವುದು?"

ವೆಂ: "ಇದೇ ನಮ್ಮ ಹಾಲ್."

ಮಿ: "ಇದು ರೂಮ್. ನಾನು ನೋಡಬೇಕೆಂದದ್ದು ನಿಮ್ಮ ಹಾಲ್-ಸಭಾ ಮಂಟಪವನ್ನ."

ವೆಂ: "ಇದೇ ನಮ್ಮ ಸಭಾಮಂಟಪ."

ಮಿ: "ಇದರಲ್ಲಿ ಸಭೆಯೆ? ಇಪ್ಪತ್ತು ಮೂವತ್ತು ಮಂದಿ ಕೂಡುವುದಕ್ಕಾಗುವುದಿಲ್ಲವಲ್ಲ?"

ವೆಂ: "ಇದು ಭರ್ತಿಯಾಗುವಷ್ಟು ಜನ ಬಂದರೆ ನಮಗೆ ಸಾಕು! ಕನ್ನಡ ಕೇಳುವುದಕ್ಕೆ ಯಾರು ಬರುತ್ತಾರೆ?"

ಮಿ: "My master has always been a pessimist. (ನಮ್ಮ ಉಪಾಧ್ಯಾಯರು ಯಾವಾಗಲೂ ಎಲ್ಲದರಲ್ಲಿಯೂ ನಿರಾಶಾವಂತರು.) Mr. Tandoni Rao, Knock down those two walls. That will make this a proper hall. (ಎಕ್ಸಿಕ್ಯೂಟಿವ್ ಇಂಜಿನಿಯರ್ ತಾಂದೋಣಿರಾಯರೆ, ಈ ಎರಡು ಗೋಡೆಗಳನ್ನು ನೆಲಸಮಮಾಡಿಸಿರಿ; ಆಗ ಇದು ಒಂದು ಸಭಾಮಂದಿರವಾಗುತ್ತದೆ,) ನಾನು ಈಗ ತಲಘಟ್ಟಪುರದ ಕಡೆಗೆ ಹೊರಟಿದ್ದೇನೆ. ಸುಮಾರು ಹನ್ನೆರಡು ಘಂಟೆಯ ಹೊತ್ತಿಗೆ

ವಾಪಸು ಬಂದೇನು. ಆಗ ಪುನಃ ಇಲ್ಲಿಗೆ ಬರುತ್ತೇನೆ. ಆ ವೇಳೆಗೆ ಸಭಾಮಂದಿರದ ಸ್ವರೂಪ ಕಣ್ಣಿಗೆ ಕೊಂಚ ಕಾಣಿಸೀತಲ್ಲವೆ?"

ತಾಂದೋಣಿ ರಾಯರು: "ಮಾಡಿಸಿರುತ್ತೇನೆ."

ಅದೇ ಮಧ್ಯಾಹ್ನ ಸುಮಾರು ಹನ್ನೆರಡು ಘಂಟೆಯವೇಳೆಗೆ ಮಿರ್ಜಾ ಸಾಹೇಬರು ಮತ್ತೆ ಬಂದು ಆಗಿದ್ದ ಕೆಲಸವನ್ನು ಒಪ್ಪಿದರು.

ಹಾಗೆ ತಯಾರಾದದ್ದು ಈಗಿನ ಪರಿಷತ್ತಿನ ಸಭಾಭವನ.

೧೯

ಪಂಜೆ ಮಂಗೇಶರಾಯರು

ಕನ್ನಡ ಪುನರುಜ್ಜೀವನದ ಚರಿತ್ರೆಯಲ್ಲಿ ಅವಶ್ಯ ಸ್ಮರಣೀಯರಾದ ವಿದ್ವತ್ಸಜ್ಜನರಲ್ಲಿ ಪಂಜೆ ಮಂಗೇಶರಾಯರು ಮುಖ್ಯರು. ಅವರು ಸಾಹಿತ್ಯೋತ್ಸಾಹದ ಕಾರಣದಿಂದಲೂ ಸೌಶೀಲ್ಯದ ಕಾರಣದಿಂದಲೂ ನೈಜವಾದ ಸ್ನೇಹತತ್ಪರತೆಯ ಕಾರಣದಿಂದಲೂ ಚಿರ ಸ್ಮರಣೀಯರಾಗಿದ್ದಾರೆ.

ಅವರ ಪರಿಚಯ ನನಗೆ ಆಗುವುದಕ್ಕೆ ಎಷ್ಟೋ ವರ್ಷಗಳ ಹಿಂದೆ ಅವರ ವಿಷಯವನ್ನು ನಾನು ಬಿ.ಎಂ.ಶ್ರೀಕಂಠಯ್ಯನವರ ಬಾಯಿಂದ ಕೇಳಿದ್ದೆ. ಶ್ರೀಕಂಠಯ್ಯನವರಿಗೆ ಪಂಜೆಯವರ ವಿಷಯದಲ್ಲಿ ಸಂತತವೂ ಗಾಢವೂ ಆದ ಅಭಿಮಾನ. ಪಂಜೆಯವರು ‘ಕವಿಶಿಷ್ಯ’ ಎಂಬ ನಾಮಾಂಕಿತದಿಂದ ಬರೆದಿದ್ದ ಅನೇಕ ಹಾಡುಗಳನ್ನು ಶ್ರೀಕಂಠಯ್ಯನವರು ಮೆಚ್ಚಿ ನನಗೆ ತೋರಿಸಿದ್ದರು. ಆದದ್ದರಿಂದ ಅವರನ್ನು ನೋಡಬೇಕೆಂಬ ಕುತೂಹಲ ನನ್ನಲ್ಲಿ ಪ್ರಬಲವಾಗಿತ್ತು.

ಪ್ರಥಮ ಪರಿಚಯ

ನಾನು ಅವರನ್ನು ಮೊದಲ ಸಾರಿ ಕಂಡದ್ದು ಎಲ್ಲಿ, ಯಾವಾಗ ಎಂಬುದು ಈಗ ಮರೆತುಹೋಗಿದೆ. ಅದು ಬಹುಶಃ ೧೯೨೩-೨೪ ರಲ್ಲಿ. ನಾನು ಮಂಗಳೂರಿಗೆ ಹೋಗಿದ್ದಾಗ ಪಂಜೆಯವರೂ ಆಗ ಆ ಊರಿಗೆ ಬಂದಿದ್ದರೆಂದು ವರ್ತಮಾನ ಕೇಳಿ ಅವರಿದ್ದ ಮನೆಗೆ ಹೋದೆ. ಮಧ್ಯಾಹ್ನ ಸುಮಾರು ಒಂದೂವರೆ ಘಂಟೆಯ ಸಮಯ. ಭೋಜನ ನಡೆಯುತ್ತಿತ್ತು. ಮಂಗೇಶರಾಯರಿಗೆ ನನ್ನ ಹೆಸರನ್ನು ಯಾರೋ ಹೋಗಿ ಹೇಳಿದರು. ಅವರು ಅಲ್ಲಿಂದಲೇ ಹೋ! ಎಂದು ಕೂಗಿ “ಬನ್ನಿ ಊಟಕ್ಕೆ, ಬಹು ಸೊಗಸಾಗ್ಯದೆ ಈ ಹೊತ್ತಿನ ಅಡಿಗೆ” ಎಂದು ಉತ್ಸಾಹದಿಂದ ಕರೆದರು. ನಾನು ಆಗತಾನೆ ನನ್ನ ಊಟ ಮುಗಿಸಿಕೊಂಡು ಅಲ್ಲಿಗೆ ಹೋಗಿದ್ದೆ. ಆ ಮಾತನ್ನು ಹೇಳಿ ಆ ಮನೆಯ ಮುಂದುಗಡೆಯ ಕೈಸಾಲೆಯಲ್ಲಿ ಹಾಯಾಗಿ ಕುಳಿತುಕೊಂಡೆ. ಅಲ್ಲಿ ವರ್ತಮಾನ ಪತ್ರಿಕೆಗಳೂ ಚಿತ್ರಪತ್ರಿಕೆಗಳೂ ಇದ್ದವು.

ಮಂಗೇಶರಾಯರು ಭೋಜನ ಮುಗಿಸಿಕೊಂಡು ಬಂದು ನನ್ನೊಡನೆ ಮಾತಿಗೆ ಕುಳಿತರು. ಆಗ ಖಾಯಂ ಆಗಿದ್ದ ಜಾಗ ಮಡಿಕೇರಿ ಎಂದು ನನ್ನ ಜ್ಞಾಪಕ. ಅಲ್ಲಿ ಅವರು ಹೈಸ್ಕೂಲಿನ

ಹೆಡ್‌ಮಾಸ್ಟರಾಗಿದ್ದರು. ಬೇಸಿಗೆ ರಜದಲ್ಲಿ ತಮ್ಮ ಊರಿಗೆ ಬಂದಿದ್ದರು. ನಾನು ಆ ಹೊತ್ತು ಯಾರು ಯಾರನ್ನು ನೋಡಬೇಕೆಂದು ಉದ್ದೇಶವಿಟ್ಟುಕೊಂಡಿದ್ದೆನೋ ಆ ಜಾಗಗಳಿಗೆಲ್ಲ ನನ್ನನ್ನು ಕರೆದುಕೊಂಡು ಹೋದವರು ಮಂಗೇಶರಾಯರು. ದಾರಿಯುದ್ದಕ್ಕೂ ವಿನೋದ, ಹಾಸ್ಯ, ನಡುನಡುವೆ ಸಾಹಿತ್ಯತತ್ತ್ವದ ವಿವರಣೆ, ಕವಿಕಾವ್ಯ ವಿಮರ್ಶೆ-ಹೀಗೆ ನಮ್ಮ ನಡಿಗೆಯ ದೂರವೆಷ್ಟೆಂಬುದು ನನಗೆ ತಿಳಿಯಲಿಲ್ಲ. ಬಳಲಿಕೆ ತೋರಲಿಲ್ಲ.

ಮುಳಿಯ ತಿಮ್ಮಪ್ಪಯ್ಯನವರು

ಮೊದಲು ನಾವು ಹೋದದ್ದು ವಿದ್ವಾನ್ ಮುಳಿಯ ತಿಮ್ಮಪ್ಪಯ್ಯನವರ ಮನೆಗೆ. ಆ ಮನೆ ಒಂದು ಗದ್ದೆಯ ನಡುವೆ ಇತ್ತೆಂದು ನನ್ನ ಜ್ಞಾಪಕ. ನನಗೆ ಅತ್ಯಂತ ಪ್ರಿಯರಾಗಿದ್ದ ವಿದ್ವಾನ್ ಕಡಂಗೋಡ್ಲು ಶಂಕರಭಟ್ಟರೂ ಆ ಮನೆಯಲ್ಲಿದ್ದರು. ಶಂಕರಭಟ್ಟರು ತಿಮ್ಮಪ್ಪಯ್ಯನವರ ಸೋದರಳಿಯಂದಿರೆಂದು ನನ್ನ ಜ್ಞಾಪಕ. ಶಂಕರಭಟ್ಟರು ರೂಪದಲ್ಲಿ ಕಾಂತಿವಂತರಾಗಿದ್ದರು. ವಿನಯಶೀಲರು. ಅವರ ಮಾತು ಮಿತಪದಗಳುಳ್ಳದ್ದಾಗಿ, ಪೊಳ್ಳುತನವಿಲ್ಲದೆ ಸಮಂಜಸವಾಗಿರುತ್ತಿತ್ತು. ಅವರ ಬರಣಿಗೆಯನ್ನು ಅದಕ್ಕೆ ಮೊದಲೇ ನಾನು ನೋಡಿದ್ದೆ. ಅವರನ್ನು ನೋಡಿದ ಬಳಿಕ ಅವರಲ್ಲಿ ನನಗೆ ಮಮತೆಯುಂಟಾಯಿತು. ಶಂಕರಭಟ್ಟರು ಸಂಸ್ಕೃತದಲ್ಲಿ ಒಳ್ಳೆಯ ಪಾಂಡಿತ್ಯವನ್ನು ಸಂಪಾದಿಸಿಕೊಂಡಿದ್ದವರು.

ಮುಳಿಯ ತಿಮ್ಮಪ್ಪಯ್ಯನವರು ಮಹಾ ಪಂಡಿತರು-ಸಂಸ್ಕೃತ, ಕನ್ನಡ ಎರಡರಲ್ಲಿಯೂ. ಅವರ 'ನಾಡೋಜ ಪಂಪ' ಅವರ ಕೀರ್ತಿಯನ್ನು ಉಳಿಸುವ ಗ್ರಂಥ.

ತಿಮ್ಮಪ್ಪಯ್ಯನವರು ಸರಸಿಗಳು, ಉದಾರಿಗಳು. ಪಂಜೆ ಮಂಗೇಶರಾಯರು ಅವರನ್ನು ಕೊಂಚ ಕೊಂಚ ಲೇವಡಿ ಮಾಡಿದರು.

"ಮುಳಿಯ ತಿಮ್ಮಪ್ಪಯ್ಯ-ತಿಮ್ಮಪ್ಪಯ್ಯ ಎಂದಿಗೂ ಮುನಿಸಿಕೊಳ್ಳ."

"ಮುಳಿಯದ ತಿಮ್ಮಪ್ಪಯ್ಯ."

"ಮುಳಿಯುವ ತಿಮ್ಮಪ್ಪಯ್ಯ."

"ಮುಳಿದಿರುವ ತಿಮ್ಮಪ್ಪಯ್ಯ."

ಹೀಗೆ ಬಗೆಬಗೆಯಾಗಿ ಅವರನ್ನು ಚೇಡಿಸಲು ಪ್ರಯತ್ನಿಸುವರು. ತಿಮ್ಮಪ್ಪಯ್ಯನವರು ಎಲ್ಲಕ್ಕೂ ನಗುತ್ತ ಗಂಭೀರದಿಂದಿರುವರು. ಮಂಗೇಶರಾಯರು ಶುದ್ಧ ಸಾಹಿತ್ಯ ಪ್ರಶ್ನೆಯೊಂದನ್ನೆತ್ತುವರು. ಆಗ ಹೊರಡುತ್ತಿತ್ತು ತಿಮ್ಮಪ್ಪಯ್ಯನವರ ವಾಕ್ಕು. ಅದು ಶಾಸ್ತ್ರ ವಿದ್ವತ್ತೆಯಿಂದ ಕೂಡಿದ ವಾಕ್ಕು.

ತಿಮ್ಮಪ್ಪಯ್ಯನವರು ಆಚಾರವಂತರು. ಗಂಭೀರಸ್ವಭಾವದವರು, ಸಾಧುಗಳು.

ನಾನು ಅವರ ಮನೆಗೆ ಹೋದ ಕೂಡಲೆ ಅಲ್ಲಿಯ ವಾಡಿಕೆಯಂತೆ ಬೆಲ್ಲ ನೀರು ಕೊಟ್ಟು ಉಪಚರಿಸಿದರು. ಸುಮಾರು ಒಂದೂವರೆ ಘಂಟೆಯ ಕಾಲ ಮಾತುಕಥೆಯಾಡುತ್ತಿದ್ದೆವು.

ಬಾಲಸಾಹಿತ್ಯ ಮಂಡಲ

ಅಲ್ಲಿಂದ ಮಂಗೇಶರಾಯರು ಬಾಲಾಸಾಹಿತ್ಯ ಮಂಡಲದ ಕಾರ್ಯಾಲಯಕ್ಕೆ ನನ್ನನ್ನು ಕರೆದುಕೊಂಡು ಹೋದರು. ಅಲ್ಲಿ ಉಗ್ರಾಣ ಮಂಗೇಶರಾಯರು, ಉಲ್ಲಾಳ ಮಂಗೇಶರಾಯರು ಮೊದಲಾದ ಹೆಸರಾಂತ ಸಾಹಿತಿಗಳು ನನಗೆ ದೊರಕಿದರು. ಪಂಜೆಯವರು "ಓಹೋ-ಇಲ್ಲಿ ನೋಡಿರಿ ಮಂಗ ಸಭೆ!" ಎಂದರು. ಅಲ್ಲಿದ್ದವರೆಲ್ಲ ಎಷ್ಟು ನಕ್ಕಿರಬಹುದೋ! ಹಾಗೆಯೇ ಮಾತುಕಥೆ. 'ಭರತೇಶ ವೈಭವ' ವನ್ನು ಶೋಧನೆಮಾಡಿ ಪ್ರಕಟಿಸುವ ಪ್ರಯತ್ನವನ್ನು ಕುರಿತು ಕೊಂಚಕಾಲ ಮಾತನಾಡುತ್ತಿದ್ದೆವು. ಬಾಲಸಾಹಿತ್ಯ ಮಂಡಲದ ಪುರ್ವೋತ್ತರ ಚರಿತ್ರೆಯನ್ನೂ ಅವರ ಆಲೋಚನೆಯನ್ನೂ ನನಗೆ ತಿಳಿಯ ಪಡಿಸಿದರು.

ಅಷ್ಟು ಹೊತ್ತಿಗೆ ಸಂಜೆಯಾಯಿತು. ಸೆಯಿಂಟ್ ಆಲೋಸಿಯಸ್ ಕಾಲೇಜಿಗೆ ಹೋಗಿ ಅಲ್ಲಿಯ ತಂಪಿನ ವಾತಾವರಣದಲ್ಲಿ ಕೊಂಚಕಾಲ ಕಳೆದೆವು. ಮಂಗಳೂರು ಪ್ರಾಂತದ ಕೆಲಮಂದಿ ಜನನಾಯಕರ ಕಥೆಗಳನ್ನೂ ನಾನು ಆಗ ಕೇಳಿದೆ.

ನಾನು ನನ್ನ ಜಾಗಕ್ಕೆ ಹಿಂದಿರುಗಲು ಪಂಜೆಯವರ ಅಪ್ಪಣೆ ಬೇಡಿದಾಗ ನನ್ನ ಹೃದಯದಲ್ಲಾದ ತೀವ್ರ ವೇದನೆಯನ್ನು ನಾನು ವರ್ಣಿಸಲಾರೆ. ಎಷ್ಟೋ ವರ್ಷಗಳಿಂದ ನನ್ನನ್ನು ಸಲಹಿದ ಒಬ್ಬ ಹಿರಿಯಣ್ಣನ ಸಾನ್ನಿಧ್ಯವನ್ನು ನಾನು ಬಿಟ್ಟು ಹೋಗುತ್ತಿದ್ದೇನೆಂದು ನನಗನಿಸಿತು.

ಅಲ್ಲಿಂದೀಚೆಗೆ ಪಂಜೆ ಮಂಗೇಶರಾಯರಿಗೂ ನನಗೂ ಐದಾರುಸಲ ಭೇಟಿಯಾಗಿರಬಹುದು. ಅವರನ್ನು ಕಣ್ಣಿಂದ ನೋಡಲಾದೀತು, ಅವರ ಮಾತನ್ನು ಕೇಳಲಾದೀತು-ಎನ್ನಿಸುವಂಥ ಸಂದರ್ಭ ಬಂದಾಗಲೆಲ್ಲ ನನ್ನ ಪಾಲಿಗೆ ಅದೊಂದು ಹಬ್ಬ. ಸೊಗಸಾದ ಕಥೆಗಳು, ಬಾಯಿತುಂಬ ನಗು. ಮುಖದ ತುಂಬ ಸ್ನೇಹದ ಕಾಂತಿ-ಇದು ಅವರ ಆಕರ್ಷಣೆ. ನೋಡಲು ಎತ್ತರವಾದ ವ್ಯಕ್ತಿ. ಸೊಗಸಾದ ಮೈಬಣ್ಣ. ಮಾತನಾಡುತ್ತಿದ್ದಾಗ ಕಣ್ಣುಹುಬ್ಬು, ಮೀಸೆ, ಗಲ್ಲ, ತುಟಿ-ಎಲ್ಲ ಕುಣಿದಾಡುವುವು. ಮುಖದ ಮೇಲಣ ಒಂದೊಂದು ನರವೂ ಉಬ್ಬಿ ಕುಣಿದಾಡುತ್ತಿತ್ತು.

ಕಾವ್ಯಪಾಠ

೧೯೩೪-೩೫ರಲ್ಲಿ ಪರಿಷತ್ತಿನ ಸಾಹಿತ್ಯೋತ್ಸವದಲ್ಲಿ ಅವರು ಕಾವ್ಯ ಪಾಠದ ವಿಷಯವನ್ನು ಕುರಿತು ಭಾಷಣಮಾಡಿದರು. ಅದಕ್ಕೆ ಹಿಂದಿನ ದಿವಸವೋ ಒಂದೆರಡು ದಿವಸ ಹಿಂದೆಯೋ ಮಲ್ಲೇಶ್ವರದ ಶಾಲೆಯೊಂದರ ವಿದ್ಯಾರ್ಥಿಗಳು 'ಗೋವಿನ ಕಥೆ' ಯನ್ನು ನಾಟಕರೂಪದಲ್ಲಿ ಹಾಡಿ ಅಭಿನಯಿಸಿ ತೋರಿಸಿದ್ದರು. ಆ ಹುಡುಗರನ್ನು ತಯಾರು ಮಾಡಿದ್ದವರು ಆ ಶಾಲೆಯ ಹೆಡ್‌ಮಾಸ್ಟರ್. ಅವರ ಹೆಸರು ಈಗ ನನಗೆ ಮರೆತು ಹೋಗಿದೆ. ಅವರು ದೇವರಾಯಸಮುದ್ರದ ಕಡೆಯವರೆಂದು ನಾನು ಕೇಳಿದ್ದೆ. ಅವರನ್ನು ಕಾಣುವ ಯೋಗ ನನಗೆ ಈಗ ಲಭಿಸಿದರೆ ಅವರಿಗೆ ನನ್ನ ಸಾಷ್ಟಾಂಗ ನಮಸ್ಕಾರಗಳನ್ನು ಸಮರ್ಪಿಸಿಯೇನು. 'ಗೋವಿನ ಕಥೆ' ಯ ಗರ್ಭದಲ್ಲಿ ನಾಟಕ ವಸ್ತು ಹುದುಗಿಕೊಂಡಿದೆಯೆಂಬುದನ್ನು ಕಂಡ ಮಹಾಪ್ರತಿಭೆ ಆ ಮೇಷ್ಟರದು. ಬಳಿಕ ಆ ಕಾವ್ಯದ ಪದ್ಯಗಳನ್ನು ರಸದೃಷ್ಟಿಯಿಂದ ಆರಿಸಿ ಸಂದರ್ಭೋಚಿತವಾದ ರಾಗಗಳಿಗೆ ಅಳವಡಿಸಿದ್ದು ಅವರ ಎರಡನೆಯ ಮಹತ್ತ್ವ. ಆ ಬಾಲಕರನ್ನು ಗೊಲ್ಲ, ಗೋವು, ಹುಲಿ, ಕರು, ಹಸುವಿನ ಮಂದೆ -ಈ ನಾನಾ ಪಾತ್ರಗಳಿಗೆ ತಿದ್ದಿ ಅವರ ದೇಹಭಂಗಿಯನ್ನೂ ಮುಖಭಂಗಿಯನ್ನೂ ಕಲಿಸಿದ್ದು ಮೂರನೆಯ ಮಹತ್ತ್ವ.

ಈ 'ಗೋವಿನ ಕಥೆ' ನಾಟಕವನ್ನು ನೋಡಿದಾಗ ಪಂಜೆ ಮಂಗೇಶರಾಯರು ಪಟ್ಟ ಸಂತೋಷ ಅಷ್ಟಿಷ್ಟೆಂದು ಹೇಳಲಾಗುವುದಿಲ್ಲ. ಅವರು ತಮ್ಮ ಉಪನ್ಯಾಸಕ್ಕೆ 'ಗೋವಿನ ಕಥೆ' ಕಾವ್ಯವನ್ನೇ ಆರಿಸಿಕೊಂಡು, ಬಾಲಕರಾಡಿದ ನಾಟಕವನ್ನು ಪ್ರಶಂಸೆಮಾಡಿ, ಬಳಿಕ ಕಾವ್ಯದ ವಾಕ್ಯಗಳನ್ನು ತೆಗೆದುಕೊಂಡರು. "ಗೊಲ್ಲಗೌಡನು" ಪದ್ಯವನ್ನೆತ್ತಿಕೊಂಡು ಗೊಲ್ಲ ಎಂದರೇನು, ಅವರ ದೊಡ್ಡಿ ಹೇಗಿರುತ್ತದೆ, ಶ್ರೀಕೃಷ್ಣನು ಗೊಲ್ಲರೊಡನೆ ಆಟವಾಡಿದ್ದು, ಇದನ್ನೆಲ್ಲ ಕೊಂಚ ಕೊಂಚ ವಿಸ್ತರಿಸುತ್ತ ಆ ವಿವರಣೆಗಳನ್ನು ತಮ್ಮ ಅಂಗಾಂಗ ಅಭಿನಯಗಳಿಂದ ದೃಷ್ಟಾಂತಪಡಿಸಿ ತೋರಿಸಿಕೊಟ್ಟರು.

ಚದುರ ಶಿಖೆಯನು ಹಾಕಿದ

ಈ ವಾಕ್ಯವನ್ನು ಹೇಳಿ, ತಾವೇ ಕೈಯಿಂದ ತಲೆಯಮೇಲೆ ಶಿಖೆ ಗಂಟುಕಟ್ಟಿ, ಅದನ್ನು ಸಭಿಕರಿಗೆ ತೋರಿಸುತ್ತ, ಆ ಪದದಿಂದಲೂ ಆ ಅಂಗಭಾವದಿಂದಲೂ ತೋರಿಬರುವ ಗೊಲ್ಲನ ಮನೋದಾರ್ಢ್ಯ, ಅವನ ನಿರ್ಧಾರ ಬುದ್ಧಿ-ಇವುಗಳನ್ನು ಉತ್ಸಾಹದಿಂದ ವಿವರಿಸಿದರು. ಆ ಉಪನ್ಯಾಸವನ್ನು ಭಾಷಣವೆನ್ನುವುದಕ್ಕಿಂತ ಕುಣಿದಾಟವೆಂದೂ ಅಭಿನಯ ವ್ಯಾಖ್ಯಾನವೆಂದೂ ಹೇಳಿದರೆ ತಪ್ಪಾಗದು.

ರಾಯಚೂರು ಸಮ್ಮೇಳನ

ರಾಯಚೂರಿನಲ್ಲಿ ನಡೆದ ಸಾಹಿತ್ಯ ಸಮ್ಮೇಳನಕ್ಕೆ ಪಂಜೆ ಮಂಗೇಶರಾಯರು ಅಧ್ಯಕ್ಷರು. ರಾಯಚೂರು ಪಟ್ಟಣದಿಂದ ಪರಿಷತ್ತಿಗೆ ಯಥಾವಿಧಿಯಾಗಿ ಅಹ್ವಾನ ಬಂದಿದ್ದಾಗ್ಯೂ, ರಾಯಚೂರಿನ ಸ್ವಾಗತ ಸಮಿತಿಯಲ್ಲಿ ಕಕ್ಷಿಗಳು ಹುಟ್ಟಿಕೊಂಡು, ಪರಿಷತ್ತಿನ ಸಮ್ಮೇಳನಕ್ಕೆ ವಿಘಾತ ಬಂದೀತೇನೋ ಎಂಬ ಹೆದರಿಕೆಗೆ ಕಾರಣಗಳಾಗಿದ್ದವು. ಪರಿಷತ್ತಿನ ಅಧಿಕಾರಿಗಳು ಉತ್ಸಾಹಗುಂದದೆ ಅಲ್ಲಿ ಹೋಗುವಂತೆ ಧೈರ್ಯ ಕೊಟ್ಟವರು ಆಗ ಹೈದರಾಬಾದ್ ಸರಕಾರದಲ್ಲಿ ವ್ಯವಸಾಯದ (ಅಗ್ರಿಕಲ್ಚರಲ್) ಇಲಾಖೆಯ ದೊಡ್ಡ ಅಧಿಕಾರಿಗಳಾಗಿದ್ದ ಶ್ರೀ ಕೂರಪಾಡು ಎಸ್. ಗುಂಡಪ್ಪನವರು. ಇವರು ಮೈಸೂರು ಸರಕಾರದ ವ್ಯವಸಾಯದ ಇಲಾಖೆಯಲ್ಲಿ ದೊಡ್ಡ ಹುದ್ದೆಯಲ್ಲಿದ್ದವರು. ಇವರ ಭರವಸೆಯ ಮೇಲೆ ಪರಿಷತ್ತಿನ ಕಾರ್ಯಕರ್ತರು ರಾಯಚೂರಿನಲ್ಲಿ ಊರ ಹೊರಗಡೆ ಗೊತ್ತಾಗಿದ್ದ ಒಂದು ಹೊಸ ಬಂಗಲೆಯಲ್ಲಿ ಬಿಡಾರ ಮಾಡಿದ್ದರು. ರಾಯಚೂರು ಊರೊಳಗಿನ ಸ್ವಾಗತ ಸಮಿತಿಯ ಎರಡು ಕಕ್ಷಿಗಳಲ್ಲಿ ಒಂದು ಕಕ್ಷಿಯವರು ವಿರೋಧ ಪ್ರದರ್ಶನ ಮಾಡಿಯಾರು ಎಂದು ಎಲ್ಲರಿಗೂ ಭೀತಿಯಾಗಿತ್ತು. ಈ ಭೀತಿಯನ್ನು ಪರಿಹಾರ ಮಾಡಿಕೊಳ್ಳಲು ಆಗ ಅಲ್ಲಿ ಡಿವಿಷನ್ ಅಧಿಕಾರಿಯಾಗಿದ್ದ ಜಂಗ್ ಬಹದ್ದೂರ್ ಸಾಹೇಬರನ್ನು ಕಂಡು, ಅವರ ಪ್ರೋತ್ಸಾಹವನ್ನೂ ಅಭಯವಚನವನ್ನೂ ಸಂಪಾದಿಸಿಕೊಂಡದ್ದಾಗಿತ್ತು. ಹಾಗಿದ್ದರೂ ನಮ್ಮ ಭಯ ನಿಶ್ಶೇಷವಾಗಿ ಹೋಗಿರಲಿಲ್ಲ. ಊರಿನ ಪುಂಡುಗಾರರೂ ದೊಂಬಿ ಜನವೂ ಏನು ಅನುಚಿತವನ್ನಾದರೂ ಮಾಡಲಾದೀತು ಎಂಬ ಶಂಕೆ ಮನಸ್ಸಿನಲ್ಲಿ ತುಂಬಿತ್ತು.

ಸಮ್ಮೇಳನದ ಪ್ರಾರಂಭದ ದಿವಸ ಅಧ್ಯಕ್ಷರನ್ನು ಸಭಾಮಂಟಪಕ್ಕೆ ಮೆರವಣಿಗೆಯಲ್ಲಿ ಕರೆದುಕೊಂಡುಹೋಗುವುದು ವಾಡಿಕೆ. ಅಂದು ಹಾಗೆ ನಮ್ಮ ಬಿಡಾರದಿಂದ ಊರೊಳಗಿನ ರಾಮಟಂಕಿ ಶಾಲೆಯೆಂಬ ಕಡೆ ಗೊತ್ತಾಗಿದ್ದ ಸಭಾಮಂಟಪಕ್ಕೆ ಅಧ್ಯಕ್ಷ ಮಂಗೇಶರಾಯರನ್ನು ಮೆರವಣಿಗೆಯಲ್ಲಿ ಕರೆದುಕೊಂಡು ಹೋಗತಕ್ಕದ್ದೆಂದು ನಿಶ್ಚಯಮಾಡಿತ್ತು. ಮೆರವಣಿಗೆ ಸಂಜೆ ಸುಮಾರು ನಾಲ್ಕು ಘಂಟೆಗೆ ನಮ್ಮ ಬಿಡಾರದ ಜಾಗದಿಂದ ಹೊರಡಬೇಕಾಗಿತ್ತು. ಅದಕ್ಕೆ ಅರ್ಧ ಘಂಟೆ ಮುಂಚೆ ನಾನು ಮಂಗೇಶರಾಯರ ಕೊಠಡಿಗೆ ಹೋಗಿ ಅವರನ್ನು ಅವಸರಪಡಿಸಿದೆ.

“ಏನು ನೀವಿನ್ನೂ ಸಿದ್ಧವಾಗಿಲ್ಲ? ಮೆರವಣಿಗೆಗೆ ಉಡುಪು ಹಾಕಿಕೊಂಡಿಲ್ಲ. ಕಮಿಷನರು ಜಂಗ್ ಬಹದ್ದೂರ್‌ರವರು ತಮ್ಮ ಸ್ವಂತ ಕಾರನ್ನು ಮೆರವಣಿಗೆಗಾಗಿ ಕಳಿಸಿದ್ದಾರೆ. ಅದು

ರೆಡ್ ಮ್ಯಾಕ್ಸ್‌ವೆಲ್ ಕಾರು-ಕಾದಿದೆ-ಭರ್ಜರಿಯಾಗಿದೆ. ನಿಮ್ಮ ಉಡುಪು ಅದಕ್ಕೆ ತಕ್ಕ ಹಾಗಿರಬೇಕು."

ನಾನು ಈ ಮಾತನ್ನಾಡುವಾಗ ಅದೇ ಕೋಣೆಯಲ್ಲಿ ಶ್ರೀಮಾನ್ ಬೆನಗಲ್ ರಾಮರಾಯರೂ ಇದ್ದರು.

ಮಂಗೇಶರಾಯರು ನನ್ನ ಮಾತನ್ನು ಕೇಳಿ ನಸುನಕ್ಕು ಹೇಳಿದರು:

"ನೀವು ಏಕೆ ಅವಸರಪಡುತ್ತೀರಿ? ನನ್ನ ಬಟ್ಟೆಬರೆಗಳನ್ನು ತೊಡಿಸಿ, ಬೆತ್ತಲೆಯನ್ನು ಹೋಗಲಾಡಿಸುವುದಕ್ಕೆ ತಕ್ಕವರನ್ನು ಇಟ್ಟುಕೊಂಡಿದ್ದೇನೆ. ಆಕೆ ಬಹು ಜಾಣೆ. ದೊಡ್ಡ ಮನುಷ್ಯರ ಮನೆಯ ಹೆಂಗಸನ್ನೇ ನಾನು ಇಟ್ಟುಕೊಂಡಿದ್ದೇನೆ..."

ಹೀಗೆ ಹೇಳುತ್ತ, ಮಂದಹಾಸದಿಂದ ತಮ್ಮ ಬೆನ್ನ ಕಡೆ ಕಣ್ಣು ತಿರುಗಿಸುತ್ತಿದ್ದರು. ಅಲ್ಲಿದ್ದವರು ಬೆನಗಲ್ ರಾಮರಾಯರು. ಅವರಾದರೋ ರೇಗಿನಿಂದ:

"ಪೋಲಿ, ಭಂಡ, ಹೆಣ್ಣು ಹೆತ್ತವರು ಬೇರೆ ಗತಿ ಕಾಣದೆ ಇಂಥ ಭಂಡರಿಗೆ ಹೆಣ್ಣು ಕೊಡಬೇಕಾಗುತ್ತದೆ" -ಎಂದು ಗೊಣಗಿಕೊಳ್ಳುತ್ತಿದ್ದರು.

ಬೆನಗಲ್ ರಾಮರಾಯರ ತಂಗಿ ಪಂಜೆ ಮಂಗೇಶರಾಯರ ಭಾರ್ಯೆ.

ಈ ಸಂಬಂಧವನ್ನು ಕುರಿತು ಪಂಜೆಯವರು ಆಡಿದ ಸಲಿಗೆಯ ಮಾತಿಗೆ, ಬೆನಗಲ್ ರಾಮರಾಯರು ಮುನಿಸು ತೋರಿದ್ದು ಆ ಹಾಸ್ಯ ಪ್ರಸಂಗ. ರಾಮರಾಯರು ಬಾಯಿಗೆ ಬಂದಂತೆ 'ಭಂಡ', 'ಪುಂಡ' ಎಂದು ಬಯ್ಯುತ್ತಿದ್ದರೆ ಮಂಗೇಶರಾಯರ ನಗು ಕಟ್ಟಡವನ್ನೆಲ್ಲ ತುಂಬಿತ್ತು.

ಆ ಸಂಜೆಯ ಮೆರವಣಿಗೆ ಉಲ್ಲಾಸಕರವಾಗಿತ್ತು. ಹದಿನೈದಿಪ್ಪತ್ತು ಗಜಕ್ಕೊಬ್ಬ ಪೊಲೀಸ್ ಕಾನ್‌ಸ್ಟೇಬಲ್ ಇದ್ದ. ಜನ ರಸ್ತೆಯಲ್ಲಿ ಕಿಕ್ಕಿರಿದಿತ್ತು. ಎಲ್ಲರಿಗೂ ತುಂಬಾ ಸಂತೋಷವಾಯಿತು.

ಸಮ್ಮೇಳನದ ಉಪಸಂಹಾರ ಭಾಷಣದಲ್ಲಿ ಪಂಜೆ ಮಂಗೇಶರಾಯರು ಗದ್ಗದಧ್ವನಿಯಿಂದ ಆಡಿದ ಕಟ್ಟಕಡೆಯ ಮಾತು ಹೃದಯಸ್ಪರ್ಶಿಯಾದದ್ದು. ಅದು ಹೀಗೆ:

"ನನ್ನ ಅವಸಾನ ಕಾಲದಲ್ಲಿ ಬಾಯಿಂದ 'ಕೃಷ್ಣ' 'ಕೃಷ್ಣ' ಎಂಬ ಮಾತು ಹೊರಡುವಂತೆ 'ಕನ್ನಡ' 'ಕನ್ನಡ' ಎಂಬ ಮಾತೂ ಉಚ್ಚಾರಣೆಯಾಗಲಿ."

ಜಮಖಂಡಿ ಸಮ್ಮೇಳನ

ಜಮಖಂಡಿಯ ಸಮ್ಮೇಳನದಲ್ಲಿ ತರುಣ ಕವಿಗಳ ಕೂಟವೊಂದು ಸಮ್ಮೇಳನದ ಅಂಗವಾಗಿ ಏರ್ಪಾಟಾಗಿತ್ತು. ಅನೇಕ ಮಂದಿ ತರುಣ ಕವಿಗಳು ಅಲ್ಲಿ ತಮ್ಮ ತಮ್ಮ ಕವನಗಳನ್ನೋದಿದರು. ಅವರ ಪೈಕಿ ಹೊಳ್ಳ ಎಂಬವರೊಬ್ಬರು ತೆಂಗಿನಕಾಯಿ ಮಾರುವವನ ಹಾಡನ್ನು ಹೇಳಿದರು; ಬಹು ಚೆನ್ನಾಗಿತ್ತು. ಇನ್ನೊಬ್ಬ ತರುಣರು ಮಾನ್ವಿ ನರಸಿಂಗರಾಯರು. ಇವರು ಆಗ್ಗೆ ಸುಮಾರು ಇಪ್ಪತು ವರ್ಷ ವಯಸ್ಸಿನ ತರುಣರು. ಸ್ವಭಾವದಿಂದ ಅವರು ವಿನಯಶೀಲರು. ಅವರ ಮುಖಮುದ್ರಿಕೆಯೂ ಅತ್ಯಂತ ವಿನಯದ್ದಾಗಿತ್ತು; "ಯಾಕೆ ಪುಟ್ಟಿಸಿದೆಯೋ ದೇವ" ಎನ್ನುವಂತಿತ್ತು. ಇಂಥವರು ಬರೆದು ತಂದಿದ್ದದ್ದು ಬಹು ಸೊಗಸಾದ ಪದ್ಯ. ಅದನ್ನು ಓದುವುದಕ್ಕೆ ಪೀಠಿಕೆಯಾಗಿ ನರಸಿಂಗರಾಯರು ತಮ್ಮ ನಮ್ರತೆಯನ್ನು ಸೂಚಿಸಿ, ತಮ್ಮ ಧೃಷ್ಟತನಕ್ಕಾಗಿ ಕ್ಷಮಾಪಣೆ ಬೇಡಿ, "ನಾನು ತಂದಿರುವುದು ಕವಿತ್ವ ಹೌದೋ ಅಲ್ಲವೋ ನನಗೇ ಸಂದೇಹವಾಗಿದೆ. ಕ್ಷಮಿಸಬೇಕು" -ಎಂದು ಮೊದಲಾಗಿ ಸಂಕೋಚದ ಮಾತುಗಳನ್ನಾಡಿ ಆಮೇಲೆ ಪದ್ಯವನ್ನೋದಿದರು. ಸಭೆಗೆ ಆದ ಆನಂದ ಅಷ್ಟಿಷ್ಟಲ್ಲ. ಇಂಥ ಹುಡುಗ ನಮ್ಮಲ್ಲಿದ್ದಾನಲ್ಲ! ಎಂಬ ಸಂತೋಷವನ್ನು ಎಲ್ಲರ ಮುಖದಲ್ಲಿಯೂ ಕಾಣಬಹುದಾಗಿತ್ತು.

ನರಸಿಂಗರಾಯರು ತಮ್ಮ ಪದ್ಯದ ಕಟ್ಟಕಡೆಯ ಮಾತನ್ನು ನುಡಿದು ಕಾಗದ ಮಡಿಸುವಷ್ಟರಲ್ಲಿದ್ದಾಗ ಪಂಜೆ ಮಂಗೇಶರಾಯರು ತಾವು ಕುಳಿತಿದ್ದ ಕುರ್ಚಿಯಿಂದ ಥಟ್ಟನೆ ಎಗರಿ ದುಡದುಡನೆ ನರಸಿಂಗರಾಯರ ಬಳಿಗೆ ಹೋಗಿ ಮಹಾ ಭಯೋತ್ಪಾದಕವಾದ ಮುಖದಿಂದ

"ಯಾರಯ್ಯಾ ನಿನಗೆ ಹೇಳಿದ್ದು ಇದು ಪದ್ಯ ಹೌದೋ ಅಲ್ಲವೋ ಎಂದು? ಅವರಿಗೆ ಬುದ್ಧಿಯಿಲ್ಲ."

-ಹೀಗೆ ರೇಗಾಟದ ಧ್ವನಿಯಿಂದ ಮುಖ ತಿವಿಯುವಂತೆ ಕೈ ಮಾಡಿಕೊಂಡು ಹೇಳಿದರು. ನರಸಿಂಗರಾಯರು ತಬ್ಬಿಬ್ಬಾದರು. ನಾವೆಲ್ಲ ಈ ನಾಟಕ ನೋಡಿ ಹೊಟ್ಟೆ ಬಿರಿಯ ನಗುತ್ತಿದ್ದೆವು. ನರಸಿಂಗರಾಯರಿಗೆ ಅದರ ಭಾವ ಅರ್ಥವಾದದ್ದು ಒಂದೆರಡು ನಿಮಿಷ ಕಳೆದ ಬಳಿಕ. ಮಂಗೇಶರಾಯರು ಅವರನ್ನು ಬಾಚಿ ತಬ್ಬಿಕೊಂಡು ಮೇಲಕ್ಕೆತ್ತಿದ್ದರು.

***

ಪಂಜೆ ಮಂಗೇಶರಾಯರಿಗೆ ಕಡೆಕಡೆಯಲ್ಲಿ ಆಗಾಗ ಆರೋಗ್ಯ ಕೊಂಚ ಕೆಡುತ್ತಿತ್ತು. ಗದುಗಿನ ಭಾರತವನ್ನು ಸಂಗ್ರಹಮಾಡಿಕೊಡುವ ಕೆಲಸವನ್ನು ಮೈಸೂರು ವಿಶ್ವವಿದ್ಯಾನಿಲಯ ಅವರಿಗೆ ಒಪ್ಪಿಸಿತ್ತು. ಅದು ಬಹು ದೊಡ್ಡ ಕೆಲಸ. ಅಂಥ ಕೆಲಸವನ್ನು ಪಂಜೆ ಮಂಗೇಶರಾಯರಿಗೆ ಒಪ್ಪಿಸಿದ್ದು ನಮಗೆಲ್ಲ ತುಂಬಾ ಸಂತೋಷದ ವಿಷಯ. ಅವರು ಸಂಕ್ಷೇಪಿಸುವ ಕಾರ್ಯವನ್ನು ಮುಗಿಸಿದ ಸುಮಾರಿನಲ್ಲಿ, ಆ ಗ್ರಂಥಕ್ಕೆ ಒಂದು ಪೀಠಿಕೆಯನ್ನು ಬರೆಯುವ ಪ್ರಯತ್ನದಲ್ಲಿದ್ದಾಗ, ಕೆಲವು ಪ್ರಾಚೀನ ಗ್ರಂಥಗಳನ್ನು ನೋಡಬೇಕೆಂಬ ಉದ್ದೇಶದಿಂದ ಮೈಸೂರು ಪಟ್ಟಣಕ್ಕೆ ಬಂದು ಅಲ್ಲಿ ಒಂದೆರಡು ವಾರ ಇದ್ದರು. ಆಗ ಒಂದು ದಿನ ಸಂಜೆ ಅವರೂ ನಾನೂ ಡಿಸ್ಟ್ರಿಕ್ಟ್ ಆಫೀಸಿನ ಆವರಣದಲ್ಲಿ ಇರುವ ವಿಸ್ತಾರವಾದ ತೋಟದಲ್ಲಿ ಒಂದು ಕಲ್ಲುಬೆಂಚಿನ ಮೇಲೆ ಕುಳಿತು, ಏನೇನೋ ಹರುಟುತ್ತಿದ್ದೆವು. ಆಗ ಒಬ್ಬ ಸ್ನೇಹಿತರ ಸವಾರಿ ಅಲ್ಲಿಗೆ ಚಿತ್ತೈಸಿತು. ಅವರು ಪಂಜೆಯವರನ್ನು ಕಂಡೊಡನೆಯೇ ಮುಖದಿಂದ ಸಂತೋಷಸಂಜ್ಞೆಮಾಡಿ ಹತ್ತಿರ ಬಂದು ಕೇಳಿದರು:

ಸ್ನೇ: "ಯಾವಾಗ ಬಂದದ್ದು?"

ಪಂಜೆ" "ಮೂರು ನಾಲ್ಕು ದಿನವಾಯಿತು."

ಸ್ನೇ: "ಏನು ಕಾರ್ಯವೋ?"

ಪಂಜೆ: "ಬೇಸರ ಕಳೆಯುವುದಕ್ಕೋಸ್ಕರ (ಚೇಂಜ್).

ಸ್ನೇ: "ಕುಟುಂಬ ಸಮೇತವಾಗಿಯೋ?"

ಪಂಜೆ: "ಹೇಳಿದೆನಲ್ಲ-ಬೇಸರ ಕಳೆಯುವುದಕ್ಕಾಗಿ ಬಂದೆನೆಂದು?"

ಆ ಸ್ನೇಹಿತರು ತಮ್ಮ ಬೆಪ್ಪುತನವನ್ನು ನೋಡಿಕೊಂಡು ನಮ್ಮ ನಗುವಿನಲ್ಲಿ ಅವರೂ ಸೇರಿದರು.

ಇಂಥ ಸರಸಿಗಳು ಪಂಜೆಯವರು. ಸರಸತೆಯ ಜೊತೆಗೆ ಉದಾತ್ತತೆ ಸೇರಿ ಕೊಂಡಿತ್ತು. ದೊಡ್ಡ ಸಂಸಾರ. ಮನೆಯಲ್ಲಿ ಅತಿಥಿ ಅಭ್ಯಾಗತರಿಗೆ ಆದರಣೆ. ಎಲ್ಲ ವಿಷಯಗಳಲ್ಲಿಯೂ ಕೋಮಲತೆ, ಶುಚಿತ್ವ. ಇವು ಅವರ ಲಕ್ಷಣಗಳು.

೨೦

ಧಾರವಾಡ ಕರ್ಣಾಟಕದ ಸಾಹಿತ್ಯೋತ್ಸಾಹ

ಕನ್ನಡ ಪುನರುಜ್ಜೀವನದ ಚಳವಳಿ ಧಾರವಾಡ ಕರ್ಣಾಟಕದಲ್ಲಿ ಬಹು ವರ್ಷಗಳ ಹಿಂದೆಯೇ ಆರಂಭವಾಗಿತ್ತು. ಒಂದು ದೃಷ್ಟಿಯಿಂದ ಧಾರವಾಡದಲ್ಲಿ ಸಮಾರಂಭ ಮೊದಲಾದದ್ದು ಮೈಸೂರಿನಲ್ಲಾದದ್ದಕ್ಕಿಂತ ಎಷ್ಟೋ ಹಿಂದೆ ಎಂದು ಹೇಳಬಹುದು. ಅಲ್ಲಿಯ ಕರ್ಣಾಟಕ ವಿದ್ಯಾವರ್ಧಕ ಸಂಘ ಬೆಂಗಳೂರಿನ ಸಾಹಿತ್ಯ ಪರಿಷತ್ತಿಗಿಂತ ಪ್ರಾಚೀನವಾದದ್ದು. ವಿದ್ಯಾವರ್ಧಕ ಸಂಘದ ಪ್ರಾರಂಭಕರ್ತರು ಮೈಸೂರಿಗೆ ಬಂದು ಮಹಾರಾಜ ಶ್ರೀ ಚಾಮರಾಜೇಂದ್ರ ಒಡೆಯರವರನ್ನು ಕಂಡು ತಮ್ಮ ಉದ್ದೇಶವನ್ನು ವಿವರಿಸಿ ಸಹಾಯ ಬೇಡಿದರು. ಮಹಾರಾಜರು ಮೂರು ಸಾವಿರ ರೂಪಾಯಿಗಳಷ್ಟು ಸಹಾಯ ದ್ರವ್ಯವನ್ನು ಕೊಟ್ಟರು. ಆ ಮೂಲಧನದಿಂದ ಕಟ್ಟಿದ್ದು ಧಾರವಾಡದ ವಿದ್ಯಾವರ್ಧಕ ಸಂಘದ ಚಾಮರಾಜೇಂದ್ರ ಮಂದಿರ.

ವಿದ್ಯಾವರ್ಧಕ ಸಂಘದ ಪ್ರತಿಷ್ಠಾಪಕರಲ್ಲಿ ಕೆಲವರ ಹೆಸರುಗಳನ್ನು ಮಾತ್ರ ನಾನು ಕೇಳಿ ಬಲ್ಲೆ. ಅವರಲ್ಲಿ ನಾರಾಯಣರಾವ್ ಕರಿಗುದ್ರಿ. ಗೋಪಾಲ ರಂಗೋ ಕಟ್ಟಿ, ಕೆಂಭಾವಿ ರಾಘವೇಂದ್ರರಾವ್, ದೇಶಪಾಂಡೆ ಹನುಮಂತರಾವ್-ಇವರು ಮುಖ್ಯರು. ವಿದ್ಯಾವರ್ಧಕ ಸಂಘವು 'ವಾಗ್ಭೂಷಣ' ಎಂಬ ಮಾಸಪತ್ರಿಕೆಯನ್ನು ಪ್ರಕಟಿಸುತ್ತಿತ್ತು. ಅದು ಅನೇಕ ವರ್ಷಗಳ ಕಾಲ ನಡೆಯಿತು. ಅದರ ಪುಟಗಳಲ್ಲಿ ಅನೇಕ ಉದ್‌ಗ್ರಂಥಗಳೂ ವಿದ್ವತ್ ಪ್ರಬಂಧಗಳೂ ಬರುತ್ತಿದ್ದವು.

ಸಾಹಿತ್ಯ ಪರಿಷತ್ತು ಸ್ಥಾಪನೆಯಾದ ಮೇಲೆ ಧಾರವಾಡ ಪ್ರಾಂತದಿಂದ ಮೈಸೂರು ಪ್ರಾಂತಕ್ಕೂ ಇಲ್ಲಿಂದ ಅಲ್ಲಿಗೂ ವಿದ್ವಜ್ಜನ ಬರುವುದೂ ಹೋಗುವುದೂ ಹೆಚ್ಚಾಯಿತು. ಎರಡು ಪ್ರಾಂತಗಳ ಭಾಷಾಪ್ರಮುಖರಿಗೂ ಸ್ನೇಹ ಬೆಳೆಯಿತು. ಹೀಗೆ ನನಗೆ ಧಾರವಾಡದ ಭಾಷಾಪ್ರಮುಖರ ಪರಿಚಯವಾಗಲು ಅವಕಾಶವಾಯಿತು. ಆ ಪ್ರಮುಖರಲ್ಲಿ ಕೆಲವರ ಹೆಸರುಗಳನ್ನು ಸ್ಮರಿಸಬಯಸುತ್ತೇನೆ.

ದೇಶಪಾಂಡೆ ಹನುಮಂತರಾಯರು ತುಂಬ ಗೌರವ ಪಡೆದಿದ್ದರು. ಹೈಸ್ಕೂಲಿನ ಮುಖ್ಯೋಪಾಧ್ಯಾಯರಾಗಿದ್ದರು. ಶಂಕರ ಕರ್ಣಾಟಕ ಬುಕ್ ಡಿಪೊ ಎಂಬ ಪುಸ್ತಕದ ಮಳಿಗೆಯನ್ನು ಸ್ಥಾಪನೆ ಮಾಡಿಸಿದ್ದರು. ತುಂಬ ಗಂಭೀರ ಸ್ವಭಾವದ ಮಹನೀಯರು.

ರಾಘವೇಂದ್ರರಾಯರು

ಕಡಪೆಯೆಂಬ ತೆಲಗು ಸೀಮೆಗೂ ತಮಗೂ ಯಾವ ಸಂಬಂಧ ಯಾವ ಕಾಲದಲ್ಲಿತ್ತೆಂಬುದು ಅವರಿಗೇ ತಿಳಿದಿರಲಿಲ್ಲ. ರಾಘವೇಂದ್ರರಾಯರು ವಕೀಲರು; ಲವಲವಿಕೆಯುಳ್ಳ ಮನುಷ್ಯರು; ಮುಂದಾಳಾಗಿದ್ದವರು; ಪ್ರಭಾವಶಾಲಿಯಾದ ವಾಗ್ಮಿ. ಆ ಕಾಲದಲ್ಲಿ ಪರಿಷತ್ತಿನ ಸಮ್ಮೇಳನಗಳು ನಡೆದ ಕಡೆ ಒಳ್ಳೊಳ್ಳೆಯ ಭೋಜನ ಸಮಾರಾಧನೆಯಾಗುತ್ತಿತ್ತು. ಆ ಸಮಾರಾಧನೆಯಲ್ಲಿ ಕರ್ಪೂರ ಶ್ರೀನಿವಾಸರಾಯರು ಅಧ್ಯಕ್ಷರಾಗಿದ್ದು ಪ್ರತಿಯೊಬ್ಬಾತನೂ ಒಂದು ಶ್ಲೋಕವನ್ನೋ ಅಥವಾ ಒಂದು ಗದ್ಯವನ್ನೋ ಹೇಳಲೇಬೇಕೆಂದು ಕಡ್ಡಾಯ ಮಾಡಿದ್ದರು. ಒಂದು ಸಾರಿ ಕಡಪ ರಾಘವೇಂದ್ರರಾಯರು ಆ ಕಟ್ಟುಪಾಡಿಗೆ ಸಿಕ್ಕಿ ಬೇರೇನೂ ತಮಗೆ ತೋರಲಿಲ್ಲವೆಂದು ಹೇಳಿ “ಲಂಗೋಟಿ ಬಲು ಒಳ್ಳೇದಣ್ಣ” -ಎಂಬ ಪುರಂದರದಾಸರ ಕೀರ್ತನೆಯನ್ನು ಹಾಡಿದರು.

ಪೂಜಾರರು

ಮಹಾದೇವಶಾಸ್ತ್ರಿ ಪ್ರಭಾಕರಶಾಸ್ತ್ರಿ ಪೂಜಾರರು [1] ನಿಶಿತ ಯೋಗ್ಯತೆಯುಳ್ಳ ಮಹಾ ವಿದ್ವಾಂಸರು. ಇವರು ಮೈಸೂರಿನಲ್ಲಿ ಟ್ರೈನಿಂಗ್ ಕಾಲೇಜಿನಲ್ಲಿ ವಿದ್ವಾನ್ ತಿಮ್ಮಪ್ಪಯ್ಯ ಶಾಸ್ತ್ರಿಗಳವರಲ್ಲಿ ವ್ಯಾಸಂಗಮಾಡಿದ್ದವರಂತೆ. ಕನ್ನಡ, ಸಂಸ್ಕೃತ ಎರಡು ಭಾಷೆಗಳಲ್ಲಿಯೂ ಶಾಸ್ತ್ರರೀತಿಯಾಗಿ ಪಾಂಡಿತ್ಯ ಸಂಪಾದಿಸಿದ್ದರಲ್ಲದೆ ಆಚಾರದಲ್ಲಿಯೂ ಶೀಲದಲ್ಲಿಯೂ ಬಹು ಪರಿಶುದ್ಧರಾದವರು. ಬೆಳ್ಳಾವೆ ವೆಂಕಟನಾರಣಪ್ಪನವರಿಗೆ ಅವರಲ್ಲಿ ತುಂಬಾ ಭಕ್ತಿ. ಮಹಾದೇವಶಾಸ್ತ್ರಿಗಳು ಬೆಂಗಳೂರಿಗೆ ಬಂದಾಗಲೆಲ್ಲ ವೆಂಕಟನಾರಣಪ್ಪನವರ ಮನೆಯಲ್ಲಿ ಗೌರವದ ಔತಣ. ಮಹಾದೇವಶಾಸ್ತ್ರಿಗಳು ಕೆಲವು ಸಂಸ್ಕೃತ ಗ್ರಂಥಗಳ ಕನ್ನಡ ಸಂಕ್ಷೇಪಾನುವಾದಗಳನ್ನು ಕನ್ನಡ ವ್ಯಾಕರಣಕ್ಕೆ ಸಂಬಂಧಪಟ್ಟ ಕೆಲವು ಲೇಖನಗಳನ್ನೂ ಬರೆದಿದ್ದಾರೆ.

ನಾನು ಧಾರವಾಡಕ್ಕೆ ಹೋದಾಗಲೆಲ್ಲ ಅವರನ್ನು ಕಾಣಲು ಹೋಗುತ್ತಿದ್ದೆ. ಒಂದು ಸಾರಿ, ಒಬ್ಬ ಪ್ರಮುಖ ಮಹನೀಯರ ಮನೆಯಲ್ಲಿ ನಾವು ಇಳಿದುಕೊಂಡಿದ್ದಾಗ, ಮಹಾದೇವಶಾಸ್ತ್ರಿಗಳನ್ನು ಕುರಿತು ವಿಚಾರಿಸಿದೆ. ಅವರ ಇರುವಿಕೆಯೇ ನನ್ನ ಸ್ನೇಹಿತರಾದ ಆ ಪುರಪ್ರಮುಖರಿಗೆ ತಿಳಿದಿರಲಿಲ್ಲ. ಇನ್ನು ನಾಲ್ಕಾರು ಮಂದಿ ಸಾಹಿತಿಗಳೆನ್ನಿಸಿಕೊಂಡಿರುವ ಆಧುನಿಕರನ್ನು ಕೇಳಿದೆ. ಅವರಿಗೂ ತಿಳಿದಿರಲಿಲ್ಲ. ತಮ್ಮ ಊರಿನಲ್ಲಿ ಒಬ್ಬ ಮಹಾ ವಿದ್ವಾಂಸರಿದ್ದಾರೆ, ಶಾಸ್ತ್ರಜ್ಞರಿದ್ದಾರೆ, ಆಚಾರನಿಷ್ಠರಿದ್ದಾರೆ; ಅವರನ್ನು ತಿಳಿದುಕೊಳ್ಳಬೇಕು, ಗೌರವಿಸಬೇಕು-ಎಂಬ ಕುತೂಹಲ ಎಲ್ಲಿಯೂ ಇರುವಂತೆ ತೋರಲಿಲ್ಲ. ಸಾಹಿತಿಗಳಾಗಿಯೋ ಬೇರೆ ರೀತಿಯಲ್ಲೋ ಸುಪ್ರತಿಷ್ಠಿತರಾಗಿರುವವರಿಗೆ, ತಮ್ಮ ನೆರೆಹೊರೆಯಲ್ಲಿ ಗೌರವಾರ್ಹರು ಯಾರುಯಾರಿರಬಹುದೆಂಬ ಕುತೂಹಲವಿರುವಂತೆ ಕಾಣುವುದಿಲ್ಲ.

ಇಂಥ ವಾತಾವರಣದಲ್ಲಿ ಹಳೆಯ ಕಾಲದ ಪಾಂಡಿತ್ಯವೂ ಸಾಂಪ್ರದಾಯಿಕ ಶಾಸ್ತ್ರ ಸಂಪತ್ತೂ ಹೇಗೆ ಉಳಿಯಬೇಕು?

ವೆಂಕಟರಾಯರು

ಆಲೂರು ವೆಂಕಟರಾಯರು ಮಹಾ ಪ್ರಸಿದ್ಧರು. ಕರ್ಣಾಟಕ ಚಳವಳಿಗೆ ಮೂಲ ಪುರುಷರಲ್ಲೊಬ್ಬರೆಂದು ಹೇಳಬಹುದು. ಇವರು ಕರ್ಣಾಟಕದ ಗತ ವೈಭವವನ್ನು ಕೀರ್ತಿಸಿ ಗ್ರಂಥ ಬರೆದಿದ್ದಾರೆ. ಬಾಲಗಂಗಾಧರ ತಿಲಕರವರ 'ಗೀತಾರಹಸ್ಯ' ಗ್ರಂಥವನ್ನು ಮರಾಠಿಯಿಂದ ಕನ್ನಡಕ್ಕೆ ತರ್ಜುಮೆ ಮಾಡಿದ್ದಾರೆ. ಅನೇಕ ಪ್ರಾಸ್ತಾವಿಕ ಲೇಖನಗಳನ್ನು ಬರೆದಿದ್ದಾರೆ. ಬಹುಕಾಲ 'ಜಯಕರ್ಣಾಟಕ' ಪತ್ರಿಕೆಯ ಸಂಪಾದಕರಾಗಿದ್ದರು. ೧೯೩೨-೩೪ರಲ್ಲಿ ಮೈಸೂರು ಪಟ್ಟಣದಲ್ಲಿ ನಡೆದ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಇವರು ಭಗವದ್ಭಕ್ತರು, ನಿಷ್ಕಪಟಿಗಳಾದವರು. ಒಂದೊಂದು ವೇಳೆ ಉದ್ವೇಗಪರವಶರಾಗಿ ಮಾತನಾಡುತ್ತಿದ್ದರು

ಮುದವೀಡಕರ್ ಕೃಷ್ಣರಾಯರು

ಮುದವೀಡಕರ್ ಕೃಷ್ಣರಾಯರು ಬಹುಕಾಲ ಒಂದು ಓಜಸ್ವಿಯಾದ ವಾರಪತ್ರಿಕೆಯನ್ನು ನಡಸುತ್ತಿದ್ದರು. ಕೃಷ್ಣರಾಯರು ತೇಜೋವಂತರಾದ ವಾಗ್ಮಿಗಳು. ನನಗೆ ತಿಳಿದಿರುವ ಕನ್ನಡ ದೇಶದ ರಾಜಕೀಯ ವಾಗ್ಮಿಗಳಲ್ಲಿ ಮುದವೀಡಕರ್ ಕೃಷ್ಣರಾಯರಿಗಿಂತ ಮೇಲ್ಮಟ್ಟದವರು ಯಾರೂ ಇಲ್ಲವೆನಿಸುತ್ತದೆ. ದೇಶಪಾಂಡೆ ಗಂಗಾಧರರಾಯರು, ಮುದವೀಡಕರ್ ಕೃಷ್ಣರಾಯರು-ಇವರಿಬ್ಬರಷ್ಟು ಪ್ರಭಾವಶಾಲಿಗಳಾದ ಕನ್ನಡ ಭಾಷಣಕಾರರು ಬೇರೆ ಒಬ್ಬರೂ ಇಲ್ಲ.

ಮುದವೀಡಕರ್ರವರು ದೊಡ್ಡ ಆಕಾರದವರು. ಶ್ಯಾಮಲವರ್ಣ ಅವರದು; ಉದ್ದಕ್ಕೆ ತಕ್ಕಷ್ಟು ಗಾತ್ರ, ಸ್ಥೂಲ. ಅಗಲವಾದ ಮುಖ, ಅಗಲವಾದ ಕಣ್ಣುಗಳು. ಚಿಂತೆಯನ್ನೋ ಸಂತೋಷವನ್ನೋ ಕೋಪವನ್ನೋ ಹಾಸ್ಯವನ್ನೋ, ಭಾವನೆಯುತ್ಪನ್ನವಾಗುತ್ತಿದ್ದಂತೆಯೇ ಹೊರಗೆಡಹುತ್ತಿದ್ದ ಮುಖಭಂಗಿ.

ಮುದವೀಡಕರ್ ಕೃಷ್ಣರಾಯರ ಒಳ್ಳೆತನವನ್ನೂ ಪ್ರೀತಿ ವಾತ್ಸಲ್ಯಗಳನ್ನೂ ಎಷ್ಟೆಂದು ಹೊಗಳಿದರೂ ನನಗೆ ತೃಪ್ತಿಯಾಗದು. ನಾವು ಎಂಟು ಹತ್ತು ಮಂದಿ ಹುಬ್ಬಳ್ಳಿಯ ಸಮ್ಮೇಳನದಿಂದ ಧಾರವಾಡಕ್ಕೆ ಹೋಗಿ ಅಲ್ಲಿ ರಾಮಚಂದ್ರ ಮಹಿಷಿಯವರ ಅತಿಥಿಗಳಾಗಿ ಒಂದು ದಿನ ಇದ್ದೆವು. ಮಾರನೆಯ ದಿನ ಅಲ್ಲಿಂದ ಮುಂದಕ್ಕೆ ಪ್ರಯಾಣ. ರೈಲು ಹೊರಡುವುದು ಬೆಳಗ್ಗೆ ಐದು ಘಂಟೆಗೆ. ಅಷ್ಟರೊಳಗಾಗಿ ರೈಲ್ವೆ ಸ್ಟೇಷನ್ ತಲಪಬೇಕಾಗಿತ್ತು. ನಮ್ಮ ಸಾಮಾನುಗಳನ್ನು ಸಾಗಿಸುವುದಕ್ಕಾಗಿ ಗಾಡಿಯೋ ಆಳುಗಳೋ ಇಲ್ಲವೆಂದು ನಾವು ಪೇಚಾಡಿಕೊಳ್ಳುತ್ತಿದ್ದೆವು. ಆ ಹೊತ್ತಿಗೆ ಸರಿಯಾಗಿ ಕೃಷ್ಣರಾಯರು ಅಲ್ಲಿಗೆ ಬಂದು ನಮ್ಮ ಪೇಚಾಟವನ್ನು ನೋಡಿದರು. ನಮ್ಮನ್ನು ಕೇಳಿದರು:

“ಎಷ್ಟದ್ರಪಾ ಸಾಮಾನು? ಎಷ್ಟು ಗಾಡಿ ಹಿಡಿಸೀತು?”

ನಾವು ನಮ್ಮ ಹಾಸಿಗೆಗಳನ್ನೂ ಟ್ರಂಕುಗಳನ್ನೂ ತೋರಿಸಿದೆವು. ಕೃಷ್ಣರಾಯರು:

“ಏನ್ರಪಾ? ಇಷ್ಟೇ ಹೌದಲ್ಲೊ? ಇದಕ್ಯಾಕೆ ಗಾಡಿ?”

ಹಾಗೆ ಹೇಳುತ್ತ ಒಂದು ಹಾಸಿಗೆ ಸುರುಳಿಯನ್ನು ಒಂದು ಕಂಕುಳಲ್ಲಿಯೂ ಇನ್ನೊಂದನ್ನು ಇನ್ನೊಂದು ಕಂಕುಳಲ್ಲಿಯೂ ಒಂದನ್ನು ಭುಜದ ಮೇಲೆಯೂ ಇನ್ನೊಂದನ್ನು ಇನ್ನೊಂದು

ಭುಜದ ಮೇಲೂ ಹೇರಿಕೊಂಡು ಕೊಂಚ ಬಗ್ಗಿ ಟ್ರಂಕನ್ನು ಬೆನ್ನಮೇಲೆ ಇರಿಸಿಕೊಂಡರು. ಇಷ್ಟಾದಮೇಲೆ ನಿಂತು ಹೇಳಿದರು:

“ಧಾರಾದರೂ ಮೇಲೆ ಕೂಡೋ ಹಾಂಗಿದ್ದರೆ ಕೂಡಬಹುದಲ್ಲ?”

ನಾವೆಲ್ಲ ನಕ್ಕೆವು. ಅಲ್ಲಿಂದ ಹತ್ತು ನಿಮಿಷದೊಳಗಾಗಿ ಅವರು ರೈಲ್ವೆ ಸ್ಟೇಷನ್ನನ್ನು ನಮಗಿಂತ ಮೊದಲೇ ತಲಪಿದ್ದರು.

ಇದರಿಂದ ಅವರ ಆಕಾರದ ಮಹಿಮೆ ತೋರುವುದು ಹಾಗಿರಲಿ, ಅವರ ಹೃದಯದ ಮಹಿಮೆ ಸ್ಪಷ್ಟಪಡುತ್ತದೆ.

ನಿಃಸ್ಪೃಹರು, ಸತ್ಯಸಂಧರು-ಎಂದರೆ ಮುದವೀಡಕರ್ ಕೃಷ್ಣರಾಯರು.

ಅವರು ಬೆಂಗಳೂರಿಗೆ ಆಗಾಗ ಉಪನ್ಯಾಸ ಕೊಡಲು ಬರುತ್ತಿದ್ದರು. ಒಂದು ಉಪನ್ಯಾಸದಲ್ಲಿ ಹೇಳಿದರು:

“ನಮ್ಮಲ್ಲಿ ಎಂಥೆಂಥ ಮಹಾಕವಿಗಳಿದ್ದರು! ಎಂಥೆಂಥ ಪ್ರತಿಭಾವಂತರಿದ್ದರು! ಎಂಥೆಂಥ ಕಾವ್ಯಕರ್ತರಿದ್ದರು! ನಮ್ಮ ರನ್ನನೇನು! ಪೊನ್ನನೇನು! ಜನ್ನನೇನು...!”

ಹೀಗೆ ಬಿಟ್ಟರು ವಾಗ್ಜಾಲಗಳನ್ನು ಕೇಳಿದವರಿಗೆ ಪರಮಾನಂದ.

ಉಪನ್ಯಾಸ ಮುಗಿದ ಮೇಲೆ ನಾನು ಅವರ ಹತ್ತಿರ ಹೋಗಿ ನನ್ನ ಸಂತೋಷವನ್ನು ತಿಳಿಯಪಡಿಸಿ ಕೇಳಿದೆ:

“ಪೊನ್ನ ಏನೇನು ಬರೆದಿದ್ದಾನೆ? ಜನ್ನ ಏನು ಬರೆದಿದ್ದಾನೆ?”

ಕೃಷ್ಣರಾಯರು ಹೇಳಿದರು:

“ನಾ ಏನು ಬಲ್ಲೆನಪ್ಪಾ! ನೀವೆಲ್ಲಾ ಹೇಳತೀರಲ್ಲೊ? ನೀವು ಸುಳ್ಳು ಹೇಳುವವರಲ್ಲವಲ್ಲ-ನಿಮ್ಮ ಮಾತೇ ನಮಗೆ ಪ್ರಮಾಣ.”

ನಾವು ನಗುವಿನ ಲಹರಿಯಲ್ಲಿ ತೇಲಿದೆವು.

ಒಂದು ಸಾರಿ ಮುದವೀಡಕರ್ ಅವರು ಬೆಂಗಳೂರಿಗೆ ಬಂದಿದ್ದಾಗ ಅವರ ಒಂದಾನೊಂದು ಭಾಷಣವನ್ನು ಕೇಳಿದ ನನ್ನ ಸ್ನೇಹಿತರು ಎಸ್.ಜಿ. ಶಾಸ್ತ್ರಿಗಳವರು ಆ

ಮಾರನೆಯ ದಿನ ಮುದವೀಡಕರ್ ಅವರು ಇಳಿದುಕೊಂಡಿದ್ದ ಮನೆಗೆ ಹೋಗಿ, ಅವರ ಎರಡು ಪಾದಗಳನ್ನೂ ಹಿಡಿದು ನಮಸ್ಕರಿಸಿ, ತಾವು ತಂದಿದ್ದ ಉಡುಗೊರೆಯನ್ನು ಮುಂದಿಟ್ಟು ಅದನ್ನು ಅವರು ಸ್ವೀಕರಿಸಿದರೆ ತಾನು ಕೃತಾರ್ಥನೆಂದು ಹೇಳಿದರು.

ಇದಕ್ಕೆ ನಾನು ಸಾಕ್ಷಿ. ಕೃಷ್ಣರಾಯರೆಂಥವರು, ಎಸ್.ಜಿ.ಶಾಸ್ತ್ರಿಗಳೆಂಥವರು-ಎಂದು ಅದರಿಂದ ಅಭಿವ್ಯಕ್ತವಾಗುತ್ತದೆ.

ನಾರಾಯಣರಾಯರು

ಹುಯಿಲಗೋಳ ನಾರಾಯಣರಾಯರು "ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು" ಎಂಬ ಕನ್ನಡ ರಾಷ್ಟ್ರಗೀತೆಯನ್ನು ರಚಿಸಿದವರು. ಕಸಬಿನಲ್ಲಿ ವಕೀಲರು. ಪ್ರಾಚೀನ ಕಾವ್ಯಗಳನ್ನು ಚೆನ್ನಾಗಿ ನೋಡಿದ್ದವರು. ಗದುಗಿನ ವೀರನಾರಾಯಣ ಸ್ವಾಮಿಯ ಭಕ್ತರು ಮತ್ತು ಕುಮಾರವ್ಯಾಸ ಭಾರತದ ಪಾರಾಯಣದಲ್ಲಿ ನಿಷ್ಠರಾದವರು.

ನಾರಾಯಣರಾಯರದು ದೊಡ್ಡ ಕುಟುಂಬ. ಅವರು ಆಸ್ತಿವಂತರೂ ಹೌದು. ಸಂಸಾರದಲ್ಲಿ ದುಃಖಗಳನ್ನು ಕಂಡಿದ್ದವರು. ಒಂದು ಕಡೆ ಸಂಸಾರದ ತಾಪದಿಂದಲೂ ಇನ್ನೊಂದು ಕಡೆ ಭಗವದ್ಭಕ್ತಿಯ ಅತಿಶಯದಿಂದಲೂ ಬಹು ಮೃದುವಾಗಿ ನಮ್ರರಾಗಿದ್ದರು. ತುಂಬ ಉದಾರಿಗಳು ಮತ್ತು ಸರಳಜೀವಿ. ಮಿತಭಾಷಿಗಳು. ನನ್ನ ಮನಸ್ಸು ಅವರ ಒಳ್ಳೆತನವನ್ನು ಪದೇ ಪದೇ ನೆನೆಯುತ್ತದೆ.

ಗಂಗಾಧರರಾಯರು

ದೇಶಪಾಂಡೆ ಗಂಗಾಧರರಾಯರು ಕರ್ಣಾಟಕ ಮಹಾರಾಷ್ಟ್ರಗಳೆರಡರಲ್ಲಿಯೂ ಪ್ರಸಿದ್ಧರಾದ ಜನಪ್ರಮುಖರು. ಇವರು ಭಾರಿ ಜಮೀನುದಾರರಾಗಿದ್ದದ್ದಲ್ಲದೆ ವಕೀಲಿ ವೃತ್ತಿಯನ್ನು ನಡೆಸಿದವರು. ನೋಡಲು ಒಳ್ಳೆಯ ಆಕಾರ, ಒಳ್ಳೆಯ ಮೈ ಬಣ್ಣ. ಇವರು ಬಾಲಗಂಗಾಧರ ತಿಲಕರ ಅಚ್ಚುಮೆಚ್ಚಿನ ಸಹಾಯಕರಲ್ಲೊಬ್ಬರು.

ಬಹುಶಃ ಬಾಗಲಕೋಟೆಯಲ್ಲೋ ಇನ್ನೆಲ್ಲೋ ಇವರ ಕನ್ನಡ ಭಾಷಣವನ್ನು ನಾನು ಕೇಳಿದೆ. ಅದು ರಾಜಕೀಯ ವಿಚಾರದ್ದು. ಅದರಲ್ಲಿ ಮಧ್ಯಗಾಮಿ ಪಕ್ಷದ ಶ್ರೀನಿವಾಸಶಾಸ್ತ್ರಿಗಳು ಮೊದಲಾದ ಪ್ರಮುಖರನ್ನು ಕುರಿತು ಹೇರಳವಾಗಿ ಹಾಸ್ಯ ಮಾಡಿದರು. “ಈ ಮಧ್ಯಗಾಮಿಗಳು ‘ಕಾಯದೇಸೀರ್’ ‘ಸನ್ನದ್‌ಸೀರ್’ ಚಳವಳಿ ಮಾಡತಕ್ಕದ್ದೆಂದು ಬಹು ಉನ್ನತ ದೃಷ್ಟಿಯಿಂದ ಉಪನ್ಯಾಸ ಮಾಡುತ್ತಾರಲ್ಲ? ‘ಕಾಯದೇಸೀರ್’ ಚಳವಳಿಯಿಂದ ಏನಾಗಿದೆ? ‘ಸನ್ನದ್‌ಸೀರ್ ಚಳುವಳಿಯಿಂದ ಏನಾಗಿದೆ?” ಈ ಧೋರಣೆಯಲ್ಲಿ ಉಪನ್ಯಾಸ ಬೆಳೆಯಿತು. ಜನರನ್ನೆಬ್ಬಿಸಿ ಹುರಿದುಂಬಿಸುವ ಶಕ್ತಿ ಕನ್ನಡ ಮಾತಿಗೆ ಉಂಟೆಂಬುದನ್ನು ನಾನು ಕಂಡುಕೊಂಡದ್ದು ಆ ದಿವಸ. ನಾನು ಗಂಗಾಧರರಾಯರ ಪಕ್ಷದವನಲ್ಲ. ಆದರೆ ಅವರ ವಾಕ್‌ಪ್ರಭಾವವನ್ನು ನನಗೆ ದೇವರು ಕೊಡಲಿಲ್ಲವಲ್ಲ-ಎಂದುಕೊಂಡಿದ್ದೇನೆ ಹಲವಾರು ಸಲ.

ಕೌಜಲಗಿ ಶ್ರೀನಿವಾಸರಾಯರು

ಶ್ರೀನಿವಾಸರಾವ್ ಕೌಜಲಗಿಯವರನ್ನು ಕರ್ನಾಟಕದ ಸಿಂಹವೆಂದೂ ಕರ್ನಾಟಕದ ಹುಲಿಯೆಂದೂ ಜನ ಕರೆಯುತ್ತಿದ್ದರು. ಅವರದ್ದು ಸಿಂಹದ ಎದೆಗುಂಡಿಗೆ; ಹುಲಿಯ ಗರ್ಜನೆ. ಅವರು ತುಂಬ ಮಾತಿನವರಲ್ಲ. ಮಾತನಾಡಿದಾಗ ವಿಷಯ ಫೈಸಲಾಗುತ್ತಿತ್ತು. ಸತ್ಯವಂತರೂ ಉದಾರ ಮನಸ್ಸಿನವರೂ ಆದ ಕಾರ್ಯಕರ್ತರು ಕೌಜಲಗಿಯವರು. ರಾಯಚೂರು ಸಮ್ಮೇಳನದ ವೇಳೆಯಲ್ಲಿ ಒಂದು ಕಠಿನ ಪ್ರಶ್ನೆ ಬಂದಿತ್ತು. ಆ ಸಮೀಪದಲ್ಲಿರುವ ಮಾನ್ವಿ ಎಂಬ ಗ್ರಾಮದ ಒಂದಾನೊಂದು ಗುಂಪಿನವರು ಸಮ್ಮೇಳನದ ವಿಷಯದಲ್ಲಿ ವಿಮುಖರಾಗಿದ್ದರು. ಅದೇ ಕೋಮಿಗೆ ಸೇರಿದ್ದ ರಾಯಚೂರು ಪುರಜನರಲ್ಲಿ ಬಹುಮಂದಿ ಸಮ್ಮೇಳನವನ್ನು ತಿರಸ್ಕರಿಸುವವರಾಗಿದ್ದರು.

ಮಾನ್ವಿಯ ಸಮೀಪದಲ್ಲೆಲ್ಲೋ ಒಂದು ಜಗನ್ನಾಥ ದೇವಾಲಯವಿದೆ. ಪ್ರಸಿದ್ಧ ಹರಿದಾಸರಾದ ಜಗನ್ನಾಥದಾಸರ ವೃಂದಾವನವಿದೆ. ಅದಕ್ಕೆ ಸೇರಿದ ಗುಡಿಯ ಮರದ ತೇರಿನ ಮುಂದುಗಡೆ ಒಂದು ಬಸವಣ್ಣನ ಪ್ರತಿಮೆಯನ್ನು ಕೆತ್ತಿದೆ. ಆನೆ ಕುದುರೆ ಮೊದಲಾದ ಪ್ರತಿಮೆಗಳೆಲ್ಲವೂ ಇದ್ದವು. ಆದರೂ ಸಾರಥಿಸ್ಥಾನದಲ್ಲಿ ಬಸವಣ್ಣನ ಪ್ರತಿಮೆ ಇದ್ದದ್ದು ಅಸಮಾಧಾನಕ್ಕೆ ಕಾರಣ.

ಸಂದರ್ಭ ಹೀಗಿದ್ದಿದ್ದರ ವರ್ತಮಾನ ಕೌಜಲಗಿ ಶ್ರೀನಿವಾಸರಾಯರಿಗೆ ತಿಳಿಯಿತು. ಅವರು ಮಾನ್ವಿಗೆ ಹೋಗಿ ಅಲ್ಲಿಯೂ ರಾಯಚೂರಿನಲ್ಲಿಯೂ ಆ ಪ್ರತಿಕಕ್ಷಿ ವರ್ಗದ ಜನರ ಒಂದೊಂದು ಮನೆಗೂ ಹೋಗಿ ಒಬ್ಬೊಬ್ಬರೊಡನೆಯೂ ಮಾತನಾಡಿ, ಒಂದೂವರೆ ದಿನಗಳೊಳಗಾಗಿ ಅವರೆಲ್ಲರಿಗೂ ಸಮಜಾಯಿಷಿ ಹೇಳಿ, ಅವರೆಲ್ಲ ಸಮ್ಮೇಳನಕ್ಕೆ ಬರುವಂತೆ ಒಡಂಬಡಿಸಿದರು. ದೇಶಕಾರ್ಯ ಭಾಷಾಕಾರ್ಯಗಳ ಮುಂದೆ ಸ್ವಪ್ರತಿಷ್ಠೆಯೆಂಬುದು ಅವರಲ್ಲಿ ಸಂಪೂರ್ಣವಾಗಿ ಅಳಿಸಿಹೋಗಿತ್ತು.

ಇನ್ನೊಂದು ಸಾರಿ-ರಾಯಚೂರು ಸಮ್ಮೇಳನಕ್ಕಿಂತ ಹಿಂದೆ, ಬಹುಶಃ ಬಿಜಾಪುರದಲ್ಲಿ- ನನ್ನ ಒಂದು ಸೂಚನೆ ಸಮ್ಮೇಳನದ ಮುಂದೆ ಬರುವುದಾಗಿತ್ತು. ನನಗೂ ಶ್ರೀನಿವಾಸರಾಯರಿಗೂ ಆಗ ಮುಖಪರಿಚಯ ಸಹ ಇರಲಿಲ್ಲ. ಶ್ರೀನಿವಾಸರಾಯರು ನಾವೆಲ್ಲ ಇಳಿದುಕೊಂಡಿದ್ದ ಕಡೆಗೆ ಬಂದು ಅಲ್ಲಿ ತಮಗೆ ಪರಿಚಿತರಾಗಿದ್ದ ಒಬ್ಬ ಸ್ನೇಹಿತರೊಡನೆ ಮಾತನಾಡುತ್ತಿದ್ದರು. ಆಗ ನನ್ನ ಸೂಚನೆಯ ಪ್ರಸ್ತಾವ ಬಂದಿತು. ಆ ನನ್ನ ಸೂಚನೆ ಪಂಪಾ ಕ್ಷೇತ್ರದ ಜೀರ್ಣೋದ್ಧಾರವನ್ನು ಕುರಿತದ್ದು. ಅಲ್ಲಿಯ ಕಟ್ಟಡಗಳ ದುರಸ್ತಿ,

ಅಲ್ಲಿಯ ಪ್ರಯಾಣಿಕರಿಗೆ ಆಗಬೇಕಾದ ಸೌಕರ್ಯ ಮೊದಲಾದ ವಿವರಗಳನ್ನು ಆ ಸೂಚನೆಯಲ್ಲಿ ಕೊಟ್ಟಿತ್ತು. ಶ್ರೀನಿವಾಸರಾಯರು ತಮ್ಮ ಸ್ನೇಹಿತರನ್ನು ಕೇಳಿದರು;

"ಧಾರದಪ್ಪ ಈ ಸೂಚನಿ?"

ನಾನು ಅದು ನನ್ನದೆಂದು ಹೇಳಿ ಮುಂದೆ ಬಂದು ನನ್ನ ಹೆಸರು ಹೇಳಿಕೊಂಡೆ. ಶ್ರೀನಿವಾಸರಾಯರು ಕೇಳಿದರು:

"ನೀವು ಹಂಪಿ ನೋಡಿದ್ದೀರೋ?"

"ಇಲ್ಲ. ನೋಡಿಲ್ಲ."

"ಹಾಗಾದರೆ ನೀವು ಮೊದಲು ಹಂಪಿ ನೋಡಿಕೊಂಡು ಬಂದು ಅನಂತರ ಸೂಚನೆ ತರ್ರಿ. ನಿಮ್ಮ ಸೂಚನಿ ನೋಡಿದರೇನೆ ಇವರಿಗೆ ವಿಷಯ ಸರಿಯಾಗಿ ತಿಳಿಯದು ಅಂತ ಗೊತ್ತಾಗ್ತದೆ. ನಮ್ಮ ದೇಶದ ಮಿಕ್ಕೆಲ್ಲ ಕಾರ್ಯ ಬಿಟ್ಟು ಈ ಪಂಪಾಕಾರ್ಯ ಒಂದಕ್ಕೇ ಸರಕಾರ ತನ್ನ ಬೊಕ್ಕಸವನ್ನು ಮುಡುಪಿಟ್ಟರೂ ನೀವು ಸೂಚಿಸಿರುವುದರಲ್ಲಿ ಒಂದು ಶತಾಂಶ ನಡೆಯಲಾರದು. ನಿಮ್ಮದೇನ್ರಿ ಹುಚ್ಚುಮಾತು!"

ಎಷ್ಟೋ ಉತ್ಸಾಹದಿಂದ ನಾನು ತಯಾರು ಮಾಡಿದ್ದ ಕಾರ್ಯಯೋಜನೆಯ ವಿಷಯದಲ್ಲಿ ಈ ಪ್ರಸಿದ್ಧ ಜನನಾಯಕರು ಹೀಗೆ ನಿರಾಶೆಯ ಮಾತನ್ನಾಡಿದರಲ್ಲ-ಎಂದು ತುಂಬ ಅಸಮಾಧಾನವಾಯಿತು.

ಮಾರನೆಯ ವರ್ಷ ಹಂಪೆಗೆ ಹೋದೆ. ನನ್ನ ಮನಸ್ಸಿನಲ್ಲಿದ್ದ ಕಟ್ಟಡಗಳನ್ನೂ ಗೋಪುರಗಳನ್ನೂ ಕೊಳ ಕಾಲುವೆಗಳನ್ನೂ ಕಣ್ಣಾರೆ ಕಂಡೆ. ಶ್ರೀನಿವಾಸರಾಯರು ಎಂಥ ಯಥಾರ್ಥವಾದಿಗಳೆಂಬುದು ಆಗ ನನಗೆ ಸ್ಪಷ್ಟವಾಯಿತು. ನನ್ನ ಸೂಚನೆಯನ್ನು ಅವರಿಗಿಂತ ಮುಂಚೆ ನೋಡಿದ್ದವರು ಬಹುಮಂದಿ ಇದ್ದರು. ಅವರಲ್ಲನೇಕರು ಹಂಪೆಯನ್ನು ಒಂದೆರಡು ಸಾರಿ ನೋಡಿದ್ದವರು. ನನ್ನ ಯೋಚನೆ ಅಸಾಧ್ಯವಾದದ್ದೆಂದು ಅವರಿಗೂ ತೋರಿದ್ದಿರಬೇಕು. ಆದರೆ ಹಾಗೆ ಹೇಳುವ ಧೈರ್ಯ ಸಿದ್ಧವಾಗಿದ್ದದ್ದು ಶ್ರೀನಿವಾಸರಾಯರೊಬ್ಬರಿಗೇ.

೨೧

ದಾವಣಗೆರೆಯ ಸಾಹಿತ್ಯ ಸಮ್ಮೇಳನ

ಕನ್ನಡ ಸಾಹಿತ್ಯ ಸಮ್ಮೇಳನ ೧೯೨೨ರಲ್ಲಿ ದಾವಣಗೆರೆಯಲ್ಲಿ ನಡೆಯಿತು. ಆ ಸಾರಿಯ ಅಧ್ಯಕ್ಷರು ಮೈಸೂರಿನ ವೃದ್ಧ ಪಿತಾಮಹ ಎಂ. ವೆಂಕಟಕೃಷ್ಣಯ್ಯನವರು. ಅವರು ಮೈಸೂರು ದೇಶಕ್ಕೂ ಕನ್ನಡ ಭಾಷೆ ಸಾಹಿತ್ಯಗಳಿಗೂ ಮಾಡಿರುವ ಸೇವೆ ಸರ್ವಜನ ವಿದಿತವಾದದ್ದು. ಅವರು ಅರವತ್ತು ಎಪ್ಪತ್ತು ವರ್ಷಗಳ ಕಾಲ ಅವಿಚ್ಛಿನ್ನವಾಗಿ ನಡಸಿದ ಬಹುಮುಖವಾದ ಜನಸೇವೆ ನಮ್ಮ ದೇಶದ ಚರಿತ್ರೆಯಲ್ಲಿ ಒಂದು ಪುಣ್ಯಜೀವನದ ಸ್ಮರಣೆ. ಅಂಥವರನ್ನು ಅಧ್ಯಕ್ಷ ಪದವಿಗೆ ಆರಿಸಿದ ವಿಷಯದಲ್ಲಿ ಅಸಮಾಧಾನಪಡುವವರು ದೇಶದಲ್ಲಿರಬಹುದೆಂದು ಯಾರಿಗೂ ಅನ್ನಿಸಿರಲಿಲ್ಲ.

ಪರಿಷತ್ತಿನ ಆಗಿನ ಪದ್ಧತಿಯಲ್ಲಿ ಸಮ್ಮೇಳನಕ್ಕೆ ಗೊತ್ತಾಗಿದ್ದ ಊರಿಗೆ ಗೊತ್ತಾದ ದಿನಕ್ಕೆ ಎರಡು ಮೂರು ದಿವಸ ಹಿಂದೆ ಪರಿಷತ್ತಿನ ಕಡೆಯಿಂದ ಒಂದು (ಅಡ್ವಾನ್ಸ್ ಪಾರ್ಟಿ) ಮುನ್ನೇಪಾರ್ಟಿನ ಸಮಿತಿ ಹೋಗಿ ಅಲ್ಲಿ ಆಗಬೇಕಾದ ಸಿದ್ಧತೆಗಳನ್ನು ಆಗು ಮಾಡಿಸುವುದು ರೂಢಿಯಾಗಿತ್ತು. ಅದರಂತೆ ಪರಿಷತ್ತಿನ ಗುಮಾಸ್ತರುಗಳೂ ಇತರ ಕಾರ್ಯಕರ್ತರುಗಳೂ ಆರೇಳುಮಂದಿ ದಾವಣಗೆರೆ ತಲಪಿದರು. ಅಲ್ಲಿ ಯಾವ ಸಿದ್ಧತೆಯೂ ಅವರಿಗೆ ಕಂಡುಬರಲಿಲ್ಲ. ಸಭೆ ಸೇರಬೇಕಾದ ಸ್ಥಳದ ನಿಷ್ಕರ್ಷೆಯೇ ಆಗಿರಲಿಲ್ಲ. ಪಾರ್ಟಿಯವರು ಅಡಿಗೆ ಮಾಡಿಸಿಕೊಳ್ಳಲು ಪಾತ್ರೆಪದಾರ್ಥಗಳು ದೊರೆಯಲಿಲ್ಲ. ಅಕ್ಕಿ, ಬೇಳೆ ವಗೈರೆ ಪದಾರ್ಥಗಳನ್ನು ಕೊಳ್ಳಲು ಅಂಗಡಿಗೆ ಹೋದಾಗ ಅಂಗಡಿಗಳು ಬಂದ್ ಆಗಿದ್ದವು. ಆ ಸಂಜೆಯಿಂದ 'ದಾವಣಗೆರೆ ಬಂದ್.' ಪರಿಷತ್ತಿನ ಪಾರ್ಟಿಯವರು ಕೆಲವರು ಅಲ್ಲಿಯ ವಕೀಲ್ ಜಡೆ ಸುಬ್ಬರಾಯರ ಮನೆಯಲ್ಲಿ ಊಟಮಾಡಿದರು. ಕೆಲವರು ಎಕ್ಸೈಸ್ ಇನ್‌ಸ್ಪೆಕ್ಟರ್ ರಾಜಾಪುರದ ವೆಂಕಟಸುಬ್ಬಯ್ಯನವರ ಮನೆಯಲ್ಲಿ ಊಟಮಾಡಿದರು. ಮಾರನೆಯ ದಿನ ಆ ಅವ್ಯವಸ್ಥೆಯ ವರದಿ ಬೆಂಗಳೂರಿಗೆ, ಪರಿಷತ್ತಿನ ಕಾರ್ಯಾಲಯಕ್ಕೆ ತಲಪಿತು.

ಪರಿಷತ್ತಿನವರಿಗೆ ಆಶ್ಚರ್ಯವೂ ಚಿಂತೆಯೂ ಆಯಿತು. ಆಗ ಚಿತ್ರದುರ್ಗದ ಜಿಲ್ಲೆಯ ಡೆಪ್ಯುಟಿ ಕಮಿಷನರಾಗಿದ್ದವರು ಜನಾಬ್ ಸೈಯದ್ ತಾಜ್‌ಪೀರಾನ್ ಸಾಹೇಬರವರು. ಅವರಿಗೆ ಬರೆದು ನೋಡೋಣವೆಂದರೆ ಅವರು ಆ ದಿನ ಎಲ್ಲಿ ಕ್ಯಾಂಪ್ ಹೊರಟಿರುತ್ತಾರೋ ನಮಗೆ ತಿಳಿಯದು. ಹೀಗೆ ಬಹಳ ಯೋಚನೆಮಾಡಿ ಕಡೆಗೆ

ದಿವಾನರನ್ನೇ ಕಾಣುವುದೆಂದು ನಿಶ್ಚಯವಾಯಿತು. ಅದರಂತೆ ಕರ್ಪೂರ ಶ್ರೀನಿವಾಸರಾಯರು, ವೆಂಕಟನಾರಣಪ್ಪನವರು, ನಾನು, ದಿವಾನ್ ಎ.ಆರ್. ಬ್ಯಾನರ್ಜಿಯವರನ್ನು ಕಾಣಲು ಹೋದೆವು. ನಡೆದಿದ್ದ ಸಂಗತಿಯನ್ನೆಲ್ಲ ಅವರಿಗೆ ವಿವರಿಸಿದೆವು. ಅವರು ಒಂದು ಕ್ಷಣ ಆಲೋಚಿಸಿ ಹೇಳಿದರು:

"ಒಳ್ಳೆಯದು ಪರಿಷತ್ತಿನ ಮಹಾಪೋಷಕರು ಶ್ರೀಮನ್ಮಹಾರಾಜರವರೆಂದು ನೀವು ಹೇಳುತ್ತೀರಿ. ಹಾಗೆ ಮಹಾರಾಜರ ಸಂಬಂಧವುಳ್ಳ ಸಂಸ್ಥೆಗೆ ನಮ್ಮ ರಾಜ್ಯದಲ್ಲಿಯೇ ಅಗೌರವವಾಯಿತೆಂದರೆ ಅದನ್ನು ಸರಕಾರ ಸಹಿಸತಕ್ಕದ್ದಲ್ಲ. ಆದರೆ ದಾವಣಗೆರೆಯ ವಿದ್ಯಮಾನ ಈಗ ಯಾವ ಕ್ರಮವಾದ ಮಾರ್ಗದಿಂದಲೂ ಸರಕಾರದ ತಿಳಿವಳಿಕೆಗೆ ಬಂದಿಲ್ಲ. ನೀವು ದಾವಣಗೆರೆಗೆ ಹೋಗಿ ಅಲ್ಲಿ ಅನನುಕೂಲವಿರುವುದೆಂದು ಕಂಡುಬಂದರೆ ಅದನ್ನು ಸರಕಾರಕ್ಕೆ ತಿಳಿಯಪಡಿಸಿದ ಮೇಲೆ ಸಮ್ಮೇಳನಕ್ಕೆ ಬೇಕಾದ ಅನುಕೂಲತೆಗಳನ್ನೊದಗಿಸಲು ತಕ್ಕ ಏರ್ಪಾಟು ಮಾಡಲಾಗುವುದು."

ಆ ಭರವಸೆಯ ಮೇರೆಗೆ ಮಾರನೆಯ ದಿನ ಬೆಳಗ್ಗೆ ಕರ್ಪೂರ ಶ್ರೀನಿವಾಸರಾಯರೂ ವೆಂಕಟನಾರಣಪ್ಪನವರೂ ನಾನೂ ದಾವಣಗೆರೆಯಲ್ಲಿ ಇಳಿದೆವು. ಸಂದರ್ಭಗಳು ವಿಷಮವಾಗಿಯೇ ಇದ್ದವು. ಬಹು ಸ್ಥಳಗಳಿಂದ, ದೂರ ದೂರದ ಸ್ಥಳಗಳಿಂದ ಸದಸ್ಯರು ಬರುವುದಕ್ಕೆ ಆರಂಭವಾಗಿತ್ತು. ಅರವತ್ತು ಎಪ್ಪತ್ತು ಮಂದಿ ಬಂದಿದ್ದರು. ಜಡೆ ಸುಬ್ಬರಾಯರು ಹೇಗಾದರೂ ಮಾಡಿ ಸಮ್ಮೇಳನ ಸುಸೂತ್ರವಾಗಿ ನಡೆಯುವಂತೆ ಜನವನ್ನು ಒಡಂಬಡಿಸಲು ಪ್ರಯತ್ನಿಸುತ್ತಿದ್ದರು. ಅಂದು ಬೆಳಗ್ಗೆ ಸುಮಾರು ಒಂಭತ್ತು ಹತ್ತು ಘಂಟೆಯ ವೇಳೆಗೆ ಪ್ರಸಿದ್ಧ ವರ್ತಕರಾದ ಶ್ರೀಮಾನ್ ಬ್ರಹ್ಮಪ್ಪ ತವನಪ್ಪನವರ ಅವರ ಮನೆಯಲ್ಲಿ ಅಟ್ಟದ ಮೇಲೆ ಒಂದು ಪಂಚಾಯತಿ ನಡೆಯಿತು. ಅದಕ್ಕೆ ಅನೇಕ ಮಂದಿ ಪ್ರಮುಖ ಜನ ಬಂದಿದ್ದರು. ಅವರಲ್ಲಿ ಒಬ್ಬರು ಬೇವೂರ್ (ಐ.ಸಿ.ಎಸ್.) ಅವರು. ಉತ್ತರೋತ್ತರ ಇವರು ಇಂಡಿಯ ಸರಕಾರದಲ್ಲಿ ಡೈರೆಕ್ಟರ್ ಜನರಲ್ ಆಫ್ ಪೋಸ್ಟ್ ಆಫೀಸಸ್ ಹುದ್ದೆಗೇರಿದರು. ಆ ಸಭೆಯಲ್ಲಿ ಅನೇಕರು ಸಮಾಧಾನವನ್ನೂ ಐಕಮತ್ಯ ಮಾರ್ಗವನ್ನೂ ಉಪದೇಶಿಸಿದರು. ಅನೇಕ ವಿಧವಾದ ಸಂಧಾನಗಳನ್ನು ಮಾಡಿದರು. ಯಾವುದೂ ಫಲಕ್ಕೆ ಬರಲಿಲ್ಲ. ಆಗ ನಾವು ಸಂಗತಿಯನ್ನು ಸಂಗ್ರಹವಾಗಿ ದಿವಾನ್ ಬ್ಯಾನರ್ಜಿಯವರಿಗೆ ತಂತಿಯ ಮೂಲಕ ಅರಿಕೆಮಾಡಿದೆವು. ಎಲ್ಲರ ಮನಸ್ಸಿನಲ್ಲಿಯೂ ಕಳವಳ ತುಂಬಿತ್ತು.

ಅಂದು ಸಂಜೆ ಸುಮಾರು ನಾಲ್ಕು ಐದು ಘಂಟೆಗೆ ನಾವು ಬಿಡಾರ ಮಾಡಿದ್ದ ಹೈಸ್ಕೂಲು ಕಟ್ಟಡದ ಬಳಿಗೆ ತಾಜ್‌ಪೀರಾನ್ ಸಾಹೇಬರು ದಯಮಾಡಿ ಬಂದು,

“ಏನು ಸ್ವಾಮಿ? ನಾನು ವೆಂಕಟಕೃಷ್ಣಯ್ಯನವರ ಶಿಷ್ಯ. ಅವರಲ್ಲಿ ಓದಿದವನು. ಅವರು ಬರುವುದು ನನಗೆ ಬಹಳ ಸಂತೋಷ. ಅವರನ್ನು ನೋಡುವುದಕ್ಕಾಗಿಯೇ ನಾನು ಬಂದಿದ್ದೇನೆ.”

-ಇತ್ಯಾದಿಯಾಗಿ ಹೇಳಲಾರಂಭಿಸಿದರು. ‘ಬಂದ್’ ಕೂಡ ಸಡಿಲವಾಗಲು ಮೊದಲಾಯಿತು. ನಮಗೆ ಬೇಕಾಗಿದ್ದ ಪಾತ್ರೆಪದಾರ್ಥಗಳು ದೊರೆತವು.

ಮಾರನೆಯ ದಿನ ಸಮ್ಮೇಳನ. ಅದು ಯೋಚಿಸಿದ್ದಂತೆ ನಡೆಯಿತು. ಊರಿನ ಒಂದು ವರ್ಗದ ಜನ ಸಭೆಯಲ್ಲಿ ಹೆಚ್ಚಾಗಿ ಕಾಣಿಸಲಿಲ್ಲ. ಆ ವರ್ಗದ ಒಳಮುನಿಸು ಇಳಿದಿರಲಿಲ್ಲ. ಅದು ಹೊರತು ಸಮ್ಮೇಳನ ಚೆನ್ನಾಗಿ ನಡೆಯಿತು.

೨೨

ಬಿ.ಎಂ. ಶ್ರೀಕಂಠಯ್ಯನವರು

ಬಿ.ಎಂ. ಶ್ರೀಕಂಠಯ್ಯನವರು ಶ್ರೀರಂಗಪಟ್ಟಣದ ತರುಣ ತಂಡದಲ್ಲಿ ಒಬ್ಬರು. ಆ ತಂಡಕ್ಕೆ ಸೇರಿದ ಇತರರಲ್ಲಿ ಪ್ರಸಿದ್ಧರಾದವರು ವೈಸ್ ಚಾನ್ಸೆಲರ್ ಎನ್.ಎಸ್.ಸುಬ್ಬರಾಯರು, ಅಡ್ವೊಕೇಟ್ ಎಂ.ಜಿ.ವರದಾಚಾರ್ಯರು, ಪ್ರೊಫೆಸರ್ ಅಣ್ಣಾಜಿರಾಯರು, ಇಂಜಿನಿಯರ್ ವೆಂಕಟಸುಬ್ಬರಾಯರು, ಫಾರೆಸ್ಟ್ ಕನ್ಸರ್ವೇಟರ್ ನರಸಿಂಹಯ್ಯನವರು.

ಈ ತಂಡದಲ್ಲಿ ಎರಡು ದೊಡ್ಡ ಗುಣಗಳು: (೧) ಪರಸ್ಪರ ಸ್ನೇಹ, (೨) ತಂಡಕ್ಕೆ ಹೊರಗಿನವರು ತಂಡದ ಒಳಗಿನವರನ್ನು ಯಾರನ್ನು ಆಕ್ಷೇಪಿಸಿದರೂ ಅವರನ್ನು ಪ್ರತಿಭಟಿಸತಕ್ಕದ್ದು.

ಅಣ್ಣಾಜಿ: “ಏನು ಸೊಗಸಾಗಿ ಬರೀತಾನಯ್ಯ ನಮ್ಮ ಸುಬ್ಬು!”

ಸುಬ್ಬು: “ಶ್ರೀಕಂಠಯ್ಯನ ಮುಂದೆ ನನ್ನದೇನಿದೆ!”

ಶ್ರೀಕಂಠಯ್ಯ: “ಎಲೊಕ್ವೆನ್ಸ್ ಎಂದರೆ ಎಂ.ಜಿ. ಎಂಥ ಸೊಗಸಾದ ಶೈಲಿ!”

ಎಂ.ಜಿ.: “ಎಲೊಕ್ವೆನ್ಸಿನಲ್ಲೇನಿದೆ? ಸ್ಕಾಲರ್ಷಿಪ್ ದೊಡ್ಡದು. ನೋಡು ಅಣ್ಣಾಜಿಯನ್ನ.”

ಹೀಗೆ ಒಬ್ಬರನ್ನೊಬ್ಬರು ಬಿಟ್ಟುಕೊಡುತ್ತಿರಲಿಲ್ಲ. ಈ ಕಾರಣದಿಂದ ಆ ತಂಡಕ್ಕೆ Mutual Admiration Society (ಪರಸ್ಪರ ಪ್ರಶಂಸಾ ಸಂಘ) ಎಂಬ ಹೆಸರು ಬಂದಿತ್ತು. ಇದು ನಂಜನಗೂಡಿನವರೂ ಬೆಂಗಳೂರಿನವರೂ ಕೊಟ್ಟ ಹೆಸರು. ಶ್ರೀರಂಗಪಟ್ಟಣದ ತಂಡ ಅದರಿಂದ ಒಡೆಯಲಿಲ್ಲ.

ಆದರೆ ಬಹು ವರ್ಷ ನಡೆಯಲಿಲ್ಲ. ಕಾಲಕ್ರಮದಲ್ಲಿ ಬಿರುಕುಗಳು ಹುಟ್ಟಿಕೊಂಡವು. ಮರದಲ್ಲಿ ಆಗುವುದು ಹಾಗೆ ತಾನೆ? ಮೊದಲು ಒಂದೇ ಒಂದು ಕಾಂಡ. ಆಮೇಲೆ ಕೊಂಬೆಗಳು, ಕವಲುಗಳು, ಬಿಳಲುಗಳು. ಎಂದರೆ, ಶ್ರೀರಂಗಪಟ್ಟಣವು ಮನುಷ್ಯಸ್ವಭಾವವನ್ನು ಬದಲಾಯಿಸಲು ಸಮರ್ಥವಾಗಲಿಲ್ಲ. ವ್ಯಕ್ತಿ ವ್ಯಕ್ತಿಗೂ ವಯಸ್ಸಾದಂತೆ ಹೊಸ ಹೊಸ ಆಶೋತ್ತರಗಳು ಪ್ರಬಲಿಸಿ ಒಬ್ಬೊಬ್ಬನನ್ನು ಒಂದೊಂದು ದಾರಿಗೆ ಸೆಳೆಯುತ್ತವೆ.

ಸಾಹಿತ್ಯಶ್ರದ್ಧೆ

ಶ್ರೀಕಂಠಯ್ಯನವರಲ್ಲಿ ಮೊದಲಿನಿಂದ ಕಡೆಯವರೆಗೂ ಸಂತತವಾಗಿ ಏಕಪ್ರಕಾರವಾಗಿನಿಂತು ಬಲಿತ ಗುಣ ಸಾಹಿತ್ಯಶ್ರದ್ಧೆ.

ಒಂದು ಸಾರಿ ಶ್ರೀರಂಗಪಟ್ಟಣಕ್ಕೆ ಪ್ಲೇಗ್ ಬಂದಾಗ ಶ್ರೀಕಂಠಯ್ಯನವರು ಬಿ.ಎ. ಮುಗಿಸಿ ಎಂ.ಎ.ಗೆ ಓದುತ್ತಿದ್ದರು. ಅವರಿಗೆ ವರ್ಡ್‌ವರ್ತ್ ಕವಿಯ ಮೇಲೆ ತುಂಬ ಪ್ರೇಮ. ಆದರೆ ಆ ಕವಿಯ ಎರಡು ಕಾವ್ಯಗಳನ್ನು ಓದುವುದು ಕಷ್ಟದ ಕೆಲಸ. ಆ ಕಾವ್ಯಗಳು 'ಪ್ರೆಲ್ಯೂಡ್' (Prelude) 'ಎಕ್ಸ್‌ಕರ್ಷನ್' (Excursion) ಎಂಬವು. ಆ ಕಷ್ಟಕ್ಕೆ ಕಾರಣ ಅವುಗಳ ಉದ್ದ-ಮತ್ತು ಜೊಳ್ಳುಹುಲ್ಲಿನ ಹಗ್ಗದ ಉದ್ದ. ಕಾವ್ಯದಲ್ಲಿ ಘಟನೆಗಳು ಕಡಿಮೆ. ಕವಿಯ ಆಲೋಚನಾತರಂಗಗಳು ಮೇಲಿಂದ ಮೇಲೆ ಬರುತ್ತವೆ. ಮತ್ತು ಮಾತುಗಳು ವಿಪುಲವಾಗಿವೆ. ಸಾಮಾನ್ಯವಾಗಿ ಈ ಕಾವ್ಯಗಳನ್ನು ಪಠ್ಯಪುಸ್ತಕಗಳಾಗಿ ಯಾವ ವಿಶ್ವವಿದ್ಯಾನಿಲಯವೂ ನೇಮಕ ಮಾಡುವುದಿಲ್ಲ. ಆದರೆ ಅವು ಪ್ರಖ್ಯಾತ ಕವಿಯ ಪ್ರಖ್ಯಾತ ಕಾವ್ಯಗಳು. ಅವುಗಳನ್ನು ಓದಿಯೇ ತೀರಬೇಕೆಂದು ಶ್ರೀಕಂಠಯ್ಯನವರು ಪ್ರತಿಜ್ಞೆ ಮಾಡಿದರು. ಮನೆಯ ವಾತಾವರಣ ಅಂಥ ವ್ಯಾಸಂಗಕ್ಕೆ ಅನುಕೂಲಿಸದೆಂದು ಅವರು ಬಗೆದು ಪ್ರತಿದಿನವೂ ಪುಸ್ತಕ ಹಿಡಿದು ಫ್ರೆಂಚ್‌ರಾಕ್ಸಿಗೆ ಬಂದು ಹಿರೋಡೆ ಬೆಟ್ಟದ ಒಂದು ಬಂಡೆಯ ಮೇಲೆ ಕುಳಿತು ಭೋಜನದ ವೇಳೆಯವರೆಗೂ ಓದಿ ಹಿಂದಿರುಗುತ್ತಿದ್ದರು. ಹೀಗೆ ಮಾಡಿ ಒಂದು ತಿಂಗಳೊಳಗಾಗಿ ತಮ್ಮ ಹಠವನ್ನು ತೀರಿಸಿಕೊಂಡರು.

ಮೇಲಿನ ಸಂಗತಿ ನಾನು ಕೇಳಿದ್ದು. ನನ್ನ ಸ್ವಂತ ಅನುಭವವೊಂದನ್ನು ಈಗ ಉದಾಹರಿಸುತ್ತೇನೆ.

ಶ್ರೀಕಂಠಯ್ಯನವರು ಬೆಂಗಳೂರಿನಲ್ಲಿ ಇದ್ದಷ್ಟು ದಿವಸವೂ ಅವರೂ ನಾನೂ ದಿನಕ್ಕೊಂದು ಸಾರಿಯಾದರೂ ಸೇರದೆ ಇದ್ದದ್ದು ಅಪರೂಪ. ಇಬ್ಬರೂ ಸೇರಿ ವಾಕಿಂಗ್ ಹೋಗುತ್ತಿದ್ದೆವು. ನನ್ನ ಮನೆಗೆ ಅವರು ಬಾರದಿದ್ದರೆ ನಾನು ಅವರ ಮನೆಗೆ ಹೋಗುತ್ತಿದ್ದೆ. ಒಂದು ದಿನ ಬೆಳಗ್ಗೆ ಸುಮಾರು ಏಳು-ಏಳೂವರೆ ಹೊತ್ತಿಗೆ ಅವರ ಮನೆಗೆ ಹೋದೆ. ಮೊಗಸಾಲೆಯಲ್ಲಿ ನಿಂತು ಅವರ ರೂಮಿನ ಕದವನ್ನು ತಟ್ಟಿದೆ. ಉತ್ತರ ಬರಲಿಲ್ಲ. ಆಲಿಸಿ ಕೇಳಿದೆ. ಏನೋ ಒಂದು ಹಾಡಿನ ಧ್ವನಿ ಕೇಳಿಬರುತ್ತಿತ್ತು. ಮತ್ತೊಮ್ಮೆ ಬಾಗಿಲು ತಟ್ಟಿದೆ. ತೆರೆಯಲಿಲ್ಲ. ಮೂರನೆಯ ಸಾರಿ ಗಟ್ಟಿಯಾಗಿ ಡಬಡಬ ಎಂದು ಕಟ್ಟಿಗೆಯಿಂದ ಬಾಗಿಲ ಮೇಲೆ ಬಾರಿಸಿದೆ. (ನನ್ನ ಇಂಥ ಚೇಷ್ಟೆಗಳು ಅವರಿಗೆ ಅಭ್ಯಾಸವಾಗಿದ್ದವು). ಆಗ ಬಾಗಿಲು ತೆರೆದರು. ನಾನು ಮೊದಲ ಎರಡು ಸಲ ಮಾಡಿದ್ದ ಸದ್ದು ಅವರ ಕಿವಿಗೆ ಸೋಕಿರಲಿಲ್ಲ.

ಅವರು ಮಾಡುತ್ತಿದ್ದದ್ದೇನು? ಡಾಂಟೆ (Dante) ಕವಿಯ ‘ಡಿವೈನ್ ಕಾಮೆಡಿ’ (Divine Comedy) ಕಾವ್ಯವನ್ನು ಸಣ್ಣ ಮೇಜಿನ ಮೇಲೆ ತೆರೆದಿಟ್ಟು ಅದರ ವಾಕ್ಯಗಳನ್ನೋದಿ ಬಾಯಿಗೆ ಗಟ್ಟಿ ಮಾಡಬೇಕೆಂದು ಅದರ ವಾಕ್ಯಗಳನ್ನು ನುಡಿಯುತ್ತಾ ಮುಂದಿನ ಕೋಣೆಯಿಂದ ಅದರ ಹಿಂದಿನ ಕೋಣೆಯ ಗೋಡೆಯವರೆಗೂ ಶತಪಥ ತುಳಿಯುತ್ತಿದ್ದರು. ಆ ವೇಳೆಗೆ ಶ್ರೀಕಂಠಯ್ಯನವರ ವಯಸ್ಸು ಐವತ್ತು ಮೀರಿತ್ತು. ಪೆನ್ಷನ್ ದಿನ ಹತ್ತಿರ ಹತ್ತಿರ ಬಂದಿತ್ತು.

ಇದು ಹುಟ್ಟು ವಿದ್ವಾಂಸರ ಲಕ್ಷಣ.

> ಸ್ವಾಧ್ಯಾಯಪ್ರವಚನೇ ಏವೇತಿ ನಾಕೋ ಮೌದ್ಗಲ್ಯಃ ।
> ತದ್ಧಿ ತಪಸ್ತದ್ಧಿ ತಪಃ

ಅಂಥಾದ್ದು ಶ್ರೀಕಂಠಯ್ಯನವರ ತಪಸ್ಸು.

***

ಬೆಂಗಳೂರಿಗೆ ಬರುವುದಕ್ಕೆ ಮುಂಚೆ ರಿಜಿಸ್ಟ್ರಾರ್ ಆಗಿದ್ದಾಗ ಶ್ರೀಕಂಠಯ್ಯನವರು ತಿಂಗಳಿಗೊಂದು ಸಾರಿಯಾದರೂ ತಮ್ಮ ಅಧಿಕಾರ ಕಾರ್ಯಕ್ಕಾಗಿ ಬೆಂಗಳೂರಿಗೆ ಬರಬೇಕಾಗಿತ್ತು. ತಮ್ಮ ಮೋಟಾರ್ ಕಾರಿನಲ್ಲಿ ಬರುತ್ತಿದ್ದರು. ಬೆಂಗಳೂರು ಸೇರುವ ಹೊತ್ತನ್ನು ಮುಂಚಿತವಾಗಿ ನನಗೆ ತಿಳಿಸುತ್ತಿದ್ದರು. ಮೈಸೂರಿನಿಂದ ನೇರವಾಗಿ ನನ್ನ ಕೋಣೆಗೆ ಬರುತ್ತಿದ್ದರು. ಅಲ್ಲಿ ಕೊಂಚ ಉಪಾಹಾರವಾದ ಬಳಿಕ ಅವರೂ ನಾನೂ “ಆರ್ಣಿ ಕ್ಯಾಸಲ್” (ಜಯಮಹಲ್) ಆವರಣದೊಳಗಿನ ಅವರ ಬಿಡದಿಗೆ ಹೋಗುತ್ತಿದ್ದೆವು. ಅಲ್ಲಿ ನಾನು ಅವರಿಗಾಗಿ ಸಂಸ್ಕೃತ ಮಹಾಭಾರತದ ದ್ರೋಣಪರ್ವ, ಶಲ್ಯ ಪರ್ವ, ಕರ್ಣಪರ್ವ, ಸೌಪ್ತಿಕಪರ್ವ-ಇವುಗಳ ಭಾಗಗಳನ್ನು ಓದುತ್ತಿದ್ದೆ. ಅವರು ನಡುನಡುವೆ ಟಿಪ್ಪಣಿ ಮಾಡುವರು. ಗುರುತು ಮಾಡಿಟ್ಟುಕೊಳ್ಳುವರು. ಇದು ಅವರ ಪ್ರಸಿದ್ಧ ಕೃತಿಯಾದ ‘ಅಶ್ವತ್ಥಾಮನ್’ ನಾಟಕದ ರಚನೆಗೆ ಅವರು ಮಾಡಿಕೊಂಡ ಸಿದ್ಧತೆ.

ಅವರೂ ನಾನೂ ಸಂಗಡಿಗರಾಗಿ ವಾಕಿಂಗ್ ಹೋಗುತ್ತಿದ್ದೆವೆಂದು ಹೇಳಿದೆ. ಸಾಹಿತ್ಯ ಸಮ್ಮೇಳನಗಳಿಗೂ ನಾವು ಜೊತೆಯಲ್ಲಿ ಹೋಗುತ್ತಿದ್ದೆವು. ನಮ್ಮಿಬ್ಬರದೂ ಒಂದೇ ಕೋಣೆಯಲ್ಲಿ ಬಿಡಾರ. ನಡುರಾತ್ರಿಯ ಆಚೆನವರೆಗೂ ಮಾತುಕಥೆಗಳು. ಅದರಲ್ಲಿ ಬಹು ಭಾಗ ಸಾಹಿತ್ಯಕ್ಕೆ ಸೇರಿದ್ದು. ರಾಮಾಯಣ ಕವಿಯೂ ಹೋಮರ್ ಕವಿಯೂ ಒಬ್ಬರಿಂದೊಬ್ಬರು ಯಾಕೆ ವಿಷಯ ಕದ್ದಿರಬಾರದು? ಅವರಲ್ಲಿ ಕದ್ದವರು ಯಾರು? ಕೀಟ್ಸ್ ಕವಿಯು “Truth is Beauty” ಎಂದಾಗ ಅವನ ಮನಸ್ಸಿನಲ್ಲಿದ್ದದ್ದೇನು?

ಇಂಗ್ಲಿಷಿನ ‘Rare’ ಎಂಬುದಕ್ಕೆ ನಾವು ‘ವಿರಳ’ ಎಂದು ಪ್ರತಿಪದಮಾಡಿಕೊಳ್ಳಬೇಕೆ, ‘ಅಪರೂಪ’ ಎಂಬ ಮಾತನ್ನು ಉಳಿಸಬೇಕೆ? ಇಂಥ ಪ್ರಶ್ನೆಗಳು ಎಷ್ಟೋ ಬರುತ್ತಿದ್ದವು. ಎಷ್ಟೋ ಸಮಯಗಳಲ್ಲಿ ಹಾಸ್ಯಪ್ರಸಂಗಗಳೂ, ಆಭಾಸಪ್ರಸಂಗಗಳೂ ಬರುತ್ತಿದ್ದವು. ಅವರು ಸೂತ್ರಗಳನ್ನೂ ಧಾತುಪಾಠಗಳನ್ನೂ ಹೇಳುತ್ತಿದ್ದರು.

ಪುಂಡಾ ಮಾಮ

ನಮ್ಮ ಜನರಲ್ಲಿ ನಾಯಕಪೂಜೆಯ, ಗುರುಪೂಜೆಯ ಅವಾಂತರ ಹೆಚ್ಚು. ರಾಜಕೀಯದಲ್ಲಿ ಮುಖಂಡರಾದವರನ್ನೂ ಮತಾಚಾರದಲ್ಲಿ ಆಚಾರ್ಯಪಟ್ಟ ಹೊತ್ತವರನ್ನೂ ಗೌರವಿಸುವ ಅಭ್ಯಾಸ ಅತಿಯಾಗಿದೆ-ಎಂದರೆ, ಎಷ್ಟು ಇರುವುದು ಉಚಿತವೋ ಅಷ್ಟಕ್ಕಿಂತ ಬಹಳ ಹೆಚ್ಚಾಗಿದೆ. ಈ ನಾಯಕಪೂಜೆ ಹೆಚ್ಚಿದಷ್ಟೂ ಸ್ವತಂತ್ರ ವಿವೇಕ ಕಡಮೆಯಾಗುತ್ತದೆ. ಜನದಲ್ಲಿ ಭಕ್ತಿ, ಶ್ರದ್ಧೆಗಳ ಜೊತೆಗೆ ಸ್ವತಂತ್ರ ವಿಚಾರಪ್ರವೃತ್ತಿಯೂ ಬೆಳೆಯಬೇಕು. ಹೀಗೆಂಬ ಮಾತುಕಥೆ ನಡೆಯುತ್ತಿದ್ದಾಗ ಬಿ.ಎಂ. ಶ್ರೀಕಂಠಯ್ಯನವರು ತಮ್ಮ ಚಿಕ್ಕಂದಿನ ಒಂದು ಕಥೆಯನ್ನು ಹೇಳಿದರು.

ಅವರಿಗೆ ಎಂಟು ಹತ್ತು ವರ್ಷಗಳ ಬಾಲ್ಯ, ಅದೇ ವಯಸ್ಸಿನ ಹುಡುಗರು ನಾಲ್ಕೈದು ಜನ ಒಂದು ಗುಂಪು. ಆ ಗುಂಪಿಗೆ ಅವರಿಗಿಂತ ಒಂದೆರಡು ವರ್ಷ ದೊಡ್ಡವನಾದ ಹುಡುಗ ಒಬ್ಬ ಬಂದು ಸೇರಿದ. ಅವನು ಆಕಾರದಲ್ಲಿ ಮಿಕ್ಕವರಿಗಿಂತ ಉದ್ದವಾಗಿ ದಪ್ಪವಾಗಿದ್ದ, ನಡವಳಿಕೆಯಲ್ಲಿಯೂ ಸಾಹಸಿಯಾಗಿದ್ದ. ಅವನ ಗುಣಚೇಷ್ಟೆಗಳಿಗೆ ತಕ್ಕಂತೆ ಊರ ಜನ ಅವನಿಗೆ 'ಪುಂಡಾಮಾಮ' ಎಂದು ಹೆಸರಿಟ್ಟಿದ್ದರು. ಅವನ ನಿಜವಾದ ಹೆಸರು ಯಾರಿಗೂ ಗೊತ್ತಿರಲಿಲ್ಲ. ಶ್ರೀಕಂಠಯ್ಯನವರ ಬಾಲಗೋಷ್ಠಿಯು ಪುಂಡಾಮಾಮನನ್ನು ನಾಯಕನನ್ನಾಗಿ ಅಂಗೀಕರಿಸಿತು. ಅವರು ಎಲ್ಲಿ ಹೋದರೂ ಅವನೇ ಮುಂದಾಳು. ಏನು ಮಾಡಿದರೂ ಅವನೇ ಯಜಮಾನ.

ಹೀಗಿರುವಾಗ ಒಂದು ದಿನ ಆತ ತನ್ನ ಶಿಷ್ಯರನ್ನು ಕುರಿತು ಹೇಳಿದ:

"ಎಲೋ, ಈ ಹೊತ್ತು ದೇವರ ಪೂಜೆ ಮಾಡೋಣ."

"ಓಹೋ, ಮಾಡಬೇಕು ಸಾರ್, ನೀವೇ ನಮ್ಮ ದೇವರು."

ಆ ಏರ್ಪಾಟಿನ ವಿವರಗಳೆಲ್ಲ ತೀರ್ಮಾನವಾದ ಮೇಲೆ ಪುಂಡಾಮಾಮನೇ ದೇವರ ವಿಗ್ರಹವಾಗತಕ್ಕದ್ದೆಂದು ಗೊತ್ತಾಯಿತು. ಅದರ ಮೇರೆಗೆ ಅವರು ಶ್ರೀರಂಗಪಟ್ಟಣದ ಕೋಟೆಗಳ ಆವರಣದಲ್ಲಿ ಒಂದು ಜಾಗವನ್ನು ಪ್ರಶಸ್ತವೆಂದು ಗೊತ್ತುಮಾಡಿಕೊಂಡರು. ಅಲ್ಲಿ ಮಳೆಯಿಂದಲೋ ಏನೋ ಹಳ್ಳವಾಗಿದ್ದ ಜಾಗದಲ್ಲಿ ಕೊಂಚ ತೋಡಿ, ಆ ಹಳ್ಳದಲ್ಲಿ ಪುಂಡಾಮಾಮನನ್ನು ಕೂಡಿಸಿದರು. ಅನಂತರ ಅವನ ಸುತ್ತ ಮಣ್ಣು ತುಂಬಿ ಹಳ್ಳವನ್ನು ಭರ್ತಿಮಾಡಿ ನೆಲಸಮಕ್ಕೆ ತಂದರು. ಪುಂಡಾಮಾಮನ ಮುಖ ಮಾತ್ರ ಮೇಲ್ಗಡೆಗೆ

ಕಾಣುತ್ತಿತ್ತು. ಕೊರಳವರೆಗೂ ಮಣ್ಣು ಭರ್ತಿ. ಹೀಗೆ ಮಾಡಿದ ಮೇಲೆ ದೇವರಪೂಜೆಗಾಗಿ ಹೂವು ಹಣ್ಣು ಕಾಯಿಗಳನ್ನು ತರಬೇಕೆಂದು ಬಾಲಭಕ್ತರು ಪೇಟೆಗೆ ಹೊರಟುಹೋದರು. ಪುಂಡಾಮಾಮನು ಕಣ್ಣುಬಿಟ್ಟುಕೊಂಡು ಗುಣಿಯಲ್ಲಿ ಉಳಿದ.

ಅಷ್ಟು ಹೊತ್ತಿಗೆ ಒಂಭತ್ತೂವರೆ-ಹತ್ತು ಘಂಟೆ. ಕೋರ್ಟಿನ ಕಕ್ಷಿಗಾರರೂ ಉದ್ಯೋಗಸ್ಥರೂ ಬರಲಾರಂಭವಾಯಿತು. ಅವರ ಪೈಕಿ ಯಾರೋ ಒಬ್ಬರು ಪುಂಡಾಮಾಮನ ರುಂಡವನ್ನು ನೋಡಿ ಭಯಪಟ್ಟರು. ಹತ್ತಿರ ಹೋಗಿ ನೋಡಿದರು. ಕಣ್ಣು ರೆಪ್ಪೆಯಾಡಿಸುವುದು ಕಷ್ಟವಾಗಿತ್ತು, ಉಸಿರಾಡುವುದೂ ಕಷ್ಟವಾಗಿತ್ತು. ನೋಡಿದ ಮನುಷ್ಯ ಅದು ಏನೆಂದು ಅರ್ಥವಾಗದೆ ತನ್ನ ಸ್ನೇಹಿತನನ್ನು ಕರೆದ. ಅವರೆಲ್ಲ ಸೇರಿ ಇದನ್ನು ಪರೀಕ್ಷೆ ಮಾಡಬೇಕೆಂದು ಪುಂಡಾಮಾಮನ ಸುತ್ತ ಇದ್ದ ಮಣ್ಣನ್ನು ಅಗೆದರು. ಅವನ ಮೈಯನ್ನು ನೋಡಿದರು. "ಯಾರೋ ಸಣ್ಣ ಹುಡುಗ. ಇವನಿಗೆ ಯಾರೋ ಏನೋ ಮಾಡಿರಬೇಕು" ಎಂದುಕೊಂಡು ಡಾಕ್ಟರನ್ನು ಅಲ್ಲಿಗೆ ಕರೆತಂದರು. ಡಾಕ್ಟರು ಪುಂಡಾಮಾಮನನ್ನು ಮರದ ನೆರಳಿನಲ್ಲಿ ಮಲಗಿಸಿ ಶ್ವಾಸ ಭರ್ತಿಮಾಡುತ್ತಿದ್ದರು.

ಈ ವೇಳೆಗೆ ಬಾಲ ಶಿಷ್ಯರು ಹೂವು ಹಣ್ಣುಗಳ ಸಮೇತ ಅಲ್ಲಿಗೆ ಬಂದರು. ತಮ್ಮ ಗುರುವಿನ ಸ್ಥಿತಿಯನ್ನು ನೋಡಿ ಅಳುವುದಕ್ಕೆ ಮೊದಲುಮಾಡಿದರು. ಅಲ್ಲಿದ್ದ ಜನ ತಮ್ಮ ಗುರುವನ್ನು ಹೀಗೆ ಮಾಡಿದರೆಂದು ದೂರಿಟ್ಟು ಗೋಳಾಡಿದರು.

ಆಗ ಆ ಜನ ಏನು ಮಾಡಬೇಕು? ಹುಡುಗರನ್ನು ಸಮಾಧಾನಪಡಿಸುವುದೇ? ಅಥವಾ ಪುಂಡಾಮಾಮನ ಉಪಚಾರವನ್ನು ನೋಡಿಕೊಳ್ಳುವುದೇ?

ಈ ಎರಡು ರಂಪುಗಳ ಮಧ್ಯೆ ಜನ ತಬ್ಬಿಬ್ಬಾಗಿ ನಿಂತರು. ಆಗ ಡಾಕ್ಟರವರ ಸಾಮರ್ಥ್ಯ ಎಲ್ಲರನ್ನೂ ಸಮಾಧಾನಕ್ಕೆ ತಂದಿತು. ಪುಂಡಾಮಾಮ ಚೇತರಿಸಿಕೊಂಡ. ಹುಡುಗರು ಸಂತೋಷಪಟ್ಟು ತಾವು ತಂದಿದ್ದ ಹಣ್ಣುಗಳನ್ನು ತಾವೇ ತಿಂದರು. ಜನ ನಗುತ್ತಾ ಅವರವರ ಕೆಲಸಕ್ಕೆ ಹೋದರು. ಇದು ಶ್ರೀಕಂಠಯ್ಯನವರೇ ನನಗೆ ಹೇಳಿದ ಕಥೆ.

‘ಇಂಗ್ಲಿಷ್ ಗೀತಗಳು’

ಶ್ರೀಕಂಠಯ್ಯನವರ ಇಂಗ್ಲಿಷ್ ಗೀತಗಳಲ್ಲಿಯ ಕೆಲವು ಕವನಗಳು ಮೊದಲು ‘ಕರ್ಣಾಟಕ ಗ್ರಂಥಮಾಲೆ’ ಎಂಬ ಮಾಸಪತ್ರಿಕೆಯಲ್ಲಿ ಆಗಾಗ ಪ್ರಕಟವಾಗಿದ್ದವು. ಎನ್.ಎಸ್. ಸುಬ್ಬರಾಯರವರು ಅವುಗಳನ್ನು ನೋಡಿ ಮೆಚ್ಚಿಕೊಂಡು ನಮಗೆ ಹೇಳಿದರು. ಅವರು ಆ ಕವನಗಳನ್ನು ಸಂಗ್ರಹ ಮಾಡಿಟ್ಟು ಅಂದವಾಗಿ ಚಿನ್ನದ ಗಿಲ್ಟ್ ತಲೆಬರಹ ಹಾಕಿಸಿ ಬೈಂಡು ಮಾಡಿಸಿಟ್ಟುಕೊಂಡಿದ್ದರು. ಬೈಂಡಿನ ಮೇಲೆ ಸುಂದರವಾದ ಚಿನ್ನದ ಬಣ್ಣದ ಅಕ್ಷರಗಳಲ್ಲಿ ಹೆಸರು ಬರೆಯಿಸಿದ್ದರು. ಅದನ್ನು ನೋಡಿ ನನಗೆ ತುಂಬಾ ಹಿಗ್ಗಾಯಿತು.

ಕರ್ಣಾಟಕ ಗ್ರಂಥಮಾಲೆಯ ಸಂಪಾದಕರಾದ ಬಾಪು ಸುಬ್ಬರಾಯರನ್ನು ನಾನು ಕಂಡು ನನಗೆ ಒಂದು ಸೆಟ್ ಅನುಗ್ರಹಿಸಬೇಕೆಂದು ಬೇಡಿದೆ. ಬಾಪು ಸುಬ್ಬರಾಯರು ಮಹಾರಾಜ ಕಾಲೇಜಿನ ಹೈಸ್ಕೂಲ್ ತರಗತಿಯಲ್ಲಿ ನನಗೆ ಉಪಾಧ್ಯಾಯರಾಗಿದ್ದರು. ಆದರೆ ಅವರಿಗೆ ನನ್ನಲ್ಲಿದ್ದ ಅಭಿಮಾನ ನನ್ನ ವಿದ್ಯಾರ್ಥಿತ್ವದಿಂದುಂಟಾದದ್ದಲ್ಲ. ಅವರು ನೈಜವಾಗಿ ಮೃದುಹೃದಯಿಗಳು, ವಿಶ್ವಾಸಪರರು. ಅವರು ದಯಮಾಡಿ ನನಗೆ ‘ವಿದ್ಯಾದಾಯಿನಿ’ ಪತ್ರಿಕೆಯ ಸಮಗ್ರ ಸಂಪುಟಗಳನ್ನೂ ‘ಕರ್ಣಾಟಕ ಗ್ರಂಥಮಾಲೆ’ ಯ ಸಮಗ್ರ ಸಂಪುಟಗಳನ್ನೂ ಕೊಟ್ಟರು. ನಾನೂ ಅವನ್ನೆಲ್ಲ ಬೈಂಡುಮಾಡಿಸಿಟ್ಟುಕೊಂಡಿದ್ದೆ. ಆದರೆ ಆ ಕಾಲದಲ್ಲಿ ಬಿ.ಎಂ. ಶ್ರೀಕಂಠಯ್ಯನವರ ಇಂಗ್ಲಿಷ್ ಗೀತಗಳ ಪ್ರಭಾವ ಎಷ್ಟು ದೂರ ಹೋದೀತೆಂಬುದರ ಕಲ್ಪನೆ ನನಗೆ ಬಂದಿರಲಿಲ್ಲ. ಅದು ಒಂದು ಒಳ್ಳೆಯ ಎಕ್ಸ್‌ಪೆರಿಮೆಂಟ್ (ಪ್ರಯೋಗ ಪರೀಕ್ಷೆ) ಎಂದು ಭಾವಿಸಿದ್ದೆ.

ಇಂಗ್ಲಿಷ್ ಗೀತಗಳನ್ನು ಸಮಗ್ರ ಆಕಾರದಲ್ಲಿ ಮೊದಲು ಪ್ರಕಟಮಾಡಿದ ಕೀರ್ತಿ ಬೆಂಗಳೂರು ಕರ್ಣಾಟಕ ಸಂಘದ್ದು. ಅದು ಮುಖ್ಯವಾಗಿ ವೆಂಕಣ್ಣಯ್ಯ, ಕೃಷ್ಣಶಾಸ್ತ್ರಿ-ಇವರಿಬ್ಬರ ಕೆಲಸ. ಅವರಿಬ್ಬರೂ ಶ್ರೀಕಂಠಯ್ಯನವರ ಶಿಷ್ಯರು. ಇಬ್ಬರೂ ಸಾಹಿತ್ಯ ನಿಷ್ಣಾತರಾಗಿದ್ದದ್ದರಿಂದ ಇಂಗ್ಲಿಷ್ ಗೀತಗಳ ಮೌಲ್ಯವು ಸಾಹಿತ್ಯದೃಷ್ಟಿಯಿಂದ ಉತ್ಕೃಷ್ಟವಾದದ್ದೆಂದು ಅವರು ಉತ್ಸಾಹಪಟ್ಟು ಗುರುಗಳ ಒಪ್ಪಿಕೆಯನ್ನು ಪಡೆದರು. ಪುಸ್ತಕ ಮುದ್ರಿತವಾಗಿ ಬಂದಮೇಲೆ ಸೆಂಟ್ರಲ್ ಕಾಲೇಜಿನಲ್ಲಿ ಒಂದು ಸಂತೋಷಕೂಟವನ್ನು ಏರ್ಪಡಿಸಿದ್ದರು. ನಾನು ಅದಕ್ಕೆ ಹೋಗಿದ್ದೆ. ಆ ಸಮಾರಂಭ ಸೆಂಟ್ರಲ್ ಕಾಲೇಜಿನ ಎದುರಿನ ಡಿಸ್ಟ್ರಿಕ್ಟ್ ಆಫೀಸ್ ಆವರಣದಲ್ಲಿರುವ ಹೊಸ ಕಟ್ಟಡದ ಮಹಡಿಯ ಮೇಲೆ ಎಂದು ನನ್ನ ಜ್ಞಾಪಕ. ಆಹೊತ್ತಿನ ತಿಂಡಿಗಳು ಕೃಷ್ಣಶಾಸ್ತ್ರಿಗಳ ದರ್ಜೆಯನ್ನೂ

ಮೀರಿಸುವಂತಿದ್ದವು. ಹಣ್ಣುಗಳು, ಕಾಫಿ, ಲೆಮನೇಡ್-ಎಲ್ಲ ಇದ್ದವು. ಸಭಿಕರು ಕೋರಿದಂತೆ ಶ್ರೀಕಂಠಯ್ಯನವರು ಕೆಲವು ಗೀತಗಳನ್ನು ಓದಿದರು.

ಬೇಟಕಾರ ಬಂದ ಮಾದ
ಹಹ್ಹ! ಏನು ಬೇಟವೊ!

(ಬೇಟ ಎಂದರೆ ಪ್ರಣಯ.) ಇದನ್ನು ಓದಿದಾಗ ನಾನು ಒಂದು ಬಗೆಯಾಗಿ ಕಣ್ಣು ಮೊನಚುಮಾಡಿ ಶ್ರೀಕಂಠಯ್ಯನವರ ಕಡೆ ನೋಡಿದೆ. ಅವರು ನನ್ನ ಕಡೆ ನೋಡಿ ನಕ್ಕು "ಇದರಲ್ಲಿ ಸ್ವಾನುಭವವೇನೂ ಇಲ್ಲ" ಎಂದರು. ನಾನು "ಹಾಗಾದರೆ ನಿಮಗೆ ಯಾಕೆ ಉಳುಕು?" ಎಂದೆ. ಆ ಹೊತ್ತು ನಗುವೇ ನಮ್ಮ ಭಾಷೆ.

ಅದಾದ ಮೇಲೆ ನಾನು ಮೆಲ್ಲಗೆ

ಊಟಗಾರ ಗುಂಡ ಬಂದ
ಆಹಾ ಏನು ಊಟವೋ।

-ಇಂಥ ಮೂರು ನಾಲ್ಕು ಪಂಕ್ತಿಗಳನ್ನು ಸೇರಿಸಿದೆ. ಅವರಿಗೆ ಕೊಂಚ ಕೋಪ ಬಂತು.

"ಹೀಗೆ ಅಣಕಿಸುವುದಕ್ಕೆ ಶುರುಮಾಡಿದರೆ ನೀವು ಯಾವುದನ್ನು ಬಿಡುತ್ತೀರಿ? What is safe?"

"ಹಾಗಲ್ಲ ಸಾರ್. ಕನ್ನಡದಲ್ಲಿ ಪ್ರಾಸಸಂಪತ್ತು ಎಷ್ಟು ಹುಲುಸಾಗಿದೆ ಎಂಬುದನ್ನು ತೋರಿಸುವುದಕ್ಕೆ ಹೊರಟೆ."

ಅವರೂ ನಕ್ಕನು.

'ಹುಲುಸು' ಎಂಬುದು ಶ್ರೀಕಂಠಯ್ಯನವರಿಗೆ ಪದೇ ಪದೇ ಬರುತ್ತಿದ್ದ ಮಾತು.

ಇಂಗ್ಲಿಷ್ ಗೀತಗಳ ಮುಖಪತ್ರದ ಮೇಲೆ "ಬೆಳೆಯೇನೋ ಬೇಕಾದ ಹಾಗಿದೆ. ಕುಯ್ಯುವವರು ಕಡಿಮೆ" ಎಂಬ ಮಾತುಗಳಿಂದ ಒಂದು ಬೈಬಲಿನ ಸೂಕ್ತಿಯನ್ನು ಕೊಟ್ಟಿದ್ದರು. ಇದನ್ನು 'ಕೊರವಂಜಿ' ಮಹಾಶಯರು "ಕೊರಳೇನೋ ಉದ್ದವಾಗಿದೆ, ಕುಯ್ಯುವವರು ಕಡಿಮೆ" ಎಂದು ಅಣಕಿಸಿದರು.

ಮೇಲಿನ ನನ್ನ ಅಣಕದಿಂದ ಇನ್ನೂ ಹೆಚ್ಚು ಕೋಪಗೊಂಡವರು ವೆಂಕಣ್ಣಯ್ಯ. ಅವರ ಗುರುಭಕ್ತಿ ಮಿತಿಯಿಲ್ಲದ್ದು. ಅವರನ್ನು ಸಮಜಾಯಿಷಿ ಮಾಡುವುದು ನನಗೆ ಅಸಾಧ್ಯವಾದ ಕೆಲಸವಾಗಿರಲಿಲ್ಲ.

ಬಿ.ಎಂ. ಶ್ರೀಕಂಠಯ್ಯನವರ ಇಂಗ್ಲಿಷ್ ಗೀತಗಳ ಪೀಠಿಕೆ ('ಕಾಣಿಕೆ')ಯಲ್ಲಿ

ಹೀಗೆ ನನಗೆ ಹಬ್ಬವಾಗಿ,
ಇನಿಯರಿಬ್ಬರನ್ನು ತೂಗಿ,
ಇವಳ ಸೊಬಗನವಳು ತೊಟ್ಟು ನೋಡಬಯಸಿದೆ;
ಅವಳ ತೊಡಿಗೆ ಇವಳಿಗಿಟ್ಟು ಹಾಡ ಬಯಸಿದೆ.

-ಎಂದಿತ್ತಷ್ಟೆ? ಇದನ್ನು ಕುರಿತು ನಾನು "ಇದು ಬಹಳ ಚೆನ್ನಾಗಿದೆ ಸಾರ್, ಒಳ್ಳೆಯ ಏರ್ಪಾಟು. ನಮ್ಮ ಜನದ ಟೇಸ್ಟ್ (ಅಭಿರುಚಿ) ತಿದ್ದಬೇಕು ಸಾರ್" -ಎಂದೆ. ಅವರು "ಏನು, ಕುಚೋದ್ಯ ಮಾಡುತ್ತೀರೇನಪ್ಪ?" ಎಂದು ಮುನಿಸಿದ ಧ್ವನಿಯಲ್ಲಿ ಕೇಳಿದರು. ನಾನು: "ಉಂಟೆ? ವಿಷಯ ಚೆನ್ನಾಗಿ ಗೊತ್ತುಮಾಡಿಕೊಳ್ಳೋಣವೆಂದು ಕೇಳಿದೆ. ನೀವು ಉಡಿಸಿದ್ದಕ್ಕೆ ಅವರು ಒಪ್ಪಿಕೊಂಡರೋ?" ಶ್ರೀ: "ಒಪ್ಪಿಕೊಳ್ಳದೆ ಏನು ಮಾಡುತ್ತಾರೆ?"

ನಾನು ಹೇಳಿದೆ: "ಅದು ಹೇಗೆ ಹೇಳುವುದು ಸಾರ್? ಮುಖ ಗಂಟಿಕ್ಕಿ ಬುಸುಗುಟ್ಟುತ್ತಾ ನಿಂತರೆ ನೋಡುವುದಕ್ಕಾಗುತ್ತದೆಯೆ? ನಮ್ಮ ಸ್ನೇಹಿತರು ಶ್ರೀ ಅಬಕಡರಾಯರು ತಮ್ಮ ಹೆಂಡತಿಗೆ ಪರಂಗಿ ಫ್ಯಾಷನ್ನಿನ ಎತ್ತು ಹಿಮ್ಮಡಿ (High-heeled shoes) ಜೋಡನ್ನು ತೊಡಿಸಿ ಡಾಗ್‌ಕಾರ್ಟ್ ಬಂಡಿಯಲ್ಲಿ ಕರೆತಂದು ಲಾಲ್‌ಬಾಗಿನ ಗ್ಲ್ಯಾಸ್ ಹೌಸಿನ ಮುಂದೆ ಇಳಿಸಿ ಅಲ್ಲಿ ನಡೆದಾಡಬೇಕೆಂದರು. ಆಕೆ 'ನಾನು ಹಳೆಯ ಕಾಲದವಳು, ಇದೆಲ್ಲ ನನ್ನಿಂದ ಆಗತಕ್ಕದ್ದಲ್ಲ. ಇದಕ್ಕೆಲ್ಲ ಬೇಕಾದರೆ ಹೊಸದೊಂದನ್ನು ಮಾಡಿಕೊಳ್ಳಿ' -ಎಂದುಬಿಟ್ಟಳು. ನಾವು ಮೂರು ನಾಲ್ಕು ಮಂದಿ ಸ್ನೇಹಿತರು ಅಲ್ಲಿ ಬೆಂಚಿನ ಮೇಲೆ ಕುಳಿತಿದ್ದೆವು. ನಮಗೆ ಆ ಸಂಭಾಷಣೆ ಕೊಂಚ ಕೊಂಚ ಕೇಳಿಸಿತು. ಆಮೇಲೆ ನಾನು ಅಬಕಡನನ್ನು ಕರೆದು "ಏನೋ ಬೆಪ್ಪುತಕ್ಕಡಿ, ನಿನಗೇಕೋ ಈ ಚೇಷ್ಟೆಯೆಲ್ಲ?" ಎಂದು ಕೇಳಿದೆ. ಆತನೂ ನಕ್ಕುಬಿಟ್ಟ. ಹೀಗೆ ಹೆಂಗಸರು ಮುನಿದರೆ ತಮ್ಮ ಉಪಾಯವೇನೊ, ಅಪ್ಪಣೆಯಾಗಬೇಕು."

ನಗುವಿನಲ್ಲಿ ಸಂಭಾಷಣೆ ಪರ್ಯವಸಾನವಾಯಿತು.

ಹಾಸ್ಯಪ್ರಸಂಗಗಳು

ಬಿ.ಎಂ. ಶ್ರೀಕಂಠಯ್ಯನವರಿಗೂ ನನಗೂ ನಡೆಯುತ್ತಿದ್ದ ಹಾಸ್ಯಪ್ರಸಂಗಗಳಲ್ಲಿ ಒಂದು ಅವರ ಕುಲಪ್ರಭೇದದ ಹೆಸರನ್ನು ಕುರಿತದ್ದು. ಅವರು ಬಬ್ಬೂರಕಮ್ಮೆಗಳು.

ನಾನು 'ಬಬ್ಬೂರ್' ಎಂಬ ಶಬ್ದ ಮೂಲದಲ್ಲಿ 'ಬರ್ಬರ' ; ಬರ್ಬರರು, ಯವನರು, ಮ್ಲೇಚ್ಛರು-ಇವರೆಲ್ಲ, ಕಾಮಧೇನು ವಿಶ್ವಾಮಿತ್ರರ ಮೇಲೆ ಆಗ್ರಹಮಾಡಿ ಮೈ ಕೊಡಹಿದಾಗ ಅದರ ಪುಚ್ಛಸ್ಥಾನದಿಂದ ಹುಟ್ಟಿದವರು. ಪುಚ್ಛಸ್ಥಾನದಿಂದ ಬರಬರ ಶಬ್ದ ಹೊರಟಿತು. ಆದದ್ದರಿಂದ ಅವರು ಬರ್ಬರರೆನಿಸಿಕೊಂಡರು. ಬ್ರಾಹ್ಮಣ ಶಬ್ದವೂ ಹಾಗೆಯೇ ಎನ್ನುವವರುಂಟು. ನಂದಿಕೇಶ್ವರನು ಬರ್ ಎಂದು ಶಬ್ದ ಮಾಡಿದನಂತೆ. ಭೃಂಗಿಯು ಮಣ ಮಣ ಶಬ್ದ ಮಾಡಿದನಂತೆ. ಹಾಗೆ ಬ್ರಾಮಣ ಶಬ್ದ ಹುಟ್ಟಿತು. ಇದೇ ಹೋಲಿಕೆಯ ಮೇಲೆ ಬರ್ಬರ ಶಬ್ದ ಹುಟ್ಟಿತು.

ಬರ್ಬರ ಎಂದರೆ ವಾಯು. ಏಕೆಂದರೆ ಅದು ಭರ್ರೆಂದು ಬೀಸುತ್ತದೆ. ಹೀಗೆ ವಾಯುವಿನಿಂದ ಉತ್ಪನ್ನವಾದ ಶಬ್ದಕ್ಕೆ ಪ್ರತೀಕವಾಗಿ ಬರ್ಬರಧಾನ್ಯವಿರುತ್ತದೆ. ಅದನ್ನೇ ನಿಷ್ಪಾವಕ ಎಂದೂ ಹೇಳುತ್ತಾರೆ. ಎಂದರೆ ಜೋರಾಗಿ ಬೀಸುವುದು-ಎಂದರ್ಥ, ಬರ್ಬರಧಾನ್ಯವಾದರೋ ಅಂಗಾರಕ ಗ್ರಹಕ್ಕೆ ಪ್ರಿಯವಾದದ್ದು.

> ಬರ್ಬರಾಸ್ಸರ್ವಜಂತೂನಾಂ ಬಲಪುಷ್ಟಿವಿವರ್ಧನಮ್ ॥

ಅಂಗಾರಕನಾದರೋ ಕ್ಷೌರಕನಿಗೆ ಅಭಿಮಾನದೇವತೆ. ಈ ಕಾರಣದಿಂದಲೇ ಇಂಗ್ಲಿಷಿನಲ್ಲಿ ಅವನನ್ನು ಬಾರ್ಬರ್ ಎಂದು ಕರೆಯುವುದು.

ಹೀಗೆ ಬಬ್ಬೂರಕಮ್ಮೆಗಳ ಆನುಪೂರ್ವಿ-ಎಂದು ನಾನು ಅಸಂಬದ್ಧವಾಗಿ ಪ್ರತಿಪಾದನೆ ಮಾಡೋಣ; ಶ್ರೀಕಂಠಯ್ಯನವರು "ಏನಪ್ಪಾ-ನಮ್ಮನ್ನು ಅಲ್ಲಿಗಿಳಿಸಿಬಿಟ್ಟಿದ್ದೀರಿ" ಎಂದೂ "ಒಳ್ಳೆಯ ಫೈಲಾಲಜಿ ನಿಮ್ಮದು" ಎಂದೂ ಹೇಳಿ ನಗುತ್ತಿದ್ದರು.

ಒಂದು ದಿನ ಸೆನೇಟ್ ಸಭೆ ನಡೆಯುತ್ತಿದೆ. ವ್ರಜೇಂದ್ರನಾಥ ಸೀಲ್‌ರವರು ವೈಸ್‌ಚಾನ್ಸೆಲರು, ಮತ್ತು ಸಭಾಧ್ಯಕ್ಷರು. ಅವರ ಪಕ್ಕದಲ್ಲಿ ಶ್ರೀಕಂಠಯ್ಯನವರು ರಿಜಿಸ್ಟ್ರಾರರಾಗಿ ಗಂಭೀರಮುದ್ರೆಯಿಂದ ಕುಳಿತಿದ್ದಾರೆ. ಸಭಿಕರೊಬ್ಬರು ಕಟುಕಟುವಾದ ಪ್ರಶ್ನೆಗಳನ್ನು ಹಾಕುತ್ತಿದ್ದಾರೆ-ಒಬ್ಬಿಬ್ಬರು ದೊಡ್ಡ ಮನುಷ್ಯರನ್ನು ಕುರಿತು. ನನಗೆ ಆ ಪ್ರಶ್ನೆಗಳ ಧ್ವನಿ ನ್ಯಾಯವೆನ್ನಿಸಲಿಲ್ಲ. ಒಂದು ಸಣ್ಣ ಚೀಟಿಯಲ್ಲಿ ಒಂದೆರಡು ಪಂಕ್ತಿ ಬರೆದು ಅದನ್ನು

ಲಕ್ಕೋಟೆಯಲ್ಲಿ ಭದ್ರಪಡಿಸಿ ಆಳಿನ ಕೈಯಿಂದ ಶ್ರೀಕಂಠಯ್ಯನವರಿಗೆ ಕಳಿಸಿದೆ. ಅವರು ಲಕ್ಕೋಟೆಯೊಡೆದು ನೋಡಿಕೊಂಡರು. ಮುಖ ಅರಳಿತು. ನನ್ನ ಕಡೆ ನೋಡಿ ಕೈಸನ್ನೆಮಾಡಿದರು. ನಾನು ಎದ್ದು ಹಿಂದುಗಡೆಯ ಕೋಣೆಗೆ ಹೋದೆ. ಅವರೂ ಅಲ್ಲಿಗೆ ಬಂದರು. ನನ್ನ ಚೀಟಿಯನ್ನು ನನಗೆ ತೋರಿಸಿ "ತೋಡಿ ರಾಗದಲ್ಲಿ ಹಾಡತಕ್ಕದ್ದು ಎಂದು ನೇಮಕ ಮಾಡಿದ್ದೀರಲ್ಲಾ-ನನಗೆ ತೋಡಿ ರಾಗ ಬರುವುದಿಲ್ಲ. ಕೊಂಚ ಅಪ್ಪಣೆಯಾಗಲಿ" ನಗುನಗುತ್ತಾ ಕೇಳಿದರು. ನಾನು ಬರೆದಿದ್ದದ್ದು ಹೀಗಿತ್ತು:

ಗೋಳಂ ಪೊಯ್ಕೊಳ್ಳುವನೀ ।
...ಳೆಯಮಗನೇತಕಿಂತು ಸುಜನರನಕಟಾ ॥
ಕೋಳಿಯ ಕೂಗೇಂ ಗ್ರಂಥಂ
ಬೋಳಿಯ ತಲೆಯೊಂದು ರಾತ್ರಿಯೊಳ್ ತುರುಬಹುದೇಂ ॥

ಇದನ್ನು ಕೇಳಿ ಹೊರಟ ನಗು ಸಭಿಕರಲ್ಲಿ ಕೆಲವರ ಕಿವಿಯನ್ನು ಮುಟ್ಟಿತು. ಅವರೂ ಬಂದು ನಮ್ಮ ನಗುವಿನಲ್ಲಿ ಕಲೆತರು.

ತಕರಾರುಗಳು

ಬಿ.ಎಂ. ಶ್ರೀಕಂಠಯ್ಯನವರಿಗೂ ನನಗೂ ಅಭಿಪ್ರಾಯಭೇದ ಅಪರೂಪವೇನೂ ಅಲ್ಲ. ಎಷ್ಟೋ ವಿಷಯಗಳಲ್ಲಿ ತಕರಾರುಗಳು. ವ್ಯಾಕರಣ ವಿಷಯದಲ್ಲಿ, ಶಬ್ದ ಸೌಷ್ಠವದ ವಿಷಯದಲ್ಲಿ, ಅಕ್ಷರಪರಿಷ್ಕರಣದ ವಿಷಯದಲ್ಲಿ, ಅನ್ಯಭಾಷಾಸ್ವೀಕಾರ ವಿಷಯದಲ್ಲಿ, ಸಾಹಿತ್ಯದಲ್ಲಿ ಮೌಲ್ಯ ತಾರತಮ್ಯ ವಿಷಯದಲ್ಲಿ ಚರ್ಚೆಗಳು ಬರುತ್ತಿದ್ದವು. ಪರಿಷತ್ತಿನ ಸಮ್ಮೇಳನಕ್ಕೆ ಹೋದಾಗಲೋ ಬೇರೆ ಯಾವ ಸಂದರ್ಭದಲ್ಲಿಯೋ ನಾವಿಬ್ಬರು ಒಂದು ಘಂಟೆಯ ಕಾಲ ಕುಳಿತು ಮಾತನಾಡುವ ಅವಕಾಶ ದೊರೆತಾಗ ಯಾವುದೋ ಒಂದು ಚರ್ಚಾಘಟ್ಟ ತಲೆಯೆತ್ತುತ್ತಿತ್ತು. ಸಮ್ಮೇಳನಗಳಿಗೆ ಹೋದಾಗ ನಾವಿಬ್ಬರೂ ಬಹುಮಟ್ಟಿಗೆ ಒಂದೇ ಕೋಣೆಯಲ್ಲಿ ಬಿಡಾರ ಮಾಡುತ್ತಿದ್ದೆವಷ್ಟೆ. ಅದರಲ್ಲಿ ಕಾದಾಟದ ಆಕರ್ಷಣೆಯೂ ಒಂದು. ರಾತ್ರಿ ಹನ್ನೆರಡು-ಒಂದು ಘಂಟೆಯವರೆಗೂ ನಡೆಯುತ್ತಿತ್ತು ಚರ್ಚೆ.

“ರಾಮಾಯಣದ ಕವಿಯು ಇಲಿಯಡ್‌ನಿಂದ ಕದ್ದಿಲ್ಲವೆಂದು ಹೇಗೆ ಖಂಡಿತಪಡಿಸುತ್ತೀರಿ?”

“ಹೋಮರ್ ಕವಿಯು ರಾಮಾಯಣದಿಂದ ಪ್ರಭಾವಿತನಾಗಿಲ್ಲವೆಂದು ನೀವು ಹೇಗೆ ಸಿದ್ಧಾಂತಮಾಡುತ್ತೀರಿ?”

“ಏಜಾಕ್ಸನನ್ನು ಅಶ್ವತ್ಥಾಮನನ್ನಾಗಿ ಏಕೆ ಪರಿವರ್ತಿಸಬೇಕು? ಏಜಾಕ್ಸ್ ಆಗಿಯೇ ಏಕೆ ಉಳಿಯಬಾರದು?”

“ಪ್ರೊಮೀಥಿಯಸ್ಸನನ್ನು ಮಾತರಿಶ್ವನೆಂದು ಏಕೆ ಹೇಳಬೇಕು? ಉಷರ್ಬುಧನೆಂದು ಏಕೆ ಕರೆಯಬಾರದು?”

-ಇಂಥವು ಪ್ರಶ್ನೆಗಳು: ಮುರಿದದ್ದಲ್ಲ ಹರಿದದ್ದಲ್ಲ ವಾಗ್ವಾದ. “ಇವಳ ತೊಡಿಗೆಯವಳಿಗುಡಿಸಿ” ನೋಡುವ ಪ್ರಕರಣಗಳು. ಅದರಲ್ಲಿ ಉಪಕಥೆಗಳೂ ಕುಚೋದ್ಯಗಳೂ ಬರುತ್ತಿದ್ದವು.

ಕೆಲವು ಪದಪ್ರಯೋಗಗಳು

ಬಿ.ಎಂ. ಶ್ರೀಕಂಠಯ್ಯನವರಿಗೂ ನನಗೂ ನಡೆದ ತರ್ಕ ಪ್ರಸಂಗಗಳಲ್ಲಿ ನನ್ನ ದೃಷ್ಟಿಯಿಂದ ಅತಿ ಮುಖ್ಯವಾದದ್ದು ಕನ್ನಡ ವ್ಯಾಕರಣವನ್ನು ಕುರಿತದ್ದು. ನಾವಿಬ್ಬರೂ ಬಹು ಚರ್ಚೆಮಾಡಿ ಒಟ್ಟಿಗೆ ಒಂದು ನಿರ್ಧಾರಕ್ಕೆ ಬಂದೆವು.

1. ನಡಸು, ನಡೆಸು, ನಡೆಯಿಸು, ನಡಿಸು ಇತ್ಯಾದ್ಯನೇಕ ರೂಪಗಳಲ್ಲಿ ನಾವಿಬ್ಬರೂ 'ನಡಸು' ಎಂಬ ರೂಪವನ್ನೇ ಬಳಸತಕ್ಕದ್ದು ಮಿಕ್ಕ ಪ್ರಯೋಗಗಳು ತಪ್ಪೆಂದಲ್ಲ. ಕೆಲವು ಕಾರಣಗಳಿಂದ 'ನಡಸು' ಅನುಕೂಲ.
2. ಹಾಗೆಯೇ ಬರೆಯಿಸು, ಬರಿಸು, ಬರೆಸು ಮೊದಲಾದ ರೂಪಗಳಲ್ಲಿ ನಾವು 'ಬರಸು' ಎಂಬುದನ್ನೇ ಬಳಸತಕ್ಕದ್ದು. ಇದು ಅನುಕೂಲದೃಷ್ಟಿಯಿಂದ.
3. 'ಕಡಮೆ' ಎಂಬ ರೂಪವನ್ನೇ ಬಳಸತಕ್ಕದ್ದು. ಕಡಿಮೆ ಎಂಬ ರೂಪಕ್ಕೆ ಸಮರ್ಥನೆ ಹೇಳಬಹುದು. ಆದರೆ ಕಡಮೆ ('ಕಡ' ಎಂಬುದರಿಂದ)ಹೆಚ್ಚು ಅನುಕೂಲ.
4. ಇಂಗ್ಲಿಷ್ ಭಾಷೆಯ ಪದಗಳನ್ನು ಉರ್ದು ಮೊದಲಾದ ಪದಗಳನ್ನು ಉಪಯೋಗಿಸುವಂತೆ ನಿರಾತಂಕವಾಗಿ ಉಪಯೋಗಿಸಬಹುದು.
5. ಇಂಗ್ಲಿಷಿನಿಂದ ಬಂದ ಪಾರಿಭಾಷಿಕ (ಟೆಕ್ನಿಕಲ್) ಪದಗಳನ್ನು ಹಾಗೆಹಾಗೆಯೇ-ಅವು ಸಂಕೇತನಾಮಗಳಾಗಿದ್ದರೆ ಹೇಗೋ ಹಾಗೆ-ಬಳಸಬಹುದು. ಕೋರ್ಟು ಎಂಬುದಕ್ಕೆ ಕೋರ್ಟು; ಎಲೆಕ್ಟ್ರಿಸಿಟಿ ಎಂಬುದಕ್ಕೆ ಎಲೆಕ್ಟ್ರಿಸಿಟಿ; ಹೆಲಿಕಾಪ್ಟರ್ ಎಂಬುದಕ್ಕೆ ಹೆಲಿಕಾಪ್ಟರ್:-ಲಂಡನ್ನಿಗೆ ಲಂಡನ್ ಎನ್ನುವಂತೆ. ಪಾರಿಭಾಷಿಕ ಪದಕ್ಕೆ ಕನ್ನಡದಲ್ಲಿಯೋ ಸಂಸ್ಕೃತದಲ್ಲಿಯೋ ಪ್ರತಿಪದವನ್ನು ತಯಾರುಮಾಡಿ ಉಪಯೋಗಿಸುವೆವೆಂದರೆ ಅದಕ್ಕೆ ನಮ್ಮ ಆಕ್ಷೇಪಣೆಯಿಲ್ಲ. ಇದು ಐಚ್ಛಿಕ ವಿಷಯ. ನಮಗೆ ಮುಖ್ಯವಾದ ಗುಣವು ಸೌಲಭ್ಯ-ಅರ್ಥದ ಸುಲಭತೆ, ಉಚ್ಚಾರಣೆಯ ಸುಲಭತೆ, ಲಿಪಿಯ ಸುಲಭತೆ.
6. ಕನ್ನಡದಲ್ಲಿ ಎಷ್ಟೋ ಪದಪ್ರಯೋಗಗಳು ವ್ಯಾಕರಣಶಾಸ್ತ್ರದ ದೃಷ್ಟಿಯಿಂದ ತಪ್ಪೆನಿಸಿದರೂ ಬಹುಕಾಲದ ಜನರೂಢಿಯಿಂದ ಅವಸರದ ಉಪಯೋಗಕ್ಕೆ ಅನುಕೂಲವಾಗಿವೆ. ಇಂಥ ಅಸಾಧು ಪ್ರಯೋಗಗಳು ಇಂಗ್ಲಿಷಿನಲ್ಲಿಯೂ ಹೇರಳವಾಗಿವೆ. ಆದರೆ ಇಂಗ್ಲಿಷ್ ವೈಯಾಕರಣರು ಅವುಗಳನ್ನು "Sturdy indefensibles" -ಬಲಿಷ್ಠವಾದ ಅಕ್ಷಮ್ಯಗಳು-ಎಂದು ಅಂಗೀಕರಿಸಿಕೊಂಡಿದ್ದಾರೆ. ಈ ತತ್ತ್ವ ಕನ್ನಡಿಗರಿಗೂ ಅನುಕರಣೀಯವಾಗಿದೆ.

7. ನಾವು ಕೂಡಿದಮಟ್ಟಿಗೂ ಶಬ್ದಸಂಪತ್ತನ್ನು ವೃದ್ಧಿಮಾಡಿಕೊಳ್ಳಬೇಕೇ ಹೊರತು ಕಡಮೆ ಮಾಡಬಾರದು. ಇದು ತಪ್ಪು, ಅದು ಅಶುದ್ಧ, ಇದು ಗ್ರಾಮ್ಯ. ಅದು ಅನ್ಯದೇಶೀಯ ಎಂದು ಮಾತುಗಳನ್ನು ತಳ್ಳಿಹಾಕುತ್ತಾ ಹೋದರೆ ಕಡೆಗೆ ಉಳಿಯುವುದು ನಮ್ಮ ಇಂದಿನ ಕೆಲಸಕ್ಕೆ ಹೇಗೆ ಸಾಕಾದೀತು? ಭಾಷಾವಿಷಯದಲ್ಲಿಯೂ ಉದಾರದೃಷ್ಟಿ ಅವಶ್ಯ.

ಶ್ರೀಕಂಠಯ್ಯನವರ 'ಕನ್ನಡ ಮಾತು ತಲೆಯೆತ್ತುವ ಬಗೆ' ಎಂಬ ಉಪನ್ಯಾಸ ಇಂದಿಗೂ ಉಪಯುಕ್ತವಾಗಿದೆ. ಕನ್ನಡದ ಉತ್ಸಾಹಿಗಳು ಅದರಲ್ಲಿ ವಿಚಾರಾರ್ಹವಾದ ಅಂಶಗಳನ್ನು ಗಮನಿಸಬೇಕೆಂದು ಬೇಡುತ್ತೇನೆ.

‘ಹೊಂಗನಸುಗಳು’

‘ಹೊಂಗನಸುಗಳು’ ಎಂಬ ಚಿಕ್ಕ ಕವನಸಂಗ್ರಹ ಪ್ರಕಟವಾದಾಗ ನಾನು ಶ್ರೀಕಂಠಯ್ಯನವರಿಗೆ ಪತ್ರ ಬರೆದದ್ದು ಜ್ಞಾಪಕವಿದೆ. ಆಗ ಅವರು ಎಲ್ಲಿಯೋ ದೂರದಲ್ಲಿದ್ದರು. ನನ್ನ ಮಾತುಗಳಿಂದ ತಮಗೆ ಸಂತೋಷವಾಯಿತೆಂದು ಅವರು ಹೇಳಿದರು. ನಾನು ಏನು ಬರೆದಿದ್ದೆನೋ ಆ ಮಾತುಗಳು ಈಗ ಜ್ಞಾಪಕವಿಲ್ಲ. ಆದರೆ ಅಭಿಪ್ರಾಯ ಹೀಗೆ: “ನೀವು ಅನೇಕ ಹೊಸ ಪ್ರಯೋಗಗಳನ್ನು ಮಾಡಿದ್ದೀರಿ. ನಿಮ್ಮ ಪಾಂಡಿತ್ಯದಿಂದಲೂ ಔಚಿತ್ಯ ವಿಚಕ್ಷಣೆಯಿಂದಲೂ ನಿಮ್ಮ ಪದ್ಯಗಳಿಗೆ ಓಜಸ್ಸೂ ಕಾಂತಿಯೂ ಬಂದಿವೆ. ಆದರೆ ಅವು ಸುಲಭವಾಗಿರುವ ಕಾರಣದಿಂದ ಹಾಗೆ ಬರೆಯುವುದು ಸುಲಭವೆಂದು ಅಸಂಸ್ಕೃತರು ಭ್ರಮಿಸಿ ಮೋಸಹೋದಾರು. ನೀವು ಕೆಲವು ರೂಢಿಯಾದ ನಿಯಮಗಳನ್ನು ಒತ್ತಟ್ಟಿಗಿಟ್ಟಿದ್ದೀರಿ. ನಿಮ್ಮಂತೆ ಪೂರ್ವಸಾಹಿತ್ಯ ಪರಿಜ್ಞಾನವಿರುವವರು ಮಾತ್ರ ಹಾಗೆ ಮಾಡಬಹುದು ಇತರರು ನಿಯಮೋಲ್ಲಂಘನೆ ಮಾಡುತ್ತ ಹೊದರೆ ಸಾಹಿತ್ಯಕ್ಕೆ ಹಾನಿಯಾದೀತು. ನಾವು ಹಳೆಯ ನಿಯಮಕ್ಕೆ ಗುಲಾಮರಾಗಿರಬೇಕಾದದ್ದಿಲ್ಲ. ಹೊಸ ಭಾವನೆಗಳಿಗೂ ಹೊಸ ವಿಚಾರಗಳಿಗೂ ಹೊಂದುವಂತೆ ಹೊಸ ನುಡಿಗಟ್ಟು ಬೇಕೇಬೇಕಾಗುತ್ತದೆ. ಆದರೆ ಅದನ್ನು ಮಾಡುವವರು ಭಾಷಾಮರ್ಮಜ್ಞರಾಗಿ ವಿಚಾರವಂತರಾಗಿರಬೇಕು. ಛಂದಸ್ಸಿನ ವಿಷಯಕ್ಕೂ ಈ ನನ್ನ ಮಾತು ಅನ್ವಯಿಸಬೇಕಾದದ್ದು. ನಿಮ್ಮಂತೆ ಹಳೆಗನ್ನಡದ ಗ್ರಂಥಗಳನ್ನೂ ಶಾಸನಸಾಹಿತ್ಯವನ್ನೂ ನಾನಾ ಪ್ರಾಂತಗಳ ಭಾಷಾರೂಢಿಯನ್ನೂ ಪರಾಮರ್ಶೆ ಮಾಡಿ ಇಂಗ್ಲಿಷ್ ಸಾಹಿತ್ಯದ ಧೋರಣೆಯನ್ನು ಸ್ವಾಧೀನಪಡಿಸಿಕೊಂಡಿರುವಂಥವರು ನಿಜವಾದ ಮಾರ್ಗದರ್ಶಕರು. ಅವರನ್ನನುಕರಣೆ ಮಾಡಹೊರಡುವವರು ಆ ವಿಧವಾದ ಸಂಸ್ಕಾರಯೋಗ್ಯತೆಯನ್ನು ಸಂಪಾದಿಸಿಕೊಳ್ಳದೆ ಬರೆಯಹೊರಟರೆ ಆ ಬರವಣಿಗೆಗೆ ‘ಹೊಂಗನಸು’ ಗಳ ಕಳೆ ಬರಲಾರದು.”

ಇದು ಈ ಹೊತ್ತಿಗೂ ನನ್ನ ಅಭಿಪ್ರಾಯ.

ಲಿಪಿಸುಧಾರಣೆ

ಬಿ.ಎಂ. ಶ್ರೀಕಂಠಯ್ಯನವರಿಗೂ ನನಗೂ ಅಭಿಪ್ರಾಯಭೇದ ಕಾಣಿಸಿದ ಇನ್ನೊಂದು ಸಂದರ್ಭ ಲಿಪಿಸುಧಾರಣೆಯದು. ಕನ್ನಡ ಅಕ್ಷರಮಾಲೆಯಲ್ಲಿ ರೂಢಿಯಾಗಿ ಬಂದಿರುವ ಕೆಲವು ಸಂಕೇತಗಳು ಅನಾವಶ್ಯಕವೆಂದೂ ಅವುಗಳನ್ನು ಬಿಟ್ಟುಬಿಟ್ಟರೆ ಅಥವಾ ಸುಧಾರಿಸಿದರೆ ಟೈಪ್‌ರೈಟರಿಗೂ ಮುದ್ರಣ ಸಾಧನಗಳಿಗೂ ಅನುಕೂಲವಾಗುವುದೆಂದೂ ಅವರ ವಾದ. ಅವರ ಸುಧಾರಣೆಯನ್ನು 'ಕನ್ನಡ ಬಾವುಟ' ದ ಒಂದು ಪುಟದಲ್ಲಿ ಸೂಚಿಸಿದರು: "ಎರಿಸಿ ಹೇರಿಸಿ ಕನ್‌ನಡದ ಬವ್‌ಉಟ" ಇತ್ಯಾದಿ.

ಇದು ಅನಾವಶ್ಯಕ ಮಾತ್ರವೇ ಅಲ್ಲದೆ ಅನನುಕೂಲವೆಂದು ನನ್ನ ಪ್ರತಿವಾದ. ಬಹುಕಾಲದ ಅಭ್ಯಾಸವೇ ಒಂದು ಸೌಲಭ್ಯ. ಅದನ್ನು ತಪ್ಪಿಸಿ ಬೇರೆ ಹೊಸದೊಂದು ಅಭ್ಯಾಸವನ್ನು ಮಾಡಿಸುವುದು ಸುಲಭದ ಕೆಲಸವಲ್ಲ. ಹಳೆಯದರಿಂದ ಹೊಸದಕ್ಕೆ ಬಗ್ಗಿಕೊಳ್ಳುವುದು ಬೇಸರದ ಪ್ರಯತ್ನ. ಆ ಬೇಸರದಲ್ಲಿ ವ್ಯಾಸಂಗಿಯ ಉತ್ಸಾಹ ಕುಂದಿಹೋಗಬಹುದು. ಹೊಸ ತೀರಿನ ಬರವಣಿಗೆಯಲ್ಲಿ ಅಚ್ಚಾದ ಪುಸ್ತಕವನ್ನು ಓದಲು ಕಾಲ ಹೆಚ್ಚು ಹಿಡಿಯುತ್ತದೆ. ಅಂಥ ಕಾಲವ್ಯಯಕ್ಕೆ ತಕ್ಕ ಪ್ರತಿಫಲವಾದರೂ ಉಂಟೆ? ಟೈಪ್‌ರೈಟರ್, ಮಾನೋಟೈಪ್ ಮೊದಲಾದ ಯಂತ್ರಗಳಾದರೋ ಇಂಗ್ಲಿಷ್ ಶಿಲ್ಪಿಗಳಿಂದ ಅವರ ಭಾಷೆಗಳಿಗಾಗಿ ತಯಾರಾದವು. ಅಂಥ ಯಂತ್ರಶಿಲ್ಪಿಗಳು ಕನ್ನಡಿಗರಲ್ಲಿ ಹುಟ್ಟಿ ತಮ್ಮ ಚತುರತೆಯನ್ನು ಕನ್ನಡಕ್ಕಾಗಿ ಉಪಯೋಗಿಸಿದರೆ ರೂಢಿಯಲ್ಲಿರುವ ಕನ್ನಡ ಅಕ್ಷರರೂಪಗಳಿಗೆ ತಕ್ಕ ಯಂತ್ರಗಳನ್ನು ಅವರು ಅಳವಡಿಸಿಯಾರು.

ಇದು ನನ್ನ ಪ್ರತಿವಾದ.

ಕಳೆದ ಮೂವತ್ತು ವರ್ಷಗಳಲ್ಲಿ ಇಂಥ ಮುದ್ರಣಯಂತ್ರ ಸುಧಾರಣೆ ನಡೆದಿದೆ. ಕನ್ನಡದಂತೆಯೇ ಜಟಿಲವೂ ಕಷ್ಟವೂ ಆದ ಅಕ್ಷರರೂಪಗಳುಳ್ಳ ಅರಬ್ಬಿ, ದೇವನಾಗರಿ, ತಮಿಳು, ತೆಲಗು-ಇನ್ನೂ ಕಷ್ಟರೂಪಗಳಾದ ಚೀಣೀಯ ಜಪಾನೀಯ ಭಾಷೆಗಳಲ್ಲಿ ಟೈಪ್‌ರೈಟರ್ ಮಾನೋಟೈಪ್ ಯಂತ್ರಗಳು ತಯಾರಾಗಿವೆ. ಕನ್ನಡದಲ್ಲಿಯೇ ಈ ಯಂತ್ರಗಳು ತಯಾರಾಗಿ ಅನೇಕ ವೃತ್ತಪತ್ರಿಕೆಗಳು ಈಗ ಮಾನೋಟೈಪ್ ಮೊದಲಾದವುಗಳನ್ನು ಬಳಸುತ್ತಿವೆ. ಹೀಗೆ ಬಿ.ಎಂ. ಶ್ರೀಕಂಠಯ್ಯನವರ ಲಿಪಿಸಂಸ್ಕರಣ ಪ್ರಯತ್ನ ಅಷ್ಟಕ್ಕೇ ನಿಲ್ಲಬೇಕಾಯಿತು.

ಸಾಂಪ್ರದಾಯಿಕ ಪಂಡಿತರ ಸ್ಥಾನ

ಬಿ.ಎಂ. ಶ್ರೀಕಂಠಯ್ಯನವರಿಗೂ ನನಗೂ ಎಷ್ಟೋ ತಕರಾರುಗಳು ಕಡೆಗೂ ತೀರ್ಮಾನಕ್ಕೆ ಬರದೆ ಉಳಿದುಕೊಂಡಿದ್ದವು. ಅವುಗಳ ಪೈಕಿ ಸಂಪ್ರದಾಯ ಕ್ರಮದಿಂದ ಬಂದಿರುವ ಸಂಸ್ಕೃತ-ಕನ್ನಡ ಪಂಡಿತರುಗಳಿಗೆ ಸಲ್ಲಬೇಕಾದ ಸ್ಥಾನಮಾನಗಳ ಪ್ರಶ್ನೆ ಒಂದು.

ಶ್ರೀಕಂಠಯ್ಯನವರ ವಾದ ಹೀಗೆ: ಎರಡು ಬೇರೆ ಬೇರೆ ಪಂಡಿತ ವರ್ಗಗಳು (Classes) ಇರಬೇಕಾದದ್ದಿಲ್ಲ. ಅದು ಅನನುಕೂಲ. ಎರಡು ವರ್ಗಗಳು ಅಂದರೆ ಸಾಂಪ್ರದಾಯಿಕ ಪಂಡಿತರದು ಒಂದು; ವಿಶ್ವವಿದ್ಯಾನಿಲಯದಿಂದ ತಯಾರಾದವರದು ಇನ್ನೊಂದು. ನಮ್ಮ ವಿದ್ಯಾ ಇಲಾಖೆಯೂ ವಿಶ್ವವಿದ್ಯಾನಿಲಯವೂ ಹೊಸ ರೀತಿಯ ಎಂ.ಎ. ಮೊದಲಾದ ಪಂಡಿತರನ್ನು ಪ್ರೋತ್ಸಾಹಿಸಬೇಕು. ಸಾಂಪ್ರದಾಯಿಕ ಪಂಡಿತರನ್ನು ವಿಶ್ವವಿದ್ಯಾನಿಲಯವು ಹೆಚ್ಚಾಗಿ ಪ್ರೋತ್ಸಾಹಿಸಬೇಕಾಗಿಲ್ಲ. ಏಕೆಂದರೆ ವಿಶ್ವವಿದ್ಯಾನಿಲಯದ ಎಂ.ಎ.ಗಳು ಕನ್ನಡವನ್ನೂ ಸಂಸ್ಕೃತವನ್ನೂ ವಿಶೇಷವಾಗಿ (Special) ಅಧ್ಯಯನ ಮಾಡಿರುತ್ತಾರೆ. ಪಿ.ಎಚ್.ಡಿ.ಗಳೂ ಡಿ.ಲಿಟ್.ಗಳೂ ಕನ್ನಡ ಸಂಸ್ಕೃತಗಳಲ್ಲಿ ಹೆಚ್ಚು ಪಾಂಡಿತ್ಯವನ್ನು ಸಂಪಾದಿಸಿಕೊಂಡಿರುತ್ತಾರೆ. ಇಂಥವರನ್ನು ಹೈಸ್ಕೂಲುಗಳಲ್ಲಿಯೂ ಕಾಲೇಜುಗಳಲ್ಲಿಯೂ ಬೋಧಕರನ್ನಾಗಿ ನಿಯಮಿಸಿಕೊಳ್ಳುವುದರಿಂದ ಹೆಚ್ಚು ಪ್ರಯೋಜನ. ಇವರು ಕನ್ನಡ ಸಂಸ್ಕೃತಗಳನ್ನು ಹೇಳಿಕೊಡುವುದರಲ್ಲಿ ಇಂಗ್ಲಿಷ್ ಸಾಹಿತ್ಯದ ಸ್ವತಂತ್ರದ ವಿಚಾರ ಧೋರಣೆಯನ್ನೂ ವಿಜ್ಞಾನದ ಸ್ವತಂತ್ರ ವಿಚಾರಧೋರಣೆಯನ್ನೂ ಅನುಸರಿಸಿ ಪಾಠ ಹೇಳಲಾಗುತ್ತದೆ. ನಮ್ಮ ಪ್ರಾಚೀನ ಪಂಡಿತರಿಂದ ಈ ಕೆಲಸ ನಡೆಯಲಾರದು. ಅವರು ಬರಿಯ ಮಾತಿನ ಅಧಿಕಾರಿಗಳು. ಆಡಂಬರದ ಶಬ್ದ ರಚನೆಯನ್ನೂ ವ್ಯಾಕರಣವನ್ನೂ ಅವರು ಹೇಳಿಕೊಟ್ಟಾರು. ಆದರೆ ಇಂಗ್ಲಿಷಿನಿಂದಲೂ ವಿಜ್ಞಾನ ಗ್ರಂಥಗಳಿಂದಲೂ ಕನ್ನಡಕ್ಕೆ ವಾಕ್ಯ ಪರಿವರ್ತನೆ ಮಾಡಿಸುವುದಕ್ಕೂ ಕನ್ನಡದಿಂದ ಇಂಗ್ಲಿಷಿಗೆ ಭಾಷಾಂತರ ಮಾಡಿಸುವುದಕ್ಕೂ ಪ್ರಾಚೀನ ಪಂಡಿತರು ಸಮರ್ಥರಲ್ಲ; ಅವರಿಗೆ ಇಂಗ್ಲಿಷ್ ತಿಳಿಯದಿರುವ ಕಾರಣದಿಂದ. ಪ್ರಾಚೀನ ಪಂಡಿತರೂ ಇದ್ದುಕೊಳ್ಳಲಿ; ಅವರ ಜೊತೆಗೆ ಎಂ.ಎ., ಪಿ. ಎಚ್.ಡಿ.ಗಳೂ ಇದ್ದುಕೊಳ್ಳಲಿ; ಎರಡು ವರ್ಗಗಳಿಗೂ ಉದ್ಯೋಗ ಕಲ್ಪಿಸೋಣ-ಎಂಬುದಾದರೆ ಅದು ಕಾರ್ಯಸಾಧ್ಯವಾದ ಯೋಚನೆಯಲ್ಲ. ಹಣ ಹೆಚ್ಚಾಗಿ ಬೇಕಾಗುತ್ತದೆ; ಮತ್ತು ಎರಡು ವರ್ಗಗಳಿಗೂ ಘರ್ಷಣೆ ಹುಟ್ಟುತ್ತದೆ. ಹೀಗೆ ನೋಡಿದರೆ-ಸ್ಕೂಲ್ ಕಾಲೇಜುಗಳ ಉದ್ಯೋಗದ ಬಗೆಗೆ ಒಂದೇ ಪಂಡಿತ ವರ್ಗವನ್ನು ಇರಿಸಿಕೊಳ್ಳುವುದು ಒಳ್ಳೆಯದು. ಆ ವರ್ಗ ಎಂ.ಎ., ಪಿ.ಎಚ್. ಡಿ.ಗಳದು.

ಈ ವಾದಕ್ಕೆ ವಿರೋಧಿ ನಾನು. ನನ್ನ ವಾದ ಹೀಗೆ: ನಮ್ಮ ಭಾಷೆಯ ಬುಡ ಬೇರುಗಳಿರುವುದು ಪ್ರಾಚೀನ ಸಾಹಿತ್ಯದಲ್ಲಿ. ಆದರ ಅಚ್ಚುಕಟ್ಟಿರುವುದು ಪೂರ್ಣ ವ್ಯಾಕರಣದಲ್ಲಿ. ಪ್ರಾಚೀನ ಸಾಹಿತ್ಯವನ್ನೂ ವ್ಯಾಕರಣವನ್ನೂ ಆಮೂಲಾಗ್ರವಾಗಿ ಪರಿಶೀಲಿಸದಿರುವವರು ಕನ್ನಡ ಸಂಸ್ಕೃತ ಸಾಹಿತ್ಯ ಪಾಠವನ್ನೂ ತೃಪ್ತಿಕರವಾಗಿ ನಡಸಲಾರರು. ನಮ್ಮ ಎಂ.ಎ. ಪಿ.ಎಚ್.ಡಿ.ಗಳ ಪಾಂಡಿತ್ಯ ಸಾಂಪ್ರದಾಯಿಕ ಪಾಂಡಿತ್ಯಕ್ಕೆ ಸಮನಾಗುವುದು ಸುಲಭವಲ್ಲ. (ಎಲ್ಲ ಎಂ.ಎ., ಪಿ.ಎಚ್.ಡಿ.ಗಳೂ ಟಿ, ಎನ್. ಶ್ರೀಕಂಠಯ್ಯ, ಡಿ. ಎಲ್. ನರಸಿಂಹಾಚಾರ್ಯರಲ್ಲ.) ಪ್ರೊಫೆಸರ್ ಹಿರಿಯಣ್ಣನವರಂಥವರೂ ಕೂಡ ಸಾಂಪ್ರದಾಯಿಕ ಪಾಂಡಿತ್ಯವು ಅನಿವಾರ್ಯವಾದದ್ದೆಂಬುದನ್ನು ಅಂಗೀಕರಿಸಿದ್ದಾರೆ. ಸಾಮಾನ್ಯವಾಗಿ ಬಿ.ಎ.ಪ್ಯಾಸ್ ಮಾಡಿದಾತನಿಗೆ ಇಂಗ್ಲಿಷಿನ ಸಾಹಿತ್ಯ ಪರಿಚಯ ಎಷ್ಟು ಆಳವಾಗಿರುತ್ತದೆಯೋ ಆತನಿಗಿರುವ ಕನ್ನಡ ಪಾಂಡಿತ್ಯವೂ ಅಷ್ಟು ಮಟ್ಟಿನದಾಗಿಯೇ ಇರುತ್ತದೆ. ಅದೂ ಅಪರೂಪವೇ. ಎಂ. ಎ., ಪಿ.ಎಚ್. ಡಿ.ಗಳ ವಿಚಾರವೂ ಅಷ್ಟೆ. ಕನ್ನಡ ಸಂಸ್ಕೃತಗಳು ಬಹು ಪ್ರಾಚೀನಗಳಾದ ಭಾಷೆಗಳು. ಅವುಗಳ ವ್ಯಾಕರಣಗಳಂತೂ ಸಂತತವಾದ ಆಲೋಚನೆಯಿಲ್ಲದವರಿಗೆ ಬಹು ಕಷ್ಟವಾದವು. ನಮ್ಮ ಸಾಂಪ್ರದಾಯಿಕ ಪಂಡಿತರು-ಎಂದರೆ ಅದರಲ್ಲಿ ನಿಜವಾದ ಯೋಗ್ಯತೆಯುಳ್ಳವರು- (Specialist) ಎಂಬ ವಿಶೇಷಜ್ಞರ ದರ್ಜೆಗೆ ಸೇರಬೇಕಾದವರು-ವಿಶೇಷಾಧಿಕಾರಿಗಳು. ಆದದ್ದರಿಂದ ಆ ಪ್ರಾಚೀನ ವರ್ಗವನ್ನು ಸರ್ವಪ್ರಯತ್ನಗಳಿಂದಲೂ ಉಳಿಸಿ ಕಾಪಾಡುವುದು ಆವಶ್ಯಕ. ಹೈಸ್ಕೂಲು ಕಾಲೇಜುಗಳಲ್ಲಿ ಉದ್ಯೋಗ ಮಾಡುವ ಪಂಡಿತರಿಗೆ ಮೆಟ್ರಿಕ್ಯುಲೇಷನ್ ಮಟ್ಟದ ಇಂಗ್ಲಿಷ್ ಪರಿಚಯವಿರಬೇಕೆಂದು ವಿಧಿಸಬಹುದು. ಅಷ್ಟುಮಟ್ಟಿನ ಇಂಗ್ಲಿಷ್ ಪಾಂಡಿತ್ಯವನ್ನು ಸಂಪಾದಿಸುವುದು ಅವರಿಗೆ ಶ್ರಮವಲ್ಲ. ಆಗ ಅವರು ಭಾಷಾಂತರೀಕರಣ ಪಾಠ ಕಲಿಸುವುದಕ್ಕೂ ಸಮರ್ಥರಾಗಿರುತ್ತಾರೆ. ನಮಗೆ ಮುಖ್ಯವಾಗಿ ಬೇಕಾದದ್ದು ಭಾಷೆ ಸಾಹಿತ್ಯಗಳ ಸಂಪ್ರದಾಯದ ಪರಿಜ್ಞಾನ. ಇದು ಸಾಂಪ್ರದಾಯಿಕ ಪಂಡಿತರಲ್ಲಿರುತ್ತದೆ. ಎಂ. ಎ., ಪಿ.ಎಚ್. ಡಿ., ಗಳಲ್ಲಿ ಅದು ಇದ್ದರೆ ಅವರಿಗೂ ಉದ್ಯೋಗ ದೊರೆಯಲಿ. ಆದರೆ ಎರಡು ವರ್ಗಗಳಿಗೂ ಪರಸ್ಪರ ಪ್ರತಿಸ್ಪರ್ಧೆ ಅವಶ್ಯವಿಲ್ಲ.

ಈ ತಕರಾರು ಹಾಗೆಯೇ ಉಳಿದುಕೊಂಡಿತು. ಏತನ್ಮಧ್ಯೆ ಸಾಂಪ್ರದಾಯಿಕ ಪಾಂಡಿತ್ಯಕ್ಷೀಣಿಸುತ್ತ ಬಂತು. ಈ ಹೊತ್ತು ಪ್ರಾಚೀನ ಕನ್ನಡ ಪಂಡಿತರೆಂದು ಹೇಳಿಕೊಳ್ಳಲು ಅರ್ಹರಾದವರು ಕನ್ನಡ ದೇಶದಲ್ಲಿ ಎಷ್ಟು ಮಂದಿ ಇರಬಹುದು? ಈ ವಿಷಯದಲ್ಲಿ ಶ್ರದ್ಧಾಸಕ್ತಿಗಳುಳ್ಳವರು ಅವರು ಅಧಿಕಾರಸ್ಥರಾಗಿರುವ ಪಕ್ಷದಲ್ಲಿ ವಿಚಾರ ಮಾಡಲಿ.

ಎಲ್ಲ ವಿಷಯಗಳಲ್ಲೂ ಪರಮನಿರ್ಣಾಯಕವಾದದ್ದು ಕಾಲ. ವಾದಗ್ರಸ್ತವಾದ ವಿಷಯಗಳಲ್ಲಿ ಗುಣ ಯಾವ ಪಕ್ಷದಲ್ಲಿದೆ. ಸತ್ಯ ಯಾವ ಪಕ್ಷದಲ್ಲಿದೆ-ಎಂಬುದನ್ನು ಕಾಲವು ಪ್ರತ್ಯಕ್ಷಪಡಿಸುತ್ತದೆ. ಒಂದು ಕ್ಷಣದ ತೀರ್ಮಾನ, ಒಂದು ದಿನದ ತೀರ್ಮಾನ, ಒಂದು ವರ್ಷದ ತೀರ್ಮಾನ ಸರ್ವಕಾಲಕ್ಕೂ ಅನ್ವಯಿಸುವ ತೀರ್ಮಾನವಾಗಲಾರದು. ಲೋಕಕ್ಕೆ ಅನುಭವವಾದಂತೆಲ್ಲ ಯುಕ್ತಾಯುಕ್ತಗಳ ಸ್ವರೂಪ ತಾನಾಗಿ ಹೊರಗೆ ಬರುತ್ತದೆ. ಈ ಹೊತ್ತು ನಮ್ಮ ಪೂರ್ವಭಾಷಾ ಸಾಹಿತ್ಯ ಪಾಂಡಿತ್ಯ ಹಾಗೆ ರುಜುವಾತಿಗೆ ಬರುತ್ತಿದೆ.

ಸಂಸ್ಕೃತ ದ್ವೇಷವಲ್ಲ

ಬಿ.ಎಂ. ಶ್ರೀಕಂಠಯ್ಯನವರು ಸಂಸ್ಕೃತದ ವಿಷಯದಲ್ಲಿ ಅಭಿಮಾನವಿಲ್ಲದವರೆಂದೂ ದ್ವೇಷವುಳ್ಳವರೆಂದೂ ಕೆಲವು ಕಾಲ ಅಪಪ್ರಚಾರ ನಡೆದಿತ್ತು. ಇದಕ್ಕೆ ಕಾರಣ ಕೊಂಚವೂ ಇರಲಿಲ್ಲವೆಂದು ನಾನು ಹೇಳಲಾರೆ. ನಮ್ಮ ಕೆಲಮಂದಿ ಪೂರ್ವಕವಿಗಳ ಶೈಲಿಯಲ್ಲಿ ಅತಿ ಸಂಸ್ಕೃತವೆದ್ದು ಕಾಣುತ್ತದೆ. ರುದ್ರಭಟ್ಟನಲ್ಲಿ, ಷಡಕ್ಷರಿಯಲ್ಲಿ ಇದು ಚೆನ್ನಾಗಿ ನಿದರ್ಶನಕ್ಕೆ ಬರುತ್ತದೆ. "ಶ್ರೀಶೈಲಾದಿ..." ಪದ್ಯದಲ್ಲಿ 'ಮಾಳ್ಕೆ' ಎಂಬುದೊಂದೇ ಕನ್ನಡ ಪದ. "ಶ್ರೀಮನ್ ನಾಗೇಂದ್ರ...." "ಅರಿರೌದ್ರಂಕರ..." ಮೊದಲಾದವೂ ಹಾಗೆಯೇ. ಇಂಥ ಶೈಲಿಯನ್ನು ಕುರಿತು ಟೀಕಿಸುವಾಗ ಶ್ರೀಕಂಠಯ್ಯನವರ ಧೋರಣೆ ಸ್ವಲ್ಪ ಕಹಿಯಾಗುತ್ತಿತ್ತು, ಉಗ್ರವಾಗುತ್ತಿತ್ತು. ಆ ಧೋರಣೆ ಸಂಸ್ಕೃತ ದ್ವೇಷದಿಂದ ಬಂದದ್ದು-ಎಂದು ಸಂಸ್ಕೃತದ ಅತ್ಯಭಿಮಾನಿಗಳಿಗೆ ತೋರಿದ್ದಿದ್ದರೆ ಅದು ಆಶ್ಚರ್ಯವಲ್ಲ. ಆದರೆ ಒಂದು ಭಾಷಣದ ಆವೇಶ ಕ್ಷಣದ ಮಾತನ್ನು, ಆಲೋಚಿಸಿ ಆಡಿದ ಮಾತೆಂದು ಗ್ರಹಿಸುವುದು ತಪ್ಪಾದೀತು.

ಒಂದು ದಿನ ಮಧ್ಯಾಹ್ನ ಸುಮಾರು ಮೂರು ಘಂಟೆಯ ವೇಳೆಗೆ ನಾನು ಒಬ್ಬ ಮಿತ್ರರ ಮನೆಗೆ ಹೋದೆ. ಆ ಮಿತ್ರರು ಶ್ರೀವೈಷ್ಣವರು. ಅದು ಆತನ ಮಗಳ ಮದುವೆಯಾದ ಮಾರನೆಯ ದಿನ. ಆ ದಿನವೂ ಸಂಪ್ರದಾಯದ ಕ್ರಮದಲ್ಲಿ ಕೆಲವು ಶಾಸ್ತ್ರಕ್ರಿಯೆಗಳು ನಡೆಯಬೇಕಾಗಿತ್ತು. ಅದಕ್ಕಾಗಿ ವೈದಿಕ ಮಂಡಲಿ ಸೇರಿತ್ತು. ನಾನು ಆ ಮನೆಯ ಮೊಗಸಾಲೆಯ ಮೆಟ್ಟಿಲುಗಳನ್ನು ಹತ್ತಿ ಹೊಸ್ತಿಲು ದಾಟುವ ವೇಳೆಗೆ ಒಬ್ಬಾನೊಬ್ಬ ವೈದಿಕರು ತಮಿಳಿನಲ್ಲಿ "ಆ ಶ್ರೀಕಂಠಯ್ಯನವರಿಗೆ ಸಂಸ್ಕೃತ ಎಂದರೆ ಆಗದಂತೆ" -ಎಂದು ಹೇಳಿದ್ದು ನನಗೆ ಕೇಳಿಸಿತು. ನಾನು ಒಳಗೆ ಹೋಗಿ ಕುಳಿತಮೇಲೆ ಆ ವೈದಿಕರನ್ನು ಕುರಿತು "ನೀವು ಹೇಳಿದ್ದು ಯಾರೋ ಹೇಳಿದ ಚಾಡಿಯಿಂದ ಬಂದದ್ದಲ್ಲವೆ? ಅದು ಅನ್ಯಾಯವಾದ ಅಪವಾದ" -ಎಂದು ಹೇಳಿದೆ, ಆ ಶ್ರೀವೈಷ್ಣವ ವಿದ್ವಾಂಸರು ನನಗೆ ಚೆನ್ನಾಗಿ ತಿಳಿದಿದ್ದವರು; ವಾಸ್ತವವಾಗಿ ಒಳ್ಳೆಯವರು. ತಿಳಿದು ತಿಳಿದು ಅನ್ಯಾಯ ಮಾಡತಕ್ಕವರಲ್ಲ. ಇರುವ ಸಂದರ್ಭವನ್ನು ನಾನು ವಿವರಿಸಿ ಹೇಳಿದ ಮೇಲೆ ಅವರು ತಮ್ಮ ಮಾತನ್ನು ಹಿಂದಕ್ಕೆ ತೆಗೆದುಕೊಂಡು, ಅಪಚಾರವಾಯಿತೆಂದು ಕ್ಷಮೆ ಕೇಳಿದರು. ಇದು ತೋರಿಸುತ್ತದೆ. ಅಪಪ್ರಚಾರ ಎಷ್ಟು ದೂರ ಸಾಗಿತ್ತೆಂಬುದನ್ನು.

***

೧೯೨೮ರಲ್ಲಿ ನಾನು ಬೆಂಗಳೂರು ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘದಲ್ಲಿ 'ಸಾಹಿತ್ಯ ಮತ್ತು ವಿಜ್ಞಾನ' ಎಂಬ ವಿಷಯವಾಗಿ ಒಂದು ದಿನ ಉಪನ್ಯಾಸ ಮಾಡಿದೆ. ನನ್ನಲ್ಲಿ ತುಂಬಾ

ಅಭಿಮಾನವಿಟ್ಟಿದ್ದ ಎ.ಆರ್. ಕೃಷ್ಣಶಾಸ್ತ್ರಿಗಳವರು ಅದನ್ನು ಬರೆದು 'ಪ್ರಬುದ್ಧ ಕರ್ಣಾಟಕ' ಪತ್ರಿಕೆಯಲ್ಲಿ ಪ್ರಕಟಪಡಿಸಿದರು. ಅದರಲ್ಲಿ ಷೆಲ್ಲಿ ಕವಿಯ 'ಪ್ರೊಮಿಥಿಯಸ್ ಅನ್‌ಬೌಂಡ್' ಎಂಬ ಮಹಾಕಾವ್ಯದಿಂದ ಕೆಲವು ಪಂಕ್ತಿಗಳನ್ನು ಉದಾಹರಣೆಯಾಗಿ ಕೊಟ್ಟಿದ್ದೆ. ಇಂಗ್ಲಿಷಿನಲ್ಲಿ ವಾಕ್ಯಗಳನ್ನು ಹೇಳಿದ ಬಳಿಕ ಆ ಕ್ಷಣ ಅಲ್ಲಿ ನನ್ನ ಮನಸ್ಸಿಗೆ ಹೊಳೆದಂತೆ ಕನ್ನಡದ ತರ್ಜುಮೆಯನ್ನು ಹೇಳಿದ್ದೆ. ಇದರಲ್ಲಿ ಸಂಸ್ಕೃತ ಮಾತುಗಳು ಹೆಚ್ಚಾಗಿದ್ದುವು.

ಕೆಲವು ಕಾಲದ ತರುವಾಯ, ಬಹುಶಃ ೧೯೩೨ ರಲ್ಲಿ, ನನ್ನ 'ಜೀವನ ಸೌಂದರ್ಯ ಮತ್ತು ಸಾಹಿತ್ಯ' ಎಂಬ ಉಪನ್ಯಾಸ ಸಂಗ್ರಹದ ಪುಸ್ತಕದಲ್ಲಿ ಮೇಲಿನ ಉಪನ್ಯಾಸವನ್ನು ಸೇರಿಸಿತ್ತು. ಆದರೆ ಇದರಲ್ಲಿ ಷೆಲ್ಲಿಯ ವಾಕ್ಯಗಳ ಭಾಷಾಂತರವನ್ನು ಬದಲಾಯಿಸಿದ್ದೆ. ಈಗ ಸಂಸ್ಕೃತಕ್ಕೆ ಬದಲಾಗಿ ಕನ್ನಡ ಮಾತುಗಳನ್ನು ಹೆಚ್ಚಾಗಿ ಬಳಸಿದ್ದೆ.

ಈ ಗ್ರಂಥದ ಅಚ್ಚು ಕರಡು (ಪ್ರೂಫ್)ಗಳನ್ನು ಓದಿದವರು ಕೃಷ್ಣಶಾಸ್ತ್ರಿಗಳವರು. ಅವರು ನಾನು ಮಾಡಿದ್ದ ಬದಲಾವಣೆಗಳನ್ನು ಒಪ್ಪಲಿಲ್ಲ. ಮೊದಲಿನ ಸಂಸ್ಕೃತ ಭೂಯಿಷ್ಠವಾದ ಅನುವಾದವೇ ಸೊಗಸೆಂದರು. ಅವರಿಗೂ ನನಗೂ ಕೊಂಚ ವಾಗ್ವಾದ ನಡೆಯಿತು. ಕೊನೆಗೆ ನಾವಿಬ್ಬರೂ, ಈ ತಕರಾರನ್ನು ಬಿ.ಎಂ.ಶ್ರೀಕಂಠಯ್ಯನವರಿಗೊಪ್ಪಿಸಿ ಅವರ ತೀರ್ಮಾನವನ್ನು ಅಂಗೀಕರಿಸತಕ್ಕದೆಂದು ನಿಶ್ಚಯಿಸಿಕೊಂಡೆವು.

ಶ್ರೀಕಂಠಯ್ಯನವರು ನಮ್ಮಿಬ್ಬರ ವಾದಗಳನ್ನೂ ಕೇಳಿದರು. ಬಳಿಕ ಮನೆಯೊಳಗಿನಿಂದ ಫಲಾಹಾರ ಸಾಮಗ್ರಿಗಳನ್ನು ತರಿಸಿ, "ನೀವಿಬ್ಬರೂ ಇದನ್ನು ಸೇವಿಸೋಣವಾಗಲಿ, ನಾನು ಏಕಾಂತದಲ್ಲಿ ಆಲೋಚನೆ ಮಾಡಿಬರುತ್ತೇನೆ" ಎಂದು ಹೇಳಿ ಪ್ರೂಫಿನೊಡನೆ ತಮ್ಮ ಮಲಗುವ ಕೋಣೆಯೊಳಕ್ಕೆ ಹೋದರು. ಹದಿನೈದು ಇಪ್ಪತ್ತು ನಿಮಿಷವಾದ ಮೇಲೆ ನಾವಿದ್ದ ಕಡೆಗೆ ಬಂದು ತೀರ್ಮಾನ ಹೇಳಿದರು, ಅದು ಕೃಷ್ಣಶಾಸ್ತ್ರಿಗಳ ಪರವಾಗಿ. "ಷೆಲ್ಲಿಯ ವಾಕ್ಯಗಳಲ್ಲಿ ತೇಜಸ್ಸೂ, ಓಜಸ್ಸೂ ಪೂರ್ಣವಾಗಿದೆ. ಅವುಗಳನ್ನು ನಮ್ಮ ಭಾಷೆಗೆ ತರಬೇಕಾದರೆ ಸಂಸ್ಕೃತವಿಲ್ಲದೆ ಸಾಧ್ಯವಿಲ್ಲ."

ಅದರಂತೆಯೇ ಈಗ ಆ ವಾಕ್ಯ ನಿಂತಿದೆ. [1]

ಶ್ರೀಕಂಠಯ್ಯನವರಿಗೆ ಸಂಸ್ಕೃತದಲ್ಲಿ ಪೂರ್ಣ ಅಭಿಮಾನವಿತ್ತು. ಅವರು ಅನೇಕ ಪದ್ಯ ಭಾಗಗಳನ್ನೂ ಮಹಾಭಾರತದ ಕೆಲವು ಭಾಗಗಳನ್ನೂ ನನ್ನಿಂದ ಓದಿಸಿ ಆ ಸಾಹಿತ್ಯದ ಹಿರಿಮೆಯನ್ನು ಬಾಯಿತುಂಬಾ ಕೊಂಡಾಡಿದ್ದಾರೆ.

ವಾಗ್ಮಿತೆ

ಮೊದಮೊದಲು ಕನ್ನಡದಲ್ಲಿ ಭಾಷಣ ಮಾಡಲೊಲ್ಲೆನೆಂದು, ಭಾಷಣ ಮಾಡಲಾರೆನೆಂದು ಹೇಳಿ ವೆಂಕಟನಾರಣಪ್ಪನವರೊಡನೆ ನಿಷ್ಠುರ ಕಟ್ಟಿಕೊಂಡ ಬಿ.ಎಂ.ಶ್ರೀಕಂಠಯ್ಯನವರು ಬರುಬರುತ್ತಾ ಕನ್ನಡದ ಅಭಿಮಾನದ ಆವೇಶದಿಂದ ಎರಡು ಮೂರು ಘಂಟೆಗಳ ಕಾಲ ಕನ್ನಡದಲ್ಲಿ ಅವಿಚ್ಛಿನ್ನವಾಗಿ ಮಾತನಾಡಿ ಎನ್.ಎಸ್. ಸುಬ್ಬರಾವ್ ಮೊದಲಾದ ಸ್ನೇಹಿತರುಗಳಿಂದ ಹರಿಕಥಾ ಕಾಲಕ್ಷೇಪವೆಂದು ಹಾಸ್ಯಮಾಡಿಸಿಕೊಂಡರು. ಕಡೆಗೆ ಐದು ಘಂಟೆಗಳಷ್ಟು ದೀರ್ಘಕಾಲ ಪ್ರವಾಹ ಧೋರಣೆಯಿಂದ ಭಾಷಣ ಮಾಡುವವರಾದರು. ರಾಯಚೂರಿನಲ್ಲಿ ಅವರ ಭಾಷಣವನ್ನು ಮುಕ್ಕಾಲು ಘಂಟೆ ಕೇಳಿದ ಮೇಲೆ ನಾನೂ ಒಬ್ಬ ಸ್ನೇಹಿತರೂ ಉಪಾಹಾರಕ್ಕೆಂದು ಹೊರಕ್ಕೆ ಬಂದು ಮುಗಿಸಿಕೊಂಡು ಒಳಗೆಹೋಗಿ ಇನ್ನೂ ಭಾಷಣ ನಡೆಯುತ್ತಿದ್ದದ್ದನ್ನು ನೋಡಿ ಮತ್ತೆ ಉಪಾಹಾರಕ್ಕಾಗಿ ಹೋಗಿ ಇನ್ನೊಂದು ಘಂಟೆಯಾದಮೇಲೆ ಸಭೆಗೆ ಹಿಂದಿರುಗಿದವು. ಭಾಷಣ ನಡೆಯುತ್ತಲೇ ಇತ್ತು. ವಿಷಯ ಹರಿಹರನ ರಗಳೆ.

ಬಿ.ಎಂ.ಶ್ರೀಕಂಠಯ್ಯನವರು ಕನ್ನಡದಲ್ಲಿ ಒಳ್ಳೆಯ ವಾಗ್ಮಿ. ನನ್ನ ಸ್ವಂತ ಅಭಿಪ್ರಾಯದಲ್ಲಿ ಅವರ ಇಂಗ್ಲಿಷ್ ಭಾಷಣ ಇನ್ನೂ ಗಂಭಿರವಾದದ್ದಾಗಿ ರಸವತ್ತಾಗಿರುತ್ತಿತ್ತು. ಇಂಗ್ಲಿಷ್ ಭಾಷೆಯಲ್ಲಿಯ ಪದಗಳ ಮರ್ಜಿ ಅವರಿಗೆ ಸಹಜವಾದದ್ದೋ ಎನ್ನಿಸುವಂತೆ ಸ್ವಾಧೀನವಾಗಿತ್ತು. ಪದಗಳ ಮತ್ತು ಪದಪ್ರಯೋಗಗಳ ನವುರುಗಳನ್ನು ತಿಳಿದು ವಾಕ್ಯರಚನೆಮಾಡುತ್ತಿದ್ದರು. ಅವರು ಲಾ ವ್ಯಾಸಂಗಮಾಡಿದ್ದದ್ದರಿಂದ ಆ ಶಾಸ್ತ್ರದ ಲ್ಯಾಟಿನ್ ಪರಿಭಾಷೆ ಅವರಿಗೆ ಚೆನ್ನಾಗಿ ತಿಳಿದಿತ್ತು. ಒಂದು ಸಾರಿ, ರಾಯಚೂರಿನ ಸಾಹಿತ್ಯ ಸಮ್ಮೇಳನದಲ್ಲಿ ಎಂದು ನನ್ನ ಜ್ಞಾಪಕ-ಅಲ್ಟ್ರಾ ವೈರಿಸ್ (Ultravires) ಎಂಬ ಮಾತನ್ನು ಒಬ್ಬ ಸದಸ್ಯರು ಉಪಯೋಗಿಸಿದರು. ಅದು ಅಪಪ್ರಯೋಗವೆಂಬುದನ್ನು ಶ್ರೀಕಂಠಯ್ಯನವರು ಒಂದು ವ್ಯಾಖ್ಯಾನದಲ್ಲಿ ತೋರಿಸಿಕೊಟ್ಟರು. ಇಂಗ್ಲಿಷ್-ಕನ್ನಡ ನಿಘಂಟುವಿನ ಕೆಲಸದಲ್ಲಿ ನಾವು ಸಭೆಸೇರುತ್ತಿದ್ದಾಗ ಅವರ ಗ್ರೀಕ್, ಲ್ಯಾಟಿನ್ ಸಾಹಿತ್ಯಗಳ ಪರಿಚಯ ನಮಗೆ ಚೆನ್ನಾಗಿ ಗೋಚರವಾಗುತ್ತಿತ್ತು. ಹಾಗೆಯೇ ಅವರ ತಮಿಳು ತೆಲುಗುಗಳ ಪರಿಚಯ. ಕನ್ನಡ ವಿದ್ಯಾರ್ಥಿಗಳು ಮೇಲ್ತರಗತಿಗಳಲ್ಲಿ ತಮಿಳನ್ನು ಕಲಿಯಬೇಕೆಂದು ಒತ್ತಾಯಪಡಿಸುತ್ತಿದ್ದವರಲ್ಲಿ ಅವರು ಮುಖ್ಯರು.

ಒಂದು ಸಾರಿ ಅವರು ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘದ ಆಶ್ರಯದಲ್ಲಿ ತಮಿಳು ಮಹಾಕವಿ ತಿರುವಳ್ಳುವರ್ ಅವರನ್ನು ಕುರಿತು ಬಹುಸೊಗಸಾದ ಉಪನ್ಯಾಸ ಮಾಡಿದರು.

ನಾನು ಅದಕ್ಕೆ ಮನಸೋತು ಆ ಭಾಷಣದ ಗುರುತಿಗಾಗಿ ನನ್ನ ಪಾಕೆಟ್ ಬುಕ್ಕಿನಲ್ಲಿ ಒಂದು ಪಂಕ್ತಿಯನ್ನು ಬರೆಯಿಸಿಕೊಂಡೆ. ಒಂದು ಸೊಗಸಾದ ತಿರುವಳ್ಳುವರ ಪದ್ಯವನ್ನು ಬರೆದು ಕೊಟ್ಟರು.

ಶ್ರೀಕಂಠಯ್ಯನವರ ಇಂಗ್ಲಿಷ್ ವಾಗ್ಮಿತೆಯನ್ನು ಕುರಿತು ಹೇಳಹೊರಟೆನಷ್ಟೆ? ಒಂದು ಸಾರಿ ಅವರು ಮಿಥಿಕ್ ಸೊಸೈಟಿಯ ಡಾಲಿ ಮೆಮೋರಿಯಲ್ ಹಾಲ್‌ನಲ್ಲಿ "The burden of the prophets" (ದೈವಪ್ರವಾದಿಗಳ ಪಲ್ಲವಿ) ಎಂಬ ಶೀರ್ಷಿಕೆಯಲ್ಲಿ ನಾಲ್ಕೈದು ಉಪನ್ಯಾಸಗಳನ್ನು ಕೊಟ್ಟರು. ಎಲ್ಲ ಇಂಗ್ಲಿಷಿನಲ್ಲಿ. ಅವುಗಳಲ್ಲಿ ಅದ್ಭುತವಾದ ವಾಕ್ಯಸೌಂದರ್ಯವಿತ್ತು. ಯೆಹೂದ್ಯರ, ಕ್ರಿಶ್ಚಿಯನ್ನರ, ಮುಸಲ್ಮಾನರ, ಹಿಂದುಗಳ ಮತಬೋಧಕರು ಹೇಳಿರುವ ಅತಿ ಮುಖ್ಯ ತತ್ತ್ವಗಳನ್ನು ಈ ಉಪನ್ಯಾಸ ಮಾಲೆಯಲ್ಲಿ ಅವರು ವಿಮರ್ಶೆಮಾಡಿ ಹಾಗೆಯೇ ಇತರ ಮತಪ್ರಕ್ರಿಯೆಗಳನ್ನು ಸಂಗ್ರಹವಾಗಿ ಪ್ರಸ್ತಾವಮಾಡಿ, ಅವುಗಳ ಜೊತೆಗೆ ವರ್ಡ್ಸ್‌ವರ್ತ್, ಟೆನ್ನಿಸನ್, ಬ್ರೌನಿಂಗ್, ರುಪರ್ಟ್ ಬ್ರೂಕ್ ಮೊದಲಾದ ಆಧುನಿಕ ಕವಿಗಳವರೆಗೂ ಭಗವದ್ವಿಷಯದಲ್ಲಿಯೂ ಜೀವಭವಿಷ್ಯದ ವಿಷಯದಲ್ಲಿಯೂ ಇರುವ ತತ್ತ್ವಪ್ರತಿಪಾದನೆಗಳನ್ನು ಸಂಗ್ರಹಿಸಿ, ಮನುಷ್ಯಜೀವನದ ಉದಾತ್ತ ಸ್ವರೂಪವನ್ನು ನಿದರ್ಶನಮಾಡಿಕೊಟ್ಟರು. ಆ ಉಪನ್ಯಾಸಗಳ ಇಂಗ್ಲಿಷ್ ವಾಗ್ಧೋರಣೆ, ಶೈಲಿಯ ಗಾಂಭೀರ್ಯ ಮತ್ತು ಆ ವಿಮರ್ಶನದೃಷ್ಟಿಯ ಉದಾರತೆ-ಇವು ವಿಸ್ಮಯಾನಂದಕರಗಳಾಗಿದ್ದವು.

ನೀತಿಗುಣ

ಶ್ರೀಕಂಠಯ್ಯನವರ ಜೀವನ ಕರುಣಪ್ರಚೋದಕ ಸಂದರ್ಭಗಳಿಂದ ತುಂಬಿದ್ದು. ಅವರ ನಡುವಯಸ್ಸಿನ ಸುಮಾರಿನಲ್ಲಿ ವಿಪತ್ತುಗಳು ಒಂದರ ಹಿಂದೊಂದು ಬಂದು ಆ ಮನೆಯನ್ನು ದುಃಖಾವೃತವಾಗಿ ಮಾಡಿದ್ದವು. ಶ್ರೀಕಂಠಯ್ಯನವರು ಆ ವಿಪತ್ತುಗಳನ್ನು ಧೈರ್ಯದಿಂದಲೂ, ತಾಳ್ಮೆಯಿಂದಲೂ ಸಹಿಸಿಕೊಂಡಿದ್ದು ಅವರ ಸಾಹಿತ್ಯಭಕ್ತಿಗೆ ಕಿರೀಟ ಪ್ರಾಯವಾದದ್ದು. ಅವರು ಗ್ರೀಕ್ ಸಾಹಿತ್ಯದ ರುದ್ರನಾಟಕಗಳಿಗೆ ಮನಸೋತಿದ್ದವರು. ವಿಧಿವಿಲಾಸ, ವಿಧಿಯ ವೈಕಟ್ಯ ಎಷ್ಟು ಬಗೆಯದೆಂಬುದನ್ನು ಅವರು ಸಾಹಿತ್ಯದಲ್ಲಿ ಕಂಡು ತಮ್ಮ ಮನಸ್ಸಿನಲ್ಲಿ ಚಿಂತಿಸಿದ್ದವರು. ಕಷ್ಟಾನುಭವವು ಅವರ ಚಿತ್ತಸ್ಥೈರ್ಯವನ್ನೂ ಸಮತೆಯನ್ನೂ ಕೆಡಿಸಿರಲಿಲ್ಲ, ಅವರ ಮನಸ್ಸನ್ನು ವಿನಾರಪಡಿಸಿರಲಿಲ್ಲ. ಅವರು ತಮ್ಮ ದುಃಖವನ್ನು ನುಂಗಿಕೊಂಡು ಕರ್ತವ್ಯನಿಷ್ಠೆಯಲ್ಲಿ ಅದನ್ನು ಮರೆತಿದ್ದರು. ಇದೇ ನನ್ನ ದೃಷ್ಟಿಯಲ್ಲಿ ನೀತಿಗುಣದ ಪರಾಕಾಷ್ಠೆ.

ಶ್ರೀಕಂಠಯ್ಯನವರು ಸ್ವಾಭಾವಿಕವಾಗಿ ಸರಳರು, ನಿಷ್ಕಲ್ಮಷರು, ಉದಾರಿಗಳು. ಇತರರಿಗೆ ಸಹಾಯಕವಾಗುವುದರಲ್ಲಿ ಅವರಿಗೆ ಸಂತೋಷವಾಗುತ್ತಿತ್ತು. ಅವರು ಕಡೆ ಕಡೆಯ ದಿನಗಳಲ್ಲಿ ಅವರ ಆಗಿನ ಅನಾರೋಗ್ಯ ಸ್ಥಿತಿಯಲ್ಲಿ ಪರಸ್ಥಳ ಹೋದದ್ದು ನಮ್ಮಲ್ಲಿ ಕೆಲವರಿಗೆ ಇಷ್ಟವಾಗಲಿಲ್ಲ. ಕನ್ನಡಿಗರ ದುರ್ದೈವ ಅವರನ್ನು ಬೇರೆ ಕಡೆಗೆ ಎಳೆಯಿತು.

೨೨

ಟಿ.ಎಸ್. ವೆಂಕಣ್ಣಯ್ಯನವರು

೧. ಅಂತರ್ದೃಷ್ಟಿ

ಪರಿಷತ್ತಿನ ಸ್ಥಾಪನೆಯಾದ ಐದಾರು ದಿನಗಳ ತರುವಾಯ ಒಂದು ಮಧ್ಯಾಹ್ನ ಸುಮಾರು ಮೂರು ಘಂಟೆಯ ವೇಳೆಗೆ ಇಬ್ಬರು ದೊಡ್ಡ ಮನುಷ್ಯರು ನನ್ನ ಕೆಲಸದ ಸ್ಥಳಕ್ಕೆ ಬಂದರು. ಆಗ ನಾನು 'ಕರ್ಣಾಟಕ' ಎಂಬ ಇಂಗ್ಲಿಷಿನ ಅರ್ಧವಾರ ಪತ್ರಿಕೆಯನ್ನು ನಡೆಸುತ್ತಿದ್ದೆ. ಅದರ ಕಾರ್ಯಸ್ಥಾನವಿದ್ದದ್ದು ಸಿದ್ದಿಕಟ್ಟೆಯಲ್ಲಿ ಗುಂಡೋಪಂತ್ ಬೀದಿಯಲ್ಲಿರುವ ಗುಂಡೋಪಂತರ ಕಟ್ಟಡದಲ್ಲಿ. ಮಹಡಿಯ ಮೇಲೆ 'ಕರ್ಣಾಟಕ' ದ ಕಾರ್ಯಾಲಯ. ಕಟ್ಟಡದ ನೆಲಭಾಗದಲ್ಲಿ ಶ್ರೀಮಾನ್ ಕೆ.ಎಸ್. ಕೃಷ್ಣಯ್ಯರ್‌ರವರ ಐರಿಷ್ ಪ್ರೆಸ್ ಇತ್ತು.

ಬಂದವರಲ್ಲಿ ಒಬ್ಬರು ತೆಳ್ಳಗೆ ಎತ್ತರವಾಗಿದ್ದರು. ಷರಾಯಿ ತೊಟ್ಟು ಓಪನ್ ಕಾಲರ್ ಕೋಟು ಧರಿಸಿ ಕೊರಳಿಗೆ ನೆಕ್‌ಟೈಯನ್ನೂ ಕಟ್ಟಿದ್ದರೆಂದು ನನಗೆ ಜ್ಞಾಪಕ. ಪಂಜಾಬಿ ಸ್ಟೈಲಿನಲ್ಲಿ ಕೋರೆ ರುಮಾಲು ಸುತ್ತಿದ್ದರು. ಎಡಭುಜದ ಮೇಲೆ ಅದರ ಚುಂಗು. ಅದರ ಇನ್ನೊಂದು ಕೊನೆ ತಲೆಯ ಮೇಲೆ (ಶಿರ್‌ಪೇಷ್) ಉತ್ತಂಸದಂತೆ ಕಾಣುತ್ತಿತ್ತು. ಒಳ್ಳೆಯ ಠೀವಿಯ ಆಳು. ಅದು ಟಿ.ಎಸ್.ವೆಂಕಣ್ಣಯ್ಯ.

ಇನ್ನೊಬ್ಬರು ಎತ್ತರವೂ ಅಲ್ಲ, ಗಿಡ್ಡೂ ಅಲ್ಲ; ತೆಳುವೂ ಅಲ್ಲ, ದಪ್ಪವೂ ಅಲ್ಲ. ಇವರು ಮೈಸೂರಿನ ಸ್ಟೈಲಿನಲ್ಲಿ ಪಂಚೆ ಕಚ್ಚೆ ಉಟ್ಟು ಕ್ಲೋಸ್‌ಕಾಲರ್ ಕೋಟು ತೊಟ್ಟು ಸರಿಗೆ ರುಮಾಲನ್ನಿಟ್ಟುಕೊಂಡಿದ್ದರು. ಇವರು ಎ.ಆರ್. ಕೃಷ್ಣಶಾಸ್ತ್ರಿಗಳು.

ನಾನು ಅವರಿಬ್ಬರನ್ನೂ ಕೂಡ ಹೇಳಿ "ನೀವು ಯಾರು? ವಿಷಯವೇನು?" ಎಂದು ಕೇಳಿದೆ. ಕೃಷ್ಣಶಾಸ್ತ್ರಿಗಳು "ನಾವು ಕಂಟೋನ್ಮೆಂಟಿನಿಂದ ಬಂದಿದ್ದೇವೆ. ಕನ್ನಡದ ವಿಷಯದಲ್ಲಿ ನಮಗೆ ಶ್ರದ್ಧೆಯುಂಟು. ಆ ವಿಚಾರ ಮಾತನಾಡುವುದಕ್ಕಾಗಿ ಬಂದಿದ್ದೇವೆ" ಎಂದರು. ಮಾತಿಗೆ ಪ್ರಾರಂಭವಾಯಿತು. ಶಾಸ್ತ್ರಿಗಳು ಹೇಳಿದರು:

"ಸ್ವಾಮಿ, ಪರಿಷತ್ತನ್ನು ಪ್ರಾರಂಭ ಮಾಡಿದವರು ಎಲ್ಲರೂ ಮುದುಕರು, ಪ್ರತಿಷ್ಠಾವಂತರು. ನೀವು ಹೋಗಿ ಅವರ ಜೊತೆ ಸೇರಿಕೊಂಡಿರಲ್ಲ? ಅವರಿಂದ ಏನು ಕೆಲಸ ನಡೆಯುತ್ತದೆ? ಕೆಲಸ ಮಾಡುವವರಿಲ್ಲದೆಹೋದರೆ ಪರಿಷತ್ತಿನಿಂದ ಯಾರಿಗೇನು ಪ್ರಯೋಜನ?"

ನಾನು ಹೇಳಿದೆ: "ಯಾವ ದೊಡ್ಡ ಕೆಲಸ ನಡೆಯಬೇಕಾದರೂ ಮೊದಲು ಒಂದಷ್ಟು ಹಣ ಬೇಕಲ್ಲ? ಸರಕಾರದವರು ಧನ ಒದಗಿಸಲು ಮುಂದೆ ಬಂದಿದ್ದಾರೆ. ಅದು ದಿವಾನ್ ವಿಶ್ವೇಶ್ವರಯ್ಯನವರ ಔದಾರ್ಯದಿಂದ. ಅವರಿಗಿರುವುದು ನಂಜುಂಡಯ್ಯನವರು ಕೆಲಸ ನಡಸಿಯಾರೆಂಬ ಭರವಸೆ. ಈ ಹಳಬರನ್ನೆಲ್ಲ ಸರಕಾರದ ಮುಖ್ಯ ಮುಖ್ಯ ಜನ ಬಲ್ಲರು. ಮತ್ತು ಈ ಹಳಬರು ಮಹಾಜನರಲ್ಲಿಯೂ ಗಣ್ಯತೆ ಪಡೆದವರು. ಅವರನ್ನು ನಾವು ಯಾಕೆ ಬಿಟ್ಟಿರಬೇಕು? ಕರ್ಪೂರ ಶ್ರೀನಿವಾಸರಾಯರಿಗಾಗಲಿ ಡಾ ॥ ಅಚ್ಯುತರಾಯರಿಗಾಗಲಿ ಕನ್ನಡದ ಅಭಿಮಾನವಿಲ್ಲವೆಂದು ಹೇಗೆ ಹೇಳಬಹುದು? ಅವರಿಂದ ಸಂಸ್ಥೆಗೆ Prestige ಬರುತ್ತದೆ."

ಶಾಸ್ತ್ರಿಗಳು: "ಅದೆಲ್ಲ ಇರಬಹುದು ಸ್ವಾಮಿ. ಕೆಲಸದ ಮಾತು ಹೇಳಿ. ಅವರಲ್ಲಿ ಕೆಲಸ ಮಾಡುವವರು ಯಾರು? ಅಂಥ ಮುದುಕರಿಂದ ಕೆಲಸ ನಡೆಯುತ್ತದೆಯೆ?"

ನಾನು: "ಹಾಗಾದರೆ ನಾನು ಏನು ಮಾಡಬೇಕೆಂದು ನಿಮ್ಮ ಅಭಿಪ್ರಾಯ?"

ಶಾಸ್ತ್ರಿಗಳು: "ಯುವಕರನ್ನು ಈ ಕೆಲಸಕ್ಕೆ ತರಬೇಕು."

ನಾನು: "ಅದು ನನ್ನಿಂದಾಗುವ ಕೆಲಸವೆ?"

ಶಾಸ್ತ್ರಿಗಳು: "ನೀವು ಬೆಂಬಲ ಕೊಟ್ಟರೆ ನಾವು ಆ ಕೆಲಸ ಮಾಡುತ್ತೇವೆ. ನೀವು ನಮ್ಮ ವಯಸ್ಸಿನವರು; ಹೋಗಿ ಆ ವೃದ್ಧರಲ್ಲಿ ತಗಲಿಹಾಕಿಕೊಂಡಿದ್ದೀರಿ!"

ನಾನು: "ನಾನೇನೂ ತಗಲಿಹಾಕಿಕೊಂಡಿಲ್ಲ. ಅವರು 'ಒಳ್ಳೆಯ ಕೆಲಸ ಮಾಡೋಣ, ಬಾ' -ಎಂದರು; ಹೋದೆ. ಈಗ ನೀವು 'ಬಾ' ಎಂದರೆ ನಿಮ್ಮೊಡನೆಯೂ ಸೇರಲು ಸಿದ್ಧನಾಗಿದ್ದೇನೆ."

ಕರ್ಣಾಟಕ ಸಂಘ

ಅಲ್ಲಿಂದ ಒಂದೆರಡು ತಿಂಗಳೊಳಗಾಗಿ ಪ್ರಾರಂಭವಾದದ್ದು ಬೆಂಗಳೂರು ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘ. ಅದು ಪರಿಷತ್ತಿಗೆ ಪ್ರತಿಸ್ಪರ್ಧಿಯಾಗಿ ಹುಟ್ಟಿದ್ದಲ್ಲ; ಕೇವಲ ಪರಿಪೂರಕವಾದದ್ದು. ಪರಿಷತ್ತಿನಲ್ಲಿ ಮುಂದಾಳಾಗಿದ್ದ ಪ್ರೊ ॥ ಬಿ. ವೆಂಕಟನಾರಣಪ್ಪನವರು ಕರ್ಣಾಟಕ ಸಂಘದ ಅಧ್ಯಕ್ಷರಾಗಿದ್ದರು. ಬಹು ವರ್ಷಗಳ ಕಾಲ ಕರ್ಣಾಟಕ ಸಂಘದ ಕಾರ್ಯಕಲಾಪಗಳು ಪರಿಷತ್ತಿನದಕ್ಕಿಂತ ಹೆಚ್ಚು ಯಶಸ್ವಿಯಾಗಿ ನಡೆದವು. ಪದೇ ಪದೇ ಉಪನ್ಯಾಸಗಳೂ ಕಾವ್ಯವಾಚನ ಪ್ರಸಂಗಗಳೂ ಸಂತೋಷಕೂಟಗಳೂ ನಡೆದವು. 'ಪ್ರಬುದ್ಧ ಕರ್ಣಾಟಕ' ಪತ್ರಿಕೆ ಬಹು ಬೆಲೆಯುಳ್ಳ ಲೇಖನಗಳಿಂದ ತುಂಬಿಕೊಂಡು ಹೆಸರು ಪಡೆಯಿತು.

ಕನ್ನಡ ವಿದ್ವತ್ಕುಲಶ್ರೇಷ್ಠರಾದ ಆರ್. ನರಸಿಂಹಾಚಾರ್ಯರು, ಚ. ವಾಸುದೇವಯ್ಯನವರು, ಬೆನಗಲ್ ರಾಮರಾಯರು, ಎಚ್. ಲಿಂಗರಾಜ ಅರಸಿನವರು ಮೊದಲಾದವರು ಕರ್ಣಾಟಕ ಸಂಘದ ವಾರ್ಷಿಕೋತ್ಸವಗಳಲ್ಲಿ ಭಾಗವಹಿಸಿ ಆ ಸಂಸ್ಥೆಯ ಕಳೆಯನ್ನೇರಿಸಿದರು.

ಸಂತೋಷಕೂಟಗಳು

ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘದ ಕಾರ್ಯಕಲಾಪಗಳಲ್ಲಿ ಆಗಾಗ ಸಂತೋಷ ಕೂಟಗಳು ನಮಗೆ ದೊರೆಯುತ್ತಿದ್ದವು. ಇಂಥ ಸಮಾರಂಭಗಳು ಯುವಜನರಿರುವ ಕಡೆ ಬಹು ಮುಖ್ಯವಾದವೆಂದು ನನ್ನ ಅನುಭವ. ಕನ್ನಡ ಸಾಹಿತ್ಯ ಪರಿಷತ್ತಿನ ನನ್ನ ಅನುಭವದಲ್ಲಿಯೂ ಈ ಅಭಿಪ್ರಾಯ ಸಮರ್ಥಿತವಾಗಿದೆ.

ಕರ್ಣಾಟಕ ಸಂಘದ ಸಂತೋಷ ಸಮಾರಂಭಗಳನ್ನು ಏರ್ಪಡಿಸುವುದರಲ್ಲಿ ಕೃಷ್ಣಶಾಸ್ತ್ರಿಗಳವರದು ದೊಡ್ಡ ಕೈ. ತಿಂಡಿ ತರತೀಪುಗಳು ಅವರ ಇಷ್ಟದಂತೆ ನಡೆಯುತ್ತಿದ್ದುವು. ಅದನ್ನು ಎಲ್ಲರೂ ಮೆಚ್ಚಿಕೊಂಡಿದ್ದರು. ಒಳ್ಳೆಯ ಕೋಸುಂಬರಿ, ಒಳ್ಳೆಯ ಪಾನಕ, ಆಯಾಕಾಲದ ಹಣ್ಣುಗಳಲ್ಲಿ ಒಳ್ಳೆಯ ಹಣ್ಣು-ಇದು ಅವರ ಪರಿಠವಣೆ. ಪದಾರ್ಥಗಳನ್ನು ಖುದ್ದಾಗಿ ಅಂಗಡಿಗೆ ಹೋಗಿ ಆರಿಸಿ ತರುವರು; ತಮ್ಮ ಸ್ವಂತ ಉಸ್ತುವಾರಿಯಲ್ಲಿ ಪದಾರ್ಥಗಳನ್ನು ಚೊಕ್ಕಟ ಮಾಡಿಸುವರು. ಅದರ ಪಾಕವಿಧಾನಗಳನ್ನು ತಾವೇ ನೋಡಿ ಪಾಚಕರಿಗೆ ಹೇಳಿಕೊಡುವರು.

ಕೃಷ್ಣಶಾಸ್ತ್ರಿಗಳಿಗೆ ಸಂಘದ ಯಾವ ಕೆಲಸವೂ ಸಣ್ಣದೆಂದು ತೋರಿರಲಿಲ್ಲ. ಪೊರಕೆ ಹಿಡಿದು ಕಸ ಬಳಿಯುವುದು ಮೊದಲುಗೊಂಡು, ಪುಸ್ತಕಗಳ ಮೇಲಿನ ಧೂಳುಹೊಡೆಯುವುದು ಮೊದಲುಗೊಂಡು, ಮೀಟಿಂಗಿಗಾಗಿ ಕುರ್ಚಿ ಮೇಜುಗಳನ್ನು ಹೊರುವುದು ಮೊದಲುಗೊಂಡು ಅವರು ಮಾಡದಿದ್ದ ಕೆಲಸವಿಲ್ಲ. ಎಲ್ಲ ಸಣ್ಣಪುಟ್ಟ ಕೆಲಸಗಳಲ್ಲಿಯೂ ಅವರಿಗಿದ್ದ ಶ್ರದ್ಧೆ ಅವರಿಗೆ ವ್ಯಾಕರಣವಿಚಾರದಲ್ಲಿಯೂ ಸಾಹಿತ್ಯಶೋಧನೆಯಲ್ಲಿಯೂ ಎಷ್ಟು ಶ್ರದ್ಧೆಯಿತ್ತೋ ಅಷ್ಟೇ ಆಳವಾದದ್ದು. ಆದದ್ದರಿಂದ ಅವರ ತಿಂಡಿತೀರ್ಥಗಳು ಸೊಗಯಿಸುತ್ತಿದ್ದವು. ಒಂದಕ್ಕಿಂತ ಒಂದು ಸೊಗಯಿಸುವಂತಿದ್ದವು.

ಈ ವಿಷಯದಲ್ಲಿ ವೆಂಕಣ್ಣಯ್ಯನವರ ಪಾತ್ರ ಬೇರೆ ವಿಧದ್ದು. ಶಾಸ್ತ್ರಿಗಳು ಕೆಲಸ ಮಾಡುವವರು; ವೆಂಕಣ್ಣಯ್ಯ ಮಾಡಿಸುವವರು. ಹೆಸರುಬೇಳೆ ಕೋಸುಂಬರಿ ತಯಾರಾಗುತ್ತಿದೆಯೆನ್ನಿ. ವೆಂಕಣ್ಣಯ್ಯ "ಭೇಷ್! ಭರ್ಜರಿಯಾಗಿರುತ್ತದೆ-ಮಾವಿನಕಾಯಿ ತುರಿ ಸ್ವಲ್ಪ ಬಿದ್ದರೆ ಅದರ ರುಚಿ ಬಹು ಸೊಗಸು" ಎನ್ನುವರು. ಅದನ್ನು ಕೇಳಿದವರು ಆ ಕೆಲಸ ನಡಸುವರು. ಆಂಬೊಡೆ ನಡೆಯುತ್ತಿದೆಯೆಂದು ಗೊತ್ತಾದರೆ "ಭೇಷ್! ಮಧ್ಯದಲ್ಲಿ ಒಂದೊಂದು ಹಸಿಶುಂಠಿ ಚೂರು ಇರುತ್ತದೆ ತಾನೆ?" ಎನ್ನುವರು. ಆ ಸಲಹೆಯನ್ನು ಅಂಗೀಕರಿಸುವವರಿದ್ದರು. ಅವರೆಕಾಯಿ ಕಾಲದಲ್ಲಿ ಉಪ್ಪಿಟ್ಟು ಎಂದರೆ ಸೊಗಸಾದ ಭಕ್ಷ್ಯ. "ಅದರ ಮಧ್ಯದಲ್ಲಿ ಒಂದೊಂದು ಮೆಣಸಿನಕಾಳು ಇದ್ದು ಉಪ್ಪಿಟ್ಟನ್ನು ಕೈಪಿಡಿಚೆ ಮಾಡಿ

ಆವಿಯಲ್ಲಿ ಬೇಯಿಸಿದರೆ ರಾಜಯೋಗ್ಯವಾಗುತ್ತದೆ” -ಎನ್ನುವರು. ಅದು ಹಾಗೆ ನಡೆಯುವುದು. ವೆಂಕಣ್ಣಯ್ಯ, ಶಾಸ್ತ್ರಿ-ಇಬ್ಬರಿಗೂ ಇಂಥ ವೈಲಕ್ಷಣ್ಯಗಳು ಅನೇಕ. ವೆಂಕಣ್ಣಯ್ಯ ನಯವಾಗಿ, ಮೃದುವಾಗಿ, ಮೆಲುದನಿಯಲ್ಲಿ, ರಸವತ್ತಾಗಿ ಮಾತನಾಡಿ ಕೆಲಸ ಮಾಡಿಸುತ್ತಿದ್ದರು. ಶಾಸ್ತ್ರಿಗಳು ಊಟ ಉಪಚಾರಗಳಲ್ಲಿ ಎಷ್ಟು ಮಧುರವೋ ಮಾತಿನಲ್ಲಿ ಅಷ್ಟು ಖಡಾಖಡಿ.

ಅವರಿಬ್ಬರೂ ಒಬ್ಬರಿಗೊಬ್ಬರು ಪರಿಪೂರಕರಾಗಿದ್ದರು. ಯಾವ ವಿಷಯದಲ್ಲಿ? ಇಬ್ಬರಿಗೂ ಸಮಾನೋದ್ದೇಶವಾದ ಸಾಹಿತ್ಯೋದ್ಯಮದ ವಿಷಯದಲ್ಲಿ.

ವೆಂಕಣ್ಣಯ್ಯನವರ ಪರಿತವಣೆ

ವೆಂಕಣ್ಣಯ್ಯ, ನಾನು ಬಹು ವರ್ಷ ಒಂದೇ ಕುಟುಂಬವೆಂಬಂತೆ ಇದ್ದೆವು. ಬೇಸಗೆಯ ರಜಾಕಾಲದಲ್ಲಿ ಅವರ ಮನೆಯವರು ತಮ್ಮ ಸ್ವಸ್ಥಳವಾದ ತಳುಕು ಮೊದಲಾದ ಪ್ರದೇಶಗಳಿಗೆ ಹೋಗುತ್ತಿದ್ದರು. ಆಗ ವೆಂಕಣ್ಣಯ್ಯ ನಮ್ಮ ಮನೆಯ ಜನದಲ್ಲಿ ಒಬ್ಬರಾಗಿರುತ್ತಿದ್ದರು. ನನ್ನ ತಂದೆಗೆ ಅವರಲ್ಲಿ ತುಂಬಾ ವಿಶ್ವಾಸ. ನನ್ನ ತಾಯಿ ಆತನನ್ನು ಮನೆಮಕ್ಕಳಲ್ಲಿ ಒಬ್ಬನೆಂಬಂತೆ ಕಾಣುತ್ತಿದ್ದರು. ಅಡಿಗೆ ಏನುಮಾಡಬೇಕು, ಫಲಾಹಾರಕ್ಕೆ ಏನು ಮಾಡಬೇಕು-ಈ ಪರಿತವಣೆಗಳನ್ನೆಲ್ಲ ನನ್ನ ತಾಯಿ ಕೇಳುವರು. ವೆಂಕಣ್ಣಯ್ಯ ಸಂಕೋಚವಿಲ್ಲದೆ ಹೇಳುವರು. ನನ್ನ ತಂದೆಗೆ ಇದೊಂದು ವಿನೋದ; ಅವರೂ ಭೋಜನಪ್ರಿಯರಾದದ್ದರಿಂದ ವೆಂಕಣ್ಣಯ್ಯನವರ ಅತಿಥಿತನ ನಮ್ಮ ಮನೆಗೆಲ್ಲ ಒಂದು ಸಂತೋಷವಾಗಿತ್ತು.

ವೆಂಕಣ್ಣಯ್ಯನವರಿಗೆ ಅವರೆಕಾಯಿ ಕಾಲದಲ್ಲಿ ಆ ಪದಾರ್ಥದ ನಾನಾ ತರತೀಪುಗಳಲ್ಲಿ ಸಂತೋಷ. ನನಗೆ ಒಂದು ಸಾರಿ ಸಂಜೆ ಹೊಟ್ಟೆನೋವು ಬರುತ್ತಿತ್ತು. ಅದಕ್ಕೆ ವೆಂಕಣ್ಣಯ್ಯನವರು ಪದೇ ಪದೇ ಹೇಳುತ್ತಿದ್ದ ಔಷಧ ಸೊಗಸಾದ ಬದನೆಕಾಯಿ ಹುಳಿ. ಬೇಳೆ ಧಂಡಿಯಾಗಿರಬೇಕು. ಕೈತುಂಬ ತುಪ್ಪ ಬೀಳಬೇಕು.

“ಅದನ್ನ ಒಂದು ದಿವಸ ಊಟಮಾಡಿ ನೋಡರ್ಲಾ” ಎನ್ನುವರು. ಅಜೀರ್ಣಕ್ಕೆ ಬೇಳೆ ಹುಳಿ ರಾಮಬಾಣವಂತೆ!

ವೆಂಕಣ್ಣಯ್ಯನವರ ವ್ಯಕ್ತಿತ್ವ

ವೆಂಕಣ್ಣಯ್ಯನ ಆಕಾರವ್ಯಕ್ತಿತ್ವ ಪ್ರಭಾವಕಾರಿಯಾದದ್ದು. ಆಳು ಎತ್ತರ. ಆರಡಿ ಇರಬಹುದು ಮೈ ತೆಳುವು, ಕೈ ಬೆರಳುಗಳು ತುಂಬ ಉದ್ದ. ನನ್ನ ಕೈಯ ಒಂದು ಗೇಣು ಅವರ ಕೈಗೆ ಒಂದು ಚೋಟು. ಮುಖವೂ ಆಕರ್ಷಣೀಯ. ತೇಜಸ್ವಿಯಾದ ಕಣ್ಣುಗಳು. ಮಾತು ಅವಸರವಿಲ್ಲದೆ ಸಾವಧಾನವಾಗಿ ಹರಿದುಬರುವುದು. ಕಂಠಧ್ವನಿ ತುಂಬ ಗಟ್ಟಿಯಲ್ಲದೆ, ತುಂಬ ಮೆಲ್ಲಗೂ ಅಲ್ಲದೆ ಮಧ್ಯಮಸ್ಥಾಯಿಯಲ್ಲಿ ಬರುವುದು. ಸಂಗೀತಕ್ಕೆ ಒಪ್ಪುವ ಕಂಠ. ಉಡಿಗೆತೊಡಿಗೆಗಳಲ್ಲಿಯೂ ಅಚ್ಚುಕಟ್ಟು. ಸ್ಕೂಲು ಮೇಷ್ಟರಾಗಿದ್ದಾಗ ಷರಾಯಿ ತೊಡುತ್ತಿದ್ದರು. ಅವರು ಒಂದೆರಡು ಸಲ ಇಜಾರು ಧರಿಸಿದ್ದದ್ದನ್ನು ನಾನು ನೋಡಿದ್ದೇನೆ. ಅವರ ತಲೆಯ ಮೇಲೆ ಇರುತ್ತಿದ್ದದ್ದು ರುಮಾಲು. ಸಣ್ಣ ಸರಿಗೆಯಂಚಿನ ರುಮಾಲು, ಸೊಗಸಾಗಿ ಸುತ್ತಿದ್ದದ್ದು.

ವೆಂಕಣ್ಣಯ್ಯನವರು ಧಾರವಾಡದಲ್ಲಿಯೂ ಕೆಲವುಕಾಲ ಇದ್ದರಂತೆ. ಅವರ ಮಾತಿನಲ್ಲಿ ಧಾರವಾಡದ ಪ್ರಯೋಗಗಳು ಹೆಚ್ಚಾಗಿದ್ದವು. ಅವರು ಲಾ ಕಾಲೇಜಿನಲ್ಲಿ ಓದುತ್ತಿದ್ದ ದಿನಗಳಲ್ಲಿ ಒಂದು ಕೆಂಪು ರೇಷ್ಮೆಯ ವಸ್ತ್ರವನ್ನು ಪಂಜಾಬಿ ಸ್ಟೈಲಿನಲ್ಲಿ ಚುಂಗು ಬಿಟ್ಟ ಕೋರೆ ರುಮಾಲಾಗಿ ಸುತ್ತುತ್ತಿದ್ದರಂತೆ. ಆ ಫ್ಯಾಷನ್ನಿನಲ್ಲಿ ಅವರು ರುಮಾಲು ಸುತ್ತುತ್ತಿದ್ದದ್ದನ್ನು ನಾನೂ ನೋಡಿದ್ದೇನೆ.

ಒಟ್ಟಿನಮೇಲೆ ವೇಷ ಭೂಷಣಗಳು ಒಪ್ಪತಕ್ಕವಾಗಿ ಅಂದವಾಗಿರುತ್ತಿದ್ದವು.

***

ವಿಷಯ ಸ್ವಂತ, ಮಾತು ಜಲ್ಪಿತ-ಇದು ನನ್ನ ಗತಿ ವೆಂಕಣ್ಣಯ್ಯನ ಪ್ರಸ್ತಾವದಲ್ಲಿ. ಆತನ ನೆನಪು ಬಂದಾಗ ಮನಸ್ಸು ಅಸ್ತವ್ಯಸ್ತವಾಗುತ್ತದೆ. ಎಲ್ಲಿ ಮೊದಲು ಮಾಡಲಿ, ಎಲ್ಲಿ ಕೊನೆ, ಯಾವುದು ಅನುಕ್ರಮ, ಯಾವುದು ಹೇಳಬೇಕಾದದ್ದು, ಯಾವುದು ತಕ್ಕದ್ದಲ್ಲ-ಈ ವಿವೇಕ ತಪ್ಪಿಹೋಗುತ್ತದೆ. ನಾವಿಬ್ಬರೂ ಮನೋಜೀವನ ಬುದ್ಧಿಜೀವನಗಳಲ್ಲಿ ಬಹುಕಾಲ ಅಷ್ಟು ಏಕವಾಗಿದ್ದವರು.

ಮನುಷ್ಯಜೀವನದಲ್ಲಿ ಎಷ್ಟೋ ಸ್ನೇಹಗಳು ಷರಟು ಕೋಟುಗಳಂತೆ ಹೊರವಸ್ತುಗಳಾಗಿ ನಮ್ಮ ಮೈಗೆ ಅಂಟಿಕೊಂಡಿರುತ್ತವೆ. ಒಂದೋ ಎರಡೋ ಸ್ನೇಹಗಳು ಮಾತ್ರ ಮೈಯ

ಚರ್ಮವಾಗಿ, ಮಾಂಸ ಮೂಳೆಗಳಾಗಿ ಜೀವನದ ಆಶ್ರಯವಸ್ತುಗಳಾಗುತ್ತವೆ. ವೆಂಕಣ್ಣಯ್ಯ ಹಾಗೆ ನನ್ನ ಜೀವದ ಅಂತರ್‌ದ್ರವ್ಯವಾದವರು; ಹೊರಗಣ ಪದಾರ್ಥವಲ್ಲ.

ರಸಿಕ ವಾತಾವರಣ

ವೆಂಕಣ್ಣಯ್ಯನವರ ಜನ್ಮಸ್ಥಳ ಚಿತ್ರದುರ್ಗ ಜಿಲ್ಲೆಯ ಚಳ್ಳಕರೆಯ ಬಳಿಯ ತಳುಕು ಗ್ರಾಮ. ಅವರು ಮುಲಕನಾಡು ಬ್ರಾಹ್ಮಣರು. ಮನೆ ಮಾತು ತೆಲುಗು-ಕನ್ನಡ ಬೆರೆತ ತೆಲುಗು. ವೆಂಕಣ್ಣಯ್ಯನವರ ತಂದೆ ಸುಬ್ಬಣ್ಣನವರು ಆ ಪ್ರಾಂತದಲ್ಲಿ ಹೆಸರುವಾಸಿಯಾಗಿದ್ದವರು. ಅವರು ತಮ್ಮ ಸುತ್ತಮುತ್ತಲಿನ ಹಳ್ಳಿಗಳವರ ವಿನೋದಕ್ಕಾಗಿ ನಾಟಕ ಲಾವಣಿಗಳನ್ನು ಕಟ್ಟಿ ಕೊಡುತ್ತಿದ್ದದ್ದುಂಟು. ವೆಂಕಣ್ಣಯ್ಯನವರ ತಾಯಿ ಭಾರತವನ್ನು ಸುಶ್ರಾವ್ಯವಾಗಿ ಓದುತ್ತಿದ್ದರು. ಅವರ ಬೀಗರು ಚಂದ್ರಶೇಖರ ಶಾಸ್ತ್ರಿಗಳೂ ಪ್ರಸಿದ್ಧ ಲಾವಣಿಕಾರರು. ಅವರದೊಂದು ನುಡಿ ಇದು:

ಝುಗಝುಗಿಸುವ ನಾಲ್ಕು ಜಗಲಿ-ಈ-
ಜಗವ ನಿರ್ಮಿಸಿದಂಥ ಬ್ರಹ್ಮನೆ ಬರಲಿ-
ಹರಿಹರರ ಕರೆತರಲಿ-ಝುಗ....

ಬೆಳಗೆರೆ ಪಂಜಾಗ್ರೋರ್ಕಾವ್ಯ-ಇದು
ಇಳೆಯೆಲ್ಲ ಜನರಿಗೆ ನೋಡಲಾಶ್ಚರ್ಯ
ಫಳಫಳ ಕನ್ನಡಿಯಪ್ಪಂದ
ಹೊಳೀತದೆ ಇದರಲಿ ಮುಸುಡೀ ಪಸಂದ

ಸೊಟ್ಟಾಪಟ್ಟೇ ಕಲ್ಲೇ ಇಕ್ಕಿ
ನೆಟ್ಟಗೆ ಮಾಡ್ಯವ್ರೇ
ಇಟಿಗೆ ಚೂರೂ ಮರಳೂ ತಿಕ್ಕಿ
ಮಟ್ಟಸ ತಟ್ಟ್ಯವ್ರೇ-ಬಲು
ಮಟ್ಟಸ ತಟ್ಟ್ಯವ್ರೇ
ಸುಣ್ಣಾಗಾರೆ ತಿಕ್ಕೀ ತಿಕ್ಕೀ
ನುಣ್ಣಗೆ ಮಾಡ್ಯವ್ರೇ-ಬಲು
ನುಣ್ಣಗ ಮಾಡ್ಯವ್ರೇ
ಕಣ್ಣಿಗೆ ಚಂದಾ ನೋಡ್ಲಿಕ್ಕಂದಾ
ರಸಿಕರ ಚಕ್ಕಂದಾ

ಶಾಸ್ತ್ರಿಗಳದೇ ಇನ್ನೊಂದು ರಚನೆ:

ಎಂಗಾಯಿತೇ ಪರಿಶೆ-ಕರಿಸಿದ್ದಿ
ಎಂಗಾಯಿತೇ ಪರಿಶೆ

ಎಂಗಾಯ್ತೆ ಪರಿಶೆ-
ರಂಗಪ್ಪನ್ ಜಾತ್ರೇಗೆ
ಸಿಂಗಾರಾಗ್ಹೋದೋರು-
ಮಂಗಮಂಗಾಗ್ ಬಂದ್ರಂತೆ
ಚೆಂಗಾವಿ ಸೀರೆಯುಟ್ಟು-ಓ ಕರಿಸಿದ್ದಿ
ರಂಗ್ರಂಗಿನ್ ಕುಪಸಾ ತೊಟ್ಟು
ಬಂಗಾರ್ದ ಮೂಗ್ತಿ ಇಟ್ಟು-
ಚುಂಗ್ಸೆರ್ಗ್ಗಲ್ಲಾಡಿಸ್ತ
ಕಂಗಳಡ್ಡಾಡಿಸ್ದೋರು
ಮಂಗಮೂರ್ತಿಯಾದರಲ್ಲೆ

ಚಂದ್ರಶೇಖರ ಶಾಸ್ತ್ರಿಗಳವರು ನಿರ್ಮಲ ಮನಸ್ಸಿನ ರಸಿಕರು; ಹಾಸ್ಯಪ್ರಿಯರು; ತತ್ತ್ವವೇತ್ತರು. ಅವರು ಉಪನಿಷತ್ತುಗಳಲ್ಲಿ ನಿಷ್ಠರಾಗಿದ್ದದ್ದಲ್ಲದೆ ಲೋಕಜೀವನದ ಕಷ್ಟನಿಷ್ಠುರಗಳನ್ನು ಚೆನ್ನಾಗಿ ಕಂಡು ಸಹಿಸಿದ್ದವರು. ಅವರ ಸ್ವಭಾವವನ್ನು ಕುರಿತು ಇಲ್ಲಿ ಹೇಳಿರುವುದರ ತಾತ್ಪರ್ಯ ವೆಂಕಣ್ಣಯ್ಯನವರ ಬಂಧುಮಿತ್ರವರ್ಗದ ವಾತಾವರಣವೆಂಥಾದ್ದು ಎಂಬುದನ್ನು ಕೊಂಚ ಮಾತ್ರವಾದರೂ ಪರಿಚಯ ಮಾಡಿಕೊಡುವುದು. ಅದು ಸುಸಂಸ್ಕೃತ ವಾತಾವರಣ.

ಇಂಥ ರಸಿಕ ಜನರ ವಾತಾವರಣದಲ್ಲಿ ಹುಟ್ಟಿ ಬೆಳೆದವರು ವೆಂಕಣ್ಣಯ್ಯ.

ಕೆಲವು ವರ್ಷದ ಹಿಂದೆ ತಳುಕಿನ ಮಹಾಜನರು ವೆಂಕಣ್ಣಯ್ಯನವರ ಜ್ಞಾಪಕಾರ್ಥವಾಗಿ ಒಂದು ಉತ್ಸವವನ್ನು ಏರ್ಪಡಿಸಿದ್ದರು. ಅದಕ್ಕಾಗಿ ಬೆಂಗಳೂರಿನಿಂದ ಶ್ರೀಮಾನ್ ನಿಟ್ಟೂರು ಶ್ರೀನಿವಾಸರಾಯರ ನೇತೃತ್ವದಲ್ಲಿ ಹೋಗಿದ್ದ ಮಿತ್ರಗೋಷ್ಠಿಯಲ್ಲಿ ನಾನೂ ಇದ್ದೆ. ಭಾವಚಿತ್ರದ ಮೆರವಣಿಗೆ, ಸಭೆ, ಭಾಷಣಗಳು, ಕಾವ್ಯವಾಚನ ಇತ್ಯಾದಿ ಕಾರ್ಯಕ್ರಮ ನಡೆಯಿತು. ಜನ ಸುತ್ತಮುತ್ತಲ ಊರುಗಳಿಂದ ಬಂದಿದ್ದರು. ಬಹು ದೊಡ್ಡ ಸಭೆ ಅದು.

ಮೇಲೆ ನಾನು ಪ್ರಸ್ತಾವಿಸಿರುವ ಚಂದ್ರಶೇಖರ ಶಾಸ್ತ್ರಿಗಳವರ ಮಗಳು (ದಿವಂಗತ) ಜಾನಕಮ್ಮನವರನ್ನು ಕಾಣುವ ಅವಕಾಶ ನನಗೆ ಅಲ್ಲಿ ದೊರೆಯಿತು. ಜಾನಕಮ್ಮನವರು ಲಲಿತವಾದ ತಿಳಿಗನ್ನಡದಲ್ಲಿ ರಸಭಾವಪೂರಿತಗಳಾದ ಪದ್ಯಗಳನ್ನು ಬರೆದಿದ್ದರು. ಅವರು ಪೂರ್ವ ವಯಸ್ಸಿನಲ್ಲಿಯೇ ತೀರಿಕೊಂಡದ್ದರಿಂದ ಕನ್ನಡ ಸಾಹಿತ್ಯವು ನಷ್ಟಪಟ್ಟಿತು. ಅವರ ಕವನಗಳು ಪುಸ್ತಕ ರೂಪದಲ್ಲಿ ಪ್ರಕಟವಾಗಿವೆ.

ಅಲೆದಾಟ

ಚಿತ್ರದುರ್ಗದಲ್ಲಿ ವಿದ್ಯಾಭ್ಯಾಸ ಮುಗಿದ ಅನಂತರ ಮೈಸೂರಿನ ಕಾಲೇಜಿನಲ್ಲಿ ಬಿ.ಎ. ಪಟ್ಟ ಪಡೆದು ವೆಂಕಣ್ಣಯ್ಯ ಬೊಂಬಾಯಿಗೆ ಹೋಗಿ ಕೊಂಚ ಕಾಲ ಲಾ ವ್ಯಾಸಂಗ ಮಾಡಿ. ಪೋಸ್ಟ್ ಆಫೀಸ್‌ನಲ್ಲಿ ಸ್ವಲ್ಪ ದಿನ ಉದ್ಯೋಗಕ್ಕಿದ್ದು ಆಮೇಲೆ ಮೈಸೂರಿನಲ್ಲಿ ವಿದ್ಯಾ ಇಲಾಖೆಗೆ ಸೇರಿ ದೊಡ್ಡ ಬಳ್ಳಾಪುರದಲ್ಲಿ ಮೇಷ್ಟರಾದರು. ಅಲ್ಲಿಂದ ಕೆಲವು ದಿನಗಳಾದ ಮೇಲೆ ಬೆಂಗಳೂರು ಕಂಟೋನ್ಮೆಂಟಿನಲ್ಲಿ ಯಾವುದೋ ಪಾಠಶಾಲೆಯಲ್ಲಿ ಉಪಾಧ್ಯಾಯರಾಗಿದ್ದರು. ನನಗೆ ಈ ನಾನಾ ಉದ್ಯೋಗ ಸಂದರ್ಭಗಳ ವಿವರ ಚೆನ್ನಾಗಿ ಗೊತ್ತಿಲ್ಲ. ಈ ವಿಷಯಗಳನ್ನು ಕುರಿತು ಅವರೊಡನೆ ಮಾತನಾಡುವ ಸಂದರ್ಭ ಬರಲಿಲ್ಲ. ವೆಂಕಣ್ಣಯ್ಯನವರ ಜೀವನದ ಮುಖ್ಯ ಕ್ಷೇತ್ರವಿದ್ದದ್ದು ವಿಶ್ವವಿದ್ಯಾನಿಲಯದಲ್ಲಿ. ಆ ಕ್ಷೇತ್ರಕ್ಕೆ ಅವರು ಬರುವ ಮುಂಚೆ ಅಲೆದಾಟ ನಡೆದಿತ್ತು.

ಸಾಯಸಚರ್ಯ

ವೆಂಕಣ್ಣಯ್ಯ, ಕೃಷ್ಣಶಾಸ್ತ್ರಿ-ಇವರಿಬ್ಬರಿಗೂ ನನಗೂ ಮೊದಲನೆಯಸಾರಿ ಭೇಟಿಯಾದ ಸಂದರ್ಭವನ್ನು ಮೇಲೆ ಪ್ರಸ್ತಾವಿಸಿದ್ದೇನೆ. ಅದು ಸುಮಾರು ೧೯೧೫-೧೬ರಲ್ಲಿ, ಪರಿಷತ್ತು ಸ್ಥಾಪನೆಯಾದ ಕೆಲವು ದಿನಗಳ ತರುವಾಯ. ಆದರೂ ವೆಂಕಣ್ಣಯ್ಯನಿಗೂ ನನಗೂ ಸ್ನೇಹ ಗಾಢವಾದದ್ದು ಕೆಲವು ವರ್ಷಗಳಾದಮೇಲೆ. ಅವರು ಶಂಕರಪುರದಲ್ಲಿ ವಾಸಕ್ಕೆ ಬಂದದ್ದು ೧೯೨೦-೨೧ರಲ್ಲಿರಬೇಕು. ಅವರೂ ನಾನೂ ದಿನಕ್ಕೊಂದು ಸಾರಿಯಾದರೂ ಕಲೆಯದೆ ಇರುತ್ತಿರಲಿಲ್ಲ. ಎಷ್ಟೋ ಸಾರಿ ಅರ್ಧ ದಿನವೆಲ್ಲ ಜೊತೆಯಲ್ಲಿರುತ್ತಿದ್ದೆವು.

ಆಗ ನನ್ನ 'ಗೋಖಲೆ' ಜೀವನಚರಿತ್ರೆ ಪುನರ್ಮುದ್ರಣವಾಗಬೇಕಾಗಿತ್ತು. ಅದಕ್ಕಾಗಿ ಚಿಕ್ಕಪೇಟೆಯಲ್ಲಿದ್ದ 'ಪವರ್ ಪ್ರೆಸ್' ಮುದ್ರಣಾಲಯದಲ್ಲಿ ಏರ್ಪಾಟಾಗಿತ್ತು. ಅಲ್ಲಿಗೆ ಪ್ರತಿದಿನವೂ ಬೆಳಗ್ಗೆ ಸುಮಾರು ಎಂಟು ಘಂಟೆಗೆ ಜೊತೆಯಾಗಿ ಹೋಗುತ್ತಿದ್ದೆವು. ಪ್ರೆಸ್ಸಿನಲ್ಲಿ ಪ್ರೂಫು ತಿದ್ದುವುದು ಮೊದಲಾದ ಕೆಲಸ ಮುಗಿದ ಮೇಲೆ ಅಪ್ಪಣ್ಣನವರ ಹಿಂಡೂ ಕಾಫಿ ಕ್ಲಬ್ ಅಥವಾ ಉಡುಪಿ ಹೋಟೆಲು ನಮ್ಮ ಕಾರ್ಯಸ್ಥಾನ. ಮತ್ತೆ ಹತ್ತು-ಹತ್ತೂವರೆಗೆ ಪ್ರೆಸ್ಸಿಗೆ ಬರುವುದು. ಅಲ್ಲಿ ಕೆಲಸ ಮುಗಿದ ತರುವಾಯ ಮನೆಗೆ ಹಿಂತಿರುಗುವುದು.

ಸಾಮಾನ್ಯವಾಗಿ ಹೋಗುವಾಗಲೂ ಬರುವಾಗಲೂ ಕಾಲುನಡಿಗೆಯೇ. ಕಾರಣವೇನೆಂದರೆ ಮಾತಿನ ಚಟ. ಆಗ ನಾವು ಚರ್ಚಿಸದೆ ಬಿಟ್ಟ ವಿಷಯ ಸೂರ್ಯಮಂಡಲದ ಕೆಳಗಡೆ ಯಾವುದೂ ಇರಲಾರದು. ಒಳ್ಳೆಯ ಬರವಣಿಗೆ ಹೇಗಿರಬೇಕೆಂಬುದನ್ನು ಪದೇ ಪದೇ ಚರ್ಚಿಸುತ್ತಿದ್ದೆವು. ಆ ಕಾಲದಲ್ಲಿ ಹೆಚ್ಚು ಬಳಕೆಯಲ್ಲಿದ್ದ ಕನ್ನಡ ಬರವಣಿಗೆಯನ್ನು ಅವರು "ಇದೇನು ಹುರಿಟ್ಟಿನ ಬರವಣಿಗೆ!" ಎನ್ನುವರು. "ಅರಳಿನಲ್ಲಿ ಭಾರವಿಲ್ಲ. ಒಂದು ಚೀಲದಷ್ಟನ್ನು ಬೇಕಾದರೂ ಸುಲಭವಾಗಿ ಅಗಿದು ನುಂಗಬಹುದು. ದೇಹಕ್ಕೆ ಅದರಿಂದ ಬರುವ ತ್ರಾಣ ಮಾತ್ರ ಗುಲಗಂಜಿಗಿಂತ ಕಡಮೆ. ಬರವಣಿಗೆಯಲ್ಲಿ ವಿಷಯಗೌರವ ಇರಬೇಕು. ಹತ್ತು ಮಾತಿನಲ್ಲಿ ಅಡಗಬಹುದಾದ ವಿಷಯವನ್ನು ನೂರು ಮಾತುಗಳಲ್ಲಿ ಹರಡಿದರೆ ಪುಸ್ತಕ ದೊಡ್ಡದಾಯಿತು. ವಾಚಕನಿಗೆ ಪ್ರಯೋಜನ ಕಡಮೆ" ಹೀಗೆನ್ನುತ್ತಿದ್ದರು ವೆಂಕಣ್ಣಯ್ಯ.

ಆಗಿನ ನಮ್ಮ ಚರ್ಚೆಗಳಲ್ಲಿ ಇಂಗ್ಲಿಷ್ ಕವಿಗಳೂ ಸಂಸ್ಕೃತದ ಕವಿಗಳೂ ಕನ್ನಡದ ಕವಿಗಳೂ ಪದೇ ಪದೇ ಟೀಕೆಗೆ ಬರುತ್ತಿದ್ದರು. ಹಾಗೆಯೇ ನಾವು ಧ್ವನ್ಯಾಲೋಕ, ಕಾವ್ಯ ಪ್ರಕಾಶ, ವಕ್ರೋಕ್ತಿಜೀವಿತ, ಸಾಹಿತ್ಯದರ್ಪಣ-ಈ ನಾನಾ ಅಲಂಕಾರಗ್ರಂಥಗಳಲ್ಲಿಯ ಸೂತ್ರಗಳನ್ನು

ಹಿಡಿದು ವಾದವಿವಾದ ನಡಸುತ್ತಿದ್ದೆವು. ವೆಂಕಣ್ಣಯ್ಯನವರು ಆಗ ಹಿಡಿದಿದ್ದ ದಾರಿಯಿಂದ ಅವರದು ಬಹು ಸೂಕ್ಷ್ಮವಾದ ತೀವ್ರಸಂವೇದಿತೆಯೆಂದು ನನಗೆ ಅನ್ನಿಸುತ್ತಿತ್ತು.

ಅಂತರ್ದೃಷ್ಟಿ

ಅವರಿಗೆ ಇದ್ದ ಸಾಹಿತ್ಯದ ಅಂತರ್ದೃಷ್ಟಿ ಅಸಾಧಾರಣವಾದದ್ದು. ಇದನ್ನು ಇಂಗ್ಲಿಷಿನಲ್ಲಿ Feel for literature ಎಂದು ಹೇಳುವುದುಂಟು. Feel ಎಂದರೆ ಸ್ಪರ್ಶಾನುಭವ ಕೈ ಸೋಕಿದ ಮಾತ್ರದಿಂದಲೇ ವಸ್ತುಸ್ವಭಾವವನ್ನು ತಿಳಿದುಕೊಳ್ಳುವ ಸೂಕ್ಷ್ಮವೇದಿತೆ. ಕತ್ತಲೆ ಕೋಣೆಯಲ್ಲಿ ಯಾರದೋ ಕೈ ಸೋಕಿದಾಗ ಇದು ಇಂಥವರದು ಎಂದು ಗುರುತಿಸುವ ಶಕ್ತಿಯನ್ನು Feel ಎಂದು ಇಟ್ಟುಕೊಳ್ಳೋಣ. ಇದು ಸಿನಿಮಾ ಮಂದಿರಗಳಿಗೆ ಹೋಗುವ ಯುವಕರಿಗೆ ಅನುಭವದಲ್ಲಿರಬಹುದಾದ ಸಂಗತಿ. ಹಾಗೆಯೇ ಬಾಯಿಂದ ಹೊರಟ ಧ್ವನಿಯನ್ನು ಕೇಳಿದ ಮಾತ್ರದಿಂದಲೇ ಮಾತನಾಡಿದವರು ಯಾರೆಂಬುದನ್ನು ತಿಳಿದುಕೊಳ್ಳಲಾಗುತ್ತದೆ. ಅದೇ Feel. ಅನೇಕ ಕ್ರಿಮಿಕೀಟ ಪಕ್ಷಿಗಳಿಗೂ ಇಷ್ಟಾನಿಷ್ಟ ವಸ್ತುಗಳ ಇರುವಿಕೆ ಗೊತ್ತಾಗುವುದು ಬರಿಯ ವಾಸನೆಯಿಂದ. ಈ ವಾಸನಾಗ್ರಹಣ ಶಕ್ತಿಯನ್ನು Feel ಎನ್ನಬಹುದು.

ವೆಂಕಣ್ಣಯ್ಯನವರಿಗೆ ಹಾಗೆ ಸಾಹಿತ್ಯದ ಗುಣವು ಸ್ಪರ್ಶಮಾತ್ರಗ್ರಾಹ್ಯವಾಗಿತ್ತು. ಒಂದು ಪದ್ಯವನ್ನೋ ಒಂದು ಪಂಕ್ತಿಯನ್ನೊ ಹಾಗೆಯೇ ಒಂದು ಸನ್ನಿವೇಶವನ್ನೋ ಒಂದು ಪಾತ್ರದ ಉಕ್ತಿಯನ್ನೋ ನೋಡಿದಕೂಡಲೆ "ಇದು ಸ್ವಾರಸ್ಯವುಳ್ಳ ಸ್ಥಳ", "ಇದು ಬರಿಯ ಬುಡುಬುಡಿಕೆ", "ಇದು ಬಡಾಯಿ ಬುರುಡೆ", "ಇದು ಖರ್ಜಿಕಾಯಿ" ಎಂದು ನಿರ್ಣಯಿಸುವ ಶಕ್ತಿ ಇತ್ತು.

ಮೈಸೂರಿನ ಕಾಲೇಜಿನಲ್ಲಿ ಪ್ರೊಫೆಸರ್ ಬಿ. ಕೃಷ್ಣಪ್ಪನವರು ಕಾಲಾಧೀನರಾದಮೇಲೆ ಆ ಜಾಗಕ್ಕೆ ಯಾರನ್ನು ನಿಯಮಿಸತಕ್ಕದ್ದೆಂದು ಒಂದು ಮಿತ್ರಗೋಷ್ಠಿಯಲ್ಲಿ ಪ್ರಸ್ತಾವ ಬಂದಿತು. ಆಗ ಕಾಲೇಜಿನ ಪ್ರಿನ್ಸಿಪಾಲರಾಗಿದ್ದ ಎನ್.ಎಸ್.ಸುಬ್ಬರಾಯರವರು ವೆಂಕಣ್ಣಯ್ಯನವರಿಗಿದ್ದ ಯೋಗ್ಯತಾ ವಿಶೇಷವನ್ನು ಪ್ರಶಂಸೆಮಾಡುತ್ತ "He is a man with a feel for literature-a very rare type" ಎಂದರು. ಅವರು ಹೇಳಿದ್ದು ಅತಿಶಯೋಕ್ತಿಯಲ್ಲ, ಯಥಾರ್ಥೋಕ್ತಿ ಎಂದು ನನಗೆ ಆಗಲೂ ಅನ್ನಿಸಿತು; ಆಮೇಲೂ ಹಾಗೆಯೇ.

ಕಾವ್ಯಮರ್ಮಜ್ಞತೆ

ಸಾಹಿತ್ಯ ಪರಿಷತ್ತಿನಲ್ಲಿ ಪಂಪಭಾರತವನ್ನು ಪುನರ್ಮುದ್ರಣಕ್ಕಾಗಿ ಪರಿಷ್ಕಾರಪಡಿಸುತ್ತಿದ್ದಾಗ ವೆಂಕಣ್ಣಯ್ಯನವರು ಪ್ರತಿ ರಾತ್ರಿಯೂ ಒಂದು ದಿನ ತಪ್ಪದೆ ಕ್‍ಲ್‍ಪ್ತಕಾಲಕ್ಕೆ ಬರುತ್ತಿದ್ದರು. ಅದು ವೆಂಕಟನಾರಣಪ್ಪನವರ ರಾಜ್ಯಭಾರ. ಅವರ ಕಟ್ಟುನಿಟ್ಟನ್ನು ವೆಂಕಣ್ಣಯ್ಯನವರು ನಗುಮುಖದಿಂದ ತಮಾಷೆಮಾಡಿಕೊಂಡು ಸಹಿಸುತ್ತಿದ್ದರು. ಆಗ ಕಾಣಬರುತ್ತಿತ್ತು ವೆಂಕಣ್ಣಯ್ಯನವರ ಕಾವ್ಯದೃಷ್ಟಿಸೂಕ್ಷ್ಮತೆ. ಯಾವ ಕಡೆ ಯಾವ ಅಕ್ಷರವಿದ್ದರೆ ಸೊಗಸು. ಕಿವಿಗೆ ಹೇಗೆ ಸೊಗಸು, ಉಚ್ಚಾರಣೆಗೆ ಹೇಗೆ ಸೊಗಸು, ವ್ಯಂಗ್ಯಾರ್ಥ ಪ್ರತೀತಿಗೆ ಹೇಗೆ ಸೊಗಸು, ವಾಚ್ಯಾರ್ಥಕ್ಕೆ ಹೇಗೆ ಸೊಗಸು-ಈ ಮರ್ಮಗಳನ್ನು ಅವರು ಹುಡುಕಿ ಹುಡುಕಿ ವಿವರಿಸುತ್ತಿದ್ದರು. ಒಂದೊಂದು ಸಲ ಈ ವಿವರಣೆ ವಿಮರ್ಶೆಗಳಿಂದ ಕೆಲಸ ತಡವಾಗುತ್ತಿತ್ತು. ಕೆಲಸದ ವಿಷಯದಲ್ಲಿ ತೀವ್ರರಾಗಿ ಕಾಲವಿಳಂಬದ ವಿಷಯದಲ್ಲಿ ಕಟುವಾಗಿದ್ದ ವೆಂಕಟನಾರಣಪ್ಪನವರು ವೆಂಕಣ್ಣಯ್ಯನವರ ಮಾತುಗಳನ್ನು ಕೇಳುವುದರಲ್ಲಿ ತಮ್ಮ ಕಟ್ಟುನಿಟ್ಟನ್ನು ಮರೆಯುತ್ತಿದ್ದರು.

ವೆಂಕಣ್ಣಯ್ಯ ಜೀವನದಲ್ಲಿ ಕಷ್ಟಪಟ್ಟಿದ್ದವರು, ಬಡತನದ ಕೊರಗು ಕಾರ್ಪಣ್ಯಗಳನ್ನು ಕಂಡಿದ್ದವರು. ಆದದ್ದರಿಂದ ಸಹನೆಯುಳ್ಳವರು. ಕಟುಮಾತನ್ನಾಡಲು ಅವರಿಗೆ ಮನಸ್ಸು ಬಾರದು.

ಕಷ್ಟ ಹೇಳಿಕೊಂಡು ಹೋದವರಿಗೆ ಅವರಿಂದ ನಿವಾರಣೆ ಎಷ್ಟು ಮಾತ್ರ ಸಾಧ್ಯವೋ ಅಷ್ಟು ಮಾತ್ರವನ್ನು ಖಂಡಿತವಾಗಿ ನಿರೀಕ್ಷಿಸಬಹುದಾಗಿತ್ತು. ಅವರು ಐಶ್ವರ್ಯವಂತ ಕಾಲವನ್ನು ಕಂಡವರೇ ಅಲ್ಲ. ಅವರು ಪ್ರೊಫೆಸರಾಗುವವರೆಗೂ ಅವರದು ಅಹನ್ಯಹನಿ ಕಾಲಕ್ಷೇಪದ ಪಾಡೆಂದೇ ಹೇಳಬೇಕು. ಅಂಥಾದ್ದರಲ್ಲಿಯೂ ಅವರು ಹತ್ತಾರು ಮಂದಿಗೆ ಕಷ್ಟಕಾಲದಲ್ಲಿ ಸಹಾಯ ಕೊಟ್ಟದ್ದನ್ನು ನಾನು ಬಲ್ಲೆ. ಎಷ್ಟೋ ಮಂದಿಗೆ ಅವರು ಬ್ಯಾಂಕಿನಲ್ಲಿ ಹೊಣೆ ನಿಂತು ಸಾಲ ದೊರಕಿಸಿದರು. ಅವರಲ್ಲಿ ಎಷ್ಟು ಮಂದಿ ಕೃತಜ್ಞರಾಗಿದ್ದರೆಂಬ ವಿಷಯ ಮಾತ್ರ ನನಗೆ ತಿಳಿಯದು.

ಒಂದು ದಿನ ಬೆಳಗ್ಗೆ ಒಂಭತ್ತು ಘಂಟೆಯ ಸಮಯದಲ್ಲಿ ವೆಂಕಣ್ಣಯ್ಯ, ನಾನು ಬೆಂಗಳೂರು ಕೃಷ್ಣರಾಜೇಂದ್ರ ರಸ್ತೆಯಲ್ಲಿ ದೊಡ್ಡಪೇಟೆಯ ಕಡೆಗೆ ಹೋಗುತ್ತಿದ್ದೆವು. ವಾಣೀವಿಲಾಸ ವಿದ್ಯಾಶಾಲೆಯ ಹತ್ತಿರ ಬರುವಾಗ್ಗೆ ನಮ್ಮ ಬಲಗಡೆಯ ಒಂದು ಓಣಿಯಿಂದ ಯಾರೋ ಒಬ್ಬ ಓಡಿಬಂದು ವೆಂಕಣ್ಣಯ್ಯನ ಮುಂದೆ ಕೈಚಾಚಿ ನಿಂತ. ಆತನ ಕೋಟು ಪಂಚೆಗಳು ಹರಕಲುಹರಕಲಾಗಿ, ಕೊಳೆಕೊಳೆಯಾಗಿದ್ದವು. ಆತನ ಕಣ್ಣುಗುಡ್ಡೆ

ಮುನ್ನುಗ್ಗಿ ಬರುವಂತೆ ಇತ್ತು; ಹಲ್ಲುಬ್ಬು ವೆಂಕಣ್ಣಯ್ಯ ತನ್ನ ಜೇಬುಗಳನ್ನೆಲ್ಲ ಹುಡುಕಿ ನೋಡಿದರು. ಷರಟಿನ ಜೇಬುಗಳಲ್ಲಿಯೂ ಬೇರೆಲ್ಲಿಯೂ ಏನೂ ಇರಲಿಲ್ಲ. ನನ್ನನ್ನು ಕೇಳಿದರು. ನನ್ನ ಜೇಬಿನಲ್ಲೂ ಒಂದು ದಮ್ಮಡಿ ಕೂಡ ಇರಲಿಲ್ಲ.

ವೆ: "ಏನೂ ಇಲ್ಲವಲ್ಲ ಈಗ ನರಸಿಂಹಮೂರ್ತಿ?"

ನ: "ಪರವಾಯಿಲ್ಲ ಬಿಡಿ ಸಾರ್. ಅಭ್ಯಾಸಕ್ಕೋಸ್ಕರ ಕೇಳಿದೆ."

ನಾವಿಬ್ಬರೂ ನಮ್ಮ ದಾರಿ ಹಿಡಿದು ಹತ್ತು ಹದಿನೈದು ಅಡಿ ಮುಂದೆ ಹೋದೆವು. ಆಗ ಗುರುತಾದವರೊಬ್ಬರು ಎದುರಿಗೆ ಬಂದರು. ವೆಂಕಣ್ಣಯ್ಯ ಅವರನ್ನು ಕೇಳಿ ಅರ್ಧಾಣೆ ಸಾಲ ತೆಗೆದುಕೊಂಡು ಮೇಲೆ ಹೇಳಿದ ಮನುಷ್ಯ ಇದ್ದ ಕಡೆಗೆ ತಿರುಗಿ ಹೋಗಿ ಆತನನ್ನು ಕರೆದು ಹೇಳಿದರು:

ವೆಂ: "ಮೂರ್ತಿ, ಹಿಡಿ."

ನ: "ಇದಕ್ಕೇಕೆ ಸಾರ್ ಅಷ್ಟು ಶ್ರಮ? ದಿನಾಗಲೂ ಕೊಡುತ್ತೀರಿ. ಒಂದು ದಿನ ಇಲ್ಲದಿದ್ದರೆ ಏನಂತೆ?"

ವೆಂ: "ನನಗೂ ಅಭ್ಯಾಸ ತಪ್ಪಬಾರದು, ಹೌದಲ್ಲೊ?"

ಇದು ವೆಂಕಣ್ಣಯ್ಯನ ಸ್ವಭಾವಕ್ಕೆ ಬೀಗದಕೈ. ಕನಿಕರಿಸುವುದು, ಕೊಡುವುದು, ಕೊಟ್ಟದ್ದನ್ನು ಲೆಕ್ಕವಿಡದೆ ಮರೆಯುವುದು-ಇದು ವೆಂಕಣ್ಣಯ್ಯನ ಲಕ್ಷಣ.

ಸಾಹಿತ್ಯವಿದ್ವಾಂಸ

ಮೈಸೂರಿನಲ್ಲಿದ್ದಾಗ ವೆಂಕಣ್ಣಯ್ಯನವರ ಜೀವನ ತಕ್ಕಮಟ್ಟಿಗೆ ಸಮಾಧಾನ ತುಂಬಿದ್ದಾಗಿತ್ತು. ಅವರಿಗೆ ಮನೆಯಲ್ಲಿ ಕೂಡುವ ಜಾಗ ವಿಶಾಲವಾಗಿರಬೇಕು. ನಯವಾದ ಕಂಬಳಿ, ಜಮಖಾನೆ ಇರಬೇಕು. ಒಳ್ಳೆಯ ಒರಗು ದಿಂಬು ಇರಬೇಕು. ನಾನು ಒಂದುಸಾರಿ ಅವರ ಮನೆಗೆ ಹೋದಾಗ ಹೀಗೆಲ್ಲ ಅಣಿಮಾಡಿಕೊಂಡು ಕುಳಿತಿದ್ದರು. ಅಲ್ಲಿ ತೀ. ನಂ. ಶ್ರೀಕಂಠಯ್ಯನವರು, ಡಿ. ಎಲ್. ನರಸಿಂಹಾಚಾರ್ಯ ಮೊದಲಾದ ಶಿಷ್ಯರು ನಾಲ್ಕೈದು ಮಂದಿ ಇದ್ದರು. ಮೂವರು ನಾಲ್ವರ ಮುಂದೆ ಬರೆಯುವ (ಡೆಸ್ಕ್) ಇಳಿಜಾರು ಮೇಜುಗಳಿದ್ದವು. ಅವರೆಲ್ಲ ಸೇರಿ ಹರಿಹರನ ರಗಳೆಯನ್ನೋ ಬೇರೆ ಯಾವುದೋ ಪ್ರಾಚೀನ ಗ್ರಂಥವನ್ನೋ ಪರಿಷ್ಕಾರಪಡಿಸುವ ಕಾರ್ಯದಲ್ಲಿದ್ದರು. ತಾಳೆಯೋಲೆಯ ಪ್ರತಿಯನ್ನೋದುವುದು, ಪಾಠಾಂತರಗಳನ್ನು ಗುರುತುಮಾಡಿಕೊಳ್ಳುವುದು, ನಾನಾ ಪಾಠಗಳ ತಾರತಮ್ಯಗಳನ್ನು ಚರ್ಚಿಸುವುದು-ಇದು ಅವರು ಆಗ ಮಾಡುತ್ತಿದ್ದ ಕೆಲಸ. ಅದರ ನಡುನಡುವೆ ದೋಸೆ, ಪೂರಿ, ಕಾಫಿ ಮೊದಲಾದವುಗಳ ಸೇವೆಯೂ ಆಗುತ್ತಿತ್ತು. ಅದು ಒಬ್ಬ ಪ್ರಾಮಾಣಿಕನಾದ ಸಾಹಿತ್ಯ ವಿದ್ವಾಂಸನ ವ್ಯಕ್ತಿಸನ್ನಿವೇಶದ ಚಿತ್ರ. ಅದನ್ನು ನಾನು ಪದೇ ಪದೇ ನೆನೆಸಿಕೊಳ್ಳುತ್ತೇನೆ. ಆ ನೆನಪಿನಿಂದ ಆಗುವ ಸಂತೋಷ ಈ ಬಡ ಬಾಳಿನಲ್ಲಿ ದೊಡ್ಡ ಯೋಗ.

ಕಾವ್ಯವಾಚನಶೈಲಿ

ವೆಂಕಣ್ಣಯ್ಯ ಕಾವ್ಯ ಓದುವುದು ಒಂದು ಸೊಗಸು. ಆತನ ಕಂಠಸಂಪತ್ತು ಸಂಗೀತಕ್ಕೆ ತಕ್ಕದ್ದೆಂದು ಹಿಂದೆಯೇ ಹೇಳಿದೆ. ಸಂಗೀತ ವೆಂಕಣ್ಣಯ್ಯನಿಗೆ ಅತ್ಯಂತ ಪ್ರಿಯವಾದ ಕಲೆ. ಆತ, ನಾನು ಇಬ್ಬರೇ ಇದ್ದಾಗ ಒಂದು ಶ್ಲೋಕವನ್ನೋ ಹಾಡನ್ನೋ ಆತ ಆತ್ಮ ಸಂತೋಷಕ್ಕಾಗಿ ಹಾಡಿಕೊಳ್ಳುತ್ತಿದ್ದರು. "ಅರಿಮೆ ರಾಗದ ಪುತ್ತಿದೆಂದು..." ಅಂಥ ಪದ್ಯಗಳಲ್ಲೊಂದು. "ಧವಳಗಂಗೆಯ ಪೂತ್ತ ಶಿವ ಮಹಾಲಿಂಗ..." ಇನ್ನೊಂದು. ಅವರದು ಇಂಪಾದ ಕೋಮಲವಾದ ಶಾರೀರ. ಅದರಲ್ಲಿ ಒಳ್ಳೆಯ ಪಲುಕುಬಡಿ ಇತ್ತು. ಆದರೆ ಅವರು ಸಂಗೀತವನ್ನು ಶಾಸ್ತ್ರೀಯವಾಗಿ ಪಾಠ ಮಾಡಿದವರಲ್ಲ; ರಾಗಗಳ ಸ್ವಭಾವವನ್ನು ಅನುಭವದಿಂದ ಕಂಡುಕೊಂಡಿದ್ದವರು. ಕನ್ನಡ ಪದ್ಯಗಳನ್ನು ರಾಗದಿಂದ ಓದುವರು. ಸಂಗೀತದ ವ್ಯಾಪನೆ ಅವರ ಓದುಗಾರಿಕೆಯಲ್ಲಿ ಎಷ್ಟುಮಟ್ಟಿಗೆ ಇತ್ತೆಂದರೆ ನನ್ನಿಂದ ಒಂದು ಟೀಕನ್ನು ಮಾಡಿಸುವಷ್ಟು ಮಟ್ಟಿಗೆ. ಆ ಟೀಕು ಹೀಗೆ:

"ವೆಂಕಣ್ಣಯ್ಯ, ನಿಮ್ಮ ಓದುವ ಧಾಟಿಯಲ್ಲಿ ನಿಮಗೆ ಮನಸ್ಸು ಬಂದರೆ ಕೊಳಕು ಕಗ್ಗವನ್ನು ಸೊಗಸಾದ ಕಾವ್ಯವೆನಿಸುವಂತೆ ಮಾಡುತ್ತೀರಿ. ಮನಸ್ಸು ಬಾರದಿದ್ದರೆ ಸೊಗಸಾದ ಪದ್ಯವನ್ನು ಅದು ಕೆಲಸಕ್ಕೆ ಬಾರದ ಕಂತೆ ಎನಿಸುವಂತೆ ಮಾಡುತ್ತೀರಿ."

ಹೀಗೆ ಎಷ್ಟೋ ವೇಳೆ ನಡೆದದ್ದುಂಟು. ಯಾರು ಯಾರೋ ಹೊಸೆದ ಪಂಕ್ತಿಗಳನ್ನು ವೆಂಕಣ್ಣಯ್ಯನಿಗೆ ತೋರಿಸಿ ಸರ್ಟಿಫಿಕೇಟ್ ಬೇಡುತ್ತಿದ್ದರು. ವೆಂಕಣ್ಣಯ್ಯ ಖುಷಿಯ ಮನೋಭಾವದಲ್ಲಿದ್ದರೆ ಆ ಪಂಕ್ತಿಗಳನ್ನು ರಾಗದಿಂದ ಓದುವರು. ಬರೆದವರು ಅದನ್ನು ಕೇಳಿ ಹಿಗ್ಗಿ ಹೊರಟುಹೋಗುವರು. ಆಮೇಲೆ ನಾನೋ ಕೃಷ್ಣಶಾಸ್ತ್ರಿಗಳೋ ಕೇಳಿದಾಗ "ಇನ್ನೇನು ಮಾಡ್ಲಪ್ಪಾ-ಒಳ್ಳೆಯ ಹುಡುಗ. ಈ ಹುಚ್ಚು ಹಿಡಿದಿದೆ. ಬೇಡವೆಂದರೆ ಹುಚ್ಚು ಇನ್ನೂ ಹೆಚ್ಚಾಗುತ್ತದೆ. ಅದಕ್ಕಾಗಿ ಹೀಗೆ ಉಪಾಯವಾಗಿ ತಳ್ಳುವುದು" ಎಂದು ನಗುವರು.

ಒಂದು ಸ್ಮರಣೀಯ ಉಪನ್ಯಾಸ

೧೯೩೪-೩೫ರ ಸುಮಾರಿನಲ್ಲಿ ಪರಿಷತ್ತಿನ ವಿಶೇಷೋಪನ್ಯಾಸ ಕಾಲದಲ್ಲಿ ವೆಂಕಣ್ಣಯ್ಯ ಮಾಡಿದ ಒಂದು ಭಾಷಣ ಅದನ್ನು ಕೇಳಿದವರ ಜ್ಞಾಪಕದಲ್ಲಿ ಬಹುಕಾಲ ಸ್ಫುಟವಾಗಿ ನಿಂತಿದ್ದೀತು. ನಾನು ಹತ್ತಾರು ಮಂದಿ ಕನ್ನಡಭಾಷಣಕಾರರನ್ನು ಕೇಳಿರುವವನು. ಅವರ ನೂರಾರು ಭಾಷಣಗಳನ್ನು ಕೇಳಿದ್ದೇನೆ. ವೆಂಕಣ್ಣಯ್ಯ ಅಂದು ಬೆಳಗ್ಗೆ ಮಾಡಿದ ಭಾಷಣದಷ್ಟು ಪರಿಣಾಮಕಾರಿಯಾದದ್ದನ್ನು ನಾನು ಎಂದೂ ಕೇಳಿಲ್ಲ. ಅಂದಿನ ವಿಷಯ ನನಗೆ ಜ್ಞಾಪಕವಿರುವ ಮಟ್ಟಿಗೆ ಪ್ರಾಚೀನ-ನವೀನಗಳ ಸಮನ್ವಯ. ವೆಂಕಣ್ಣಯ್ಯ ಸುಮಾರು ಒಂದೂವರೆ ಘಂಟೆ ಮಾತನಾಡಿದರು. ಇಂಗ್ಲಿಷಿನಲ್ಲಿ “He spoke like one inspired” ಎಂದು ಹೇಳುವಂತೆ ಆ ದಿನ ವೆಂಕಣ್ಣಯ್ಯನಲ್ಲಿ ಒಂದು ದೈವಾಂಶ ಆವೇಶಮಾಡಿದ್ದಂತೆ ಕೇಳಿದವರಿಗೆ ತೋರುತ್ತಿತ್ತು. ಆ ಭಾಷಣದ ವಿಶೇಷ ಗುಣ ವಾಗ್ಧೋರಣೆಯಲ್ಲ, ಆಡಂಬರವಲ್ಲ, ಅಲಂಕಾರದ ಬೆಡಗಲ್ಲ. ಅದು ವಿಷಯನಿರೂಪಣೆಯ ಸ್ವಾರಸ್ಯ. ಪ್ರಾಚೀನ ಸಂಪ್ರದಾಯ, ನವೀನ ಸುಧಾರಣೆ-ಈ ಎರಡು ಪಕ್ಷಗಳನ್ನೂ ಕುರಿತು ಹೇಳಬಹುದಾಗಿದ್ದ ವಾದಪ್ರತಿವಾದಗಳನ್ನು ತೋಲನಮಾಡಿ ದಿಗ್ದರ್ಶನ ಮಾಡಿದ್ದು ವೆಂಕಣ್ಣಯ್ಯನ ಬುದ್ಧಿಸೂಕ್ಷ್ಮದ ಕಾರ್ಯ. ಮಾತುಗಳೇನೋ ಮಿತವಾಗಿದ್ದವು. ಭಾಷೆ ಸರಳವಾಗಿತ್ತು. ರೀತಿ ಸಾಮಾನ್ಯವಾದದ್ದೇ. ಆದರೆ ವಿಷಯಸಾಮಗ್ರಿ ಭಾರವಾದದ್ದು. ನಿರೂಪಣಶೈಲಿ ಗಂಭೀರವಾದದ್ದು ವಾಕ್ಯ ವಾಕ್ಯದಲ್ಲಿಯೂ ತೇಜಸ್ಸೂ ಕಾಂತಿಯೂ ತುಂಬಿದ್ದವು. ಅದು ಬುದ್ಧಿಪ್ರಸಾದದ ತೇಜಸ್ಸು.

ಕಾವ್ಯವಿಹಾರ

ಸಾಮಾನ್ಯವಾಗಿ ಸಾಹಿತ್ಯದಲ್ಲಿ, ವಿಶೇಷವಾಗಿ ಕನ್ನಡ ಸಾಹಿತ್ಯದಲ್ಲಿ, ನಾನು ಕಂಡಿರುವ ಸಂತೋಷದ ಬಹುಭಾಗಕ್ಕಾಗಿ ನಾನು ವೆಂಕಣ್ಣಯ್ಯನಿಗೆ ಋಣಿಯಾಗಿದ್ದೇನೆ. ಆತನ ರಸ ಪರಿಪಾಕದ ತಾರತಮ್ಯವಿವೇಕ ಬಹು ಸೂಕ್ಷ್ಮವಾದದ್ದು. ಆತನ ಓದುಗಾರಿಕೆಯದೇ ಒಂದು ಸೊಗಸು. ಅದಕ್ಕಿಂತ ಮೇಲಾದದ್ದು ರಸಾಭಿಜ್ಞತೆ. ಕಾವ್ಯ ಸಂದರ್ಭದಲ್ಲಿ ಸನ್ನಿವೇಶದ ಹಿರಿಮೆ ಎಲ್ಲಿ? ಪಾತ್ರಾಭಿವ್ಯಕ್ತಿಯ ಹಿರಿಮೆ ಎಲ್ಲಿ? ಎಲ್ಲಿ ಪದೌಚಿತ್ಯ ಸೊಗಸು? ಎಲ್ಲಿ ವರ್ಣನೆ ಸೊಗಸು?-ಇದೇ ಮೊದಲಾದ ವಿವೇಚನೆಯನ್ನು ಮಾಡುವುದು ವೆಂಕಣ್ಣಯ್ಯನವರ ವಿಮರ್ಶನ ಸ್ವಾರಸ್ಯ.

ಒಂದು ಸಾರಿ ಸಮ್ಮೇಳನಕ್ಕಾಗಿ ನಾವು ಬೆಳಗಾವಿಗೆ ಹೋಗಿದ್ದಾಗ ಅಲ್ಲಿ ಯಾವುದೋ ಹೈಸ್ಕೂಲು ಕಟ್ಟಡದಲ್ಲಿ ಬಿಡಾರ ಮಾಡಿಕೊಂಡಿದ್ದೆವು. ನಾವು ಅಲ್ಲಿ ಬಂದು ಸೇರಿದಾಗ ಅಪರಾಹ್ನ ಮೂರು ಘಂಟೆಯ ಸುಮಾರು. ಆಗ ವೆಂಕಟನಾರಣಪ್ಪನವರು ಎಪ್ಪತ್ತು ಎಂಭತ್ತು ಅಡಿ ಆಳದ ಬಾವಿಯಿಂದ ನೀರು ಸೇದಿ ಸ್ನಾನಮಾಡಿ ಆಮೇಲೆ ಅಡಿಗೆಯನ್ನು ಸಿದ್ಧಪಡಿಸಿದರು. ದೇಹಶ್ರಮದಿಂದ ಕೊಂಚ ಬೇಸರವಾಗಿತ್ತು.

ಮಾರನೆಯ ದಿನ ಮಧ್ಯಾಹ್ನಾನಂತರ ನಾವು ಕೊಂಚ ವಿಶ್ರಾಂತಿಯಿಂದಿರುವುದೆಂದು ಮನಸ್ಸು ಮಾಡಿಕೊಂಡೆವು. ಆಗ ಆ ಮಾತು ಈ ಮಾತು ಆಡುತ್ತ ಅರ್ಜುನನ ತೀರ್ಥ ಯಾತ್ರೆಯ ಪ್ರಸ್ತಾವ ಬಂದಿತು. ವೆಂಕಣ್ಣಯ್ಯ ಪಂಪಭಾರತವನ್ನು ಕೈಗೆ ತೆಗೆದುಕೊಂಡು ಆ ಭಾಗವನ್ನು ಓದಿದರು. ಆ ಆನಂದ ನನ್ನ ನೆನಪಿನಲ್ಲಿ ಒಂದು ಭಾಗ್ಯನಿಧಿಯಾಗಿ ಉಳಿದುಕೊಂಡಿದೆ. ಅವರು ಓದಿದ್ದಾದ ಮೇಲೆ ಬೆಳಗಾವಿಯ ಸಾಹಿತ್ಯ ಸಮ್ಮೇಳನಕ್ಕೆ ನಾವೆಲ್ಲಾ ಹೋಗಿದ್ದೆವು.

ಒಂದು ಮಧ್ಯಾಹ್ನ ಆ ಊರಿನ ಹೊರಗೆ ಮೈದಾನದಲ್ಲಿ ಕೊಂಚ ಸುತ್ತಾಡಿ ಒಂದು ಕಡೆ ಕುಳಿತೆವು. ವೆಂಕಣ್ಣಯ್ಯನ ಕೈಯಲ್ಲಿ ಪಂಪಭಾರತವಿತ್ತು. ಅಂದಿನ ವೆಂಕಣ್ಣಯ್ಯನ ಓದುಗಾರಿಕೆಯನ್ನು ಕೇಳಿದವರು ಅದನ್ನು ಯಾವಜ್ಜೀವವೂ ಮರೆಯಲಾರರು.

ಅದಾದ ಮೇಲೆ ತಕರಾರು. ಕೃಷ್ಣಶಾಸ್ತ್ರಿಗಳದೂ ನನ್ನದೂ ವೆಂಕಣ್ಣಯ್ಯನವರ ಮೇಲೆ ಯಾವಾಗಲೂ ಒಂದು ಆಕ್ಷೇಪ. “ಬಹು ಸಾಮಾನ್ಯವಾದ ಪದ್ಯವನ್ನೂ ನೀವು ಓದುವ ಸೊಗಸಿನಿಂದ ರಸಪುಷ್ಟವನ್ನಾಗಿ ಮಾಡುತ್ತೀರಿ. ನಿಮಗೆ ಮನಸ್ಸು ಬಾರದಿದ್ದರೆ ಎಷ್ಟು ಸೊಗಸಾದ ಪದ್ಯವನ್ನಾದರೂ ನೀವು ಓದುವ ರೀತಿಯಿಂದ ಅದು ಕೆಟ್ಟ ಕಗ್ಗವೆನ್ನುವಂತೆ

ಮಾಡುತ್ತೀರಿ." ಈ ಆಕ್ಷೇಪಣೆಗೆ ವೆಂಕಣ್ಣಯ್ಯನವರ ಪ್ರತ್ಯುತ್ತರ ಮೊದಲು ದೊಡ್ಡ ನಗು. ಆಮೇಲೆ ಏನೋ ವಿವರಣೆ.

ಮೇಲೆ ಹೇಳಿದ ಸಂದರ್ಭದಲ್ಲಿ ಹೀಗೆ ವಾಗ್ವಾದ ಪ್ರಾರಂಭವಾಯಿತು. ಆಗ ನೋಡಬೇಕಾಗಿತ್ತು ವೆಂಕಣ್ಣಯ್ಯನ ಅಂತರ್ದೃಷ್ಟಿ ಎಂಥಾದ್ದು, ಕೃಷ್ಣಶಾಸ್ತ್ರಿಗಳ ಪಾಂಡಿತ್ಯ ಎಂಥಾದ್ದು-ಎಂಬುದನ್ನು. ಅದು ಕಾವ್ಯವ್ಯಾಸಂಗಿಗಳಿಗೆ ಒಂದು ಸೊಗಸಾದ ಪಾಠ.

ನಮ್ಮ ಮಾತುಕಥೆಗಳು ನಡೆಯುತ್ತಿದ್ದಂತೆ ಆ ದಾರಿಯಲ್ಲಿ ಹೋಗುತ್ತಿದ್ದವರು ಹತ್ತಾರುಮಂದಿ. ನಾವಿದ್ದ ಕಡೆ ಗುಂಪುಕಟ್ಟಿ ನಿಂತುಬಿಟ್ಟರು. ಆದರೆ ಅವರು ಅಲ್ಲಿದ್ದದ್ದು ನಮ್ಮ ಮನಸ್ಸುಗಳಿಗೆ ಗೋಚರವಾಗಲಿಲ್ಲ. ನಮ್ಮ ಮಾತು ನಿಂತಮೇಲೆ ಅವರಲ್ಲಿ ಇಬ್ಬರು ಮೂವರು- "ಯಾಕ್ರಪ್ಪ ನಿಲ್ಲಿಸಿಬಿಟ್ಟಿರಿ? ಇನ್ನೂ ಮಾತ್ನಾಡ್ರಲ ಕೇಳಾನಿ" -ಎಂದರು. ಆಗ ಗೊತ್ತಾಯಿತು ನಮಗೆ ಆ ಜನಕ್ಕೆ ಒಳ್ಳೆಯ ಕನ್ನಡ ಮಾತಿನ ಹಸಿವು ಎಷ್ಟಿತ್ತು ಎಂಬುದು. ವೆಂಕಣ್ಣಯ್ಯನವರ ಮಾತಿನ ಭಾಷೆ ಅಷ್ಟು ಮಧುರವಾದ ಕಾಂತಿಯುಳ್ಳದ್ದು. ನಾವು ಆ ಗುಂಪಿನವರ ಜೊತೆಯಲ್ಲಿ ಒಂದೆರಡು ಉಪಚಾರದ ಮಾತನಾಡಿ ಮುಗಿಸಿದೆವು.

ನರಹರಿರಾಯರ ಗುಡ್ಡದ ಮೇಲೆ

ಬಸವನಗುಡಿಯ ನರಹರಿರಾಯರ ಗುಡ್ಡದ ಪೂರ್ವಭಾಗದ ಇಳಿಜಾರಿನಲ್ಲಿ ವೆಂಕಣ್ಣಯ್ಯ ಶ್ರೀನಿವಾಸಮೂರ್ತಿ, ನಾನು-ಒಂದೊಂದು ವೇಳೆ ಕೃಷ್ಣ ಶಾಸ್ತ್ರಿ-ಸೇರಿ ಗದಗಿನಭಾರತದ ಅನೇಕ ಪ್ರಕರಣಗಳನ್ನು ಓದಿದೆವು. ಓದುವ ಕೆಲಸ ವೆಂಕಣ್ಣಯ್ಯನವರದು. ಮೂರ್ತಿ, ನಾನು ನಮ್ಮ ಮುಂದೆ ಸಣ್ಣ ಕಲ್ಲಿನ ರಾಶಿಗಳನ್ನು ಮಾಡಿಕೊಂಡು ನಮ್ಮೆದುರಿಗಿದ್ದ ಮಾವಿನ ಮರಗಳ ಕಾಯಿಗಳಿಗೆ ಕಲ್ಲೆಸೆಯುತ್ತಿದ್ದೆವು. ಆಗ ಸಂಜೆ ನಾಲ್ಕು ಘಂಟೆಯ ಸುಮಾರು, ನಾವಿದ್ದ ಕಡೆ ಗುಡಿಯ ನೆರಳು ಹರಡಿ ತಂಪಾಗಿರುತ್ತಿತ್ತು. ನಮ್ಮ ಜೊತೆಯಲ್ಲಿ ಒಂದಿಷ್ಟು ಅವಲಕ್ಕಿ, ಹುರಿಗಾಳು ಬರುತ್ತಿತ್ತು. ಅದರ ಜೊತೆಗೆ ನಾವು ಉದುರಿಸಿದ ಕಸಿ ಮಾವಿನಕಾಯಿ-ದೋರಗಾಯಿ, ಜೊತೆಗೆ ಕೊಂಚ ಉಪ್ಪು, ಹಸಿಮೆಣಸಿನ ಕಾಯಿ ಇರುತ್ತಿತ್ತು. ಈ ತರತೀಪುಗಳನ್ನೆಲ್ಲ ಮೆಲ್ಲುವುದು, ವೆಂಕಣ್ಣಯ್ಯನವರ ಓದಿಗೆ ನಡು ನಡುವೆ ಅಡ್ಡಹಾಕುವುದು, ವ್ಯಾಖ್ಯಾನಮಾಡುವುದು, ಕೀಟಲೆ ಮಾಡುವುದು-ಹೀಗೆ ಎಷ್ಟೋ ದಿನಗಳನ್ನು ಕಳೆದಿದ್ದೇವೆ.

ಒಂದು ದಿನ ಸಂಜೆ ಐದು ಘಂಟೆಯ ಸುಮಾರಿಗೆ ನರಹರಿರಾಯರ ಗುಡ್ಡಕ್ಕೆ ಬಂದೆವು. ಮಹಾಮಹೋಪಾಧ್ಯಾಯ ಸಿದ್ಧಾಂತಿ ಶಿವಶಂಕರ ಶಾಸ್ತ್ರಿಗಳು ಆ ವೇಳೆಗೆ ಬಂದಿದ್ದರು; ಗುಡಿಯನ್ನು ತಮ್ಮ ಆಡಳಿತಕ್ಕೆ ವಹಿಸಿಕೊಂಡು ಮುಂದಿನ ವ್ಯವಸ್ಥೆಯನ್ನು ನಡಸುವುದರಲ್ಲಿದ್ದರು. ನನ್ನನ್ನು ಕಂಡೊಡನೆಯೇ ಪ್ರೀತಿಯಿಂದ ಬರಮಾಡಿಕೊಂಡರು. ಆಗ ನಾವು ಮೂರು ನಾಲ್ಕು ಮಂದಿ ಇದ್ದೆವೆಂದು ಜ್ಞಾಪಕ. ವೆಂಕಣ್ಣಯ್ಯ ಮೊದಲಾದವರನ್ನು ಪರಿಚಯಮಾಡಿಕೊಟ್ಟೆ. ಶಾಸ್ತ್ರಿಗಳವರು ನಮ್ಮನ್ನು ಗುಡಿಯ ಒಳಕ್ಕೆ ಕರೆದು ನವರಂಗಮಂಟಪದಲ್ಲಿ ಕೂಡ ಹೇಳಿದರು. ನಾವು ಕುಳಿತುಕೊಂಡ ಮೇಲೆ ಅವರು ತಾವು ಬರೆದಿದ್ದ ಒಂದು ಗ್ರಂಥವನ್ನು ನನ್ನ ಮುಂದೆ ಇರಿಸಿ ಅದನ್ನು ಓದ ಹೇಳಿದರು. ನಾನು "ವೆಂಕಣ್ಣಯ್ಯ ಬಹು ಚೆನ್ನಾಗಿ ಓದುತ್ತಾರೆ. ಅವರು ಓದುವುದನ್ನು ತಾವು ಕೇಳಬೇಕು" -ಎಂದು ಹೇಳಿ ಗ್ರಂಥವನ್ನು ವೆಂಕಣ್ಣಯ್ಯನವರ ಮುಂದಿಟ್ಟೆ.

ಆ ಗ್ರಂಥ ಚಂಪೂಪ್ರಬಂಧ-ಕುಮಾರಸ್ವಾಮಿ ಶೈಲಮಾಹಾತ್ಮ್ಯ: ಶಾಸ್ತ್ರಿಗಳವರು ಸ್ವಪ್ನ ಕಂಡದ್ದು, ಆ ಶೈಲದಲ್ಲಿ ನೆಲಸುವಂತೆ ಅವರಿಗೆ ಭಗವತ್ಪ್ರೇರಣೆಯಾದದ್ದು-ಇದನ್ನೆಲ್ಲ ವರ್ಣಿಸುವ ಗ್ರಂಥ.

ವೆಂಕಣ್ಣಯ್ಯನವರು ಶಾಸ್ತ್ರಿಗಳು ತೋರಿಸಿದ ಪುಟವನ್ನು ಓದಲಾರಂಭಿಸಿ ಆ ಕ್ರಮದಲ್ಲಿ ಈ ಕೆಳಗಣ ವಾಕ್ಯಕ್ಕೆ ಬಂದರು: "ಓ ರುಂಡಮಾಲಿ! ಆ ಉರಿಬಿಸಿಲಿನಲ್ಲಿ ನಾನು ಬಂದು

ಕೆಂಡದಂತೆ ಕಾದ ಈ ಬಂಡೆಯ ಮೇಲೆ ಕುಂಡೆಯನ್ನೂರಿ…"

ಇದನ್ನೋದುವ ವೇಳೆಗೆ ವೆಂಕಣ್ಣಯ್ಯನವರಿಗೆ ಅಸಾಧ್ಯ ನಗು ಬಂದಿತು. ಆತ ನಸ್ಯ ಹಾಕಿಕೊಳ್ಳುವ ನೆವದಿಂದ ಓದು ನಿಲ್ಲಿಸಿ ನಸ್ಯದ ಡಬ್ಬಿ, ಕೈವಸ್ತ್ರಗಳನ್ನು ಹುಡುಕುತ್ತಿದ್ದರು. ಆದರೂ ನಗು ತಡೆದುಕೊಳ್ಳಲಾಗಲಿಲ್ಲ ಅವರಿಗೆ. ನಾನು ಹೇಗೋ ನಗು ತಡೆದುಕೊಂಡು ಒಂದು ಚಮತ್ಕಾರ ಮಾಡಬೇಕಾಯಿತು.

"ಅವರಿಗೆ ಕೆಮ್ಮು ಬರುತ್ತದೆ. ಕೊಂಚ ನೀರು ಕೊಟ್ಟರೆ ಸರಿಹೋಗುತ್ತದೆ" ಎಂದೆ. ಶಾಸ್ತ್ರಿಗಳು ಅಲ್ಲಿದ್ದ ಅರ್ಚಕನೊಬ್ಬನನ್ನು ಕರೆದು ಹೇಳಿದರು:

"ಕೊಂಚ ನೀರು ತಾ. ತೀರ್ಥದ ನೀರಾದರೂ ಸರಿಯೆ."

ನಗು ತಡೆಯುವುದು ನಮ್ಮಿಬ್ಬರಿಗೂ ಅಸಾಧ್ಯವಾಯಿತು. ಶಾಸ್ತ್ರಿಗಳು ಏನೆಂದು ಕೇಳಿದರು. ನಾನು ಹೇಳಿದೆ:

"ನಿಮ್ಮ ಪ್ರಾಸದಿಂದ ನಮಗೆ ತ್ರಾಸ ಬಂದಿತು. ನಿಮ್ಮ ಡಕಾರಪ್ರಾಸ ಕನ್ನಡದಲ್ಲಿ ಅನರ್ಥಕಾರಿ. ನನ್ನ ಹೆಸರೇ ಅದಕ್ಕೆ ದೃಷ್ಟಾಂತ."

ಕೊಂಚ ಹೊತ್ತಿಗೆ ಎಲ್ಲ ಉಪಶಮನವಾಯಿತು. ಆಮೇಲೆ ಪುನಃ ನಾವು ಆ ಸ್ಥಳಕ್ಕೆ ಹೋಗಲಿಲ್ಲ.

ಶಿವಶಂಕರಶಾಸ್ತ್ರಿಗಳು ಮಹಾವಿದ್ವಾಂಸರೆನ್ನಲು ಅಡ್ಡಿಯಿಲ್ಲ. ಬಿಜಾಪುರದ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಅವರು ಮಾಡಿದ ಭಾಷಣ ಇದಕ್ಕೆ ನಿದರ್ಶನವೆನ್ನಬಹುದು. ಅವರು ವರ್ಣಮಾಲೆಯ ಯಾವ ಅಕ್ಷರವನ್ನು ಮೊದಲು ಮಾಡಿಕೊಂಡಾದರೂ, ಯಾವ ವಿಷಯವನ್ನು ಕುರಿತಾದರೂ, ಯಾವ ಛಂದಸ್ಸಿನಲ್ಲಾದರೂ ಲೀಲಾಜಾಲವಾಗಿ ಪದ್ಯ ರಚನೆ ಮಾಡಬಲ್ಲವರಾಗಿದ್ದರು.

ನನ್ನ ಸೋಲು

ವೆಂಕಣ್ಣಯ್ಯ ಎಷ್ಟೋ ವಿಷಯಗಳಲ್ಲಿ ನನ್ನನ್ನು ಸೋಲಿಸಿದ್ದಾರೆ. ಪಾಂಡಿತ್ಯ, ಪ್ರಾಜ್ಞತೆ, ಆತ್ಮಸಂಯಮ, ಪರಿಶುದ್ಧಿ, ಉದಾತ್ತಭಾವ ಇಂಥ ವಿಷಯಗಳಲ್ಲಿ ನಾನು ಅವರಿಗೆ ಸೋತಿದ್ದೇನೆ. ನಾನು ಸೋಲು ತಿಂದಿರುವ ಒಂದು ಸಂದರ್ಭ ಸಾರ್ವಜನಿಕ ಜೀವನಕ್ಕೆ ಸಂಬಂಧಪಟ್ಟದ್ದಾದ ಕಾರಣ ಅದನ್ನು ಕುರಿತು ಇಲ್ಲಿ ಬರೆಯುವುದು ಯುಕ್ತವಾಗಿದೆ.

ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷ ಸ್ಥಾನಕ್ಕೆ ನಾನು ಬಂದ ಕೂಡಲೆ ವಾರ್ಷಿಕ ಸಮ್ಮೇಳನಗಳ ಬಗ್ಗೆ ಒಂದು ನಿಯಮಾವಳಿಯನ್ನು ತಯಾರು ಮಾಡಿ ಪರಿಷತ್ತಿನ ಕಾರ್ಯ ಸಮಿತಿಯ ಮುಂದೆ ಇರಿಸಿದೆ. ಹಾಗೆಯೇ ವಿಶೇಷ ಸಾಹಿತ್ಯೋತ್ಸವ ಮೊದಲಾದ ಕಾರ್ಯಗಳನ್ನು ಕುರಿತೂ ನಿಯಮಗಳನ್ನು ಸೂಚಿಸಿದೆ: ಸಭೆ ಸಮ್ಮೇಳನಗಳಿಗೆ ಕಾಲನಿಯಮವಿರಬೇಕು, ಉಪನ್ಯಾಸಾದಿಗಳ ಅನುಕ್ರಮವು ನಿಷ್ಕರ್ಷೆಯಾಗಿರಬೇಕು, ಭಾಷಣಗಳಿಗೆ ವೇಳೆ ಕ್ಲ್‌ಪ್ತವಾಗಿರಬೇಕು. ಗೊತ್ತುಗುರಿಯಿಲ್ಲದ ಕಾರ್ಯಕಲಾಪದಿಂದ ಪ್ರಯೋಜನವಾಗದು. ಸಮ್ಮೇಳನ ದೊಂಬಿಯ ಗದ್ದಲವಾಗಿರಬಾರದು. ಶಿಸ್ತನ್ನಿರಿಸಿಕೊಂಡು ನಡೆದರೆ ಕೆಲಸ ಹೆಚ್ಚಾಗಿ ಮಾಡಲಾಗುತ್ತದೆ ಮತ್ತು ಮಾಡಿದ ಕೆಲಸ ಹೆಚ್ಚು ಫಲಕಾರಿಯಾಗುತ್ತದೆ. ಇದು ನನ್ನ ವಾದ.

ಪರಿಷತ್ತಿನ ಕಾರ್ಯಸಮಿತಿ ಇದನ್ನು ಉತ್ಸಾಹದಿಂದ ಅನುಮೋದಿಸಿತು. ಹಾಗೆ ಅನುಮೋದಿಸಿ ಚಪ್ಪಾಳೆ ತಟ್ಟಿದವರಲ್ಲಿ ವೆಂಕಣ್ಣಯ್ಯ ಮೊದಲನೆಯವರು. ಅವರು ನಗು ನಗುತ್ತ "ತಥಾಸ್ತು" ಎಂದು ಹೇಳಿ ಆ ಕೂಡಲೆ "ಅನ್ಯಥಾ ಭವತಿ" ಎಂದರು. ನಾವೆಲ್ಲ ಅವರ ಕಡೆ ದಿಟ್ಟಿಸಿ ನೋಡಿದೆವು. ಅವರು ನಗುತ್ತ "ನೀವು ಹೇಳುವುದೆಲ್ಲ ಸರಿ. ಆದರೆ ಅದೊಂದೂ ನಡೆಯುವುದಿಲ್ಲ" ಎಂದು ಹೇಳಿಬಿಟ್ಟರು.

ನಾನು: "ಅದೇಕೆ ಹಾಗೆನ್ನುತ್ತೀರಿ?"

ವೆಂ: "ಏಕೆಂದರೆ ನಮ್ಮ ಜನದ ಸ್ವಭಾವ ಅಂಥಾದ್ದು. ಅವರು ಒಂದು ನಿಯಮವನ್ನೂ ನಡಸಗೊಡುವುದಿಲ್ಲ.

"ನೀವು ಎಂಟೂವರೆಗೆ ಸಭೆ ಎನ್ನುತ್ತೀರಿ. ಒಂಭತ್ತರವರೆಗೂ ಜನ ಬರುವುದಿಲ್ಲ. ಒಂಭತ್ತಕ್ಕೆ ಸಭೆ ಎನ್ನಿ; ಹತ್ತು ಘಂಟೆಯವರೆಗೂ ಒಬ್ಬರೂ ತಲೆಹಾಕುವುದಿಲ್ಲ. ನೀವು ಭಾಷಣಕ್ಕೆ ಹದಿನೈದು ನಿಮಿಷ ಗೊತ್ತುಮಾಡುತ್ತೀರಿ. ಇಪ್ಪತ್ತೈದು ನಿಮಿಷವಾದರೂ ನಮ್ಮ

ಭಾಷಣಕರ್ತರು ವಿಷಯಕ್ಕೆ ಬಂದಿರುವುದಿಲ್ಲ, ಪೀಠಿಕೆಯಲ್ಲೇ ಇರುತ್ತಾರೆ. ನೀವು ಅವರನ್ನೇನು ಮಾಡುತ್ತೀರಿ? ನಿಲ್ಲಿಸಿರೆಂದರೆ ಅವರಿಗೆ ಕೋಪ; ನಾವೂ ಕೋಪಮಾಡಿ ಕೊಂಡು ನೀವು ಭಾಷಣಕಾರರಿಗೆ ಅಪಮಾನ ಮಾಡಿದಿರಿ ಎನ್ನುತ್ತೇವೆ.

"ಕಾಫಿಗೆ ಕೂಡ ನಿಮ್ಮ ನಿಯಮ ನಡೆಯದಂತೆ ನೋಡಿಕೊಳ್ಳುತ್ತೇವೆ. ನೀವು ಮೂರು ಘಂಟೆಗೆಂದರೆ ನಾವು ಎರಡೂವರೆಗೇ ಸೇರಿ ದಬಾದುಬಿ ಮಾಡಿ ಕುಡಿದು ಚೆಲ್ಲಾಡಿ ಮೂರು ಘಂಟೆಗೆ ಬಂದವರಿಗೆ ಖಾಲಿಪಾತ್ರೆ ಬಿಟ್ಟಿರುತ್ತೇವೆ ಅಥವಾ ನಾವೇ ನಾಲ್ಕಕ್ಕೆ ಬಂದು ಕಾಫಿ ತಣ್ಣಗಾಯಿತೆಂದು ಬೊಬ್ಬೆಯಿಡುತ್ತೇವೆ. ನಿಮ್ಮ ನಿಯಮ ಶಿಸ್ತುಗಳು ನಮ್ಮ ಸ್ವಭಾವಕ್ಕೆ ಒಗ್ಗುವುದಿಲ್ಲ ದೇವರು."

ಈ ನಿರುತ್ಸಾಹದ ಮಾತುಗಳನ್ನಾಡುವಾಗ ವಾಕ್ಯಗಳನ್ನು ಛಂದೋಬದ್ಧ ಮಾಡಿ ರಾಗ ರಾಗಗಳಲ್ಲಿ ಹಾಡಿದರು.

ಕಡೆಗೆ "ಇದೆಲ್ಲ ಅಚ್ಚಾಗಿರಲಿ. ನಿಮ್ಮ ಉದ್ದೇಶವೇನೆಂಬುದು ತಿಳಿಯುತ್ತದೆ ನೋಡುವವರಿಗೆ. ನಮ್ಮ ಜನಕ್ಕೆ ಒಂದು ಕಟ್ಟಿಲ್ಲ, ಒಂದು ಶಿಸ್ತಿಲ್ಲ. ದೊಂಬಿಯೆಬ್ಬಿಸುವುದೇ ನಮ್ಮ ಸಭೆಯ ಕೆಲಸ. ನೋಡಿ ನೋಡ್ರಲ್ಲಾ" -ಎಂದರು.

ಅಂದಿನಿಂದೀಚೆಗೆ ನನಗಾಗಿರುವ ಅನುಭವಗಳು ವೆಂಕಣ್ಣಯ್ಯನವರ ವಾದವನ್ನು ಎತ್ತಿ ಹಿಡಿಯುತ್ತವೆ. ಸಭಿಕರು ಒಂದು ಕ್ರಮದಲ್ಲಿ ಒಂದು ಸಾಲಿನಲ್ಲಿ ಕುಳಿತುಕೊಳ್ಳುವಂತೆ ಹೇಳಲಾಗುತ್ತದೆ. ಬಂದ ಜನ ಬಾಗಿಲ ಹತ್ತಿರಲೇ ಒಬ್ಬರನ್ನೊಬ್ಬರು ಒತ್ತಿಕೊಂಡು ಮಿಕ್ಕ ಭಾಗವನ್ನು ಖಾಲಿ ಬಿಟ್ಟಿರುತ್ತಾರೆ. ವಿಶಾಲವಾಗಿ ಕೂಡಿರೆಂದರೆ "ಪರವಾಯಿಲ್ಲ, ಇಲ್ಲೇ ಇರುತ್ತೇವೆ" -ಎನ್ನುತ್ತಾರೆ. ಅವರ ಅಭಿಪ್ರಾಯದಲ್ಲಿ ಇದು ವಿನಯ. ಅದರಿಂದ ಇತರರಿಗಾಗುವುದು ತೊಂದರೆ. ಹೀಗೆ ಎಲ್ಲಿಯೂ ಯಾವ ಶಿಸ್ತೂ ನಡೆಯುವುದು ನಮ್ಮ ದೇಶದಲ್ಲಿ ಏಕೋ ಕಷ್ಟವಾಗಿದೆ. ನಾನು ಸೋತವನಾಗಿದ್ದೇನೆ. ವೆಂಕಣ್ಣಯ್ಯನ ದೊಂಬಿ ಜಯಘೋಷವೇ ಕಾರ್ಯಕ್ಕೆ ಬರುತ್ತಿದೆ.

ಒಂದು ಹಾಸ್ಯ ಪ್ರಸಂಗ

ಒಂದು ಸಾರಿ ವೆಂಕಣ್ಣಯ್ಯನಿಗೆ ಏನೋ ವ್ಯಾಧಿಯಾಗಿತ್ತು. ಅದು ಆತನಿಗೆ ಆಗಾಗ ಬರುತ್ತಿದ್ದ ವ್ಯಾಧಿ, ಹೊಟ್ಟೆಯ ಸಂಬಂಧದ್ದು. ನನಗೆ ಅದರ ವರ್ತಮಾನ ತಿಳಿದಾಗ ನಾನು ಕೆಳಗಿನಂತೆ ನಾಲ್ಕು ಪಂಕ್ತಿಗಳನ್ನು ಒಂದು ಕಾರ್ಡಿನಲ್ಲಿ ಬರೆದು ಮೈಸೂರಿಗೆ ಅವರ ಕಾಲೇಜಿನ ವಿಳಾಸಕ್ಕೆ ಕಳಿಸಿದೆ.

ವಂಕಯೊಕ್ಕಟಿ ಕಡುಪುಲೊ ।
ಸಂಕಟಮುನು ಗಲುಗುಜೇಯುನಯ್ಯಾ ನೂನನ್ ॥
ಇಂಕನು ವಿರುಪನು ಜೇರಿತೆ ।
ವೆಂಕಣ್ಣಾ! ಗ್ರುದ್ದ ಚಿನುಗಿ ಬ್ರೋವಕಗಲದೇ ॥

ಈ ಕಾರ್ಡು ಮೈಸೂರಿಗೆ ತಲಪಿದ ದಿನ ಆತ ಕಾಲೇಜಿಗೆ ಬಂದಿರಲಿಲ್ಲ-ಬಹುಶಃ ವ್ಯಾಧಿಯ ಕಾರಣದಿಂದ. ಆದರೆ ಅಂಚೆಯ ಆಳು ತನ್ನ ಮಾಮೂಲಿನಂತೆ ಆ ಕಾರ್ಡನ್ನು ಪ್ರೊಫೆಸರುಗಳು ಕೂಡುವ ಕೊಠಡಿಯಲ್ಲೆಸೆದು ಹೊರಟುಹೋಗಿದ್ದ. ಆಗ ಅಲ್ಲಿದ್ದ ಪ್ರೊಫೆಸರುಗಳೂ ಉಪಾಧ್ಯಾಯರುಗಳೂ ಇದನ್ನು ನೋಡಿದರಂತೆ.

ಕೆಲವು ದಿನಗಳಾದ ಮೇಲೆ ವೆಂಕಣ್ಣಯ್ಯ, ನಾನು ಸೇರಿದಾಗ ವೆಂಕಣ್ಣಯ್ಯ ಮುನಿಸಿಕೊಂಡಿದ್ದಂತೆ ತೋರಿತು. ನಾನು ಅವರನ್ನು ಮಾತನಾಡಿಸಿದೆ. ಅವರು ಹುಬ್ಬುಗಂಟಿಕ್ಕಿ "ಏನಪ್ಪ ಮಾನ ತೆಗೆದುಬಿಡುತ್ತೀರಿ? ಆ ಪದ್ಯವನ್ನು ಕಾರ್ಡಿನಲ್ಲಿಯೇ ಬರೆಯುವುದು? ಒಂದು ಕವರಿನಲ್ಲಿ ಹಾಕುವುದಕ್ಕೆ ಏನಾಗಿತ್ತು?"

ಆಮೇಲೆ ಎಲ್ಲ ನಗು.

ಅಣಕಗಳು

ವೆಂಕಣ್ಣಯ್ಯನಿಗೂ ನನಗೂ ವಿನೋದದ ತಕರಾರುಗಳು ಎಷ್ಟೋ ನಡೆದಿವೆ. ಒಂದು ಸಾರಿ ಕನ್ನಡ ರಾಷ್ಟ್ರಗೀತೆಯ ವಿಷಯ. ಪೂಜ್ಯರಾದ ಶಾಂತಕವಿಗಳ 'ರಕ್ಷಿಸು ಕರ್ಣಾಟಕದೇವಿ' ಎಂಬುದನ್ನು ಅಣಕಿಸಿದೆವು:

ಭಕ್ಷಿಸು ಕರ್ಣಾಟಕ ದೇವಿ-ನೀ
ಭಕ್ಷಿಸು ಕರ್ಣಾಟಕ ದೇವಿ ॥
ಮುಗ್ಗುಲು ರಾಗಿಯ ಮುದ್ದೆಗಳನ್ನು
ಕಗ್ಗಲ್ಲಂಥ ಭಕ್ಕರಿಯನ್ನು।
ಅಗ್ಗದ ಸೊಪ್ಪಿನ ಪಲ್ಯಗಳನ್ನು
ಸಿಗ್ಗಿಲ್ಲದೆ ನಿನಗರ್ಪಿಸುತಿಹೆವು ॥

ಒಂದು ಸಾರಿ ಒಬ್ಬ ಸ್ನೇಹಿತರ 'ಮಲ್ಲಮ್ಮಾ, ಮಲ್ಲಮ್ಮಾ' ಎಂಬುದನ್ನು ನಾನು ಅಣಕಿಸಹೊರಟು-

ವೆಂಕಣ್ಣಾ ವೆಂಕಣ್ಣಾ
ಬಂಕೆಯ ಮೂಗಿನ ವೆಂಕಣ್ಣಾ॥

-ಎಂದೆ. (ಅವರು ಧಂಡಿಯಾಗಿ ನಸ್ಯಹಾಕುತ್ತಿದ್ದರು.) ಕೂಡಲೆ ಬಂತು ಪ್ರತ್ಯುತ್ತರ:

ಗುಂಡಣ್ಣಾ, ಗುಂಡಣ್ಣಾ
-ಹುಣ್ಣಿನ ಗುಂಡಣ್ಣಾ॥

(ಆಗ ನಾನು ಮೂಲವ್ಯಾಧಿಯಿಂದ ನರಳುತ್ತಿದ್ದೆ.)

ಇನ್ನೊಂದು ಸಾರಿ ಸ್ವಂತ ಪದ್ಯರಚನೆ. ತೆಲುಗಿನಲ್ಲಿ ಅಕ್ಷರ ಚಿತ್ರಕವಿತ್ವದ ಚಟ ಹೆಚ್ಚು: ನಿರೋಷ್ಠಮುಲು, ನಿರ್ದಂತ್ಯಮುಲು, ಸರ್ವಲಘು-ಹೀಗೆ. ಇದನ್ನು ನಾವು ಹೀಯಾಳಿಸ ಹೊರಟೆವು. ಅನುನಾಸಿಕಾಕ್ಷರವನ್ನು ಬಿಟ್ಟು ನಸ್ಯದ ಮೇಲೆ ಒಂದು ಪದ್ಯ ಮಾಡಿರೆಂದೆ ನಾನು. ಇದು ವೆಂಕಣ್ಣಯ್ಯನ ಉತ್ತರ:

ದೆಗಡಿಯು ಬಲವಾಗಿದ್ದರೆ
ಹೊಗೆಯೆಲೆ ಧೂಡದ್ದು
ಬೂಗಿಗೇರಿಸು ಗೆಳೆಯಾ ॥

ಹೀಗೆ ನಗುವಿನಲ್ಲಿ ನಾವು ಕಳೆದ ಕಾಲವನ್ನು ಒಟ್ಟುಗೂಡಿಸಿದರೆ ವರ್ಷಗಟ್ಟಲೆಯೇ ಆದೀತು.

ಅಂತರಂಗ-ಬಹಿರಂಗ ಸಮನ್ವಯ

ಇಹಜೀವನದ ಅಸ್ಥಿರತೆ, ಆತ್ಮಪಾರಮ್ಯ-ಇವೆರಡೂ ವೆಂಕಣ್ಣಯ್ಯನ ಅಂತರಂಗದ ಆಳದಲ್ಲಿ ನೆಲಸಿದ್ದ ಭಾವನೆಗಳು. ವೆಂಕಣ್ಣಯ್ಯನ ಎಲ್ಲ ಮಾತುಕಥೆಯಲ್ಲಿಯೂ, ಎಲ್ಲ ನಡವಳಿಕೆಯಲ್ಲಿಯೂ ಈ ಎರಡು ಮೂಲ ಭಾವನೆಗಳು ಹರಿದುಬರುತ್ತಿದ್ದವು. ಆತನಿಗೆ ಜೀವನದಲ್ಲಿ ಸಂತೋಷವುಂಟು. ಭೋಗ ಭಾಗ್ಯಗಳಲ್ಲಿ ಉತ್ಸಾಹವುಂಟು. ಆದರೆ ಆ ಸಂತೋಷವೂ ಆ ಉತ್ಸಾಹವೂ ಮಿತಿಗೆ ಒಳಪಟ್ಟವು. ಜಗತ್ತು ಅಶಾಶ್ವತವೆಂಬುದರ ಸ್ಮರಣೆ ಅವರ ಸಂತೋಷ ಉತ್ಸಾಹಗಳನ್ನು ಮಿತಿಯಲ್ಲಿಟ್ಟಿತ್ತು.

ವೆಂಕಣ್ಣಯ್ಯನವರು ಬಹುಶಃ ಧಾರವಾಡ ಪ್ರಾಂತದಲ್ಲಿದ್ದಾಗ ಅಗಡಿಯ ಶೇಷಾಚಲ ಸಾಧುಗಳ ಪ್ರಭಾವಕ್ಕೆ ವಶರಾಗಿದ್ದರು. ಶೇಷಾಚಲ ಸಾಧುಗಳನ್ನು ಕುರಿತು ಆಗಾಗ ಪ್ರಸ್ತಾವಿಸುತ್ತಿದ್ದರು. ಶೇಷಾಚಲ ಸಾಧುಗಳು ಯತಿಗಳಲ್ಲ, ಸಂಸಾರದಲ್ಲಿದ್ದವರು. ಸಾಮಾನ್ಯ ಜನರಂತೆ ಕಷ್ಟಕಾರ್ಪಣ್ಯಗಳನ್ನು ಸಹಿಸಿದವರು. ಗಂಜೀಪು ಆಟ ಆಡುತ್ತಿದ್ದರು. ನಸ್ಯಹಾಕುತ್ತಿದ್ದರು. ಊಟ ಉಪಚಾರಗಳಿಂದ ನಲಿಯುತ್ತಿದ್ದರು. ಹೀಗೆ ಅವರು ಲೋಕಜೀವನದಲ್ಲಿ ಮಗ್ನರಾಗಿದ್ದರು. ಹಾಗಿದ್ದಾಗಲೂ ಅವರ ಅಂತರಂಗವು ಸರ್ವದಾ ಪರಮಾತ್ಮನ ಚಿಂತನೆಯಲ್ಲಿರುತ್ತಿತ್ತು. ಅವರು ಬಹಿರ್ವ್ಯಾಪಾರದಲ್ಲಿದ್ದಾಗಲೂ ಅಂತರ್ಮುಖಿಗಳಾಗಿದ್ದರು. ಈ ಅಂತರಂಗ–ಬಹಿರಂಗ ಸಮನ್ವಯವೂ ಸಾಮರಸ್ಯವೂ ವೆಂಕಣ್ಣಯ್ಯನವರಿಗೆ ಮಹಾಯೋಗಿಯ ಲಕ್ಷಣವೆಂದು ತೋರಿ ಅವರ ಪೂಜ್ಯಭಾವವನ್ನು ಸಂಪಾದಿಸಿತು. ಈ ಪ್ರಭಾವ ವೆಂಕಣ್ಣಯ್ಯನ ಜೀವನವನ್ನು ರೂಪಗೊಳಿಸಿತ್ತೆಂದು ನನಗನ್ನಿಸುತ್ತದೆ.

ವೆಂಕಣ್ಣಯ್ಯನವರು ಮಿತವಾಗಿ ಆಚಾರಶೀಲರು. ನನಗಿಂತ ಹೆಚ್ಚಿನ ಆಚಾರಶ್ರದ್ಧೆ ಅವರದು. ಕೃಷ್ಣಶಾಸ್ತ್ರಿಗಳದು ಇನ್ನೂ ಹೆಚ್ಚಿನದು. ಶಾಸ್ತ್ರಿಗಳು ತಮ್ಮ ಆಹ್ನಿಕದಲ್ಲಿ ದೇವತಾರ್ಚನೆ ಪಾರಾಯಣಗಳನ್ನು ಸೇರಿಸಿಕೊಂಡಿದ್ದರು. ವೆಂಕಣ್ಣಯ್ಯ ಸಂಧ್ಯಾವಂದನೆಯ ಅನಂತರ ಶ್ರೀಮದ್ರಾಮಾಯಣ ಪಾರಾಯಣ ಮಾಡುತ್ತಿದ್ದರು. ಒಂದೆರಡು ಸರ್ಗವಾದರೂ ಪಾರಾಯಣ ಮಾಡುವರು; ಅದಕ್ಕಾಗಿ ಕೊಂಚ ಮಡಿಮಾಡುವರು. ಮೊದ ಮೊದಲು ನಾನು ಅದನ್ನು ಗೇಲಿಮಾಡಿ ಪಾಪಕಟ್ಟಿಕೊಂಡದ್ದುಂಟು. ಒಂದುಸಾರಿ ಅವರ ಮಡಿಯ ಆಸನವೆಂದು ಒಂದು ಧಾವಳಿಯ ತುಂಡನ್ನು ಕೊಟ್ಟೆ.

ವೆಂ: "ಇದೇನು ಗದ್ದಿಗೆ? ಯಾರಿಗೆ?"

ನಾನು: “ಈ ಗದ್ದಿಗೆ ಪರಲೋಕಕ್ಕೆ ಅನುಕೂಲವಾದದ್ದು."

ಅದರ ಮೇಲೆ ವ್ಯಾಖ್ಯಾನಗಳಾದವು. ಬಹುಕಾಲ ಅವರು ತಮ್ಮ ವ್ರತವನ್ನು ನಡಸುತ್ತಿದ್ದದ್ದನ್ನು ಕಂಡು ನಾನು ಅವರಲ್ಲಿ ಭಕ್ತಿಗೌರವಗಳನ್ನು ತೋರಲು ಮೊದಲುಮಾಡಿದೆ. ಆಗ ನಾನು ನನ್ನ ತಪ್ಪನ್ನು ಒಪ್ಪಿಕೊಂಡೆ. ವೆಂಕಣ್ಣಯ್ಯ ನಗುತ್ತ ನನ್ನ ಕಡೆ ನೋಡಿದರು. ಆ ನೋಟದಲ್ಲಿ ಕ್ಷಮೆಯಿತ್ತೆಂದು ಅಂದುಕೊಂಡಿದ್ದೇನೆ.

ವೆಂಕಣ್ಣಯ್ಯನವರ ಇನ್ನೊಂದು ನಿತ್ಯಪಾರಾಯಣ ಗ್ರಂಥ ಭಗವದ್ಗೀತೆ. ಗೀತೆ ಅವರಿಗೂ ಕೃಷ್ಣಶಾಸ್ತ್ರಿಗಳಿಗೂ ಬಾಯಿಪಾಠವಾಗಿತ್ತು. ಗ್ರಂಥವನ್ನು ಎಲ್ಲಿಂದರಲ್ಲಿ ಉದಾಹರಿಸುವಷ್ಟು ಅದರ ವಾಕ್ಯಗಳು ಸ್ವಾಧೀನವಾಗಿದ್ದವು ಅವರಿಗೆ.

ಬಿಡುವಾದಾಗಲೆಲ್ಲ ವೆಂಕಣ್ಣಯ್ಯ ನನ್ನೊಡನೆ ಯಾವುದಾದರೊಂದು ಗೀತಾ ವಾಕ್ಯವನ್ನು ವಿಚಾರವಿನಿಮಯಕ್ಕಾಗಿ ಎತ್ತುವರು. ವಾಕಿಂಗ್ ಹೋಗುವಾಗ, ಭೋಜನಕ್ಕೆ ಕುಳಿತಾಗ. ಇನ್ನು ಯಾವುದೋ ಸಮಯದಲ್ಲಿ ಇಂಥ ಚರ್ಚೆಗಳು ನಡೆಯುತ್ತಿದ್ದವು. ಪ್ರತಿಕಕ್ಷಿ ಹೇಳುವುದರಲ್ಲಿ ಅವರ ಮಾತು ಬಲು ನಾಜೂಕು. ಸಮಾಧಾನ ಹೇಳುವುದರಲ್ಲಿಯೂ ಹಾಗೆಯೇ. ಉಭಯ ಪಕ್ಷಗಳನ್ನು ಸಾವಧಾನವಾಗಿ ತೂಕಮಾಡುವರು. ಈ ತೂಕಮಾಡುವ ಅಭ್ಯಾಸವೇ ವೆಂಕಣ್ಣಯ್ಯನವರ ವಿಶೇಷ ಬುದ್ಧಿಲಕ್ಷಣ.

ಸತ್ಕಾವ್ಯ — ಅಧ್ಯಾತ್ಮ

ವಾಚಕರಲ್ಲಿ ಪೂರ್ವಕಾಲದ ನಾಗರ ಕಟ್ಟೆಯನ್ನು ನೋಡಿರುವವರು ಅಲ್ಲಿ ಜೋಡಿ ನಾಗರವಿರುವುದನ್ನು ಗುರುತಿಸಲಾದೀತು. ಜೋಡಿ ನಾಗರ ಕಲ್ಲಿನಲ್ಲಿ ಎರಡು ಹಾವುಗಳು ಒಂದಕ್ಕೊಂದು ಜಡೆಯಂತೆ ಹೆಣೆದುಕೊಂಡು ತಲೆಯ ಭಾಗದಲ್ಲಿ ಒಂದನ್ನೊಂದು ಪ್ರೀತಿಯಿಂದ ದಿಟ್ಟಿಸುವಂತೆ ಇರುತ್ತದೆ, ಅದರಂತೆ ಎರಡು ಕುತೂಹಲಗಳು ವೆಂಕಣ್ಣಯ್ಯನವರ ಅಂತರಂಗ ಜೀವನದಲ್ಲಿ ಹೆಣೆದುಕೊಂಡಿದ್ದವು; ಒಂದು ಸತ್ಕಾವ್ಯ, ಇನ್ನೊಂದು ಅಧ್ಯಾತ್ಮ. ಅದು ಇದನ್ನೂ ಇದು ಅದನ್ನೂ ಎವೆಯಿಕ್ಕದೆ ದಿಟ್ಟಿಸಿಕೊಂಡಿದ್ದವು.

ವೆಂಕಣ್ಣಯ್ಯನ ಬಾಯಿಂದ ದಿನಕ್ಕೆ ಒಂದೆರಡುಸಲವಾದರೂ ಕೇಳಿ ಬರುತ್ತಿದ್ದ ಪದ್ಯ ಇದು;

> ಅರಿವೆಂ ರಾಗದ ಪುತ್ತಿದೆಂದುಮರಿವೆಂ
> ನೀರ್ಗುಳ್ಳೆ-ಪಾಂಗೆಂದಿದ- ।
> ಸ್ಥಿರಮೆಂದುಂ ಸದಸದ್ವಿವೇಕಮನಿದೇ
> ಪಾಳ್ಗೆಯ್ವುದೆಂದುಂ ವಸುಂ- ।
> ಧರೆಯೊಳ್ಕಾಣದರಿರ್ಪರೇ ಪಳಿಗಿದಿಂ-
> ತೀದಾಡೊಡಂ ಭಕ್ತಿಯಿಂ ॥
> ಗುರುಶುಶ್ರೂಷೆಯೊಳಿಂತುಟೀ ಕಳೆಯೆ
> ತಾರುಣ್ಯಂ ಮದಾನಂದದಂ ।

(ನಾಗಾನಂದ–ಅನಂತನಾರಾಯಣಶಾಸ್ತ್ರಿಗಳವರ ಅನುವಾದ)

ವೆಂಕಣ್ಣಯ್ಯ ಕಡೆಕಡೆಯ ದಿನಗಳಲ್ಲಿ ಹೆಚ್ಚುಕಾಲ ಅಂತರ್ಮುಖಿಯಾಗಿರುತ್ತಿದ್ದರು. ಅವರ ಕಡೆಯ ರೋಗ ಪ್ರಬಲವಾಗಿದ್ದಾಗ ಅವರ ಬಲಗೈಯು ಹೃದಯ ಪ್ರದೇಶದಿಂದ ಹೊರಟು ಹೂವಿನಿಂದ ದೇವತಾರ್ಚನೆ ಮಾಡುತ್ತಿದೆಯೋ ಎಂಬಂತೆ ಚಲನೆಮಾಡುತ್ತಿತ್ತು.

ವೆಂಕಣ್ಣಯ್ಯನವರ ಅಂತರಂಗದ ವಿಶೇಷವನ್ನು ಒಂದು ಮಾತಿನಲ್ಲಿ ಹೇಳಬೇಕೆಂದರೆ ಅದು ಜೀವನೋನ್ನತಿ. ಇದಕ್ಕೆ ಅವರು ತಿಳಿದಿದ್ದ ದಾರಿಗಳು ಎರಡು; ಮೊದಲನೆಯದು ಸಾಹಿತ್ಯದಲ್ಲಿ ರಸಪರಿಪಾಕ; ಎರಡನೆಯದು ಲೋಕಜೀವನದಲ್ಲಿ ಅನುಕಂಪೆ. ರಸಾನುಭವದಿಂದ ಹೃದಯ ಪರಿಪಕ್ವವಾಗಬೇಕು. ಲೋಕಸಂಪರ್ಕದಿಂದ ಜೀವವು

ಸ್ವಾರ್ಥಮಲಗಳನ್ನು ಕಳೆದು ಪರಿಶುದ್ಧವಾಗಬೇಕು. ಮನಃಪರಿಪಾಕದಿಂದ ಆತ್ಮಶೋಧನೆ; ಲೋಕ ಸಂಪರ್ಕದಿಂದ ಆತ್ಮಸತ್ತ್ವವಿಕಾಸ.

ಸಾಹಿತ್ಯದಲ್ಲಿ ಮನೋರಂಜನೆಯನ್ನು ಅವರು ಅಲ್ಲಗಳೆದವರಲ್ಲ. ರಸಪುಷ್ಟಿ ಇರಬೇಕು: ಭಾವಪುಷ್ಟಿ ಇರಬೇಕು. ಆದರೆ ಅವೆರಡೂ ಜೀವಪರಿಶೋಧಕಗಳಾಗಬೇಕು. ಲೋಕ ವ್ಯವಹಾರವೂ ಅಷ್ಟೆ. ಅದು ಜೀವನದ ದೌರ್ಬಲ್ಯಗಳನ್ನು ಮೇಲಕ್ಕೆತ್ತಿ ಅವುಗಳನ್ನು ತಿದ್ದಲು ಸಹಕಾರಿಗಳಾಗಬೇಕು. ಹೀಗೆ ಉಭಯತಾಪಿ ಜೀವಶೋಧನೆ, ಜೀವ ಸಮುನ್ನತಿ–ಇವು ಧ್ಯೇಯಗಳು.

ವೆಂಕಣ್ಣಯ್ಯನವರ ಸಕಲ ವ್ಯಾಪಾರಗಳಲ್ಲಿಯೂ ಈ ಆತ್ಮೋತ್ಕರ್ಷದ ಆಶಯ ಮೂಲಭೂತವಾಗಿತ್ತು.

ಅಂತಸ್ಸಂಬಂಧ

ಒಂದು ಪ್ರಾಚೀನ ವಾಕ್ಯ ಹೀಗಿದೆ!

> ರಾಜದ್ವಾರೇ ಶ್ಮಶಾನೇ ಚ
> ಯಸ್ತಿಷ್ಠತಿ ಸ ಬಾಂಧವಃ ॥

ಮನುಷ್ಯನಿಗೆ ಆಪತ್ತು ಬಂದಾಗ, ಅವನನ್ನು ಸೆರೆಮನೆಗೆ ಕರೆದುಕೊಂಡು ಹೋಗುವ ಸಂದರ್ಭ ಬಂದಾಗ, ಅವನು ವಿಯೋಗ ದುಃಖದಲ್ಲಿದ್ದಾಗ ಯಾರು ಕೈಬಿಡದೆ ಸತತವಾಗಿ ಪಕ್ಕದಲ್ಲಿರುತ್ತಾನೋ ಆತನೇ ನಿಜವಾದ ಬಂಧು.

ವೆಂಕಣ್ಣಯ್ಯ ನನ್ನ ಪಾಲಿಗೆ ಹೀಗಿದ್ದರು. ನನ್ನ ಮನೆಯ ದೀಪ ಆರಿಹೋದಾಗ ಪಕ್ಕದಲ್ಲಿ ನಿಂತಿದ್ದವರು ವೆಂಕಣ್ಣಯ್ಯ. ಅಂದಿಗೆ ಹದಿನೈದು ದಿವಸದ ಹಿಂದಿನಿಂದ ಅವರು ಕಾಲೇಜು ಹೊತ್ತು ಹೊರತು ಯಾವಾಗಲೂ ಎಡೆಬಿಡದೆ ನನ್ನ ಪಕ್ಕದಲ್ಲಿರುತ್ತಿದ್ದರು. ಅಂದು ರಾತ್ರಿ ನನ್ನ ಪರವಾಗಿ ಶ್ಮಶಾನಕ್ಕೆ ಹೋಗಿದ್ದವರು (೧) ನನ್ನ ತಂದೆಯ ಸ್ನೇಹಿತರೂ ನಮ್ಮ ಪುರೋಹಿತರೂ ಆದ ರಾಮ ಶಾಸ್ತ್ರಿಗಳು, (೨) ಬೆಳ್ಳಾವೆ ವೆಂಕಟನಾರಣಪ್ಪ, (೩) ವೆಂಕಣ್ಣಯ್ಯ, ಮತ್ತು (೪) ಅಂಗಡಿ ಕೃಷ್ಣಪ್ಪ. ನನ್ನ ಬಂಧುಗಳು ಯಾರೂ ಅಲ್ಲಿಗೆ ಹೋಗಲು ಅನುಕೂಲಿಸಲಿಲ್ಲ. ಈ ನಾಲ್ವರೂ ಹೋಗಿ ಆಗಬೇಕಾಗಿದ್ದದ್ದನ್ನು ಮಾಡಿಸಿ ಹಿಂದಿರುಗುವ ವೇಳೆಗೆ ರಾತ್ರಿ ಹನ್ನೆರಡು ಘಂಟೆಯ ಮೇಲಾಯಿತು. ರಾಮಶಾಸ್ತ್ರಿಗಳು ಹೇಳಿದರು:

“ಈಕೆ ಹುಟ್ಟಿದ ದಿನದಿಂದ ಸಣ್ಣ ಮಗುವಾಗಿದ್ದವರೆಗೂ ಈಕೆಯನ್ನು ಕೈಯಿಂದ ಎತ್ತಿ ಆಡಿಸಿ ನಗಿಸಿ ಸಂತೋಷಪಟ್ಟೆ. ಆಮೇಲೆ ನಾನೇ ಪುರೋಹಿತನಾಗಿ ಮದುವೆ ಮಾಡಿಸಿ ಸಂತೋಷಪಟ್ಟೆ. ಆಮೇಲೆ ಆಕೆ ಹೆತ್ತಾಗ ಜಾತಕರ್ಮಾದಿಗಳನ್ನು ಮಾಡಿಸಿ ಸಂತೋಷಪಟ್ಟೆ. ಈಗ ಅದೇ ಕೈಯಿಂದ ಕಥೆಯನ್ನು ಮುಗಿಸಿದ್ದೂ ಆಯಿತು."

ಹೀಗೆ ಗೋಳಿಟ್ಟರು. ಅಲ್ಲಿದ್ದ ಒಬ್ಬರು “ಲೋಕದಲ್ಲಿ ಇಂಥಾದ್ದು ಅಪರೂಪವಲ್ಲ. ಎಷ್ಟೋ ನಡೆದಿದೆ"–ಎಂದರು.

ವೆಂಕಟನಾರಣಪ್ಪನವರಿಗೆ ದೈವದ ಮೇಲೆ ಮುನಿಸು. ಅವರು ಮುನಿದುಕೊಂಡೇ, “ಇದು ಯಾಕೆ ಹೀಗಾಗಬೇಕು?"

–ಎಂದು ಪ್ರಲಾಪಿಸಿದರು.

ವೆಂಕಣ್ಣಯ್ಯನವರ ಬಾಯಿಂದ ಒಂದು ಮಾತೂ ಹೊರಡಲಿಲ್ಲ. ಆತ ಸ್ತಬ್ಧರಾಗಿ ಕುಳಿತಿದ್ದರು.

ನಾಲ್ಕೈದು ತಿಂಗಳು ಕಳೆಯಿತು. ಒಂದು ಸಂಜೆ ಹನುಮಂತರಾಯನ ಗುಡ್ಡದ ಪಶ್ಚಿಮದ ಕಡೆಗಿರುವ ಒಂದು ಬಂಡೆಯ ಬಿರುಕಿನಲ್ಲಿ ಬೆಂಚಿನಂತಿದ್ದ ಕಡೆ ವೆಂಕಣ್ಣಯ್ಯ, ನಾನು ಕುಳಿತು ಸೂರ್ಯಾಸ್ತಮಾನವನ್ನು ನೋಡುತ್ತಿದ್ದೆವು. ಅಲ್ಲಿ ನಾವು ಎಷ್ಟೋ ಸಾರಿ ಹಾಗೆ ಕುಳಿತು ಯಾವಯಾವುದೋ ಕಾವ್ಯಗಳನ್ನು ಓದಿದ್ದೆವು. ಆ ಸಂಜೆ ನಾನು ವೆಂಕಣ್ಣಯ್ಯನವರನ್ನು ಒಂದು ಪ್ರಶ್ನೆ ಕೇಳಿದೆ:

“ಹೃದಯವನ್ನು ಶ್ಮಶಾನ ಮಾಡಿ ರಾಗದ್ವೇಷಗಳ ಮೂಲವನ್ನು ಸುಟ್ಟು ಬೂದಿ ಮಾಡುವುದೆ? ಅಥವಾ, ಸುಟ್ಟುಹೋದದ್ದನ್ನೂ ಕೆಟ್ಟುಹೋದದ್ದನ್ನೂ ಕಿತ್ತು ಕಳೆದು ಅಲ್ಲಿ ಬೇರೆ ಸಸಿಗಳನ್ನು ನೆಡುವುದೆ? ವಿರಕ್ತಿಯೆ, ಸರಸತೆಯೆ? ಯಾವುದು ಸರಿಯಾದ ದಾರಿ?"

ವೆಂಕಣ್ಣಯ್ಯ ಕೊಂಚಹೊತ್ತು ಆಲೋಚನೆಮಾಡಿ

“ಮತ್ತೊಮ್ಮೆ ಈ ವಿಚಾರಕ್ಕೆ ಬರೋಣ"–ಎಂದರು.

ದಿನ ಕಳೆಯಿತು. ಮೂರು ನಾಲ್ಕು ತಿಂಗಳಾಯಿತು. ನಾನು ಪಟ್ಟಿದ್ದದನ್ನೇ ವೆಂಕಣ್ಣಯ್ಯ ಪಡಬೇಕಾಯಿತು. ಆದದ್ದರಿಂದ ನನ್ನ ಹಳೆಯ ಪ್ರಶ್ನೆಯನ್ನು ಮರಳಿ ಎತ್ತಲು ನನಗೆ ಮನಸ್ಸು ಬರಲಿಲ್ಲ.

ಕೆಲವು ವಾರ ಕಳೆದಮೇಲೆ ವೆಂಕಣ್ಣಯ್ಯ ಅದೇ ಪ್ರಶ್ನೆಯನ್ನು ನನಗೆ ಹಾಕಿದರು. ಈ ವೇಳೆಗೆ ನಾನು ನನ್ನ ಮನಸ್ಸಿನಲ್ಲಿ ಒಂದು ನಿರ್ಧಾರಕ್ಕೆ ಬಂದಿದ್ದೆ. ವೆಂಕಣ್ಣಯ್ಯನವರಿಗೆ ಹೇಳಿದೆ:

“ಈ ಪ್ರಶ್ನೆಗೆ ಉತ್ತರವನ್ನು ಪ್ರತಿಯೊಬ್ಬನೂ ತನ್ನ ಮಟ್ಟಿಗೆ ತಾನು ತನ್ನೊಳಗೇ ನಿಶ್ಚಯಿಸಿಕೊಳ್ಳಬೇಕಾದದ್ದು. ಒಬ್ಬೊಬ್ಬನ ದೇಹಧರ್ಮ ಒಂದೊಂದು ಬಗೆ ಇರುತ್ತದೆ. ಮನೋಧರ್ಮವೂ ಅಷ್ಟೆ, ಸಂಸಾರ ಸಂದರ್ಭಗಳೂ ಅಷ್ಟೆ. ಕರ್ತವ್ಯಪ್ರವೃತ್ತಿಗಳೂ ಅಷ್ಟೆ. ಈ ವಿಚಾರದಲ್ಲಿ ಒಬ್ಬರಿಗೋಸ್ಕರ ಇನ್ನೊಬ್ಬರು ನಿರ್ಣಯ ಹೇಳುವುದು ಸಾಧ್ಯವಿಲ್ಲ."

ವೆಂಕಣ್ಣಯ್ಯ ಬಹುಕಾಲ ಮೌನದಿಂದಿರುತ್ತಿದ್ದರು. ಅವರು ವರ್ಗವಾಗಿ ಮೈಸೂರಿಗೆ ಹೋದಬಳಿಕ ನಮಗೆ ಸಂಪರ್ಕಾವಕಾಶಗಳು ಕಡಿಮೆಯಾದವು. ಅವರೂ ನಾನೂ ಕಲೆತಾಗಲೂ ನಮ್ಮಿಬ್ಬರ ನಡುವೆ ಏನೋ ಒಂದು ಅಂತರಪಟ ನಿಂತಂತೆ ಇರುತ್ತಿತ್ತು.

ಇದು ನನ್ನ ಮನಸ್ಸಿಗೆ. ಅವರು ಹಿಂದಿನಂತೆ ವಿಶ್ವಾಸಿಗಳಾಗಿ ಒಂದೇ ರೀತಿ ನಡವಳಿಕೆ ನಡೆಯುತ್ತಿದ್ದರೂ ಮಾತಿನಲ್ಲಿ ಏನೋ ಸಂಕೋಚ ಕಾಣುತ್ತಿತ್ತು.

ಒಂದು ದಿನ ನಾನು ಇದನ್ನು ಪ್ರಸ್ತಾವಿಸಿ ಅವರ ಮನೆಗೇ ಹೋದೆ. ಪದ್ಧತಿಯಂತೆ ಅವರು ತಿಂಡಿ ತೀರ್ಥ ಉಪಚಾರಗಳನ್ನೆಲ್ಲ ನಡೆಸಿದರು. ಅನಂತರ ಅವರನ್ನು ನಾನು ಬೇಡಿಕೊಂಡೆ:

“ನೀವು ಸಂಕೋಚವಿಟ್ಟುಕೊಳ್ಳಬಾರದು, ನಿಮ್ಮ ಸ್ವಭಾವ ಸಂತೋಷದ್ದು. ಸ್ವಭಾವದಂತೆ ಇರಬೇಕು. ನೀವು ಹಾಗಿದ್ದರೆ ನನಗೂ ಸಂತೋಷವಾಗುತ್ತದೆ."

ಇದಾದಮೇಲೆ ಅವರು ತಮ್ಮ ಹಿಂದಿನ ಮನೋಭಾವಕ್ಕೆ ಕ್ರಮೇಣ ಬರುತ್ತಿದ್ದರೆಂದು ನಾನಂದುಕೊಂಡಿದ್ದೇನೆ.

ಅವಸಾನ

ಆಮೇಲೆ ಅವರ ಬಾಳಿಗೆ ಹೆಚ್ಚು ದಿನವನ್ನು ದೈವ ಕೊಡಲಿಲ್ಲ. ೧೯೩೯ ಫೆಬ್ರವರಿ ೨೪ರಂದು ಅವರು ತೀರಿಕೊಂಡರು. ಅವರು ಸಂಸಾರದಲ್ಲಿ ಬಹುವಾಗಿ ಕ್ಲೇಶಪಟ್ಟಿದ್ದರು. ಅವರಿಗೆ ಕೈತುಂಬ ಸಂಬಳ, ನಿಶ್ಚಿಂತೆಯ ಉದ್ಯೋಗ ಬಂದದ್ದು ಅವರು ಪ್ರೊಫೆಸರಾದ ಮೇಲೆ. ಆ ವೇಳೆಗೆ ತಾಪತ್ರಯಗಳೂ ಹೆಚ್ಚಿಕೊಂಡಿದ್ದವು. ನಮ್ಮ ದೇಶದಲ್ಲಿ ಸಾಮಾನ್ಯವಾದ ಮಧ್ಯಮ ವರ್ಗದ ಕುಟುಂಬಗಳಲ್ಲಿ ಯಾವನಾದರೊಬ್ಬ ತಲೆಯೆತ್ತಿದನೆಂದರೆ ಅವನನ್ನು ಹದಕ್ಕೆ ತರಲು ನಾಲ್ಕು ಮಂದಿ ಸುತ್ತ ಮುತ್ತ ಇರುತ್ತಾರೆ. ಈ ಲೋಕ ರೀತಿಗಳನ್ನೆಲ್ಲ ವೆಂಕಣ್ಣಯ್ಯ ಕಂಡಿದ್ದ, ಮನಸ್ಸನ್ನು ಅದಕ್ಕೆ ಸಿದ್ಧ ಮಾಡಿಕೊಂಡಿದ್ದ. ಆತನ ಮನಸ್ಸಿನಲ್ಲಿ ಶೇಷಾಚಲಸಾಧುಗಳ ಮೇಲ್ಪಂಕ್ತಿ ಸ್ಥಿರವಾಗಿ ನೆಲಸಿತ್ತು. ಸೀತಾರಾಮರ ದಿವ್ಯಚರಿತ್ರೆಯೂ ಭಗವದ್ಗೀತೆಯ ವಾಕ್ಯಗಳೂ ಆತನ ಜೀವನದಲ್ಲಿ ಸೇರಿಕೊಂಡಿದ್ದವು. ಅವಸಾನಕಾಲದಲ್ಲಿ ಆತ ಭಗವದ್ಧ್ಯಾನದಲ್ಲಿ ಎಲ್ಲವನ್ನೂ ಮರೆತಿದ್ದ. ದೇವತಾರಾಧನೆಯಲ್ಲಿ ಪುಷ್ಪಾರ್ಚನೆ ಮಾಡುವ ಕೈಯಂತೆ ಆತನ ಹಸ್ತಮುದ್ರಿಕೆಯಿತ್ತಂತೆ.

೨೪

ಟಿ.ಎಸ್. ವೆಂಕಣ್ಣಯ್ಯನವರು

೧. ವಿಮರ್ಶನಪೂರ್ವಕವಾದ ಪೂರ್ವಾಚಾರ ವಿಶ್ವಾಸ

ವೆಂಕಣ್ಣಯ್ಯ ದೈವಾಧೀನರಾಗಿ ಇಂದಿಗೆ ಮೂವತ್ತು ವರ್ಷಗಳಾಗಿವೆ. ಆದರೂ ನನಗೆ ಆ ದುಃಖ ಈಗಲೂ ಹೊಸದಾಗಿಯೇ ಇದೆ. ನಾನು ವಿಯೋಗದುಃಖಕ್ಕೆ ಒಳಗಾಗಿರುವುದು ಅಪರೂಪವೇನೂ ಅಲ್ಲ. ಆದರೆ ವೆಂಕಣ್ಣಯ್ಯನ ಮೃತಿಯಿಂದ ಆಗಿರುವ ಗಾಯ ಎಂದಿಗೂ ಮಾಯಲಾರದ್ದೆಂದು ಅನ್ನಿಸುತ್ತದೆ. ಈ ವಿಶೇಷ ದುಃಖಕ್ಕೆ ಕಾರಣ ಏನಿರಬಹುದು?

ಪ್ರೀತಿಗೂ ದುಃಖಕ್ಕೂ ಕಾರಣಗಳನ್ನು ಹೇಳುವೆನೆಂದು ಹೊರಟರೆ ಅದು ಹೃದಯಕ್ಕೆ ಅನ್ಯಾಯ ಮಾಡಿದಂತಾದೀತು. ಪ್ರೀತಿ ಅಳತೆಗೆ ಸಿಕ್ಕುವ ವಸ್ತುವಲ್ಲ. ಕಾರಣ ಹೇಳಿದರೆ ಒಂದು ಮಿತಿಯನ್ನು ಗೊತ್ತು ಮಾಡಿದಂತಾಗುತ್ತದೆ. ಆ ಕಾರಣವಿಲ್ಲದಿದ್ದರೆ ಆ ಕಾರ್ಯವಾಗಲಾರದೆಂದು ಸೂಚಿಸಿ ಪ್ರೀತಿಗೆ ಉಪಾಧಿಗಳನ್ನು ಕಲ್ಪಿಸಿದಂತೆ ಆಗುತ್ತದೆ. ಪ್ರೀತಿ ಅಂಥ ಪರಿಮಿತವಾದ ವಸ್ತುವಲ್ಲ.

> ವ್ಯತಿಷಜತಿ ಪದಾರ್ಥಾನ್
> ಆಂತರಃ ಕೋಽಪಿ ಹೇತು ॥
> ನ ಖಲು ಬಹಿರುಪಾಧೀನ್
> ಪ್ರೀತಯಃ ಸಂಶ್ರಯನ್ತೇ ॥

ತತ್ತ್ವ ಹೀಗಿದ್ದರೂ ನನಗೆ ತೋರಿದ ಮಟ್ಟಿಗೆ ನನ್ನ ದುಃಖದ ಒಂದು ವಿಶೇಷ ಕಾರಣವನ್ನು ಸೂಚಿಸಬೇಕೆನ್ನಿಸುತ್ತದೆ. ವೆಂಕಣ್ಣಯ್ಯನ ಮರಣದಿಂದ ಆಗಿರುವ ನಷ್ಟ ವ್ಯಕ್ತಿಮಾತ್ರದ್ದಲ್ಲ. ಅದು ನಮ್ಮ ದೇಶದ ಸಾರ್ವಜನಿಕ ಶ್ರೇಯಸ್ಸಿನ ದೃಷ್ಟಿಯಿಂದ ಉಂಟಾಗಿರುವ ದುಃಖ. ಕನ್ನಡ ಸಾಹಿತ್ಯದ ನವೀಕರಣವೂ ಸಮಸ್ತ ಭಾರತದ ಸಮಾಜ ಜೀವನದ ನವೀಕರಣವೂ ಈಗ ನಡೆಯಬೇಕಾಗಿರುವ ಶ್ರೇಯಃಕಾರ್ಯಗಳಲ್ಲಿ ಮುಖ್ಯವಾದವು. ಈ ಎರಡು ಕಾರ್ಯಗಳಿಗೂ ವೆಂಕಣ್ಣಯ್ಯನಂತೆ ಒದಗಿಬರಲು ಸಮರ್ಥರಾದವರು ಬಹು ಮಂದಿಯಿಲ್ಲ.

ಹಾಗಾದರೆ ವೆಂಕಣ್ಣಯ್ಯನಲ್ಲಿದ್ದ ಅಂಥ ವಿಶೇಷ ಸಾಮರ್ಥ್ಯವೇನು? ಅದನ್ನು ಸಂಗ್ರಹವಾಗಿ ಸೂಚಿಸಬೇಕೆಂದರೆ ಅದು ವಿಮರ್ಶನಪೂರ್ವಕವಾದ ಪೂರ್ವಾಚಾರ ವಿಶ್ವಾಸ. ವಿಶ್ವಾಸವೂ ವಿಮರ್ಶೆಯೂ ಮೇಲ್ನೋಟಕ್ಕೆ ವಿರುದ್ಧಗಳೆಂಬಂತೆ ತೋರುತ್ತವೆ. ಒಬ್ಬಾನೊಬ್ಬ ಮನುಷ್ಯನು ಅರೋಗ ದೃಢಕಾಯನಾಗಿದ್ದಾನೆ ಎಂದು ಹೇಳುವುದಕ್ಕೂ ಅವನು ಔಷಧ, ಪಥ್ಯಗಳಲ್ಲಿದ್ದಾನೆನ್ನುವುದಕ್ಕೂ ಪರಸ್ಪರ ವಿರೋಧ ಆಪಾತತಃ ಕಾಣುತ್ತದೆ. ಆರೋಗ್ಯದಲ್ಲಿರುವವನಿಗೆ ಔಷಧ ಏಕೆ? ಔಷಧ ತೆಗೆದುಕೊಳ್ಳಬೇಕಾದರೆ ಆರೋಗ್ಯ ಕೆಟ್ಟಿರಬೇಕಷ್ಟೆ? ಹೀಗೆ ಏಳುತ್ತದೆ ತರ್ಕ. ಆದರೆ ಮನುಷ್ಯನು ಕ್ಷಣೇ ಕ್ಷಣೇ ಆಹಾರ ವಿಹಾರಗಳಲ್ಲಿ ಪರೀಕ್ಷೆ ನಡಸಿಕೊಳ್ಳುತ್ತ ಜಾಗರೂಕನಾಗಿ ನಡೆದರೆ ಆಗ ಅವನಿಗೆ ಆರೋಗ್ಯ ಸಿದ್ಧ. ಇಂಥ ಆರೋಗ್ಯ ದಶೆಯಲ್ಲಿ ಒಂದು ಕಡೆಯ ಬಲಪುಷ್ಟಿಯೂ ಇನ್ನೊಂದು ಕಡೆಯ ಜಾಗರೂಕತೆಯೂ ಸಮ್ಮಿಳಿತವಾಗಿರುತ್ತದೆ. ವಿಶ್ವಾಸ–ವಿಮರ್ಶೆಗಳೂ ಹಾಗೆಯೇ.

ಬಿ.ಎಂ.ಶ್ರೀ.–ವೆಂಕಣ್ಣಯ್ಯ

ವೆಂಕಣ್ಣಯ್ಯನ ಈ ವಿಶೇಷ ಲಕ್ಷಣವನ್ನು ನಮ್ಮ ಮನಸ್ಸುಗಳಿಗೆ ಸ್ಪಷ್ಟ ಪಡಿಸಿಕೊಳ್ಳುವುದಕ್ಕಾಗಿ ಆತನನ್ನು ಇಬ್ಬರು ಸ್ನೇಹಿತರೊಡನೆ ಹೋಲಿಸಿ ನೋಡಬಹುದು. ಅವರಲ್ಲಿ ಮೊದಲನೆಯವರು ವೆಂಕಣ್ಣಯ್ಯನ ಗುರುಗಳೂ ಸಹೋದ್ಯೋಗಿಗಳೂ ಆಗಿದ್ದ ಬಿ.ಎಂ. ಶ್ರೀಕಂಠಯ್ಯನವರು. ಶ್ರೀಕಂಠಯ್ಯನವರು ವೆಂಕಣ್ಣಯ್ಯನವರಿಗಿಂತ ಬಹುಶ್ರುತರು. ಅವರ ಪಾಂಡಿತ್ಯ ಹೆಚ್ಚು ವಿಸ್ತಾರವಾದದ್ದು. ಪೂರ್ವ ಸಾಹಿತ್ಯದಲ್ಲಿ ಅವರ ಅಂತರ್ದೃಷ್ಟಿ ಆಳವಾದದ್ದು. ಹಾಗೆಯೇ ಅವರಿಗೆ ನವೀನ ಸಾಹಿತ್ಯದಲ್ಲಿಯೂ ಪರಿಚಯವೂ ಒಲವೂ ಎರಡೂ ಹೆಚ್ಚು. ಹೀಗೆ ಪಾಂಡಿತ್ಯದ ದೃಷ್ಟಿಯಿಂದ ಶ್ರೀಕಂಠಯ್ಯನವರು ಕೊಂಚ ಹೆಚ್ಚೆಂದು ನಾವು ಒಪ್ಪಿಕೊಳ್ಳಬೇಕಾದರೂ ಇನ್ನೊಂದು ದೃಷ್ಟಿಯಿಂದ ವೆಂಕಣ್ಣಯ್ಯನ ಮನೋಭಾವ ನಮಗಿರುವ ಸದ್ಯಃಕರ್ತವ್ಯದ ದೃಷ್ಟಿಯಿಂದ ಹೆಚ್ಚು ಅನುಕೂಲವಾದದ್ದೆಂದು ನನ್ನ ಅಭಿಪ್ರಾಯ. ಶ್ರೀಕಂಠಯ್ಯನವರು ಪೂರ್ವಸಂಪ್ರದಾಯವನ್ನು ಅಲ್ಲಗಳೆದವರೇನೂ ಅಲ್ಲ. ಅದರಲ್ಲಿ ಅವರಿಗೆ ಒಂದಿಷ್ಟು ಮಮತೆಯಿದ್ದದ್ದೂ ನಿಜ. ಆದರೆ ಕೆಲವು ಕಾರಣಗಳಿಂದ ಅವರ ಮನಸ್ಸು ಪೂರ್ವಸಂಪ್ರದಾಯದ ವಿಷಯದಲ್ಲಿ ಕೊಂಚ ಕೊಂಚ ಕಹಿಯಾಗಿತ್ತು. ಕೆಲವು ವೈಯಕ್ತಿಕ ಸಂದರ್ಭಗಳಿಂದ ಅವರ ಮನಸ್ಸು ರೋಸಿಹೋಗಿತ್ತು. ಹೀಗೆ ಮನಸ್ಸು ಕೊಂಚ ಕಹಿಕಹಿಯಾಗಿದ್ದದ್ದರಿಂದ ಪೂರ್ವಸಾಹಿತ್ಯ ಪೂರ್ವಸಂಪ್ರದಾಯಗಳ ವಿಷಯದಲ್ಲಿ ಶ್ರೀಕಂಠಯ್ಯನವರ ಅಂತರ್ದೃಷ್ಟಿಯಲ್ಲಿ ಕೊಂಚ ಧೂಮ್ರವರ್ಣ ಸೇರಿತ್ತೆಂದು ನನಗೆ ಆಗಾಗ ಅನ್ನಿಸುತ್ತದೆ. ಅವರ ನೋಟ ಬಹಳ ಆಳವಾಗೇನೋ ಇತ್ತು. ಆದರೆ ದೃಷ್ಟಿಯಲ್ಲಿ ಕೊಂಚ ಹೊಗೆ ಸೇರಿಕೊಂಡಿತ್ತೆಂದು ನನಗನಿಸಿರುವುದುಂಟು.

ವೆಂಕಣ್ಣಯ್ಯನ ಅಂತರ್ದೃಷ್ಟಿ ಅದಕ್ಕಿಂತ ಸ್ವಚ್ಛವಾಗಿದ್ದದ್ದೆಂದು ತೋರುತ್ತದೆ. ವೆಂಕಣ್ಣಯ್ಯ ಅಂಧಶ್ರದ್ಧೆಯ ಮನುಷ್ಯನೇನೂ ಅಲ್ಲ. ಆತ ವಿಚಾರವಂತ. ಬಹು ಸೂಕ್ಷ್ಮವಾದ ಮತ್ತು ನಿಷ್ಪಕ್ಷಪಾತವಾದ ವಿಚಾರಕ್ರಮ ಆತನದು. ಅಷ್ಟಿದ್ದರೂ ಆತ ಪೂರ್ವ ಸಾಹಿತ್ಯ ಮತ್ತು ಪೂರ್ವಸಂಪ್ರದಾಯಗಳ ವಿಷಯದಲ್ಲಿ ದುಡುಕಿ ಅಭಿಪ್ರಾಯ ಹೇಳುವವನಲ್ಲ. ತನ್ನ ಬುದ್ಧಿಗೆ ಒಂದಾನೊಂದು ವಿಷಯ ಅರ್ಥವಾಗದೆಹೋದರೆ ಅದು ನಿರರ್ಥಕ ವಿಷಯವೆಂದು ಹೇಳದೆ ಅದನ್ನು ಇನ್ನೂ ವಿಚಾರ ಮಾಡೋಣ, ಮತ್ತೂ ಯೋಚಿಸಿ ನೋಡೋಣ–ಎನ್ನುವ ಪ್ರವೃತ್ತಿ ಆತನದು.

ವೆಂಕಣ್ಣಯ್ಯ–ಕೃಷ್ಣಶಾಸ್ತ್ರಿಗಳು

ಈಗ ಇನ್ನೊಬ್ಬ ಸ್ನೇಹಿತರನ್ನು ನೋಡೋಣ. ಇವರು ಎ. ಆರ್. ಕೃಷ್ಣಶಾಸ್ತ್ರಿಗಳು. ಇವರು ವೆಂಕಣ್ಣಯ್ಯನ ಎಡೆಬಿಡದ ಸ್ನೇಹಿತರು, ಮತ್ತು ಸಹೋದ್ಯೋಗಿಗಳು. ಸಾಹಿತ್ಯಾದಿ ಸಮಸ್ತ ಪ್ರಯತ್ನಗಳಲ್ಲೂ ಇಬ್ಬರೂ ಸಹಭಾಗಿಗಳು. ಆದರೂ ಕೃಷ್ಣಶಾಸ್ತ್ರಿಗಳವರಲ್ಲಿದ್ದ ಪೂರ್ವಸಾಹಿತ್ಯ ಸಂಪ್ರದಾಯಗಳ ವಿಶ್ವಾಸ ವೆಂಕಣ್ಣಯ್ಯನವರಷ್ಟು ಪುನರ್ವಿಮರ್ಶನ ಸಿದ್ಧವಾದದ್ದಲ್ಲವೆಂದು ನನಗೆ ತೋರುತ್ತದೆ. ಶಾಸ್ತ್ರಿಗಳದು ತೀವ್ರ ಸ್ವಭಾವ. ಒಂದು ಅಭಿಪ್ರಾಯವನ್ನು ಬೇಗಲೂ ಖಂಡಿತವಾಗಿಯೂ ಹೇಳಬೇಕು. ಇಂಗ್ಲಿಷಿನಲ್ಲಿ ಯಾವ ಪುನರಾಲೋಚನೆಯನ್ನಪೇಕ್ಷಿಸುವ ತಾಳ್ಮೆಯ ಭಾವವನ್ನು Provisional, Tentative ಎಂದು ಹೇಳುತ್ತಾರೋ ಆ ಪುನಃ ಪರೀಕ್ಷಾಪೇಕ್ಷೆಯ ಮನೋಭಾವ ಶಾಸ್ತ್ರಿಗಳಲ್ಲಿದ್ದದ್ದಕ್ಕಿಂತ ವೆಂಕಣ್ಣಯ್ಯನಲ್ಲಿ ಹೆಚ್ಚಾಗಿ ಕಾಣಬರುತ್ತಿತ್ತು. ಭಗವದ್ಗೀತೆಯಲ್ಲಿ ಒಂದು ಉಪದೇಶವಾಕ್ಯವಿರುತ್ತದೆ. ಶಾಸ್ತ್ರಿಗಳ ಮನಸ್ಸು ಆ ವಾಕ್ಯವನ್ನು ಒಂದೇ ಸಲ ಪೂರ್ತಿಯಾಗಿ ಅಂಗೀಕರಿಸಿಬಿಡುತ್ತದೆ. ವೆಂಕಣ್ಣಯ್ಯನ ಮನಸ್ಸು ಆ ವಿಚಾರಕ್ಕೆ ಸಂಬಂಧಪಟ್ಟಂತೆ ಬೇರೆ ವಾಕ್ಯಗಳೇನಾದರೂ ಉಂಟೆ? ಭಾಷ್ಯಗಳಲ್ಲಿ ಏನೇನು ಅರ್ಥಗಳಿವೆ? ಇವುಗಳನ್ನು ಸಾವಧಾನವಾಗಿ ಪರಿಶೀಲಿಸೋಣ–ಹೀಗೆ.

ಪ್ರಾಚೀನ–ನವೀನ ಸಮನ್ವಯ

ವೆಂಕಣ್ಣಯ್ಯನಿಗೆ ಪ್ರಾಚೀನ ಪ್ರಮಾಣದಲ್ಲಿ ಆಶ್ರಯ; ಸದ್ಯಃ ಪ್ರಯೋಗದಲ್ಲಿ ತಾತ್ಪರ್ಯ. ಹೇಗೆ ಪ್ರಾಚೀನ–ನವೀನಗಳೆರಡೂ ಸಮನ್ವಯವಾಗುವಂತೆ ಮಾಡಬೇಕೆಂಬುದು ವೆಂಕಣ್ಣಯ್ಯನ ನೈಜ ಧೋರಣೆ.

ಕನ್ನಡ ಸಾಹಿತ್ಯದಲ್ಲಿ ಆಗಬೇಕಾದ ಕೆಲಸ ಬಹಳವಾಗಿದೆಯೆಂದು ಇತರರಂತೆಯೇ ವೆಂಕಣ್ಣಯ್ಯನವರು ಅಂಗೀಕರಿಸಿದ್ದರು. ತಮ್ಮ ಪ್ರಾಚೀನ ಕಾವ್ಯಗಳು ಆಯಾ ಕಾಲದ ಜನರನ್ನು ದೃಷ್ಟಿಯಲ್ಲಿರಿಸಿಕೊಂಡು ಹುಟ್ಟಿದಂಥವು. ಚಿರಕಾಲ ಬಾಳುವ ಸತ್ತ್ವ ಅವುಗಳಲ್ಲಿ ಕೆಲವಕ್ಕೆ ಮಾತ್ರ ಉಂಟು. ಬಹುಭಾಗದ ಪ್ರಾಚೀನ ಸಾಹಿತ್ಯದಲ್ಲಿ ಅಂಥ ಸತ್ತ್ವವಿಲ್ಲ. ನಮ್ಮ ದಿನಕ್ಕೆ ಬೇಕಾಗಿರುವಂಥ, ಇಂದಿನ ಜನಜೀವನಕ್ಕೆ ಉಪಕಾರಿಯಾಗುವಂಥ ಸಾಹಿತ್ಯ ಕನ್ನಡದಲ್ಲಿ ಇನ್ನೂ ಆಗಬೇಕಾಗಿದೆ; ಇಂಗ್ಲಿಷ್ ಮೊದಲಾದ ಪ್ರಪಂಚ ಸಾಹಿತ್ಯಗಳೊಡನೆ ಸರಿತೂಗಬಲ್ಲಂಥ ಸಾಹಿತ್ಯ ಹುಟ್ಟಬೇಕಾಗಿದೆ. ಈ ನವೀನ ನಿರ್ಮಿತಿಗೆ ದಾರಿಯನ್ನು ಹುಡುಕುವುದರಲ್ಲಿ ಸಹಾಯ ಕೊಡಬಲ್ಲ ಶಕ್ತಿಯೂ ಉತ್ಸಾಹವೂ ವೆಂಕಣ್ಣಯ್ಯನಿಗಿದ್ದಷ್ಟು ಹೆಚ್ಚಾಗಿ ಇತರ ಯಾರಲ್ಲಿಯೂ ನಾನು ಕಂಡಿಲ್ಲ. ವೆಂಕಣ್ಣಯ್ಯನಿಗಿಂತ ಪಂಡಿತರಾದವರೂ ಪ್ರತಿಭಾವಂತರಾದವರೂ ಇಲ್ಲವೆಂದು ನಾನು ಹೇಳುತ್ತಿಲ್ಲ. ಆದರೆ ನಮ್ಮ ಉದ್ದೇಶಕ್ಕೆ ಬೇಕಾದದ್ದು ಪಾಂಡಿತ್ಯ ಮಾತ್ರವಲ್ಲ; ಪ್ರತಿಭೆ ಮಾತ್ರವಲ್ಲ. ಅದು ಒಂದು ವಿಶೇಷ ರೀತಿಯ ಮನೋಭಾವ. ಆ ಮನೋಭಾವದಲ್ಲಿ ಪ್ರಾಚೀನರನ್ನು ಬಿಡದ ಆಧುನಿಕತೆ ಮುಖ್ಯಾಂಶ. ಇದಕ್ಕಿಂತ ಹೆಚ್ಚು ಮಾತುಗಳಿಂದ ಅದನ್ನು ವಿವರಿಸಲಾಗದು. ಈಗ ಹೊಸದಾಗಿ ಬೆಳೆಯುವುದು ಹಿಂದಿನಿಂದ ಬೆಳೆದುಕೊಂಡು ಬಂದಿರುವುದರ ಸ್ವಾಭಾವಿಕವಾದ ವಿಕಾಸವಾಗಿರಬೇಕು. ಮರ ಪುರಾತನ, ಚಿಗುರು ನೂತನ. ಇಂಥ ಬೆಳವಣಿಗೆಯ ರೀತಿ ವೆಂಕಣ್ಣಯ್ಯನಿಗೆ ಇಷ್ಟವಾದದ್ದು.

ಸುಧಾರಣೆ

ಸಾಹಿತ್ಯದಲ್ಲಿ ಹೇಗೋ ಸಮಾಜವ್ಯವಸ್ಥೆಯಲ್ಲಿಯೂ ಹಾಗೆ ಇದ್ದದ್ದು ವೆಂಕಣ್ಣಯ್ಯನ ಮನೋಭಾವ. ನಮ್ಮ ಪುರಾತನ ಸಂಪ್ರದಾಯಗಳಲ್ಲಿ, ಆಚರಣೆಗಳಲ್ಲಿ, ಶಾಸ್ತ್ರವಿಹಿತ ಕರ್ಮಗಳಲ್ಲಿ ಎಷ್ಟೋ ಭಾಗ ಕಾಲವಶದಿಂದ ಅರ್ಥಹೀನವಾಗಿ ಬರಿಯ ಕರಡು ಕಟ್ಟಾಗಿ ಉಳಿದುಕೊಂಡಿದೆ. ಇದನ್ನು ಚೆನ್ನಾಗಿ ಶೋಧಿಸಿ ಪೊಳ್ಳಾದದ್ದನ್ನೂ ಜಳ್ಳಾದದ್ದನ್ನೂ ತೆಗೆದು ಹಾಕಿದರೆ ಸಾರಭಾಗವಾದದ್ದು ಉಳಿದು ಊರ್ಜಿತಪಡುವ ಸಂಭವ ಹೆಚ್ಚು. ಆದದ್ದರಿಂದ ಸಮಾಜ ಸಂಪ್ರದಾಯಗಳ ಶೋಧನೆ ಸುಧಾರಣೆಗಳು ಅತ್ಯಂತ ಅವಶ್ಯವಾಗಿವೆ. ಆದರೆ ಪುರಾತನವಾದದ್ದರ ಮೇಲೆ ನಾವು ದುಡುಕಿ ಕೈಯಿಡತಕ್ಕದ್ದಲ್ಲ. ಜಾಗರೂಕತೆಯಿಂದಲೂ ಅಂತರರ್ಥಗ್ರಹಣಪೂರ್ವಕವಾಗಿಯೂ ಮಾಡಬೇಕಾದ ಕೆಲಸ ಇದು. ಪೂರ್ವಿಕರ ತಾತ್ಪರ್ಯವೇನೆಂಬುದನ್ನು ಬುಡಮುಟ್ಟ ತಿಳಿದುಕೊಂಡ ಹೊರತು ಪೂರ್ವಿಕರ ಸಂಸ್ಥೆಗಳಿಗೆ ನಾವು ಕೈಹಾಕುವುದು ನಮ್ಮ ಸಮಾಜಕ್ಕೂ ನಮ್ಮ ಧರ್ಮಕ್ಕೂ ಅಪಾಯಕರ- ಎಂದು ವೆಂಕಣ್ಣಯ್ಯ ನಂಬಿದ್ದರು. ನವೀಕರಣವಾಗಬೇಕು; ಆದರೆ ವಿಚಾರ ಪೂರ್ವಕವಾಗಿ ಆಗಬೇಕು.ಇದು ಅವರ ಮನೋಗತ.

ಹೀಗೆ ಸಾಹಿತ್ಯ-ಸಮಾಜ ಕ್ಷೇತ್ರಗಳೆರಡರಲ್ಲಿಯೂ ವೆಂಕಣ್ಣಯ್ಯನಂಥ ವಿಚಾರದಕ್ಷನಿಂದ, ಅಂಥ ನಿಷ್ಪಕ್ಷಪಾತಿಯಾದ ಉದಾರಿಯ ವಿಚಾರಶೀಲತೆಯಿಂದ ಆಗಬೇಕಾದ ಉಪಕಾರ ತುಂಬಾ ಮುಖ್ಯವಾದದ್ದು. ಅಂಥದ್ದಕ್ಕಾಗಿ ನಮ್ಮ ದೇಶ ಕಾದುಕೊಂಡಿದೆ.

***

ಈ ಅಭಿಪ್ರಾಯಗಳನ್ನು ವೆಂಕಣ್ಣಯ್ಯ ೧೯೩೪–೩೫ರಲ್ಲಿ ಪರಿಷತ್ತಿನ ವಿಶೇಷ ಸಾಹಿತ್ಯೋತ್ಸವದ ಉಪನ್ಯಾಸ ಮಾಲೆಯಲ್ಲಿ ವಿಸ್ತಾರಪಡಿಸಿದರು.

೨೫

ಎ. ಆರ್. ಕೃಷ್ಣಶಾಸ್ತ್ರಿಗಳವರು

ಎ. ಆರ್. ಕೃಷ್ಣಶಾಸ್ತ್ರಿಗಳು ಆಗರ್ಭ ವಿದ್ವಾಂಸರೆಂದು ಹೇಳಬಹುದು. ಅವರ ತಂದೆ ಅಂಬಳೆ ರಾಮಕೃಷ್ಣಶಾಸ್ತ್ರಿಗಳು ಮೈಸೂರಿನ ಸಂಸ್ಕೃತ ಮಹಾಪಾಠಶಾಲೆಯಲ್ಲಿ ವ್ಯಾಕರಣಶಾಸ್ತ್ರದ ಮುಖ್ಯೋಪಾಧ್ಯಾಯರಾಗಿದ್ದರು. ಅವರ ವ್ಯಾಕರಣ ಪಾಂಡಿತ್ಯದ ಜೊತೆಗೆ ಜ್ಯೋತಿಷ್ಯ, ಆಯುರ್ವೇದ ಪರಿಶ್ರಮವೂ ಸೇರಿತ್ತು. ಹೀಗೆ ವಿದ್ವತ್ತೆ ಕೃಷ್ಣಶಾಸ್ತ್ರಿಗಳಿಗೆ ಹುಟ್ಟಿನಿಂದಲೇ ಬಂದಿತ್ತೆಂದು ಹೇಳಬಹುದು.

ಕೃಷ್ಣಶಾಸ್ತ್ರಿಗಳಿಗೆ ಚಿಕ್ಕಂದಿನಲ್ಲಿಯೇ ಮಾತೃವಿಯೋಗವಾಗಿದ್ದದ್ದರಿಂದ ಅವರಲ್ಲಿ ಆರ್ದ್ರಹೃದಯತೆ ಸಂದರ್ಭವಶದಿಂದಲೂ ಉಂಟಾಯಿತೆಂದು ಹೇಳಬಹುದು. ಬಹು ಮಂದಿಗೆ ಕೃಷ್ಣಶಾಸ್ತ್ರಿಗಳು ಉಪಕಾರಿಗಳಾಗಿದ್ದರು. ಕಷ್ಟದಲ್ಲಿದ್ದವರಿಗೆ ಅವರ ಮರುಕ ಯಾವಾಗಲೂ ಸಿದ್ಧವಾಗಿತ್ತು.

ತಮ್ಮನ ಮೇಲೆ ಅವರಿಗೆ ಅತಿಶಯವಾದ ವಾತ್ಸಲ್ಯ. ತಾಯಿ ಸಾಯುವಾಗ ಆತ ಎಳೆಯ ಮಗುವಾಗಿದ್ದನೆಂಬುದನ್ನು ಪದೇಪದೇ ನೆನೆಸಿಕೊಳ್ಳುತ್ತಿದ್ದರು.

ಕೃಷ್ಣಶಾಸ್ತ್ರಿಗಳನ್ನು ಕುರಿತು ಮಾತನಾಡಬೇಕೆಂದರೆ ನನ್ನ ಮುಂದೆ ಒಂದು ಪ್ರಶ್ನೆ ಏಳುತ್ತದೆ: ಕೃಷ್ಣಶಾಸ್ತ್ರಿಗಳು ಮುಖ್ಯವಾಗಿ ಪಂಡಿತರೆ? ರಸಿಕರೆ? ಸಾಧುಗೃಹಸ್ಥರೆ? ಕಾರ್ಯದಕ್ಷರೆ?

ಕೃಷ್ಣಶಾಸ್ತ್ರಿಗಳ ಮೊದಮೊದಲಿನ ವಿದ್ಯಾಭ್ಯಾಸ ಸಂಸ್ಕೃತದಲ್ಲಿ, ಸಾಂಪ್ರದಾಯಿಕ ಕ್ರಮದಲ್ಲಿ-ಅವರ ತಂದೆಯವರ ಬಳಿ. ಆಮೇಲೆ ಅವರು ಇಂಗ್ಲಿಷ್ ಕಾಲೇಜು ಸೇರಿ ಬಿ.ಎಂ. ಶ್ರೀಕಂಠಯ್ಯನವರ ಪ್ರಭಾವಕ್ಕೊಳಗಾಗಿ ಕನ್ನಡಕ್ಕೊಲಿದರು. ಅವರು ಹೈದರಾಬಾದಿನಲ್ಲಿ ಮಾಡಿದ ಸಾಹಿತ್ಯ ಸಮ್ಮೇಳನದ ಅಧ್ಯಕ್ಷಭಾಷಣದಲ್ಲಿಯೂ ಪರಿಷತ್ಪತ್ರಿಕೆಯ ಸಂಪಾದಕರಾಗಿ ಬರೆದ ಲೇಖನಗಳಲ್ಲೂ ತಮ್ಮ ಕನ್ನಡ ಮಮತೆಯನ್ನು ಪ್ರಕಟವಾಗಿ ಒಪ್ಪಿಕೊಂಡಿದ್ದಾರೆ. ಸಂಸ್ಕೃತಕ್ಕೆ ನಮ್ಮ ವಿಶೇಷ ರಕ್ಷಣೆ ಅವಶ್ಯವಿಲ್ಲ. ಪ್ರಪಂಚದ ಎಲ್ಲ ದೇಶಗಳೂ ಸಂಸ್ಕೃತವನ್ನು ಗೌರವಿಸುತ್ತವೆ. ಇಂಗ್ಲೆಂಡಿನವರೂ, ಜರ್ಮನಿಯವರೂ ಫ್ರಾನ್ಸಿನವರೂ, ಅಮೆರಿಕದವರೂ ಸಂಸ್ಕೃತವನ್ನು ಪೋಷಿಸಲು ಮುಂದೆ ಬಂದಿದ್ದಾರೆ. ನಮ್ಮ ಕನ್ನಡಕ್ಕೆ ಅಂಥ ಯೋಗವೆಲ್ಲಿದೆ? ಕನ್ನಡಿಗರು ಅದನ್ನು ರಕ್ಷಿಸಿಕೊಂಡರೆ ಉಂಟು, ಅವರು ಉದಾಸೀನರಾದರೆ ಅದನ್ನು ಕೇಳುವವರು ಬೇರೆ ಯಾರಿದ್ದಾರೆ? –ಇದು

ಕೃಷ್ಣಶಾಸ್ತ್ರಿಗಳಿಗೆ ಪದೇಪದೇ ಬರುತ್ತಿದ್ದ ಯೋಚನೆ. ಈ ಯೋಚನೆಯ ಫಲಿತಾಂಶ ಅವರ ಸಾಹಿತ್ಯಸೇವೆ ಮತ್ತು ಅವರ ಕರ್ನಾಟಕ ಸಂಘದ ದುಡಿತ.

ನಿತ್ಯಜೀವನದಲ್ಲಿ ಶಾಸ್ತ್ರಿಗಳು ಸಂಪ್ರದಾಯಸ್ಥರು, ಸದಾಚಾರಶೀಲರು. ದೇವತಾರ್ಚನೆ, ಪಾರಾಯಣ ಮೊದಲಾದ ನಿತ್ಯಕರ್ಮಗಳಲ್ಲಿ ಶ್ರದ್ಧಾವಂತರು. ತಮ್ಮ ಮನಸ್ಸಿಗೊಪ್ಪಿದ ಸತ್ಕಾರ್ಯಗಳಿಗೂ ಸಾರ್ವಜನಿಕ ಸಂಸ್ಥೆಗಳಿಗೂ ಉದಾರವಾಗಿ ಸಹಾಯಕೊಡುತ್ತಿದ್ದರು.

ಗುಪ್ತದಾನ

ಒಂದು ದಿನ ಗೋಖಲೆ ಸಾರ್ವಜನಿಕ ಸಂಸ್ಥೆಯಲ್ಲಿ ಯಾವುದೋ ಸಮಾರಂಭ. ಆಗ ಕೃಷ್ಣಶಾಸ್ತ್ರಿಗಳು ಅಲ್ಲಿಗೆ ಎಲ್ಲರೂ ಬರುವಂತೆ ಬಂದರು. ಅಲ್ಲಿ ಅಂದು ಬಹುಮಂದಿ ಮಹಿಳೆಯರೂ ಬಾಲಕ ಬಾಲಕಿಯರೂ ಸೇರಿದ್ದರು. ಅವರಿಗೆಲ್ಲ ಸಿಹಿಬೂಂದಿ ಪ್ರಸಾದ ಸಿದ್ಧವಾಗುತ್ತಿತ್ತು. ಕೃಷ್ಣಶಾಸ್ತ್ರಿಗಳು ಸಂಸ್ಥೆಯ ಕಾರ್ಯಕರ್ತರೊಬ್ಬರನ್ನು (ನನ್ನನ್ನಲ್ಲ) ಆ ಪ್ರಸಾದಕ್ಕಾಗಿ ಎಷ್ಟು ಖರ್ಚಾಗಬಹುದೆಂದು ಗುಟ್ಟಾಗಿ ಕೇಳಿದರು. ಆತನ ಉತ್ತರವನ್ನು ಕೇಳಿದೊಡನೆಯೇ ಮನೆಗೆ ಹೋಗಿ ಎಂಭತ್ತು ರೂಪಾಯಿಗೆ ಚೆಕ್ಕು ಬರೆದು ತಂದುಕೊಟ್ಟರು. ಇದರಲ್ಲಿ ಮುಖ್ಯವಾದದ್ದು ಮೊಬಲಗಲ್ಲ; ರೀತಿ ಮುಖ್ಯ–ಎಂಬುದನ್ನು ವಾಚಕರು ಗಮನಿಸಿಯಾರು.

ಹೀಗೆ ಗುಪ್ತದಾನಮಾಡುತ್ತಿದ್ದ ಇನ್ನೊಬ್ಬರು ಪ್ರಸಿದ್ಧ ವಿದ್ವಾಂಸರಾದ ಪ್ರೊ ॥ ಎಂ. ಹಿರಿಯಣ್ಣನವರು.

ಪ್ರೊ ॥ ಹಿರಿಯಣ್ಣನವರು ಬಹುಮಂದಿ ವಿದ್ಯಾರ್ಥಿಗಳಿಗೂ ವಿದ್ವಾಂಸರಿಗೂ ಮಾಸಾಶನ ಮೊದಲಾದ ರೂಪಗಳಲ್ಲಿ ಸಹಾಯಕೊಡುತ್ತಿದ್ದರು. ಆದರೆ ಇದು ಗೂಢಸಹಾಯ. ಅದನ್ನು ಪಡೆದವರು ಆ ವಿಷಯ ಉಸಿರಬಾರದೆಂದು ನಿಯಮ!

ನನಗೆ ತಿಳಿದಿದ್ದ ಒಬ್ಬ ವಿದ್ಯಾರ್ಥಿ–ಸಂಸ್ಕೃತ ವಿದ್ಯಾರ್ಥಿ. ಆತ ಪರೀಕ್ಷೆಗಳಲ್ಲಿ ಉತ್ತೀರ್ಣನಾಗಿ ಕಾಲಕ್ರಮದಲ್ಲಿ ಒಳ್ಳೆಯ ಉದ್ಯೋಗವನ್ನು ಸಂಪಾದಿಸಿಕೊಂಡು ಸಂಭಾವಿತನೆನ್ನಿಸಿಕೊಂಡ. ಆತನು ವಿದ್ಯಾರ್ಥಿಯಾಗಿದ್ದ ಕಾಲದಲ್ಲಿ ತನ್ನ ಸ್ನೇಹಿತನೊಬ್ಬನು ಕಷ್ಟ ಹೇಳಿಕೊಂಡಾಗ ಕನಿಕರಿಸಿ ಅವನು ಹಿರಿಯಣ್ಣನವರಲ್ಲಿ ಯಾಚನೆ ಮಾಡಬಹುದೆಂದು ಸೂಚಿಸಿದ.

ಈ ಎರಡನೆಯ ವಿದ್ಯಾರ್ಥಿ ಆ ಸಲಹೆಯಂತೆ ಹಿರಿಯಣ್ಣನವರನ್ನು ಬೇಡಿದ, ಸಹಾಯ ದೊರೆಯಿತು. ಆಮೇಲೆ ನಡೆದದ್ದು ಗ್ರಾಹ್ಯವಾದ ಸಂಗತಿ.

ಎರಡನೆಯ ವಿದ್ಯಾರ್ಥಿಯ ಯಾಚನೆ ಸಫಲವಾದಮೇಲೆ ಮೊದಲನೆಯ ವಿದ್ಯಾರ್ಥಿ ತನ್ನ ಪದ್ಧತಿಯಂತೆ ಹಿರಿಯಣ್ಣನವರ ಬಳಿಗೆ ಹೋದ. ಈತ ಇನ್ನೂ ಹತ್ತು ತಿಂಗಳು ಕಾಲೇಜಿನಲ್ಲಿ ಇರಬೇಕಾಗಿದ್ದ ಕಾಲ. ಹತ್ತು ತಿಂಗಳು ಕಳೆದರೆ ಆತನ ಎಂ. ಎ. ಪರೀಕ್ಷೆ ಮುಗಿಯುವುದಾಗಿತ್ತು. ಹಿರಿಯಣ್ಣನವರು ಹತ್ತು ತಿಂಗಳ ಮಾಸಾಶನದ ಒಟ್ಟು ಮೊಬಲಗನ್ನು ಪೊಟ್ಟಣ ಕಟ್ಟಿ ಸಿದ್ಧವಾಗಿರಿಸಿಕೊಂಡಿದ್ದರು. ಆ ಪೊಟ್ಟಣವನ್ನು ವಿದ್ಯಾರ್ಥಿಯ ಕೈಗೆ ಕೊಟ್ಟು ಹೇಳಿದರು:

"ನೀವು ಇನ್ನು ಮೇಲೆ ಬರಬೇಕಾದ ಅವಶ್ಯಕತೆಯಿಲ್ಲ."

ವಿದ್ಯಾರ್ಥಿ ಕೊಂಚ ತಬ್ಬಿಬ್ಬಾದಾಗ ಹಿರಿಯಣ್ಣನವರು ಕೇಳಿದರು:

"ನೀವು ಈ ಸಂಗತಿಯನ್ನು ಯಾರಿಗೂ ಹೇಳಬಾರದೆಂದು ಕೇಳಿಕೊಂಡಿದ್ದೆ. ನೀವು ಆಗಲಿ ಎಂದಿದ್ದಿರಿ. ಅದನ್ನು ನಡೆಸಿದಿರೊ?"

"ಇಲ್ಲ. –ರವರಿಗೆ ಹೇಳಿದೆ."

"ಒಳ್ಳೆಯದಾಯಿತು. ಈಗ ನಾನು ಮಾಡಿದ್ದನ್ನು ಯಾರಿಗೂ ಹೇಳಬೇಡಿ."

ಹಿರಿಯಣ್ಣನವರು ಕಾಲಟಿಯಲ್ಲಿಯೂ ಶೃಂಗೇರಿಯಲ್ಲಿಯೂ ಸಂಸ್ಕೃತ ವಿದ್ಯಾರ್ಥಿಗಳಿಗಾಗಿ ಹಣ ವಿನಿಯೋಗಿಸುತ್ತಿದ್ದರು. ಅದೂ ಗುಪ್ತದಾನವೇ.

ಕೃಷ್ಣಶಾಸ್ತ್ರಿಗಳದೂ ಇದೇ ಬಗೆ.

ಹೊರಗೆ ಕಟು, ಒಳಗೆ ಮೃದು

ವೆಂಕಟನಾರಣಪ್ಪನವರಿಗೂ ಕೃಷ್ಣಶಾಸ್ತ್ರಿಗಳಿಗೂ ಹತ್ತಾರು ವಿಷಯಗಳಲ್ಲಿ ಹೊಂದಾವಣೆಯಿರಲಿಲ್ಲ. ಅವರಿಬ್ಬರಿಗೂ ಮೈತ್ರಿ ಅಷ್ಟು ಗಾಢವಾಗಿರಲಿಲ್ಲ. ಆದರೆ ಇನ್ನೆಷ್ಟೋ ವಿಷಯಗಳಲ್ಲಿ ಅವರಿಬ್ಬರೂ ಒಬ್ಬರನ್ನೊಬ್ಬರು ಹೋಲುತ್ತಿದ್ದರು. ಇಬ್ಬರದೂ ಕಟ್ಟುನಿಟ್ಟು, ಇಬ್ಬರೂ ಪ್ರಾಮಾಣಿಕತೆ, ಇಬ್ಬರದೂ ಆಚಾರಪರಿಶುದ್ಧತೆ. ಇಬ್ಬರೂ ಹೊರಗೆ ಕಟು, ಒಳಗೆ ಮೃದು.

ಪುಷ್ಪಪ್ರಪಂಚದ ಸೊಗಸುಗಳು ಬಗೆಬಗೆಯಾದವಷ್ಟೆ? ಕೇದಗೆ ಉದ್ದುದ್ದ, ಮುಳ್ಳು ಮುಳ್ಳು, ಗುಲಾಬಿ ದುಂಡು ದುಂಡು, ಅದೂ ಮುಳ್ಳು ಮುಳ್ಳು. ಆದರೆ ಕೇದಗೆಯನ್ನಪ್ಪಿಕೊಂಡರೆ ಮೈ ಚುಚ್ಚುತ್ತದೆ. ಗುಲಾಬಿ ಹೂವು ಮಗುವಿನ ತುಟಿಯಂತೆ ಮೃದುವಾಗಿರುತ್ತದೆ. ಕೇದಗೆಯ ರೇಕು ಮಾಗಿದ ಹೂವಿನ ರೇಕು ಚಿನ್ನದ ತಗಡು. ನೋಟಕ್ಕೆ ಅಷ್ಟು ಅಂದ. ಗುಲಾಬಿಯ ರೇಕು ನಾಲ್ಕಾರು ಬಣ್ಣ, ಬೇಗ ಬಾಡಿ ಕಸವಾಗುತ್ತದೆ. ಕೇದಗೆಯ ಘಮಲು ಹತ್ತು ದಿನವಾದರೂ ಮಾಸುವುದಿಲ್ಲ. ಗುಲಾಬಿಯದು ಒಂದು ಘಂಟೆಯಷ್ಟು ಕೂಡ ಇರುವುದಿಲ್ಲ. ಕೆಲವರಿಗೆ ಕೇದಗೆ ಇಷ್ಟ, ಕೆಲವರಿಗೆ ಗುಲಾಬಿ ಇಷ್ಟ. ಕೆಲವರಿಗೆ ಎರಡೂ ಇಷ್ಟ.

ವೆಂಕಣ್ಣಯ್ಯ — ಕೃಷ್ಣಶಾಸ್ತ್ರಿ

ವೆಂಕಣ್ಣಯ್ಯ, ಕೃಷ್ಣಶಾಸ್ತ್ರಿ –ಇವರು ಗುಣ ಲಕ್ಷಣಗಳಲ್ಲಿ ಬೇರೆ ಬೇರೆ. ವೆಂಕಣ್ಣಯ್ಯ ಕೋಲು ಕೋಲು, ಎತ್ತರ. ಕೃಷ್ಣಶಾಸ್ತ್ರಿ ಅಷ್ಟು ಎತ್ತರವಲ್ಲ; ಕೋಲು ಕೋಲು ಅಲ್ಲ, ಗುಂಡು ಗುಂಡೂ ಅಲ್ಲ. ಇರುವಂತಿಗೆಯ ಮೊಗ್ಗು ಕೋಲು ಕೋಲಾಗಿರುತ್ತದೆ. ಅದರ ಮೊನೆ ಚೂಪಾಗಿರುತ್ತದೆ. ಆದರೆ ಅದು ನೋಯಿಸಲಾರದು. ಹಾರೆಯ ಮೊನೆ ಚೂಪಿಲ್ಲ; ಆದರೆ ಅದು ಸೋಕಿದ ಕಡೆ ನಾವು ಮುಟ್ಟಿನೋಡಿಕೊಳ್ಳುವಂತಾಗುತ್ತದೆ.

ವೆಂಕಣ್ಣಯ್ಯನದು ಸಡಿಲದ ಸ್ವಭಾವ. ಕೃಷ್ಣಶಾಸ್ತ್ರಿಯದು ಬಿಕ್ಕಟ್ಟಿನದು. ವೆಂಕಣ್ಣಯ್ಯನಿಗೆ ಕಾವ್ಯ ಮೊದಲನೆಯದು, ಶಾಸ್ತ್ರ ಎರಡನೆಯದು. ಕೃಷ್ಣ ಶಾಸ್ತ್ರಿಗಳಿಗೆ ಎರಡೂ ಸಮ ಸಮ; ಶಾಸ್ತ್ರ ಕೊಂಚ ಮೇಲ್ಗೈಯೆಂದು ಹೇಳಿದರೂ ಹೇಳಬಹುದು. ಕೃಷ್ಣಶಾಸ್ತ್ರಿಗಳು ಜನ್ಮದಿಂದ ವೈದಿಕರು ಮತ್ತು ಆಚಾರಶೀಲರು. ಅವರ ಮನೆತನವೇ ವೈದಿಕ ವಿದ್ವಾಂಸರ ಮನೆತನ. ಅವರ ತಂದೆ ರಾಮಕೃಷ್ಣಶಾಸ್ತ್ರಿಗಳವರು ತಮ್ಮ ಹಿರಿಯ ಮಗ ಕೃಷ್ಣಶಾಸ್ತ್ರಿಗೆ ಬಾಲ್ಯದಲ್ಲಿಯೇ ಅಷ್ಟಾಧ್ಯಾಯೀ ಪಾಠಮಾಡಿಸಿದ್ದರು. ಕೃಷ್ಣಶಾಸ್ತ್ರಿಗಳು ಆ ಸಂಪ್ರದಾಯ ಸಂಸ್ಕಾರಕ್ಕೆ ಕಡೆಯವರೆಗೂ ಬಹು ಬೆಲೆಕೊಟ್ಟಿದ್ದರು. ಅವರು ಓರಿಯಂಟಲ್ ಲೈಬ್ರರಿಯಲ್ಲಿಯೂ ಕಾಲೇಜಿನಲ್ಲಿಯೂ ಉದ್ಯೋಗದಲ್ಲಿದ್ದಾಗ ವೇದಾಂತಾದಿ ಶಾಸ್ತ್ರಗಳ ಭಾಷ್ಯ ವ್ಯಾಸಂಗಕ್ಕಾಗಿ ಸಂಸ್ಕೃತ ಮಹಾಪಾಠಶಾಲೆಯ ಇತರ ವಿದ್ಯಾರ್ಥಿಗಳಂತೆ ಮಡಿಯುಟ್ಟುಕೊಂಡು ಹೋಗಿಬರುತ್ತಿದ್ದರು.

ಉದ್ಯೋಗಾರಂಭ

ಕೃಷ್ಣಶಾಸ್ತ್ರಿಗಳ ಉದ್ಯೋಗ ಪ್ರಾರಂಭವಾದದ್ದು ಮೈಸೂರು ಡೆಪ್ಯುಟಿ ಕಮಿಷನರ ಆಫೀಸಿನಲ್ಲಿ. ಅಲ್ಲಿ ಅವರಿಗೆ ಬಂದ ಅಭ್ಯಾಸ ದಾಖಲೆಯಿಡುವುದು, 'ಇಂದ–ಗೆ' ರಿಜಿಸ್ಟರುಗಳನ್ನಿಡುವುದು ಮೊದಲಾದ ಕಾರ್ಯವಂತಿಕೆಯ ವ್ಯವಸ್ಥೆ. ಇದು ಕಡೆಯವರೆಗೂ ಅವರ ಒಂದು ಗುಣವಿಶೇಷ. ಯಾವ ಸಂಗತಿಗೂ ಲೆಕ್ಕಾಚಾರ, ದಾಖಲೆ, ಕ್ರಮಬದ್ಧತೆ. ಈ ವಿಷಯದಲ್ಲಿ ಅವರು ವೆಂಕಟನಾರಣಪ್ಪನವರಿಗೆ ಸಮಾನರು. ಈ ಗುಣ ವೆಂಕಣ್ಣಯ್ಯನಲ್ಲಿ ಸಂಪೂರ್ಣ ಶೂನ್ಯ.

ಸ್ವಲ್ಪ ಕಾಲಾನಂತರ ಕೃಷ್ಣಶಾಸ್ತ್ರಿಗಳು ಡಿಸ್ಟ್ರಿಕ್ಟ್ ಆಫೀಸಿನಿಂದ ಕಾಲೇಜಿನ ಉದ್ಯೋಗಕ್ಕೆ ಬಂದರು. ಆಮೇಲೆ ಕಾಲೇಜಿನಿಂದ ಓರಿಯಂಟಲ್ ಲೈಬ್ರರಿಗೆ ವರ್ಗವಾಯಿತು. ಅವರ ಜೀವಮಾನದಲ್ಲೆಲ್ಲ ಈ ಓರಿಯಂಟಲ್ ಲೈಬ್ರರಿಯ ಉದ್ಯೋಗದಷ್ಟು ಬೇಸರವುಂಟುಮಾಡಿದ ಸಂದರ್ಭ ಇನ್ನೊಂದಿಲ್ಲ. ಆ ಸಂಸ್ಥೆಯಲ್ಲಿ ಕೃಷ್ಣಶಾಸ್ತ್ರಿಗಳವರ ಪಾಲಿಗೆ ಬಂದ ಕೆಲಸ ಗ್ರಂಥ ಶೋಧನೆಯಲ್ಲ, ಗ್ರಂಥಸಂಪಾದನೆಯಲ್ಲ, ಯಾವ ವಿಧವಾದ ವಿದ್ವತ್ಸಂಪರ್ಕವೂ ಅಲ್ಲ. ಅವರಿಗೊಪ್ಪಿಸಿದ ಕೆಲಸ 'ಡೆಸ್ಪ್ಯಾಚಿಂಗ್' –ರವಾನೆ ಗುಮಾಸ್ತೆಯದು. ಪುಸ್ತಕಗಳನ್ನು ಪ್ಯಾಕ್ ಮಾಡುವುದು. ಆ ಪ್ಯಾಕೆಟ್‌ಗಳ ತೂಕ ಗೊತ್ತು ಮಾಡುವುದು. ಅದಕ್ಕೆ ತಗಲುವ ಅಂಚೆ ವೆಚ್ಚದ ಲೆಕ್ಕಾಚಾರ, ಗಿರಾಕಿಗಳಿಗೆ ಉತ್ತರ ಕೊಡುವುದು, ಅಂಗೀಕಾರವಾಗದೆ ವಾಪಸ್ ಬಂದ ಪುಸ್ತಕಗಳ ಭಾಂಗಿಗಳ ಲೆಕ್ಕವಿಡುವುದು, ಇದಕ್ಕಾಗಿ ಸರ್ವದಾ ಕತ್ತರಿ, ಟ್ವೈನ್‌ದಾರ, ಗೋಂದುಗಳಲ್ಲಿ ಕೈಯಾಡಿಸುತ್ತಿರುವುದು–ಇದು ಕೃಷ್ಣಶಾಸ್ತ್ರಿಗಳ ಪಾಡು. ಅವರು ಈ ಪಾಡು ಪಡುತ್ತಿದ್ದುದನ್ನು ನೋಡಿ ನಾನು ಬೇಸರಪಟ್ಟುಕೊಂಡಿದ್ದೆ. ಸರಕಾರದ ಕಛೇರಿಗಳಲ್ಲಿ ರೇಷ್ಮೆ ವಸ್ತ್ರಗಳನ್ನು ಜೋಡು ಒರಸುವುದಕ್ಕೆ ಉಪಯೋಗಿಸುವುದೂ ತೊಗಲಿನ ರಟ್ಟನ್ನು ಕರವಸ್ತ್ರವೆಂದು ಉಪಯೋಗಿಸುವುದೂ ಅಪರೂಪವಲ್ಲ. ಕೃಷ್ಣಶಾಸ್ತ್ರಿಗಳು ಓರಿಯಂಟಲ್ ಲೈಬ್ರರಿಯಲ್ಲಿದ್ದಾಗ ಆ ಸಂಸ್ಥೆಯ ಮುಖ್ಯಾಧಿಕಾರದಲ್ಲಿದ್ದವರು ಅರ್ಥಶಾಸ್ತ್ರ ವಿಶಾರದ, ಮಹಾಮಹೋಪಾಧ್ಯಾಯ ಡಾ ॥ ಆರ್. ಶಾಮಶಾಸ್ತ್ರಿಗಳು. ಶಾಮಶಾಸ್ತ್ರಿಗಳು ಮಹಾ ವಿದ್ವಾಂಸರು; ಸಂಶೋಧಕರು; ವಿದ್ವದಭಿಮಾನಿಗಳು. ಆದರೆ ಅವರು ಏನು ಮಾಡಿಯಾರು? ಕೆಲಸ ನಡೆಯಬೇಕಲ್ಲ? ತಮಗಿದ್ದ ಸಿಬ್ಬಂದಿಯನ್ನು ಕಾರ್ಯಾನುಕೂಲಕ್ಕೆ ವಿನಿಯೋಗಿಸಬೇಕು. ಹಾಗೆ ರೇಷ್ಮೆಯದುಕೂಲವನ್ನು ಇದ್ದಲು ಮೂಟೆಗೆ ಉಪಯೋಗಿಸಬೇಕಾಯಿತು.

ಪಾಠಕ್ರಮ

ಕೃಷ್ಣಶಾಸ್ತ್ರಿಗಳು ಕಾಲೇಜಿಗೆ ಹಿಂತಿರುಗಿಬಂದಮೇಲೆ ಕಡೆಯವರೆಗೂ ಅವರ ಮನಸ್ಸಿನಲ್ಲಿ ಒಂದು ತೃಪ್ತಿ ತುಂಬಿತ್ತು–ತಮಗೆ ಸಹಜ ವೃತ್ತಿಯಾದ ಪಾಠಪ್ರವಚನದ ಅವಕಾಶ ತಮಗೆ ದೊರೆಯಿತೆಂದು. ಪಾಠಹೇಳುವುದರಲ್ಲಿ, ಶಿಷ್ಯರನ್ನು ತಿದ್ದುವುದರಲ್ಲಿ, ಕಾವ್ಯ ವ್ಯಾಕರಣಗಳನ್ನು ವಿವರಣೆ ಮಾಡುವುದರಲ್ಲಿ ಅವರಿಗೆ ತುಂಬ ಉತ್ಸಾಹ. ಯಾವ ಚಿಂತೆ ಇದ್ದರೂ, ಯಾವ ಅನ್ಯ ಕರ್ತವ್ಯ ಇದ್ದರೂ ಅವರು ತಮ್ಮ ಕ್ಲಾಸು, ತಮ್ಮ ಪಾಠ, ತಮ್ಮ ಶಿಸ್ತು– ಇದನ್ನು ಮರೆಯರು.

ಕೃಷ್ಣಶಾಸ್ತ್ರಿಗಳ ಪಾಠಕ್ರಮ ಶಿಷ್ಯರಿಗೆ ಕುತೂಹಲಕಾರಿಯಾಗಿತ್ತೆಂದು ನಾನು ಕೇಳಿದ್ದೇನೆ. ಪಠ್ಯ ಗ್ರಂಥಕ್ಕೆ ಸಂವಾದಿಯಾದ ಇಂಗ್ಲಿಷ್ ಸಂಸ್ಕೃತ ಸಾಹಿತ್ಯವನ್ನೂ ವಿಷಯಕ್ಕೆ ಸಂಬಂಧಪಟ್ಟ ಅಂದಂದಿನ ಸಂಗತಿಗಳನ್ನೂ ಉದಾಹರಣೆ ಕೊಟ್ಟು ಪಾಠವನ್ನು ಮನೋರಂಜಕವನ್ನಾಗಿ ಮಾಡುತ್ತಿದ್ದರು.

‘ಪ್ರಬುದ್ಧ ಕರ್ಣಾಟಕ’

ಕರ್ಣಾಟಕ ಸಂಘದ ಚಟುವಟಿಕೆಗಳ ವಿಷಯದಲ್ಲಿಯೂ ‘ಪ್ರಬುದ್ಧ ಕರ್ಣಾಟಕ’ ಪತ್ರಿಕೆಯ ಸಂಪಾದನೆಯ ವಿಷಯದಲ್ಲಿಯೂ ಕೃಷ್ಣಶಾಸ್ತ್ರಿಗಳು ಪಾಲುಮಾರದವರಾಗಿದ್ದರು. ಸ್ವಯಂಕೃತವಾಗಿದ್ದ ಆ ಎರಡು ಜವಾಬ್ದಾರಿಗಳನ್ನೂ ಅವರು ಪ್ರೊಫೆಸರ್ ಸ್ಥಾನದ ಅವಶ್ಯ ಕರ್ತವ್ಯವೆಂದು ಭಾವಿಸಿದ್ದರೇ ಹೊರತು ಅದು ಯಾವುದೋ ಬೇಕೋಬಿಟ್ಟಿ ಚಾಕರಿಯೆಂದು ಒಂದು ದಿನವೂ ಅಂದುಕೊಂಡವರಲ್ಲ. ಸಂಘವೂ ಪತ್ರಿಕೆಯೂ ಅವರ ಮಾನಸಿಕ ಸಂತಾನ. ಆದದ್ದರಿಂದ ಆ ಎರಡರ ಪೋಷಣೆಯೂ ಅವರಿಗಿದ್ದ ಪ್ರಥಮ ಪಂಕ್ತಿಯ ಉತ್ತರಭಾರಗಳಲ್ಲಿ ಗಣ್ಯವಾಗಿದ್ದವು.

ವೆಂಕಣ್ಣಯ್ಯನವರ ಬೋಧನ ಪರಿಪಾಟಿ ಕೃಷ್ಣಶಾಸ್ತ್ರಿಗಳದಕ್ಕಿಂತ ಕೊಂಚ ಬೇರೆ ತೆರದ್ದಾಗಿದ್ದರೂ ವಿದ್ಯಾರ್ಥಿಗಳಿಗೆ ಆಕರ್ಷಣೆಯನ್ನುಂಟು ಮಾಡುವುದರಲ್ಲಿಯೂ ಅವರ ಉತ್ಸಾಹವನ್ನು ಕೆರಳಿಸುವುದರಲ್ಲಿಯೂ ಎರಡೂ ಸಮಸಮನಾಗಿದ್ದವು.

ಸಂಘದ ಚಟುವಟಿಕೆಗಳ ವಿಷಯದಲ್ಲಿಯೂ ಹಾಗೆಯೇ–ಇಬ್ಬರ ಶ್ರದ್ಧೆಯೂ ಸರಿಸಮಾನ. ಆದರೆ ವೆಂಕಣ್ಣಯ್ಯನವರದು ಹೆಚ್ಚಾಗಿ ಪ್ರೇರಕ ವೃತ್ತಿ. ಕೃಷ್ಣಶಾಸ್ತ್ರಿಗಳದು ಸಾಧಕವೃತ್ತಿ. ವೆಂಕಣ್ಣಯ್ಯ ಇನ್ನು ಯಾರಿಗೋ ಹೇಳಿದಂತೆ, ಕೃಷ್ಣಶಾಸ್ತ್ರಿಗೆ ಕೇಳುವ ಹಾಗೆ ಸಲಹೆ ಕೊಡುವರು. “ಅಲ್ಲಲ್ಲಿ ನಾಲ್ಕು ಊದುಕಡ್ಡಿ ಸಿಕ್ಕಿಸಿದರೆ ಘಮ್ಮೆಂದಿರುತ್ತದೆ..." “ಪಟಗಳಿಗೆ ಸೇವಂತಿಗೆ ಹಾರ ಹಾಕಿದರೆ ಕಣ್ಣಿಗೇನೋ ಪಸಂದಾಗಿರುತ್ತದೆ. ಆದರೆ ಮಲ್ಲಿಗೆ ಹಾರ ಹಾಕಿದರೆ ಒಳ್ಳೆಯ ರಾಜಾಸ್ಥಾನದಂತಾಗುತ್ತದೆ...” “ಕೋಸುಂಬರಿಯೇನೋ ಒಳ್ಳೆಯದೇ. ಆದರೆ ಎಳೆಯ ಮಾವಿನಕಾಯಿಯನ್ನು ಸಣ್ಣಗೆ ತುರಿದು ನವುರಾಗಿ ಬೆರಸಿದರೆ ಅದೊಂದು ಹೆಚ್ಚಿನ ಸ್ವಾರಸ್ಯ.” ಹೀಗೆ ಧ್ವನಿ ಪ್ರಧಾನವಾಗಿ ಮಾತನಾಡುವವರು ವೆಂಕಣ್ಣಯ್ಯ. ಕೃಷ್ಣಶಾಸ್ತ್ರಿ ಅದನ್ನೆಲ್ಲ ಕೇಳಿ ಹುಸಿ ಹುಸಿ ರೇಗಾಡಿ ಆ ಸಲಹೆಗಳನ್ನೆಲ್ಲ ನಡಸುವುದು. ಇದು ನಮಗೆಲ್ಲ ಇದ್ದ ಒಂದು ವಿನೋದ. ಸಂಘದ ಕಾರ್ಯಗಳೆಲ್ಲ ಹೀಗೆಯೇ. ವೆಂಕಣ್ಣಯ್ಯ ನವುರು ನವುರಾಗಿ ಸಲಹೆ ಹೇಳುತ್ತಿರುವುದು; ಕೃಷ್ಣಶಾಸ್ತ್ರಿ ಮುಸಿಮುಸಿ ಮುನಿಸಿನಿಂದ ಎಲ್ಲ ಕಾರ್ಯವನ್ನೂ ಕ್ರಮವಾಗಿ ನಡಸುವುದು.

ವೆಂಕಣ್ಣಯ್ಯನ ಚತುರ್ಭುಜ

'ಪ್ರಬುದ್ಧ ಕರ್ಣಾಟಕ' ಪತ್ರಿಕೆಯ ಕೆಲಸದ ವಿಷಯದಲ್ಲಿ ಮಾತ್ರ ಆಗಾಗ ಇಬ್ಬರಿಗೂ ಮಾತುಕಥೆ ನಡೆಯುವುದುಂಟು. ಅದು ಹಾಸ್ಯಕಲಹ. ವೆಂಕಣ್ಣಯ್ಯ ಪತ್ರಿಕೆಗಾಗಿ ಲೇಖನ ಕೊಡಬೇಕೆಂದರೆ ಹಿಂದೇಟು. ಆತ ಪತ್ರಿಕೆಗಾಗಿ ಬರೆದ ಲೇಖನಗಳು ಬಹುಕೊಂಚ; ಒಂದೂ ಇಲ್ಲವೋ ಏನೋ. ಬರವಣಿಗೆಯೆಲ್ಲ ಕೃಷ್ಣಶಾಸ್ತ್ರಿಯದೇ. ಇದನ್ನು ಪ್ರಸ್ತಾವಿಸಿ ಕೃಷ್ಣಶಾಸ್ತ್ರಿ ವೆಂಕಣ್ಣಯ್ಯನನ್ನು ಮಹಾವಿಷ್ಣುವಿಗೆ ಹೋಲಿಸುವರು. ಮಹಾವಿಷ್ಣುವಿಗಿರುವಂತೆ ವೆಂಕಣ್ಣಯ್ಯನಿಗೆ ಚತುರ್ಭುಜ: (೧) ಅವಿಷಯ, (೨) ಅನಭ್ಯಾಸ, (೩) ಬುದ್ಧಿಮಾಂದ್ಯ, (೪) ಅನ್ಯಕರ್ತವ್ಯಭಾರ.

"ವೆಂಕಣ್ಣಯ್ಯ, ಒಂದು ಆರ್ಟಿಕಲ್ ಕೊಡಯ್ಯ ಮುಂದಿನ ಸಂಚಿಕೆಗೆ"–ಎಂದರೆ ಅವರು–

"ಕೃಷ್ಣಾ, ನನಗೇನು ತಿಳಿಯುತ್ತದೊ? ವಿಷಯವೇ ಇಲ್ಲವಲ್ಲ? ನೀನು ಹೇಳುವ ವಿಷಯ ನಿನಗೆ ಸರಿ–ನೀನು ಪಂಡಿತ. ಅದು ಶಾಸ್ತ್ರದ ವಿಷಯ. ನಿನ್ನೆದುರಿಗೆ ನಾನು ಅದಕ್ಕೆ ಕೈಹಾಕುವುದೇ?"

–ಎನ್ನುವರು. ಇಂಥ ಪ್ರತ್ಯುತ್ತರಕ್ಕೆ ಅವಕಾಶ ಬಿಡದಿರುವ ವಿಷಯವನ್ನು ಸೂಚಿಸಿದರೆ ಆಗ–

"ಕೃಷ್ಣಾ, ಬರೆಯುವ ಅಭ್ಯಾಸವೇ ಇಲ್ಲವಲ್ಲೋ ! ಪೇನಾ ನಡೆದರಲ್ಲವೆ? ಏನೇನೋ ಸಂದೇಹಗಳು ಬಂದುಬಿಡುತ್ತವೆ ನಡುನಡುವೆ. ಲೇಖನಿ ನಡೆಯುವುದಿಲ್ಲವೆನ್ನುತ್ತದೆ, ನಾನೇನು ಮಾಡಲಿ?"

ಎಂದು ಅಂಗಲಾಚುವರು.

"ಹೋಗಲಪ್ಪ–ಇತರರು ಬರೆದು ಕಳಿಸಿರುವ ಪ್ರಬಂಧಗಳನ್ನು ನೋಡಿಕೊಡಯ್ಯ"

–ಎಂದರೆ,

"ಕೃಷ್ಣಾ, ನನ್ನ ತಲೆಗೆ ಹತ್ತುವುದೇ ಇಲ್ಲವಲ್ಲೋ? ಏನೇನೋ ದೊಡ್ಡ ದೊಡ್ಡ ವಿಷಯಗಳನ್ನೆಲ್ಲ ಕುರಿತು ಬರೆದಿರುತ್ತಾರೆ. ನಾನು ಕೈಹಾಕಿದರೆ ಕೆಟ್ಟುಹೋದೀತು"

–ಎನ್ನುವರು.

ನಾನು ನನ್ನ ಬರವಣಿಗೆಯನ್ನು ಒಂದು ಸಲ ನೋಡಿ ಸರಿಪಡಿಸಿಕೊಡುವಂತೆ ಕೇಳಿದಾಗ ಹೇಳಿದರು:

“ಈಹೊತ್ತು ಆನರ್ಸ್ ಕ್ಲಾಸಿದೆ. ದಶರೂಪಕ ನೋಡಬೇಕು. ಸಾಹಿತ್ಯ ದರ್ಪಣ ನೋಡಬೇಕು. ಅದಕ್ಕೆಲ್ಲ ಹೊತ್ತು ಹಿಡಿಯುತ್ತದೆ. ನಾನೇನು ನಿನ್ನ ಹಾಗೆ ವಿದ್ವಾಂಸನೆ? ನಿನಗಾದರೆ ಸುಲಭ."

ಹೀಗೆಲ್ಲ ನೆವಹೇಳಿ ತಪ್ಪಿಸಿಕೊಳ್ಳುವರು.

“ಈ ಮನುಷ್ಯನನ್ನು ಹೇಗೆ ಸಾರ್ ಹಿಡಿಯುವುದು? ಎಲ್ಲಕ್ಕೂ ಒಂದು ನೆವ ಸಿದ್ಧವಾಗಿಟ್ಟಿರುತ್ತಾನೆ. ನುಣಿಚಿಕೊಂಡುಬಿಡುತ್ತಾನೆ."

ಅವರಿಬ್ಬರ ಈ ಸ್ನೇಹಕಲಹವನ್ನು ಕೇಳುತ್ತಿರುವುದೇ ನನಗೊಂದು ವಿನೋದ. ಆದರೆ ನಿಜವನ್ನು ಹೇಳುವಾಗ ವೆಂಕಣ್ಣಯ್ಯನದು ಕೊಂಚ ತಲೆತಪ್ಪಿಸಿಕೊಳ್ಳುವ ಮನೋಗತ ಎಂದೇ ಹೇಳಬೇಕು. ಆತನದು ದಾಕ್ಷಿಣ್ಯಪ್ರವೃತ್ತಿ. ಯಾರ ವಿಷಯದಲ್ಲಿಯೂ ಕಟುವಾಗಿ ಮಾತನಾಡಲಾರ. ಇನ್ನೊಬ್ಬರ ಬರವಣಿಗೆಯನ್ನು ತಾನು ತಿದ್ದಿದರೆ, ಅದರಲ್ಲಿ ದೋಷ ತೋರಿಸಿದರೆ ಅವರು ಎಲ್ಲಿ ನೊಂದುಕೊಂಡಾರೋ ಎಂಬ ಶಂಕೆ ಆತನನ್ನು ಹಿಡಿದಿತ್ತು. ಅದರ ಜೊತೆಗೆ ಸೋಮಾರಿತನ ಇರಲಿಲ್ಲವೆಂದು ಹೇಳಲಾರೆ.

ವೆಂಕಟನಾರಣಪ್ಪನವರೂ ಕೃಷ್ಣಶಾಸ್ತ್ರಿಯೂ ವೆಂಕಣ್ಣಯ್ಯನ ಹುಟ್ಟುಗುಣ Laziness -ಸೋಮಾರಿತನವೆಂದೇ ಹೇಳುತ್ತಿದ್ದರು. ಅವರು ಹಾಗೆ ಹೇಳಿದರೆ ವೆಂಕಣ್ಣಯ್ಯ ಮುನಿಸಿಕೊಳ್ಳದೆ ನಗುತ್ತ

“ಹುಟ್ಟುಗುಣವನ್ನು ಏನು ಮಾಡುವುದಕ್ಕಾಗುತ್ತದೆ?"

–ಎನ್ನುವರು.

ಯಾರಾದರೂ ಗಣ್ಯರಾದವರು ವೆಂಕಣ್ಣಯ್ಯನ ಕೈಗೆ ತಮ್ಮ ಬರಹವನ್ನು ಕೊಟ್ಟು ನೋಡಿ ತಿದ್ದಬೇಕೆಂದು ಪದೇ ಪದೇ ನಿರ್ಬಂಧಪಡಿಸಿದರೆ ಆಗ ವೆಂಕಣ್ಣಯ್ಯ ಅದನ್ನು ಓದಿದಂತೆ ಮಾಡಿ

“ಇಲ್ಲಿ ‘ತ’ ವೊತ್ತು ಸರಿಯಾಗಿ ಬಿದ್ದಿಲ್ಲ", “ಇಲ್ಲಿ ‘ಬ’ ಎಂಬುದರ ಕಡೆಯ ಗೆರೆಯು ಮೇಲಕ್ಕೆ ಹೋಗಬೇಕೆಂದು ತೋರುತ್ತದೆ, ಇಲ್ಲದಿದ್ದರೆ ‘ಒ’ ಆಗಿಬಿಟ್ಟೀತು." “ಇಲ್ಲಿ ‘ತ’ ಎಂಬುದರ ತಲೆಕಟ್ಟು ಸರಿಯಾಗಿಲ್ಲ–ಅದು ‘ತ’ ನೋ ‘ತೆ’ ನೋ ಗೊತ್ತಾಗುವುದಿಲ್ಲ."

–ಇಂಥ ಜುಜುಬಿ ಸಲಹೆಗಳನ್ನು ಕೊಟ್ಟು ಕಥೆ ಮುಗಿಸಿಬಿಡುವರು.

ಕೃಷ್ಣಶಾಸ್ತ್ರಿಗಳ ದಾರಿ ಇದಕ್ಕೆ ವಿರುದ್ಧವಾದದ್ದು.

“ಇಲ್ಲಿ ‘ಸುಷ್ಟು’ ನೊ, ‘ಸುಷ್ಠು’ ನೋ? ಯಾವುದು ಸರಿಯೆಂದು ತಿಳಿದುಕೊಂಡಿದ್ದೀರಿ? ನಿಮಗೆ ಪೂರ್ವಪ್ರಯೋಗ ಎಲ್ಲಿದೆ? ಈ ರೂಪ ಹೇಗೆ ಸಿದ್ಧವಾಗುತ್ತದೆ?"

–ಎಂದು ಮೊದಲುಮಾಡಿ ಕೊಂಚ ಆಗ್ರಹದ ತೋರಿಕೆಯೊಡನೆಯೇ ಮಾತನಾಡುವರು. ನಿಜವಾದ ಆಗ್ರಹವೇನು ಇರಲಿಲ್ಲ. ಆದರೆ ಅವರ ಅಭ್ಯಾಸದ ಧ್ವನಿ ಅಂಥಾದ್ದು.

ಕೃಷ್ಣಶಾಸ್ತ್ರಿಗಳಿಗೂ ನನಗೂ ಆಗಾಗ ತಕರಾರುಗಳು ಬರುತ್ತಿದ್ದವು. ನಮಗಿಬ್ಬರಿಗೂ ಸ್ನೇಹಿತರಾಗಿದ್ದ ಎಸ್. ಜಿ. ಶಾಸ್ತ್ರಿಗಳು ‘ಸಾಕ್ರಟೀಸನ ಮರಣ’ ಎಂಬ ಇಂಗ್ಲಿಷ್ ನಾಟಕವನ್ನು ಕನ್ನಡಕ್ಕೆ ಪರಿವರ್ತಿಸಿದ್ದರು. ಅದಕ್ಕೆ ನಾನು ಮುನ್ನುಡಿ ಬರೆಯಬೇಕೆಂದು ಅವರಿಬ್ಬರೂ ಅಪ್ಪಣೆಮಾಡಿದ ಮೇರೆಗೆ ನಾನು ಬರೆದ ಪ್ರಬಂಧದಲ್ಲಿ ಸಾಕ್ರಟೀಸನ ಹೆಂಡತಿ ಜಾಂತಿಪೆಯನ್ನು ಕುರಿತು ಒಂದು ಮಾತನ್ನು ಬರೆದೆ: ಆಕೆ ಜಗಳಗಂಟಿ, ಆಕೆಯ ಜಗಳಗಂಟಿತನದಿಂದ ಸಾಕ್ರಟೀಸನ ಮನಸ್ಸು ತತ್ತ್ವವಿಚಾರಕ್ಕೆ ತಿರುಗಿತು–ಎಂದು.

ಇದರ ಮೇಲೆ ಕೃಷ್ಣಶಾಸ್ತ್ರಿಗಳು ತಕರಾರೆತ್ತಿದ್ದರು. “ಸಾಕ್ರಟೀಸನು ಮನೆ ಮಕ್ಕಳನ್ನು ನೋಡದೆ ಬೀದಿಬೀದಿಯಲ್ಲಿ ತತ್ತ್ವವಿಚಾರ ಹರಟೆ ನಡಸುತ್ತ ನಿಂತರೆ ಆಕೆ ಗೃಹಕೃತ್ಯ ನೋಡುವುದು ಹೇಗೆ? ಮಕ್ಕಳನ್ನು ಪೋಷಿಸುವುದು ಹೇಗೆ? ಗಂಡನ ತತ್ತ್ವವಿಚಾರವೇ ಹೆಂಡತಿಯ ಜಗಳಗಂಟಿತನಕ್ಕೆ ಕಾರಣವಾಯಿತು. ಅಂಥವನ ಜೊತೆಯಲ್ಲಿ ಯಾವಳಾದರೂ ಹೇಗೆ ಬದುಕಲಾದೀತು?"

***

ಒಂದು ಸಂಜೆ ಕೃಷ್ಣಶಾಸ್ತ್ರಿಗಳು ಗೋಖಲೆ ಸಂಸ್ಥೆಗೆ ಬಂದಿದ್ದರು. ಅವರು ಅಲ್ಲಿಂದ ಹೊರಡುವ ವೇಳೆಗೆ ಸರಿಯಾಗಿ ಇನ್ನೊಬ್ಬ ಸ್ನೇಹಿತರು ಅಲ್ಲಿಗೆ ಬಂದರು. ಅವರು ಕೃಷ್ಣಶಾಸ್ತ್ರಿಗಳನ್ನು ಕುರಿತು ಹೇಳಿದರು:

“ಸಾರ್, ಕನ್ನಡ ಲೋಕಕ್ಕೆ ನಿಮ್ಮ ‘ವಚನಭಾರತ’ ದಿಂದ ಬಹುದೊಡ್ಡ ಉಪಕಾರವಾಗಿದೆ. ನೀವು ಹಾಗೆಯೇ ವಚನ ರಾಮಾಯಣವನ್ನೂ ಬರೆಯಬೇಕು ಸಾರ್."

“ಅದು ನನ್ನಿಂದಾಗುವ ಕೆಲಸವಲ್ಲಪ್ಪ."

“ಅದೇಕೆ ಸಾರ್ ಹಾಗೆ ಹೇಳುತ್ತೀರಿ?"

“ಭಾರತ ಪುರಾಣವಪ್ಪ; ರಾಮಾಯಣ ಕಾವ್ಯ. ಅದರ ಸೊಗಸನ್ನು ಸಂಗ್ರಹ ಮಾಡುವುದಕ್ಕಾಗುವುದಿಲ್ಲ. ಭಾರತದಲ್ಲಿ ಕಾವ್ಯಕ್ಕಿಂತ ಕಥೆ ಮುಖ್ಯ. ಅದನ್ನು ಸುಲಭವಾಗಿ ಹೇಳಬಹುದು. ರಾಮಾಯಣದಲ್ಲಿ ಕಥೆಗಿಂತ ಕಾವ್ಯ ಮುಖ್ಯ. ಆ ಸೊಗಸನ್ನು ವಚನದಲ್ಲಿ ಹೇಗೆ ತರುವುದು?

ಚಂಚಚ್ಚಂದ್ರಕರಸ್ಪರ್ಶ-
ಹರ್ಷೋನ್ಮೀಲಿತತಾರಕಾಃ ॥

ಸಂಗ್ರಹದಲ್ಲಿ ಇಂಥದನ್ನು ಹೇಗೆ ಹೇಳುವುದು? ಇದನ್ನು ಹೇಳದೆ ಬಿಟ್ಟರೆ ಕಾವ್ಯದ ಸ್ವಾರಸ್ಯವನ್ನು ಬಿಟ್ಟಂತಾಗುತ್ತದೆ."

ಇನ್ನೊಂದು ಪ್ರಕರಣ ಜ್ಞಾಪಕಕ್ಕೆ ಬರುತ್ತದೆ.

ಒಂದು ದಿನ ಸೆಂಟ್ರಲ್ ಕಾಲೇಜಿನ ಗಣಿತಶಾಸ್ತ್ರ ಮಂದಿರದಲ್ಲಿ ಕರ್ಣಾಟಕ ಸಂಘದ ಯಾವುದೋ ಸಭೆ ನಡೆಯಿತು. ಸುಮಾರು ಎಂಟು ಘಂಟೆಯ ವೇಳೆಗೆ ಆ ಸಭೆ ಮುಗಿಯಿತು. ಎಲ್ಲರೂ ಹೊರಟುಹೋದ ಮೇಲೆ ನಾವು ಮೂರು ನಾಲ್ಕು ಮಂದಿ ಮಾತ್ರ ಉಳಿದುಕೊಂಡಿದ್ದೆವು. ಪ್ರಾಣಿಶಾಸ್ತ್ರದ ಪ್ರೊಫೆಸರಾಗಿದ್ದ ಸಿ. ಆರ್. ನಾರಾಯಣರಾಯರು ತಮ್ಮ ಬ್ಯೂಕ್ ಮೋಟಾರು ಕಾರನ್ನು ಸಭಾಮಂದಿರದ ಮುಂದೆ ನಿಲ್ಲಿಸಿದ್ದರು. ನನ್ನನ್ನೂ ಕೃಷ್ಣಶಾಸ್ತ್ರಿಗಳನ್ನೂ ಕರೆದರು. ನಾನು ಗಾಡಿ ಹತ್ತಿ ಕುಳಿತುಕೊಂಡೆ. ಕೃಷ್ಣಶಾಸ್ತ್ರಿಗಳು ನಿಂತೇ ಇದ್ದರು. ಸಿ. ಆರ್. ನಾರಾಯಣರಾಯರೆಂದರು:

ನಾ : “ಶಾಸ್ತ್ರಿಗಳೆ, ದಯಮಾಡಬೇಕಲ್ಲ?"

ಕೃ: “ಇಲ್ಲ. ನಾನು ನಿಮ್ಮ ಗಾಡಿಯಲ್ಲಿ ಬರುವುದಿಲ್ಲ."

ನಾ : “ಅದೇಕೆ ನನ್ನ ಮೇಲೆ ಕೋಪ?"

ಕೃ: “ಕೋಪವಲ್ಲ ಸ್ವಾಮಿ, ನನಗೆ ಬೈಸಿಕಲ್ಲಿದೆ. ಅದರಮೇಲೆ ನಾನು ಹೋಗುತ್ತೇನೆ."

ನಾ : “ಬೈಸಿಕಲ್ಲನ್ನು ರಾತ್ರಿ ಇಲ್ಲಿಯೇ ಇಟ್ಟಿದ್ದರಾಯಿತು."

ಕೃ : “ನಾಳೆ ಪುನಃ ನಾನು ಕಾಲೇಜಿಗೆ ಬರಬೇಕಲ್ಲ–ಆಗ ನಿಮ್ಮ ಕಾರು ಇರುತ್ತದೆಯೆ ನನಗೆ?"

ನಾ : “ಅದಕ್ಕೇನು ಕಷ್ಟ? ಅಗತ್ಯವಾಗಿರುತ್ತದೆ. ನಿಮ್ಮ ಮನೆಯ ಬಾಗಿಲಲ್ಲಿ ಕಾದಿರುತ್ತದೆ."

ಕೃ : “ಅದು ನಿಮ್ಮ ಒಳ್ಳೆಯತನ ಸ್ವಾಮಿ, ನಾನು ಏಕೆ ನಿಮ್ಮ ಹಂಗಿಗೆ ಸಿಕ್ಕಬೇಕು?" ಇದು ಕೃಷ್ಣಶಾಸ್ತ್ರಿ.

ಅನಾವಿದ್ಧಂ ರತ್ನಮ್ ॥

ಸಾಣೆ ಹಿಡಿಯದಿದ್ದ ವಜ್ರ.

ವಿಷಯವನ್ನು ಸಂಪೂರ್ಣವಾಗಿ ಹೇಳಬೇಕೆಂದರೆ ವೆಂಕಣ್ಣಯ್ಯ, ಕೃಷ್ಣಶಾಸ್ತ್ರಿ ಬೇರೆ ಬೇರೆಯಲ್ಲ. ಮೈಸೂರು ಕಾಲೇಜಿನ ಕರ್ಣಾಟಕ ಸಂಘದ ಒಂದು ಸಂತೋಷಕೂಟದಲ್ಲಿ ಕಾರ್ಯದರ್ಶಿ ವೆಂಬಾರ್ ವೆಂಕಟಾಚಾರ್ಯರು ತಮಗೆ ಗುರುಗಳಾಗಿದ್ದ ಆ ಇಬ್ಬರನ್ನು ಕುರಿತು ನಾಟಕದ ವರದಾಚಾರ್ಯರ ಒಂದು ನುಡಿಯನ್ನು ಉದಾಹರಿಸಿದರು:

ಮನವೊಂದೆ ಯೋಚಿಸಲು
ತನುವೆರಡು ಸಾಧಿಸಲು ॥

೨೮

ಎಂ.ಆರ್. ಶ್ರೀನಿವಾಸಮೂರ್ತಿಗಳು 1

ಅರವತ್ತಾದರೂ ದೇಹದಲ್ಲಿಯೂ ಮನಸ್ಸಿನಲ್ಲಿಯೂ ಮೂವತ್ತು ವರ್ಷದವನಂತೆ ಇದ್ದಾತ ನನ್ನ ಪ್ರಿಯ ಸ್ನೇಹಿತ ಎಂ. ಆರ್. ಶ್ರೀನಿವಾಸಮೂರ್ತಿ. ಆತನನ್ನು ನೆನಸಿಕೊಂಡರೆ ಈಗಲೂ ನನಗೆ ಅಳುಬರುತ್ತದೆ. ಶ್ರೀನಿವಾಸಮೂರ್ತಿ ಸುಖಸಂತೋಷಗಳಲ್ಲಿ ಬೆಳೆದಾತ. ಆತನ ತಂದೆ ರಾಮಚಂದ್ರರಾಯರು ಅಮಲ್ದಾರರಾಗಿದ್ದರು. ಶ್ರೀನಿವಾಸಮೂರ್ತಿಯೂ ರಾಮಚಂದ್ರರಾಯರಂತೆ ಸ್ಫುರದ್ರೂಪಿ, ಉದಾರಿ, ದೊಡ್ಡ ಕುಟುಂಬಿಕ. ತಂದೆತಾಯಿಗಳ ಮಮತೆ ಆದರಗಳಲ್ಲಿ ಬೆಳೆದವನು.

ಶ್ರೀನಿವಾಸಮೂರ್ತಿ ತೆಳ್ಳಗೆ ಎತ್ತರವಾಗಿದ್ದ ಆಳು. ಬಣ್ಣ ಅಪರಂಜಿಯ ಕಾಂತಿಯುಳ್ಳದ್ದು, ನಗುಮುಖ, ಹೊಳೆಹೊಳೆಯುವ ಕಣ್ಣು. ಮಾತಿನಲ್ಲಿ ಸಂದರ್ಭಕ್ಕೆ ತಕ್ಕಂತೆ ನಾಜೂಕು, ಜೋರು, ಹಾಸ್ಯ ಇರುತ್ತಿದ್ದವು. ಹೇಗಾದರೂ ರಸವತ್ತಾದ ಮಾತು.

ಶ್ರೀನಿವಾಸಮೂರ್ತಿ ಒಳ್ಳೆಯ ಭಾಷಣಕಾರರೆಂದು ಹೆಸರುವಾಸಿಯಾದ ಮೇಲೆ ಒಂದು ದಿನ ಯಾವುದೋ ಸಂಸ್ಥೆಯಲ್ಲಿ ಉಪನ್ಯಾಸಮಾಡುವುದಕ್ಕಾಗಿ ಮನೆಬಿಟ್ಟು ಹೊರಡಲು ಸಿದ್ಧವಾಗಿದ್ದರು. ಆಗ ಅವರ ತಂದೆ ರಾಮಚಂದ್ರರಾಯರು ಮಗನನ್ನು ಒಳಕ್ಕೆ ಕರೆದು ತೆಲುಗಿನಲ್ಲಿ (ಅವರ ವನೆಮಾತು) "ಮೂರ್ತಿ, ನಿನ್ನ ವ್ಯಕ್ತಿಪ್ರಭಾದ (Personality) ಚೆನ್ನಾಗಿದೆ. ಅದು ಇನ್ನೂ ಚೆನ್ನಾಗಬೇಕು. ಈ ಸರಿಗೆಯ ಪಂಚೆಯನ್ನುಟ್ಟುಕೋ. ಈ ಸರಿಗೆಯ ಶಲ್ಯವನ್ನು ಉತ್ತರೀಯವಾಗಿ ಧರಿಸು. ಈ ಬೆತ್ತವನ್ನು ಕೈಯಲ್ಲಿ ಹಿಡಿ. ಇನ್ನೂ ಠೀಕಾಗಿರುತ್ತದೆ"–ಎಂದು ಹೇಳಿ ಮಗನನ್ನು ಸಿಂಗರಿಸಿಕೊಳ್ಳುವಂತೆ ಬಲಾತ್ಕಾರಪಡಿಸಿದರು.

ನಾನು ಮೂರ್ತಿಯನ್ನು ಮೊದಲು ಕಂಡಾಗ ಆತ ಇನ್ನೂ ಸೆಂಟ್ರಲ್ ಕಾಲೇಜಿನ ಮೇಲ್ತರಗತಿಯೊಂದರ ವಿದ್ಯಾರ್ಥಿ. ಆಗಲೂ ಆತನ ಮೈಮೇಲೆ ಸರಿಗೆಯ ಪಂಚೆಯೇ ಇತ್ತು. ಕೈಬೆರಳಿನಲ್ಲಿ ಉಂಗುರವೂ ಕಿವಿಯಲ್ಲಿ ಹತ್ತಕಡುಕೂ ಇದ್ದವು. ಮಾತುಕಥೆಯಲ್ಲಿ ಒಂದು ಠೀವಿ ಇರುತ್ತಿತ್ತು. ಇದು ಆತ 'ಶ್ಯಾಮೂ' ಎಂಬ ಕಥೆಯನ್ನು ಬರೆದ ಕಾಲ.

ವೆಂಕಣ್ಣಯ್ಯನಿಗೂ ಕೃಷ್ಣಶಾಸ್ತ್ರಿಗೂ ಮೂರ್ತಿಯನ್ನು ಕಂಡರೆ ಅಚ್ಚು ಮೆಚ್ಚು. ಕೃಷ್ಣಶಾಸ್ತ್ರಿಯನ್ನು ಮೊದಲಿಸಿ ನಗೆಗೀಡುಮಾಡುವ ಸಲಿಗೆ ಮೂರ್ತಿಯವರಿಗೊಬ್ಬರಿಗೇ

ಇದ್ದದ್ದು. ನಮಗಾರಿಗೂ ಆ ಸಲಿಗೆಯಿರಲಿಲ್ಲ.

ಇದಕ್ಕೆ ಅರ್ಧಕಾರಣ ವೆಂಕಣ್ಣಯ್ಯ ಕೃಷ್ಣಶಾಸ್ತ್ರಿಗಳಿಗೆ ಮೂರ್ತಿಯ ಸಾಹಿತ್ಯ ಪರಿಶ್ರಮದ ವಿಷಯದಲ್ಲಿದ್ದ ಗೌರವ. ತನ್ನ ಕಾಲಕ್ಕೆ ಅಚ್ಚಾಗಿದ್ದ ಕನ್ನಡ ಕಾವ್ಯಗಳಲ್ಲಿ ಮೂರ್ತಿ ನೋಡದೆ ಇದ್ದದ್ದು ಒಂದೂ ಇರಲಿಲ್ಲ. ಆತ ಎಷ್ಟೋ ಹಳಗನ್ನಡ ಕಾವ್ಯಗಳನ್ನು ಬೇಕಾದಷ್ಟು ಉದಾಹರಿಸಬಲ್ಲವನಾಗಿದ್ದ. ಶೃಂಗಾರ ಪದ್ಯಗಳಿಗಂತೂ ಆತ ಭಾಂಡಾರಿ.

ಒಂದು ದಿನ ಸಾಹಿತ್ಯ ಸಮ್ಮೇಳನದ ಬಿಡಾರದಲ್ಲಿ (ಬಹುಶಃ ರಾಯಚೂರಿನಲ್ಲಿ) ನಾವು ನಾಲ್ಕೈದು ಮಂದಿ ಸ್ನಾನಮಾಡಹೊರಟು ಬಚ್ಚಲು ಮನೆ ಬಿಡುವಾಗಲೆಂದು ಹೊರಗೆ ಕಾದು ನಿಂತಿದ್ದೆವು. ಷರಟುಗಳನ್ನು ತೆಗೆದು ಹಾಕಿ ಒಂದು ಟವಲನ್ನೋ ಸಣ್ಣ ಪಂಚೆಯನ್ನೋ ಹೊದೆದು ನಿಂತಿದ್ದೆವು. ಕೃಷ್ಣಶಾಸ್ತ್ರಿಗಳು ನನ್ನನ್ನು ಚುಚ್ಚಿ ಹೀಗೆಂದರು:

“ನೋಡಿದಿರಾ ಮೂರ್ತಿಯ ಎದೆಯನ್ನು."

ಮೂರ್ತಿ ಒಡನೆಯೇ ಎಂದರು:

“ಶಾಸ್ತ್ರೀ, ಏನು ಮಂಕು ಬಡಿಯಿತು ನಿಮಗೆ, ಭ್ರಮರಕೀಟನ್ಯಾಯ ಮರೆತು ಹೋಯಿತೆ?"

(ಭ್ರಮರವು ತನ್ನ ಆಹಾರಕ್ಕಾಗಿ ಒಂದು ಕೀಟವನ್ನು ಹಿಡಿದು ಮುಂದಿರಿಸಿಕೊಳ್ಳುತ್ತದೆ. ಆ ಕೀಟವಾದರೋ ಬೆದರಿ ಭಯದಿಂದ ಭ್ರಮರವನ್ನೇ ದಿಟ್ಟಿಸಿನೋಡುತ್ತಿರುತ್ತದೆ. ಹೀಗೆ ಭ್ರಮರಧ್ಯಾನದಿಂದ ಕೊಂಚಕಾಲದಲ್ಲಿ ಕೀಟವು ತಾನೇ ಭ್ರಮರವಾಗುತ್ತದೆ. ಇದು ಒಂದು ಪುರಾತನ ಕವಿಸಮಯ. ನಾವು ಯಾವುದನ್ನು ಕುರಿತು ಹೆಚ್ಚಾಗಿ ಚಿಂತಿಸುತ್ತೇವೋ ಅದರಂತೆಯೇ ಆಗುತ್ತೇವಂತೆ!)

ಈ ಉತ್ತರವನ್ನು ಕೇಳಿ ವೆಂಕಣ್ಣಯ್ಯ, ಶಾಸ್ತ್ರಿ, ನಾನು ನಗೆಗಡಲಿನಲ್ಲಿ ಮುಳುಗಿದೆವು. ಇದು ಮೂರ್ತಿಯ ರಸಿಕತೆ.

ಕೆಲವು ವರ್ಷಗಳ ಕೆಳಗೆ ಪರಿಷತ್ತಿನಲ್ಲಿ ಕವಿ ರನ್ನನ ಸಹಸ್ರ ವರ್ಷೋತ್ಸವ ನಡೆಯಿತು. ಅಂದು ಮೂರ್ತಿಯ ಭಾಷಣ. ಆತ ಪ್ರಾರಂಭದಲ್ಲಿ ನನ್ನ ಕಡೆ ತಿರುಗಿ ಕೈತೋರಿಸಿ

“ನೋಡಿರಿ–ಯಜಮಾನರು ಈಹೊತ್ತು ಹೇಗೆ ಬಂದಿದ್ದಾರೆ! ಸರಿಗೆಯ ರುಮಾಲು, ಸರಿಗೆಯ ಪಂಚೆ, ನಿಲುವಂಗಿ– ದರ್ಬಾರಿನಲ್ಲಿದ್ದಾರೆ. ಹೀಗಲ್ಲವೆ ಗೌರವ ತೋರಿಸಬೇಕಾದದ್ದು ನಮ್ಮ ಕವಿಚಕ್ರವರ್ತಿಗೆ? ಕನ್ನಡ ಸಾಹಿತ್ಯ ಪ್ರೇಮಿಗಳಿಗಿರುವ ಸಾರ್ವಭೌಮ ರಾಜನೆಂದರೆ ರನ್ನ–ಗದಾಯುದ್ಧದ ರನ್ನ–ಕವಿ ಚಕ್ರವರ್ತಿ ರನ್ನ... "

ಇತ್ಯಾದಿಯಾಗಿ ಹೇಳಿ ಸಭೆಯ ಉತ್ಸಾಹವನ್ನೂ ಕೌತುಕವನ್ನೂ ಕೆರಳಿಸಿದರು. ಆಮೇಲೆ ದ್ರೌಪದೀ ಭೀಮಸೇನರ ಮಾತನ್ನೂ ಮನೋವೃತ್ತಿಯನ್ನೂ ಹೃದಯಂಗಮವಾಗಿ ವರ್ಣಿಸಿದರು. ಸಭಿಕರಿಗೆ ಪರಮಾನಂದವಾಯಿತು. ಕಡೆಗೆ ನನ್ನ ಅಧ್ಯಕ್ಷ ಭಾಷಣದಲ್ಲಿ ಮೂರ್ತಿಗಳ ಭಾಷಣ ಸೊಗಸಾಗಿತ್ತೆಂದು ಹೊಗಳಿದೆ. ಮೂರ್ತಿ ಎದ್ದುನಿಂತು–

"ಸಾರ್, ಅಲ್ಲಿ ನೋಡಿರಿ ಯಾರು ಕುಳಿತಿದ್ದಾರೆ. ಅವರು ಎದುರಿಗಿದ್ದರೆ ಭಾಷಣ ಸೊಗಸಾಗದೆ ಏನಾಗುತ್ತದೆ?"

ಎಂದು ಕೈತೋರಿಸಿದರು. ಆ ಕಡೆ ಇದ್ದವರು ಅವರ ಧರ್ಮಪತ್ನಿ.

ಇಂಥಾವರು ಮೂರ್ತಿ. ಅವರು ಮೊದಮೊದಲು ಹೈಸ್ಕೂಲು ಉಪಾಧ್ಯಾಯರಾಗಿದ್ದರು. ಸ್ಕೌಟು ಸಮಾರಂಭ ಮೊದಲಾದ ಚಟುವಟಿಕೆಗಳಲ್ಲಿ ಸೇರಿ ವಿದ್ಯಾರ್ಥಿಗಳ ಸ್ನೇಹಿತರೆಂದೆನಿಸಿಕೊಂಡಿದ್ದರು. ಸ್ಕೌಟು ಹಾಡುಗಳನ್ನೂ ಬರೆದುಕೊಟ್ಟಿದ್ದರು. ಅವರ 'ಕಂಠೀರವ ವಿಜಯ' ನಾಟಕ ಸ್ಕೌಟ್ ದಳಗಳ ಅಭಿನಯಕ್ಕಾಗಿಯೇ ಬರೆದದ್ದು. ಅದರ ಪ್ರದರ್ಶನ ತುಂಬ ಯಶಸ್ವಿಯಾಯಿತು.

ಕೆಲವು ವರ್ಷಗಳಾದ ಮೇಲೆ ನಾರ್ಮಲ್ ಸ್ಕೂಲಿನ ಮುಖ್ಯೋಪಾಧ್ಯಾಯರಾದರು.

೧೯೩೪–೩೫ ರಲ್ಲಿ ಅವರು ಮಲ್ಲೇಶ್ವರದಲ್ಲಿ ನಾರ್ಮಲ್ ಸ್ಕೂಲಿನ ಮುಖ್ಯೋಪಾಧ್ಯಾಯರು. ಅವರು ಅಲ್ಲಿಂದ ಒಂದು ದಿನ ತಪ್ಪದೆ ಪ್ರತಿ ಸಂಜೆಯೂ ೬ ಘಂಟೆಗೆ ಮುಂಚೆ ಪರಿಷತ್ತಿಗೆ ಬಂದಿರುತ್ತಿದ್ದರು. ಕಾಲು ಘಂಟೆ ಹಿಂದೆ ಅವರೂ ಕೃಷ್ಣಶಾಸ್ತ್ರಿಗಳೂ ಸೇರಿ ಫಲಾಹಾರ ಸೇವನೆ ಮಾಡಿ ಕೆಲಸಕ್ಕಣಿಯಾಗಿ ಬರುತ್ತಿದ್ದರು. ೬ ರಿಂದ ೮ ರವರೆಗೆ ಗ್ರಂಥಭಂಡಾರದ ಪುಸ್ತಕಗಳ ಪಟ್ಟಿಯನ್ನು (Catalogue) ತಯಾರುಮಾಡುತ್ತಿದ್ದರು. ಕೃಷ್ಣ ಶಾಸ್ತ್ರಿಗಳು ಪುಸ್ತಕದ ಹೆಸರು ಹೇಳುವುದು; ಮೂರ್ತಿಗಳು ಅದನ್ನು ಬರೆದು ವಿವರಗಳನ್ನು ಸೇರಿಸುವುದು. ಹೀಗೆ ನಡೆಯಿತು ಒಂದು–ಒಂದೂವರೆ ವರ್ಷ ಕಾಲ.

ಮೂರ್ತಿಗಳ ಸಾಮರ್ಥ್ಯ ಅಸಾಮಾನ್ಯವಾದದ್ದು. ಬೆಳಗ್ಗೆ ಉಪ್ಪಿಟ್ಟು ಕಾಫಿ ತಾವೇ ತಯಾರುಮಾಡುವರು. ಅದನ್ನು ಹಂಚಿದ ಕೂಡಲೆ ಅದುವರೆಗೆ ಮನಸ್ಸಿನಲ್ಲಿ ತಯಾರಾಗಿದ್ದ ಕಥೆಯನ್ನೋ ನಾಟಕವನ್ನೋ ಬರೆದಿಡುವರು. ಮಧ್ಯಾಹ್ನ ಸೊಗಸಾದ ಭೋಜನ. ಹರಟೆಯಲ್ಲಿ ಸೇರಿ ಸಾವಧಾನವಾಗಿ ಊಟ ಮಾಡುವರು. ಆಮೇಲೆ ಒಂದು ವ್ಯಾಕರಣದ ವಿಷಯವನ್ನೋ ಛಂದಸ್ಸಿನ ವಿಷಯವನ್ನೋ ಕುರಿತು ಎರಡು ಪುಟ ಬರೆಯುವರು. ಸಂಜೆ ಶಿವಶರಣರನ್ನು ಕುರಿತು ಉಪನ್ಯಾಸ ಮಾಡುವರು. ರಾತ್ರಿ ಒಂದು

ಹಾಡನ್ನೋ ಪದ್ಯವನ್ನೋ ಕಟ್ಟುವರು. ಇದೆಲ್ಲ ಅವರಿಗೆ ಲೀಲಾಜಾಲವಾಗಿತ್ತು. ಯಾವುದರಲ್ಲಿಯೂ ಶ್ರಮವಿರಲಿಲ್ಲ.

ಮೂರ್ತಿ ಭಾರಿ ಕುಟುಂಬದಲ್ಲಿದ್ದವರು. ಬಂಧುಮಂಡಲ ವಿಸ್ತರಿಸಿದಂತೆಲ್ಲ ಸ್ನೇಹ ಸುಖಗಳು ಹೆಚ್ಚುತ್ತವೆಂಬ ಖಾತರಿಯೇನೂ ಇಲ್ಲ. ಶ್ರೀನಿವಾಸಮೂರ್ತಿಯನ್ನು ಬಹುವಾಗಿ ನೋಯಿಸಿದ ಸಂದರ್ಭಗಳು ಹತ್ತಾರಿವೆ. ಅವರು ಎಷ್ಟೋ ವೇಳೆ ತಮಗಿದ್ದ ಉಭಯಸಂಕಟವನ್ನು ಕುರಿತು ಚಿಂತಿಸಿ ಕಣ್ಣು ಒದ್ದೆ ಮಾಡಿಕೊಂಡದ್ದುಂಟು. ಅವರಿಗೆ ಹೀಗೆ ಸುಖದುಃಖಗಳೆರಡರ ಅನುಭವವೂ ಹೇರಳವಾಗಿದ್ದದ್ದರಿಂದಲೇ ಅವರ ಹೃದಯ ಅಷ್ಟು ಮೃದುವಾಗಿತ್ತು; ಅವರ ಅಂತರ್ದೃಷ್ಟಿ ಅಷ್ಟು ಆಳವಾದದ್ದಾಗಿತ್ತು.

ಮೂರ್ತಿಗಳಿಗೆ ಹೆಚ್ಚು ಪ್ರಸಿದ್ಧಿ ಬಂದದ್ದು ಅವರ ವೀರಶೈವ ಸಾಹಿತ್ಯ ಪಾಂಡಿತ್ಯದಿಂದ. ಸ್ವಂತ ಮತದಲ್ಲಿ ಅವರು ವೈಷ್ಣವ ಬ್ರಾಹ್ಮಣರು. ಇಂಥವರು ವೀರಶೈವ ಸಿದ್ಧಾಂತದ ಸಾರಭಾಗವನ್ನು ಗ್ರಹಿಸಿದ್ದಲ್ಲದೆ ಅದನ್ನು ಸಮಸ್ತ ವೀರಶೈವಾಚಾರ್ಯರೂ ಮೆಚ್ಚಿಕೊಳ್ಳುವಂತೆ ಪ್ರತಿಪಾದನೆ ಮಾಡಿದ್ದು ಅವರ ಬುದ್ಧಿಯ ತೀವ್ರತೆಗೂ, ಅವರ ಉದಾರತೆಗೂ, ಅವರ ಹೃದಯವೈಶಾಲ್ಯಕ್ಕೂ ನಿದರ್ಶನವಾಗಿದೆ. ಹುಟ್ಟು ವೀರಶೈವರು ತಮ್ಮ ಮತಪ್ರಕ್ರಿಯೆಯನ್ನು ಹೇಗೆ ನಿರೂಪಿಸಬಹುದೋ ಹಾಗೆ–ಅಂಥ ಸೌಲಭ್ಯದಿಂದ, ಅಂಥ ಪ್ರಾಮಾಣಿಕತೆಯಿಂದ ‘ಭಕ್ತಿಭಂಡಾರಿ’ ‘ವಚನ ಧರ್ಮಸಾರ’ ಗ್ರಂಥಗಳನ್ನು ಬರೆದರು. ವೀರಶೈವ ಮಠಾಧೀಶರುಗಳು ಬಹುಮಂದಿ ಶ್ರೀನಿವಾಸಮೂರ್ತಿಗಳ ಪಾಂಡಿತ್ಯಕ್ಕೂ ಅಂತರ್ದೃಷ್ಟಿಗೂ ಪ್ರಾಮಾಣಿಕತೆಗೂ ಸಹಾನುಭೂತಿಗೂ ತಲೆದೂಗಿ ತಮ್ಮ ಸಂತೋಷದ ಗುರುತಾಗಿ ಭಸ್ಮ ರುದ್ರಾಕ್ಷಿ ಮೊದಲಾದ ಪ್ರಸಾದಗಳನ್ನನುಗ್ರಹಿಸಿದರು. ವೀರಶೈವ ಸಾಹಿತ್ಯವನ್ನು ಬೆಳಕಿಗೆ ತಂದವರಲ್ಲಿ ರಾ. ನರಸಿಂಹಾಚಾರ್ಯರು ಮೊದಲನೆಯವರಾದರೆ ಶ್ರೀನಿವಾಸಮೂರ್ತಿಗಳು ಎರಡನೆಯವರು.

ಶ್ರೀನಿವಾಸಮೂರ್ತಿಗಳಿಗೆ ಮೃತ್ಯು ಬಂದ ರೀತಿ ನಮ್ಮ ದೇಶದ ಸಾರ್ವಜನಿಕ ಶೌಚ ವ್ಯವಸ್ಥೆಗೆ ಅಪಕೀರ್ತಿ ತರುವುದಾಗಿದೆ. ಅವರು ಮೃತರಾದದ್ದು ಕಾಲರಾ ವ್ಯಾಧಿಯಿಂದ. ಇದು ನಿರೋಧನೀಯವಾದ ವ್ಯಾಧಿ. ಊರಿನಲ್ಲಿ ಆಹಾರ ಸಾಮಗ್ರಿಗಳೂ ನೀರೂ ಪರಿಶುದ್ಧವಾಗಿರುವ ಪಕ್ಷದಲ್ಲಿ ಕಾಲರಾ ಅಲ್ಲಿಗೆ ಬರತಕ್ಕದ್ದಲ್ಲವೆಂದು ವೈಜ್ಞಾನಿಕರು ಸಿದ್ಧಪಡಿಸಿದ್ದಾರೆ. ಬೆಂಗಳೂರಿನಲ್ಲಿ ಯಾವ ದುರ್ದೈವದಿಂದಲೋ ಆ ಕಲ್ಮಷ ಶ್ರೀನಿವಾಸಮೂರ್ತಿ ವಾಸವಾಗಿದ್ದ ಕಡೆ ಅಂಕುರಿಸಿತು. ಐದಾರು ದಿನ ಮಾಗಡಿರಸ್ತೆಯಲ್ಲಿರುವ ಆಸ್ಪತ್ರೆಯಲ್ಲಿ ಮೂರ್ತಿ ಬಾಧೆ ಅನುಭವಿಸಿ ಕಣ್ಣು ಮುಚ್ಚಿದರು. ನನ್ನಂಥವರಿಗೆ ಜೀವನದ ಇಚ್ಛೆ ಅರ್ಧ ಕುಗ್ಗಿತು.

೨೭

ಉಪಸಂಹಾರ

ಈವರೆಗಿನ ವ್ಯಕ್ತಿಚಿತ್ರಮಾಲೆಯಲ್ಲಿ ಕರ್ಣಾಟಕ ಸಾಹಿತ್ಯ ಪರಿಷತ್ತಿಗೂ ಅದರ ಉದ್ದೇಶಗಳಿಗೂ ಅದರ ಸಂಘಟನೆಗೂ ನೇರವಾಗಿಯೋ ಕೊಂಚ ಬಳಸಾಗಿಯೋ ಸಂಬಂಧಪಟ್ಟ ಮಹನೀಯರನ್ನು ಕುರಿತ ನನ್ನ ಜ್ಞಾಪಕಗಳನ್ನು ಕೊಟ್ಟಿದ್ದೇನೆ. ಈ ಚಿತ್ರ ಮಾಲೆಯಲ್ಲಿ ಎಷ್ಟೋ ಮಂದಿ ಸಾಹಿತಿಗಳ, ಸಾಹಿತ್ಯ ವಿದ್ವಾಂಸರ ಮತ್ತು ಸಾಹಿತ್ಯಾಭಿಮಾನಿಗಳ ಹೆಸರುಗಳು ಬಂದಿಲ್ಲ. ಕುಕ್ಕೆ ಸುಬ್ರಹ್ಮಣ್ಯಶಾಸ್ತ್ರಿಗಳು, ಕಾನಕಾನಹಳ್ಳಿ ವರದಾಚಾರ್ಯರು, ಕೊಮಾಂಡೂರ್ ರಾಮಸ್ವಾಮಯ್ಯಂಗಾರ್ಯರು ಮೊದಲಾದವರ ಸ್ಮರಣೆ ಇಲ್ಲಿ ಬಂದಿಲ್ಲ. ನಾನು ಬರೆಯಹೊರಟದ್ದು ಸಾಹಿತ್ಯಚರಿತ್ರೆಯನ್ನಲ್ಲ. ಇದು ವಿದ್ವದ್ ವೃತ್ತಾಂತವೂ ಅಲ್ಲ. ಪರಿಷತ್ತಿನ ಸಂಬಂಧದಲ್ಲಿ ನನಗೆ ತಿಳಿದು ಬಂದವರ ಪೈಕಿ ಕೆಲವರ ನೆನಪನ್ನು ಹೇಳಿಕೊಳ್ಳುವುದಷ್ಟೇ ನನ್ನ ಉದ್ದೇಶ. ಅವರಿಗಿಂತ ಬೇರೆಯಾದ ಭಾಷೋಜ್ಜೀವನಕರ್ತರೂ ಸಾಹಿತ್ಯಪ್ರಮುಖರೂ ಹತ್ತಾರು ಮಂದಿ ಇದ್ದಾರೆ. ಭಗವಂತನು ನನಗೆ ಆಯುಸ್ಸನ್ನೂ ಆರೋಗ್ಯವನ್ನೂ ಕೊಟ್ಟರೆ ಇನ್ನೆಂದಾದರೂ ಅವರನ್ನು ಸ್ಮರಿಸಿಕೊಳ್ಳುವ ಪುಣ್ಯ ನನ್ನ ಪಾಲಿಗೆ ಬಂದೀತು.

ಇಂಗ್ಲಿಷಿನಲ್ಲಿ ಒಂದು ಗಾದೆ ಹೇಳುತ್ತದೆ. ಸಮುದ್ರದಿಂದ ಹೊರಕ್ಕೆ ತೆಗೆದ ಮೀನುಗಳು ಎಷ್ಟುಂಟೋ, ಅವು ಎಷ್ಟು ಒಳ್ಳೆಯವೋ ಅದಕ್ಕಿಂತ ಹೆಚ್ಚಾದ, ಅದಕ್ಕಿಂತ ಒಳ್ಳೆಯವಾದ ಮೀನುಗಳು ಸಮುದ್ರದಲ್ಲಿ ಇನ್ನೂ ಇರುತ್ತವೆ–ಎಂದು. ಪರಿಷತ್ತಿನ ಸ್ಥಾಪನೆಯ ಕಾಲಕ್ಕೆ ಇದ್ದ ಸಾಹಿತಿಗಳೂ ಮತ್ತು ಸಾಹಿತ್ಯ ವಿದ್ವಾಂಸರೂ ಎಷ್ಟು ಮಂದಿಯೋ, ಎಂಥ ಪ್ರಭಾವಶಾಲಿಗಳೋ, ಅದಕ್ಕಿಂತ ಹೆಚ್ಚಾಗಿ ಅವರಿಗಿಂತ ಮಹನೀಯರಾದವರು ಕನ್ನಡ ದೇಶದಲ್ಲಿ ಅಲ್ಲಿಂದೀಚೆಗೂ ಹುಟ್ಟಿಬೆಳೆದಿದ್ದಾರೆ. ಇನ್ನೂ ಬೆಳೆಯುತ್ತಿದ್ದಾರೆ. ಹೀಗೆ ಪರಿಷತ್ತು ಹುಟ್ಟಿದ ಕಾರಣ ಸಾರ್ಥಕವಾಯಿತೆಂದು ಈಗ ನಿಸ್ಸಂಕೋಚವಾಗಿ ಹೇಳಬಹುದು. ಗ್ರಂಥಕರ್ತರ ಸಂಖ್ಯೆ ಮಾತ್ರವೇ ಅಲ್ಲ, ವಾಚಕರ ಸಂಖ್ಯೆಯೂ ಬೆಳೆಯುತ್ತಿದೆ. ಅದಕ್ಕಿಂತ ಹೆಚ್ಚಾಗಿ ಸ್ವಭಾಷೋತ್ಸಾಹ ಹರಡುತ್ತಿದೆ. ಐವತ್ತು ವರ್ಷಗಳ ಹಿಂದೆ ಕನ್ನಡವೆಂದರೆ ಮೂಗು ಸಿಂಡರಿಸುತ್ತಿದ್ದ ಕಡೆಗಳಲ್ಲಿ ಈಗ ಕನ್ನಡವೆಂದರೆ “ಆಹಾ! ಅದೂ ಬೇಕಾದದ್ದೇ" ಎನ್ನುವ ಸ್ಥಿತಿ ಬಂದಿದೆ. ದೇಶದ ಸಭಾರಂಗಗಳಲ್ಲಿ ಭಾಷಣಗಳು ಇಂಗ್ಲಿಷಿನಲ್ಲಾಗುತ್ತಿರುವುದಕ್ಕಿಂತ ಕನ್ನಡದಲ್ಲಿ ಹೆಚ್ಚಾಗಿ ಆಗುತ್ತಿವೆ. ಹೀಗೆ ಯಾವ ದೃಷ್ಟಿಯಿಂದ ನೋಡಿದರೂ ಪರಿಷತ್ತು

ಹಿಡಿದ ಕೆಲಸ ಸಫಲವಾಗುತ್ತಿರುವುದು ಈಗ ಐವತ್ತು ವರ್ಷಗಳ ತರುವಾಯ ಕಣ್ಣಿಗೆ ಸ್ಪಷ್ಟವಾಗಿ ಕಾಣಬರುತ್ತಿದೆ.

ಪಾಂಡಿತ್ಯವೆಲ್ಲಿ

ಆದರೆ ಇನ್ನೂ ನನ್ನ ಕೊರಗು ಒಂದುಂಟು. ನನಗೆ ಬರವಣಿಗೆಯ ವೇಳೆಯಲ್ಲಿ ಎಷ್ಟೋ ಕನ್ನಡ ಪದಪ್ರಯೋಗಗಳ ವಿಷಯದಲ್ಲಿ ಆಗಾಗ ಸಂದೇಹ ಬರುತ್ತದೆ. ಅಂಥ ಸಂದೇಹಗಳನ್ನು ಕುರಿತು ಯಾರೊಡನೆ ಚರ್ಚಿಸಲಿ? ಯಾರು ಪೂರ್ವಪ್ರಯೋಗಗಳನ್ನು ಉದಾಹರಿಸಿ ನಿಷ್ಕರ್ಷೆಯಾದ ಉತ್ತರ ಕೊಡಲು ಸಮರ್ಥರಿದ್ದಾರೆ? ನಂಜುಂಡಶಾಸ್ತ್ರಿಗಳಿದ್ದಾರೆಯೇ? ಕೃಷ್ಣಶಾಸ್ತ್ರಿಗಳಿದ್ದಾರೆಯೇ? ಇಂಥ ಸಮಯದಲ್ಲಿ ಪಾಂಡಿತ್ಯದ ಬೆಲೆ ಮನಸ್ಸಿಗೆ ಎದ್ದು ಕಾಣುತ್ತದೆ. ನಮ್ಮಲ್ಲಿ ಕಾವ್ಯ, ಸಣ್ಣ ಕಥೆ, ದೊಡ್ಡ ಕಥೆ, ನಾಟಕ, ವಿಜ್ಞಾನ ಪ್ರಬಂಧಗಳು, ಹರಟೆ ವಿನೋದಗಳ ಸಾಹಿತ್ಯ, ಇವೆಲ್ಲ ಯಥೇಚ್ಛವಾಗಿ ಬೆಳೆಯುತ್ತಿವೆ. ಇದನ್ನೆಲ್ಲ ನೋಡಿ ಸಂತೋಷಿಸುತ್ತಿರುವವರಲ್ಲಿ ನಾನೂ ಒಬ್ಬ. ಆ ಎಲ್ಲ ಸಾಹಿತ್ಯವೂ ಭಾಷೆಯ ನವಚೈತನ್ಯದ ಲಕ್ಷಣಗಳು. ಆದರೆ ದೇಶದಲ್ಲಿ ಪಾಂಡಿತ್ಯವೆಲ್ಲಿ?

ಭಾಷಾಪಾಂಡಿತ್ಯವು ಅಖಂಡಧಾರೆಯಾಗಿ ಸತತವಾಗಿ ಹರಿಯುತ್ತಿರಬೇಕು. ಆ ಪ್ರವಾಹ ಒಂದು ಸಾರಿ ಬತ್ತಿಹೋಯಿತೆಂದರೆ, ಒಂದು ಕಡೆ ಮೊಟಕು ಬಿತ್ತೆಂದರೆ, ಅದನ್ನು ಮತ್ತೊಮ್ಮೆ ಗಳಿಸುವುದು ಅಸಾಧ್ಯವೇ ಆದೀತು. ಹೊಸ ಕಥೆಯನ್ನು ಕಟ್ಟಬಹುದು, ಹೊಸ ನಾಟಕವನ್ನು ಕಟ್ಟಬಹುದು. ಪಾಂಡಿತ್ಯವಾದರೋ ಅನೂಚಾನವಾಗಿ ಪ್ರಾಚೀನವನ್ನು ಎಡಬಿಡದೆ ಏಕಪ್ರವಾಹವಾಗಿ ಬರಬೇಕಾದದ್ದು. ಕನ್ನಡದಲ್ಲಿ ಈಗ ಹಾಗೆ ಭಾಷಾ ಪಾಂಡಿತ್ಯ ಬೆಳೆದುಕೊಂಡಿದೆಯೆ? ನನಗೆ ಅದು ಗೊತ್ತಿಲ್ಲದ ಸಂಗತಿ. ಬಿ. ಎಂ. ಶ್ರೀಕಂಠಯ್ಯನವರ, ಎ. ಆರ್. ಕೃಷ್ಣಶಾಸ್ತ್ರಿಗಳ ಶಿಷ್ಯರು ಇಬ್ಬರು ಮೂವರಿದ್ದಾರೆ. ಅವರನ್ನು ಬಿಟ್ಟರೆ ಆ ದಾರಿಯಲ್ಲಿ ಭಾಷಾಸೇವೆ ಮಾಡುತ್ತಿರುವವರು ಎಷ್ಟು ಮಂದಿ ಇದ್ದಾರೆ? ಅವರೆಷ್ಟು ಮಂದಿಯಿದ್ದರೂ ಅವರಿಗೆ ನನ್ನ ನಮಸ್ಕಾರ.

ಈ ಭಾಷಾಪಾಂಡಿತ್ಯವೆಂಬುದು ಪ್ರಯಾಸಸಾಧ್ಯವಾದ ಸಂಪತ್ತೇ ಹೊರತು ಸುಲಭ ಸಾಧ್ಯವಾದದ್ದೇನೂ ಅಲ್ಲ.

೧೯೩೪–೩೫ ರಲ್ಲಿ ನನಗೆ ಪರಿಷತ್ತಿನ ಸಂಬಂಧವಿದ್ದಾಗ ಒಂದು ದಿನ ಬಹುಶಃ ಚೆನ್ನಕೃಷ್ಣಯ್ಯ ಎಂಬ ಹೆಸರಿನವರಿಂದ ಒಂದು ಕಾಗದ ಬಂದಿತು. ಚೆನ್ನಕೃಷ್ಣಯ್ಯ ಎಂಬವರು ರೂಪಾಯಿಗೆ ಹದಿನಾರಾಣೆಯ ವಿದ್ವಾಂಸರು. ಹಳೆಗನ್ನಡದಲ್ಲಿ ತುಂಬ

ಪರಿಶ್ರಮ ಮಾಡಿಕೊಂಡಿದ್ದವರು; ಸಂಸ್ಕೃತದಲ್ಲಿಯೂ ಹಾಗೆಯೇ. ಅವರಿಗಿದ್ದ ಹುದ್ದೆ ಹಳ್ಳಿಯ ಸ್ಕೂಲ್ ಮಾಸ್ಟರ್‍ಗಿರಿ. ನನಗೆ ಬಂದ ಕಾಗದದಲ್ಲಿ ಹೀಗಿತ್ತು:

“. . . ನನಗೆ ಪತ್ನೀವಿಯೋಗವಾಗಿ ಎರಡು ವರ್ಷವಾಯಿತು. ಈ ಊರಿಗೆ ವರ್ಗವಾಗಿ ಮೂರು ತಿಂಗಳಾಯಿತು. ನನಗೆ ಇಬ್ಬರು ಹೆಣ್ಣು ಮಕ್ಕಳಿದ್ದಾರೆ. ದೊಡ್ಡಾಕೆ ಒಂಭತ್ತು-ಹತ್ತು ವರ್ಷದವಳು. ಎರಡನೆಯಾಕೆ ಆರೇಳು ವರ್ಷದವಳು. ನನಗೆ ತಾಯಿ ಇದ್ದಾಳೆ, ಮುದುಕಿ. ಪಾರ್ಶ್ವವಾಯು ಬಂದ ಏಳೆಂಟು ತಿಂಗಳಿಂದ ಹಾಸಿಗೆ ಹಿಡಿದಿದ್ದಾಳೆ. ನಾನು ಪ್ರತಿದಿನ ಬೆಳಗ್ಗೆ ನನ್ನ ಸ್ನಾನಾಹ್ನಿಕಗಳನ್ನು ಮುಗಿಸಿಕೊಂಡು ಅಡಿಗೆ ಮಾಡಿಟ್ಟು ನನ್ನ ಮಕ್ಕಳ ಕೈಯಿಂದ ನನ್ನ ತಾಯಿಗೆ ಸ್ನಾನ ಮಾಡಿಸಿ ಮಡಿಯುಡಿಸಿ ಕೆಲಸಕ್ಕೆ ಹೋಗಬೇಕಾಗಿದೆ. ಈ ಊರಲ್ಲಿ ನೀರಿನ ಬಾವಿ ಊರಿನಿಂದ ಒಂದು ಮೈಲಿ ಆಚೆ ಇದೆ. ಎರಡು ಮೂರು ಸಾರಿ ನೀರು ಹೊತ್ತು ತರಬೇಕಾಗಿರುವುದರಿಂದ ಒಂದೊಂದು ದಿನ ಕೆಲಸಕ್ಕೆ ಕೊಂಚ ಹೊತ್ತಾಗುವುದುಂಟು. ದಿನಕ್ಕೆ ನಾಲ್ಕೈದು ಸಾರಿ ಬಾವಿಗೆ ತಿರುಗಬೇಕಾಗುವುದರಿಂದ ಒಂದೊಂದು ವೇಳೆ ದೇಹಾಯಾಸವಾಗುವುದೂ ಉಂಟು. ಗ್ರಂಥವ್ಯಾಸಂಗಕ್ಕೆ ಹೊತ್ತಿಲ್ಲ. ಈ ಕಷ್ಟವನ್ನನುಭವಿಸಿ ತಮಗೆ ಕಾಗದ ಬರೆಯುತ್ತಿದ್ದೇನೆ. ಮನೆಯ ಹತ್ತಿರ ಬಾವಿ ಇರುವ ಯಾವ ಗ್ರಾಮಕ್ಕಾದರೂ ವರ್ಗವಾದರೆ ಹೋಗಲು ಸಿದ್ಧನಾಗಿದ್ದೇನೆ. ಎಂಟು ಹತ್ತು ತಿಂಗಳಾದ ಮೇಲೆ ಪೆನ್ಷನ್ ಹಕ್ಕು ನನಗೆ ಬರುತ್ತದೆ. ತಮಗೆ ಉಪಾಯ ಏನಾದರೂ ತೋರಿದಲ್ಲಿ ನನ್ನ ಅದೃಷ್ಟ."

ನಾನು ಈ ಕಾಗದವನ್ನು ಕೋಲಾರದ ಇನ್‍ಸ್ಪೆಕ್ಟರ್ ಆಫ್ ಸ್ಕೂಲ್‍ಸ್ ಎಂ. ಎ. ನಾರಣಯ್ಯಂಗಾರ್ಯರಿಗೆ ಕಳುಹಿಸಿದೆ. ನಾರಣಯ್ಯಂಗಾರ್ಯರು ಸ್ವಯಂ ವಿದ್ವಾಂಸರು, ವಿದ್ವದಭಿಮಾನಿಗಳು, ಸಾತ್ತ್ವಿಕರು, ಮತ್ತು ಕರುಣಾಳು. ಅವರಿಂದ ಮೂರನೆಯ ದಿನವೇ ನನಗೆ ಪ್ರತ್ಯುತ್ತರ ಬಂದಿತು, ಹೀಗೆ:

“ಚೆನ್ನಕೃಷ್ಣಯ್ಯನವರನ್ನು ಊರಿಗೆ ವರ್ಗಾಯಿಸಿದ್ದಾಗಿದೆ. ಆ ಊರಿನಲ್ಲಿ ಸ್ಕೂಲ್ ಕಟ್ಟಡದ ಪಕ್ಕದಲ್ಲಿಯೇ ಸಿಹಿನೀರಿನ ಬಾವಿ ಇದೆ."

ಚೆನ್ನಕೃಷ್ಣಯ್ಯನವರ ಸಂತೋಷ ದಿಗ್ವಿಜಯ ಮಾಡಿದ ರಾಜನ ಸಂತೋಷವನ್ನು ಮೀರಿದ್ದಾಗಿತ್ತು. ಆ ಸಂತೋಷದ ಮುಖ್ಯಾಂಶವೇನೆಂದರೆ ಅವರಿಗೆ ಈಗ ಕಾವ್ಯ ವ್ಯಾಸಂಗಕ್ಕೆ ಕಾಲಾವಕಾಶ ದೊರೆಯಿತೆಂಬುದು.

ಸಾಹಿತ್ಯ ಅಭಿವೃದ್ಧಿಗೊಳ್ಳುವುದು ಸಂಬಳ ಸಾರಿಗೆಗಳಿಂದಲ್ಲ; ಸೂಟು ಕೋಟುಗಳಿಂದಲ್ಲ; ಸಾಹಿತ್ಯ ವಿಷಯದಲ್ಲಿರುವ ಭಕ್ತಿಶ್ರದ್ಧೆಗಳಿಂದ–ಸತತ ತಪಸ್ಸಿನಿಂದ.

***

ಸಾಹಿತ್ಯ ತಪಸ್ಸು

ಪ್ರಕೃತದ ಚಿತ್ರಮಾಲೆಯ ಸಾಹಿತ್ಯ ವ್ಯಕ್ತಿಗಳ–ನರಸಿಂಹಾಚಾರ್ಯರಿಂದ ಕೃಷ್ಣಶಾಸ್ತ್ರಿಗಳವರೆಗಿನವರ ಸಾಮಾನ್ಯ ಲಕ್ಷಣವನ್ನು ನಾಲ್ಕು ಮಾತುಗಳಲ್ಲಿ ಸಂಗ್ರಹಿಸಿ ಹೇಳಬಹುದು:

1. ಭಯವಿನಯಗಳು,
2. ಪಾರಮಾರ್ಥಿಕತೆ,
3. ಸ್ವಲ್ಪಲಾಭಸಂತುಷ್ಟಿ,
4. ಅಧ್ಯವಸಾಯ,
5. ಪ್ರಮಾಣಭೂತವಾದ ಇಯತ್ತೆ, ಅಂತಸ್ತು (Standard).

ಸಾಹಿತ್ಯವೆಂಬುದು ದೊಡ್ಡ ವಸ್ತು; ಅದು ಗೌರವವುಳ್ಳ ಕಾರ್ಯ. ಅದಕ್ಕೆ ಒಂದು ಪೂರ್ವಸಿದ್ಧತೆ ಅವಶ್ಯ–ಹೀಗೆ ತಿಳಿಯುವುದು ಭಯವಿನಯಗಳ ಲಕ್ಷಣ. ಕ್ರೈಸ್ತರ ಬೈಬಲ್ ಗ್ರಂಥದಲ್ಲಿ ಒಂದೆಡೆ ಈ ಮಾತು ಇದೆ: "Fear of the Lord is the beginning of wisdom." "ಭಗವತ್ಸ್ವರೂಪ ಜ್ಞಾನಕ್ಕೆ ಭಯವೇ ಮೊದಲ ಮೆಟ್ಟಿಲು". ಸಾಹಿತ್ಯಕ್ಕೆ ಕೈಯಿಕ್ಕುವವರು ಹಾಗೆ "ಈಗ ನಾನು ದೊಡ್ಡ ಕೆಲಸಕ್ಕೆ ಹೊರಟಿದ್ದೇನೆ, ಎಲ್ಲಿ ತಪ್ಪಿಯೇನೋ! ಎಲ್ಲಿ ಮೈಲಿಗೆಯಾದೀತೋ! ಎಲ್ಲಿ ಏನು ಪ್ರಮಾದ ನಡೆದೀತೋ!"–ಎಂದು ಯೋಚಿಸಬೇಕಾದದ್ದು ಯುಕ್ತ. ಅಂಥ ಭಯವಿರುತ್ತಿತ್ತು ಹಿಂದಿನ ಜನಕ್ಕೆ.

ಎರಡನೆಯದಾಗಿ, ಅವರು ಬಿರುದು ಪ್ರಶಸ್ತಿಗಳಿಗಾಗಿ ಬಾಯಿಬಿಟ್ಟವರಲ್ಲ. ತಮ್ಮ ಅಂತರಂಗದಲ್ಲಿ ಅವರು ದೊಡ್ಡದಾಗಿಯೋ ಚಿಕ್ಕದಾಗಿಯೋ ಒಂದು ಬೆಳಕನ್ನು ಕಂಡರು. ಅದರ ಪ್ರಯೋಜನ ಎಲ್ಲರಿಗೂ ಆಗಲಿ ಎಂಬುದಷ್ಟೇ ಅವರ ತಾತ್ಪರ್ಯ. ಇದೇ ಪಾರಮಾರ್ಥಿಕತೆ.

ಅವರಲ್ಲಿ ಲೇಖನವೃತ್ತಿ ದ್ರವ್ಯಸಂಪಾದನೆಗೆ ದಾರಿ ಎಂದು ಹೊರಟವರಾರನ್ನೂ ನಾನು ಕಾಣೆ. ಯಾವುದೋ ಬೇರೆ ಉದ್ಯೋಗದಿಂದ, ಕಸಬಿನಿಂದ ಜೀವಿಕೆ ಸಂಪಾದಿಸಿಕೊಂಡು ಬಂದಷ್ಟರಿಂದ ಸಂತೃಪ್ತರಾಗಿದ್ದವರು ಆ ಜನ. ಎಲ್ಲಕ್ಕಿಂತ ಮೇಲಾಗಿ, ಸರಳವೂ ಶುದ್ಧವೂ ಆದ ಜೀವನವು ಸಾಹಿತ್ಯಕಾರ್ಯಕ್ಕೆ ಒಂದು ಕಾಂತಿಯನ್ನು ತಂದೀತೆಂದು ಅವರು ನಂಬಿದ್ದರು.

ನಾಲ್ಕನೆಯದಾಗಿ, ಅವರು ಪ್ರಯಾಸಪಡಲು ಸಿದ್ಧರಾಗಿದ್ದವರು. ಒಂದು ಸಂಗತಿಯೋ ಒಂದು ಪದವೋ ಸಂಶಯದಲ್ಲಿದ್ದರೆ, ಅದನ್ನು ನಿಶ್ಚಯಪಡಿಸಿಕೊಳ್ಳಲು ಅವರು ನಾಲ್ಕಾರು ಗ್ರಂಥಗಳಲ್ಲಿ ಹುಡುಕುತ್ತಿದ್ದರು; ಬಲ್ಲವರೊಡನೆ ಚರ್ಚಿಸುತ್ತಿದ್ದರು. ಒಂದು ಮುಖ್ಯ ಗ್ರಂಥದ ಬೇರೊಂದು ಪ್ರತಿ ದೊರೆಯದಿದ್ದಾಗ, ಇದ್ದ ಪ್ರತಿಯನ್ನು ತಾವೇ ನಕಲು ಮಾಡಿರಿಸಿಕೊಳ್ಳುತ್ತಿದ್ದರು. ವ್ಯಾಕರಣಸೂತ್ರಗಳನ್ನು ಬಾಯಿಪಾಠ ಮಾಡಿರುತ್ತಿದ್ದರು. ಬರೆದದ್ದನ್ನು ನಾಲ್ಕಾರು ಸಾರಿ ಶೋಧಿಸಿ ತಿದ್ದುತ್ತಿದ್ದರು. ಒಟ್ಟಿನಲ್ಲಿ ಸಾಹಿತ್ಯ ಕಾರ್ಯ ಅವರಿಗೆ ಸುಲಭದ್ದಾಗಿರಲಿಲ್ಲ. ಅದಕ್ಕೆ ಕಷ್ಟಪಡಬೇಕು; ಹಗಲಿರುಳೂ ದುಡಿಯಬೇಕು. ಈ ದುಡಿಮೆಗೆ ಅವರು ಸಿದ್ಧರಾಗಿದ್ದರು.

ಒಂದೇ ಮಾತಿನಲ್ಲಿ ಹೇಳಬೇಕೆಂದರೆ, ಸಾಹಿತ್ಯಸೇವೆ ಅವರ ಪಾಲಿಗೆ ಒಂದು ಬಗೆಯ ತಪಸ್ಸು. ತಪಸ್ವಿಯು ನಿಯಮನಿಷ್ಠೆಗಳನ್ನೂ ಶುದ್ಧಿ ಸದಾಚಾರಗಳನ್ನೂ ಕಾಪಾಡಿಕೊಳ್ಳುವಂತೆ ಸಾಹಿತ್ಯಸೇವಕನು ಆತ್ಮಸಂಯಮ ಮಾಡಿಕೊಳ್ಳುತ್ತಾನೆ.

ಆದರ್ಶ

ಇನ್ನೊಂದು ಮಾತು. ನಾನು ಪ್ರಸ್ತಾವಿಸಿರುವ ಎಲ್ಲ ಸಾಹಿತ್ಯಕರ್ತರಿಗೂ (Standard) ಮಟ್ಟ–ಇಯತ್ತೆ–ಒಂದಿತ್ತು. ವಿಷಯಗಾಂಭೀರ್ಯದಲ್ಲಿಯೂ ಪ್ರತಿಪಾದನೆಯ ಔಚಿತ್ಯದಲ್ಲಿಯೂ ಲೇಖನಶೈಲಿಯ ಓಜಸ್ಸಿನಲ್ಲಿಯೂ ಯಾವುದೋ ಒಂದು ಆದರ್ಶವನ್ನು ಅವರು ದೃಷ್ಟಿಯಲ್ಲಿರಿಸಿಕೊಂಡು ಆ ಆದರ್ಶವನ್ನು ಮುಟ್ಟಲು ಬಹುವಾಗಿ ಪ್ರಯತ್ನಿಸುತ್ತಿದ್ದರು. ಆ ಆದರ್ಶದ ಮಟ್ಟಕ್ಕೆ ಬಾರದ ಲೇಖನವನ್ನು ಅವರು ಕಸವೆಂದು ತಳ್ಳಿ ಹಾಕುತ್ತಿದ್ದರು. ಕೃಷ್ಣಶಾಸ್ತ್ರಿಗಳು ‘ಪ್ರಬುದ್ಧ ಕರ್ಣಾಟಕ’ ಪತ್ರಿಕೆಯ ಲೇಖನಗಳ ವಿಷಯದಲ್ಲಿ ಈ ಪರೀಕ್ಷೆಯನ್ನು ಕಟ್ಟುನಿಟ್ಟಾಗಿ ಮಾಡುತ್ತಿದ್ದರು. ತಾವಿರಿಸಿಕೊಂಡಿದ್ದ ಮಟ್ಟಕ್ಕೆ ಬಾರದ ಲೇಖನವನ್ನು ನಿರ್ದಾಕ್ಷಿಣ್ಯವಾಗಿ ಬದಿಗಿರಿಸುತ್ತಿದ್ದರು. ಆ ಕಾಲದಲ್ಲಿ ಸ್ಟ್ಯಾಂಡರ್ಡ್ ಎಂಬುದೊಂದಿತ್ತು; ಒಂದು ಆದರ್ಶವಿತ್ತು. ಇನ್ನು ಮುಂದಕ್ಕೂ ನಮ್ಮ ದೇಶದ ನಾನಾ ಜೀವನಕ್ಷೇತ್ರಗಳ ಕಾರ್ಯಕರ್ತರುಗಳು ತಮ್ಮ ತಮ್ಮ ಕಾರ್ಯಸಾಧನೆಯಲ್ಲಿ ಒಂದು ದೊಡ್ಡ ಆದರ್ಶವನ್ನು ಲಕ್ಷ್ಯದಲ್ಲಿರಿಸಿಕೊಂಡು ನಡೆಯುವಂತಾಗಲಿ.

*ಜೀವನ ಸೌಂದರ್ಯ ಮತ್ತು ಸಾಹಿತ್ಯ, ಪು. ೧೩, ೧೫೩-೧೫೬

1 ಮುಂದೆ, ಅಧ್ಯಾಯ ೬

2 ಅಧ್ಯಾಯ ೮

3 ಅಧ್ಯಾಯ ೪

1 ಜ್ಞಾಪಕ ಚಿತ್ರಶಾಲೆ ೧, ಪುಟ ೪೩-೪೮.

2 ಜ್ಞಾಪಕ ಚಿತ್ರಶಾಲೆ ೨, ಅಧ್ಯಾಯ ೧೯.

1 ಅಧ್ಯಾಯ ೯.

1 ಜ್ಞಾಪಕ ಚಿತ್ರಶಾಲೆ ೧, ಪುಟ ೪೯–೬೨.

1 ಅಧ್ಯಾಯ ೧೦

1 ಜ್ಞಾಪಕ ಚಿತ್ರಶಾಲೆ-೧ ಪುಟ ೬೭-೭೦.

2 ಜ್ಞಾಪಕ ಚಿತ್ರಶಾಲೆ ೧, ಪುಟ ೧೫೬-೧೬೨.

3 ಅಧ್ಯಾಯ ೧೮.

4 ಅಧ್ಯಾಯ ೮, ಪುಟ ೩೫೩-೩೫೧.

1 ಅಧ್ಯಾಯ ೧೭, ಪುಟ ೪೧೬-೪೧೭.

1 ‘ಜೀವನ ಸೌಂದರ್ಯ ಮತ್ತು ಸಾಹಿತ್ಯ,’ ಮೂರನೆಯ ಮುದ್ರಣ, ಕಾವ್ಯಾಲಯ, ೧೯೬೨' ಪುಟ ೭೯.

1 ಜ್ಞಾಪಕ ಚಿತ್ರಶಾಲೆ ೧, ಪುಟ ೫೭-೯೮